ಕನ್ನಡ
ಕಾವ್ಯ ಸಂಚಯ

साहित्य

ಕನ್ನಡ ಕಾವ್ಯ ಸಂಚಯ

VECKAN928

VIJAYA EVENING COLLEGE.
LIBRARY
BANGALORE-4.
ACCN. NO. 2562
SECTION.
COST Rs. 8/-
Date 27/10/70 Librarian.

ಕನ್ನಡ ಕಾವ್ಯ ಸಂಚಯ

ಸಂಪಾದಕರು

ರಂ. ಶ್ರೀ. ಮುಗಳಿ

ಸಾಹಿತ್ಯ ಅಕಾದೆಮಿ

ನವ ದೆಹಲಿ

KANNADA KAVYA SANCHAYA—An Anthology of Kannada Poetry. Compiled by R. S. Mugali. Sahitya Akademi, New Delhi, 1970. Price Rs. 8.00

© ಸಾಹಿತ್ಯ ಅಕಾದೆಮಿ, ನವ ದೆಹಲಿ

ಮೊದಲ ಆವೃತ್ತಿ : 1970

ಮಾರಾಟಗಾರರು :

ಗೀತಾ ಬುಕ್ ಹೌಸ್
ಮೈಸೂರು.

Also Available at:
SAHITYA AKADEMI
Rabindra Bhavan, New Delhi-1

Regional Office:
Madras-6

Regional Office :
Calcutta-29

ಮುದ್ರಕರು :
ವೆಸ್ಲಿ ಪ್ರೆಸ್, ಮೈಸೂರು

ಬೆಲೆ : ರೂ. 8.00

ವಿಷಯಾನುಕ್ರಮಣಿಕೆ

ಪ್ರಸ್ತಾವನೆ 1

ಹಳಗನ್ನಡ ಕಾವ್ಯ

1. ಶಾಸನ ಪದ್ಯಸಂಗ್ರಹ 19

ಕಲಿಯುಗ ವಿಪರೀತನ್—ಗುಣ ಮಧುರಾಂಕ—ನಂದಿಸೇನ ಮುನಿ—ಸರಸ್ವತಿ—ಭರತಕ್ಷೇತ್ರ—ಕರ್ಣಾಟಕದೇಶ—ಆದಿಗೌಂಡನ ವರ್ಣನೆ—ಕುವರ ಲಕ್ಷ್ಮನ ವರ್ಣನೆ—

2. ಕವಿರಾಜಮಾರ್ಗ 25

3. ಆದಿಪುರಾಣ 30

ಆದರ್ಶ ಪ್ರಣಯ—ನೀಳಾಂಜನೆಯ ನೃತ್ಯ—ಭರತ—ಬಾಹುಬಲಿ ಸಂಘರ್ಷ

4. ಪಂಪ ಭಾರತ 37

ಹಸ್ತಿನಪುರ—ಬನವಾಸಿ—ವಸಂತಮಾಸ—ದ್ಯೂತ ಪ್ರಸಂಗ ದ್ರೌಪದೀ ಮಾನಭಂಗ—ಭೀಷ್ಮಪಟ್ಟ ಪ್ರಸಂಗ—ಕರ್ಣಾವಸಾನ—ದುರ್ಯೋಧನನ ಅಂತ್ಯಪ್ರಸಂಗ

5. ಅಜಿತ ಪುರಾಣ 51

ಅತ್ತಿಮಬ್ಬೆ—ವೈರಾಗ್ಯ—ತಪಃಪ್ರಯಾಣ—ಪಾರ್ವನ ಪುಯ್ಯಲ್

6. ಗದಾಯುದ್ಧ 64

ಭೀಮಸೇನ ಪ್ರತಿಜ್ಞೆ—ಧೃತರಾಷ್ಟ್ರ ವಚನ—ದುರ್ಯೋಧನನ ವಿಲಾಪ—ದುರ್ಯೋಧನನ ಛಲ—ಭೀಮಸೇನಾಡಂಬರ—ಗದಾಯುದ್ಧ—ದುರ್ಯೋಧನವಸಾನ

7. ಕರ್ಣಾಟಕ ಕಾದಂಬರೀ ಸಂಗ್ರಹ 79

ಮಹಾಶ್ವೇತೆಯ ಸಂದರ್ಶನ—ಮಹಾಶ್ವೇತೆಯ ವೃತ್ತಾಂತ—ಕಾದಂಬರಿಯ ಪ್ರಥಮ ಸಂದರ್ಶನ

8. ಪಂಪ ರಾಮಾಯಣ 87

ಸೀತಾಸ್ವಯಂವರ—ಉಪರಂಭೆಯ ವ್ಯಾಮೋಹ—ಸೀತಾಪಹರಣ—ರಾವಣನ ಪಶ್ಚಾತ್ತಾಪ

9. ಹರಿಹರನ ಗಿರಿಜಾ ಕಲ್ಯಾಣ 103

ಬೃಹಸ್ಪತಿ ಕಾಮುಸಂದರ್ಭ—ಕಾಮದಹನ—ರತಿವಿಳಾಪ—
ವಟು ವೇಷದ ಶಿವನೊಡನೆ ಪಾರ್ವತಿ

10. ನೇಮಿಚಂದ್ರನ ಲೀಲಾವತಿ 114

ಹೇಮಂತವರ್ಣನೆ—ವಸಂತವರ್ಣನೆ

11. ನೇಮಿಚಂದ್ರನ ಅರ್ಧನೇಮಿ ಪುರಾಣ 117

ಮಳೆಗಾಲದ ವರ್ಣನೆ—ಕಂಸವಧೆ

12. ರುದ್ರಭಟ್ಟನ ಜಗನ್ನಾಥ ವಿಜಯ 121

ಕಂಸನಿಗೆ ಕೃಷ್ಣಭೀತಿ—ವೇಣುರಾಸಕೇಳಿ—
ಕೃಷ್ಣನ ಬಾಲಲೀಲೆ

13. ಜನ್ನನ ಯಶೋಧರ ಚರಿತೆ 127

ಅಮೃತಮತಿಯ ವ್ಯಾಮೋಹ—ವ್ಯಾಮೋಹದ ಪರಿಣಾಮ

14. ಜನ್ನ : ಅನಂತನಾಥ ಪುರಾಣ 136

ಚಂಡಶಾಸನ ಕಥೆ

15. ಆಂಡಯ್ಯ : ಕಬ್ಬಿಗರ ಕಾವಂ 144

ಕಾಮನ ಸೈನ್ಯ—ತಪಸ್ವಿಯ ಮುಂದೆ ಕಾಮನ
ಶರಣಾಗತಿ

16. ಷಡಕ್ಷರಿ : ಶಬರಶಂಕರ ವಿಳಾಸಂ 149

ಕಿರಾತಾರ್ಜುನರ ಸಂವಾದ—ಶಬರನಲ್ಲಿ ಶಿವದರ್ಶನ

17. ಷಡಕ್ಷರಿ : ರಾಜಶೇಖರ ವಿಳಾಸ 154

ಪುತ್ರದೋಹದ—ತಿರುಕೊಳವಿನಾಚಿಯ ಶೋಕ

ನಡುಗನ್ನಡ ಕಾವ್ಯ

18. ವಚನಗಳು ೧ 163

ಅಲ್ಲಮಪ್ರಭು—ಸಕಲೇಶ ಮಾದರಸ—
ಬಸವೇಶ್ವರ—ಚೆನ್ನಬಸವೇಶ್ವರ—
ಮಹಾದೇವಿಯಕ್ಕ—ಇತರ ವಚನಕಾರರು

19. ವಚನಗಳು ೨ 183

20. ಶೂನ್ಯಸಂಪಾದನೆ 184

21. ಹರಿಹರ: ಬಸವರಾಜದೇವರ ರಗಳೆ 192

22. ರಾಘವಾಂಕ: ವೀರೇಶ ಚರಿತೆ 197

ಶಿವಸೈನ್ಯದ ವರ್ಣನೆ

23. ರಾಘವಾಂಕ: ಸಿದ್ಧರಾಮ ಚರಿತೆ 199

ಮಲ್ಲಿಕಾರ್ಜುನ ದರ್ಶನ—ಬಿಲ್ಲೇಶ ಬೊಮ್ಮಯ್ಯನ ಉದ್ಧಾರ

24. ಹರಿಶ್ಚಂದ್ರ ಕಾವ್ಯ 212

ವಸಿಷ್ಠ ವಿಶ್ವಾಮಿತ್ರ ಕಲಹ—ಹರಿಶ್ಚಂದ್ರ—ಹೊಲತಿಯರ ಸಂವಾದ—ವಿಶ್ವಾಮಿತ್ರನಿಗೆ ಹರಿಶ್ಚಂದ್ರನ ವಚನ—ಚಂದ್ರಮತಿಯ ಪಾಡು

25. ಬಸವ ಪುರಾಣ 231

ಬಸವೇಶ್ವರನ ಭಕ್ತಿಪ್ರತಿಜ್ಞೆ—ಕೋಳೂರು ಕೊಡಗೂಸಿನ ಕಥೆ

26. ಕುಮಾರವ್ಯಾಸ ಭಾರತ 241

ಸಂಭವಪರ್ವ: ಪಾಂಡುವಿನ ಮರಣ; ಸಭಾಪರ್ವ—ದ್ರೌಪದಿಯ ಮಾನಭಂಗ; ವಿರಾಟಪರ್ವ: ಉತ್ತರಕುಮಾರ; ಕರ್ಣಪರ್ವ: ಕರ್ಣಚಾರಿತ್ರ್ಯ

27. ಪ್ರಭುಲಿಂಗಲೀಲೆ 271

28. ಅಲ್ಲಮ—ಸಿದ್ಧರಾಮ ಸಂಮಿಲನ 280

29. ನಂಜುಂಡನ ರಾಮನಾಥ ಚರಿತ್ರ—ಕರ್ಣಾಟಕ ವರ್ಣನೆ 286

30. ಪುರಂದರದಾಸ: ಕೀರ್ತನೆಗಳು 291

ಉಗಾಭೋಗಗಳು

31. ಕನಕದಾಸ: ಕೀರ್ತನೆಗಳು 298

32. ನಿಜಗುಣಶಿವಯೋಗಿಗಳ ಕೀರ್ತನೆಗಳು 303

33. ಲಕ್ಷ್ಮೀಶನ ಜೈಮಿನಿ ಭಾರತ 307

ಚಂಡಿಯ ಕಥೆ—ಸೀತಾಪರಿತ್ಯಾಗ—ಚಂದ್ರಹಾಸ

34. ರತ್ನಾಕರವರ್ಣಿಯ ಭರತೇಶವೈಭವ 322

ಪೂರ್ಣ ಜೀವನ ದರ್ಶನ—ಸಂಗೀತವರ್ಣನೆ—ಆತ್ಮಧ್ಯಾನ—ವೀಣಾಲಾಪ—ಪಾರಣೆ—ಭರತ ಬಾಹುಬಲಿ ಸಂದರ್ಭ

35. ಚೆನ್ನಬಸವ ಪುರಾಣ 334

ನಾಡವರ್ಣನೆ—ವಸಂತವರ್ಣನೆ

36. ಮಹಲಿಂಗರಂಗನ ಅನುಭವಾಮೃತ 342

ತ್ವಂಪದಾರ್ಥ ಶೋಧನೆ—

37. ಸರ್ವಜ್ಞ 345

ಗುರುಸ್ತುತಿ—ದೈವಸ್ತುತಿ—ಭಕ್ತ-ಜ್ಞಾನಿ—
ದಾನಿ—ಕುಲ-ಜಾತಿ ಖಂಡನ—ಲೇಸು ಪದ್ಧತಿ—
ನಿಂದಾ ಪದ್ಧತಿ—ನೀತಿ ಪದ್ಧತಿ—

38. ಮುಪ್ಪಿನ ಷಡಕ್ಷರಿ—ಸುಬೋಧಸಾರ 355

ನೀನೆ ಅಕಳಂಕಗುರು—ಎನ್ನ ಕರೆಯ ಬನ್ನಿ

39. ಹೊನ್ನಮ್ಮ 359

ಹದಿಬದೆಯ ಧರ್ಮ—ಪತಿಧರ್ಮ—ಸತಿಧರ್ಮ (ವಿರಹದಲ್ಲಿ)

40. ಹರಿಕಥಾಮೃತ ಸಾರ 366

ಕರುಣಾಸಂಧಿ—ಸರ್ವಪ್ರತೀಕಸಂಧಿ—ಗೀತ ಗೋಪಾಲ—
ಕೈವಲ್ಯ ಕಲ್ಪವಲ್ಲರಿ—ಜಗನ್ನಾಥ ದಾಸರ ಕೀರ್ತನೆಗಳು

ಹೊಸಗನ್ನಡ ಕಾವ್ಯ

41. ಬೆಳೆದ ಭಾರತ ದೇಶ—ಬಾಳಾಚಾರ್ಯ ಸಕ್ರಿ 381
42. ಕನ್ನಡ ತಾಯನೋಟ—ಬಿ. ಎಂ. ಶ್ರೀ. 382
43. ತೆಂಕಣಗಾಳಿಯಾಟ—ಪಂಜೆ ಮಂಗೇಶರಾವ್ 387
44. ಕೊಳಗುಳದ ಮನವಿ—ಗೋವಿಂದ ಪೈ 389
45. ಹೊಸತನವೆ ಬಾಳು—ಡಿ. ವಿ. ಜಿ. 392
46. ಹಂಬಲು—ಸಾಲಿ ರಾಮಚಂದ್ರರಾಯರು 395
47. ಚೆಲುವ ದೇವಿ—ಮಾಸ್ತಿ ವೆಂಕಟೇಶ ಅಯ್ಯಂಗಾರ್ 396
48. ಕುಣಿಯೋಣು ಬಾರ—ದ. ರಾ. ಬೇಂದ್ರೆ 399
49. ಹೊಸದಿನ—ಬೆಟಗೇರಿ ಕೃಷ್ಣಶರ್ಮ 405
50. ಸುಗ್ಗಿ ಬರುತಿದೆ—ಕುವೆಂಪು 407
51. ಕಸ್ಮೈದೇವಾಯ ?—ವಿ. ಸೀತಾರಾಮಯ್ಯ 409
52. ನನ್ನ ನಲ್ಲ—ಚೆನ್ನಮಲ್ಲ ಹಲಸಂಗಿ 411

53. ಕಹಳೆ—ಕಡೆಂಗೋಡ್ಲು ಶಂಕರಭಟ್ಟ 414
54. ಮೂರ್ಛೆ ಬಂದಿತ್ತು—ಅರ್ಗಂ ಲಕ್ಷ್ಮಣರಾಯರು 416
55. ರಸಸರಸ್ವತಿ—ಪು. ತಿ. ನರಸಿಂಹಚಾರ್ 419
56. ನೇತ್ರ ನಟಿಯರು—ತೀ. ನಂ. ಶ್ರೀಕಂಠಯ್ಯ 424
57. ಪಡುವಣದೆ ಬಿರುಗಾಳಿ—ರಂ. ಶ್ರೀ ಮುಗಳಿ 425
58. ಕಸಗುಡಿಸುವ ಪಂಚಮರು—ದಿನಕರ ದೇಸಾಯಿ 427
59. ರತ್ನನ್ ಪರ್ಪಂಚ—ಜಿ. ಪಿ. ರಾಜರತ್ನಂ 429
60. ಊರ್ಣನಾಭಾವತಾರ—ವಿ. ಕೆ. ಗೋಕಾಕ 431
61. ವೀಣೆ—ಡಿ. ಎಸ್. ಕರ್ಕಿ 435
62. ಕೋರಿಕೆ—ಈಶ್ವರ ಸಣಕಲ್ಲ 436
63. ವಿಜಯನಗರದ ಗಿಣಿಗಳು—ಎಸ್. ವಿ. ಪರಮೇಶ್ವರಭಟ್ಟ 437
64. ವರುಣ—ಪೇಜಾವರ ಸದಾಶಿವರಾಯರು 444
65. ಬರಿಗೊಡಗಳಿಗೆ ಸಮಾಧಾನ—ಕೆ. ಎಸ್. ನರಸಿಂಹಸ್ವಾಮಿ 451
66. ಮಣ್ಣಿನ ಮೆರವಣಿಗೆ—ಚೆನ್ನವೀರ ಕಣವಿ 453
67. ಜಡೆ—ಜಿ. ಎಸ್. ಶಿವರುದ್ರಪ್ಪ 456
68. ಗೊಂದಲಪುರ—ಗೋಪಾಲಕೃಷ್ಣ ಅಡಿಗ 458
69. ಫೈಲು—ಗಂಗಾಧರಚಿತ್ತಾಳ 473
70. ಅವತಾರ—ವಿ. ಜಿ. ಭಟ್ಟ 475
71. ಅವಧೂತ—ಎಸ್. ಆರ್. ಎಕ್ಕುಂಡಿ 477
72. ವಿಜ್ಞಾನ ಮಾನವ—ರಾಮಚಂದ್ರ ಕೊಟ್ಟಲಗಿ 480
73. ಮಾನಸಕೆ ಮೊರೆ—ಸಿದ್ಧಯ್ಯಪುರಾಣಿಕ 482
74. ಗಾಳಿಮರ—ಅಕಬರ ಅಲಿ 485
75. ಇಲ್ಲಿ-ಅಲ್ಲಿ—ಆರ್. ಸಿ. ಹಿರೇಮಠ 487
76. ಹಿಗ್ಗುತಿದೆ ವಿಶ್ವ—ಜಯದೇವಿತಾಯಿ ಲಿಗಾಡೆ 489
77. ಚಿಂತನ—ಕಯ್ಯಾರ ಕಿಞ್ಞಣ್ಣರೈ 490
78. ವೈಶಾಖ ಶುದ್ಧ ಪೂರ್ಣಿಮೆ—ರಾಮಚಂದ್ರ ಶರ್ಮ 495
79. ಅಗ್ನಿಗಾಥ—ಹೇಮಂತ 498
80. ನನ್ನ ನೆರಳು—ಚಂದ್ರಶೇಖರ ಪಾಟೀಲ 503

ಅನುಬಂಧ

1. ಕವಿನಾಮಗಳ ಅಕಾರಾದಿ 505

2. ಕಾವ್ಯವಿಷಯಗಳ ಅಕಾರಾದಿ 506

3. ಚಾರಿತ್ರಿಕ ವಿವರ 508

ಕನ್ನಡ ಕಾವ್ಯ ಸಂಚಯ

ಪ್ರಸ್ತಾವನೆ

ಸಮಗ್ರವಾದ ಕನ್ನಡಕಾವ್ಯ ಸಂಕಲನವೊಂದು ಈ ಪುಸ್ತಕದಲ್ಲಿ ಪ್ರಕಟವಾಗುತ್ತಿದೆ. ಪ್ರತಿಯೊಂದು ಪ್ರಮುಖಭಾಷೆಯ ಕಾವ್ಯಸಂಕಲನವನ್ನು ಪ್ರಕಟಿಸಬೇಕು, ಅದರ ಅನುವಾದವನ್ನು ಇತರ ಭಾಷೆಗಳಲ್ಲಿ ಮಾಡಿಸಿ ಅಚ್ಚಿನಲ್ಲಿ ಮೂಡಿಸಬೇಕು ಎಂದು ಭಾರತೀಯ ಸಾಹಿತ್ಯ ಅಕಾದೆಮಿ ಮಾಡಿರುವ ಯೋಜನೆಯ ಪ್ರಕಾರ ಈ ಸಂಕಲನವು ರೂಪುಗೊಂಡಿದೆ. ಹಿಂದೆ ಕನ್ನಡ ಸಾಹಿತ್ಯದಲ್ಲಿ ಸೂಕ್ತಿಸುಧಾರ್ಣವ, ಕಾವ್ಯಸಾರದಂಥ ಕಾವ್ಯಸಂಕಲನಗಳು ಸಿದ್ಧವಾದುವು. ಅವುಗಳಲ್ಲಿ ಸಾಮಾನ್ಯವಾಗಿ ಮಾರ್ಗಕಾವ್ಯಗಳಲ್ಲಿ ಬಂದಿರುವ ಹದಿನೆಂಟು ವರ್ಣನೆಗಳಿಂದ ಪದ್ಯಗಳನ್ನು ಆಯ್ದು ಪವಣಿಸಿದ ಸಂಕಲನವಿತ್ತು. ಹೊಸಕಾಲದಲ್ಲಿ ಪಠ್ಯಪುಸ್ತಕ ದೃಷ್ಟಿಯಿಂದ ಇಲ್ಲವೆ ಕಾವ್ಯಪ್ರಚಾರ ದೃಷ್ಟಿಯಿಂದ ಹಲವು ಹಳೆಯ ಕಾವ್ಯಗಳಿಂದ ಆಯ್ಕೆಮಾಡಿ ಸಂಕಲನಗಳನ್ನು ಪ್ರಕಟಿಸಲಾಗಿದೆ. ಈ ಸಂಕಲನದಲ್ಲಿ ಮಾತ್ರ ತೀರ ಪ್ರಾರಂಭದ ಶಾಸನಪದ್ಯಗಳಿಂದ ಮೊದಲಾಗಿ ಹಳೆಯ ಮತ್ತು ಹೊಸ ಕಾವ್ಯದ ನಿದರ್ಶನಗಳನ್ನೊಳಗೊಂಡ ವ್ಯಾಪಕವಾದ ಕನ್ನಡ ಕಾವ್ಯ ದರ್ಶನವು ಉಂಟಾಗುತ್ತದೆ. ಕನ್ನಡ ಕಾವ್ಯದ ವಿವಿಧ ಛಂದೋರೂಪಗಳಲ್ಲಿಯ ರಸವತ್ತಾದ ಕೆಲವು ಭಾಗಗಳನ್ನು ಇಲ್ಲಿ ಆಯ್ದುಕೊಂಡಿದೆ. ವಚನಸಾಹಿತ್ಯವನ್ನುಳಿದು ಇತರ ಗದ್ಯಗ್ರಂಥಗಳಿಂದ ಆಯ್ಕೆ ಮಾಡಿಲ್ಲ. ಜನಪದ ಸಾಹಿತ್ಯದಿಂದಲೂ ಆರಿಸಿಲ್ಲ. ಅವುಗಳ ಸಂಕಲನವು ಪ್ರತ್ಯೇಕವಾಗಿರಬೇಕೆಂದು ತೀರ್ಮಾನಿಸಲಾಗಿದೆ.

ಕನ್ನಡ ಸಾಹಿತ್ಯಕ್ಕೆ ಸುಮಾರು 1500 ವರ್ಷಗಳ ಖಚಿತವಾದ ಪ್ರಾಚೀನ ಪರಂಪರೆಯಿರುತ್ತದೆ. ಮೊಟ್ಟಮೊದಲನೆಯದಾಗಿ ದೊರೆತ ಹಲ್ಮಿಡಿಯ ಕನ್ನಡ ಶಿಲಾಲೇಖವು ಕ್ರಿ. ಶ. 5–6 ನೆಯ ಶತಕದ್ದಾಗಿದೆ. ಅದು ಗದ್ಯದಲ್ಲಿದ್ದರೂ ಕನ್ನಡ ಭಾಷೆಗೆ ಸಾಹಿತ್ಯಸಂಸ್ಕಾರವು ಅದಕ್ಕೆ ಪೂರ್ವದಿಂದಲೂ ದೊರೆತಿರಬೇಕೆಂದು ಅದು ಸ್ಪಷ್ಟವಾಗಿ ಸೂಚಿಸುತ್ತದೆ. ಸುಮಾರು ಅದೇ ಕಾಲದ್ದೆಂದು ತೋರುವ ಶಾಸನಪದ್ಯವೊಂದರಲ್ಲಿ ಗುಣಮಧುರಾಂಕನೆಂಬ ವ್ಯಕ್ತಿಯ ಸೊಗಸಾದ ಚಿತ್ರವಿದೆ. ಕ್ರಿ. ಶ. 7 ನೆಯ ಶತಕದ್ದೆಂದು ನಿರ್ವಿವಾದವಾದ ಬಾದಾಮಿಯ ಶಾಸನದಲ್ಲಿ 'ಕಲಿಯುಗ ವಿಪರೀತನ್' ಎಂಬ ಇನ್ನೊಬ್ಬ ವ್ಯಕ್ತಿಯ ಚಿತ್ರವು ಮೂರು ತ್ರಿಪದಿಯ ಪದ್ಯಗಳಲ್ಲಿ ಅಷ್ಟೇ ಸೊಗಸಾಗಿ ಬಂದಿದೆ. ಅದೇ ಕಾಲದಲ್ಲಿ ರಚಿತವಾದ ಶ್ರವಣಬೆಳ್ಗೊಳದ ಹಲವಾರು ಕಾವ್ಯಗುಣವುಳ್ಳ ಶಾಸನ ಪದ್ಯಗಳಿದ್ದು ಒಂದರಲ್ಲಿ ನಂದಿಸೇನ ಮುನಿಯ ಸ್ವಭಾವವರ್ಣನೆಯಿದೆ. ಹೀಗೆ ನಮಗೆ ದೊರೆತಿರುವ ತೀರ ಹಳೆಯ ಶಾಸನಗಳನ್ನು ಗಮನಿಸಿದರೆ ವ್ಯಕ್ತಿಚಿತ್ರಗಳರೂಪದಲ್ಲಿ ಕನ್ನಡಕಾವ್ಯವು ಕಣ್ದೆರೆಯಿತೆಂಬುದನ್ನು ಕಾಣು

ತ್ತೀವೆ. ಹಲ್ಮಿಡಿಯ ಕಾಲದಿಂದ ಹೊಸ ಕಾಲದವರೆಗೆ ಕರ್ನಾಟಕದ ಎಲ್ಲ ಕಡೆಗಳಲ್ಲಿ ಎಣಿಕೆಮಿಾರಿದ ಕಲ್ಬರೆಹಗಳು ರಚಿತವಾಗಿ ಶಾಶ್ವತವಾಗಿ ನಿಂತಿರುತ್ತವೆ. ಈವರೆಗಿನ ಸಂಶೋಧನೆಯಿಂದ ಅವುಗಳಲ್ಲಿ ಬಹುಭಾಗವು ಬೆಳಕಿಗೆ ಬಂದಿರುವುದೇನೋ ನಿಜ. ಆದರೆ ಯಾರ ಕಣ್ಣಿಗೂ ಬೀಳದ, ಬಿದ್ದರೂ ಬೆಳಕಿಗೆ ಬಾರದ ಹಲವಾರು ಶಾಸನಗಳು ಇನ್ನೂ ಇರುವ ಸಂಭವವಿದೆ. ಇವೆಲ್ಲವುಗಳಲ್ಲಿ ಕನ್ನಡ ಕಾವ್ಯದ ಒಂದು ವಿಶಿಷ್ಟ ಪ್ರಕಾರವಾದ ವ್ಯಕ್ತಿಚಿತ್ರವು ಗುಣದಲ್ಲಿಯೂ ಗಾತ್ರದಲ್ಲಿಯೂ ಸ್ವಂತ ಕಳೆಯಿಂದ ಹೊಳೆಯುತ್ತದೆ. ಸಾಮಾನ್ಯವಾಗಿ ಶಿಲಾಲೇಖಗಳು ಒಂದು ಬಗೆಯ ರಾಜಕೀಯ ಮತ್ತು ಧಾರ್ಮಿಕ ದಾಖಲೆಗಳು. ಕಾವ್ಯವೆಂದು ಉದ್ದೇಶಿಸಿ ಅವುಗಳನ್ನು ಮೊದಲಿನಿಂದ ಕೊನೆಯವರೆಗೆ ಬರೆದಿರುವುದಿಲ್ಲ. ರಾಜರ, ವೀರರ ಶೌರ್ಯಸಾಹಸ, ವಂಶಾವಳಿ, ಬಿರುದಾವಳಿ ಇವೇ ಶಾಸನಗಳ ಬಹುಭಾಗವನ್ನು ಆಕ್ರಮಿಸಿರುತ್ತವೆ. ಅವಕ್ಕೆ ದಾನಪತ್ರದ ಸ್ವರೂಪವಿರುತ್ತದೆ. ಇದೆಲ್ಲ ಇದ್ದರೂ ಕಾವ್ಯಗುಣವುಳ್ಳ ಭಾಗವು ಸತ್ವದಲ್ಲಿ, ಗಾತ್ರದಲ್ಲಿ ಕಡಿಮೆಯಾಗಿಲ್ಲ. ಚಾರಿತ್ರಿಕ ವ್ಯಕ್ತಿಗಳ ಗುಣವರ್ಣನೆಯಲ್ಲಿ ಈ ಕಾವ್ಯಗುಣವನ್ನು ಪ್ರಮುಖವಾಗಿ ಗುರುತಿಸಬಹುದು. ಜೊತೆಗೆ ನಾಡಿನ ವಿವಿಧಭಾಗಗಳ ಮತ್ತು ನಗರಗಳ ವರ್ಣನೆಗಳೂ ಬಂದಿರುತ್ತವೆ. ಈ ಎಲ್ಲ ವರ್ಣನೆಗಳಲ್ಲಿ ಕೆಲವುಸಲ ಒಂದೇ ಪಡಿಯಚ್ಚಿನಲ್ಲಿ ಎರಕಹೊಯ್ದಂತೆ ತೋರುವ ಸಾಂಪ್ರದಾಯಿಕತೆಯಿದೆ, ಅತಿಶಯೋಕ್ತಿಯಿದೆ. ಜೊತೆಗೆ ಪ್ರತ್ಯಕ್ಷ ಪರಿಚಯ ಮತ್ತು ಸಂಪರ್ಕದಿಂದ ಹೊರಹೊಮ್ಮಿದ ವೀರಕಾವ್ಯದ ಕೆಚ್ಚಿದೆ, ವ್ಯಕ್ತಿಚಿತ್ರದ ನಿಚ್ಚಳವಿದೆ. ಈ ಸಂಕಲನದಲ್ಲಿ ಉದಾಹರಿಸಿರುವ ಆದಿಗೌಂಡನ ಮತ್ತು ಕುವರಲಕ್ಷ್ಮನ ವ್ಯಕ್ತಿಚಿತ್ರಗಳನ್ನು ನಿದರ್ಶನಕ್ಕೆಂದು ನೋಡಬಹುದು. ಅಲ್ಲಲ್ಲಿ ಉನ್ನತವಾದ, ಅದ್ಭುತವಾದ ಕಲ್ಪಕತೆಯೂ ಶಾಸನಕಾವ್ಯದಲ್ಲಿ ಮಿನುಗಿದೆ. ಇದಕ್ಕೆ ಸರಸ್ವತಿಯನ್ನು ಕುರಿತು ಮಾಡಿದ ಪ್ರಾರ್ಥನಾ ಪದ್ಯವನ್ನು ನಿರುಕಿಸಬೇಕು. ಬ್ರಹ್ಮನು ವಿಸ್ತಾರವಾಗಿ ನಿರ್ಮಿಸಿದ ವಿಶ್ವವನ್ನು ಅಂದರೆ ಬ್ರಹ್ಮಾಂಡದಲ್ಲಿಯ ತೇಜೋಗೋಲಗಳನ್ನು ಮಣಿಮಾಲೆಯಾಗಿ ವಿಸ್ತರಿಸಿ ತನ್ನ ಹಸ್ತದಿಂದ ಹಿಡಿದು, ತನ್ನ ಶರಣುಹೊಗುವವರಿಗೆ ಲೇಸನ್ನು ಪ್ರೇರಿಸಲೋಸುಗ ಯಾವಳೊಬ್ಬಳು ಹಗಲಿರುಳು ಜಪಿಸುತ್ತಿರುವಳೋ ಆ ಭಾರತಿ ನಮ್ಮ ಜಿಹ್ವೆಯಲ್ಲಿ ನಿರ್ಮಲವಾಗಿ ಸಂತತವೂ ಇರಲಿ ಎಂದು ಈ ಪದ್ಯದಲ್ಲಿ ಕವಿ ಪ್ರಾರ್ಥಿಸಿದ್ದಾನೆ. ಸರಸ್ವತಿಯ ಸ್ವರೂಪದ ಮತ್ತು ಕಾರ್ಯವಿಶೇಷದ ಭವ್ಯವರ್ಣನೆ ಈ ಬಗೆಯಾಗಿ ಕನ್ನಡಕಾವ್ಯದಲ್ಲಿ ಬೇರೆಡೆಗೆ ಎಲ್ಲಿಯೂ ಬಂದಿಲ್ಲ. ಸಂಸ್ಕೃತಕಾವ್ಯದಲ್ಲಿಯೂ ನಮ್ಮ ಕಣ್ಣಿಗೆ ಬಿದ್ದಿಲ್ಲ. ಜಾಗತಿಕ ಕಾವ್ಯದಲ್ಲಿಯೂ ಇಂಥ ಕಲ್ಪನೆ ಇರುವುದೋ ಹೇಗೆ ಪರಿಶೋಧಿಸಬೇಕು.

ಕ್ರಿ. ಶ. 9 ನೆಯ ಶತಕದಲ್ಲಿ ರಚಿತವಾದ ಕವಿರಾಜಮಾರ್ಗವು ಕನ್ನಡದಲ್ಲಿ ಮೊದಲನೆಯ ಉಪಲಬ್ಧಗ್ರಂಥವಾಗಿದೆ. ಅದು ದಂಡಿಯ ಕಾವ್ಯಾದರ್ಶವೆಂಬ ಸಂಸ್ಕೃತ ಅಲಂಕಾರಗ್ರಂಥದ ಬಹುಮಟ್ಟಿನ ಅನುವಾದವಾಗಿದೆ. ಆದರೂ ಅದರಲ್ಲಿ ಮೂಲದಲ್ಲಿ ಕಾಣದೊರೆಯದ ಸಂಗತಿಗಳೂ ಕಲ್ಪನೆಗಳೂ ಇರುತ್ತವೆ. ಅದು ಪ್ರಮುಖವಾಗಿ ಕಾವ್ಯಗ್ರಂಥವಲ್ಲ. ಆದರೆ ಅದರಲ್ಲಿ ಬಂದಿರುವ ಉಲ್ಲೇಖಗಳಿಂದ

ಮತ್ತು ಇತರ ಆಧಾರಗಳಿಂದ ಕನ್ನಡಕಾವ್ಯಪರಂಪರೆ ಅದಕ್ಕೆ ಹಿಂದಿನ ಎರಡು ನೂರು ಶತಕಗಳಿಂದಲಾದರೂ ಬೆಳೆದು ಬಂದಿರಬೇಕು ಎಂದು ಊಹಿಸಲು ಅವಕಾಶ ವಿರುತ್ತದೆ. ಕನ್ನಡಗಬ್ಬಗಳಲ್ಲಿ ಅಗಣಿತ ಗುಣ ಗದ್ಯಪದ್ಯಸಂಮಿಶ್ರವಾದ ಗದ್ಯಕಥೆ ಯಿತ್ತೆಂದು ಅದರಲ್ಲಿ ಹೇಳಿದೆ. ಚತ್ತಾಣ ಮತ್ತು ಬೆದಂಡೆ ಎಂಬ ವಿಶಿಷ್ಟಛಂದೋ ರೂಪಗಳಿಂದ ಕೂಡಿದ ಪದ್ಯಕಾವ್ಯವನ್ನು ಉಲ್ಲೇಖಿಸಲಾಗಿದೆ. ಪುರಾತನ ಕವಿಗಳ ಮತ್ತು ಪೂರ್ವಾಚಾರ್ಯರ ನಿರ್ದೇಶವಿದೆ. ಜೊತೆಗೆ ಕವಿವೃಷಭರ ಪ್ರಯೋಗ, ಪೂರ್ವಕಾವ್ಯರಚನೆ, ಪರಮಕವಿಪ್ರಧಾನರ ಕಾವ್ಯಗಳು, ನೆಲಸಿದ ಕಾವ್ಯ ಈ ಬಗೆಯ ಪದಪ್ರಯೋಗವು ಗ್ರಂಥದಲ್ಲಿ ಆಗಾಗ ಬಂದಿದೆ. ಕುರಿತೋದದೆಯೂ ಕನ್ನಡ ನಾಡವರು ಕಾವ್ಯಪ್ರಯೋಗ ಪರಿಣತಮತಿಗಳು ಎಂದು ಬಣ್ಣಿಸಲಾಗಿದೆ. ಇದಲ್ಲದೆ, ವಿಮಲೋದಯ, ನಾಗಾರ್ಜುನ ಜಯಬಂಧು ದುರ್ವಿನೀತಾದಿಗಳೆಂಬ ಸುಪ್ರಸಿದ್ಧ ಗದ್ಯ ಕವಿಗಳನ್ನು ಮತ್ತು ಪರಮಶ್ರೀವಿಜಯ, ಕವೀಶ್ವರ ಮುಂತಾದ ಪದ್ಯ ಕವಿ ಗಳನ್ನು ಹೆಸರಿಸಲಾಗಿದೆ. ಇವರಲ್ಲಿ ಯಾರ ಕೃತಿಗಳೂ ನಮ್ಮ ಕೈಗೆ ದೊರೆತಿಲ್ಲ. ದುರ್ವಿನೀತನೊಬ್ಬನು ಕ್ರಿ. ಶ. 6 ನೆಯ ಶತಕದಲ್ಲಿದ್ದ ಪ್ರತಿಭಾಶಾಲಿಯೂ ಶಾಸ್ತ್ರ ಪಾರಂಗತನೂ ಆದ ಗಂಗರಾಜನೆಂದು ತಿಳಿದು ಬಂದಿದೆ. ಅವನು ರಚಿಸಿದ ಕೆಲವು ಗ್ರಂಥಗಳ ಹೆಸರು ತಿಳಿದಿರುತ್ತದೆ. ಬೇರೆ ಕವಿಗಳ ವಿಷಯದಲ್ಲಿ ಮಾತ್ರ ನಿರ್ದಿಷ್ಟವಾದ ಯಾವ ಅಂಶವೂ ತಿಳಿದುಬಂದಿಲ್ಲ.

ಕವಿರಾಜಮಾರ್ಗಕ್ಕಿಂತ ಹಿಂದಿನ ಕಾಲದಲ್ಲಿ ಹೀಗೆ ಪದ್ಯಕಾವ್ಯದ ವಿಪುಲ ಸೃಷ್ಟಿಯಾಗಿತ್ತೆಂದೂ ಮುಂದೆ ಬರಲಿರುವ ಮಾರ್ಗಕಾವ್ಯದ ಭದ್ರವಾದ ತಳಹದಿ ಯನ್ನು ಹಾಕಲಾಗಿತ್ತೆಂದೂ ತಿಳಿಯಲು ಅಡ್ಡಿಯಿಲ್ಲ. ಆ ಕಾಲದ ಕಾವ್ಯಗ್ರಂಥಗಳು ಈವರೆಗೆ ದೊರೆಯದೆ ಇದ್ದ ಕಾರಣ ಅವುಗಳ ವಿಷಯ, ಸ್ವರೂಪ, ಶೈಲಿಗಳನ್ನು ತಿಳಿಯಲು ಊಹೆಯನ್ನು ಅವಲಂಬಿಸಬೇಕಾಗುತ್ತದೆ. ಸಾಮಾನ್ಯವಾಗಿ ಜೈನ ಪ್ರಭಾವವೇ ಈ ಎಲ್ಲ ಅಂಶಗಳ ಮೇಲಾಗಿರಬೇಕು. ಯಾಕಂದರೆ ಕನ್ನಡ ಸಾಹಿತ್ಯದ ಪ್ರಾರಂಭ ಕಾಲದಿಂದ ಹನ್ನೊಂದನೆಯ ಶತಮಾನದ ವರೆಗೆ ಜೈನಯತಿಗಳು, ಪಂಡಿತರು ಮತ್ತು ಕವಿಗಳು ಕನ್ನಡ ಸರಸ್ವತಿಯ ಪ್ರಮುಖ ಆರಾಧಕರಾಗಿದ್ದರು. ಪ್ರಾಚೀನ ಕಾಲದಲ್ಲಿ ಬೌದ್ಧ ಮತ್ತು ವೈಷ್ಣವ ಪ್ರಣಾಲಿಯ ಸಾಹಿತ್ಯ ನಿರ್ಮಾಣವಾಗಿರ ಬೇಕೆಂದು ಊಹಿಸಲಾಗಿದೆ. ಆದರೆ ಅದಕ್ಕೆ ಸ್ಪಷ್ಟವಾದ ಆಧಾರಗಳಿವೆಯೆಂದು ನಮಗೆ ತೋರುವುದಿಲ್ಲ. ಕವಿರಾಜಮಾರ್ಗದ ಕಾಲದಲ್ಲಿ ಆಗಿಹೋದ ಕೆಲವು ಗ್ರಂಥಕಾರರ ಬಗ್ಗೆ ಮತ್ತು ಅವರ ಗ್ರಂಥಗಳ ಬಗ್ಗೆ ನಮಗೆ ನಂಬಲರ್ಹವಾದ ಸಂಗತಿ ಗಳು ತಿಳಿದು ಬಂದಿವೆ. ಮೊದಲನೆಯದಾಗಿ ಸಂಸ್ಕೃತ—ಕನ್ನಡ ಎರಡೂ ಭಾಷೆಗಳಲ್ಲಿ ಕೃತಿಕಾರನಾದ ಅಸಗ ಎಂಬ ಕವಿಯನ್ನು ನೆನೆಯಬೇಕು. ಕನ್ನಡದಲ್ಲಿ ಅವನು ಕರ್ಣಾಟಕ ಕುಮಾರಸಂಭವ ಕಾವ್ಯ ಎಂಬುದನ್ನು ಬರೆದಿದ್ದಾಗಿ ತಿಳಿದಿದೆ. ಇದು ಕಾಳಿದಾಸನ ಕುಮಾರಸಂಭವದ ಕನ್ನಡ ಅನುವಾದವಾಗಿರುವ ಸಂಭವವಿದೆ. ಅನುವಾದವಲ್ಲದ ಇವನ ಬೇರೆ ಕನ್ನಡ ಕೃತಿಗಳ ವಿಷಯ ತಿಳಿದಿಲ್ಲ. ಗುಣನಂದಿ ಎಂಬ ಪಂಡಿತ ಯತಿಯೊಬ್ಬನು ಕನ್ನಡದಲ್ಲಿ ಗ್ರಂಥ ರಚಿಸಿರಬೇಕೆಂದು ತೋರುತ್ತದೆ.

ಅವನೊಂದು ಕಾವ್ಯದಿಂದ ಒಂದು ಪದ್ಯಭಾಗವನ್ನು ವ್ಯಾಕರಣಕಾರ ಕೇಶಿರಾಜನು ತನ್ನ ಪ್ರಯೋಗಗಳಲ್ಲಿ ಉದಾಹರಣೆಯೆಂದು ಕೊಟ್ಟಿದ್ದಾನೆ. ಒಂದನೆಯ ಗುಣವರ್ಮ ನೆಂಬ ಕವಿ ಕನ್ನಡದಲ್ಲಿ ಹರಿವಂಶ ಮತ್ತು ಶೂದ್ರಕ ಎಂಬ ಗ್ರಂಥಗಳನ್ನು ಬರೆದಿದ್ದ ನೆಂದು ತಿಳಿಯುತ್ತದೆ. ಅವುಗಳಿಂದ ಉದಾಹೃತವಾದ ಗದ್ಯಪದ್ಯ ಭಾಗಗಳು ಸೂಕ್ತಿ ಸುಧಾರ್ಣವ ಮತ್ತು ಕಾವ್ಯಸಾರ ಈ ಸಂಕಲನ ಗ್ರಂಥಗಳಲ್ಲಿ ಬಂದಿವೆ. ಅವನ್ನು ಪರೀಕ್ಷಿಸಿ ನೋಡಲಾಗಿ ಅವೆರಡೂ ಚಂಪೂಕೃತಿಗಳಾಗಿರಬೇಕೆಂದು ತಿಳಿಯಲು ಯಾವ ಅಭ್ಯಂತರವೂ ಇಲ್ಲ. ಅವನ್ನು ಮಾರ್ಗಕಾವ್ಯದ ಪರಂಪರೆಯಲ್ಲಿ ಮೊಟ್ಟ ಮೊದಲಾಗಿ ದೊರೆತ ನಿದರ್ಶನಗಳೆಂದು ಹೇಳಬಹುದು. ವಿಷಯ ದೃಷ್ಟಿಯಿಂದ ರಾಮಾಯಣ, ಮಹಾಭಾರತ, ತೀರ್ಥಂಕರಚರಿತೆ ಇತ್ಯಾದಿಗಳು ಅಂದಿನ ಕವಿಕೃತಿ ಗಳಲ್ಲಿ ಮೂಡಿರಬೇಕೆಂದು ಕವಿರಾಜಮಾರ್ಗ, ಪಂಪಭಾರತ, ಪಂಪರಾಮಾಯಣ ಮುಂತಾದ ಆಧಾರಗಳಿಂದ ತಿಳಿದು ಬಂದಿದೆ. ಸಾಹಿತ್ಯ ರೂಪದೃಷ್ಟಿಯಿಂದ ಗದ್ಯ ಪದ್ಯ ಸಂಮಿಶ್ರಿತವಾದ ಗದ್ಯಕಥೆ, ಚಂಪು, ಬೆದಂಡೆ, ಚತ್ತಾಣ ಇವು ಪ್ರಚಾರ ದಲ್ಲಿದ್ದುವು. ಗದ್ಯಕಥೆಗೆ ವಡ್ಡಾರಾಧನೆ ಎದ್ದುಕಾಣುವ ನಿದರ್ಶನವಾಗಿದೆ. ಅದರ ಕಾಲವು ಕವಿರಾಜಮಾರ್ಗಕ್ಕಿಂತ ತೀರ ಹಿಂದಿನದೆಂಬ ಒಂದು ಅಭಿಪ್ರಾಯವು ವ್ಯಕ್ತವಾಗಿದೆ. ಆದರೆ ಅದು ಕವಿರಾಜಮಾರ್ಗದ ತರುವಾಯದ ಕಾಲದಲ್ಲಿ ಹತ್ತನೆಯ ಶತಮಾನದ ಮೊದಲಿನ ದಶಕಗಳಲ್ಲಿ ರಚಿತವಾಗಿರಬೇಕೆಂಬ ಇನ್ನೊಂದು ಅಭಿ ಪ್ರಾಯವೇ ಹೆಚ್ಚು ಮಾನ್ಯತೆಯನ್ನು ಪಡೆದಿದೆ. ಚಂಪುವಿಗೆ 1 ನೆಯ ಗುಣವರ್ಮನ ಕೃತಿಗಳು ನಿದರ್ಶನಗಳೆಂದು ಆಗಲೆ ಹೇಳಿದೆ. ಬೆದಂಡೆ, ಚತ್ತಾಣಗಳಲ್ಲಿ ಬರುವ ಛಂದಸ್ಸಿನ ಅಂಶಗಳನ್ನು ಕವಿರಾಜಮಾರ್ಗಕಾರನು ವಿವರಿಸಿದ್ದಾನೆ. ಆದರೆ ಅದಕ್ಕೆ ಸರಿಹೋಗುವ ಯಾವ ಕಾವ್ಯಗ್ರಂಥವೂ ಉಪಲಬ್ಧವಾಗಿಲ್ಲ. ತರುವಾಯದ ಕಾಲದಲ್ಲಿ ಅಂದರೆ 13 ನೆಯ ಶತಕದಲ್ಲಿದ್ದ ಜನ್ನಕವಿ ಬರೆದ ಯಶೋಧರ ಚರಿತೆ ಕಂದಭೂಯಿಷ್ಠ ವಾಗಿದ್ದು 'ಕಂದಂಗಳ್ ಪಲವಾಗಿರೆ' ಎಂಬ ಚತ್ತಾಣದ ಲಕ್ಷಣಕ್ಕೆ ಕೆಲಮಟ್ಟಿಗೆ ಸರಿಹೋಗುತ್ತದೆ ಎನ್ನಬಹುದು.

. . . ಈವರೆಗಿನ ವಿವೇಚನೆಯಿಂದ ಮಾರ್ಗಕಾವ್ಯದ ಬರೆವಣಿಗೆ ಕವಿ ರಾಜಮಾರ್ಗದ ಹಿಂದಿನ ಕಾಲದಿಂದಲೂ ನಡೆದಿತ್ತೆಂಬುದು ವಿದಿತವಾಗುತ್ತದೆ. ಆದರೆ ಹತ್ತನೆಯ ಶತಮಾನದ ಮಧ್ಯದವರೆಗೆ ಅಂಥ ಯಾವ ಕೃತಿಗಳೂ ಉಪಲಬ್ಧವಾಗಿಲ್ಲ. ಆದರಿಂದ ಪಂಪ, ರನ್ನ, ಪೊನ್ನ ಇವರ ಕೃತಿಗಳನ್ನು ನೋಡಿದೊಡನೆ ಉನ್ನತಗಿರಿ ಶಿಖರಗಳನ್ನು ಒಮ್ಮಿಂದೊಮ್ಮೆಲೆ ನೋಡಿ ಬೆರಗುವಡುವ ಯಾತ್ರಿಕನಂತೆ ಕನ್ನಡ ಕಾವ್ಯರಸಿಕನು ಬಾಯ್ತೆರೆದು ನಿಲ್ಲುತ್ತಾನೆ. ಆದಿಮಹಾಕವಿ ಪಂಪನ ಆದಿಪುರಾಣ, ವಿಕ್ರಮಾರ್ಜುನ ವಿಜಯ (ಅಂದರೆ ಪಂಪಭಾರತ) ಇವು ಉಪಲಬ್ಧ ಕನ್ನಡ ಕಾವ್ಯ ಗಳಲ್ಲಿ ತೀರ ಮೊದಲಿನವಾಗಿದ್ದು ಮಾರ್ಗಕಾವ್ಯದ ಮಹೋನ್ನತಿಗೆ ಮಾದರಿಗಳಾ ದುವು. ಸಂಸ್ಕೃತವಾಙ್ಮಯದಲ್ಲಿ ಪಂಪನ ಕಾಲದವರೆಗೆ ಮಾರ್ಗಕಾವ್ಯದ ಭವ್ಯ ಪರಂಪರೆ ನಿರ್ಮಾಣವಾಗಿತ್ತು. ಕಾಳಿದಾಸ, ಭಾರವಿ, ಮಾಘ ಈ ವರಕವಿಗಳು ಪಂಚ ಮಹಾಕಾವ್ಯಗಳನ್ನು ರಚಿಸಿ ರಾಜಮಾರ್ಗವನ್ನು ನಿರ್ಮಿಸಿದ್ದರು. ಕನ್ನಡ ಕವಿಗಳು

ಅವರಿಂದ ಪುಷ್ಟರಾಗಿ ಸ್ಫೂರ್ತಿಪಡೆದರೂ ಬರೀ ಪರಪುಷ್ಟರಾಗಲಿಲ್ಲ. ತಮ್ಮದೇ ಆದ ಮಾರ್ಗಕಾವ್ಯದ ರಾಯಬೀದಿಯನ್ನು ಅವರು ರಚಿಸಿಕೊಂಡರು. ಸಂಸ್ಕೃತದ ಮಾರ್ಗ ಕಾವ್ಯ ಕೇವಲ ಪದ್ಯರೂಪವಾಗಿತ್ತು. ಕನ್ನಡ ಮಾರ್ಗಕಾವ್ಯ ಗದ್ಯಪದ್ಯ ಮಿಶ್ರಿತ ವಾದ ಚಂಪೂರೂಪವಾಯಿತು. ಈ ಚಂಪೂರೂಪದಲ್ಲಿ 'ಖ್ಯಾತಕರ್ಣಾಟಕಂ' ಎಂದೆನಿಸಿಕೊಂಡ ಸಂಸ್ಕೃತವೃತ್ತಗಳಲ್ಲಿ ಪದ್ಯರಚನೆ ಪ್ರಚುರವಾಯ್ತು. ಆರ್ಯಾ ಎಂಬ ಪ್ರಾಕೃತವೃತ್ತದ ಕನ್ನಡ ತದ್ಭವವಾದ ಕಂದಪದ್ಯದ ಬಳಕೆ ಹೆಚ್ಚಿನ ಪ್ರಮಾಣ ದಲ್ಲಿ ಆಯಿತು. ಅಲ್ಲಲ್ಲಿ ರಗಳೆ—ಅಕ್ಕರ—ತ್ರಿಪದಿಗಳು ಬಂದು ವೈವಿಧ್ಯವನ್ನು ಹೆಚ್ಚಿಸಿ ದುವು. ವಿಷಯ, ವಸ್ತು, ರಸ, ಶೈಲಿಗಳಲ್ಲಿ ವಿನೂತನತೆ ತಲೆದೋರಿತು. ಉದಾಹರಣೆಗೆ ಆದಿಪುರಾಣದಲ್ಲಿ ಆದಿತೀರ್ಥಂಕರನ ಮತ್ತು ಭರತಚಕ್ರಿಯ ಚರಿತೆಯ ಮೂಲಕ ಜೈನ ತತ್ವದ ಪರಿಣಾಮಕರವಾದ ಪ್ರತಿಪಾದನೆ ನಡೆಯಿತು. ಇದರಲ್ಲಿ ಕಾವ್ಯ ಧರ್ಮವನ್ನೂ ಧರ್ಮವನ್ನೂ ಅರಿಯಬೇಕೆಂದು ಪಂಪನು ಸಾರಿದ್ದು ಬಹುಮಟ್ಟಿಗೆ ಸಾರ್ಥಕ ವಾಯಿತು. ಈ ಸಂಕಲನದಲ್ಲಿ ಕೊಟ್ಟಿರುವ ನಿದರ್ಶನಗಳಿಂದ ಇದರ ಸತ್ಯತೆಯನ್ನು ಮನಗಾಣಬಹುದು. ಹೀಗೆ ಆದಿಪುರಾಣವು ಧಾರ್ಮಿಕವಾದರೆ, ಪಂಪಭಾರತವು ಲೌಕಿಕ ಗ್ರಂಥವಾಗಿ ಮೆರೆಯಿತು. ಪಂಪಭಾರತದ ಕಥೆ ವ್ಯಾಸಭಾರತದ್ದೇ ಆದರೂ ಅದರ ವಸ್ತುವಿನ್ಯಾಸದಲ್ಲಿ ಮತ್ತು ನಿರೂಪಣೆಯಲ್ಲಿ ವಿಶೇಷ ರೀತಿಯಲ್ಲಿ ಒಟ್ಟಂದವು ಕಟ್ಟಿಕೊಂಡು ಬಂದಿತು. ಸಮಸ್ತಭಾರತ ಎಂಬ ಪದದಿಂದ ಪಂಪನು ಈ ವೈಶಿಷ್ಟ್ಯ ವನ್ನು ಸೂಚಿಸಿದನು. ಮೂಲಮಹಾಭಾರತದ ಯಾವ ಮುಖ್ಯ ಭಾಗವೂ ಬಿಟ್ಟುಹೋಗ ದಂತೆ ಹಿರಿದಾದ ಔಚಿತ್ಯಪ್ರಜ್ಞೆಯಿಂದ ಪಂಪನು ಈ ಕಾವ್ಯವನ್ನು ನಿರ್ಮಿಸಿದನು. ಸಂಕ್ಷಿಪ್ತವಾದರೂ ಸಜೀವ ಮತ್ತು ಸಂಪೂರ್ಣವಾದ ಭಾರತಕಥೆ ಇದರಲ್ಲಿ ಅಡಕ ವಾಗಿದೆ. ಅಲ್ಲದೆ ಅರ್ಜುನನ ಕಥೆಯೊಡನೆ ಅದು ಕವಿಯ ಆಶ್ರಯದಾತನಾದ ಅರಿ ಕೇಸರಿಯ ಶೌರ್ಯಸಾಹಸಗಳ ಕಥೆಯೂ ಆಗಿರುತ್ತದೆ. ಈ ರೀತಿಯಾಗಿ ಸಮಸ್ತ ಭಾರತ ಎಂಬ ಶೀರ್ಷಕವು ಪಂಪಭಾರತಕ್ಕೆ ಒಂದಕ್ಕಿಂತ ಹೆಚ್ಚು ಅರ್ಥದಲ್ಲಿ ಸಾಭಿಪ್ರಾಯವಾಗಿದೆ. ಪಂಪನ ಈ ಸಮಸ್ತ ಭಾರತದಲ್ಲಿ ಸಮಸ್ತಮಾನವ ಜೀವನದ ಮತ್ತು ಮಾನವ ಸ್ವಭಾವದ ಒಂದು ಉಜ್ವಲದರ್ಶನವು ದೊರೆಯು ತ್ತದೆ. ಆದಿಪುರಾಣದಲ್ಲಿ ಅವನು ಹೇಳಿದಂತೆ 'ಸಂಸಾರಸಾರೋದಯ'ವು, ಸಹಸ್ರಕಿರಣ ಸೂರ್ಯೋದಯದಂತೆ ಈ ಕೃತಿರೂಪದಲ್ಲಿ ಕಂಗೊಳಿಸುತ್ತದೆ. ಅಂತೇ ಇದು ಕನ್ನಡದ ಶ್ರೇಷ್ಠಕಾವ್ಯಗಳಲ್ಲಿ ಒಂದೆಂಬುದನ್ನು ವಿಮರ್ಶಕರು ಕೊಂಡಾಡಿದ್ದಾರೆ. ಈ ಸಂಕಲನದಲ್ಲಿ ಕೊಟ್ಟಿರುವ ಉದಾಹರಣೆಗಳಿಂದ ಪಂಪ ಭಾರತದ 'ಮುಗಿಲುಮುಟ್ಟಿದ ಪೆಂಪು' ಎನೆಂಬುದರ ರಸಾನುಭೂತಿ ಕೆಲಮಟ್ಟಿಗೆ ಆಗಬಹುದು. ವಿಶೇಷತಃ, ದ್ಯೂತಪ್ರಸಂಗ ಮತ್ತು ದ್ರೌಪದೀಮಾನಭಂಗ ಈ ಸಂದರ್ಭಗಳಲ್ಲಿ ಪಂಪನ ಪ್ರತಿಭೆ ತನ್ನ ಪರಮಸೀಮೆಯನ್ನು ಮುಟ್ಟಿದೆ. ವ್ಯಾಸ ಭಾರತದಿಂದ ಎತ್ತಿಕೊಂಡ ಈ ಸಂನಿವೇಶಗಳನ್ನು ತನ್ನ ನಿರೂಪಣಶಕ್ತಿಯಿಂದ ಸಜೀವಗೊಳಿಸಿ ಪಂಪನು ಯಾವ ಎತ್ತರಕ್ಕೆ ಒಯ್ದು ಮುಟ್ಟಿಸಿರುವನೆಂಬುದನ್ನು ಅರಿತು ಕಾವ್ಯರಸಿಕನು ರಸಾನಂದ ಹೊಂದಿ ರೋಮಾಂಚಿತನಾಗುತ್ತಾನೆ. ದ್ಯೂತ

ಪ್ರಸಂಗದಲ್ಲಿ ದುರ್ಯೋಧನನು ಧರ್ಮರಾಜನನ್ನು ಹೇಗೆ ಮೆಲ್ಲಗೆ ಜೂಜಿನ ಬಲೆಯಲ್ಲಿ ಎಳೆದು ಸೋಲಿಸಿಬಿಟ್ಟನೆಂಬುದರ ಚದುರು ಬಣ್ಣಿಸಲಾಗಿದೆ. ಒಂದು ವಿಶೇಷ ಸಂಗತಿಯ ಸಾಧಾರಣೀಕರಣದ ಮೂಲಕ ದುಷ್ಟಶಕ್ತಿಗಳು ದುರ್ಬಲಸತ್ವವನ್ನು ಹೇಗೆ ಸೂಕ್ಷ್ಮವಾಗಿ ತಮ್ಮ ವಶಕ್ಕೆ ತೆಗೆದುಕೊಳ್ಳುತ್ತವೆ ಎಂಬುದರ ಅರಿವಾಗುತ್ತದೆ. ದ್ರೌಪದೀ-ಮಾನಭಂಗದ ಪ್ರಸಂಗವಂತೂ ದ್ಯೂತ ಪ್ರಸಂಗದಿಂದ ಉಂಟಾದ ಪರ್ಯವಸಾಯಿ ದುರಂತ. ಸಂನಿವೇಶ ದೃಷ್ಟಿಯಿಂದ ಇದರ ದುರಂತಚಿತ್ರವನ್ನು ಅನಾವಶ್ಯಕ ವಿಸ್ತಾರವಿಲ್ಲದೆ ಉಜ್ವಲವಾಗಿ ಬಿಡಿಸಬೇಕು. ಜೊತೆಗೆ ಇದರಲ್ಲಿ ತೊಡಗಿಕೊಂಡ ಪಾತ್ರಗಳ, ಅದರಲ್ಲಿಯೂ ಪ್ರಮುಖ ಪಾತ್ರಗಳ ತೀವ್ರ ಪ್ರತಿಕ್ರಿಯೆಯನ್ನು ರಸೋತ್ಕಟವಾಗಿ ಬಣ್ಣಿಸಬೇಕು. ಈ ಪ್ರಾತಿಭಕಾರ್ಯವನ್ನು ಪಂಪನು ಅತ್ಯಂತ ಸಮರ್ಥವಾಗಿ ನಿರ್ವಹಿಸಿದ್ದಾನೆ. ದ್ರೌಪದಿಯ ಕೇಶಪಾಶವನ್ನು ಹಿಡಿದೆಳೆಯುತ್ತ ದುಶ್ಶಾಸನನು ಸಭೆಗೆ ನುಗ್ಗಿ ಬರಲು ಮಾನಭಂಗತಪ್ತಳಾದ ದ್ರೌಪದಿ, ತನ್ನ ಮುಡಿಯನ್ನು ಹಿಡಿದೆಳೆದವನನ್ನು ಮಡಿಯಿಸಿ ಅವನ ಕರುಳ ಹೆಣಲಿಂದ ತನ್ನ ಮುಡಿಯನ್ನು ಕಟ್ಟುವವರೆಗೆ ತಾನು ಬಿಚ್ಚುಗೂದಲಾಗಿಯೆ ಇರುವೆನೆಂದು ಪ್ರತಿಜ್ಞೆ ಮಾಡಿದಳು. ಅಲ್ಲಿಯವರೆಗೆ ಉಳಿದ ತಮ್ಮಂದಿರಂತೆ ಧರ್ಮರಾಜನ ಮಾತಿಗೆ ಕಟ್ಟುಬಿದ್ದು ಸುಮ್ಮನಿದ್ದ ಭೀಮಸೇನನ ತಾಳ್ಮೆ ಈ ಪ್ರತಿಜ್ಞೆಯನ್ನು ಕೇಳಿ ಕೊನೆ ಮುಟ್ಟಿತು, ಕೊಪ ಕೋಡಿವರಿಯಿತು. ಭೀಮನ ಆಗಿನ ಮನಃಸ್ಥಿತಿಯನ್ನು ಪಂಪನು ಪ್ರಭಾವಿಯಾಗಿ ವರ್ಣಿಸಿರುತ್ತಾನೆ. "ಆರದ ಕೋಪಪಾವಕದಿಂದ ಅಣ್ಣನ ಸನ್ನಿಯನ್ನು ಇಲ್ಲಿ ಮೀರಲೊ ಮೀರದಿರಲೊ ಎಂದಿರುವಾಗಲೇ ಭೂತಕ್ಕೆ ಧೂಪಹಾಕಿದ ರೀತಿಯಲ್ಲಿ ದ್ರೌಪದಿಯ ವಚನಗಳು ಮೈದೋರಲು ಮರುತ್ಸುತನು ನವಮೇಘನಾದದಿಂದ ನುಡಿದನು,' ಎಂದು ಪಂಪ ಹೇಳಿದ್ದರ ಆಶಯ. ದ್ರೌಪದಿಯ ಪ್ರತಿಜ್ಞೆಗೆ ಪೂರಕವಾಗಿ ಭೀಮನ ಬಾಯಿಂದ ಹೊರಬಿದ್ದ ಮಹಾಪ್ರತಿಜ್ಞೆಯ ನುಡಿಗಳೆಂದರೆ ಬರೀ ಕಿಡಿಗಳಲ್ಲ, ಪ್ರಳಯಕಾರಿಯಾದ ಕೆಂಡಗಳು ಎನ್ನುವಂತೆ ಪಂಪನು ಅವುಗಳಲ್ಲಿ ಶಕ್ತಿಯನ್ನು ತುಂಬಿದ್ದಾನೆ. ಉದಾಹರಣೆಗೆ 'ದುಶ್ಶಾಸನನ ಉರಃಸ್ಥಳವನ್ನು ಅಗಲುವಂತೆ ಹೋಳುಮಾಡಿ ಕೂಗಿ ಕೆನ್ನೆತ್ತರನ್ನು ಕುಡಿಯುವೆ, ಆ ಕೆಂಪುಕಣ್ಣಿನ ದುರ್ಯೋಧನನ ಎರಡೂ ತೊಡೆಗಳನ್ನು ನನ್ನ ಉರುಗದಾಘಾತದಿಂದ ನುಚ್ಚುನೂರಾಗಿ ಮುರಿಯುವೆ, ಅವನ ರತ್ನರಶ್ಮಿಯಿಂದ ಪ್ರಕಟವಾದ ಮಕುಟವನ್ನು ಒಡೆಯುವೆ. ನಂಬುನಂಬು. ಪಂಕೇಜವಕ್ತ್ರೇ, ನನ್ನ ಕಣ್ಣಿಂದ ಈ ವೈರಿಗಳನ್ನು ನೋಡಿ ಕಿಡಿಯೂ ಕೆಂಡಗಳೂ ನೂಸಿ ಬರುತ್ತಿವೆ,' ಎಂದು ಭೀಮನು ದ್ರೌಪದಿಗೆ ಭರವಸೆಯನ್ನು ಕೊಡುತ್ತ ಪ್ರತಿಜ್ಞೆಮಾಡುತ್ತಾನೆ. ಇದೇ ಸಂನಿವೇಶದಲ್ಲಿ ಕೊನೆಗೆ ಪಾಂಡವರು ವನವಾಸಕ್ಕೆ ಹೊರಡಲು ಊರಜನರು ಇಬ್ಬದಿಯಲ್ಲಿ ನಿಂತು ಪಾಂಡವರ ವಿಷಯದಲ್ಲಿ ತೋರಿದ ಮರುಕವನ್ನು ಪಂಪನು ತೀರ ಸರಳವಾದ ಮತ್ತು ಸ್ವಾಭಾವಿಕವಾದ ಬಗೆಯಲ್ಲಿ ಮೂಡಿಸಿದ್ದಾನೆ. ಇದನ್ನು ಕಣ್ಣಿಟ್ಟು ನೋಡಿದರೆ 'ಭೀಮ ಪ್ರತಿಜ್ಞೆಯನ್ನು ಘೋಷಿಸುವಾಗ ತಾರಸಪ್ತಕದಲ್ಲಿ ರೌದ್ರ ಆಕ್ರಂದನವನ್ನು ಮಾಡಿದ ಕವಿ ಮರುಕ್ಷಣದಲ್ಲಿಯೇ ಕೆಳಗಿನ ಸಪ್ತಕಕ್ಕೆ ಸರ್ರನೆ ಇಳಿದು ಪುರಜನದ ಸರಳ

ಶ್ಲೋಕವನ್ನು ಹಾಡಿದ ಬಗೆ ಅವನ ಸರ್ವಂಕಷಪ್ರತಿಭೆಗೆ ನಿದರ್ಶನವಾಗಿದೆ' ಎಂಬುದರ ಮನವರಿಕೆಯಾಗುತ್ತದೆ. ಪಾಂಡವರನ್ನು ವನವಾಸಕ್ಕೆ ಕಳಿಸಿ ದುರ್ಯೋಧನನು 'ಬಡಿಗಂಡನಿಲ್ಲ, ಪಾಲಂಗಂಡಂ' (ಬಡಿಗೆಯನ್ನು ಕಾಣಲಿಲ್ಲ, ಹಾಲನ್ನು ಮಾತ್ರ ನೋಡಿದ) ಎಂಬ ಜನಸಾಮಾನ್ಯದ ಕೊನೆಯ ಮಾರ್ಮಿಕವಾದ ಉಕ್ತಿ ಸಮಗ್ರ ಸಂನಿವೇಶದ ರಸಪೂರ್ತಿಯನ್ನು ಮಾಡುವುದಲ್ಲದೆ ಬರಲಿರುವ ಭಾರತಯುದ್ಧದ ಕರಾಳಛಾಯೆಯನ್ನು ಭವಿಷ್ಯತ್ತಿನ ಗರ್ಭದಿಂದ ಹಠಾತ್ತನೆ ಎಳೆದು ತಂದು ನಿಲ್ಲಿಸುತ್ತದೆ. ಪಂಪನ ತರುವಾಯ ಬಂದ ಮಾರ್ಗಕವಿಗಳಲ್ಲಿ ಅವನ ಹೆಜ್ಜೆಯಲ್ಲಿ ಹೆಜ್ಜೆಯಿರಿಸಿ ನಡೆದು ಭುಜಕ್ಕೆ ಭುಜತಗಲಿಸಿ ರನ್ನನು ಎದ್ದು ನಿಲ್ಲುತ್ತಾನೆ. ಅವನ ಗದಾಯುದ್ಧವು ಪಂಪಭಾರತದ ಕೊನೆಕೊನೆಯ ಭಾಗದಿಂದ ಸ್ಫುರಣಹೊಂದಿ ನಿರ್ಮಾಣವಾಗಿದ್ದರೂ ಅದು ಅದರ ಪಡಿನೆಳಲಾಗದೆ ಕಿರಿದಾದ ಗಾತ್ರದಲ್ಲಿ ಹಿರಿಮೆಯನ್ನು ಮೆರೆಯುವ ಕೃತಿರತ್ನವಾಗಿದೆ. ಪಂಪನಲ್ಲಿ ಕಾಣುವ ಪೆಂಪು ರನ್ನನಲ್ಲಿ ಇರುವುದರ ಜೊತೆಗೆ ಪಂಪನಲ್ಲಿ ಕಾಣದೊರೆಯದ ನೇರವಾದ ರಭಸ, ದುರಂತನಾಟ್ಯಶೀಲತೆ, ಅರ್ಥಕ್ಕೆ ಕುದಿಯದ ಸರಳಶೈಲಿ ರನ್ನನಲ್ಲಿ ಎದ್ದು ಕಾಣುತ್ತವೆ. ಈ ಸಂಕಲನದಲ್ಲಿ ಆಯ್ದುಕೊಂಡ ಗದಾಯುದ್ಧದ ಭಾಗಗಳಿಂದ ಇದನ್ನು ಮನಗಾಣಬಹುದು. ಧರ್ಮರಾಜನು ಕೊನೆಗೆಲ್ಲಿ ಸಂಧಿಮಾಡಿಕೊಳ್ಳುವನೋ ಎಂಬ ಹೆದರಿಕೆಯಿಂದ ದ್ರೌಪದಿ ಭೀಮನನ್ನು ಸೇಡಿಗೆ ತಿವಿದೆಬ್ಬಿಸಲು ಬಂದು ಆಡುವ ತಿವಿತದ ನುಡಿಗಳಲ್ಲಿ 'ಸಂಧಿಯೇನಾದರೂ ಆದರೆ ವನವಾಸ ನಿಮಗೆ ಶರಣು, ನನಗೋ ಅಂದು ಅಗ್ನಿಮುಖದಿಂದ ಹುಟ್ಟಿದುದರಿಂದ ಅಗ್ನಿಮುಖವೇ ಶರಣು' ಎಂದು ಅನ್ನುತ್ತಾಳೆ. ಇಷ್ಟು ಪ್ರಚೋದನೆ ಸಾಕು, ಭೀಮನು ಕಾದ ಕೆಂಡವಾಗಿ ಪಡಿನುಡಿಯುತ್ತಾನೆ. 'ನೀನು ಅಗ್ನಿಪುತ್ರಿ, ನಾನು ವಾಯುಸುತ. ನಾವಿಬ್ಬರೂ ಕೂಡಿದರೆ ವೈರಿಯನ್ನು ಸುಟ್ಟು ಬಿಡಲಾರೆವೇ ? ಅಪಮಾನದ ಹೊಗೆಯಿಂದ ಕಪ್ಪಾದ ನಿನ್ನ ಕೂದಲು ಬರೀ ಕೇಶಹಸ್ತವಲ್ಲ, ಕುರುಕುಲ ಜೀವಾಕರ್ಷಣಕ್ಕೆ ಒದಗಿ ಬಂದ ಕಾಳಹಸ್ತ,' ಈ ಪಡಿನುಡಿಗಳಲ್ಲಿ ಪರಿಣಾಮಕಾರಿಯಾದ ಕಲ್ಪಕತೆಯಿರುವಂತೆ ನಾಟಕೀಯ ಅಭಿನಯದಿಂದ ಹೇಳಿದಾಗ ಎದೆಯನ್ನೇ ಅಲ್ಲಾಡಿಸುವ ಸಾಮರ್ಥ್ಯವಿದೆ. ಇದೇ ರೀತಿ ವೈಶಂಪಾಯನ ಸರೋವರ ಸಂದರ್ಭ, ಭೀಮದುರ್ಯೋಧನರ ಗದಾಯುದ್ಧ, ದುರ್ಯೋಧನನ ಅಂತ್ಯಸಮಯ ಇವುಗಳಲ್ಲಿ ನಿದರ್ಶನಗಳಿವೆ. ಸರೋವರದಿಂದ ತನ್ನ ಎಬ್ಬಿಸಲೆಂದು ಭೀಮನಾಡಿದ ಕಟೂಕ್ತಿಗಳಿಂದ ದುರ್ಯೋಧನನು ಎಷ್ಟು ಕೋಪಗೊಂಡನೆಂದರೆ ನೀರೊಳಗಿದ್ದರೂ ಅವನು ಬೆವತನಂತೆ! ಪಾಂಡವರ ತಲೆಗಳೆಂದು ಅಶ್ವತ್ಥಾಮನು ಅವರ ಮಕ್ಕಳ ತಲೆಗಳನ್ನು ತಂದು ಆಸನ್ನಮರಣನಾದ ದುರ್ಯೋಧನನಿಗೆ ತೋರಿಸಲು 'ಇವು ಪಾಂಡವರ ತಲೆಗಳಲ್ಲ. ಹಾಗಿದ್ದರೆ ನನ್ನ ನೋಡಿದೊಡನೆ ಭೀಮನ ಶಿರ ಸುಮ್ಮನಿರುತ್ತಿತ್ತೆ?' ಎಂದವನು ಆಡಿದನಂತೆ. ಶೇಕ್ಸಪಿಯರಿನಲ್ಲಿ ಕಾಣುವ ನಾಟ್ಯಶಕ್ತಿ ರನ್ನನಲ್ಲಿ ಅಂಶತಃ ಆದರೂ ಕಾಣುತ್ತಿದೆ ಎಂದರೆ ಅದು ಬರೀ ಅಭಿಮಾನದ ಮಾತಲ್ಲ. ಗದಾಯುದ್ಧವು ಹಿರಿಯ ಕಾವ್ಯವಾಗಿರುವಂತೆ ಮೇಲಾದ ನಾಟಕವೂ ಆಗಿದೆ ಎಂಬುದು ಅದರ ವೈಶಿಷ್ಟ್ಯವಾಗಿದೆ. ಮಾರ್ಗ ಕಾವ್ಯದ ಪರಂಪರೆಯಲ್ಲಿ ಪೊನ್ನ, ಜನ್ನ,

1 ನೆಯ ನಾಗವರ್ಮ, ನಾಗಚಂದ್ರ, ನೇಮಿಚಂದ್ರ, ರುದ್ರಭಟ್ಟ, ಆಂಡಯ್ಯ, ಷಡಕ್ಷರಿ ಈ ಮುಂತಾದ ಕವಿಗಳು ತಂತಮ್ಮ ಗುಣವಿಶೇಷವನ್ನು ತೋರಿದ್ದಾರೆ. ಪೊನ್ನನು ತನ್ನ ಶಾಂತಿ ಪುರಾಣದಲ್ಲಿ ಜೈನ ಪುರಾಣ ತಿಲಕವೆನ್ನಬಹುದಾದ ಪ್ರೌಢ ಕಾವ್ಯವನ್ನು ರಚಿಸಿದ್ದಾನೆ. ಜನ್ನನು ತನ್ನ ಯಶೋಧರ ಚರಿತೆ, ಅನಂತನಾಥ ಪುರಾಣಗಳಲ್ಲಿ ದುಷ್ಕಾಮ ಸಮಸ್ಯೆಯ ಎರಡು ಮುಖಗಳನ್ನು ಎತ್ತಿ ತೋರಿಸಿದ್ದಾನೆ. ಬಾಣ ಕಾದಂಬರಿಯ ಕನ್ನಡ ಅನುವಾದವನ್ನು ಸ್ವತಂತ್ರ ಕೃತಿಯೆನ್ನುವಂತೆ ಒಂದನೆಯ ನಾಗವರ್ಮನು ಚಂಪೂ ರೂಪದಲ್ಲಿ ಮಾಡಿದ್ದಾನೆ. ಜೈನರಾಮಾಯಣದ ಕಥೆಯನ್ನಾಧರಿಸಿ ನಾಗಚಂದ್ರನು ತನ್ನ ರಾಮಾಯಣವನ್ನು ಬರೆದು ರಾವಣಪಾತ್ರದಲ್ಲಿಯ ಉದಾತ್ತ ಅಂಶಗಳನ್ನು ಉತ್ಕಟವಾಗಿ ನಿರೂಪಿಸಿದ್ದಾನೆ. ನೇಮಿಚಂದ್ರನು ಶೃಂಗಾರವೇ ರಸವೆಂದು ಪ್ರತಿಪಾದಿಸುವಂತೆ ವರ್ಣನಮಯವಾದ ಲೀಲಾವತಿ ಕಾವ್ಯವನ್ನು ಬರೆದಿದ್ದಾನೆ. ರುದ್ರಭಟ್ಟನು ತನ್ನ ಜಗನ್ನಾಥ ವಿಜಯದಲ್ಲಿ ಭಾಗವತ ದೃಷ್ಟಿಯಿಂದ ಕೃಷ್ಣ ಕಥೆಯನ್ನು ನಿವೇದಿಸಿದ್ದಾನೆ. ಆಂಡಯ್ಯನು ಸ್ವಂತ ಕಲ್ಪಕತೆಯಿಂದ ಅಚ್ಚಗನ್ನಡದಲ್ಲಿ ಕಬ್ಬಿಗರ ಕಾವ್ಯದ ಕತೆಯನ್ನು ಹೆಣೆದಿದ್ದಾನೆ. ಷಡಕ್ಷರಿ ತನ್ನ ರಾಜಶೇಖರ ವಿಳಾಸ ಶಬರಶಂಕರವಿಳಾಸ ಮುಂತಾದ ಚಂಪೂಕೃತಿಗಳಲ್ಲಿ ವೀರಶೈವ ಕಥನ ಮಾರ್ಗಕ್ಕೆ ಪ್ರೌಢಿಮೆಯ ಮತ್ತು ಉನ್ನತ ಕಲ್ಪಕತೆಯ ಸನ್ನಾಹವನ್ನು ಒದವಿಸಿ ಕೊಟ್ಟಿದ್ದಾನೆ.

ಮಾರ್ಗಕಾವ್ಯದ ಪರಂಪರೆಯಲ್ಲಿ ಏರಿಳಿತಗಳಾಗಿವೆ. ಅದರಲ್ಲಿ ಪಾಂಡಿತ್ಯದ ವೇಷ ತೊಟ್ಟು ಪ್ರತಿಭೆ ಪ್ರಕಟವಾದ ಕಾರಣ ಅದರ ವರ್ಚಸ್ಸು ಮರ್ಯಾದಿತ ವಾಯಿತು. ಕಥನವಿಷಯ, ವಸ್ತು, ರಸ, ವರ್ಣನೆ, ಕವಿಸಮಯ, ಶೈಲಿ ಈ ಅಂಶಗಳಲ್ಲಿ ಅದು ಗತಾನುಗತಿಕವಾಯಿತು. ಮಾರ್ಗಕಾವ್ಯದ ಗುಣದೋಷಗಳೆಲ್ಲ ಅದರಲ್ಲಿ ಇಳಿದು ಬಂದಿರುತ್ತವೆ. ಸಾಧಾರಣಕವಿಗಳಂತೂ ಚರ್ವಿತಚರ್ವಣ ಪ್ರಧಾನವಾದ ಒಂದೆ ಪಡಿಯಚ್ಚಿನ ಗ್ರಂಥಗಳನ್ನು ಹೇರಳವಾಗಿ ರಚಿಸಿ ಸ್ವಂತಕ್ಕೆ ಮಾತ್ರ ಸಮಾಧಾನವನ್ನು ತಂದುಕೊಂಡರು. ಆದರೆ ಮೇಲ್ಮಟ್ಟದ ಕವಿಗಳಲ್ಲಿ ಅವರವರ ವ್ಯಕ್ತಿತ್ವಕ್ಕೆ ಅನುಸರಿಸಿ ವೈವಿಧ್ಯ ತಲೆದೋರಿದೆ. ಚಂಪುವೇ ಮಾರ್ಗಕಾವ್ಯದಲ್ಲಿ ಪ್ರಧಾನರೂಪವಾದರೂ ಅದನ್ನು ಬಳಸುವಲ್ಲಿ ಇಂಥ ಕವಿಗಳು ಸ್ವಂತಿಕೆಯನ್ನು ತೋರಿದ್ದಾರೆ. ಪಂಪ—ರನ್ನರಂಥ ಶ್ರೇಷ್ಠ ಕವಿಗಳಂತೂ ಕನ್ನಡ ಕಾವ್ಯಕ್ಕೆ ಮಾತ್ರ-ವಲ್ಲ ಭಾರತೀಯ ಕಾವ್ಯಕ್ಕೆ ಹಿರಿದಾದ ಕಾಣಿಕೆಗಳನ್ನು ಸಲ್ಲಿಸಿದ್ದಾರೆ ಎಂದು ಹೆಮ್ಮೆಯಿಂದ ಹೇಳಬಹುದು. ಪ್ರಾರಂಭದಿಂದ 12 ನೆಯ ಶತಕದವರೆಗೆ 'ಆನೆ ನಡೆದುದೆ ಬೀದಿಯಲ್ಲವೆ?' ಎಂಬಂತೆ ಮಾರ್ಗಕಾವ್ಯವೇ ಕನ್ನಡದಲ್ಲಿ ಪ್ರಧಾನವಾಗಿತ್ತು. 12 ಶತಕದಿಂದ ಮುಂದೆ ಬೇರೆಯಾದ ಕಾವ್ಯಮಾರ್ಗವು ತೆರೆದುಕೊಂಡಿತು. ಆದರೆ 14 ನೆಯ ಶತಕದವರೆಗೆ ಮಾರ್ಗಕಾವ್ಯದ ಪ್ರಭಾವವು ಅಳಿಯಲಿಲ್ಲ. ಮುಂದೆ ಮಾತ್ರ ಒಂದೆರಡು ಶತಮಾನಗಳಲ್ಲಿ ದೇಸಿಗಬ್ಬದ ಹೆಚ್ಚಳದಿಂದ ಮಾರ್ಗಕಾವ್ಯವು ಕುಗ್ಗಿಹೋಗಿತ್ತು. ಮತ್ತೆ 17 ನೆಯ ಶತಕದಲ್ಲಿ ಅದು ಪುನರುಜ್ಜೀವನ ಹೊಂದಿ ತಲೆಯೆತ್ತಿತು. ಜೀವನದಲ್ಲಿ ಹೇಗೊ ಹಾಗೆ ಸಾಹಿತ್ಯದಲ್ಲಿ ಕ್ರಿಯೆ ಪ್ರತಿಕ್ರಿಯೆಗಳು

ಇದ್ದೇ ಇರುತ್ತವೆ. ಪ್ರೌಢಕಾವ್ಯಕ್ಕೆ ಪ್ರತಿಕ್ರಿಯೆಯಾಗಿ ಅದರ ಉನ್ನತಿಯ ಕಾಲದಲ್ಲಿಯೆ ಸುಲಭಕಾವ್ಯದ ಪ್ರವೃತ್ತಿ ಉದಯವಾಗಿತ್ತು. ಚಂಪೂರೂಪವನ್ನೇ ಬಳಸಿದರೂ ಕೃತಿ ಹೆಚ್ಚು ಸುಲಭವೂ ಜನಪ್ರಿಯವೂ ಆಗುವಂತೆ ದುರ್ಗಸಿಂಹನು ಪಂಚತಂತ್ರವನ್ನು ಬರೆದನು, ನಯಸೇನನು ಧರ್ಮಾಮೃತವನ್ನು ರಚಿಸಿದನು. ಜನ ಮನವನ್ನು ಸೆರೆಹಿಡಿಯುವ ಕಥೆಗಳನ್ನು ಹಳಗನ್ನಡದಲ್ಲಿ ಆದರೂ ದೇಸಿಪ್ರಚುರವಾದ ಶೈಲಿಯಲ್ಲಿ ಹೇಳಿ ಇವರು ಹೊಸ ಕ್ರಾಂತಿಯ ಮೊದಲ ಕಹಳೆಯನ್ನೂದಿದರು. ಪಂಡಿತರಿಗೆ ಮಾತ್ರ ಗಮ್ಯವೂ ರಮ್ಯವೂ ಆದ ಕನ್ನಡ ಕಾವ್ಯವು ಪಾಮರರನ್ನೂ ಒಲಮಾಡಿಕೊಂಡಿತು.

ಹೀಗೆ ಕ್ವಚಿತ್ತಾಗಿ ತೋರಿದ ಜನಾಭಿಮುಖದೃಷ್ಟಿ 12 ನೆಯ ಶತಕದಲ್ಲಿ ವಚನಸಾಹಿತ್ಯದ ಮುಖಾಂತರ ವಿಪುಲ ಪ್ರಮಾಣದಲ್ಲಿ ಸಫಲತೆಯನ್ನು ಪಡೆಯಿತು. ವಚನಸಾಹಿತ್ಯಕಾರರಾದ ಶಿವಶರಣರು ಅಲ್ಲಮಪ್ರಭು, ಬಸವೇಶ್ವರ ಮತ್ತು ಚೆನ್ನಬಸವೇಶ್ವರ ಇವರ ನೇತೃತ್ವದಲ್ಲಿ ಸಾಂಪ್ರದಾಯಿಕ ಜೀವನದಲ್ಲಿಯ ವಿಷಮತೆ ಮತ್ತು ದಾಂಭಿಕತೆಯ ವಿರುದ್ಧ ಕ್ರಾಂತಿಯನ್ನು ಹೂಡಿದರು, ಶಿವಭಕ್ತಿನಿಷ್ಠವಾದ ಹೊಸ ಒಂದು ಜೀವನ ಮಾರ್ಗವನ್ನು ಬೋಧಿಸಿದರು. ಅವರ ಬೋಧನೆಗೆ ವಚನ ವೊಂದು ಸಮರ್ಥವಾದ ಸಾಧನವಾಯಿತು. ಪ್ರಮುಖವಾಗಿ ಸಾಹಿತ್ಯ ರೂಪವೆಂದು ವಚನವು ಮೈದಾಳಲಿಲ್ಲ. ತಮ್ಮ ಸ್ವಾನುಭವದ ವಾಣಿಯಾಗಿ ಜನಸಾಮಾನ್ಯರ ಅಂತಃಕರಣಕ್ಕೆ ತಟ್ಟಲಿ ಮತ್ತು ಅವರ ಆಚಾರವಿಚಾರಗಳಲ್ಲಿ ಪಲ್ಲಟವಾಗಲಿ ಎಂಬುದೇ ವಚನಕಾರರ ಆಶಯವಿತ್ತು. ಅಂತೇ ವಚನಗಳ ಸ್ವರೂಪವು ಕಾಲಮಾನ ಪರಿಸ್ಥಿತಿಗೆ ಅನುಕೂಲವಾಗಿ ಹೆಚ್ಚುಹೆಚ್ಚಾಗಿ ಜನಾಭಿಮುಖವಾಯಿತು. ಇದರಿಂದ ಕನ್ನಡ ಕಾವ್ಯ ಪ್ರಪಂಚದಲ್ಲಿ ಸ್ವಾತಂತ್ರ್ಯದ ಹೊಸಗಾಳಿ ಬೀಸತೊಡಗಿತು. ವಚನ ಸಾಹಿತ್ಯ ವನ್ನು ಕುರಿತು ಕೆಲವು ಹೆಮ್ಮೆಪಡುವಂಥ ಸಂಗತಿಗಳನ್ನು ತಿಳಿದುಕೊಳ್ಳುವುದು ಅಗತ್ಯ. ಮೊದಲನೆಯದಾಗಿ, ಈ ಸಾಹಿತ್ಯವು ಆಧ್ಯಾತ್ಮಿಕ ಸಾಧಕರ ಮತ್ತು ಸಿದ್ಧರ ಅನು ಭಾವದ ನೆಲೆಯಿಂದ ನಿರ್ಮಾಣವಾಯಿತು. 12 ನೆಯ ಶತಕದ ಮಧ್ಯಕಾಲದಲ್ಲಿ ಕನ್ನಡ ನಾಡಿನ ಸುದೈವದಿಂದ ಇಂಥ ಶಿವಶರಣರು ಮತ್ತು ಶಿವಶರಣೆಯರು ನೂರಾರು ಸಂಖ್ಯೆ ಯಲ್ಲಿ ಉದಯವಾದರು. ಅಲ್ಲಮಪ್ರಭುವಿನ ಮತ್ತು ಬಸವೇಶ್ವರನ ಉನ್ನತ ವ್ಯಕ್ತಿತ್ವದ ಸೂಜಿಗಲ್ಲಿನಿಂದ ಸಹಜವಾದ ಆಕರ್ಷಣೆ ಹೊಂದಿ ಕಾಶ್ಮೀರದಿಂದ ಕನ್ಯಾಕುಮಾರಿಯ ವರೆಗಿನ ಹಲವಾರು ಸಾಧಕರು ಕನ್ನಡನಾಡಿಗೆ ಬಂದರು. ಅದರಲ್ಲಿ ಸಾಮಾನ್ಯ ವ್ಯಕ್ತಿಗಳಲ್ಲದೆ ರಾಜರೂ ಇದ್ದರು. ಬಸವೇಶ್ವರನ ಕಾರ್ಯಕ್ಷೇತ್ರವೂ ಬಿಜ್ಜಳ ದೊರೆಯ ರಾಜಧಾನಿಯೂ ಆದ ಕಲ್ಯಾಣಪಟ್ಟಣದಲ್ಲಿ ಅವರೆಲ್ಲ ಸೇರುವೆಯಾದರು. ಎರಡನೆಯದಾಗಿ, ಕಾಯಕವೇ ಕೈಲಾಸವೆಂಬ ತತ್ವವನ್ನು ಅವರೆಲ್ಲ ಆಚರಣೆಯಲ್ಲಿ ತಂದರು. ಪ್ರತಿಯೊಬ್ಬರು ತಮತಮಗೆ ಸರಿಹೋಗುವ ಕಾಯಕದಲ್ಲಿ ತೊಡಗಿರುತ್ತಲೆ ಶರಣಮಾರ್ಗದ ಸಾಧನೆಯನ್ನು ಮಾಡಿದರು. ಯಾವ ಕಾಯಕವನ್ನೂ ಕೀಳೆಂದು ಅವರು ಬಗೆಯಲಿಲ್ಲ; ಕಾಯಕದಿಂದ ಯಾರೊಬ್ಬರೂ ಹೆಚ್ಚುಕಡಿಮೆಯೆಂಬ ಭಾವನೆ ಯನ್ನು ಬೆಳೆಯಗೊಡಲಿಲ್ಲ. ಮೂರನೆಯದಾಗಿ, ಅನುಭಾವಗೋಷ್ಠಿ ಅಥವಾ

ಅನುಭವ ಮಂಟಪ ಎಂಬ ಆಧ್ಯಾತ್ಮಿಕ ಕೇಂದ್ರದಲ್ಲಿ ಅಲ್ಲಮಪ್ರಭುವಿನ ಹಿರಿತನದಲ್ಲಿ ಈ ಅನುಭಾವಿಗಳೆಲ್ಲರೂ ಆಗಾಗ ಸೇರಿ ಮುಕ್ತಮನದಿಂದ ಆಧ್ಯಾತ್ಮಿಕ ಚರ್ಚೆಗಳನ್ನು ನಡಸುತ್ತಿದ್ದರು, ಅನ್ಯೋನ್ಯ ವಿಮರ್ಶೆಯನ್ನು ಮಾಡುತ್ತಿದ್ದರು. ಕರ್ನಾಟಕದ ದೃಷ್ಟಿಯಿಂದ ಮಾತ್ರವಲ್ಲ, ಭಾರತೀಯ ಮತ್ತು ಜಾಗತಿಕ ದೃಷ್ಟಿಯಿಂದ ನೋಡಿದಲ್ಲಿ ಅನುಭವಮಂಟಪದಂಥ ಸಂಸ್ಥೆ ಅತಿ ವಿರಳವೆಂದೇ ಹೇಳಬೇಕು. ಇಲ್ಲಿ ನಡೆಯುತ್ತಿದ್ದ ಸಂವಾದಗಳ ಸಂಕಲನವು ಶೂನ್ಯಸಂಪಾದನೆ ಎಂಬ ಹೆಸರಿನಲ್ಲಿ ತರುವಾಯದ ಕಾಲದಲ್ಲಿ ರೂಪತಾಳಿತು. ವಚನಸಾಹಿತ್ಯದ ಸಾರವು ಈ ಸಂಕಲನದಲ್ಲಿ ಕೆನೆಗಟ್ಟಿ ನಿಂತಿದೆ. ಕನ್ನಡ ಸಾಹಿತ್ಯವು ಜಗತ್ತಿನ ಸಾಹಿತ್ಯಕ್ಕೆ ನೀಡಿದ ಅಪರೂಪವಾದ ಕಾಣಿಕೆಗಳಲ್ಲಿ ಅದು ಒಂದಾಗಿದೆ.

ವಚನಸಾಹಿತ್ಯದ ಸ್ವರೂಪದ ವಿಷಯದಲ್ಲಿಯೂ ಗಮನಿಸಬೇಕಾದ ಅಂಶಗಳಿವೆ. ವಚನವೆಂದರೆ ಸಹಜವಾಗಿ ಆಡಿದ ಮಾತು. ಅನುಭಾವದ ನೆಲೆಯಲ್ಲಿ ನಿಂತಿರುವ ವಚನಕಾರರ ಬಾಯಿಂದ ಹೊರಬಿದ್ದ ಇಂಥ ಮಾತು ಬರೀ ಗದ್ಯವಾಗಲಿಲ್ಲ, ಪದ್ಯವೂ ಆಗಲಿಲ್ಲ, ವಿವಿಧಲಯಬದ್ಧವಾದ ಅನುಭಾವಗದ್ಯವಾಯಿತು. ಪ್ರತಿಯೊಂದು ವಚನವು ಸಾಮಾನ್ಯವಾಗಿ ತನ್ನದೊಂದು ಸ್ಥಾಯಿ, ಪ್ರತಿಮೆ ಮತ್ತು ಲಯದಿಂದ ಕೂಡಿರುತ್ತದೆ. ಅಂತೇ ಬೇರೊಂದು ಸಂದರ್ಭದಲ್ಲಿ ನಾವು ಹೇಳಿದಂತೆ ವಚನವೆಂದರೆ ಅನುಭಾವಗದ್ಯದಲ್ಲಿ ಉಸುರಿದ ಆಧ್ಯಾತ್ಮಿಕಭಾವಗೀತೆಯೆನ್ನಬಹುದು. ಅದರಲ್ಲಿ ಯಾವೊಂದು ಭಾವವು ಸಹಜಸ್ಫೂರ್ತವಾದ ರೂಪತಾಳಿ ತನ್ನಷ್ಟಕ್ಕೆ ಪೂರ್ತಿಗೊಳ್ಳುತ್ತದೆ. ಅದರ ಕೊನೆಗೆ ಆಯಾ ವಚನಕಾರನ ವಿಶಿಷ್ಟ ಅಂಕಿತವಿರುತ್ತದೆ. ಕೆಲವು ವಚನಗಳಲ್ಲಿ ತತ್ವವಿವರಣೆ, ನೀತಿಬೋಧೆ, ಸಮಾಜವಿಮರ್ಶೆಯಿರುತ್ತದೆ. ಭಾವಗೀತಾತ್ಮಕ ವಚನಗಳಲ್ಲಿ ಮಾತ್ರ ವಚನದ ಸಾಹಿತ್ಯಸ್ವರೂಪವು ಹೆಚ್ಚು ಸ್ಫುಟವಾಗಿರುತ್ತದೆ. ಉದಾಹರಣೆಗೆ, 'ನಿರಾಳವೆಂಬ ಕೂಸಿಂಗೆ ಬೆಣ್ಣೆಯನಿಕ್ಕಿ ಹೆಸರಿಟ್ಟು ಕರೆದವರಾರೋ.

> ಅಕಟಕಟ ಶಬ್ದದ ಲಜ್ಜೆಯ ನೋಡಾ, ಗುಹೇಶ್ವರನನರಿಯದ ಅನುಭವಿಗಳೆಲ್ಲರ ತರಕಟಗಾಡಿತ್ತು . . . ಬೆಟ್ಟಕ್ಕೆ ಚಳಿಯಾದಡೆ ಏನ ಹೊದ್ದಿ-ಸುವರಯ್ಯ, ಬಯಲು ಬೆತ್ತಲೆ ಇರ್ದರೆ ಏನನುಡಿಸುವರಯ್ಯಾ, ಭಕ್ತನು ಭವಿಯಾದಡೆ ಅದೇನನುಪಮಿಸುವನಯ್ಯಾ ಗುಹೇಶ್ವರಾ' ಈ ಅಲ್ಲಮಪ್ರಭುವಿನ ವಚನಗಳನ್ನೂ, 'ವಚನದಲ್ಲಿ ನಾಮಾಮೃತತುಂಬಿ, ನಯನದಲ್ಲಿ ನಿಮ್ಮ ಮೂರುತಿ ತುಂಬಿ, ಮನದಲ್ಲಿ ನಿಮ್ಮ ನೆನಹು ತುಂಬಿ, ಕಿವಿಯಲ್ಲಿ ನಿಮ್ಮ ಕೀರ್ತಿತುಂಬಿ, ಕೂಡಲಸಂಗಮದೇವಾ ನಿಮ್ಮ ಚರಣಕಮಲದೊಳಗಾನು ತುಂಬಿ, . . . ಅರಿಸಿನವನೇ ಮಿಂದು ಹೊಂದೊಡಿಗೆಯನೆ ತೊಟ್ಟು ಪುರುಷನ ಒಲವಿಲ್ಲದ ಲಲನೆಯಂತಾದೆನಯ್ಯಾ' ಎಂಬ

ಬಸವೇಶ್ವರನ ವಚನಗಳನ್ನೂ 'ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಂಗಳಿಗಂಜಿದಡೆಂತಯ್ಯ, ಸಮುದ್ರದ ತಡಿಯಲ್ಲೊಂದು ಮನೆಯ ಮಾಡಿ ನೊರೆತೆರೆಗಳಿಗಂಜಿದಡೆಂತಯ್ಯ, ಸಂತೆಯಲ್ಲೊಂದು ಮನೆಯ ಮಾಡಿ ಶಬ್ದಕ್ಕೆ ನಾಚಿ

ದೊಡೆಂತಯ್ಯ,' ಎಂದು ಮುಂತಾದ ಅಕ್ಕಮಹಾದೇವಿಯ ವಚನವನ್ನೂ ಅವಲೋಕಿಸ ಬೇಕು. ಮೇಲೆ ಹೇಳಿದ ವಚನಸಾಹಿತ್ಯದ ಜೀವಾಳವು ಇಂಥ ವಚನಗಳಲ್ಲಿ ಎದ್ದು ಕಾಣುತ್ತದೆ.

ಮಾರ್ಗಕಾವ್ಯದ ಕಟ್ಟುನಿಟ್ಟಿನಿಂದ ಹೊರಬಿದ್ದ ಕನ್ನಡಪ್ರತಿಭೆ ವಚನಸಾಹಿತ್ಯ ದಲ್ಲಿ ಸ್ವತಂತ್ರ ವಿಹಾರಮಾಡಿ ಇನ್ನೂ ಬೇರೆಬೇರೆಯಾದ ಅಭಿವ್ಯಕ್ತಿಗೆ ಅಣಿ ಯಾಯಿತು. ಅದರಲ್ಲಿ ರಗಳೆಯ ಕವಿ ಹರಿಹರ, ಷಟ್ಪದಿಯ ಕವಿ ರಾಘವಾಂಕ ಈ ಇಬ್ಬರ ಕೊಡಿಗೆಯನ್ನು ಗಮನಿಸಬೇಕು. ವಚನಕಾರರ ಕಾಲದ ನೆನಹು ಅಚ್ಚಳಿಯದೆ ಇರುವಾಗ ಹರಿಹರನು ಹುಟ್ಟಿ ಅವರ ಚರಿತ್ರೆಯ ಮೂಲಕ ಅವರ ಭಕ್ತಿಪ್ರಧಾನವಾದ ವ್ಯಕ್ತಿಸ್ವರೂಪವನ್ನು ಉತ್ಕಟ ಆತ್ಮೀಯತೆಯಿಂದ ಚಿತ್ರಿಸಿದನು. ಚಂಪೂರೂಪದಲ್ಲಿ ಗಿರಿಜಾಕಲ್ಯಾಣವೆಂಬ ಕೃತಿಯನ್ನು ರಚಿಸುತ್ತಲೆ ತನ್ನ ಅಭಿ ವ್ಯಕ್ತಿಯ ಉಕ್ಕಂದಕ್ಕೆ ಈ ರೂಪ ಸಾಲದೆಂದು ಅವನು ಅರಿತಿರಬೇಕು. ರಗಳೆ ಎಂಬುದೇ ಅವನು ತನ್ನ ಕಾವ್ಯಾತ್ಮಕ ಚರಿತ್ರೆಗಳಿಗಾಗಿ ತಾನಾಗಿ ನಿರ್ಮಿಸಿಕೊಂಡ ಕಾವ್ಯರೂಪ. ಇದರಲ್ಲಿ ಒಂದು ಸ್ಥಲ ಪದ್ಯ, ಇನ್ನೊಂದು ಗದ್ಯ. ಪದ್ಯವಾಗಿರುವುದು ಇಷ್ಟೇ ಸಾಲುಗಳೆಂಬ ಸಂಕೋಲೆಯಿಲ್ಲದೆ ಇಬ್ಬಗೆಯ ಪ್ರಾಸವೆಂಬ ಕಿರುಗೆಜ್ಜೆ ಕಟ್ಟಿಕೊಂಡು ಅವ್ಯಾಹತವಾಗಿ ಕುಣಿಯುತ್ತ ಸಾಗುವ ನರ್ತಕಿಯ ರೀತಿಯಾಯಿತು. ಈ ಬಗೆಯ ಪದ್ಯದಿಂದ ಬೇಸರುತರುವ ಏಕತಾನತೆ ಉಂಟಾಗಬಾರದೆಂದು ಗದ್ಯ ಸ್ಥಲವು ಬಂದಿತು. ಇಂಥ ಸಣ್ಣದೊಡ್ಡ ನೂರಾರು ರಗಳೆಗಳನ್ನು ಅವನು ಕನ್ನಡಕ್ಕೆ ಒದಗಿಸಿ ಕೊಟ್ಟಿದ್ದಾನೆ. ಅವುಗಳಲ್ಲಿ ಬಸವರಾಜದೇವರ ರಗಳೆ ಮತ್ತು ನಂಬಿಯಣ್ಣನ ರಗಳೆ ಅವನ ಹಿರಿಯ ಕೃತಿಗಳಾಗಿವೆ. ಮುಂದೆ ಅವನ ಹಾಗೆ ಯಾರೂ ರಗಳೆಯನ್ನು ಬರೆಯಲಿಲ್ಲ. ಆದರೆ ಅವನು ಹಾಕಿಕೊಟ್ಟ ವೀರಶೈವಕಾವ್ಯಪದ್ಧತಿ ಹರಿಹರಮಾರ್ಗ ವೆಂದು ಹೆಸರಾಯಿತು. ಈ ಮಾರ್ಗವನ್ನು ಅನುಸರಿಸಿಯೂ ತನ್ನದೇ ಆದ ದಾರಿ ಯನ್ನು ತುಳಿದವನೆಂದರೆ ಅವನ ಸೋದರಳಿಯ ಮತ್ತು ಶಿಷ್ಯನಾದ ರಾಘವಾಂಕನು. ಅವನು ಷಟ್ಪದಿಯಲ್ಲಿ ನಾಲ್ಕು ಗ್ರಂಥಗಳನ್ನು ಬರೆದು ಹಾಡುಗಬ್ಬದ ಜನಪ್ರಿಯ ರೂಪಕ್ಕೆ ಪುಟಕೊಟ್ಟನು. ಹರಿಶ್ಚಂದ್ರಕಾವ್ಯವೆಂಬ ಅವನ ಶ್ರೇಷ್ಠಕೃತಿಯಲ್ಲಿ ಷಟ್ಪದಿ ಸಾರ್ಥಕ್ಯವನ್ನು ಪಡೆಯಿತು. ಮೇಲಾಗಿ ಭಾರತೀಯ ಸಾಹಿತ್ಯಪರಂಪರೆಯಲ್ಲಿ ಮೊಟ್ಟಮೊದಲನೆಯ ಸಲ ಹರಿಶ್ಚಂದ್ರ ಕಥೆಯಲ್ಲಿ ವಸ್ತುನಾವೀನ್ಯ ಮತ್ತು ನಾಟ್ಯ ಪೂರ್ಣತೆ ಕೂಡಿ ಬಂದುವು. ಹೀಗೆ ಹರಿಹರ ರಾಘವಾಂಕರು ಹಿರಿಯ ಕವಿಗಳಾಗಿ ವಚನಕಾರರು ಹೊತ್ತಿಸಿಕೊಟ್ಟ ದೀವಟಿಗೆಯನ್ನು ಮುಂದುವರಿಸಿದರು. ತಮ್ಮ ಉತ್ತಮ ಕೃತಿಗಳಲ್ಲಿ ಸ್ವಂತದ್ದೆಂಬ ಬೆಳಕನ್ನು ಬೀರಿದರು.

15 ನೆಯ ಶತಮಾನದಿಂದ ಷಟ್ಪದಿ, ಸಾಂಗತ್ಯ, ತ್ರಿಪದಿ ಈ ಅಚ್ಚಗನ್ನಡ ಛಂದೋರೂಪಗಳಲ್ಲಿ ಕಾವ್ಯನಿರ್ಮಿತಿ ಹೆಚ್ಚಿತು, ಮಾರ್ಗಕಾವ್ಯವು ಹಿಂದೆ ಬಿದ್ದಿತು. ಭಾಮಿನಿ ಮತ್ತು ವಾರ್ಧಕ ಷಟ್ಪದಿಯಲ್ಲಿ ಬರೆವಣಿಗೆ ಹೆಚ್ಚು ಪ್ರಚುರ ವಾಯಿತು, ಜನಪ್ರಿಯವಾಯಿತು. 15, 16 ನೆಯ ಶತಕಗಳಲ್ಲಿ ವಿಜಯನಗರ ಸಾಮ್ರಾಜ್ಯವು ತನ್ನ ವೈಭವಶಿಖರವನ್ನು ಮುಟ್ಟಿತು. ಇಂಥ ಕಾಲದಲ್ಲಿ ಕನ್ನಡಿಗರ

ರಸಿಕತೆ, ಶೌರ್ಯ, ಸಮನ್ವಯದೃಷ್ಟಿ ಇವನ್ನು ತುಂಬುಕೊರಳಿನಿಂದ ಹೆಚ್ಚು ಜನಕ್ಕೆ ಮೆಚ್ಚಿಗೆಯಾಗುವಂತೆ ಬಣ್ಣಿಸಲು ಷಟ್ಪದಿ ಉತ್ತಮವಾಹಕವಾಯಿತು. ವಿಷಯ ಪೌರಾಣಿಕ ಇಲ್ಲವೆ ಐತಿಹಾಸಿಕವಾಗಿರಬಹುದಾದರೂ ಪರ್ಯಾಯವಾಗಿ ಅದರಲ್ಲಿ ತತ್ಕಾಲೀನ ಜೀವನ ಚಿತ್ರವು ಕೆಲವು ಕೃತಿಗಳಲ್ಲಿ ಬಂದಿದೆ. ಈ ಕಾಲದಲ್ಲಿ ತಾವು ಬರೆದದ್ದು ಕೃಷ್ಣಕಥೆ ಎಂದು ಹೇಳಿದ ಕವಿಗಳು ಕೃಷ್ಣಪರಮಾತ್ಮನ ಕಥೆ ಎಂಬ ಅರ್ಥದೊಡನೆ ವಿಜಯನಗರದ ಹಿರಿದೊರೆ ಕೃಷ್ಣದೇವರಾಯನ ಕಾಲದ ಕಥೆ ಎಂಬುದನ್ನು ಸೂಚಿಸಿರುವಂತಿದೆ. ಈ ಕಾಲದಲ್ಲಿ ಕನ್ನಡಕಾವ್ಯದ ಎತ್ತರವನ್ನು ಹೆಚ್ಚಿಸಿದವರಲ್ಲಿ ಕುಮಾರವ್ಯಾಸನನ್ನು ನೆನೆಯಬೇಕು. ಅವನು ಭಾಮಿನಿಷಟ್ಪದಿಯಲ್ಲಿ ವ್ಯಾಸ ಭಾರತದ ಹತ್ತು ಪರ್ವಗಳ ಕಥಾಭಾಗವನ್ನು ಅತ್ಯಂತ ವಿಸ್ತಾರವಾಗಿ ನಿರೂಪಿಸಿದ್ದಾನೆ. ಕನ್ನಡ ಶ್ರೇಷ್ಠಕಾವ್ಯಗಳಲ್ಲಿ ಒಂದೆಂದು ಈ ಕೃತಿ ಹೆಸರಾಗಿದೆ. ಇದರ ಶ್ರೇಷ್ಠತೆ ಬರೀ ವಿಸ್ತಾರದಲ್ಲಿಲ್ಲ, ಕಥೆ, ಪಾತ್ರಗಳ ನವೀನತೆಯ ರೂಪದಲ್ಲಿಯೂ ಅಷ್ಟಿಲ್ಲ. ಕವಿಯ ಭಗವದ್ಭಕ್ತಿಯ ಮೂಲಕ ದೈವೀಕೃಪೆಯಿಂದ ರೂಪಕ ಮತ್ತು ನಿರೂಪಕ ಶಕ್ತಿಯ ಅಸಾಧಾರಣ ಕೇಂದ್ರವೊಂದು ಅವನಿಗೆ ಲಭ್ಯವಾಯಿತು. ಅದರಿಂದ ಭಾರತ ಕಾಲದ ವಿದ್ಯಮಾನಗಳನ್ನು ಪ್ರತ್ಯಕ್ಷೀಕರಿಸಿಕೊಳ್ಳುವ ಮತ್ತು ಸಹಜ ದೇಸಿಯಲ್ಲಿ ಬಣ್ಣಿಸುವ 'ಸಂಜಯದೃಷ್ಟಿ' ಅವನಲ್ಲಿ ತೆರೆಯಿತು. ಕುಮಾರವ್ಯಾಸ ಭಾರತದ ಹಿರಿಮೆಯ ಮೂಲ ಇದರಲ್ಲಿದೆ. ವೀರನಾರಾಯಣನೆ ಕವಿ, ಲಿಪಿಕಾರ ಕುವರವ್ಯಾಸ ಎಂದು ಅವನು ಪೀಠಿಕಾಪದ್ಯಗಳಲ್ಲಿ ಹೇಳಿದ್ದು ಅರ್ಥಪೂರ್ಣವಾಗಿದೆ. ಬೇರೊಂದು ಸಂದರ್ಭದಲ್ಲಿ ನಾವು ಹೇಳಿರುವಂತೆ 'ಒಟ್ಟಿನಲ್ಲಿ ತೋರಿದ ಉತ್ಕಟತೆ, ಜೀವಂತಿಕೆ, ಕಲ್ಪಕತೆ, ದೇಸಿಯ ಸಹಜತೆ—ಎಲ್ಲಕ್ಕಿಂತ ಮಿಗಿಲಾಗಿ ಅದ್ಭುತ ತಾದಾತ್ಮ್ಯ—ಇದರಿಂದ ಕುಮಾರವ್ಯಾಸಭಾರತವು ಕನ್ನಡದ ಮಹಾಕೃತಿಗಳಲ್ಲಿ ಒಂದಾಗಿದೆ. ಪಂಪ ಭಾರತ ಮತ್ತು ಕುಮಾರವ್ಯಾಸಭಾರತ ಇವೆರಡಕ್ಕೂ ವ್ಯಾಸಭಾರತವೇ ಮೂಲವಾದರೂ ಇಬ್ಬರ ಜೀವನದೃಷ್ಟಿ ಮತ್ತು ನಿರೂಪಣಪದ್ಧತಿ ಬೇರೆಯಾಗಿರುವುದರಿಂದ ಅವನ್ನು ಒಂದೇ ಬಗೆಯ ಅರಸುತೂಕದ ಅದರೆ ಬೇರೆ ಬಗೆಯ ಕಥನವುಳ್ಳ ಕೃತಿಗಳೆಂದು ಹೇಳಬಹುದು. ಪಂಪನು ತನ್ನ ಭಾರತದಲ್ಲಿ ಪ್ರಮುಖವಾಗಿ ಮಾನವೀಯ ದೃಷ್ಟಿಯನ್ನು ತೋರಿದರೆ ಕುಮಾರವ್ಯಾಸನು ಭಾಗವತ ದೃಷ್ಟಿಯನ್ನು ಓತಪ್ರೋತವಾಗಿ ತನ್ನ ಭಾರತದಲ್ಲಿ ಹರಿಸಿದ್ದಾನೆ. ಕುಮಾರವ್ಯಾಸನಂತೆ ಭಕ್ತನಾಗಿ ಈಶ್ವರ ಪ್ರೇರಣೆಯಿಂದ ಪ್ರಭುಲಿಂಗ ಲೀಲೆಯೆಂಬ ಉತ್ತಮ ಚರಿತ್ರಕಾವ್ಯವನ್ನು ಬರೆದವನು ಚಾಮರಸನು. ಕುಮಾರವ್ಯಾಸನಂತೆ ದೈವೀಶಕ್ತಿಗೆ ತಾನು ನಿಮಿತ್ತಮಾತ್ರವೆಂದು ಇವನೂ ನಮ್ರತೆಯಿಂದ ಹೇಳುತ್ತಾನೆ. 'ದೇಗುಲದ ಒಳಗಿದ್ದು ಯಾರಾದರೂ ನುಡಿದರೆ ಜನರಿಗೆ ಪ್ರತಿಧ್ವನಿಯಿಂದ ದೇಗುಲವೇ ಮಾತಾಡುವಂದದೊಳು ಆಗುವುದಿಲ್ಲವೆ? ಹಾಗೆ ಗುರು ಗುಹೇಶ್ವರನು ನನ್ನನ್ನು ನುಡಿಸಿದರೆ ನುಡಿದು ಆಗುಮಾಡಿಯೆ ಪ್ರಭುಲಿಂಗಲೀಲೆಯನು ಹೇಳುವೆನು' ಎಂದಿದ್ದಾನೆ. ಅಲ್ಲಮಪ್ರಭು ಯಾರ ಮತಿಯ ಇಲ್ಲವೆ ಲೆಕ್ಕಣಿಕೆಯ ಹಿಡಿತಕ್ಕೆ ಸುಲಭವಾಗಿ ಸಿಕ್ಕದ ಮಹಾವ್ಯಕ್ತಿ. ಅವನು ಮಾಯಾ ಕೋಲಾಹಲ, ಮತಪಂಥಗಳಿಂದ ನಿರ್ಲಿಪ್ತ, ಆದರೂ ತತ್ಕಾಲೀನ ಸರ್ವಸಾಧಕರಿಗೆ

ಮಾರ್ಗದರ್ಶಕನಾದವನು. 'ಪ್ರತ್ಯಕ್ಷ ಪರಬೊಮ್ಮ' ಎಂದೆನಿಸಿಕೊಂಡ ಇಂಥ ವ್ಯಕ್ತಿಯ ಚರಿತೆಯನ್ನು ಬರೆಯುವ ಸಾಹಸವನ್ನು ಕೈಕೊಂಡು ಚಾಮರಸನು ಯಶಸ್ವಿಯಾಗಿ ಅದನ್ನು ಪೂರ್ಣಗೊಳಿಸಿದ್ದಾನೆ. ಅಲ್ಲಮ ಪ್ರಭುವಿನ ವ್ಯಕ್ತಿತ್ವ ಚಿತ್ರಣದಲ್ಲಿಯೆ ತನ್ನೆಲ್ಲ ಶಕ್ತಿಯನ್ನು ಕೇಂದ್ರೀಕರಿಸಿ ಎಲ್ಲ ಸಂನಿವೇಶಗಳನ್ನು ಅದಕ್ಕೆ ಅನುಗೊಳಿಸಿಕೊಂಡು ಬೇರೆ ಯಾವ ಆಸೆಗಳಿಗೂ ಬಲಿಬೀಳದೆ ಚರಿತ್ರೆಯನ್ನು ಸಮರ್ಪಕವಾಗಿ ಸಹಜವಾಗಿ ಬರೆದಿರುವುದರಲ್ಲಿಯೆ ಚಾಮರಸನ ಹಿರಿಮೆಯಿದೆ.

ಈ ಕಾಲದ ಷಟ್ಪದಿಕಾರರಲ್ಲಿ ಲಕ್ಷ್ಮೀಶ ಮತ್ತು ವಿರೂಪಾಕ್ಷ ಪಂಡಿತ ಇವರ ವಿಶೇಷ ಉಲ್ಲೇಖವು ಅವಶ್ಯವಾಗಿದೆ. ಲಕ್ಷ್ಮೀಶನು ವಾರ್ಧಕ ಷಟ್ಪದಿಯಲ್ಲಿ ಸಂಸ್ಕೃತ ಜೈಮಿನಿಭಾರತದ ಕಥೆಯನ್ನು ತನ್ನದೇ ಆದ ಪ್ರೌಢವೂ ಮಧುರವೂ ಆದ ಶೈಲಿಯಲ್ಲಿ ಕನ್ನಡಿಸಿದನು. ಕತೆಗಳನ್ನು ರುಚಿಕರವಾಗಿ ಹೇಳುವಲ್ಲಿ ಅವನದು ಎತ್ತಿದ ಕೈ. ಚಂದ್ರಹಾಸನ ಕಥಾಭಾಗದಲ್ಲಿ ತನ್ನ ಕಥನ ಕಲೆಯ ಹೆಗ್ಗಳಿಕೆಯನ್ನು ಅವನು ತೋರಿಸಿ ಕೊಟ್ಟಿದ್ದಾನೆ. ಹಾಡುಗಬ್ಬವು ಕೂಡ ಹೇಗೆ ಲಕ್ಷಣಯುಕ್ತವೂ ಶ್ರುತಿಮಧುರವೂ ಆಗಬಹುದೆಂದು ತಿಳಿಯುವುದಕ್ಕೆ ಈ ಕೃತಿ ನಿದರ್ಶನವಾಗಿದೆ. ಕುಮಾರವ್ಯಾಸ—ಚಾಮರಸರಂತೆ ಇವನೂ ಭಕ್ತಕವಿ, ದೈವೀಪ್ರೇರಣೆಯಿಂದ ಕೃತಿ ನಿರ್ಮಿಸಿದವನು. ಆದರೆ ಇವನ ವ್ಯಕ್ತಿತ್ವದಲ್ಲಿ ಮಾರ್ಗಕಾವ್ಯದ ಪರಿಶುದ್ಧತೆ ಮತ್ತು ಸಲ್ಲಕ್ಷಣತೆ ಇವುಗಳ ಕಡೆಗೆ ಗಮನವು ಹೆಚ್ಚಾಗಿತ್ತು. ಅಂತೇ ಕುಮಾರವ್ಯಾಸನ ಸ್ವಚ್ಛಂದ ಪ್ರತಿಭೆಯ ಅಚ್ಚರಿ ಇವನಲ್ಲಿ ಕಡಿಮೆಯೆಂದು ಹೇಳಬಹುದು. ವಿರೂಪಾಕ್ಷ ಪಂಡಿತನು ಪಂಡಿತಕವಿಯಾಗಿ ದೊಡ್ಡ ಗಾತ್ರದಲ್ಲಿ ಚೆನ್ನಬಸವ ಪುರಾಣವನ್ನು ಬರೆದು ವೀರಶೈವ ವಿಶ್ವಕೋಶವೆನ್ನಬಹುದಾದ ಗ್ರಂಥವನ್ನು ಜನಪ್ರಿಯವಾದ ವಾರ್ಧಕ ಷಟ್ಪದಿಯಲ್ಲಿ ಬರೆದಿದ್ದಾನೆ. ಇದರ ಸಂಕೀರ್ಣಸ್ವರೂಪದ ಮೂಲಕ ಇವನ ಪ್ರತಿಭೆಯ ಪ್ರಕಾಶನಕ್ಕೆ ಏಕತಾನವಾದ ಅವಕಾಶವು ಇದರಲ್ಲಿ ದೊರೆಯಲಿಲ್ಲ. ದೇಸಿಗಬ್ಬವು ಬೆಳೆಯುತ್ತಿರುವ ಈ ಕಾಲದಲ್ಲಿಯೇ ದಾಸಸಾಹಿತ್ಯವು ಹೆಚ್ಚಿನ ಪ್ರಮಾಣದಲ್ಲಿ ನಿರ್ಮಾಣವಾಯಿತು. ಪುರಂದರದಾಸ—ಕನಕದಾಸರು ತಂತಮ್ಮ ವಿಶಿಷ್ಟ ವ್ಯಕ್ತಿತ್ವದಿಂದ ಕೂಡಿದವರಾಗಿ ಹೇರಳವಾಗಿ ಭಕ್ತಿಗೀತೆಗಳನ್ನು ಹಾಡಿದರು, ಸಮಾಜ ವಿಮರ್ಶೆ ಮಾಡಿದರು, ಬೋಧನೆಗೈದರು. ಸಂಗೀತ—ನರ್ತನದಿಂದ ಅವರ ಕೀರ್ತನೆಗಳ ರಂಜಕತೆ ಹೆಚ್ಚಿತು, ಆಡುಮಾತಿನ ಅವರ ಶೈಲಿಯಿಂದ ಸುಬೋಧತೆ ಮಿಕ್ಕಿತು. ಜನಜೀವನದ ಮಧ್ಯೆನಿಂತು ಅದರ ಸೆಳವಿನಲ್ಲಿ ಸಿಲುಕದೆ ಜನಭಾಷೆಯಲ್ಲಿಯೆ ಎತ್ತರದ ಜೀವನದರ್ಶನವನ್ನು ಸಾರಿ ಹೇಳಿದ ಈ ಹರಿದಾಸರು ಕನ್ನಡ ಸಾಹಿತ್ಯಸಂಸ್ಕೃತಿಗಳಿಗೆ ಮಹೋಪಕಾರ ಮಾಡಿದ್ದಾರೆ. ದಾಸಕೂಟದ ಈ ಪರಂಪರೆಯಲ್ಲಿ ವಿಜಯದಾಸ, ಜಗನ್ನಾಥದಾಸ ಮುಂತಾದ ಹಿರಿಯ ಭಕ್ತ ಕವಿಗಳನ್ನು ನೆನೆಯಬೇಕು. ವಚನ ಸಾಹಿತ್ಯದ ಕಾಲದಲ್ಲಿಯೇ ಹಾಡಿನ ಪರಂಪರೆ ಮೊದಲಾಗಿ ತರುವಾಯ ನಿಜಗುಣ ಶಿವಯೋಗಿಗಳ ವಿವಿಧಗೀತಗಳಲ್ಲಿ ಅದು ವಿಸ್ತಾರಗೊಂಡಿತು. ನಿಜಗುಣ ಶಿವಯೋಗಿಗಳು ಕನ್ನಡ ನಾಡಿನ ಶ್ರೇಷ್ಠ ಅನುಭಾವಿಗಳೂ ಗೀತಕಾರರೂ ಎಂದು ಪ್ರಖ್ಯಾತರಾದರು. ಮುಪ್ಪಿನ ಷಡಕ್ಷರಿ, ಸರ್ಪಭೂಷಣ ಇವರ ಹಾಡುಗಳಲ್ಲಿ ಅದೇ ಬಗೆಯ

ಅನುಭಾವದ ಎತ್ತರ, ಭಕ್ತಿಯ ಉತ್ಕಟತೆ, ಶೈಲಿಯ ಸಹಜತೆ ಈ ಗುಣಗಳು ಎದ್ದು ಕಾಣುತ್ತವೆ.

ಜನಪದ ಸಾಹಿತ್ಯದ ಹಲವಾರು ಧಾಟಿಗಳಲ್ಲಿ ತ್ರಿಪದಿ ಮತ್ತು ಸಾಂಗತ್ಯಗಳನ್ನು ಕನ್ನಡ ಕವಿಗಳು ಸಮರ್ಥವಾಗಿ ಬಳಸಿಕೊಂಡರು. ತ್ರಿಪದಿಯ ಸಲೀಲವಾದ ರಚನೆಯಲ್ಲಿ ಸರ್ವಜ್ಞನೇ ಸಾರ್ವಭೌಮ. ಅವನ ಸಾವಿರಾರು ತ್ರಿಪದಿಗಳ ಅಂಕೆಗೆ ಸಿಲುಕದ ವಿಷಯವೇ ಇಲ್ಲ. 'ಅನುಭವದ ವೇದವೇ ವೇದ' ಎಂದವನು ಹೇಳಿದಂತೆ ಸಾಮಾನ್ಯ ಜನತೆಗಾಗಿ ಸರ್ವಜ್ಞನು ಅನುಭವದ ವೇದವನ್ನು ಬರೆದುಕೊಟ್ಟನು. ಸಾಹಿತ್ಯವು ಸರಸವಾದ ಜೀವನವಿಮರ್ಶೆ ಮತ್ತು ಪ್ರೇರಣೆ ಎಂಬುದಕ್ಕೆ ಅವನ ತ್ರಿಪದಿಗಳು ಉತ್ತಮ ನಿದರ್ಶನಗಳಾಗಿವೆ. ಕಂಡದ್ದನ್ನಾಡುವ ಅವನ ಖಂಡಿತ ನುಡಿಗಳಲ್ಲಿ ನೋಯಿಸಿಯೂ ನೋಯಿಸದ ಗುಣವಿದೆ. ಸಾಂಗತ್ಯಕಾರರಲ್ಲಿ ಶಿಶುಮಾಯಣ, ನಂಜುಂಡ ಮುಂತಾಗಿ ಕೆಲವರು ಗಣ್ಯವಾದ ಕೃತಿಗಳನ್ನು ಬರೆದು ಅವರಲ್ಲಿ ಶ್ರೇಷ್ಠವಾದ ರತ್ನಾಕರವರ್ಣಿಗೆ ದಾರಿಯನ್ನು ಮಾಡಿಕೊಟ್ಟರು. ರತ್ನಾಕರನು ತನ್ನ ಭರತೇಶ ವೈಭವವೆಂಬ ಬಹು ದೊಡ್ಡದಾದ ಸಾಂಗತ್ಯ ಗ್ರಂಥದಲ್ಲಿ ಆದಿತೀರ್ಥಂಕರನ ಮಗನಾದ ಭರತಚಕ್ರವರ್ತಿಯ ಕಥೆಯನ್ನು ನಿಮಿತ್ತಮಾಡಿಕೊಂಡು ತನ್ನ ಭೋಗಯೋಗ ಸಮನ್ವಯದಿಂದ ಪರಿಪಕ್ವವಾದ ಜೀವನ ದರ್ಶನವನ್ನು ಬಣ್ಣಿಸಿರುತ್ತಾನೆ. ಇದರಲ್ಲಿ ಕಥನಭಾಗಕ್ಕಿಂತ ವರ್ಣನ ಭಾಗವು ಹೆಚ್ಚು. ಈ ವರ್ಣನೆಯೂ ಕೂಡ ಸಾಂಪ್ರದಾಯಿಕವಾದುದಲ್ಲ. ತನ್ನ ಪ್ರತಿ ನಿತ್ಯದ ಜೀವನದಲ್ಲಿ ಭರತೇಶನು ಹೇಗೆ ಎತ್ತರದ ಭೂಮಿಕೆಯಲ್ಲಿದ್ದುಕೊಂಡು ಭೋಗಯೋಗವೆರಡನ್ನೂ ಸಮನ್ವಯಗೊಳಿಸುತ್ತಿದ್ದನೆಂಬುದೇ ಇಲ್ಲಿಯ ಮುಖ್ಯ ಆಶಯ. ಸಾಂಗತ್ಯದಂಥ ಹಾಡಿನ ಮಟ್ಟದಲ್ಲಿ ಈರೀತಿಯಾಗಿ ಭವ್ಯದರ್ಶನವನ್ನು ಕಾವ್ಯಮಯವಾಗಿ ಮೂಡಿಸಿದ್ದರಿಂದ ಕನ್ನಡದ ಉತ್ತಮ ಕೃತಿಗಳಲ್ಲಿ ಭರತೇಶವೈಭವವು ಸ್ಥಾನಪಡೆದಿದೆ.

ಹಿಂದೆ ಸೂಚಿಸಿದಂತೆ ದೇಸಿಗಬ್ಬದ ಕಾಲದಲ್ಲಿ ಕುಗ್ಗಿದ ಮಾರ್ಗಕಾವ್ಯವು ಮೈಸೂರು ದೊರೆಗಳ ಕಾಲದಲ್ಲಿ ಮತ್ತೆ ಜೀವಕಳೆಯನ್ನು ತಾಳಿತು. ಇದಕ್ಕೆ ತಿರುಮಲಾರ್ಯ, ಸಿಂಗರಾರ್ಯ, ಷಡಕ್ಷರಿ ಇವರು ಮುಖ್ಯವಾಗಿ ಕಾರಣೀಭೂತರಾದರು. ಹಳಗನ್ನಡ ಗದ್ಯವು ಮತ್ತೆ ತಲೆಯೆತ್ತಿತು. ಈ ಕಾಲದಲ್ಲಿ ಹೊನ್ನಮ್ಮಳೊಬ್ಬಳೇ ಹದಿಬದೆಯ ಧರ್ಮವನ್ನು ಸಾಂಗತ್ಯದಲ್ಲಿ ಬರೆದು ದೇಸಿಗಬ್ಬದ ಧ್ವಜವನ್ನು ಎತ್ತಿಹಿಡಿದಳು. ಬರಬರುತ್ತ ಗದ್ಯಕ್ಕೆ ಹೆಚ್ಚಿನ ಪ್ರಾಶಸ್ತ್ಯದೊರೆತು ಹೊಸಸಾಹಿತ್ಯದ ಹೊಸತಿಲಲ್ಲಿ ನಿಂತ ಮುದ್ದಣನ ರಾಮಾಶ್ವಮೇಧವು ಹಳಗನ್ನಡದ ವೇಷ, ಹೊಸಗನ್ನಡದ ಆವೇಶ ಇವನ್ನೊಳಗೊಂಡು ತನ್ನ ತಾನೆಷ್ಟು ಮರೆಮಾಚಿಕೊಂಡರೂ ಬರಲಿರುವ ಹೊಸ ಸಾಹಿತ್ಯಕ್ಕೆ ನಾಂದಿಯಾಗಿ ಪರಿಣಮಿಸಿತು.

ಹೊಸಗನ್ನಡಕಾವ್ಯವು ಇಪ್ಪತ್ತನೆಯ ಶತಮಾನದ ಮೊದಲಿನ ದಶಕಗಳಲ್ಲಿ ಅಂತಃಪ್ರೇರಣೆ, ಅನ್ಯಪ್ರಭಾವ ಮತ್ತು ಸ್ವಾತಂತ್ರ್ಯ ಸಂಗ್ರಾಮದಿಂದ ಉಂಟಾದ ನವಚೇತನ ಇವುಗಳಿಂದ ಹೊಸ ಸಂಸ್ಕಾರ ಹೊಂದಿ ಉದಯವಾಯಿತು. ರಚನೆಯ ಕಾಲದೃಷ್ಟಿಯಿಂದ ಸ್ವತಂತ್ರ ನಿರ್ಮಿತಿ ಮೊದಲೋ ಅನುವಾದ ಮೊದಲೋ ಹೇಳು

ವುದು ಕಷ್ಟ. ಯಾವೊಬ್ಬ ಉದಯೋನ್ಮುಖ ಕವಿ ಸ್ವತಂತ್ರ ಕವನವನ್ನು ಬರೆದು ಬಹುಕಾಲ ಪ್ರಕಟಿಸದೆ ತನ್ನ ಹತ್ತಿರ ಇಟ್ಟುಕೊಂಡಿರಬಹುದು. ಅನುವಾದಿತ ಕವನಗಳು ಅದೇ ಸಮಯದಲ್ಲಿ ಪ್ರಕಟವಾಗಿರಬಹುದು. ಇದೇನೆ ಇದ್ದರೂ, ಶ್ರೀಯವರ ಇಂಗ್ಲಿಷ್ ಗೀತೆಗಳು ಎಂಬ ಅನುವಾದಿತ ಕವನಸಂಗ್ರಹವು ಬರಲಿರುವ ಹೊಸ ಸ್ವತಂತ್ರ ನಿರ್ಮಿತಿಗೆ ಛಂದೋರೂಪಗಳನ್ನು ನುಡಿಗಡಣಗಳನ್ನೂ ಕಲಿಸಿಕೊಟ್ಟುದಲ್ಲದೆ ಭಾವಗೀತೆಯ ಮನೋಭಾವವನ್ನು ಬೆಳೆಸಲು ಕಾರಣವಾಯಿತು. ಹೊಸಗಾಳಿ ವೇಗದಿಂದ ಬೀಸತೊಡಗಿತು. ಕನ್ನಡದ ತೋಟದಲ್ಲಿ ತರತರದ ಹೂಗಿಡಗಳು ತಂತಮ್ಮ ರೀತಿಯಲ್ಲಿ ಬೆಳೆದು ಅರಳಿದುವು, ಕಂಪು ಬೀರಿದವು. ಸ್ವತಂತ್ರ ವ್ಯಕ್ತಿತ್ವದ ಸಾಧನೆ, ಸ್ವಾನುಭವದ ನಿರೂಪಣೆ ಇವು ಹೊಸ ಕಾವ್ಯದ ಸೂತ್ರಗಳಾದವು. ಶ್ರೀ, ಪಂಜೆ, ಬೇಂದ್ರೆ, ಡಿವಿಜಿ, ಗೋವಿಂದ ಪೈ, ಮಾಸ್ತಿ ಈ ಮೊದಲಾದ ಹಿರಿಯ ಕವಿಗಳು ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಬೆಳೆಯುತ್ತಿರುವ ತರುಣ ಕವಿಗಳಿಗೆ ಪ್ರೇರಣೆ ಕೊಟ್ಟರು, ಮಾರ್ಗದರ್ಶನಮಾಡಿದರು. ಅದರ ಪರಿಣಾಮವಾಗಿ ಕುವೆಂಪು, ಪುತಿನ, ವಿನಾಯಕ, ಶಂಕರಭಟ್ಟ, ಮಧುರಚೆನ್ನ ಮುಂತಾದ ಕವಿಗಳ ಎರಡನೆಯ ಪೀಳಿಗೆ ಕಣ್ದೆರೆಯಿತು. ಈ ಎಲ್ಲರ ಬರೆವಣಿಗೆಯಲ್ಲಿ ಭಾವಗೀತೆಯೆ ಪ್ರಮುಖರೂಪವಾಗಿ ಹಿಂದೆಂದೂ ಕಾಣದಂಥ ವೈವಿಧ್ಯವನ್ನೂ ಸಂಪತ್ತಿಯನ್ನೂ ಆವಿಷ್ಕಾರಗೊಳಿಸಿತು. ಇಂಗ್ಲಿಷ್ ಸಾಹಿತ್ಯದ ಪ್ರಭಾವದಿಂದ ಕನ್ನಡಕ್ಕೆ ಅಳವಡಿಸಿಕೊಂಡ ಸರಳರಗಳೆ, ಸುನೀತ, ಮುಕ್ತಛಂದಸ್ಸು, ಗೀತನಾಟಕ, ಜಾನಪದಗೀತ ಇವು ರೂಢಿಗೆ ಬಂದುವು. ಕಾಲಕ್ರಮೇಣ ಭಾರತದಲ್ಲಿ ಮತ್ತು ಇತರ ಜಗತ್ತಿನಲ್ಲಿ ಪ್ರಸಾರವಾಗುತ್ತಿರುವ ರಾಜಕೀಯ, ಸಾಮಾಜಿಕ ಮತ್ತು ಸಾಹಿತ್ಯಿಕ ವಿಚಾರಗಳ ವರ್ಚಸ್ಸಿನಿಂದ ಕನ್ನಡ ಕಾವ್ಯ ಪ್ರಪಂಚದಲ್ಲಿ ಪ್ರಗತಿಶೀಲ, ಆಮೇಲೆ ನವ್ಯ ಎಂಬ ಪ್ರವಾಹಗಳು ತೆರೆತೆರೆಯಾಗಿ ಬಂದಿರುವುದು ಸ್ವಾಭಾವಿಕ. ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಉಂಟಾದ ಸಮಸ್ಯೆಗಳಿಂದ ಒಂದು ಬಗೆಯ ವೈಫಲ್ಯಭಾವವೂ ಕೆಲವರನ್ನು ಆವರಿಸಿದೆ. ಅವರ ಕಾವ್ಯದ ಮೇಲೆ ಅದರ ಗಾಢಪರಿಣಾಮವೂ ಆಗಿದೆ. ಕನ್ನಡ ಕಾವ್ಯದ ಮೂರನೆಯ ಪೀಳಿಗೆಯಲ್ಲಿ ಗೋಪಾಲಕೃಷ್ಣ ಅಡಿಗ, ಚೆನ್ನವೀರ ಕಣವಿ, ಶಿವರುದ್ರಪ್ಪ ಮುಂತಾದ ಕವಿಗಳು ಮೇಲ್ಮೆಗೆ ವೀಳ್ಯವೆತ್ತಿದರು. ಇವರಿಗಿಂತ ಅದ್ಯತನರಾದ ಇನ್ನೂ ಹಲವರು ಕ್ಷಿತಿಜದ ಮೇಲೆ ಮೂಡಿ ಮಿನುಗುತ್ತಿದ್ದಾರೆ. ಎಲ್ಲ ಪ್ರಮುಖರ ನಾಮನಿರ್ದೇಶವಾಗಲಿ ವೈಶಿಷ್ಟ್ಯಕಥನವಾಗಲಿ ಇಲ್ಲಿಯ ಹೇತುವಾಗಿಲ್ಲ. ಹೊಸಗನ್ನಡ ಕಾವ್ಯವು ಇತರ ಭಾರತೀಯ ಭಾಷೆಗಳಲ್ಲಿಯ ಹೊಸ ಕಾವ್ಯದಂತೆ ಕಾಲಮಾನದ ಎಲ್ಲ ಸ್ಪಂದನಗಳಿಗೆ ಒಳಗಾಗಿ ವಿವಿಧ ಪ್ರಕಾರದ ಪ್ರಯೋಗಗಳನ್ನು ಮಾಡಿದೆ, ನಿರ್ವಿಕಾರ ವಿಮರ್ಶೆಯ ಒರೆಗೆ ಹತ್ತುವಂಥ ಕೆಲವು ಉತ್ತಮ ಕೃತಿಗಳನ್ನು ನೀಡಿದೆ. ಜಾಗತಿಕ ಕಾವ್ಯವೇದಿಕೆಯ ಮೇಲೂ ಅವು ತಲೆಯೆತ್ತಿ ನಿಲ್ಲಬಲ್ಲುವು, ಸಹೃದಯರ ತಲೆದೂಗಿಸಬಲ್ಲುವು. ಭಾವಗೀತೆಯಲ್ಲಿಯೇ ಹೆಚ್ಚಾಗಿ ಸಿದ್ಧಿ ಕಂಡು ಬರುತ್ತಿದ್ದರೂ ಕುವೆಂಪು ಅವರ ಶ್ರೀರಾಮಾಯಣ ದರ್ಶನದಂಥ ಸುದೀರ್ಘ ಕಥನಕಾವ್ಯಗಳಲ್ಲಿಯೂ ಕನ್ನಡ ಪ್ರತಿಭೆ ಘನತೆಯನ್ನು ಮೆರೆದಿದೆ . . .

ಈ ಸಂಕಲನಕ್ಕೆಂದು ಗೊತ್ತುಪಡಿಸಿರುವ ಪುಟಗಳ ಪರಿಮಿತಿಯಲ್ಲಿ ತೀರ ಮೊದಲಿನಿಂದ ಇಲ್ಲಿಯವರೆಗಿನ ಕನ್ನಡ ಕಾವ್ಯದಿಂದ ಕನ್ನಡಿಗರೂ ಇತರ ಭಾಷಿಕರೂ ಓದಿ ಮೆಚ್ಚಬಹುದೆಂದು ತೋರಿದ ಕೆಲವು ಆಯ್ಕೆಗಳನ್ನು ಪ್ರಾತಿನಿಧಿಕವಾಗಿ ಮಾಡಿ ಸಂಗ್ರಹಿಸಲಾಗಿದೆ. ಎಲ್ಲ ಉತ್ತಮ ಕೃತಿಗಳಿಗೂ ಇಲ್ಲಿ ಎಡೆದೊರೆತಿದೆ ಎಂದು ಹೇಳುವುದು ಸಾಧ್ಯವಿಲ್ಲ. ವಿಶೇಷತಃ ಹೊಸ ಕಾವ್ಯದಲ್ಲಿ, ಪ್ರತಿವರ್ಷವೂ ಗಣ್ಯವಾದ ಕವಿತೆ ಹೊರಬರುತ್ತಿರುವುದರಿಂದ ಈ ಸಂಕಲನವು ಪ್ರಕಟವಾಗುವಷ್ಟರಲ್ಲಿ ಇಲ್ಲಿಯ ಆಯ್ಕೆಯಲ್ಲಿ ಕೊರತೆ ಕಂಡುಬರುವುದು ಸಹಜ. ಕೆಲಮಟ್ಟಿಗೆ ಕಾವ್ಯದ ಪ್ರಾಂತದಲ್ಲಿ ಕೈಯೂರಿ ನಿಂತ ಕೆಲವು ಕವಿಗಳ ಪ್ರಕಟಿತ ಸಂಗ್ರಹಗಳಿಂದ ಒಬ್ಬ ಕವಿಯದು ಒಂದೇ ಎಂದು ಹಾಕಿಕೊಟ್ಟಿರುವ ಕ್ರಮದಂತೆ ಇಲ್ಲಿ ಆಯ್ಕೆಮಾಡಲಾಗಿದೆ. ಯಾವುದೇ ಕವಿಯ ಕೃತಿ ಇಲ್ಲಿ ಬಾರದೆ ಹೋಗಿದ್ದರೆ ಅದಕ್ಕೆ ಬೇರಾವ ಅರ್ಥವೂ ಇಲ್ಲ.

ಕನ್ನಡ ರಸಿಕರು ಈ ಸಂಕಲನವನ್ನು ಹಾರ್ದಿಕವಾಗಿ ಸ್ವಾಗತಿಸುವರೆಂದು ಹಾರೈಸುತ್ತೇವೆ.

ರಂ. ಶ್ರೀ. ಮುಗಳಿ
ಸಂಪಾದಕರು

ಕನ್ನಡ ಕಾವ್ಯ ಸಂಚಯ

ಹಳಗನ್ನಡ ಕಾವ್ಯ

2

ಶಾಸನ ಪದ್ಯಸಂಗ್ರಹ

ಕಲಿಯುಗ ವಿಪರೀತನ್

ಸಾಧುಗೆ ಸಾಧು ಮಾಧುರ್ಯ್ಯಸ್ಗೆ ಮಾಧುರ್ಯ್ಯಂ |
ಬಾಧಿಪ್ಪ ಕಲಿಗೆ ಕಲಿಯುಗ |
ವಿಪರೀತನ್ ಮಾಧವನೀತನ್ ಪೆಱನಲ್ಲ ||

ಒಳ್ಳಿತ್ತ ಕೆಯ್ವೊರಾರ್ ಪೊಲ್ಲದುಮದಱಂತೆ |
ಬಲ್ಲಿತ್ತು ಕಲಿಗೆ ವಿಪರೀತಾ |
ಪುರಾಕೃತಮಿಲ್ಲಿ ಸಂಧಿಕ್ಕುಮದು ಬಂದು |

ಕಟ್ಟಿದ ಸಿಂಘಮನ್ ಕಟ್ಟೊದೇನೆಮಗೆಂದು |
ಬಿಟ್ಟವೋಲ್ ಕಲಿಗೆ ವಿಪರೀತಂ |
ಗಹಿತರ್ಕ್ಕಳ್ ಕೆಟ್ಟರ್ ಮೇಣ್ ಸತ್ತ್ರರವಿಚಾರಂ ||

ಗುಣ ಮಧುರಾಂಕ

ಬಿಣಮಣಿ (ಫಣಮಣಿ) ಅನ್ತುಭೋಗಿ ಬಿಣ (ಫಣ) ದುಳ್ಮಣಿ ವಿಲ್ಮನದೋನ್ |
ರಣಮುಖದುಳ್ಳ ಕೋಲಂ ನೆರಿಯರ್ಕ್ಕುಮನಿನ್ದ್ಯಗುಣನ್ ||
ಪ್ರಣಯಿಜನಕ್ಕೆ ಕಾಮನಸಿತೋತ್ಪಲವರ್ಣ್ಣನವನ್ |
ಗುಣಮಧುರಾಂಕ ದಿವ್ಯಪುರುಷನ್ ಪುರುಷ ಪ್ರವರನ್ ||

ನಂದಿಸೇನ ಮುನಿ

ಸುರಚಾಪಂಬೋಲೆ ವಿದ್ಯುಲ್ಲತೆಗಳ ತೆಱವೋಲ್ ಮಂಜುವೋಲ್ ತೋಱಿ ಬೇಗಂ |
ಪಿರಿಗುಂ ಶ್ರೀರೂಪಲೀಲಾಧನ ವಿಭವ ಮಹಾರಾಶಿಗಳ್ ನಿಲ್ಲವಾರ್ಗಂ |

ಪರಮಾರ್ಥಂ ಮೆಚ್ಚೆಸಾನೀ ಧರಿಣಿಯುಳಿರವಾಸೆಂದು ಸನ್ಯಾಸಸಂಗೆ|
ಯ್ದುರುಸತ್ವನ್ ನಂದಿಸೇನ ಪ್ರವರ ಮುನಿವರನ್ ದೇವಲೋಕಕ್ಕೆ ಸಂದಾನ್ ||

ಸರಸ್ವತಿ

ನೀರಜ ಜಾತ ವಿಸ್ತರಿಸಿದಂಡಮುಮಂ ಮಣಿಮಾಲೆಯಾಗಿ ಬಿ-|
ಸ್ತಾರಿಸಿ ಹಸ್ತದಿಂ ಪಿಡಿದು ತನ್ನ ಸರಣ್ಬುಗುವರ್ಗೆ ಲೇಸುಮಂ ||
ಪ್ರೇರಿಸಲೋಸುಗಂ ಜಪಿಸುತಿರ್ಪಳಿರುಳ್ ಪಗಲಾವಳೊರ್ವಳಾ |
ಭಾರತಿ ನಮ್ಮ ಜಿಹ್ವೆಯೊಳನಾವಿಳದಿಂದಿರುತಿರ್ಕೆ ಸಂತತಂ ||

ಭರತಕ್ಷೇತ್ರ

ಬಾಜಿಸೆ ಡಕ್ಕೆಯಂ ಪ್ರಿಯರ ಮೆಲ್ಲೆರ್ದೆ ತುಂಬಿಗಳಿಂಬುವೆತ್ತಿರಲ್
ರಾಜಿಸಿ ಪಾಡೆ ಕೆಂದಳಿರೆ ಕೈದಳಮಾಗಿರೆ ಮಂದಮಾರುತಂ
ಯೋಜಿಸೆ ತಾಳಮಂ ರತಿಯನಾಡಿಸೆ ಮನ್ಮಥನಂತರಂಗದೊಳ್
ಸಾಜಮೆನಿಪ್ಪುದಲ್ತೆ ಭರತಾಹ್ವಯಮಮಂ (ಮುಂ?) ಭರತೋರ್ವಿಗುರ್ವಿನಿಂ ||

ಕರ್ಣಾಟಕ ದೇಶ

ಜಿನಧರ್ಮಾವಾಸಮಾದತ್ತಮಳವಿನಯದಾಗಾರಮಾದತ್ತು ಪದ್ಮಾ |
ಸನನಿರ್ಪಾ ಸದ್ಮಮಾದತ್ತತಿವಿಶದಯಶೋಧಾಮಮಾದತ್ತು ವಿದ್ಯಾ |
ಧನಜನ್ಮಸ್ಥಾನಮಾದತ್ತಸಮತರಳಗಂಭೀರಸದ್ಗೇಹಮಾದ
ತ್ತೆನಿಸಲ್ಕಿಂತುಳ್ಳ ನಾನಾಮಹಿಮೆಯೊಳೆಸೆಗುಂ ಚಾರುಕರ್ಣಾಟದೇಶಂ ||

* * * *

ಕೆರೆಯಂ ಕಟ್ಟಿಸು ಬಾವಿಯಂ ಸವೆಸು ದೇವಾಗಾರಮಂ ಮಾಡಿಸ
ಜ್ಜೆರೆಯೊಳ್ ಸಿಲ್ಕಿದನಾಥರಂ ಬಿಡಿಸು ಮಿತ್ರರ್ಗಿಂಬುಕೆಯ್ ನಂಬಿದ
ರ್ಗೆರೆವಟ್ಟಾಗಿರು ಶಿಷ್ಯರಂ ಪೊರೆ ಎನುತ್ತಿಂತೆಲ್ಲಮಂ ಪಿಂತೆ ತಾ
ನೆರೆದಳ್ ಪಾಲೆರೆವಂದು ತೊಟ್ಟು ಕಿವಿಯೊಳ್ ಲಕ್ಷ್ಮೀಧರಾಮಾತ್ಯನಾ ||

ಆದಿಗೌಂಡನ ವರ್ಣನೆ

ಹಸಿದರ ಮೊಗಮಂ ನೋಡಂ
ಹಸಿವುಂ ನೀರಜ್ಕೆಯಿಲ್ಲ ಕಂಡೊಡೆ ತನ್ನಂ
ವಸುಮತಿಗೆನಿಪ ಮಹಾಪ್ರಭು
ವಸುಧೆಯೊಳಾರ್ ಕಾಣ್ಬರಾದಿಗೌಂಡಂಗೆಣೆಯಂ ||

ಹಸುಗೂಸುಗಳ್ಗೆ ಹಾಲಂ
ಹಸಿದರ್ಗ್ಗನ್ನಮುಮನಟ್ಟುಱಿಂದಂ ನಿಚ್ಚಂ
ಹಸಗಾಲದೊಳಂ ಸಲಿಸುವ
ಬೆಸನದಿನಾರಾದಿಗೌಂಡನಂ ಪೋಲ್ವನ್ನರ್ ||

ಕೆಱೆಯಂ ಕಟ್ಟಿಸುತಿರ್ಪುದು
ಮಱವಂಟಿಗೆಯಿಡಿಸುತಿರ್ಪುದೆಸವಾರವೆಯಂ
ನೆಱೆ ಮಾಡಿಸುವುದುಮಲ್ಲದೆ
ಪೆಱತೊಂದಿಲ್ಲಾದಿಗೌಂಡನುಜ್ಜಗವೆಂದುಂ ||

ಕುವರಲಕ್ಷ್ಮನ ವರ್ಣನೆ

ಅರವನೆ ತೊಟ್ಟಿಲ್ ನೆಗಬ್ದಾ
ದರವುದು ಭಾಯ್ವೆಣ್ಣೆ ದಾದಿಯರ್ ತನ್ನಂತಃ
ಪುರಮೆನೆ ಬಲ್ಲಾಳನೃಪಂ
ಪೊರೆದ ಮಗಂ ಕುವರಲಕ್ಷ್ಮದಂಡಾಧೀಶಂ ||

ಗುರುವುಂ ದೈವಮುಮಾಳ್ದನೆ
ಪರತ್ರೆಗಂ ತನಗಿಹತ್ರೆಗಂ ಪೆಱನೊರ್ವಂ
ಗುರುವಿಲ್ಲ ದೈವಮಿಲ್ಲೆನೆ
ಧರೆಗೆಸೆದೊಂ ಕುವರಲಕ್ಷ್ಮದಂಡಾಧೀಶಂ ||

ಅರಮನೆ ನೆರೆಮನೆ ನಂಟಂ
ನರಪತಿ ತನಗಾಪ್ತಪರಿಜನಂ ಸಚಿವರೆನಲ್
ದೊರೆವಡೆದಂ ಬಲ್ಲಾಳನ
ಪುರದಳವಿಗೆ ಕುವರಲಕ್ಷ್ಮದಂಡಾಧೀಶಂ ||

ಆಳರಸೆಂಬ ಭೇದಮಿನಿತಪ್ಪೊಡಮಿಲ್ಲಿವರಲ್ಲಿ ತೇಜಮುಂ
ಲೀಳೆಯ ರಾಜ್ಯಚಿಹ್ನಮುಮವಿರ್ವರೊಳಂ ಸಮಮಕ್ಕುಮೆಂಬಿನಂ
ಪಾಳಿಸುವರ್ ಧರಾವಳಯುಮಮಂ ಪರಮೋತ್ಸವದಿಂದೆ ವೀರಬ
ಲ್ಲಾಳನೃಪಾಳನುಂ ಕುವರಲಕ್ಷ್ಮ ಚಮೂಪನುಮೇಂ ಸಪುಣ್ಯರೋ ||

ಧನಮುಂ ಪ್ರಾಣಮುಮೆಂಬಿವಂ ಕುವರಲಕ್ಷ್ಮಂ ವೀರಬಲ್ಲಾಳದೇ-
ವನ ದಾನೋನ್ನತಿಗಂ ಜಯೋನ್ನತಿಗಮಾಯಲ್ ಪೂಣ್ದು ಮುಂದಿಟ್ಟು ರಾ
ಮನ ಬೀಡಿಂಗಣುವಂ ಯಮಾತ್ಮಜನ ಬೀಡಿಂಗರ್ಜುನಂ ಚಂದ್ರಜೂ
ಟನ ಬೀಡಿಂಗೆ ಕುಮಾರನಿರ್ಪ ತೆಱದಿಂದಿರ್ದಪ್ಪನೇಂ ಧೀರನೋ ||

ಸಾಧಿಸಿಕೊಟ್ಟನಾಳ್ದ ಯದುವಂಶನಮೇರುಗೆ ಕೂಡೆ ದಕ್ಷಿಣಾಂ
ಭೋಧಿವರಂ ಧರಾವಳಯುಮಮಂ ಬುಧಕೋಟಿಗೆ ಕೊಟ್ಟನರ್ಥಮಂ
ಸಾಧನೆವೋಯ್ತು ಸರ್ವನಿಧಿಯೆಂಬಿನೆಗಂ ದೊರೆಯಾರ್ ಕುಮಾರಲ
ಕ್ಷ್ಮೀಧರದೇವನೊಳ್ ಪತಿಹಿತಕ್ರಮದೊಳ್ ಪದೆದೀವ ದಾನದೊಳ್ ||

ಎಕ್ಕವದಂ ದಲೀಕುವರಲಕ್ಕೆಯನಾಡಿದ ಮಾತು ಕಲ್ಲೊಳಿ-
ಟ್ಟಕ್ಕರದಂತೆ ಸತ್ಯಪರಿಪಾಳನಶೀಳಮನುಳ್ಳವಾವ ಕಾ-
ರ್ಯಕ್ಕಮನರ್ಥಕಂ ಪೆಱರ ಮಾತು ವಿಚಾರಿಸಿ ನೋಡೆ ನೀರೊಳಿ
ಟ್ಟಕ್ಕರದಂತೆ ಸತ್ಯಪರಿಪಾಳನಶೀಳಮನುಳ್ಳವೆಲ್ಲಿಯುಂ ||

ಅಱುವತ್ತುನಾಲ್ಕು ಕಳೆಗಳೊ
ಳಱಿಯದ ಕಳೆಯಿಲ್ಲ ಕುವರಲಕ್ಷ್ಮಚಮೂಪಂ
ಗಱಿಯದುವೆರಡೊಳವಿಲ್ಲೆನ
ಲಱಿಯಂ ಸೋಲ್ವುಱಿಯನರ್ಥಿಗಂ ಪಗೆವಂಗಂ ||

ಆತಂ ಪತಿಭಕ್ತಿಸಮ
ನ್ವೀತಂ ಬಲ್ಲಾಳಭೂಮಿಪಾಳಂಗೆ ಜಗ
ತ್ಪೂತಚರಿತ್ರಂ ಕೊಟ್ಟಂ
ವೀತಭಯಂ ಭಾಷೆಯಂ ಪ್ರತಾಪವಿನೂತಂ ||

ತೊಡರೆಡಗಾಲೊಳೊಪ್ಪುವುದು ಬಲ್ಲಿಗೆಯಂ ಮದದಂತಿಗಿಕ್ಕಿ ಬ
ಲ್ಪೊಡರಿಸುವೊಂದು ಭಂಗಿಯೊಳೆ ಪೊಂದೊಡರೊಳ್ ತೊಡೆದಿರ್ದ ಪಾಪೆಗಳ್
ತೊಡರ ತೊಡರ್ಪಿನೊಳ್ ತೊಡರಲಣ್ಮದ ಭಾಷೆಯಮಾತ್ಯರಂಜಿ ಕಾ
ಲ್ಪಿಡಿದವೊಲಿರ್ಪುವೇಂ ಕುವರಲಕ್ಷ್ಮಚಮೂಪತಿಗಿಂತಿದೊಪ್ಪದೇ ||

ಮುತ್ತಿನ ಪೆಂಡೆಯುಂ ಮುರಹರಂ ಕನಕಾದ್ರಿಯೊಳಂದು ಶೇಷನಂ
ಸುತ್ತಿದ ಭಂಗಿಯಿಂದಮೆಸೆದಿರ್ಪುದು ಪೊನ್ನ ತೊಡರ್ ತದದ್ರಿಯಂ
ಸುತ್ತಿದ ಕರ್ಣಿಕಾರವನಮಾಲೆವೊಲಿರ್ಪುದು ಕೊಟ್ಟಭಾಷೆಗ
ಚ್ಚೊತ್ತಿದ ಮಾಚ್ಕೆಯಿಂ ಕುವರಲಕ್ಷ್ಮಚಮೂಪನ ಪಾದಪದ್ಮದೊಳ್ ||

ತೊಡರುಂ ಪಾಪೆಗಳುಂ ಝುಣಝ್ಝುಣರವಂ ಕೈಗಣ್ಮೆ ವಾಮಾಂಘ್ರಿಯೊಳ್
ನುಡಿಯುತ್ತಿರ್ಪವು ಕೊಟ್ಟಭಾಷೆಗಿವನೊಳ್ ಮತ್ತಾರುಮೇನಾರ್ಪರೇ
ನುಡಿದಂತಣ್ಮಲದೆಂದುಮೆಂಬ ನುಡಿಯಂ ಬಲ್ಲಾಳದೇವಂಗೆ ಕೈ
ಪಿಡಿಯುಂ ಕಟ್ಟಿದ ಗೇಣುಮಿಾತನೆ ವಲಂ ದಂಡೇಶಲಕ್ಷ್ಮೀಧರಂ ||

ನಿಱಿಸಿದ ವೀರಶಾಸನದ ಕಲ್ ದೊರೆವೆತ್ತ ಯಶೋವಿಳಾಸಮಂ
ನಿಱಿಸಿದುದಷ್ಟದಿಗ್ವಳಯದೊಳ್ ದೊರೆಯಾವನೊ ಪೂಣ್ದ ಪೂಣ್ಕೆಯಂ
ನೆಱಪುವ ಬಲ್ಪಿನೊಳ್ ಕುವರಲಕ್ಷ್ಮಚಮೂಪತಿಯನ್ನನೆಂದು ತ
ನ್ನೆಱಕದೆ ಬಣ್ಣಿಕುಂ ಧರಣಿ ಹೊಯ್ಸಳರಾಯನ ಗಂಧಹಸ್ತಿಯಂ ||

ಇಲ್ಲದ ಸಲ್ಲದ ಭಾಷೆಗೆ
ಕಲ್ಲಂ ನಿಱಿಸುವರನುಱದೆ ನಗುವವೊಲಿರ್ಕುಂ
ಪಲ್ಲವಿಸಿ ಕುವರಲಕ್ಷ್ಮನ
ಕಲ್ಲ ಕವಲ್ತೆಸೆವ ಕಾಂತಿ ದಿಗ್ಭಿತ್ತಿಗಳೊಳ್ ||

ದೊರೆ ಪತಿಭಕ್ತಿಗೆ ತನ್ನೊಳ್
ಗರುಡಂ ಗರುಡಂಗೆ ತಾನೆ ದೊರೆ ಪೆಱರಾರುಂ
ದೊರೆಯಲ್ಲರೆಂಬ ತೆಱದಿಂ
ದೊರೆಯಾದುವು ತನ್ನ ಗರುಡನೆಸೆವಾಕೃತಿಗಳ್ ||

ವೀರದ ಶಾಸನಮಂ ಮು
ನ್ನಾರುಂ ನಿಱಿಸಿದವರಿಲ್ಲ ಬಲ್ಲಾಳಧರಿ
ತ್ರೀರಮಣನ ಮಂತ್ರಿವರಂ
ವೀರಭಟಂ ಕುವರಲಕ್ಷ್ಮದಂಡೇಶನವೋಲ್ ||

ತನ್ನೊಡನೆ ತೊಱೆದ ಸುಭಟರ
ತನ್ನ ಮನಃಪ್ರಿಯೆಯ ತನ್ನ ಪರಮಾಯುಷ್ಯಂ
ತನ್ನಾಳ್ದಂಗಾಯ್ತೆನಿಸಿದ
ನೇನ್ನೆಟ್ಟನೆ ಕಲಿಯೊ ಕುವರಲಕ್ಷ್ಮಚಮೂಪಂ ||

ಆರ ಮನಕ್ಕೆ ವೀರರಸಮಚ್ಚರಿಯಾಗಿರಲುಣ್ಮೆ ಪೊಣ್ಮದೊ
ಲ್ದಾರ ಮನಕ್ಕೆ ಹರ್ಷಪುಳಕಂ ತನುವಿಂ ಪೊಱಪೊಣ್ಮದೀಕ್ಷಿಪಂ
ದಾರ ಮನಕ್ಕೆ ಭೀತಿಯೊದವಾಗದು ನಿನ್ನಯೆ ಪೂಣ್ಕೆ ರಾಯಸಾ
ಧಾರ ಕುಮಾರಲಕ್ಷ್ಮರಥಿನೀಶ್ವರ ಭಾವಿಸುವಂದು ನಾಡೆಯುಂ ||

ಬಾಸೆಗೆ ತಪ್ಪುವಂಕದ ನೆಗಱ್ತೆಯ ಲೆಂಕರ ಗಂಡನೆಂಬುದಂ
ಬೀಸರಮಾಗದುದ್ಧರಿಪೊಡೇ ತೊದಳುದ್ಧರಿಪಂ ವಿರೋಧಿಸಂ
ತ್ರಾಸಿತವಿಕ್ರಮಂ ಕುವರಲಕ್ಷ್ಮಚಮೂವರನೊಲ್ದು ಮಾಣ್ಕೆಯಿಂ
ಬಾಸೆಯನಿತ್ತು ಪುಚ್ಚಟಿವರಲ್ಲದೆ ಬಾಸೆಯನುದ್ಧರಿಪ್ಪರೇ ||

ಇದು ಬಲ್ಲಾಳನ್ನಪಾಳಕಂಗೆ ಪಿರಿದುಂ ನಿತ್ಯತ್ವಮಂ ಮಾಳ್ಪುದ
ಭ್ಯುದಯಕ್ಕಾಗರಮೆಂದು ಬಣ್ಣಿಸೆ ಜಗಂ ಭಾಸ್ವಚ್ಛಿಲಾಸ್ತಮ್ಭಮಂ
ಸದಳಂಕಾರದ ವೀರಶಾಸನಮನೀ ದಂಡೇಶಲಕ್ಷ್ಮೀವರಂ
ಸುದತೀಸಂಯುತನೇಱಿದಂ ಪತಿಹಿತವ್ಯಾಪಾರಮಂ ತೋಱಿದಂ ||

ಧರೆಗೆ ನೆಗೞ್ತೆವೆತ್ತೆಸೆವ ಶಕ್ತಿಗೆ ಶೂದ್ರಕಭೂಭುಜಂಗೆ ಭಾ
ಸುರಮೆನೆ ಭಾಷಿತಂ ನೆಱಪುವಗ್ಗದ ಬೀರರದಯ್ವರಯ್ವದಿಂ
ಬರೆ ಸುಭಟೋತ್ತಮರ್ ಕುವರಲಕ್ಷ್ಮಚಮೂಪತಿಗಿತ್ತು ಭಾಷೆಯುಂ
ಧರೆ ಪೊಗೞ್ವನ್ನೆಗಂ ನೆಱಪುವಗ್ಗದ ವೀರರದೊಂದು ಸಾಸಿರಂ ||

ತೊಱೆದಾಳ್ದನೊಡನೆ ಸಾಯದೆ
ಪೆಱಗುಳಿದಂ ತೊಱೆದು ಸತ್ತವನ ವೇಳೆ ದಲಾ
ವಱುವೆವದನೆಂಬ ಗಂಡರೆ
ತೊಱೆದರ್ ಕಲಿಕುವರಲಕ್ಷ್ಮನೊಡನತಿಸುಭಟರ್ ||

ಕವಿರಾಜಮಾರ್ಗ

ಕಂ || ಶ್ರೀ ತಳ್ತುರದೊಳ್ ಕೌಸ್ತುಭ
ಜಾತದ್ಯುತಿ ಬಳಸಿ ಕಾಂಡ ಪಟದಂತಿರೆ ಸಂ
ಪ್ರೀತಿಯಿನಾವಗಮಗಲಳ್
ನೀತಿ ನಿರಂತರಸುದಾರನಾ ನೃಪತುಂಗಂ ||

ಶ್ರೀವಿಶದವರ್ಣೆ ಮಧುರಾ
ರಾವೋಚಿತೆ ಚತುರರುಚಿರಪದರಚನೆ ಚಿರಂ
ದೇವಿ ಸರಸ್ವತಿ ಹಂಸೀ
ಭಾವದೆ ನೆಲೆಗೊಳ್ಗೆ ಕೂರ್ತು ಮನ್ಮಾನಸದೊಳ್ ||

ಪ್ರತಿಭಾವತ್ವಮುಮಕೃತಕ
ಚತುರತೆಯುಂ ಪರಮಬುಧಜನೋಪಾಸನಮುಂ
ಕೃತಿಪರಿಚಯಮುಂ (ತರ್ಕುಂ)
ಪ್ರತೀತಿ (ಯಂ) ವಾಗ್ವಿದಗ್ಧತಾನಿಪುಣತೆ (ಯೊಳ್) ||

ಪಸರಿಸಿದಾ ಬಗೆ ಮನದೊಳ್
ಪೊಸತಾಗೆ ನೆಗಳ್ಚಲಱಿಯನಾ ರಚನೆಯೊಳೇಂ
ಬಸನಂ ತನಗಿನಿತಱ ಬೇ
ವಸಮೇಂ ಕವರ್ದವರುಮೊಳರೆ ಕವಿಯಲ್ಲದರಂ ||

ಬಗೆಬಗೆದು ಕೇಳ್ದು ಬುಧರೊಲ
ವೊಗೆದಿರೆ ಹೃದಯದೊಳೆ ತಾಳ್ದಿ ಮಣಿಹಾರಂಬೋಲ್
ಸೊಗಯಿಸುವ ವಚನ ವಿರಚನೆ
ನೆಗಳ್ಗಂ ಭಾವಿಸುವೊಡದಱ ಪೆಂಪತಿಸುಲಭಂ ||

ನೆನೆನೆನೆದು ಪೆಱರ ಮಾತುಗ
ಳನೆ ನೆಗೞ್ದಿರೆ ಕೃತಿಯೊಳದು ವ (ರಂ) ನಗದ ಗುಹಾ
ಧ್ವನಿಯವೊಲಸರ್ಥವಚನಂ
ತನಗಾಗಿಸಲಱಿಯನುಚಿತ ವಾಕ್ಚತುರತೆಯಂ ||

ಕಂ || ಕುಱಿತಂತು ಪೆಱರ ಬಗೆಯಂ
ತೆಱೆದಿರೆ ಪೆಱರ್ಗಱಿಪಲಾರ್ಪವಂ ಮಾತಱಿವಂ
ಕಿಱಿದಱೊಳೆ ಪಿರಿದುಮರ್ಥಮ
ನಱಿಪಲ್ ನೆಱೆ(ವಾ) ತನಾತನಿಂದಂ ನಿಪುಣಂ ||

ನುಡಿಯಂ ಛಂದದೊಳೊಂದಿರೆ
ತೊಡರ್ಚಲಱಿವಾತನಾತನಿಂದಂ ಜಾಣಂ
ತಡೆಯದೆ ಮಹಾಧ್ವ ಕೃತಿಗಳ
ನೊಡರಿಸಲಾಪರ್ಾತನೆಲ್ಲರಿಂದಂ ಬಲ್ಲಂ ||

ಮಾತಱಿವರ್ ಕೆಲಬರ್ ಜಗ
ತೀತಳಗತಮನುಜರೊಳಗೆ ಮಾತಱಿವವರೊಳ್
ನೀತಿವಿದರಮಲ ಕವಿತಾ
ನೀತಿಯುತರ್ ಕೆಲರೆ ಪರಮಕವಿವೃಷಭರ್ಕಳ್ ||

* * *

ಕಂ || ಕಾವೇರಿಯಿಂದಮಾ ಗೋ
ದಾವರಿ (ವರ) ಮಿರ್ದ್ದ ನಾಡದಾ ಕನ್ನಡದೊಳ್
ಭಾವಿಸಿದ ಜನಪದಂ ವಸು
ಧಾವಲಯ ವಿಲೀನವಿಶದ ವಿಷಯ ವಿಶೇಷಂ ||

ಅದಱೊಳಗಂ ಕಿಸುವೊೞಲಾ
ವಿದಿತಮಹಾ ಕೊಪಣ ನಗರದಾ ಪುಲಿಗೆಱೆಯಾ
ಸದಭಿಸ್ತುತಮಪ್ಪೊಂಕುಂ
ದದ ನಡುವಣ ನಾಡೆ ನಾಡೆ ಕನ್ನಡದ ತಿರುಳ್ ||

ಪದನಱಿದು ನುಡಿಯಲುಂ ನುಡಿ
ದುದನಱಿದಾರಯಲುಮಾರ್ಪರಾ ನಾಡವರ್ಗಳ್
ಚದುರರ್ ನಿಜದಿಂ ಕುಱಿತೋ
ದದೆಯುಂ ಕಾವ್ಯಪ್ರಯೋಗ ಪರಿಣತ ಮತಿಗಳ್ ||

ಕುಱಿತವ(ರ)ಲ್ಲದೆ ಮತ್ತಂ
ಪೆಱರುಂ ತಂತಮ್ಮ ನುಡಿಯೊಳೆ(ಲ್ಲರ್) ಜಾಣರ್
ಕಿಱುವಕ್ಕಳ್ ಮಾಮೂಗರು
ಮಱಿಪಲ್ಕಱಿವರ್ ವಿವೇಕಮಂ ಮಾತುಗಳಂ ||

ಕಂ || ಜಾಣರ್ಕಳಲ್ಲದವರುಂ
ಪೂ(ಣಿ)ಗರಱಿಯದೆಯುಮಱಿ(ದ)ವೋಲವಗುಣದಾ
ತಾಣಮ(ದಿ) ನಿ(ಸೆ)ಡೆವೊತ್ತೆಡೆ
ಮಾಣದೆ (ಜ)ಡಿದದನ ಕೃತಿಗಳಂ ಕೆಡೆನುಡಿವರ್ ||

* * *

ಸುಭಟರ್ಕಳ್ ಕವಿಗಳ್ ಸು
ಪ್ರಭುಗಳ್ ಚೆಲ್ವರ್ಕಳಭಿಜನರ್ಕಳ್ ಗುಣಿಗಳ್
ಅಭಿಮಾನಿಗಳತ್ಯುಗ್ರರ್
ಗಭೀರ ಚಿತ್ತರ್ ವಿವೇಕಿಗಳ್ ನಾಡವರ್ಗಳ್ ||

ಅಮಳಿನಗುಣವೃತ್ತಗಳಿಂ
ಸಮುಪಸ್ಥಿತಸಕಳ ಜನರ್ಗಳುಪಚಿತ ಗುಣಮಂ
ಸಮನಾಗಿಸುವರ್ ಕನ್ನಡಿ
ಕಮನೀಯಾಕಾರಬಿಂಬಮಂ ತಾಳ್ದುವವೋಲ್ ||

ಜನಮಱಿಯದನ್ನೆಗಂ ಮು
ನ್ನೆ ನಯಮನಱಿದಱಿಪಲಾರ್ಪೊಡದು ಮಂತ್ರಿಗುಣಂ
ಜನವಾದಂ ನೆಗಡೆ ನಗ-
ಧ್ವನಿವೋಲನುಕರಣವಾರ್ತೆ ಮಂತ್ರಿಯ ಗುಣಮೇ ||

ತಲೆಸೂಡಿ ಮುನ್ನೆ ಕಜ್ಜದ
ಫಲಮಂ ಬೆಸಗೊಂಡುಮೇವಸಲ್ಲಿಂ ಬಟಿಯಂ
ತಲೆಯಂ ಕಿರಿಯಿಸಿ ದಿವಸಮು
ನಲಸದೆ ಬೆಸಗೊಳ್ವನಂತು ಗಾವಿಲನಕ್ಕುಂ ||

ಪ್ರತಿಕೂಲನಾಗಿ ನಿಲೆ ವಿಧಿ
ಮತನಯಮನುಕೂಲಮಾಗಿ ನಿಲೆಯುಂ ಕಾರ್ಯ
ಸ್ಥಿತಿಯಂ ಸಾಧಿಸಲಾಗದು
ಮೃತಕ ಕೃತೋಪಕೃತಿಯವೊಲನರ್ಥಾಯಾಸಂ ||

ಕಂ || ಪಡೆದುದಯಿಸಲೆಂದುಂ ಕಾ
ಲದೊಳಲ್ಲದುದಾರ ತೇಜನರ್ಕನುಮಲ್ಲಂ
ಸದುದಿತ ಗುಣನದಱಿಂ ನಯ
ವಿದನಪ್ಪಂ ಕಾಲಮಂ ನೆರಂ ತೋರ್ಕೆ ನೃಪಂ ||

ಪಡೆಯಱಿಯಲಾದೊಡ ಱಿ(ರಿ ?) ಯಂ
ಕಿಡಿಸುಗುಮಂತಃ ಕಳಂಕನೃಪಮಂಡಳಮಂ
ತಡೆಯದೆ ತಮಸ್ವಭಾವಂ
ಕಿಡಿಸುವವೋಲಱಿದು ರಾಹು ಶಶಿಮಂಡಳಮಂ ||

ಕಿಱಿದೆಂದೇಱಿಸಿ ಪಗೆಯಂ
ಪಱಿಪಡೆ ಕಿಡಿಸದೊಡೆ ಪೆತ್ತು ಕಾಲದ ಬಲಮಂ
ನೆಱೆದಿಱಿಗುಂ ನೆಱೆದನುವಿಂ
ಮಱಿಸುವವೋಲ್ ದಿವಸಕರನನಂಬುದನಿವಹಂ ||

ಒಳಗಿರ್ದ ವೈರಿಗಳ್ ಮೊ
ಕ್ಕಳಮಿಾಯರ್ ಪೆರ್ಚಲಧಿಕ ವಿಭವರ್ಕಳುಮಂ
ತಳರದೊಡನಿರ್ದು ಬಡವಾ
ನಳನೆಂದುಂ ಪೆರ್ಚಲೀಯದಂತಂಬುಧಿಯಂ ||

ಪರಪಕ್ಷಮುಳ್ಳಿನಂ ತನ
ಗಿರವುಬ್ಬಸಮುದಱಿನಱಿವುದದನೇಗೆಯ್ದುಂ
ಪರೆದ ಪುಡಿಯೆಲ್ಲಮಂ ನೀರ್
ನೆರೆದು ಕೆಸರ್ಮಾಡದನ್ನೆಗಂ ನೆಲಸುಗುಮೆ ||

ಕುಱಿಗೊಂಡು ನೆಗಳ್ವನಿಚ್ಛೆಯ
ನಱಿಯದೆ ತನ್ನಿಚ್ಛೆಯಿಂದೆ ಕಜ್ಜಂಬೇಳ್ವಂ
ತಱಿಸಲಿಸಲಾಱನಾರ್ತನ
ತೆಱನಱಿಯದೆ ಮರ್ದುವೇಳ್ವ ಬೆಜ್ಜನ ತೆಱದಿಂ ||

ಪರಿಣಾಮಪಥ್ಯಮಂ ಸುಖ
ಪರಿಕರಮಂ ಮೆಚ್ಚದನ್ನರಾರೀ ಮಾತುಂ
ನಿರತಿಶಯರಸಸಮೇತಮ
ನರೋಚಕಂ ಮೆಚ್ಚದಂತೆ ಸೊಗಯಿಸುವುಣಿಸಂ ||

* * *

ಅಱಿದಟಿಪಿ ಬಟಿಯನುಟಿಯದೆ
ಪಟಿವರುಮಂ ತವಿಸಿ ಕಟಿಯದುಟಿವಳನಾದಂ
ಪಟಿಕೆಯ್ದು ತೊಟ್ಟನುಟಿದಂ
ತುಟಿದ ಮಹಾಪುರುಷರಱಿಯದುಟಿದರೆ ಸಿರಿಯಂ ||

ಕಸವರಮೆಂಬುದು ನೆಱೆ ಸೈ
ರಿಸಲಾರ್ಪೊಡೆ ಪರವಿಚಾರಮುಂ(ಮಂ) ಧರ್ಮಮುಮಂ
ಕಸವೇಂ ಕಸವರಮೇನು
ಬ್ಬಸಮಂ ಬಸಮಲ್ಲದಿರ್ದು ಮಾಡುವರೆಲ್ಲಂ ||

ಪಾಟಿ ನಿಲೆ ನೆಗಟಿ(ೞೆ) ಬಾಟ್ವಿದು
ಬಾೞೆಂಬುದು ನಿಕ್ಕುವಂ ಗುಣಗ್ರಾಮಣಿಗಳ್
ಪಾೞಾಗೆ ತೆಗೞೆ ಬಾೞ್ವಾ
ಬಾೞೇನಾಚಂದ್ರತಾರಮೋ ಮಾನಸರಾ ||

ಪೊಲ್ಲಮೆಯುಂ ಗುಣಮುಂ ತಮ
ಗಲ್ಲದೆ ಪುದುವಲ್ಲ ಮತ್ತೆ ತನಗಂ ಪೆಱರ್ಗಂ
ನಿಲ್ಲದೆ ಜನಮುಂ ತಾಗಿಯು
ಮೆಲ್ಲಂ ಮುನಿಸೊಸಗೆವೆರಸು ಪಟಿಗುಂ ಪೊಗಟ್ಗುಂ ||

ಮಿಗೆ ಪಟಿವರೆನ್ನನೆನ್ನದೆ
ಪೊಗಟ್ವರ್ ನೆರೆದೆಲ್ಲರೆನ್ನನೆನ್ನದೆ ತನ್ನೊಳ್
ಬಗೆದುಭಯಲೋಕಹಿತದೊಳ್
ನೆಗಟ್ಗೆ ಜನಂ ಪಟಿಗೆ ಪೊಗಟ್ಗೆ ತನಗೇನದಱೊಳ್ ||

ಆದಿಪುರಾಣ

ಆದರ್ಶ ಪ್ರಣಯ

ವಜ್ರಜಂಘ—ಶ್ರೀಮತಿಯರ್ ಒಂದು ದಿವಸಂ ರಜನೀಸಮಯದೊಳ್ ಅನ್ಯೋನ್ಯಾಂಗಸ್ಪರ್ಶಸುಖೋನ್ಮೀಳಿತವಿಲೋಚನರಂತಂತೆ ನಿದ್ರಾರಸವಶಗತರಾಗಿರ್ದರ್ ; ಅನ್ನೆಗಮಲ್ಲಿ ಮುಚ್ಚಿರ್ದ ಹರಿನೀಲಗವಾಕ್ಷಜಾಲಕವಾಟ ಪುಟಂಗಳಂ ತೆಱೆಯಲ್ಮಱೆದು ಸೂರ್ಯಕಾಂತದ ಧೂಪಗುಂಡಿಗೆಯೊಳಳವಱಿಯದೆ ಸೆಜ್ಜೆವಳನಿಕ್ಕಿದ ಕೇಶಸಂಸ್ಕಾರ ಕಾಳಾಗರುಧೂಪಂ,

ಮೊದಲೊಳ್ ನೀಳ್ದು ಪೊದೞ್ದು ಪರ್ಬಿ ಪದಪಂ ಕೈಕೊಂಡು ಮಂದೈಸಿ ಮಾ-
ಣದೆ ತನ್ನಂದದೊಳೇೞ್ಗೆಗುಂದದೆ ನಿರುದ್ಧೋಚ್ಛ್ವಾಸಮುಪ್ಪನ್ನೆಗಂ |
ಪುದಿದಾ ದಂಪತಿಯಂ ಪುದುಂಗೊಳಿಸಿ ಲೋಕಾಶ್ಚರ್ಯಮಂ ಮಾಡಿ ಕೊಂ-
ದುದು ಕೃಷ್ಣಾಗರು ಧೂಪಧೂಮನಿವಹಂ ಕೃಷ್ಣೋರಗಂಕೊಲ್ವವೊಲ್ ||

ಬಿಡದೆ ಪೊಗೆ ಸುತ್ತೆ ತೋಳಂ
ಸಡಿಲಿಸದಾ ಪ್ರಾಣವಲ್ಲಭರ್ ಪ್ರಾಣಮಸಂ |
ದೊಡೆಗಳೆದರೋಪರೋಪರೊ-
ಳೊಡೆಸಾಯಲ್ವಡೆದರಿನ್ನವೇಂ ಸೈಪೊಳವೇ ||

ಭೋಗಾಂಗಮಾಗಿಯುಂ ಕೃ-
ಷ್ಣಾಗರುಧೂಪಂ ಮುಸುಂಕಿ ಕೊಂದಿಕ್ಕಿದುದಾ |
ಭೋಗಿಗಳನಿಂತು ಸಂಸೃತಿ-
ಭೋಗಂಗಳ್ ಭೋಗಿಭೋಗದಿಂ ವಿಷಮಂಗಳ್ ||

ಅನಿತು ಸುಖದನಿತು ಭೋಗದ
ಮನುಜಯುಗಂ ನೋಡೆ ನೋಡೆ ತತ್‌ಕ್ಷಣದೊಳ್ ತಾ |
ನಿನಿತೊಂದು ದೆಸೆಯನೆಯ್ದಿದು-
ದೆನೆ ಜಡರೇನೆಂದು ನಂಬುವರ್ ಸಂಸೃತಿಯಂ ||

ಬೆಳಗುವ ಸೊಡರ್ಗುಡಿ ಕಿಡೆ ಮನೆ
ಯೊಳಗೆ ತಮಂ ಪರ್ಬುವಂತೆ ಜೀವಂ ತನುವಿಂ |
ತಳರಲೊಡಂ ವಿಚ್ಛಾಯತೆ
ಗೊಳಗಾದುವು ತೊಳಗುವವರ ಸೌಂದರತನುಗಳ್ ||

ನೀಳಾಂಜನೆಯ ನೃತ್ಯ

ಅಂಬರಭೂಷಣ ಮಾಲಾ
ಡಂಬರದ ಬೆಡಂಗನಮರನರ್ತಕಿ ಗಡಮೇ |
ನೆಂಬುದೊ ಧರಿಣೇಂದ್ರಂಗಮು-
ಳುಂಬಂ ಪೊಗಟಲ್ಕೆ ರೂಪು ನೀಳಾಂಜನೆಯಾ ||

ನಿಲ್ತುವು ರಸಂಗಳಿಲ್ಲಿ ಮ
ಡಲ್ತೆಸೆ ಭಂಗಿಯೊಳನಂಗಜಂಗಮಲತೆವೊಲ್ |
ನಿಲ್ತು ಜವನಿಕೆಯ ಮಱೆಯೊಳ್
ಪೋಲ್ತಳವಳ್ ಮುಗಿಲ ಮಱೆಯ ವಿದ್ಯುಲ್ಲತೆಯಂ ||

ಓಸರಿಸಿದ ಜವನಿಕೆಯೊಡ-
ನೋಸರಿಸಿದನಿಸಲೆ ಕಂತು ಪುಷ್ಪಾಂಜಳಿಯಂ |
ಸೂಸಿದ ಪದದೊಳೆ ಸಭೆಗಂ
ಸೂಸಿದನೊಡನೊಡನೆ ನನೆಯ ಮೊನೆಯಂಬುಗಳಂ ||

ನೆಗಟೆ ನಿಜಪ್ರತಿಬಿಂಬಂ
ನೆಗಟ್ಟುರಸುಗಳುರದೊಳೆಸೆವ ಹಾರಮಣಿದ್ಯೋ |
ತಿಗಳೊಳವರೆರ್ದೆಯನಲ್ಲಿಂ
ಪುಗುವುದನನುಕರಿಸಿ ರಂಗದೊಳ್ ಸೊಗಯಿಸಿದಳ್ ||

ಪುಗುವ ಪೊಱಮಡುವ ತೆಱನೆರ್ದೆ-
ವುಗುವಳ್ ಪೊಱಮಡುವಳೆನಿಸೆ ಪೊಸತವುರ್ದಂ ಮೇ |
ಗುಗುಟ್ಟಿಪಳೆನಿಸೆ ಮುಗುಳ್ನಗೆ
ನಗೆವೊಗದ ಬೆಡಂಗವಳ್ಗದೇನೊಪ್ಪಿದುದೋ ||

ಕುಡುಪುಂ ಕಯ್ಯುಂ ಜತಿಯೊಳ್
ತಡತಡವರೆ ವಾದಕಂಗೆ ಪುರ್ವಿಂ ಜತಿಯಂ |
ತೊಡರದೆ ನಡೆಯಿಸಿ ಪುರ್ವದೆ
ಕುಡುಪೆನೆ ನರ್ತಕಿಯೆ ಸಭೆಗೆ ವಾದಕಿಯಾದಳ್ ||

ಎವೆಯಿಕ್ಕದೆ ನೋಡುವ ಸುರ
ರವುರರ ಕಣ್ಗಳೊಳನಂಗರಾಜನ ಬಯ್ತಿ |
ಟ್ಟವುರ್ದಂ ಕೊಳೆ ತಳಿದುದು ನಾ-
ಭಿಮೂಳವುಂ ಬಾಹು ಮೂಳಮುಂ ಸುರವಧುವಾ ||

ಅವಯವದಿಂದಮೆ ದೇವಾಂ
ಗವಸ್ತ್ರದುಳ್ಳುಡೆಯನಾಕೆಯೋಸರಿಸುವ ಸೂ |
ಸುವ ಹಾರಲತೆಯನಳವಡಿ-
ಸುವ ಭಂಗಿಯೆ ಮದನರಾಜ ರಾಜ್ಯ ವಿಳಾಸಂ ||

ಆಮಧುರಾಕಾರಲತಾ
ಕೋಮಳೆ ತನಗಾಗಳಾಯುರಂತಂ ಬರೆ ಸೌ |
ದಾಮಿನಿವೊಲ್ ಭೋಂಕೆನೆ ಸುರ
ಕಾಮಿನಿ ರಂಗದೊಳದೃಶ್ಯೆಯಪ್ಪುದು ಮಾಗಳ್ ||

ರಸಭಂಗ ಭಯದಿನಿಂದ್ರಂ
ಪೊಸತೊಂದಾದೊರೆಯ ಪಾತ್ರಮಂ ತಂದನುಸಂ |
ಧಿಸುವುದುಮದನಣಮಱಿಯ
ಲ್ಕೆ ಸುರಾಸುರಸಮಿತಿಗಾದುದಿಲ್ಲಾ ಕ್ಷಣದೊಳ್ ||

ಆ ನೀಲಾಂಜನೆಯೆಂದೆ ಮ
ನೋನಯನೋದಿತ ವಿಮೋಹದಿಂದಿರೆ ಸಭೆ ವಿ |
ದ್ಯಾನಿಳಯನಱಿದದಂ ದೇ-
ಹಾನಿತ್ಯತೆಗಿಂತು ನಾಡೆ ಚೋದ್ಯಂಬಟ್ಟಂ ||

ನಾರೀರೂಪದ ಯಂತ್ರಂ
ಚಾರುತರಂ ನೋಡೆ ನೋಡೆ ಕರಗಿದುದೀಸಂ |
ಸಾರದನಿತ್ಯತೆ ಮನದೊಳ್
ಬೇರೂಱಿದುದೀಗಳಿಂತಿದಂ ಕಡೆಗಣಿಪೆಂ ||

ಕೋಟಿತೆಱದಿಂದಮೆಸೆವೀ
ನಾಟಕಮಂ ತೋಱಿ ಮಾಣ್ದ ಳಿಲ್ಲಳ್ ಬಗೆಯೊಳ್ |
ನಾಟುವಿನಷ್ಟಮರಿ ಸಂಸೃತಿ
ನಾಟಕಮುಮನೆನಗೆ ನೆಱೆಯೆ ತೋಱಿದಳೀಗಳ್ ||

ಎನಿತಾನುಮಂಬುನಿಧಿಗಳ
ನನೇಕನಾಕಂಗಳಲ್ಲಿ ಕುಡಿದುಂ ಪೋಯ್ತು |
ಲ್ಲೆಸಗೆ ನರಭೋಗಮೆಂಬೀ
ಪನಿಪುಲ್ಲಂ ನಕ್ಕೆ ತೃಷ್ಣೆ ಪೇೞ್ ಪೋದಪುದೇ ||

ವಿದಿತಂ ಮೂರ್ಧಾಭಿಷಿಕ್ತರ್ ಪಲಬರರಸುಗಳ್ ಪ್ರಾಜ್ಯಸಾಮ್ರಾಜ್ಯಲಕ್ಷ್ಮೀ
ಪದಮಂ ಕೈಕೊಂಡು ತಮ್ಮಂ ಮಱೆದು ವಿಷಯ ಭೋಗಾಸವಾತ್ಯಂತಸೇವಾ
ಮದದಿಂದಂ ಧರ್ಮಪೋತಚ್ಯುತರನವಧಿಸಂಸಾರ ವಾರಾಸಿಮಧ್ಯಾ
ಸ್ಪದಸರ್ವಗ್ರಾಸಿಭೀಮಾಂತಕವದನ ಮಹಾಗರ್ತದೊಳ್ ಮಗ್ನರಾದರ್ ||

ವನದಹನಂ ವನಾಂತರಮನೊರ್ಬುಳಸಾಗಿರೆ ಮುತ್ತಿ ಸುತ್ತಿ ಸು
ತ್ತಿನ ನಡುವಿರ್ದ ಮಾಮರನಸಟ್ವಿದುದೀಮರನಂ ತಗುಳ್ದುದೆಂ |
ಬನೊಳೆಣೆಯಾಗೆ ಸತ್ತರನೆ ಸಾಯದರಂತೆಣಿಸುತ್ತುಮಿರ್ಪ ಬೆ
ಳ್ತನದನಿತಲ್ಲದಾಮರನನಾ ದವದಗ್ನಿ ಬರ್ದುಂಕಲೀಗುವೇ ||

ಬಗೆದೀಡಾದೆ ದುರಂತದುಃಖತತಿಗಳ್ ಬೆನ್ನಟ್ಟೆ ದುರ್ಮೋಹ ಮ
ತ್ಸ್ಯಗಣಂಗಳ್ ಕಡಿದಿಕ್ಕೆ ಲೋಭಮಕರಾನೀಕಂಗಳಾಟಂದು ನು |
ಣ್ಣಗೆ ನುಂಗುತ್ತಿರೆ ಮಾರರಾಗ ಶಿಶುಮಾರಂಗಳ್ ಮಹೋಗ್ರಂಗಳಿ-
ನ್ನೆಗಮೋರಂತೆ ತೊಟಲ್ದೆನಿಂ ತಿರಿಯಲಾಱೆಂ ಭವಾಂಭೋಧಿಯೊಳ್ ||

ಭರತ—ಬಾಹುಬಲಿ ಸಂಘರ್ಷ

ಎನ್ನಣುಗದಮ್ಮನಿಲ್ಲದೆ
ಬಿನ್ನನೆ ಸಾಮ್ರಾಜ್ಯಮಿನಿತುಮಾದೆಱಕಮುಮ |
ತ್ಯುನ್ನತಿಯಲ್ತೆನಗಾತಂ
ಮುನ್ನೆಱಗದೊಡೆಂದು ಬೆಸಸಿಯಟ್ಟಿದನೆನ್ನಂ ||

ಎನೆ ಭರತ ಚಕ್ರವರ್ತಿಯ ದೂತನೆಂಬುದುಂ ಬಾಹುಬಲಕುಮಾರಂ ಕೋಪ
ಗರ್ಭಸ್ಮಿತಂಬೆರಸು

ಧನವೆಂಬುದು ವಿಭುಗೆ ಯಶೋ-
ಧನಮದನಿಂತಳಿಪಿ ಕಳಿಪಿ ಕಿಡೆ ಮಾಡಿದರ್ಾ|
ತನ ಪಡೆದ ಧನಮದೇತಱ
ಧನಮದಱಿಂ ನಿಧನಮೆಯ್ದಿದರ್ ಪಲರರಸರ್ ||

ಪಿರಿಯಣ್ಣಂಗೆಱಗುವುದೇಂ
ಪರಿಭವವೇ ಕೀೞು ನೆತ್ತಿಯೊಳ್ ಬಾಳಂ ನಿ|
ರ್ನೆರಮೂಱು ಚಲದಿನೆಱಗಿಸ
ಲಿರೆ ಭರತಂಗೆಱಗುವೆಱಕಮಂಜಮೆಯಲ್ತೇ ||

ಭರತಂ ಷಟ್‌ಖಂಡಭೂವಲ್ಲಭನೆನೆ ಸಿರಿಯಂ ಗೆಂಟಱೊಳ್ ಕೇಳ್ದು ರಾಗಂ
ಬೆರಸಿರ್ಪೀ ನಣ್ಪೆ ಸಾಲ್ಗುಂ ಕರೆದೊಡೆ ಬೆಸನೇನೆಂಬ ಜೀಯೆಂಬ ದೇವೆಂ|
ಬರಸೆಂಬಾಳೆಂಬ ದೈನ್ಯಕ್ಕೆಲವೊ ತನುವನಾನೊಡ್ಡುವಂತಾದಿದೇವಂ
ಪುರುದೇವಂ ದೇವದೇವಂ ಕುಡೆ ಪಡೆದ ನೆಲಕ್ಕಾರೊಳಂ ಪಂಥಮುಂಟೇ ||

ನೆಗಟ್ದೀ ಷಟ್‌ಖಂಡ ಭೂಮಂಡಲಮನಸಿತುಮಂ ಗೆಲ್ವಖಂಡಪ್ರತಾಪಂ
ನೆಗಟ್ದಂತಾಱುಂ ಬಲಂಗಳ್ವೆರಸೊದವಿದ ಸಂಗ್ರಾಮಸಂರಂಭದಿಂದಂ|
ಬಗೆಯಂ ಪ್ರಾಣಪ್ರಿಯಸ್ತ್ರೀಜನತನಯಧನವ್ರಾತದೊಳ್ ಮಾಡದಾರ್ತಾ
ಜಿಗೆ ಬಂದೊಡ್ಡಲ್ಕೆ ಪೇೞ್ಸಂಗರನಿಕಷದೊಳೆಮ್ಮಂದಮಂ ನೀನೆ ಕಾಣ್ಬೈ ||

ಕಿಸುಸಂಜೆವೆರಸು ಕೞ್ತಲೆ
ಪಸರಿಸಿದಪುದೆನಿಸಿ ಕಣ್ಣ ಕೆಂಪುಂ ಭ್ರುಕುಟಿ|
ಪ್ರಸರಾಂಧಕಾರಮುಂ ದೆಸೆ
ದೆಸೆಗೆಸೆದುವು ಬಾಹುಬಲಿನೃಪಾಸ್ಥಾಯಿಕೆಯೊಳ್ ||

ವ || ಅನ್ನೆಗಂ ಚಕ್ರವರ್ತಿಯ ದೂತಂ ಸಾಕೇತಪುರಮನೆಯ್ದೆ ವಂದಾಸ್ಥಾನಮಂಟಪ ದೊಳ್ ಇರ್ದ ಚಕ್ರವರ್ತಿಯಂ ಕಂಡು ಪೊಡೆಮಟ್ಟು,

ನಿನಗೀ ಷಟ್ಖಂಡ ಭೂಮಂಡಲಮೆಱಗಿದುದೇಂ ಸಾಲದೇ ಬೇಡದುದ್ವೃ
ತ್ತನೊಳಿನ್ನೇನೆಂದು ದೇವರ್ಕಡೆಗಣಿಸಿರೆ ಸೌದರ್ಯಮಂ ಕಾದ ಪೆಂಪೀ|
ವನಧಿದ್ವೀಪಾಂತರಾಳ ಕ್ಷಿತಿಯೊಳೆಸಗುವಾಕ್ಷೇಪಮಂ ಮಾಣ ನೀಂ ಕ್ರೋ
ಧನನಾಗಲ್ ನಿನ್ನ ತಮ್ಮಂ ನಿನಗೆಱಗನಿದಂ ನಂಬು ರಾಜಾಧಿರಾಜಾ ||

ತಱುವಾಯಿಂ ದೃಷ್ಟಿಯುದ್ಧ ಜಲಯುದ್ಧ ಮಲ್ಲಯುದ್ಧದೊಳ್ ಬಾಹುಬಲಿ ಕುಮಾರಂ ಭರತಚಕ್ರವರ್ತಿಯಂ ಗೆಲಲ್ ಆಗಳ್

ಧರೆಯಂ ಪರ್ಬಿದುರ್ದೀ ಬಾಹುಬಲಿ ನೃಪಯಶೋದುಂದುಭಿಧ್ವಾನವೆಂಬಂ
ತಿರೆ ದೇವಾನೀಕಿನೀದುಂದುಭಿರವಮಮರೀವೃಂದ ಮಾಂಗಲ್ಯಗೇಯ |
ಸ್ವರದೊಳ್ ಕೈಗೂಡಿ ಪೊಣ್ಮುತ್ತಿರೆ ಮುದಿತಸುರಾನಂದ ಬಾಷ್ಪೋದ ಬಿಂದೂ
ತ್ಕರಮೆಂಬಂತಾಗೆ ತಂದತ್ತರಲ ಮಳೆಗಳಂ ಪುಷ್ಪಮೇಘಪ್ರತಾನಂ ||

ತನಗಲ್ಲದುದಂ ಮಾಡಿದ
ನಿನಿಸಂ ಚಕ್ರೇಶನೆಂಬ ಕುಲವೃದ್ಧರ ಭೂ |
ವನಿತಾಧೀಶರ ನುಡಿಗ
ಳ್ಗೆ ನಾಣ್ಚಿದಂ ಭರತರಾಜನವನತ ಮಕುಟಂ ||

ಕಳೆದಿಡುವುದೆ ಕಷ್ಟಂ ಭೂ
ತಳರಾಜ್ಯ ವಿಮೋಹಮಚಿರರುಚಿಸಂಚಳಮಿಂ |
ತಳವುಗಿಡಿಸಿದುದು ಮನುಕುಲ
ತಿಳಕನುಮಂ ಖಳಮಹೀಶರುಟಿದವರಳವೇ ||

ಸೋದರರೊಳ್ ಸೋದರರಂ
ಕಾದಿಸುವುದು ಸುತನ ತಂದೆಯೆಡೆಯೊಳ್ ಬಿಡದು |
ತ್ಪಾದಿಸುವುದು ಕೋಪಮನಳ
ವೀದೊರೆತೆನೆ ತೊಡರ್ವುದೆಂತು ರಾಜ್ಯಶ್ರೀಯೊಳ್ ||

ಇನಿಯುವು ಮೊದಲೊಳ್ ನಂಜಿನ
ಪನಿವೊಲ್ ಬಟಿಕೆಯ್ದೆ ಮುಳಿದು ಕೊಂದಿಕ್ಕುವುವಿಂ |
ತೆನೆಯೆನೆ ವಿಷಯ ಸುಖಾಸ್ವಾ
ದನದೊಳ್ ಲಂಪಟರಿದೇಕೆಯೋ ನರಪಶುಗಳ್ ||

ಕಿಡುವೊಡಲ ಕಿಡುವ ರಾಜ್ಯದ
ಪಡೆಮಾತುಗೊಳಲ್ಕಮೆನ್ನ ಮೆಯ್ಯುಗಿದಪುದೀ |
ಗಡೆ ಜೈನದೀಕ್ಷೆಯುಂ ಕೊಂ
ಡಡಿಗೆಱಗಿಸುವೆಂ ಸಮಸ್ತಸುರಸಮುದಯಮಂ ||

ಎಂದಿಂತು ಬಗೆದು ಭರತನ
ನೆಂದಂ ಚಕ್ರೇಶ ಸಿಗ್ಗನುಟಿ ಮುಳಿಸಂ ನೀ |
ನೆಂದಿಂಗಂ ಬಿಸುಡೀ ತ
ಮ್ಮಂದಿರೊಳಿಂತಿಂತು ಕಟ್ಟುವರ್ಪುದು ಪೆಂಪೇ ||

ನಿನ್ನೀ ಬೆಸಸಿದ ಚಕ್ರಮು—
ದೆನ್ನೀ ದೇಹಾದ್ರಿಯುಂ ಗೆಲಲ್ ನೆಱೆಯದು ನೀಂ |
ಬಿನ್ನನಿದೇಕಿರ್ಪೆಯದೆಂ
ತೆನ್ನ ಗೆಲಲ್ ವಜ್ರಗಿರಿಯನಾರ್ಕುಮೆ ವಜ್ರಂ ||

ನೆಲಸುಗೆ ನಿನ್ನ ವಕ್ಷದೊಳೆ ನಿಶ್ಚಳಮಿಾಭಟಖಡ್ಗಮಂಡಲೋ
ತ್ಪಲವನ ವಿಭ್ರಮಭ್ರಮರಿಯಪ್ಪ ಮನೋಹರಿ ರಾಜ್ಯಲಕ್ಷ್ಮಿ ಭೂ |
ವಲಯಮನಯ್ಯನಿತ್ತುದುಮನಾಂ ನಿನಗಿತ್ತೆಸಿದೇವುದಣ್ಣ ನೀ
ನೊಲಿದ ಲತಾಂಗಿಗಂ ಧರೆಗಮೂಟಿಸಿದಂದು ನೆಗಟ್ತೆ ಮಾಸದೇ ||

ಅವಧರಿಸದೆ ನಿನ್ನೊಳ್ ಪಿರಿ
ದವಿನಯಮಂ ನೆಗಟ್ದ ದೋಷಮಂ ತಪದೊಳ್ ನೀ |
ಗುವೆನಸದಾಗ್ರಹಮಂ ಬಿಸು-
ಡುವುದೊರ್ಮೆಗೆ ಮಱೆವುದೆನ್ನ ದುರ್ವಿಳಸನಮಂ ||

ವ || ಎಂದು ಬಾಹುಬಲಿ ಕುಮಾರಂ ತಪಶ್ಚರಣ ನಿಶ್ಚಳನಿಶ್ಚಯಮನನಾದಾಗಳ್,

ಮನದೊಳ್ ಮುಂ ಪುದಿದಿರ್ದ ಕೋಪಮನಿತುಂ ತೂಳ್ದಾಗಳೆತ್ತೆತ್ತ ಗೆ
ಯ್ದೆನಿದಂ ತಮ್ಮ ನೊಳೆಂಬುದೊಂದುಪಶಮಂ ಕೈಗಣ್ಮೆ ನೀನೊರ್ಬನೈ |
ಮನುವಂಶಕ್ಕೆ ಲಲಾಮನಪ್ಪನುಜನೈ ಬೇಡಮ್ಮ ನೀನುಂ ತಪೋ-
ವನಮಂ ಸಾರ್ವುದುಮಾನದಾರ್ಗೆ ಮೆಱೆವೆಂ ಮತ್ಪ್ರಾಜ್ಯಸಾಮ್ರಾಜ್ಯಮಂ ||

ನಿಜಪಾದಾಂಬುರುಹಕ್ಕೆ ಪಾದ್ಯ ವಿಧಿಯಂ ನೇತ್ರಾಂಬುವಿಂ ಮಾಡುವ
ಗ್ರಜನತ್ಯುನ್ನತಮಪ್ಪ ಮಸ್ತಕದ ಮೇಗೋರಂತೆ ಪಾಯ್ವಾತ್ಮಬಾ |
ಷ್ಪಜಳೌಘಂಗಳಿನಂದು ಬಾಹುಬಲಿ ತನ್ನಿಂದಂ ನಿಧೀಶಂಗೆ ವಂ
ಶಜರಾಜ್ಯಾಭಿಷವೋತ್ಸವಂ ನೆಗಟ್ದುದೆಂಬಾಶಂಕೆಯಂ ಮಾಡಿದಂ ||

ಪಂಪ ಭಾರತ

ಹಸ್ತಿನಪುರ

ರಗಳೆ ||

ಅದಟಿ ಪೊಱವೊಱಲ ವಿಶಾಳ ಕನಕ ಕೃತಕ ಗಿರಿಗಳಿಂ ಫಳ [ಪ್ರಕೀರ್ಣ] ತರುಗಳಿಂ |
ನನೆಯ ಕೊನೆಯ ತಳಿರ ಮುಗುಳ ವನಲತಾನಿಕುಂಜದಿಂ ಪ್ರಸೂನ ರಜದ ಪುಂಜದಿಂ|
ಗಗನ ತಳಮೆ ಪಱಿದು ಬಿಱ್ದುದೆನಿಪ ಬಹು ತಟಾಕದಿಂ ಕುಕಿಲ್ವ ನಲಿವ ಕೋಕದಿಂ |
ಸುರಿವ ಸುರಯಿಯುರಲ ಮುಗುಳ್ಗೆ ಮೊಗಸಿದಳಿಕುಳಂಗಳಿಂ ತೊದಲ್ವ ಶಿಶು ಶುಕಂಗಳಿಂ |
ತೆಗೆಯೆ ಬೀರರವದೆ ಮೇಲೆ ಪರಿವ ಮದಗಜಂಗಳಿಂ ಚಳತ್ತುರಂಗಮಂಗಳಿಂ |
ಲವಣ ಜಳಧಿ ಬಳಸಿದಂತೆ ಬಳಸಿದಗಟ ನೀಳದಿಂದುದಗ್ರ ಕನಕಶಾಳದಿಂ |
ದೊಳಗೆ ಕುಲ ನಗಂಗಳೆನಿಪ ದೇವಕುಲದ ಭೋಗದಿಂ ಸರಾಗಮಾದ ರಾಗದಿಂ|
ದಿವಮನೇಳಿಪಂತು ಮಿಳಿರ್ವ ವಿವಿಧ ಕೇತನಂಗಳಿಂ ಸದಾನಿಕೇತನಂಗಳಿಂ |
ಧನದಭವನಮೆನಿಪ ಸಿರಿಯ ಬಚ್ಚರಾಪಣಂಗಳಿಂ ಪೊದಱ್ದ ಕಾವಣಂಗಳಿಂ |
ವಿಟಜನಕ್ಕೆ ತೊಡರ್ವ ಚಾರಿಯೆನಿಪ ಸೂಳೆಗೇರಿಯಿಂ ವಿದಗ್ಧಹೃದಯ ಹಾರಿಯಿಂ |
ಕನಕ ಗೋಪುರಂಗಳೊಳಗಣೆರಡು ದೆಸೆಯ ಗುಣಣೆಯಿಂ ? ವಿಳಾಸಿನಿಯರ ಗಡಣೆಯಿಂ |
ಸುರತ ಸುಖದ ಬಳ್ಳವಳ್ಳಿಯೆನಿಪ ಬಳ್ಳಿಮಾಡದಿಂ ಮಹಾವಿನೋದ—ನೀಡದಿಂ |
ಕನಕ ಶೈಲಮೆನಿಸಿ ನೆಗಱ್ದ ಭೂಮಿಪಾಲ ಭವನದಿಂ ಸಮಸ್ತ ವಸ್ತು ಭುವನದಿಂ ||

ಬನವಾಸಿ

ಸೊಗಯಿಸಿ ಬಂದ ಮಾಮರನೆ ತಳ್ತಲೆವಳ್ಳಿಯೆ ಪೂತ ಜಾತಿ ಸಂ |
ಪಗೆಯೆ ಕುಕಿಲ್ವ ಕೋಗಿಲೆಯೆ ಪಾಡುವ ತುಂಬಿಯೆ ನಲ್ಲರೊಳ್ಮೊಗಂ ||
ನಗೆಮೊಗದೊಳ್ ಪಳಂಚಲೆಯೆ ಕೂಡುವ ನಲ್ಲರೆ ನೋಡಪ್ಪೊಡಾವ ಬೆ |
ಟ್ಟುಗಳೊಳಮಾವ ನಂದನವನಂಗಳೊಳಂ ಬನವಾಸಿ ದೇಶದೊಳ್ ||

ಚಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಂಪಿನಿಂಪುಗ|
ಳ್ಗಾಗರವಾದ ಮಾನಸರೆ ಮಾನಸರಂತವರಾಗಿ ಪುಟ್ಟಲೇ ||
ನಾಗಿಯುಮೇನೊ ತೀರ್ದಪುದೆ ತೀರದೊಡಂ ಮಱಿದುಂಬಿಯಾಗಿ ಮೇಣ್ |
ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ವನವಾಸಿ ದೇಶದೊಳ್ ||

ತೆಂಕಣಗಾಳಿ ಸೋಂಕಿದೊಡಮೊಳ್ನುಡಿಗೇಳ್ದೊಡಮಿಂಪನಾಳ್ದ ಗೇ |
ಯಂ ಕಿವಿವೊಕ್ಕೊಡಂ ಬಿರಿದ ಮಲ್ಲಿಗೆಗಂಡೊಡಮಾದ ಕಂದಲಂ ||
ಪಂ ಗೆಡೆಗೊಂಡೊಡಂ ಮಧುಮಹೋತ್ಸವಮಾದೊಡಮೇನನೆಂಬೆನಾ |
ರಂಕುಸವಿಟ್ಟೊಡಂ ನೆನೆವುದೆನ್ನಮನಂ ವನವಾಸಿದೇಶಮಂ ||

ಅಮರ್ದಂ ಮುಕ್ಕುಳಿಪಂತುಟಪ್ಪ ಸುಸಿಲೊಂದಿಂಪುಂ ತಗುಳ್ದೊಂದು ಗೇ |
ಯಮುಮಾದಕ್ಕರಗೊಟ್ಟಿಯುಂ ಚದುರರೊಳ್ವಾತುಂ ಕುಳಿರ್ಕೋಟ್ಪ
ಜೊಂ ||
ಪಮುಮೇವೇಳ್ಪುದನುಳ್ಳ ಮೆಯ್ಸುಕಮುಮಿಂತೆನ್ನಂ ಕರಂ ನೋಡಿ ನಾ |
ಡೆ ಮನಂಗೊಂಡಿರೆ ತೆಂಕನಾಡ ಮಱೆಯಲ್ಕಿನ್ನೇಂ ಮನಂ ಬರ್ಕುಮೆ ||

ವಸಂತ—ಮಾಸ

ಅಗರುವ ಮೆಚ್ಚು ಪಚ್ಚ ಸಿರಿಕಂಡದೊಳಗ್ಗಲಿಸಿತ್ತು ಸೂಡು ಶ|
ಯ್ಯೆಗಳ ಬಿಯಕ್ಕೆ ಜೊಂಪದಲರ್ವಾಸುಗಳೊಳ್ ನೆಲಸಿತ್ತು ಪೂತ ಗೊ ||
ಜ್ಜಗೆಗಳ ಸಿಂದುರಂಗಳೊಳಗೋಗರಗಂಪನೆ ಬೀಱುತಿರ್ಪ ಮ |
ಲ್ಲಿಗೆಯೊಳರಲ್ದ ಸಂಪಗೆಯೊಳಗ್ಗಲಿಸಿತ್ತು ಬಸಂತ ಮಾಸದೊಳ್ ||

ಮುಂ ಮಹಿಯೆಲ್ಲಮಂ ಶಿಶಿರ ರಾಜನೆ ಬಿಚ್ಚತಮಾಳ್ದನೀಗಳಾ |
ತಂ ಮಿಡುಕಲ್ಕೆ ಸಲ್ಲಿರದೆ ಪೋಪುದದೇಕೆನೆ ಕಾಮದೇವನಿ ||
ತ್ರಂ ಮಧುಗಿತ್ತನೀ ನೆಲನನಿಂತಿದು ಪತ್ತಳಿಯೆಂದು ಸಾಱುವಂ |
ದಂ ಮಿಗೆ ಕರ್ಚಿ ಪಾಱುದುವು ಕೆಂದಳಿರಂ ಗಿಳಿವಿಂಡಿನೋಳಿಗಳ್ ||

ಕೆಳಗಣ ಕೆಂದಳಿರ್ ಪುದಿದ ಮೇಗಣ ಪಂದಳಿರೊಂದಿದೊಂದು ಕೆ |
ಯ್ಗಟಿದ ಪಸುರ್ಪುಮಂ ಪೊಳೆವ ಕಂಪುಮನಾಳ್ದಿರೆ ಬೇಟದೊಳ್ ಕನ ||
ಲ್ದುಟಿದ ವಿಯೋಗಿಯುಳ್ಳೆರ್ದೆಯನಾಯ್ದುದನಾಟಿಸಲೆಂದೆ ಮನ್ಮಥಂ |
ಘಳಿಯಿಸಿ ಕೆಂಪುವಾಸಿದವೊಲಿರ್ದುವು ಮಾಮರಗಳ್ ಬಸಂತದೊಳ್ ||

ಪರಿಯೆ ಪಸುರ್ಪು ಬೆಳ್ಪಡರೆ ಬಲ್ಮುಗುಳೊಳ್ ಪೊಱೆದೋಱೆ ತೆಂಬೆರಲ್ |
ಪೊರೆವೊರೆಯಂ ಸಡಿಲ್ಚೆ ನಡು ಪೊಂಗಿರೆ ಮಲ್ಲಿಗೆಗಳ್ ಬಸಂತದೊಳ್ ||
ಬಿರಿದೊಡೆ ನಲ್ಲರಂ ನೆನೆದ ನಲ್ಲರ ಮೆಲ್ಲೆರ್ದೆಗಳ್ ಬಸಂತದೊಳ್ |
ಬಿರಿದುವದೆಂತೊ ಮಲ್ಲಿಗೆಗೆ ನಲ್ಲರ ಮೆಲ್ಲೆರ್ದೆ ವೇಳೆಗೊಂಡುದೋ ||

ದ್ಯೂತ ಪ್ರಸಂಗ

ವ || ಅಂತು ಸುಯೋಧನಂ ತನ್ನ ವಿಭವಮುಮಂ ವಿಳಾಸಮುಮಂ ಪಾಂಡವರ್ಗೆ ಮೆಱೆದು ಕಂದುಕಕ್ರೀಡಾದಿ ನಾನಾವಿಧ ವಿನೋದಂಗಳಿಂ ಕೆಲವು ದಿವಸ ಮನಿರ್ದೊಂದು ದಿವಸಂ ತನಗೆ ಸಾವಂ ಸಮಕಟ್ಟುವಂತೆ ಪಿಂಗಾಕ್ಷನಕ್ಷ ಕ್ರೀಡೆಯಂ ಶಕುನಿಯೊಳ್ ಸಮಕಟ್ಟಿ ಪೂಡಲ್ವೇಟ್ಟು ಪುಸಿಯೆಸೆ ಪೆಱರಂ ಮುನ್ನಮಾಡಲ್ವೇಟ್ಟು ತಾನುಂ ಧರ್ಮಪುತ್ರನುಂ ಕೆಲದೊಳಿರ್ದು ನೋಡು ತ್ತಿರೆ ಶಕುನಿಯಿಂತೆಂದಂ—

ನೋಡುವುದಱೊಳೇನಟ್ಟಿಯೊ |
ಳಾಡುತ್ತಿರಲಾಗ ತಮ್ಮುತಿರ್ವರುಮೆನೆ ನಾ ||
ಮಾಡುವೆವು ಬನ್ನಿಮೆಂಬುದು |
ಮಾಡುವ ಬಗೆ ಬಂದು ನೆತ್ತಮಂ ಧರ್ಮಸುತಂ ||

ಕರೆದೊಡೆ ಜೂದಿಂಗಂ ಧುರ|
ಭರಕಾಖೇಟಕ್ಕೆ ಭೂಭುಜಂಗಾಗದು ಮೆ ||
ಯ್ಗರೆದಿರಲೆಂಬ ಪುರಾತನ|
ಗುರು ವಚನಂ ತನಗೆ ನಿಟ್ಟೆ ಪಟ್ಟುದಱಿಂದಂ ||

ವ || ಅಂತು ಪೂಡಿಕೊಂಡು ನಾಟಿವಾಸಗೆಯನಿಕ್ಕಲ್ವೇಟ್ಟುದುಂ ಶಕುನಿಮುನ್ನೆ ತನ್ನ ಮಾಡಿದ ನಾಟವಾಸಗೆಗಳನರಸಾಳಂತೆ ಕಣ್ಣಱಿದು ಮೆಟ್ಟಿ ಮಟ್ಟಮಱಿದಿಕ್ಕು ವಾಗಳೊಡ್ಡಮಂ ಪೇಟಿಮೆನೆ ಪೊಟ್ಟುಪೋಗಿಂಗಮಟ್ಟಿಗಮಾಡುವ ತಮ್ಮು ತಿರ್ವರುಂ ಪಲಗೆಗೆ ಸಾಯಿರ ಗದ್ಯಾಣದ ಪೊನ್ನೇ ಸಾಲ್ಗುಮಗ್ಗಳಂ ಬೇಡೆಂದು ದುರ್ಯೋಧನನೊಕ್ಕಲಂ ಪುಡಿಯೊಳ್ ಪೊರಳ್ಚುವಂತೆ ಪಾಸಂ ಗೆಯಂ ಪೊರಳ್ಚಿ ಮುನ್ನಂ ನೆತ್ತಮನಱಿಯದನಂತವರ ದಾಯಮನಾಡೆ ಮಡಿಮಡಿಗುಱುವದುಮೊಂದು ಪತ್ತೆಂಟು ಪಲಗೆಯಂ ಮೆಳ್ಪಡಿಸಲೆಂದು ಸೋಲ್ತು ಸೋಲದೊಳೇವಯಿಸಿಯಿನ್ನೊಡ್ಡಂ ಕೊಳ್ಳಿಮೆಂದು—

ಪಲಗೆಗೆ ಪತ್ತು ಸಾಯಿರಮೆ ಗದ್ಯಣಮೆಂದಿರದೊಡ್ಡಿ ತಾಮೆರ |
ಟ್ಪಲಗೆಯನಾಡಿ ಸೋಲ್ತೊಡೆ ಸುಯೋಧನನೇವದೆ ಧರ್ಮಪುತ್ರನಂ ||
ಕುಲಧನ ಸಂಕುಲಂಗಳನೆ ತಂದಿಡೆಯಿಟ್ಟವನಾಡಿ ಸೋಲ್ತನಾ |
ಕುಲಮತಿ ಮುಂದೆ ಭಾರತದೊಳೊಡ್ಡುವುದಂ ಕಡು ನನ್ನಿಮಾಳ್ಪವೋಲ್ ||

ದ್ರೌಪದೀ ಮಾನಭಂಗ

ವ || ಅಂತು ದುರ್ಯೋಧನನಜಾತಶತ್ರುವಿನ ಸರ್ವಸ್ವಮೆಲ್ಲಮಂ ಗೆಲ್ದು ಗೆಲ್ದ ಕಸವರಮೆಲ್ಲಂ ಬಂಡುದು ಪಾಂಚಾಳರಾಜ ತನೂಜೆಯೊರ್ವಳ್ ಬಂದಳಿಲ್ಲಾಕೆಯಂ ತನ್ನಿಮೆಂದು ಯುಧಿಷ್ಠಿರಂ ಕೊಟ್ಟ ನನ್ನಿಯ ಬಲದೊಳ್ ತನಗೆ ಲಯಮಿಲ್ಲದುದನಱಿದು ಮೇಗಿಲ್ಲದ ಗೊಡ್ಡಾಟಮಾಡಲ್ ಬಗೆದು ಕರ್ಣನ ಲೆಂಕಂ ಪ್ರಾತಿಕಾಮಿಯೆಂಬನುಮಂ ತನ್ನ ತಮ್ಮಂ ದುಶ್ಶಾಸನನುಮಂ ಪೇೞ್ದೂಡವಂದಿರಾಗಳೆ ಬೀಡಿಂಗೆ ವರಿದು ರಜಸ್ವಲೆಯಾಗಿರ್ದೆಂ ಮುಟ್ಟಲಾಗದೆನೆಯುಮೊತ್ತಂಬದಿಂದೊಳಗಂ ಪೊಕ್ಕು ಪಾಂಚಾಳಿಯಂ ಕಣ್ಗೆಡೆ ಜಡಿದು ಮುಡಿಯಂ ಪಿಡಿದು ತನ್ಮಧ್ಯದಿಂ ಸುಯೋಧನನ ಸಭಾಮಧ್ಯಕ್ಕೆ ತಂದು—

ಮನದೊಳ್ ನೊಂದಮರಾಪಗಾಸುತ ಕೃಪ ದ್ರೋಣಾದಿಗಳ್ ಬೇಡವೇ |
ಡೆನೆಯುಂ ಮಾಣದೆ ತೊಟ್ಟ ತೊಟ್ಟುವೆಸಕೆಯ್ ಪೋ ಪೋಗು ನೀನೆಂದು ಬ ||
ಯ್ದನಿತಾನುಂ ತೆಱದಿಂದಮುಟ್ಟುದುವರಂ ಕೆಯ್ದಂದು ದುಶ್ಶಾಸನಂ |
ತನಗಂ ಮೆಲ್ಲನೆ ಮೃತ್ಯು ಸಾರೆ ತೆಗೆದಂ ಧಮ್ಮಿಲ್ಲಮಂ ಕೃಷ್ಣೆಯಾ ||

ವ || ಅಂತು ಕೃಷ್ಣೆಯ ಕೃಷ್ಣ ಕಬರೀ ಭಾರಮಂ ಮೇಗಿಲ್ಲದೆ ಪಿಡಿದು ತೆಗೆದು ಕೃಷ್ಣೋರಗನಂ ಪಿಡಿದ ಬೆಳ್ಳಾಳಂತುಮ್ಮನೆ ಬೆಮರುತ್ತುಮಿರ್ದ ದುಶ್ಶಾಸನನುಮಂ ಕಣ್ಕೆತ್ತಿ ಕಿಱುನಗೆ ನಗುವ ಕೂರದರ ಮೊಗಮುಮಂ ತಮ್ಮಣ್ಣನ ಬಿನ್ನನಾದ ಮೊಗಮುಮಂ ಕಂಡು ಕಣ್ಗಳಿಂ ನೆತ್ತರ್ ತುಳುಂಕೆ—

ಕೋಪದ ಪೆರ್ಚಿನೊಳ್ ನಡುಗುವೂರುಯುಗಂ ಕಡುಪಿಂದರಲ್ವ ನಾ |
ಸಾಪುಟಮೆಕ್ಕೆಯಿಂ ಪೊಡರ್ವ ಪುರ್ವು ಪೊದೞ್ದ ಲಯಾಂತಕ ತ್ರಿಶೂ ||
ಲೋಪಮ ಭೀಷಣ ಭ್ರುಕುಟಿ ಮುನ್ನಮೆ ರೌದ್ರ ಗದಾಯುಧಂಬರಂ |
ಪೋಪ ಭುಜಾರ್ಗಳಂ ರಿಪುಗಳಗ್ರಹಮಾದುದು ಭೀಮಸೇನನಾ ||

ನೆಲನಂ ಸುಂಗುವ ಮೇರುವಂ ಪಿಡಿದು ಕೀಲ್ವಾಶಾಗಜೇಂದ್ರಂಗಳಂ |
ಜಲದಿಂ ಕಟ್ಟುವ ಸಪ್ತಸಪ್ತಿಯನಿಳಾಭಾಗಕ್ಕೆ ತರ್ಪೊಂದು ತೋ ||
ಳ್ವಲಮುಂ ಗರ್ವಮುಮುಣ್ಮೆ ಪೊಣ್ಮೆ ಮನದೊಳ್ಕೋಪಾಗ್ನಿ ಕೆಯ್ಗಣ್ಮೆ ಕ |
ಣ್ಮಲರೊಳ್ ಬಂದಿರೆ ನೋಡಿದಂ ಕಲುಷದಿಂ ಗಾಂಡೀವಿ ಗಾಂಡೀವಮಂ ||

ಪ್ರಕುಪಿತ ಮೃಗಪತಿಶಿಶು ಸ—|
ನ್ನಿಕಾಶರತಿವಿಕಟ ಭೀಷಣ ಭ್ರೂಭಂಗರ್ ||
ನಕುಲಸಹದೇವರಿರ್ವರು—|
ಮಕಾಲ ಕಾಲಾಗ್ನಿ ರೂಪಮಂ ಕೆಯ್ಕೊಂಡರ್ ||

ವ || ಅಂತು ಪ್ರಳಯಕಾಲ ಜಳನಿಧಿಗಳಂತೆ ಮೇರೆದಪ್ಪಲ್ ಬಗೆದ ತನ್ನ ನಾಲ್ವರ್ ತಮ್ಮಂದಿರ ಮುಸಿದ ಮೊಗಮಂ ಕಂಡು ತನ್ನ ನುಡಿದ ನನ್ನಿಯ ಕೇಡಂ ಬಗೆದರೆಂದು ಕಟಾಕ್ಷವಿಕ್ಷೇಪದಿಂ ಬಾರಿಸೆ—

ಅನಿತೊಂದುರ್ಕಿನೊಳುರ್ಕಿ ಕೌರವಖಳರ್ ಪಾಂಚಾಳ ರಾಜಾತ್ಮಜಾ |
ಸನ ಪದ್ಮಗ್ಲಪನೈಕಕಾರಣಪರರ್ ತಾಮಾಗೆಯುಂ ಮತ್ತಮ ||
ಣ್ಣನ ಕಣ್ಸನ್ನೆಗೆ ಮೀಱಲ [ಣ್ಮ]ದೆ ಸಮಂತಿರ್ದರ್ ಪೃಥಾಪುತ್ರರಾಂ |
ತಿಸಿತೊಂದಾದೊಡಮೇಂ ಮಹಾಪುರುಷರಾಜ್ಞಾಲಂಘನಂಗೆಯ್ವರೇ ||

ವ || ಆಗಳ್ ದ್ರೌಪದಿ ತನ್ನ ಕೇಶಪಾಶಮಂ ದುಶ್ಶಾಸನಂ ಪಿಡಿದು ತೆಗೆದನೆಂಬ ಸಿಗ್ಗಗ್ಗಳಂ ಪೆರ್ಚೆ ಸಭೆಯೊಳಿಂತೆಂದಳ್ --

ಮುಡಿಯಂ ಪಿಡಿದೆಳೆದವನಂ |
ಮಡಿಯಿಸಿ ಮತ್ತವನ ಕರುಳ ಪಿಣಿಲಿಂದೆನ್ನಂ ||
ಮುಡಿಯಿಸುಗಾ ಮುಡಿಯಂ ದಲ್ |
ಮುಡಿಯೆಂ ಗಳಮಾಗಳಂತೆ [ಯೆ] ನ್ನಯ ಮುಡಿಯಂ ||

ಆಱದ ಕೋಪಪಾವಕನಿನಣ್ಣನ ನನ್ನಿಯನಿಲ್ಲಿ ಮೀಱುವೆಂ |
ಮೀಱೆನೆನುತ್ತುಮಿರ್ಪ ಪದದಲ್ಲಿಯೆ ನೋಡ ಮರುಳ್ಗೆಧೂಪಮಂ ||
ತೋಱಿದ ಮಾಳ್ಕೆಯಿಂ ದ್ರುಪದ ರಾಜಸುತಾ ವಚನಂಗಳಲ್ಲಿ ಮೆ |
ಯ್ದೋಱೆ ಮರುತ್ಸುತಂ ನುಡಿದನಾ ಸಭೆಯೊಳ್ ನವಮೇಘನಾದದಿಂ ||

ಮುಳಿಸಿಂದಂ ನುಡಿದೊಂದು ನಿನ್ನ ನುಡಿ [ಸ]ಲ್ಗಾಗಲೆಂಬರ್ ಮಹಾ |
ಪ್ರಳಯೋಲ್ಕೋಪಮ ಮದ್ಗದಾಹತಿಯಿನತ್ಯುಗ್ರಾಜಿಯೊಳ್ ಮುನ್ನಮಾ ||
ಖಳ ದುಶ್ಶಾಸನನಂ ಪೊರಳ್ಚಿ ಬಸಿಱಂ ಪೋಳ್ದಿಕ್ಕಿ ಜಂಬಲ್ಗರು |
ಳ್ಗಳಿನಾನಲ್ತೆ ವಿಳಾಸದಿಂ ಮುಡಿಯಿಪೆಂ ಪಂಕೇಜಪತ್ರೇಕ್ಷಣೆ ||

ಕುಡಿವೆಂ ದುಶ್ಯಾಸನೋರಸ್ಥಳಮನಗಲೆ ಪೋೞ್ದಾರ್ದು ಕೆನ್ನೆತ್ತರಂ ಪೊ।
ಕ್ಕುಡಿವೆಂ ಪಿಂಗಾಕ್ಷನೂರುದ್ವಯಮುಸುರುಗದಾಘಾತದಿಂ ಸುಚ್ಚು ನೂೞ್॥
ಗೊಡೆವೆಂ ತದ್ರತ್ನ ರಶ್ಮಿ ಪ್ರಕಟ ಮಕುಟಮಂ ನಂಬು ನಂಬೆನ್ನ ಕಣ್ಣಿಂ।
ಕಿಡಿಯುಂ ಕೆಂಡಂಗಳುಂ ಸೂಸಿದಪುವಹಿತರಂ ನೋಡಿ ಪಂಕೇಜವಕ್ತ್ರೇ ॥

ವ॥ ಎಂದು ಪಾಂಚಾಳರಾಜ ತನೂಜೆಯ ಮನಮನಾಱೆ ನುಡಿದು ಮತ್ತ ಮಿಂತೆಂದಂ—

ಸುರಸಿಂಧುಪ್ರಿಯಪುತ್ರ ಕೇಳ್ ಕಳಶಜಾ ನೀಂ ಕೇಳ್ ಕೃಪಾ ಕೇಳ ಮಂ।
ದರದಿಂದಂಬುಧಿಯಂ ಕಲಂಕಿದಸುರಪ್ರಧ್ವಂಸಿವೋಲ್ ಬಾಹು ಮಂ॥
ದರದಿಂ ವೈರಿ ಬಲಾಬ್ಧಿ ಘೂರ್ಣಿಸೆ ಬಿಗುರ್ತೀ ಕೌರವರ್ ಕೂಡೆ ನೂ।
ರ್ವರುಮಂ ಕೊಲ್ವೆನಿದೆನ್ನ ಪೂಣ್ಕೆ ನುಡಿದೆಂ ನಿಮ್ಮಾ ಸಭಾಮಧ್ಯದೊಳ್ ॥

ವ॥ ಎಂದು ವಿಳಯಕಾಳ ಜಳಧರನಿನಾದದಿಂ ಗಿರಿ ತಾಟಿಸಿದಂತಾಸುಂ ನೆಲಂ ಮೊೞಗಿದಂತಾಸುಂ ಗಜಱಿ ಗರ್ಜಿಸಿ ನುಡಿದು ಮಹಾಪ್ರತಿಜ್ಞಾರೂಢನಾದ ಭೀಮಸೇನನ ನುಡಿಯಂ ಕೇಳ್ದಾ ಕೌರವರ್ ಕಡಲ ನಡುವಣ ಪರ್ವತದಂತ ಳ್ಳಾಡೆ ಕುರುವೃದ್ಧನುಂ ಬುದ್ಧಿವೃದ್ಧನುಮಪ್ಪ ಗಾಂಗೇಯಂ ಧೃತರಾಷ್ಟ್ರಂ-ಗಿಂತೆಂದಂ—

ಭರತ ಯಯಾತಿ ಕುತ್ಸ ಪುರುಕುತ್ಸ ಪುರೂರವರಿಂದಮಿನ್ನೆಗಂ।
ಪರಿವಿಡಿಯಿಂದೆ ಬಂದ ಶಶಿವಂಶಮದೀಗಳಿವಂದಿರಿಂದೆ ನಿ॥
ತ್ತರಿಸುವುದಕ್ಕುಮೆಂದೆ ಬಗೆದಿರ್ದೊಡೆ ಕೀಲೊಳೆ ಕಿಚ್ಚು ಪುಟ್ಟೆ ಭೋ।
ರ್ಗರೆದುರಿದಂತೆ ನಿನ್ನ ಮಗನಿಂದುರಿದತ್ತಿದನಾರೊ ಬಾರಿಪರ್ ॥

ವ॥ ಎಂದಱಲ್ದು ಧೃತರಾಷ್ಟ್ರನೊಳ್ ನುಡಿಯೆ ಕುಂಭಸಂಭವಾಶ್ವತ್ಥಾಮ ಕೃಪ ವಿದುರಾದಿಗಳ್ ನೀಮೆನಿತು ನುಡಿದೊಡಮಾನೆಯ ಕೋಡು ಬಾಗದೆಂಬಂತೆ ದುರ್ಯೋಧನನುದ್ವೃತ್ತತೆಯುಮಂ ಭೀಮಸೇನನ ಮಹಾಪ್ರತಿಜ್ಞೆಯುಮ ನಾರ್ಗಂ ಬಾರಿಸಲ್ಬಾರದು ಕೆಯ್ಗಟಿದ ಮನವಾಪ್ತಗೆ ಬುದ್ಧಿವೇೞಲೆಡೆಯಿಲ್ಲ ತಾಮುಂ ತಾಮುಮಱಿವರ್ ಬನ್ನಿಮೆಂದು ನಿಜನಿವಾಸಂಗಳ್ಗೆ ಪೋದರಾಗಳ್ ಭೀಮಸೇನಂ ಧರ್ಮಪುತ್ರಂಗೆಂದನುಪ್ಪಿಕ್ಕಿದೊಡೆ ತುಪ್ಪದ ಮೆಳ್ಪಡಿತೆಂಬಂತೆ ನಮ್ಮ ಕೆಮ್ಮನಿರ್ಪಿರವಿದೇ ಕಾರಣಂ ಬನ್ನಿಂ ಪೋಪಮೆಂದರಮನೆಯಂ ಪೊಱಮಟ್ಟು ಬರೆ ಧೃತರಾಷ್ಟ್ರಂ ದುರ್ಯೋಧನನನೇಗೆಯ್ದು ಮೊಡಂಬಡಿಸೆ ಲಾಱದಿರೆಯುಂ ದ್ರೌಪದಿ ಪರಸ್ತ್ರೀಯಂ ನಮ್ಮ ಮನೆಯೊಳಿರಿಸುವುದುಚಿತ ಮಲ್ಲೆಂದು ಕಳಿಪಿದೊಡೆ ಪಾಂಚಾಳರಾಜತನೂಜೆವೆರಸು ಬಿನ್ನಬಿನ್ನನೆ ಪೊಱಲಂ ಪೊಱಮಡೆ ಪುರ ಜನಂಗಳೆಲ್ಲಂ ನೆರೆದವರ ಪೋಗಿಂಗೆ ಸೈರಿಸಲಾಱದೆ ತಮ್ಮೊಳಿಂತೆಂದರ್—

ಏದೊರೆಯುಂ ಯಮನಂದನ |
ನೇದೊರೆಯುಂ ಭೀಮಸೇನನೇದೊರೆಯುಂ ಕಂ ||
ಜೋದರನ ಮೈದುನಂ ತಾ |
ಮೇದೊರೆಯರಮಳ್ಗಳವರ್ಗವಿಾಯಿರವಾಯ್ತೇ ||

ಜೂದಾಡಿ ಸೋಲ್ತು ನನ್ನಿಗೆ |
ಮೇದಿನಿಯುಂ ಕೊಟ್ಟು ಪಾಂಡುನಂದರೀಗಳ್ ||
ಪೋದೊಡಮೇಂ ತಿಣುಕಾಗದೆ |
ಪೋದಪುದೇ ನಮ್ಮ ನೃಪತಿಗವು ತವುದಲೆಯೊಳ್ ||

ಜೂದಿನ ಗೆಲ್ದೊಳಾದೀ |
ಮೇದಿನಿಯುಂ ಕಂಡು ಕಜ್ಜಮಂ ಕಾಣದೆ ದು ||
ರ್ಯೋದನನದೇನದೇಂ ಮರು |
ಳಾದನೊ ಬಡಿಗಂಡನಿಲ್ಲ ಪಾಲನೆ ಕಂಡಂ ||

ಭೀಷ್ಮಪಟ್ಟ ಪ್ರಸಂಗ

ವ || ಅಂತು ಪರಶುರಾಮನನಂಜಿಸಿದ ವೀರಂಗೆ ವೀರಪಟ್ಟಮುಂ ಕಟ್ಟಿ ಪಗೆವರನೆನ್ನ ಮಂಚದ ಕಾಲೊಳ್ ಕಟ್ಟಿದೆನೆಂದು ಪೊಟ್ಟಳಿಸುವ ಸುಯೋಧನನ ನುಡಿಯು ನವಕರ್ಣಿಸಿ ಕರ್ಣನಿಂತೆಂದಂ—

ಭಗವತಿಯೇಱುವೇಟ್ಟ ತೆರದಿಂ ಕಥೆಯಾಯ್ತಿನರೇಱು ನೀನಿದಂ |
ಬಗೆದಿವರಿನ್ನು ಮಾಂತಿಱುವರೆಂದು ವಿಮೋಹಿಸಿ ವೀರಪಟ್ಟಮುಂ ||
ಬಗೆಯದೆ ಕಟ್ಟಿದೈ ಗುರುಗಳಂ ಕುಲವೃದ್ಧರನಾಜಿಗುಯ್ದು ಕೆ |
ಮ್ಮಗೆ ಪಗೆವಾಡಿಯೊಳ್ ನಗಿಸಿಕೊಂಡೊಡೆ ಬಂದಪುದೇಂ ಸುಯೋಧನಾ ||

ಕಟ್ಟಿದ ಪಟ್ಟಮೆ ಸರವಿಗೆ |
ನೆಟ್ಟನೆ ದೊರೆ ಪಿಡಿದ ಬಿಲ್ಲೆ ದಂಟೆಂಗೆಣೆ ಕ ||
ಣ್ಗೆಟ್ಟ ಮುದುಪಂಗೆ ಪಗೆವರ |
ನಿಟ್ಟೆಲ್ವಂ ಮುಱುವೊಡೆನಗೆ ಪಟ್ಟಂಗಟ್ಟಾ ||

ಆದಿಯೊಳವರಂ ಪಿರಿದೊಂ |
ದಾದರದಿಂ ನಡಪಿದಜ್ಜರಪ್ಪುದಱಿಂದಂ ||
ಕಾದರಿವರವರೊಳವರುಂ |
ಕಾದರ್ ನೆರೆದಿವರೊಳೆಂತು ನಂಬುವೆ ನೃಪತೀ ||

ವ || ಎಂಬುದಮಾ ನುಡಿಗೆ ಸಿಡಿಲ್ದು ಕುಂಭಸಂಭವನಿಂತೆಂದಂ—

ಸಿಂಗದ ಮುಪ್ಪುಂ ನೆಗಟ್ದೀ |
ಗಾಂಗೇಯರ ಮುಪ್ಪುಮಿಟಿಕೆವಡೆಗುಮೆ ವನಮಾ ||
ತಂಗಂಗಳಿನಸುಹೃಚ್ಚ್ಚತು |
ರಂಗಬಲಂಗಳಿನದೆಂತುಮಂಗಾಧಿಪತೀ ||

ಕುಲಜರನುದ್ಧತರಂ ಭುಜ |
ಬಲಯುತರಂ ಹಿತರನೀ ಸಭಾ ಮಧ್ಯದೊಳ ||
ಗ್ಗಲಿಸಿದ ಮದದಿಂ ನಾಲಗೆ |
ಕುಲಮಂ ತುಬ್ಬುವವೊಲುಱದೆ ನೀಂ ಕೆಡೆನುಡಿವೈ ||

ವ || ಎಂದು ನುಡಿದ ಗುರುವಿನ ಕರ್ಣ ಕಠೋರ ವಚನಂಗಳ್ಗೆ ಕರ್ಣಂ ಕಿನಿಸಿ—

ಕುಲಮನೆ ಮುನ್ನಮುಗ್ಗಡಿಪಿರೇಂ ಗಳ ನಿಮ್ಮ ಕುಲಂಗಳಾಂತು ಮಾ |
ರ್ಮಲೆವನನಟ್ಟಿ ತಿಂಬುವೆ ಕುಲಂ ಕುಲಮಲ್ತು ಛಲಂ ಕುಲಂ ಗುಣಂ ||
ಕುಲಮಭಿಮಾನಮೊಂದೆ ಕುಲ [ಮಣ್ಮ ಕುಲಂ] ಬಗೆವಾಗಳೀ[ಗಳೀ] |
ಕಲಹದೊಳಣ್ಣ ನಿಮ್ಮ ಕುಲವಾಕುಲಮಂ ನಿಮಗುಂಟು ಮಾಡುಗುಂ ||

ಗಂಗಾಸುತಂ ಪೃಥಾಸುತ |
ರಂ ಗೆಲ್ದೊಡೆ ತಪಕೆ ಪೋಪೆನವರ್ಗಳ ಕೈಯೊಳ್ ||
ಗಾಂಗೇಯನಟಿದೊಡಹಿತರ |
ನಾಂ ಗೆಲೆ ತಳ್ತಿಱಿವೆನಸ್ನೆಗಂ ಬಿಲ್ವಿಡಿಯೆಂ ||

ವ || ಎಂದು ಕರ್ಣಂ ಪ್ರತಿಜ್ಞೆಗೆಯ್ವುದುಂ ಸಿಂಧುತನೂಜನಿಂತೆಂದಂ—

ಕಲಿತನದುರ್ಕು ಜವ್ವನದ ಸೊರ್ಕು ನಿಜೇಶನ ನಚ್ಚು ಮಿಕ್ಕ ತೋ |
ಳ್ವಲದ ಪೊಡರ್ಪು ಕರ್ಣ ನಿನಗುಳ್ಳನಿತೇನೆನಗುಂಟೆ ಭಾರತಂ ||
ಕಲಹಮಿದಿರ್ಚುವಂ ಹರಿಗನಪ್ಪೊಡೆ ಮೊಕ್ಕಳಮೇಕೆ ನೀಂ ಪಳಂ |
ಚಲೆದಪೆಯಣ್ಣ ಸೊಟ್ಪಡೆಯಲಪ್ಪುದು ಕಾಣ ಮಹಾಜಿರಂಗದೊಳ್ ||

ಕರ್ಣಾವಸಾನ

ಮಗನಟಿಲೊಂದು ಭೂಪತಿಯ ತಮ್ಮನೊಳಾದಟಿಲೊಂದು ನೊಂದು ಬಿ |
ನ್ನಗೆ ಮೊಗದಿಂದೆ ಕುಂದಿ ಫಣಿಕೇತನನಿರ್ದಟಿಲೊಂದು ತನ್ನನಾ ||
ವಗೆಯುರಿಯುಟ್ವವೋಲಳುರೆ ತನ್ನ ನೆಗಟ್ತೆಗೆ ಮುಯ್ವನಾಂತು ಮುಂ !
ಪೊಗಟಿಸಿ ಬಟ್ದುದಂ ನೆನೆದು ಕರ್ಣನಸುಂಗೊಳೆ ಬಂದು ತಾಗಿದಂ ||

ವ|| ಅಂತು ಬಂದು ತಾಗಿದಾಗಳುಭಯಸೈನ್ಯಸಾಗರಂಗಳೊಳ್—

ಆದಿತ್ಯನ ಸಾರಥಿ ಬೆಱ|
ಗಾದಂ ಮಾತಳಿ ಮಾತುಗೆಟ್ಟಂ ಧುರದೊಳ್ ||
ಚೋದಿಸೆ ಹರಿಯುಂ ಶಲ್ಯನು|
ಮಾದರದಿಂ ನರನ ದಿನಪತನಯನ ರಥಮಂ ||

ಕವಿವ ಶರಾಳಿಯಂ ನಿಜ ಶರಾಳಿಗಳಟ್ಟಿ ತೆರಳ್ದಿ ತೂಳ್ದಿ ಮಾ|
ರ್ಕವಿದು ಪಳಂಚಿ ಪಾಯ್ದೊ ದರಸೆ ಪುಟ್ಟಿದ ಕಿರ್ಚುಳುರ್ದೆಟ್ಟಿ ಜಾಂಡದಂ ||
ತುವರಮುಗುರ್ವು ಪರ್ವಿ ಕರಮುರ್ವಿಸೆ ದಳ್ಳುರಿ ಪೆರ್ಚಿ ಕಂಡು ಖಾಂ|
ಡವವನ ದಾಹಮಂ ನೆನೆಯಿಸಿತ್ತು ಗುಣಾರ್ಣವನಸ್ತ್ರ ಕೌಶಲಂ ||

ವ|| ಆಗಳ್ ಮದ್ರರಾಜನಂಗಾಧಿರಾಜನನಿಂತೆಂದನೀಯಂಬುಗಳೊಳೇಂ ತೀರ್ದ ಪುದು ದಿವ್ಯಾಸ್ತ್ರಂಗಳಿಂದೆಚ್ಚು ಪಗೆಯಂ ಸಾಧ್ಯಂಮಾಡೆಂಬುದುಂ ಕೊಂತಿಗೆ ತನ್ನ ನುಡಿದ ನುಡಿವಳಿಯಂ ನೆನೆದು ಪುರಿಗಣೆಯ ದೊಣೆಗೆ ಕೆಯ್ಯಂ ನೀಡದೆ ರೌದ್ರ ಶರದ ದೊಣೆಗೆ ಕೆಯ್ಯಂ ನೀಡಿದಾಗಳ್—

ತಿರಿಪಿದೊಡದನೆಳೆ ತಿಱ್ರನೆ|
ತಿರಿದುದು ತಿರುವಾಯೊಳಿಡೆ ಸುರರ್ ಮೊಱೆಯಿಟ್ಟರ್ ||
ಭರದೆ ತೆಗೆ-ನೆಱೆಯೆ ಮೆಯ್ದ್ದೆಗೆ|
ದರವಿಂದೋದ್ಭವನಿನೊಗೆದುದು ಬ್ರಹ್ಮಾಂಡಂ ||

ತುಡೆ ಕರ್ಣನದಂ ನಡನಡ|
ನಡುಗಿ ಸುಯೋಧನನ ಸಕಲ ರಾಜ್ಯಶ್ರೀಯುಂ ||
ಸಡಿಲಿಸಿದ ತೋಳನಾಗಳ್ |
ಸಡಿಲಿಸಲಣ್ಮಳೆ ದಲದಱಿಗುರ್ವೇಂ ಪಿರಿದೋ ||

ಬೆಳಗುವ ಸೊಡರ್ಗಳ ಬೆಳಗ|
ಗ್ಗಳಿಸುವವೋಲ್ ಪೋಪ ಪೊೞ್ತುಱೊಳ್ ತೇಜಂ ಪ||
ಜ್ಜಳಿಸೆ ತಟತಟಿಸಿ ತೊಳ ತೊಳ|
ತೊಳಗಿದನಸ್ತ್ರಮಯುಸಮಯದೊಳ್ ದಿನಪಸುತಂ ||

ಗಿರಿಜೆಯ ಮೆಚ್ಚಿಕೊಟ್ಟ ನಿಶಿತಾಸ್ತ್ರಮನಂಜಲಿತಾಸ್ತ್ರಮಂ ಭಯಂ|
ಕರತರಮಾಗೆ ಕೊಂಡು ವಿಧಿಯಿಂದಭಿಮಂತ್ರಿಸಿ ಪೂಡೆ ಬಿಲ್ಲೊಳು ||
ರ್ವರೆ ನಡುಗಿತ್ತ ಜಾಂಡವೊಡೆದತ್ತು ನೆಲಂ ಪಿಡುಗಿತ್ತು ಸಪ್ತ ಸಾ|
ಗರಮುಡುಗಿತ್ತು ಸಾಹಸಮದೇಂ ಪಿರಿದೋ ಕದನತ್ರಿಣೇತ್ರನಾ ||

ವ || ಆಗಳಖಿಳ ಭುವನ ಭವನ ಸಂಹಾರಕಮಪ್ಪಂಜಲಿತಾಸ್ತ್ರಮನಮೋ—ಘಾಸ್ತ್ರ ಧನಂಜಯನಾಕರ್ಣಾಂತಂಬರಂ ತೆಗೆದಾಕರ್ಣಾಂತಂ ಮಾಡಲ್ ಬಗೆದು ಕಂಧರಸಂಧಿಯಂ ನಿಟ್ಟಿಸಿ—

ಮುಳಿದೆಚ್ಚಾಗಳ್ ಮಹೋಗ್ರಪ್ರಳಯಶಿಖಿ ಶಿಖಾನೀಕಮಂ ವಿಸ್ಫುಲಿಂಗಂ |
ಗಳುಮಂ ಬೀಱುತ್ತುಮೌರ್ವಜ್ವಳನ ರುಚಿಯುಮಂ ತಾನೆ ತೋಱುತ್ತು ಮಾಟಂ ||
ದಳುರುತ್ತುಂ ಬಂದು ಕೊಂಡಾಗಳೆ ಗಗನತಳಂ ಪಾಯ್ದು ಕೆನ್ನೆತ್ತರಿಂದು |
ಜ್ಜ್ವಳಿಸುತ್ತಿರ್ಪನ್ನೆಗಂ ಬಿಟ್ಟುದು ಭರದೆ ಸಿಡಿಲ್ದತ್ತ ಕರ್ಣೋತ್ತಮಾಂಗಂ ||

ವ || ಅಂತು ತಲೆ ನೆಲದೊಳುರುಳ್ದೊಡೆ ಲೋಕಕ್ಕೆಲ್ಲಮಗುಂದಲೆಯಾದ ಬೀರಮ ಸೆಯೆ ಪ್ರಾಣಮೊಡಲಿಂದಂ ತೊಲಗೆಯುಂ ತೊಲಗದ ನನ್ನಿಯನುದಾ ಹರಿಸುವಂತೆ ಪತ್ತೆಂಟು ಕೋಲನೆಚ್ಚಟ್ಟಿಯುರಿ ನೆಲದೊಳಾಚಂದ್ರಸ್ಥಾಯಿ ಯಾಗೆ ಚತುರ್ದಶ ಭುವನಂಗಳಂ ಪಸರಿಸಿ ನಿಂದೊಡೆಸೆದುದಾಹರಣಮೊಳ್ಪಿನು ದಾಹರಣಮುಮಾಗೆ ಗುಣಾರ್ಣವನ ಶರ ಪರಿಣತಿಯಿಂದೆ ಕುಲ ಶೈಲಂ ಬೀಳ್ವಂತೆ ನೆಲನದಿರೆ ಬಿಟ್ಟಾಗಳ್—

ಚಾಗದ ನನ್ನಿಯ ಕಲಿತನ |
ದಾಗರಮೆನೆ ನೆಗಟ್ದ ಕರ್ಣನೊಡಲಿಂದೆಂತುಂ ||
ಪೋಗಲ್ಕಱಿಯದೆ ಸಿರಿ ಕರ |
ಮಾಗಳ್ ಕರಿಕರ್ಣತಾಳಸಂಚಳೆಯಾದಳ್ ||

ಕುಡುಮಿಂಚಿನ ಸಿಡಿಲುರುಳಿಯೊ |
ಳೊಡಂಬಡಂಪಡೆಯೆ ಕರ್ಣನೊಡಲಿಂದಾಗಳ್ ||
ನಡೆನೋಡೆ ನೋಡೆ ದಿನಪನೊ |
ಳೊಡಗೂಡಿದುದೊಂದು ಮೂರ್ತಿ ತೇಜೋರೂಪಂ ||

ಪಿಡಿದನೆ ಪುರಿಗಣೆಯನೆರ |
ಟ್ನುಡಿದನೆ ಬಳ್ಕಿದನೆ ತಾನೆ ತನ್ನನೆ ಚಲಮಂ ||
ಪಿಡಿದಟಿದನೆಂದು ದೇವರ |
ಪಡೆ ಗಡಣದೆ ಪೊಗಟ್ದು ದಿನತನೂಜನ ಗಂಡಂ ||

ನೆನೆಯುದಿರಣ್ಣ ಭಾರತದೊಳಿಂ ಪೆಱರಾರುಮನೊಂದೆ ಚಿತ್ತದಿಂ |
ನೆನೆವೊಡೆ ಕರ್ಣನಂ ನೆನೆಯ ಕರ್ಣನೊಳಾರ್ ದೊರೆ ಕರ್ಣನೇಱು ಕ ||
ರ್ಣನ ಕಡು ನನ್ನಿ ಕರ್ಣನಳವಂಕದ ಕರ್ಣನ ಚಾಗಮೆಂದು ಕ |
ರ್ಣನ ಪಡೆಮಾತಿನೊಳ್ ಪುದಿದು ಕರ್ಣರಸಾಯನಮಲ್ತೆ ಭಾರತಂ ||

ದುರ್ಯೋಧನನ ಅಂತ್ಯಪ್ರಸಂಗ

ವ || ಎಂಬನ್ನೆಗಮವರಿರ್ವರ ಕಾಲ ಸೊಪ್ಪುಳನಾಲಿಸಿ ಸುರನದೀ ನಂದನಂ
ಪೇೞಿಮಾ ಬಂದರಾರೆಂದನೇಕ ವ್ರಣವೇದನಾ ಪರವಶ ಶರೀರಂ ಬೆಸ
ಗೊಳ್ವುದುಂ ಸಂಜಯುಂ ಕುರುಪಿತಾಮಹನ ಕರ್ಣೋಪಾಂತಮಂ ಸಾರ್ದು
ಕುರುಕುಳಗಗನ ಮೃಗಧರಂ ಬಂದನೆಂದು ಬಿನ್ನಪಂ ಗೆಯ್ವುದುಂ ಯೋಗಾ
ಭ್ಯಾಸದೊಳರೆಮುಗುಳ್ದ ರಕ್ತಾಂಭೋಜ ದಳ ವಿಳಾಸೋಪಹಾಸಿಗಳಪ್ಪ
ಕಣ್ಗಳನೊತ್ತಂಬದಿಂ ತೆಱೆದು—

ಎಱಗಿದ ಕೌರವೇಶ್ವರನೊಳಾದಮಿದಿರ್ಚಿದಲಂಪೆಲರ್ಚಿದ |
ಟ್ಕಱನೊಳಕೊಳ್ವಿನಂ ಪರಸಿ ಮೆಯ್ಯೊಳೆ ಬಂದ ತೆಱಕ್ಕೆ ಮೆಯ್ ಕರಂ ||
ಮಱುಗಿಪುದಿಂತು ಪೇೞ್ ಮಗನೆ ಬೆಳ್ಗೊಡೆಯೆಲ್ಲಿದುವೆತ್ತ ಪೋಯ್ತು ಸು |
ತ್ತಿಱಿದ ಚತುರ್ಬಲಂ ನಿನಗಮೀಯಿರವಾದುದೆ ವೈರಿಭೂಪರಿಂ ||

ದೋಷಮುಮೇವಮುಂ ಶಕುನಿಯಿಂ ಯುವರಾಜನಿನಾಯ್ತು ಪೋಯ್ತು ನಿ |
ರ್ದೋಷಿಗಳಪ್ಪ ನಿಮ್ಮೆರಡು ತಂಡಮುಮಿಂ ಪುದುವಾಳ್ವುದಂತದೇಂ ||
ದೋಷಮೊ ಮೇಣ್ ವೃಕೋದರನಿನಾ ರಣರಂಗದೊಳಾದ ದುಷ್ಟದು |
ಶ್ಶಾಸನ ರಕ್ತಮೋಕ್ಷದೊಳೆ ದೋಷವಿಮೋಕ್ಷಮ[ದೇ]ಕೆ ಕೊಂಡಪೈ ||

ವ || ಎಂದು ನುಡಿದ ಪಿತಾಮಹನ ನುಡಿಗಳ್ಗೆ ಕುರುರಾಜನಿಂತೆಂದಂ—

ಶರಶಯ್ಯಾಗ್ರದೊಳಿಂತು ನೀಮಿರೆ ಘಟಪ್ರೋದ್ಭೂತನಂತಾಗೆ ವಾ |
ಸರನಾಥಾತ್ಮಜನಂತು ಸಾಯೆ ರಣದೊಳ್ ದುಶ್ಶಾಸನಂ ತದ್ವೃಕೋ ||
ದರನಿಂದಂತಟಿದಟ್ಟೆ ಸೈರಿಸಿಯುಮಾಂ ಸಂಧಾನಮಂ ವೈರಿಭೂಪ |
ರೊಳಿಂ ಸಂಧಿಸಿ ಪೇೞಿಮಾರ್ಗೆ ಮೆಱೆವೆಂ ಸಂಪತ್ತುಮಂ ಶ್ರೀಯುಮಂ ||

ಬಿಡಿಮೆನ್ನ ನುಡಿಗೆ ಬೀೞ್ಕೊಳೆ |
ನುಡಿಯುದಿರಿಂ ಪೆಱತನಜ್ಜಮುಂ ನುಡಿದೆರಡಂ ||
ನುಡಿವೆನೆ ಚಲಮಂ ಬಲ್ವಿಡಿ- |
ವಿಡಿದೆಂ ತನ್ನಪ್ಪುದಕ್ಕೆ ಸಂಗರಧರೆಯೊಳ್ ||

ವ || ಎಂಬುದುಂ ನೀನುವೆಂತುಂ ಕಾದಿಯಲ್ಲದಿರೆಯಪ್ಪೊಡಿಂದಿನೊಂದಿ—ವಸಮ ನೆನ್ನ ಪೇೞ್ವ ಜಳಮಂತ್ರೋಪದೇಶಮಮಂ ಕೈಕೊಂಡು ಕುರುಕ್ಷೇತ್ರದುತ್ತರ ದಿಗ್ಭಾಗದ ವೈಶಂಪಾಯನಸರೋವರದೊಳ್ ಮುೞುಗಿ ಕಾಲಾಗ್ನಿರುದ್ರಂ ರಸಾತಳದೊಳಡಂಗಿರ್ಪಂತಿರ್ದು ನಿನ್ನವಸರಕ್ಕೆ ಬಂದುಕೂಡುವ ಬಲದೇವ ನುಮಂ ನಿನ್ನಿರ್ದೆಡೆಯನಱಿಯದಱಿಸುವಶ್ವತ್ಥಾಮ ಕೃಪ ಕೃತವರ್ಮರುಮಮಂ ಕೂಡಿಕೊಂಡು ಪಗೆವರಂ ನಾಳೆ ಕಾದಿ ಗೆಲ್ವುದೆಂದು ಹಿತೋಪದೇಶಂಬೆರಸು ಜಳ ಮಂತ್ರೋಪದೇಶಮಂ ಕಿವಿಯೊಳ್ ಪರ್ಚಿ ಪೇೞ್ದು ಕುರು ಪಿತಾಮಹಂ ಸಂಜಯನಂ ಧೃತರಾಷ್ಟ್ರನಲ್ಲಿಗೆ ಸಂಧಾನವಾರ್ತೆಯಂ ಸಮಕೊಳಿಸುವಂತ ನಾಗತ ಬಾಧಾಪ್ರತಿಷೇಧಂ ಮಾಡುವಂತಟ್ಟಿ ಸಕಳಕುರು ಕುಳಾವಲಂಬನ ಕಲ್ಪವೃಕ್ಷಮಂ ಪರಿಸಿ ಪೋಗಲ್ವೇೞ್ಕೆ ದೇವನದೀಪ್ರಿಯಪುತ್ರನಂ ಧೃತರಾಷ್ಟ್ರ ಪುತ್ರಂ ಬೀೞ್ಕೊಂಡು ಕನಕ ಪತ್ರ ಲತಾ ಲಾಂಛಿತ ಗದಾ ದಂಡಮಂ ಕೊಂಡೊರ್ವನೆ ವೈಶಂಪಾಯನ ಸರೋವರದ ಬಟ್ಟೆಯಂ ಸಡೆಗೊಂಡು—

ಬೆಳಗಿ ಸಮಸ್ತ ಭೂವಳಯಮಂ ನಿಜ ತೇಜದಿನಾಂತ ದೈತ್ಯರಂ |
ತಳವೆಳಗಾಗೆ ಕಾದಿ ಚಳಿತೆಯ್ದಿ ಬೞಲ್ದಪರಾಂಬು ರಾಶಿಯೊಳ್ ||
ಮುೞುಗುವ ತೀವ್ರ ದೀಧಿತಿವೊಲಾ ಕೊಳದೊಳ್ ಫಣಿರಾಜಕೇತನಂ |
ಮುೞುಗಿದನಾರ್ಗಮೇಂ ಜಿದಿಯ ಕಟ್ಟಿದುದಂ ಕಳೆಯಲ್ಕೆ ತೀರ್ಗುಮೇ ||

ವ || ಎಂಬನ್ನೆಗಂ ವೃಕೋದರನಟ್ಟಿದ ಕಿರಾತಂ ವಿಂಧ್ಯಕನೆಂಬಂ ಬಂದು ದುರ್ಯೋಧನನನೆಲ್ಲಿಯುಮಱಿಸಿ ಕಾಣದೆ ವೈಶಂಪಾಯನ ಸರೋವರಕ್ಕೆ ನೀರ್ಗುಡಿಯಲೆಂದು ಪೋಗಿ ಕೊಳದ ತಡಿಯೊಳ್ ಹಳಕುಳಿಶ ಶಾಖಚಕ್ರ ಲಾಂಛಿತವಪ್ಪಡಿವಜ್ಜೆಯಂ ಕಂಡು ಬಂದೆನೆಂದು ಪೇೞ್ವುದುಮಂಬುಜ— ನಾಭನವನ ಮಾತಿನೊಳ್ ಯುಕ್ತಿಯುಂಟೆಂ [ತೆಂ] ದೊಡಮರನದೀ ನಂದ ನೋಪದೇಶದಿಂದಾತಂ ಕೊಳನಂ ಪೊಕ್ಕು ಕಾಲ ವಂಚನೆಗೆಯ್ಯಲಿರ್ದನಕ್ಕು ಮೆಂದಾ ಕೊಳನಂ ಮುಟ್ಟೆವಂದದಱ ತಡಿಯೊಳ್ ಶಂಖಚಕ್ರಹಳಕುಳಿಶ ಲಾಂಛಿತಮಾಗಿರ್ದಡಿವಜ್ಜೆಯಂ ನೋಡಿ ದುರ್ಯೋಧನನ ಪಜ್ಜೆಯಪ್ಪುದೇನುಂ ತಪ್ಪಿಲ್ಲೆಂದು ಕಳಕಳ ನಿನಾದಂಗಳಿಂದಾರ್ದು ಶಂಖಂಗಳಂ ಪೂರಿಸಿಯುಂ ಭೇರಿಯಂ ತಾಡಿಸಿಯುಮೇಗೆಯ್ದುಂ ಪೊಱಮಡದಿರೆ ಭೀಮಸೇನನನ್ನ ಸರಂಗೇಳ್ದಲ್ಲಡೀ ಬೂತು ಪೊಱಮಡುವನಲ್ಲನೀತಂಗಾನೆ ಬಲ್ಲೆನುಸಿರದಿರಿ ಮೆಂದು ಸಕಳ ದಿಗ್ವಳಯ ಭರಿತ ಮಹಾ ಸಿಂಹ—ನಾದದಿಂದಲ್ಲಿಯ ಜಳ ಚರಂಗಳೆರ್ದೆ ಪೌವನೆ ಪಾಱುವನ್ನೆಗಮಾರ್ದು—

ಕಿಱಿಯಂದಿಂದಿತ್ತ ದುರ್ಯೋಧನನೆನಿಸಿದ ವಿಕ್ರಾಂತಮೇನಾದುದೆಟ್ಟಂ
ದಿಱಿವುರ್ಕೆಲ್ಲಿತ್ತೊ ಪಾಂಚಾಳಿಯನೆಳೆವದಟೇನಾದುದೋ ಗಂಡ
ಪೇೞ್ ಪೊ ||

ಚ್ಚಱಿನಂತಾ ಮಾತುಮಿಂತೀಯಿರ [ವೆನೆ] ನಗೆಯುಂ ಮಾಡಿದೈ ಬಂದನೀತಂ |
ಪೆಱನಲ್ಲಂ ದುರ್ಜಯಂ ಕೌರವಕುಳ ನಳಿನೀ ಕುಂಜರಂ ಭೀಮಸೇನಂ ||

ಕುಡಿದೆಂ ದುಶ್ಶ್ಯಾಸನೋರಸ್ಥಳ ವಿಗಳದಸೃಗ್ವಾರಿಯಂ ಕಂಡದಂ ಮು |
ನ್ನಡೆ ನೋಡುತ್ತಳ್ಕಿ ಮಾಣ್ದೈ ನಿನಗಿಱುವದಟಂ ಕೊಟ್ಟರಾರಿಂದು ಮಾಣ ||
ಲ್ಕೆಡೆಯುಂಟೇ ಸಿಲ್ಕಿದೈ ಪೋ ಪೊಱಮಡು ಕೊಳದಿಂ ಸತ್ತ್ರೊಡಂ
ಪುಟ್ಟ ನೀನೀ |
ಗಡೆ ದಲ್ ಕೊಂದಪ್ಪೆನೆನ್ನಂ ಮುಳಿಯಿಸಿ ನಿನಗಿಂ ದ್ರೋಹ ಬಾಱ್ವಾಸೆ
ಯುಂಟೇ ||

ಮಾನಸಿಕೆಯ ದೊರೆಗಿಡೆ ನೀಂ |
ಮಾನಸನೆನೆ ನೀರೊಳೆಲವೊ ನೀನುಂ ಮೀನೆಂ ||
ಬೀ ನೆವದಿರ್ದೆಯಿದೇನಭಿ |
ಮಾನದ ಕಲಿತನದ ಪರಮಪದಮೆಯ್ದಿದೆಯೋ ||

ವ || ಎಂದು ವಿಳಯಕಾಳ ಜಳಧರ ನಿನಾದದಿಂ ಗಜಱಿ ಗರ್ಜಿಸಿದ ಜಟಾಸುರಾರಾತಿಯ ಗಳಗರ್ಜನೆಗೆ ಕರಿ ಕಳಭ ಗರ್ಜನೆಗೇಳ್ವ ಮೃಗರಾಜನಂತೆ ರಾಜರಾಜಂ ಸೈರಿಸದೆ ಚಿತ್ತಸ್ಖಲನೆಯಾಗೆ ಜಳಸ್ತಂಭಮಂತ್ರಮೆಲ್ಲಂ ಮಾಯಾಮಂತ್ರಮಾಗೆ—

ಪಗೆವಂ ಬಂದುಱದಿಂತು ಮೂದಲಿಸೆಯುಂ ಮಾತಂ ಕಿವುಡ್ಗೇಳ್ದು ಕೆ |
ಮ್ಮಗೆ ನೀರೊಳ್ ಮುಱುಗಿರ್ದೊಡಱ್ದು ಕಿಡುಗುಂ ಮಚ್ಛೌರ್ಯಮೆಂ
ದುದ್ಧತಂ ||
ನೆಗೆದಾಗಳ್ ವಿಳಸತ್ಕಿರೀಟ ತಟ ರತ್ನಾಂಶು ಪ್ರಭಾರಾಜಿ ತೊ |
ಟ್ಟಗೆ ಕೆಯ್ಗಣ್ಮೆ ಸುರೇಂದ್ರ ಚಾಪ ರುಚಿಯಂ ಕೆಯ್ಕೊಂಡುದಾ ಪೂಗೊಳಂ ||
ನೆಗೆಯೆ ಪೊದಱ್ದ ಬೊಬ್ಬುಳಿಕೆಗಳ್ ನೆಗೆದಂತೆರಡುಂ ಕೆಲಕ್ಕೆ ನೀ |
ರುಗಿಯೆ ಗದಾಭಿಘಾತ ಪರಿಪೂರಿತ ತೋಯಜ ಷಂಡಮಲ್ಲಿಗ ||
ಲ್ಲಿಗೆ ಕದಡೇಱೆ ಭೀಮ ಭುಜ ಮಂದರ ಘಟ್ಟನೆಯಿಂದಮಲ್ಲಿ ತೊ |
ಟ್ಟಗೆ ಕೊಳೆ ಕಾಳಕೂಟಮೊಗೆವಂತೊಗೆದಂ ಫಣಿರಾಜ ಕೇತನಂ ||

ಮೊದಲಿಂ ಕಿಱ್ತು ಕುಳಾಚಳ ಪ್ರತತಿಗಳ್ ಪ್ರೋದ್ಯದ್ಗದಾ ಘಾತವಾ |
ತದಿನಾಕಾಶಮನೆಯ್ದೆ ತೂಳ್ದಿ ಕವಿತಂದಂಭೋಧಿಯೊಳ್ ಸೂಱು ಸೂ ||
ಱದೆ ಬೀಱ್ತಂದುವು ಬತ್ತಲಾಟಿಸಿದುವಾ ವಾರಾಶಿಗಳ್ ಸುರ್ಕಿ ಬಿ |
ಕ್ಕಿದ ಬಾಯಂತೆ ಸುರುಳ್ದುದಂಬರಮಿದೇಂ ಪೆಂಪೋ ಗದಾಯುದ್ಧದಾ ||

ಗದೆಯೊಳ್ ಘಟ್ಟಿಸೆ ಪುಟ್ಟಿದುಳ್ಕ ತತಿ ನೀಳ್ದಾಕಾಶಮಂ ತಾಪಿಸಂ |
ಪುದಿದಾ ದೇವರ ಕಣ್ಣೊಳುಳ್ಕಿ ವಿಳಯೋಳ್ಕಾಶಂಕೆಯಂ ಮಾಡೆ ಮೆ ||
ಟ್ಟಿದ ಸೂಡ್ಮೆಟ್ಟುಗಳಿಂದೆ ಜೆಟ್ಟು ಕಱಲಲ್ಕಳ್ಳಾಡೆ ಭೂಭಾಗಮಾ |
ದುದು ದುರ್ಯೋಧನ ಭೀಮಸೇನರ ಗದಾಯುದ್ಧಂ ಮಹಾ ಭೈರವಂ ||
ನೆಱನೀತಂಗೂರುಯುಗ್ಮಂ ನೆಱನನಱಿಯದಾನಿನ್ನೆಗಂ ಮಾಣ್ದೆನಿಂ ಪೋ ||
ತೆಱಪಂ ಪಾರ್ದಿರ್ಪೆನೆಂದೊಯ್ಯನೆ ಗದೆಯನಣಂ ಪಾಡುಗೆಯ್ದಿರ್ದುರ್
ಭೋರೆಂ ||
ದೆಱಪುಗ್ರಾರಾತಿಯೂರುದ್ವಯಮನಿಡೆ ಗದಾಘಾತದಿಂದೂರು ಯುಗ್ಮಂ |
ಮುಱಿದೆತ್ತಂ ನುಚ್ಚುನೂಱಾಗಿರೆ ಕೆಡೆದನಿಳಾಭಾಗದೊಳ್ ಧಾರ್ತರಾಷ್ಟ್ರಂ||

ನುಡಿದುದನೆಯ್ದೆ ತುತ್ತತುದಿಯೆಯ್ದುವಿನಂ ನುಡಿದಂ [ವ]ಲಂ ಚಲಂ |
ಬಿಡಿದುದನೆಯ್ದೆ ಮುಂ ಪಿಡಿದುದಂ ಪಿಡಿದಂ ಸಲೆ ಪೂಣ್ದು ಪೂಣ್ಕೆ ನೇ ||
ರ್ಪಡೆ ನಡೆವನ್ನೆಗಂ ನಡೆದನಳ್ಕದೆ ಬಳ್ಕದೆ ತನ್ನೊಡಲ್ ಪಡ |
ಲ್ವಡುವಿನಮಣ್ಮುಗುಂದನೆ ದಲೇನಭಿಮಾನ ಧನಂ ಸುಯೋಧನಂ ||

ವ || ಅಂತು ಸತ್ತುಂ ನೆಲನಂ ಪತ್ತುವಿಡೆನೆಂಬಂತೆ ನೆಲನಂ ಪತ್ತಿ ಮೂರ್ಛಾಗತನಾಗಿರ್ದ ಕುರುಕುಳ ಚೂಡಾಮಣಿಯನೇನುಂ ಮಾಣದೆ ಕಿಮ್ಮೀರವೈರಿ ಮುಟ್ಟಿವಂದಾಗಳೇಕಾದಶಾಕ್ಷೋಹಿಣೀಪತಿಯಪ್ಪ ರಾಜಾಧಿರಾಜನಂ ಪರಾಭವಂಬಡಿಸದಿರೆಂದು ಬಲದೇವಂ ಬಾರಿಸೆ ವಾರಿಸೆ—

ಇದಱೊಳ್ ಮೂರ್ಧಾಭಿಷೇಕಂ ತನಗೆ ಗಡ ಸಮಂತಾಯ್ತು
ಪಿಂಛಾತಪತ್ರಂ |
ಪುದಿದೆತ್ತಂ ತಣ್ಣೆೞಲ್ಮಾಡುವುದು ಗಡಮಿದೆಂತೆಂದುಮಾರ್ಗಪ್ಪೊಡಂ ಪ ||
ರ್ವಿದ ಗರ್ವೋದ್ರೇಕದಿಂ ಬಾಗದು ಗಡಮೆನುತುಂ ಮಾಣಿಕಂ ಸೂಸೆ
ಬಲ್ಪಿಂ |
ದೊದೆದಂ ಸಾರ್ತಂದು ದುರ್ಯೋಧನನ ಮಕುಟಮಂ ಕೋಪದಿಂ ಭೀಮ
ಸೇನಂ ||

ಮಗನೞಲೊಳ್ ಕರಂ ಮಱುಗುತಿರ್ಪಿನಮೆನ್ನ ತನೂಜನಾಳ್ವ ಸಾ |
ಮಿಗಮೞಿವಾಗೆ ಶೋಕರಸಮಿರ್ಮಡಿಸಿತ್ತು ಜಳಪ್ರವೇಶ ಮಿ ||
ಲ್ಲಿಗೆ ಪದನೆಂದು ನಿಶ್ಚಯಿಸಿ ವಾರಿಜ-ನಾಥನನಾಥನಾಗಿ ತೊ |
ಟ್ಟಗೆ ಮು [ೞು ಪ]ಂತೆವೊಲ್ ಮುೞುಗಿದಂ ಕಡುಕೆಯ್ದಪರಾಂಬುರಾಶಿ
ಯೊಳ್ ||

VIJAYA EVENING COLLEGE LIBRARY
BANGALORE-4.
2562

ಅಜಿತ ಪುರಾಣ

ಅತ್ತಿಮಬ್ಬೆ

ಪತಿಯೊಡನೆನ್ನ ತಂಗೆ ದಹನಾರ್ಚಿಯೊಳೊಂದೆ ಮುಹೂರ್ತದೊಳ್ ನಿವೇ |
ದಿತತನುವಾದಳಾಂ ಪಿರಿಯೆನಪ್ಪುದಱಿಂ ಪಿರಿದಪ್ಪ ದಾಡುಣ ||
ವ್ರತದಹನಾರ್ಚಿಯಿಂದನುದಿನಂ ತನುವಂ ತನುಮಾಡುತಿರ್ಪೆನೆಂ |
ಬತನುವಿರೋಧಮುಂ ತನುವಿರೋಧಮುಮೊಪ್ಪುಗುಮತ್ತಿಮಬ್ಬೆಯೊಳ್ ||

ಪತಿವಿಗಮದೊಳಸಿಧಾರಾ |
ವ್ರತಂಗಳಂ ತಾಳ್ದಿ ಧರ್ಮಮಂ ಮಾಡುವ ಸಂ ||
ತತಿಯಂ ಕಾಯುತೆ ಕಾಯ |
ಸ್ಥಿತಿಯಾಯ್ತಾನತ್ತಿಮಬ್ಬೆ ಮಾಣ್ಬಳೆ ಮಾಣಳ್ ||

ಒಡಲನುಪವಾಸದಿಂ ತ |
ನ್ನೊಡಮೆಯುನನವರತದಾನದಿಂ ತವಿಸಿ ಜಸಂ ||
ಬಡೆದಳ್ ನೂರ್ಮಡಿತ್ತೈಲನ |
ಪಡೆವಳ ತೈಲಪನ ಜನನಿಗೆಣೆ ಪೆಱರೊಳರೇ ||

ಶ್ರಾವಕಧರ್ಮದೊಳ್ ದೊರೆಯೆನಲ್ ಪೆಱಿಲ್ಲೆನೆ ಸಂದ ರೇವತೀ |
ಶ್ರಾವಕಿ ತಾನೆ ಸಜ್ಜನಿಕೆಯೊಳ್ ಜನಕಾತ್ಮಜೆ ಶೀಲದೊಳ್ ||
ದೇವಕಿ ತಾನೆ ದಾನಗುಣದಿಂದೆ ಸುಲೋಚನೆ ತಾನೆ ಎಂದು ಭ |
ವ್ಯಾವಳಿ ಮೆಚ್ಚಿ ಬಣ್ಣಿಪುದು ಭವ್ಯಮನೋರಥಜನ್ಮಭೂಮಿಯಂ ||

ಬುಧಜನ ವಂದಿತೆ ಧರ್ಮ |
ಪ್ರಧಾನೆ ದರ್ಶನವಿಶುದ್ಧೆ ದಾನಗುಣೈಕಾಂ ||
ಬುಧಿಯೆನಿಸಿದ ಕವಿವರಕಾ |
ಮಧೇನುವೆಂದೆಂಬುದತ್ತಿಮಬ್ಬೆಯನೆ ಜಗಂ ||

ಮನದೊಳ್ ತಾಳ್ದುವಳೀಸತಿ।
ಜಿನನಂ ಜಿನಜನನಿ ಗರ್ಭದೊಳ್ ತಾಳ್ದುವಳಿಂ॥
ಬಿನಿತೆ ವಿಕಲ್ಪಂ ತೈಲನ।
ಜನನಿಗೆ ಜನಜನನಿಗೇಂ ವಿಕಲ್ಪಮುಮುಂಟೆ॥

ಆಸನ್ನಭವ್ಯೆಯುಂ ಜಿನ।
ಶಾಸನದೀಪಿಕೆಯುಮೆನಿಸಿ ಮಣಿಕನಕಮಯೋ॥
ದ್ಭಾಸಿ ಜಿನಪ್ರತಿಮೆಗಳಂ।
ಸಾಸಿರದಯ್ನೂಱನತ್ತಿಯಿಂ ಮಾಡಿಸಿದಳ್॥

ಸ್ಫುರಿತೋದ್ಯನ್ಮಣಿಘಂಟೆಗಳ್ ಮಣಿವಿತಾನಶ್ರೇಣಿಗಳ್ ಸ್ವರ್ಣಭಾ।
ಸುರದೀಪಂಗಳ ಮಾಲೆ ದಿವ್ಯವಸನಪ್ರಾರಬ್ಧ ಶುಂಭಧ್ವಜೋ॥
ತ್ಕರಮುದ್ಭಾಸಿತರತ್ನ ತೋರಣಗಣಂ ಮಾಡಿರ್ದುವೊಂದೊಂದು ಸಾ।
ಸಿರದಯ್ನೂಱನೆಯತ್ತಿಮಬ್ಬೆಗೆಣೆಯಲ್ಲೀಕಾಲದೊಳ್ ದಾನಿಗಳ್॥

ಉನ್ನತಕುಕ್ಕುಟೇಶ್ವರ ಜಿನೇಶ್ವರನಂ ಜಿನಭಕ್ತೆ ಪೋಗಿ ಕಾ।
ಣ್ಬನ್ನೆಗಮನ್ನಮಂ ಬಿಸುಟು ಪರ್ವತಮಂ ಪರಿದೇಱೆ ತಜ್ಜಿನಾ॥
ಸನ್ನದೊಳತ್ತಿಮಬ್ಬೆಗೆ ಪಥಶ್ರಮಮಾಱಲಕಾಲವೃಷ್ಟಿಯಾ।
ಯ್ತೆನ್ನದೊ ದೇವಭಕ್ತಿಗದು ಚೋದ್ಯಮೆ ಕೊಳ್ಳವೆ ಪುಷ್ಪವೃಷ್ಟಿಗಳ್॥

ಈ ಮಹಿಗೆಲ್ಲಮಗ್ಗಳದ ದಾನಿಯನಗ್ರಣಿಮಾಡಿ ದಾನಚಿಂ।
ತಾಮಣಿಯಂ ನೆಗೞ್ತೆವಡೆದೊಪ್ಪವೆ ಸಾಲ್ಗುಮದರ್ಕೆ ಮುನ್ನ ಚಿಂ॥
ತಾಮಣಿ ಕಾಮಧೇನು ಸುರಭೂರುಹಮೆಂಬಿವನೇಕೆ ಮಾಡಿದಂ।
ತಾಮರಸೋದ್ಭವಂ ಜಡಜಜಂಗೆ ವಿವೇಕಮದೆಲ್ಲಿ ಬಂದುದೋ॥

ಪದೆದೆಱೆದರ್ಥಿಜನಕ್ಕಿ।
ತ್ತುದೆ ಧನಮಿಾಯದುದೆ ಕೆಟ್ಟುದೆಂದರ್ಥಮನೀ॥
ವುದಱಿಂ ತನ್ನಷ್ಟಂ ಯ।
ನ್ನದೀಯತೆ ಎನಿಪುದತ್ತಿಮಬ್ಬೆಯ ದಾನಂ॥

ಕಲಿಯೆನೆ ನೆಗೞ್ದಳ್ ಕಸವರ।
ಗಲಿಯನೆ ಗುಣದಂಕಕಾರ್ತಿ ವೊಸೆಯೊಳ್ ಮಸೆಯೊಳ್॥
ಮೊಲೆವೊತ್ತ ತೈಲ ಜನನಿಯ।
ಕೆಲದೊಳ್ ರಂಜಿಪರೆ ಮಿಾಸೆವೊತ್ತಣಂಗಳ್॥

ಅಳುರದು ಕಿಚ್ಚು ಮುಟ್ಟದು ವಿಷಾಹಿ ಮಹಾಸತಿಯಿರ್ದ ಮಂಡಲಂ।
ಬೆಳೆವುದು ಬೇಡಿದಂತೆ ಮಱೆಕೊಳ್ವುದೆನಿಪ್ಪ ಜಸಕ್ಕೆ ನೋಂತು ಭೂ॥
ತಿಲಕಪವಿತ್ರೆಯುಂ ಗುಣಪವಿತ್ರೆಯನಾಸತಿಯುಂ ಮಹಾಸತೀ।
ತಿಲಕೆಯನತ್ತಿಮಬ್ಬರಸಿಯುಂ ಪೆಸರ್ಗೊಳ್ವುದು ಪುಣ್ಯಕಾರಣಂ॥

ಭ್ರಾಂತೇನಾದಿಪುರಾಣದ।
ಶಾಂತಿಪುರಾಣದ ಸಮಾನಮೆನೆ ಕೃತಿಯುಂ ಕ॥
ಲ್ಪಾಂತಸ್ಥಾಯಿಯನಾಶ್ರಿತ।
ಚಿಂತಾಮಣಿಗತ್ತಿಮಬ್ಬೆಗತ್ತಿಯೆ ಪೇಳ್ವೆಂ॥

ಪೊನ್ನಿಗಸುಂ ಮಲ್ಲಪಸುಂ।
ಪೊನ್ನನುನತ್ತಿಯೆ ಪುರಾಣ ಚೂಡಾಮಣಿಯಂ॥
ಮುನ್ನಂ ಪೇಟಿಸಿದಂತೆ ಗು।
ಣೋನ್ನತ ಕವಿರತ್ನನಿಂದಿದಂ ಪೇಟಿಸಿದಳ್॥

ವೈರಾಗ್ಯ

ತನಗಲ್ಲದೊಡಲ್ಗೊಡಮೆಗೆ।
ಮನಮಿಟ್ಟಪವರ್ಗ ಮಾರ್ಗಮಂ ಪೊರ್ದದೆ ತ॥
ನ್ನನೆ ತಾನೆ ನಂಬಿಸುವೊಡಾ।
ತ್ಮನಂತು ಪೇಟಾತ್ಮವಂಚಕರ್ ಪೆಱರೊಳರೇ॥

ಸಾರದೆ ಸಾರಮಪ್ಪ ಜಿನಧರ್ಮಮನಾತ್ಮನಸಾರಮಪ್ಪುದಂ।
ಸಾರಮಿದೆಂದು ನಂಬಿ ತನಗಲ್ಲದುದಂ ತನಗಪ್ಪುದೆಂದು ಕೇ॥
ದಾರ ವಿಹಾರ ಸೋದರ ಕೃಶೋದರ ಸುಂದರದಾರದಾರಕೋ।
ದಾರವಿಮೋಹದೊಳ್ ತೊಡರ್ದ ದಾರುಣದುಃಖಮನೆಯ್ದದಿರ್ಕುಮೇ॥

ತನು ತಾಳಲಾಱದನ್ನೆಗ।
ಮೆನಸುಂ ನೀನದಱೊಳಾತ್ಮಶಕ್ತಿಕ್ಷಯಮು॥
ಪ್ಪಿನೆಗಮಿರಲ್ಕಕ್ಕುಮೆ ಕಟ।
ದ ನೀರ್ಗೆ ಬಂದಪುದೆ ಬಟಿಕೆ ಜರಗಂ ತಿರ್ದಲ್॥

ಎನಿತೆನಿತು ಕಟಿದ ಭವಮಂ |
ನೆನೆದಪೆಯೆನಿತೆನಿತು ಭವದ ಬಂಧುಗಳಂ ನೀಂ ||
ನೆನೆದಪೆಯೆನಿತೆನಿತೊಡಲಂ |
ನೆನೆದಪೆಯೆಲೆ ಜೀವ ನೀನೆ ಪೇಟ್ ಪವಣೊಳವೇ ||

ಎನಿತಂ ಕುಕ್ಕುಟಗುದಿದಪೆ |
ಯೆನಿತಂ ತಕ್ಕಳಗಟಲ್ದಪೈ ಜೀವನೆ ನೀ |
ನೆನಿತಂ ಮಲ್ಮಲ ಮಱುಗುವೆ |
ಯೆನಿತಂ ಸಂಸಾರದೊಳಗೆ ತಿಱ್ದನೆ ತಿರಿವೈ ||

ಎನಿತಂ ಬೆದವೆದ ಬೆಂದಪೆ |
ಯೆನಿತಂ ಸುಡುಸುಡನೆ ಪುಗುವೆಯೈ ಜೀವನೆ ನೀ ||
ನೆನಿತಂ ಮಲ್ಮಲ ಮಱುಗುವೆ |
ಯೆನಿತಂ ಭವಗಹನದೊಳಗೆ ಬಟ್ಟನೆ ಬರ್ಪೈ ||

ಕಡೆಯಿಲ್ಲದ ಸಂಸಾರದ |
ಕಡೆಗಾಣಲ್ಬಗೆವೆಯಪ್ಪೊಡೆನ್ನುಕ್ತಿಗೊಡಂ ||
ಬಡು ಜೀವ ನಿನ್ನ ಕಾಲಂ |
ಪಿಡಿವೆಂ ಧರ್ಮಮನೆ ಮಗುಳೆ ಬಲ್ಪಿಡಿವಿಡಿಯಾ ||

ಜವನಟ್ಟಿ ಕೊಲ್ವ ಕೊಲೆಗಾ |
ಜವಂಜವಸ್ಥಿತಿಗೆ ಮೆಯ್ಯ ನೀರ್ತೆಗೆವನ್ನಂ ||
ಜವಜವಜವನಂಜಿಸಿದುವು |
ಜವನಾಳ್ಗಳ ತೆಱದಿನೆನ್ನ ಕೆನ್ನೆಯ ನರೆಗಳ್ ||

ಮೆಲುಕಂ ಸವಿಯಱಿಸುವ ಗಾ |
ವಿಲರಿರ್ಪವರಿರ್ಪೊಡಿರ್ಕೆ ಮೆಳ್ಪಟ್ಟು ಜವಂ ||
ಕೊಲೆ ಕಾವರೊಳರೆ ಧರ್ಮಮೆ |
ತಲೆಗಾಯ್ಗುಂ ಧರ್ಮಮಾರ್ಮಮುಭಯಭವಕ್ಕಂ ||

ಕರಗುವ ಮುಗಿಲಂ ಕೆನ್ನೆಯ |
ನರೆಯಂ ಕಂಡನಿತಱಿಂ ಕೆಲರ್ ಪರಮತಪೋ ||
ಭರದೊಳ್ ಭರದೊಳ್ ನೆಗಟಲ್ |
ಗುರುಬಂಧುಪ್ರಿಯ ವಿಯೋಗಮಂ ಕಂಡು ಕೆಲರ್ ||

ನರರರೆಬರ್ ವೈರಾಗ್ಯಂ |
ದೊರಕೊಂಡೊಡೆ ತೊಱೆವೆವೆಂಬರನ್ನೆವರಂ ಸ ||
ಯ್ತಿರಲೀಯದಂತಕಂ ಗೋ |
ಣ್ಮುರಿಗೊಂಡೆಱೆದುಯ್ವೊಡಡ್ಡಬರ್ಪರುಮೊಳರೆ ||

ಮುಸುಮೊಗವಾಯ್ತು ಮೊಗಂ ಕಾ |
ಲ ಸುತ್ತುಗಂ ಪೋಯ್ತು ಪಲ್ಗಳಳ್ಳಾಡಿದುವೇ ||
ಡಿಸುವಂತಿರ್ದಪರಿನ್ನುಂ |
ಬಿಸುಡಿರೆ ನೀವಜ್ಜ ನಿಮ್ಮ ನಿರ್ಲಜ್ಜಿಕೆಯಂ ||

ಎಮ್ಮಾನೆಯೆಮ್ಮ ಕುದುರೆಯಿ |
ವೆಮ್ಮರಸಿಯರೆಮ್ಮ ಮಕ್ಕಳಿವರೆಂಬೀ ಮ ||
ತ್ತಮ್ಮನದೊಳ್ ಕೆಯ್ಗ‌ಳಿಯೆ ಗು |
ಳುಮ್ಮನೆ ರಸೆಗಿೞಿದರೆನಿಬರಾನುಮಿಳೇಶರ್ ||

ಪುಡುಕೆಯು ಪೊಂಗಳಾರೊಡನೆ ಭೂತಳಮಾರೊಡನಂಗನಾಳಿಯಾ |
ರೊಡನೆ ಗಜಂಗಳಾರೊಡನೆ ವಾಜಿಗಳಾರೊಡನಾಪ್ತತಂತ್ರಮಾ ||
ರೊಡನೆ ರಥಂಗಳಾರೊಡನೆ ಚಾಮರಮಾರೊಡನಾತಪತ್ರಮಾ |
ರೊಡನೆ ವಿಭೂತಿಯಾರೊಡನೆ ಪೋದುವು ರಾಜ್ಯಮನೆಂತೊ ನಂಬುವರ್ ||

ಕರಿ ಪೋಗವು ಹರಿ ಪೋಗವು |
ಪರಿವಾರಂ ಪೋಗವೊಡನೆ ನಡೆಪಿದ ನಾಲ್ವರ್ ||
ನೆರಮಾಗಿ ಪೋಗರಂತಕ |
ಪುರಕ್ಕೆ ಪೋಪೆಡೆಯೊಳರಸರೋರ್ವರೆ ಪೋಪರ್ ||

ಇತ್ತ ನಿಷೇಕಮಾಗೆ ಗುರುಗತ್ತಭಿಷೇಕವಿಭೂತಿಗೊಂದುಗುಂ |
ತತ್ತನಯರ್ಕಳೊಳ್ ಮೃತಕತೂರ್ಯಮೆ ಮಂಗಳತೂರ್ಯಮಕ್ಕುಮಾ ||
ಸತ್ತವರೆತ್ತ ನೀರಿೞಿವರೆತ್ತ ಜನಂ ನೆರೆದಿಂಡೆಯಾಡಿ ಪಾ |
ಡುತ್ತೆಸೆದಿರ್ಪರಿಂತು ಮೃತಿರಾಜವಿಡಂಬಮನೇಕೆ ಕಾಣ್ಬಿರೇ ||

ತಪಃ ಪ್ರಯಾಣ

ಜಿನ ಪಿತೃಗಳ್ ಜಿನತನಯಂ|
ಜಿನೇಂದ್ರತವರೆಲ್ಲಮೊಡನೆ ತಳರಲೊಡಂ ಬಿ ||
ಮ್ಮನೆಯಾಗಿ ಮದುವೆಗಳುಪಿದ|
ಮನೆಯಂದದಿನಿರ್ದುದಂದಯೋಧ್ಯಾಸಗರಂ ||

ದಿನಕರನಿಲ್ಲದಂಬರಮುಮಾಮ್ರಮಹೀರುಹಮಿಲ್ಲದೊಂದು ಕಾ|
ನನಮುಮರಲ್ದ ಪಂಕರುಹಮಿಲ್ಲದ ಪೂಗೊಳನುಂ ಪನೇಭವಮಂ ||
ಡನನೆನೆ ಸಂದ ಯೂಥಪತಿಯಿಲ್ಲದರಣ್ಯಮುಮೇಂ ತ್ರಿಲೋಕಮಂ|
ಡನನೆನೆ ಪೆಂಪುವೆತ್ತಜಿತನಿಲ್ಲದಯೋಧ್ಯೆಯುಮೊಪ್ಪಲಾರ್ಕುಮೇ ||

ಇಂಪಿಲ್ಲದ ಕೇದಗೆಯುಂ|
ಕಂಪಿಲ್ಲದ ಪೂ ಸುಪುತ್ರನಿಲ್ಲದ ಭವನಂ ||
ಪೆಂಪಿಲ್ಲದ ಕುಲವಧು ಗೃಹ|
ಸಂಪತ್ತಿಲ್ಲದ ವಿಳಾಸಮೇಸೊಪ್ಪುಗುಮೇ ||

ಮಲ್ಲಿಲ್ಲದ ಬಳಮುಂ ಮೂ|
ಗಿಲ್ಲದ ಮೊಗಮಾಸೆಯಿಲ್ಲದರಮನೆ ಸಂಪ ||
ತ್ತಿಲ್ಲದ ಮಾನಸವಾಳ್ ದಯೆ|
ಯಿಲ್ಲದ ಧರ್ಮಂ ಮನಂಗೊಳಲ್ ನೆಱೆದಪುದೆ ||

ವ || ಎಂಬಂತೆ ಬಿನ್ನನಾದ ಪೊಟಲಂ ಪರಮೇಶ್ವರನ ಒಟಿವಟಿಗೊಂಡು ಪೋಪ ಪುರಜನಂಗಳುಮಂ ಕಂಡು ಅಂತಃಪುರದೊಳಿರ್ದ ಸಹಸ್ರಾಂಗನೆಯರಾಕುಳ ವ್ಯಾಕುಳೆಯರಾಗಿ,

ದೇವನನಾಲೋಕಾಂತಿಕ|
ದೇವರ್ ಬಂದೇನನಪ್ಪೊಡಂ ಗಳಪಿ ತಪೋ ||
ಭಾವನೆಗೆಱಗಿಸಿದರ್ ನಮ|
ಗಾವುದು ಸೂಟಕ್ಕ ಪೇಟಮಿನ್ನೇಗೆಯ್ವೆಂ ||

ಎಲ್ಲಿಲ್ಲದ ಸುರಗಣಿಕೆಯ|
ರೆಲ್ಲಿಲ್ಲದ ದೇವಿಯರ್ಕಳಗಲರುಸಿರ್ಪ ||
ತ್ತಿಲ್ಲ ನಮಗವರೆ ಜಗತೀ|
ವಲ್ಲಭನಂ ಪಚ್ಚಿ ವಚ್ಚಿ ಮುಚ್ಚಿಸಿಕೊಂಡರ್ ||

ವ || ಅಂತು ಕೆಲರಲ್ಲಿ ವಿವೇಕವಿಕಳೆಯರಾಗಿ ನುಡಿಯೆ ವಿವೇಕಿಗಳಂ ಬರಿಸಿ,

ಸುರಲೋಕಸುಖಮನೊಲ್ಲದೆ |
ನರಲೋಕಕ್ಕಿರದೆ ಬಂದು ಮುಕ್ತಿಶ್ರೀಯೊಳ್ ||
ನೆರೆಯಲ್ ಪೋದಪನಱಿಯಿರೆ |
ಸುರವಧುವರಸಂತು ಬಗೆದು ಪುಟ್ಟನೆ ದೇವಂ ||

ಕಳೆ ಸಿರಿಗನ್ನಡಿಯುಂ ಮಂ |
ಗಳವಸದನಮೇವುದಕ್ಕ ಕಾಲಲತಗೆಯುಂ ||
ಕಳೆ ತೊಡೆದು ಕಣ್ಗೆ ಕಜ್ಜಲ |
ವಿಳಾಸವಿನ್ನೇವುದೆಮಗವೇಗೆಯ್ದಪುವೋ ||

ಕಳೆ ಸೀಗುರಿಯುಂ ಡವಕೆಯ |
ನೊಳಗಿಡು ಚಾಮರಮನಿಕ್ಕದಿರು ಸಕಳ ಜಗ ||
ತ್ತಿಳಕನುಟಿದಿರ್ದ ಮೆಯ್ಮೆಯು |
ವಿಳಾಸಮೆಮಗಾತನಿಲ್ಲದೆಂತೊಪ್ಪುಗುಮೋ ||

ಬಿಡಿಮಿಂ ದೀವದ ರಾಜಹಂಸೆಗಳನಿನ್ನೀರಾಜಕೀರಂಗಳಂ |
ಬಿಡಮಿಂತೀ ಮೃಗಪೋತಕಂಗಳನಿವಂ ಕೊಂಡುಯ್ದು ಕಾಂತಾರದೊಳ್ ||
ಬಿಡಿಮೀ ಬಾಜಿಪ ಬೀಣೆಯುಂ ತಿಸರಮಂ ಕೊಳ್ಳೆಂದು ಬಲ್ಲಂಗಿವಂ |
ಕುಡಿವೇಗೆಯ್ದಪೆಮಾಮಿವಕ್ಕೆಮಗಿವಿರ್ದಿನ್ನೆಲ್ಲಮೇಗೆಯ್ವುದೋ ||

ಎಂದು ಪರಿಚಾರಗಣಕ್ಕಪ್ಪಯಿಸಿ

ನಿಮಗೆಂದಪ್ಪೊಡಮಾಮಱಿ |
ಯೆ ಮನಃಕ್ಷತಮಾಗಿಯುರಿಯುದೆಮ್ಮಿಂದಮಿದಂ ||
ಸಮವಾಯುಂ ಮಾಡಿದೊಡಂ |
ಕ್ಷಮಿಯಿಪುದೆಂದೆರೆದರಜ್ಜರಂ ಗುಜ್ಜರುಮಂ ||

ಅಂತೊರೆದನಿಬರುಮೊಂದೆಡೆಗೆ ವಂದು

ಇಂದಜಿತಂ ತಪೋವನಕೆ ಪೋದಸಧೀಶನೆ ಪೋಗೆ ಮಾಣಲಾ |
ಗೆಂದೊಡವೋಗಲಿರ್ದೆಮವರಿಂ ಬೆಸಕೇಳ್ದಪೆಮೆಂದು ಸಮ್ಮತಾಯ್ ||
ತಂದೆಗೆ ಪೇೞ್ದು ಬನ್ನಿಮೊಡನಾಡಿದ ಮೇಳದವಳ್ದಿರೆಲ್ಲಮೇ |
ನೆಂದಪಿರಕ್ಕ ನೇಲ್ದಳಿಪಿ ಮಾಣ್ದೊಡೆ ದುರ್ಜನಮಲ್ತೆ ಸಜ್ಜನಂ ||

ವ || ಎಂದು ಪರಿಚ್ಛೇದಂಗೆಯ್ದನಿಬರುಂ ನಿತಂಬಿನಿಯರ್ ತಂತಮ್ಮ ಚೆಂಬೊನ್ಮಾಡದ ನೆಲೆಯನೇಱಿ ನಿಜಗೃಹೋಪವನಕ್ಕೆ ಮುಂ ನೀರೆಱೆದು ನಡಪಿ ಬೆಳೆಯಿಸಿದ ಬಾಳಾಶೋಕ ಪಾದಪಾದಿಗಳ್ಗೆ ಮುಕುಳಿತಾಂಜಲಿಯರಾಗಿ,

ಲಲಿತಲತಾಲಯಂಗಳಿರ! ಸುಂದರಕಾನನಚಂದನದ್ರುಮಂ|
ಗಳಿರ! ತಳಿರ್ತಶೋಕೆಗಳಿರಾ! ಸಹಕಾರತಮಾಲಭೂರುಹಂ||
ಗಳಿರ! ವಿಯೋಗಮಾದುದೆಮಗಂ ನಿಮಗಂ ಬೆಸಕೆಯ್ವೆಮೆಂದು ಎ|
ಹ್ವಳೆಯರಗಲ್ಕೆಯೊಳ್ ನೆಗಪಿದರ್ ಬಸಮಲ್ಲದ ಬಾಷ್ಪವಾರಿಯಂ||

ಎಲೆ ಪರಪುಷ್ಟ ಕೇಳೆಲೆ ಮಧುವ್ರತ ಕೇಳೆಲೆ ರಾಜಕೀರ ಕೇ|
ಳೆಲೆ ಕಳಹಂಸ ಕೇಳೆಲೆ ಸರೋಜಿನಿ ಕೇಳೆಲೆ ಚೂತರಾಜ ಕೇ||
ಳೆಲೆ ವನರಾಜಿ ಕೇಳ್ ನೆನೆಯುತಿರ್ಪುದು ಕೂರ್ಪುದು ಸೈರಿಸಿರ್ಪುದ|
ಗ್ಗಲಿಸಿದ ನಲ್ಮೆ ತಣ್ಮಲೆಯೆ ಬೆನ್ನನೆ ಪೋದಪೆಮೆಮ್ಮ ಸಾಮಿಯಾ||

ಪಾರ್ವನ ಪುಯ್ಯಲ್

ವ|| ಅಂತು ಕೆಯ್ಯ ತೊವಲ್ವೆರಸು ಮೆಯ್ಯಱಿಯದೆ ಪುಯ್ಯಲಿಡುವ ಪಾರ್ವನ ಪುಯ್ಯಲಂ ಆಸ್ಥಾನಮಂಟಪದೊಳೋಲಗಂಗೊಟ್ಟಿರ್ದರಸಂ ಕೇಳ್ದಿನ್ನೆವರ ಮೆನ್ನರಾಜ್ಯದೊಳೆಲ್ಲಿಯುಂ ಮಱೆದಪ್ಪೊಡಂ ಕೇಳ್ದಱಿಯೆನಿಂದಶ್ರುತಪೂರ್ವ ಮಪ್ಪ ಕರುಣಾಕ್ರಂದನಮಂ ಕೇಳ್ದೆನೆಂದು ವಿಸ್ಮಯಂಬಟ್ಟು ಧರಾಮರಂಗೆ ಬಱಿಯನಟ್ಟಿ ಬೆಸಗೊಳೆ

ಭರತನೃಪಂ ಮುನ್ನ ಧರಾ
ಮರಜನಮಂ ಪಡೆದನವನ ಪಡೆದಿರ್ದ ಧರಾ
ಮರವೇಷದೆನ್ನಸುವನು
ದ್ಧರಿಪುದು ನೀಂ ಸಗರ ದುಃಖಸಾಗರದಿಂದಂ||

ಪರಕೆಗಳನುಯ್ದು ಕೊಟ್ಟೆಂ
ಪರಮೇಶ್ವರಿಗಳ್ಗೆ ಪೋಗಿ ಪಾಳಂ ಬಿಟ್ಟೆಂ
ನರನಾಥಪುಣ್ಯಪುಂಜ
ಸ್ವರೂಪನಂ ಪಡೆದೆನೋರ್ವನಂ ನಂದನನಂ

ಪಡೆದು ವಿವಾಹೋತ್ಸವಮಂ
ತಡೆಯದೆ ಮಾಱ್ಪಲ್ಲಿ ಬಂದು ಜವನೆಂಬ ಸಿಡಿಲ್
ಸಿಡಿಲೆಱಗಿದುದಾನುಂ ನಿ
ನ್ನಡಿಗೆಱಗಿದೆನೆನ್ನ ಮಗನನೀಯಲೆವೇೞ್ಕುಂ||

ಶರಣಾಗಾ ದ್ವಿಜನೆನ್ನಂ
ಕರುಣಿಸು ನೀನೆನ್ನ ಮಗನನಂತಕಪುರದಿಂ
ತರವೇಬ್ಬುದೆನಗೆ ಮರಣಂ
ಶರಣಂ ಮೇಣಿನಿತೆ ನಿನ್ನ ಚರಣಂ ಶರಣಂ ||

ದ್ವಿಜವಂಶಜನಾ ಭರತಂ
ಸೃಜಿಯಿಸಿದಂ ಚಕ್ರವರ್ತಿ ನೀನುಂ ಚಕ್ರ
ಧ್ವಜನೈ ಬಡವನೋರ್ವ
ದ್ವಿಜಸುತನಂ ದೇವ ಕಾವುದೇನರಿದಾಯ್ತೆ ||

ವ || ಎಂದು ಕರುಣಮಾಗಿ ಬಾಯುಟಿದು ಪುಯ್ಯಲ್ಚಿ ತನ್ನ ಮೂದಲಿಸಿ ನುಡಿಯೆಯಾ ದ್ವಿಜನ ನುಡಿಯಂ ಕೇಳ್ದು ವಿಸ್ಮಯಾಕ್ರಾಂತಸ್ವಾಂತನಾಗಿ,

ಬೆಸಕೆಯ್ಯದ ಮಂಡಲಮುಂ
ಬೆಸಕೆಯ್ಸಿ ಯುಂಮೆಱಗದವರನೆಱಗಿಸಿಯುಮುಪಾ
ರ್ಜಿಸಿದೆನ್ನ ಯಶಃಪ್ರಸರಂ
ಮಸುಳ್ವಂತಾಗಿರ್ಕುಮಿಾ ದ್ವಿಜನ್ಮನ ನುಡಿಯಿಂ ||

ಬಡವಂ ಪಾರ್ವನಪತ್ಯಶೋಕವಿಕಳಂ ಬಂದೆನ್ನ ನೀಯಂದದಿಂ
ನುಡಿದಂ ಸತ್ತರನೆತ್ತಲಾರ್ಪರೊಳರರ್ಥಿಪ್ರಾರ್ಥನಾಭಂಗದಿಂ
ಕಿಡುಗುಂ ನಿರ್ಮಳಕೀರ್ತಿಲಕ್ಷ್ಮಿ ಪೆಱತೇನೇನೆಂದಮೆಂತೆಂದುಮಿಂ
ನುಡಿಯಲ್ಕಾವುದುಮಿಲ್ಲ ಪಾರ್ವನೊಳಿದಕ್ಕೇಗೆಯ್ವೆನೆಂತಕ್ಕುವೋ ||

ಸತ್ತರನೆತ್ತುವುದೆಂಬುದ
ದೆತ್ತಣಮಾತಘಟಮಾದುದೀ ಪಾರ್ವಂ ತಾಂ
ನೆತ್ತೆತ್ತ ಬಂದು ಮೂಡಿದ
ನೆತ್ತೆತ್ತೆನಗಿನಿತು ದುರ್ಯಶಂ ಮಾಡಿದನೋ ||

ವ || ಎಂದು ಚಿಂತಿಸುತಿರ್ದ ತಮ್ಮರಸನ ಚಿತ್ತವೃತ್ತಿಯನಱಿದು ಬುದ್ಧಿಸಾಗರನೆಂಬ ಪುರೋಹಿತನೆಂದನೆಂದುಂ ತಮ್ಮೊಳೋರೊರ್ವರಪ್ಪೊಡಂ ಸತ್ತಱಿಯದರ ಮನೆಯುಪುಲ್ಲಂ ಕಿರ್ಚುಮಂ ಕೊಂಡು ಬರ್ಪುದು, ಮೇಣ್ ಬರ್ಪೊಡಂ ನಿನ್ನ ಮಗನ ಪಡೆವೆನೆಂದೊಡಾ ನುಡಿಯನಱಿದುಮಱಿಯದಂತೆ ಕಿಱಿದಂತರಂಬರಂ ಪೋಗಿ ಮಗುಳೆ ಬಂದೆಲ್ಲಿಯುಂ ಪಡೆದೆನಿಲ್ಲೆಂಬುದುಂ, ಆತನಂ ಮೆಲ್ಲಮೆಲ್ಲನೆ ಮಾತಾಡಿಸಿ

ಪಗಲಿರುಳೆಳಜೊನ್ನಂ ಕಾಳವೆಂಬುಕ್ತಿ ಚಿತ್ರಂ
ಬುಗೆ ನೆರೆದರಗಲ್ವರ್ ಪುಟ್ಟುವರ್ ಪೊಂದುವರ್ ನೀಂ
ಬಗೆಯ ಮರುಳೆ ಕಾಳಾಭೀಳವಕ್ತ್ರಾಂತಮಂ ದಲ್
ಪುಗದರೊಳರೆ ಪೇೞ್ ನಿಮ್ಮಜ್ಜಪಜ್ಜರ್ಕಳಾರುಂ ||

ಮಱೆವುದು ದುಃಖಮನಱಿವಂ
ಮೆಱೆವುದು ಸ್ವೈರಿಪುದು ಮುಂತೆ ನೀಂ ಪೋಗಾನುಂ
ಪೆಱಗನೆ ಬಂದಪೆನೆಂಬೀ
ತೆಱನಲ್ಲದೆ ಜವನ ಬಾಱಿಯೊಳ್ ಬರ್ದುಕುವರಾರ್ ||

ಆರಾರಂ ನುಂಗಿದನಿ
ಲ್ಲಾರಾರಂ ನೊಣೆದನಿಲ್ಲ ಸವಿನೋಡಿದನಿ
ಲ್ಲಾರಾರಂ ಸುರಮಾನವ
ನಾರಕತಿರ್ಯಕ್ ಸಮೂಹಮಂ ಯಮರಾಜಂ ||

ಬಡವಂ ಬಾೞ್ಗೆಂಗುಮೊ ಸಿರಿ
ಯೊಡೆಯಂ ಮಾಣ್ಗೆಂಗುವೋ ತಪಸ್ವಿಗಳಿವರಂ
ಕಡೆಗಣಿಸುವೆನೆಂಗುಮೊ ಪೆ
ಣ್ಪಡೆಯೆಂಗುಮೊ ತುೞಿದು ಪರಿಗುಮಂತಕರಾಜಂ ||

ಆಯು ನೆಱೆವಿನೆಗಮಿರ್ಪನೆ
ಜಾಯೆಂಬನೆ ಮೂಣ್ಬನಿಂದಿನೊಂದಿವಸಮನ
ಧ್ಯಾಯಂಮಾಡುವನೆಂಬನೆ
ಬಾಯುೞಿದಡೆಯುಡೆ ಜನಂಗಳಂ ಜವಸುಯ್ವಂ ||

ಏಂ ನಿಷ್ಕರುಣಿಯೊ ಪಸುಮಗ
ನೆನ್ನದೆ ಮತ್ತಾಣ್ಮನೆನ್ನದಱಿವುಳ್ಳಂ ಬಾ
ೞ್ಗೆನ್ನದೆ ಮರುಳಕ್ಕಟ ಮಾ
ಣೆನ್ನದೆ ಮುಂಬಿಟ್ಟು ಕೊಂದಪಂ ಯಮರಾಜಂ ||

ಕುಲಜಂ ಕುಲಹೀನನಿವಂ
ಕಲಿ ಪಂದೆಯಿವಂ ಮಹಾಭಿಮಾನಿಯಿವಂ ನಾ
ಣಿಲಿಯಿವನೆನ್ನದೆ ಪಲರಂ
ನಲಿಸಲಿದಾಟಂದು ಕೊಂದಪಂ ಯಮರಾಜಂ ||

ಕಟ್ಟಿದ ಕುಱಿಗಳ್ ಬೋನದೊ
ಳಟ್ಟೇಱಿಸಿ ಬಯ್ತ ಬಾಡುಗಳ್ ಬಡ್ಡಿಸಿ ತಂ
ದಿಟ್ಟಾ(ಖಾ?)ದ್ಯಂಗಳ್ ಮುಂ
ದಿಟ್ಟ ನಿವೇದ್ಯಂಗಳಂತಕಂಗೆ ಜನಂಗಳ್ ||

ಮೊಱೆಯಿಡೆಯಿಡೆ ಕೂಗಿಡೆಯಿಡೆ
ದಱದಱಮೆಂದೆದೆದು ಪುಯ್ಯಲಿಡೆಯಿಡೆ ಕೊಲ್ವಂ
ಕುಱಿಯಂ ಕೊಲ್ವಂತಿರೆ ತಿಱಿ
ಕೊಱೆಗೊಂಡು ಜಗಜ್ಜನಂಗಳಂ ಯಮರಾಜಂ ||

ಮೃತಪಟಹಂ ಜಯಪಟಹಂ
ಚಿತಾಗ್ನಿಧೂಮಂ ಜಯಧ್ವಜಂ ಜನಕರುಣಾ
ರುತಿ ಜಯಮಂಗಳರುತಿಯೆನೆ
ಕೃತಾಂತರಾಜಂಗೆ ರಾಜ್ಯಚಿಹ್ನಮಿದಲ್ತೆ ||

ಆ ಜಗದೇಕಕಂಟಕನಾ ಬಹುಬಕ್ಷಿಯನಾತ್ರಿಲೋಕಪಂ
ಕೇಜಸಮುತ್ಥಜೀವಮಕರಂದಮದಾಳಿಯನಾಪರಿಸ್ಫುರ
ತ್ತೇಜಸನಂಗಜಾಂತಕನಮೋಹನಘಾಂತಕನಂತಕಾಂತಕಂ
ಶ್ರೀಜಿನರಾಜನಲ್ಲನುಟಿದೊಂ ಗೆಲಲಾರ್ಕುಮೆ ಮೃತ್ಯುರಾಜನಂ ||

ಎಂದು ಬುದ್ಧಿಸಾಗರನುಂ ತನಗೆ ಸಂಸಾರಸ್ವರೂಪನಱಿಪಿ ಸದ್ಧರ್ಮೋಪದೇಶಂಗೆಯ್ದಾಗಳಾ ಬ್ರಾಹ್ಮಣಂ. . . ಇವರನಿವರ ನುಡಿಯೊಳ್ ತೊಡರ್ಚುವೆನೆಂದು

ಈ ನಿನ್ನ ಪೇಟ್ದ ಧರ್ಮಮಿ
ದೇನೆನಗೆಯೊ ನಿನಗಮುಂಟೊ ನಿನಗುಳ್ಳೊಡದಂ |
ನೀನಱಿಪುವುದೆನೆ ದರಹಸಿ
ತಾನನನೆಂದಂ ನರೇಂದ್ರನೆನಗದು ಮುನ್ನಂ ||

ಉಂಟೆಂಬುದು, ನಿನ್ನಱುವತ್ತು ಸಾಸಿರ್ವರ್ ಮಕ್ಕಳುಮಿಂದು ದೃಷ್ಟಿವಿಷಮ ವಿಷಧರನಿಂ ಭಸ್ಮಾವಶೇಷರಾದರೆಂಬುದಂ ಸಂಸಾರಿಜೀವಂಗಳಂದು ಪುಟ್ಟಿದರಂದೆ ಸತ್ತರೆಂಬುದಿದೇಂ ಚೋದ್ಯಮೆಂಬುದು, ಮುನ್ನಿನಂತೆ ಧರ್ಮಕಥಾಕಥನದೊಳಿರ್ಪನ್ನೆಗಮಶ್ರುಜಲವಿಲುಳಿತವಿಲೋಚನನುಮಪಗತೋತ್ತರೀಯನುಂ ಮನ್ಯೂದ್ಗತಕಂಠನುಮತಿಪ್ರಚುರವಿಪ್ರಲಾಪಾಕ್ಷರ ಮುಖರಮುಖನುಂ ಅಸಹ್ಯಶೋಕಪಾವಕಶಿಖಾಕಲಾಪ ಸಂತಪ್ಯಮಾನಮಾನಸನುಂ ಭಗ್ನಮನೋರಥನುಮಾಗಿ ಭಗೀರಥಂ ಬಂದು ತಂದೆಯ ಮುಂದೆ ಮೆಯ್ಯನೀಡಾಡಿ—

ಬೆಸನೆಂದು ಪೂಣ್ದು ದೇವರ
ಬೆಸನಂ ಸುಕುಮಾರರೆನಿಪ ರಾಜಕುಮಾರರ್
ಬೆಸದಪ್ಪಿದರೆನಗನಿತೊಂ
ದು ಸೈಪು ಸಮನಿಸದೆ ಬರ್ದುಕಿ ಬಂದೆಂ ನೃಪತೀ ||

ಎನಲೊಡಮಾಮಾತಂ ಕೇ
ಳ್ದನಭ್ರವಜ್ರಾಭಿಘಾತಮಾದಂತೆ ಸಭಾ-
ಜನಮೆಲ್ಲಂ ಮೋಹಿಸೆ ಭೋಂ
ಕೆನೆ ಹಾಹಾಕ್ರಂದಮೊಗೆದುದಂತಃಪುರದೊಳ್ ||

ಅವಿರಳಗಳದಶ್ರುಜಲ
ಪ್ರವಾಹಮುದ್ದೃಪ್ತ ಪುತ್ರಶೋಕಾವೇಗಂ
ದಿವಸಂ ಕೆಡೆದಿರ್ದುದು ಷ!
ಣ್ಣವತಿಸಹಸ್ರಾಂಗನಾಳಿ ನೃಪನಡಿವೊದಲೊಳ್ ||

ಬಾಳಂ ಕಿತ್ತಂಜಿಸಿ ಬಾ-
ಯ್ಕೇಳಿಸಿ ಷಟ್ಖಂಡಭರತಮಂ ಕಲಿಯೈ ಬ|
ಲ್ಲಾಳೆನೆ ನೆಗಳ್ದೈ ಧರಣೀ
ಪಾಳ ನಿಜಾತ್ಮಜರನೇಕೆ ರಕ್ಷಿಸದಿರ್ದೈ ||

ಪಡೆವುದು ಮೇಣ್ ನಂದನರಂ
ನಡೆವುದು ಮೇಣ್ ತಪಕೆ ಸಗರವಲ್ಲಭ ಮತ್ತಂ|
ಪಡೆವುದೊ ತನಯರ್ಕಳ ಪಿಂ
ಬಡಿನೊಳ್ ಪೇಟೆಮಗರಸ ಮಾನಸವಾಳೇ ||

ಎಂದು ವಿಪ್ರಲಾಪಂಗೆಯ್ಯೆ—

ಅರಸಿಯರ ಕಣ್ಣ ನೀರ್ಗಳ
ಬೆರಸಿದ ಕಾಡಿಗೆಯ ಕರ್ಪು ಪೋಲ್ತತ್ತು ಕುಚಾಂ|
ತರದೊಳ್ ಬೀೞುತ್ತುಂ ತ|
ತ್ಪರಿತಾಪಜ್ವಲನ ಧೂಮಧೂಮ್ರಚ್ಛವಿಯಂ||

ಅನಿತೊಂದು ಶೋಕವೇಗಂ
ತನಗಾಗೆಯುಮಚಲಿತಸ್ವರೂಪದಿನಿರ್ದಂ
ಕನಕನಗಂಬೊಲ್ ಸಗರನ
ಮನಮಂ ಸಾಗರದ ಗುಣ್ಪನೞಿವರುಮೊಳರೆ ||

ಅಸಿಲಾಹತಿಯಿಂ ಚಳಿಯಿಕು
ಮನೋಕಹಾನೀಕಮದ್ರಿ ಚಳಿಯಿಕುಮೆ ಪೃಥ|
ಗ್ಜನದಂತುದಾತ್ತ ಚಿತ್ತಂ
ಜನಪತಿ ಧೈರ್ಯಾಂಬುರಾಶಿ ಚಳಿಯಿಸಿದಪನೆ ||

ಬಳಸಿದ ಪೊರೞ್ವಂಗನೆಯರ
ಬಳಗದಿನವರಶ್ರುಜಲದಿನನಿಲಾಹತಿ ಚಂ|
ಚಳಲತೆಯಂ ನಿರ್ಜರಮುಮ
ನೊಳಕೊಂಡು ಸುವರ್ಣಗಿರಿಯನರಸಂ ಪೋಲ್ತಂ ||

ಅಂತು ಧೈರ್ಯಾವಷ್ಟಂಭ ಗಂಭೀರನಾಗಿ—

ಅರಸ ಕೃತಾಂತನುಯ್ದು ಸುತರಂ ಪಡೆದೀಯೆಮಗೆಂದು ಕಾಂತೆಯರ್
ನುಡಿದಪರೆನ್ನ ಪೆತ್ತ ಮಗನಂ ಪಡೆದೀಯೆನಗೆಂದು ಪಾರ್ವನುಂ
ನುಡಿದಪನಯ್ಯ ಸತ್ತವರಸೆತ್ತುವರಾರ್ ಮತಿಗೆಟ್ಟರಕ್ಕಟಾ
ಬಡವುಗಳೀ ಕುಲಾಂಗನೆಯರೀ ಬಡಪಾರ್ವನ ಸಂಟರಾಗರೇ ||

ಎಂದು 'ಸಮಶೀಲವ್ಯಸನೇಷು ಸಖ್ಯ' ಮೆಂದವರ ದೀನಾನನಂಗಳಂ ನೋಡಲಾಱದೆ ಮನಮಂ ಬಲಿದು ಸಿಲೆ—

ಪರಿಜನಮುಂ ಪುರಜನಮುಂ
ನೆರೆದನಿಬರ್ ತಮ್ಮೊಳರಸನೇಂ ಕಲ್ಲೆರ್ದೆಯೋ|
ಮರವಾನಿಸನೋ ಕಲ್ಲುಂ
ಮರನಿರ್ಪಂತಿರ್ದನಿಂತು ನಿಷ್ಕರುಣನೊ ಪೇೞ್

ಎಂಬ ಜನಾಪವಾದಮುಂ ಕೇಳ್ದು ಬುದ್ಧಿಸಾಗರಂ ಸಗರನ ಮೇಲೆ ಸಿತಸರ್ಪಂಗಳ ನಿಟಿಯೆ ಸುರಿವುದುಂ ತಪ್ತಾಯಃ ಕಟಾಹಪತಿತಲಾಜಃ ಪುಂಜದಂತೆ ದೆಸೆದೆಸೆಗೆ ಚಿಳಿಲ್ ಚಿಳಿಲೆನೆ ಸಿಡಿಲ್ದು ಪಾಱುವುದುಮೋರೊರ್ವರ್ಗೋರೊರ್ವರ್ ಮಕ್ಕಳ ದುಕ್ಕಮಂತರ ಸಂಗಱುವತ್ತು ಸಾಸಿರ ಮಕ್ಕಳ ದುಕ್ಕಂ ಸಾಮಾನ್ಯಮಕ್ಕುಮೆ! ಮಹಾಸತ್ತ್ವನುಂ ಧೈರ್ಯಾಂಬುರಾಶಿಯುಮಪ್ಪುದಱಿಂದಸಹ್ಯಮಪ್ಪ ದುಃಖೋದ್ರೇಕಮಂ ಸೈರಿಸಿರ್ದನೆಂದು ಸಕಲಜನಕ್ಕೆಲ್ಲಂ ಪ್ರಕಟಂಮಾಡೆ ಸಗರನಾ ಬ್ರಾಹ್ಮಣಂಗಮಂತಃಪುರಕ್ಕಂ ಮಱುಮಾತುಗುಡಲಱಿಯದೆ 'ಮೌನಂ ಸರ್ವಾರ್ಥಸಾಧನಂ' ಎಂಬುದಂ ಮನದೊಳ್ ಬಗೆದು

ಕಡೆಯೆಯ್ದಿತ್ತೆನಗಿಂದು ರಾಜ್ಯವಿಭವಂ ಪೊಣ್ಮಿರ್ದ ಮೋಹೋದಯಂ
ತಡಿಸಾರ್ದಿರ್ದಪುದಕ್ಕೆ ಮಂಗಳಮಹಾಶ್ರೀ ಪೋಪೆನೀಗಳ್‌ತಪಂ|
ಬಡಲೆಂದುತ್ತಮ ಸತ್ವನೂರ್ಜಿತಗುಣಂ ಸಿಂಹಾಸನಂ ಭೇರಿ ಬೆ
ಳ್ಗೊಡೆಯಿಂತೆಲ್ಲಮನೊಲ್ಲದಿರ್ದನರಸಂ ತಳ್ವಿಲ್ಲದಾಸ್ಥಾನದೊಳ್ ||

ಗದಾಯುದ್ಧ

ಭೀಮಸೇನ ಪ್ರತಿಜ್ಞೆ

ಖಳದುಶ್ಶಾಸನಕೃಷ್ಣಲೋಹಿತಜಲಾ [ಶ್ಲಿ] ಷ್ಟಂ ಕುರುಪ್ರೋದ್ಭವ।
ಪ್ರಳಯಜ್ವಾಲಿ ಸುಯೋಧನೋರುಮಕುಟೋದ್ಘಟ್ಟ ಪ್ರತಿಜ್ಞಾಕ್ಷರಾ।
ವಳಿವಿನ್ಯಸ್ತ ವಿಶಾಲ ನಿಶ್ಚಳ ಶಿಲಾಸ್ತಂಭಂ ಕುರುಕ್ಷೇತ್ರದೊಳ್
ಪ್ರಳಯೋಗ್ರಾಂತಕನಂತಗುರ್ವನೊಳಕೊಂಡಿರ್ದಂ ಹಿಡಿಂಬಾಂತಕಂ ॥

ವ॥ ಆ ಪ್ರಸ್ತಾವದೊಳ್ ದೃಷ್ಟಾದೃಷ್ಟ ಪರಂಪರೆಯೆಂಬ ವೃದ್ಧಕಂಚುಕಿಯುಂ ಬುದ್ಧಿಮತಿಯೆಂಬ ಮೇಳದ ಕೆಳದಿಯುಂ ಬೆರಸು ದೇವಾಸುರ ಯುದ್ಧಕ್ಕೆ ಕರಗಂಬೊತ್ತಳೆಂಬಂತೆ ಅನವರತವಾರಿಧಾರಾಪೂರಪರಿವಾರಿತ ಪಲ್ಲವ ನೇತ್ರೆಯುಂ ಅಸಹ್ಯ ಪರಿಭವಾನಲದಂದಹ್ಯಮಾನಗಾತ್ರೆಯುಂ ಆಗಿ ಯಜ್ಞ ವೇದೀ ಸಂಭವೆಯುಂ [ಯಾಜ್ಞಸೇನಿಯುಂ] ದ್ರುಪದರಾಜೋಪವನ ಜಯ ವೈಜಯಂತಿಯುಂ ಎನಿಸಿದ ಪಾಂಚಾಲರಾಜತನೂಜೆ ಪವಮಾನ ತನೂಜ ನಲ್ಲಿಗೆ ವಂದು

ದನುಜ ವಿರೋಧಿ ಮಾಡಿದೊ [ಡಮಾ] ಗದೆ [ಸಂಧಿದ] ಲೆನ್ನ ನಿನ್ನ ಸೈ।
ಪಿನೊಳವಶಿಷ್ಟ [ಕೇವಲ] ಸುಯೋಧನಮಾ [ಯ್ತರಿಸೇನೆ] ಸಿಂಧುನಂ-।
ದನ ಧೃತರಾಷ್ಟ್ರರಿರ್ದೊರೆಯೆ ನಮ್ಮರಸಂ ಮರಳ್ದಿಂಬುಕೆಯ್ಗುಮೆಂ-
ದನುಶಯುಮಾದುದಿಂದೆನಗೆ ಸಂಶಯುಮಂ ಕಳೆ ಕೌರವಾಂತಕಾ ॥

ಖಳದುಶ್ಶಾಸನವಕ್ಷಃ-
ಸ್ಥಳೋಚ್ಚಲತ್ ಕೃಷ್ಣರಕ್ತಜಲದಿಂ ಕೋಪಾ-।
ನಳನಂ ಮ [ಟ್ಗಿಸಿ ನೀನುಂ]
ಗ [ಳಾ] ಗಳಿತ ಕೋಪನಿರ್ಪ ತೆಱದಿಂದಿರ್ದಯ್ ॥

ಸಮವಾಯಮಹಿತರೊಳ್ ಸಂ-
ಧಿಮಾಡಿ ಯಮಸೂನು ಪೇೞೆ ವನವಾಸವೆ ದಲ್ ।
ನಿಮಗೆ ಶರಣೆನಗಮಂದ-
ಗ್ನಿಮುಖದೆ ಪುಟ್ಟಿದುದಱಿಂದೆ ಶರಣಗ್ನಿಮುಖಂ ॥

ವ|| ಎಂದು ಪಶ್ಚಾತ್ತಾಪಂಗೆಯ್ದು ಕುರುಕುಲ ವಿಳಯಜ್ವಾಲೆ ಸುಯೋಧನ ಪ್ರಳಯಕಾಲೆ ಪಾಂಚಾಲಿಯ ವದನಮಂ ನೋಡಿ

ಗಳಿಯಿಸುತಿರೆ ಕಬರಿಭರಂ
ಗಳಿಯಿಸುತಿರೆ ನಯನವಾರಿ ನಿನ್ನಾನನದಿಂ |
ನಳಿನಾನನೆ ನೀನಿರೆ ಕುರು
ಕುಳಾಂತಕಂ ಗಳಿತಕೋಪನೇ [ಈ] ಭೀಮಂ ||

ನೀನಗ್ನಿ ಪುತ್ರಿಯಯ್ ಪವ-
ಮಾನತನೂಭವನೆನಾನಣಂ ಕೂ [ಡಿರೆ ಸಂ]-|
ಧಾನಮರಿ ನೃಪರೊಳೆಂತಸ-
ಲಾಸಿಲ ಸಂಯೋಗಮುರಿಪದಿರ್ಕುವೆ ಪಗೆಯಂ ||

ಕುರುಕುಲ ಜೀವಾಕರ್ಷಣ-
ಪರಿಣತಮಿದು ಕಾಳಹಸ್ತಮಲ್ಲದೆ ಪರಮೇ-|
ಶ್ವರಿ ಕೇಶಹಸ್ತಮುಕ್ಕುಮೆ
ಪರಾಭವಜ್ವಲನಧೂಮಕೃಷ್ಣಂ ಕೃಷ್ಣೇ ||

ಕುರುನಂದನರಂ ಕೊಂದೆಂ
ಕುರುಶಾಬಾನುಜನ ನೆತ್ತರಂ ಕುಡಿದೆಂ ಪೂ-|
ಣ್ದಿರಡಂ ತೀರ್ಚಿದೆನಿರ್ದ ಪು-
ವೆರಡುಮವಂ ತೀರ್ಚಿ ತೀರ್ಚದಿರ್ಪೆನೆ ಪಗೆಯಂ ||

ಊರುಗಳನುಡಿವೆನೊದೆವೆಂ
ಕೌರವಪರಿವೃಢನ ಮಕುಟವಂ ವೇಣೀಸಂ-|
ಹಾರಂ ಮಾಡುವೆನದಱಿಂ
ಭಾರಮದಿನಿತಲ್ಲದೆನ್ನ ಪರಿಭವಭಾವಂ ||

ಅಱಿನ ಮಗಂ ಪ್ರಾರ್ಥಿಸೆ ಬಾಂ |
ದೊಱೆಯ ಮಗಂ ಮಾಡೆ ಸಂಧಿಯಾದಪುದೆನುತುಂ |
ಮಱುಗುವೆ [ಅಣ್ಣ]ನ ಮಾತಂ
ಪೆಱಗಿಕ್ಕುವೆನಜ್ಜನಿರ್ದು ಮಾಣ್ಬೊಡಮಾಯೆಂ ||

ಧೃತರಾಷ್ಟ್ರವಚನ

ಕುರುಕುಲ ಚೂಡಾಮಣಿ ನಿಜ|
ಗುರುಗಳ ನಯನಾಂಬು ತಳಿವ ಜಲಮಾಗಿರೆ ತ|
ದ್ಗುರುಜನದೀರ್ಘಶ್ವಾಸಮೆ
ಪರಿ [ವೀ] ಜನಮಾಗೆ ಮೂರ್ಛೆಯಿಂದೆೞ್ತ್ತಂ ||

ವ || ಅಂತು ಮೂರ್ಛೆಯಿಂದೆೞ್ತು ನಿಜಜನನೀಜನಕರಂ ಕಂಡು ಲಜ್ಜಾಭರದಿಂ ತಿರಮನಾನತಂ ಮಾಡೆ ಸಂಜಯಂ ಧೃತರಾಷ್ಟ್ರಂಗಂ ಗಾಂಧಾರಿಗಂ ನಿಜ ತನೂಜನಪ್ಪ ರಾಜರಾಜಂ ನಿಮಗೆ ವಿನಯವಿನಮಿತೋತ್ತಮಾಂಗನಾದಂ ಅವಧರಿಸುವುದು ಎನೆ ತದೀಯವಚನಾಮೃತಸ್ಪರ್ಶನದಿಂದಾನಂದಿತಚಿತ್ತರಾಗಿ ತಡವರಿಸಿಯುಂ ತೆಬ್ಬರಿಸಿಯುಂ ತೆಗೆದಪ್ಪಿಯುಂ ಮನಃಕ್ಷತಶರೀರನಂ ಪರ ಮಾಶೀರ್ವಚನಶತಸಹಸ್ರಗಳಿಂ ಪರಸಿ ಪುನಃಪುನರಾಲಿಂಗನಂಗೆಯ್ದು ಕಿಱಿದಾನುಂ ಬೇಗದಿಂ ವಿಗತಪರಿಜನಂಮಾಡಿ

ಯಮಸುತನಿಂಬುಕೆಯ್ವನೆಮಗಿನ್ನು ಮೊಡಂಬಡು ಕಂದ ಸಂಧಿಯಂ
ಸಮಗೊಳಿಸಲ್ಕೆ ಸಂಜಯನನಟ್ಟುವೆ ಭೀಮನೊಳಾದ ಬದ್ಧ ವೈ|
ರಮನುೞಿ ನೋಡದಿರ್ ಸುತಸಹೋದರದುಃಖಮನೀವುದರ್ಧರಾ—
ಜ್ಯಮನವರ್ಗೆಂದು ಕಾಲ್ವಿಡಿದು ಬೇಡಿದನಂಧನೃಪಾಲ ಪುತ್ರನಂ ||

ಪರಿಣತವಯನೆರೆಮಿರ್ಕ—
ಣ್ಗುರುಡರೆಮೆಮಗಿಂಬುಕಯ್ವುದುಚಿತಂ ನಿನ್ನೀ|
ಗುರು ನುಡಿದ ನುಡಿಗೊಡಂಬಡು
ಗುರುವಚನಮಲಂಘನೀಯಮೆಂಬುದು ಮಗನೇ ||

ಸಮರವ್ಯಾಪಾರಂ ಮಾ-
ಣ್ದು ಮಗನೆ ನಿಜಶಿಬಿರದತ್ತ ಬಿಜಯಂಗೆಯ್ ಸ-|
ತ್ತ ಮಗಂದಿರ್ ಸತ್ತರ್ ನೀ-
ನೆಮಗುಳ್ಳೊಡೆ ಸಾಲ್ವುದವರನಿಂ ತಂದಪೆವೇ ||

ವೀರಶತಜನನಿಗೀ ಗಾಂ-
ಧಾರಿಗೆ ದುಃಖಶತಜನನಿವೆಸರಾಯ್ತೀಗಳ್|
ಕೌರವಪತಿ ದುಃಖಮಹಾ-
ಭಾರಮನಾಂತಾಯಸಕ್ಕೆ ಗುಱಿಯಾದುದಱಿಂ ||

ವ|| ಎಂದು ನುಡಿದ ನರೇಂದ್ರನ ನುಡಿಗೆ ಸಂಜಯನೊಡಂಬಟ್ಟು

ನೃಪಪತಿಯುಕ್ತಮಿದಂ ನೀಂ
ನೃಪ ಕಯ್ಕೊಳ್ ನಿನ್ನ ತಂದೆಯೆಂದುದನೆನೆ ಭೂ-|
ಮಿಪನೆಂದಂ ನಿಮ್ಮಯ ಪೂ-
ರ್ವಪಕ್ಷಮೆನಗಾ [ಯ್ತು]ದೇ ವಲಂ ಸಿದ್ಧಾಂತಂ ||

ತನ್ನೊಡವುಟ್ಟಿದರ್ ಪೆಸರ ನಾಲ್ವರೊಳೊರ್ವರುಮಿಲ್ಲದಿರ್ದೊಡಂ
ತನ್ನಸುವಂ ನಿವೇದಿಸುವನಗ್ನಿಗೆ ಧರ್ಮತನೂಜನೆಂದೊಡಾ-|
ನೆನ್ನೊಡವುಟ್ಟಿದರ್ ಪೆಸರ ನೂರ್ವರೊಳೊರ್ವರುಮಿಲ್ಲ ಬಾೞ್ವೆನೆಂ-
ಬೆನ್ನೞಿಯಾಸೆಯುಂ ಬಿಸುಡಿಮೆನ್ನವರಾದುದನಾಗದಿರ್ಪೆನೇ ||

ಸಾದಿಸುವೆಂ ಪಲ್ಗುಣ [ನಿಂ]
ಸಾದಿಸುವೆಂ ಪವನಸುತನ ಬಸಿಱುಂ ಹಾ ಕ-|
ರ್ಣಾ ದುಶ್ಯಾಸನ ತೆಗೆವೆಂ
ನಿರ್ದೋಷಿ ಬೞಿಕ್ಕೆ ಯಮಜನೊಳ್ ಪುದುವಾೞ್ವೆಂ ||

ಧರೆಯಂ ಪಚ್ಚಾಳ್ದಿರ್ ಪಾಂ-
ಡುರಾಜನುಂ ನೀಮುಮದನೆ ಕೈತವದಿಂದ-|
ಯ್ವರ ಕಯ್ಯೊಳೆೞೆದುಕೊಂಡುಂ
ಕುರುರಾಜಂ ಮತ್ತಮವರ್ಗೆ ಪುದುವಿತ್ತಪನೇ ||

ಆಂ ಮಗನೆನಾಗೆ ಧರ್ಮಜ-
ನೇಂ ಮಗನಲ್ಲನೆ ಬೞಿಕ್ಕೆ ನೀಮುಂ ತಾಮುಂ|
ನಿಮ್ಮೊಳ್ ನೇರ್ಪಡುಗಿಡದೆ ಸು-
ಖಂ ಮುನ್ನಿನ ತೆಱದೆ ಬಾೞ್ವುದಾಂ ಬೆಸಕಯ್ವೆಂ ||

ದುರ್ಯೋಧನ ವಿಲಾಪ

ಅಂತಿರ್ದ ದಿನಕರ ತನೂಜನಂ ರಾಜರಾಜಂ ನೋಡಿ
ಬಾಷ್ಪವಾರಿ ಧಾರಾ ಪೂರಿತ ಲೋಚನನುಂ ಮನ್ಯೂದ್ಗತಕಂಠನುಂ
ಅಸಹ್ಯಶೋಕಾನಲದಹ್ಯಮಾನಾಂತಃಕರಣನುಮಾಗಿ

ಸಮರದೊಳದೃಷ್ಟವಶದಿಂ
ಸಮವಾಯಂ ಸಾಯೆ ನಾಲ್ವರನುಜರೊಳೊರ್ವಂ |
ಯಮಭವ [ನಾತಿಥಿಯ]ಪ್ಪಂ
ಯಮಸಂದನನದಱಿನಾ ನೃಪಂಗಂ [ಭ]ಯಮೇ ||

ಆನುಂ ದುಶ್ಶಾಸನನುಂ
ನೀನುಂ ಮೂವರೆ ದಲಾತನುಂ ಕಟಿದ ಬಟಿ-|
ಕ್ಕಾನುಂ ನೀನೆ ದಲೀಗಳ್
ನೀನುಮಗಲ್ದೆತ್ತವೋದೆಯಂಗಾಧಿಪತೀ ||

ಅಱಿಯೆನಿದಂ ನಿನ್ನಿಂದಿನ
ತೆಱನಂ ನೀನೆನಗೆಯೇಕೆ ಮುಳಿದಿರ್ದೆಯೊ ಮೇಣ್
ಮಱವಮಾತುಗುಡದೆ ರವಿಸುತ
ಮಱವಿಂದಿರ್ದಪೆಯೊ ಮೇಣ್ ಬಱಲ್ದಿರ್ದಪೆಯೋ ||

ನಿನ್ನ ಕೆಳೆಯಂ ಸುಯೋಧನ-
ನಂ ನೋಡದೆ ನುಡಿಯದಪ್ಪಿಕೊಳ್ಳದೆ ಬೆಸನೇ-|
ನೆನ್ನದೆ ಜೀಯೆನ್ನದೆ ಬೇ-
ವೆನ್ನದೆಯೇಕುಸಿರದಿರ್ದೆಯಂಗಾಧಿಪತೀ ||

ಅನೃತಂ ಲೋಭಂ ಭಯಮೆಂ-
ಬಿನಿತುಂ ನೀನಿರ್ದ ನಾಡೊಳಿರ್ಕುಮೆ ರವಿನಂ-||
ದನ ನನ್ನಿ ಚಾಗಮಣ್ಮೆಂ-
ಬಿನಿತರ್ಕಂ ನೀನೆ ಮೊತ್ತಮೊದಲಿಗನಾದಯ್ ||

ನೀನೊಳ್ಕೊಡುಂಟು ರಾಜ್ಯಂ
ನೀನುಳ್ಕೊಡೆ ಪಟ್ಟಮುಂಟು ಬೆಳ್ಗೊಡೆಯುಂಟಯ್ ||
ನೀನುಳ್ಕೊಡುಂಟು ಪೀಟಿಗೆ
ನೀನಿಲ್ಲದಿವೆಲ್ಲಮೊಳವೆ ಅಂಗಾಧಿಪತೀ ||

ಹರಿ ಬೇಡೆ ಕವಚಮಂ ನೀ-
ನರಿದಿತ್ತಯ್ ಕೊಂತಿ ಬೇಡೆ ಬೆಗಡದೆ ಕೊಟ್ಟಯ್ |
ಪುರಿಗಣೆಯಂ ನಿನಗೆಣೆ ಕನ-
ವರಗಲಿ ಮೆಯ್ಗಲಿಯುಮಾವನಂಗಾಧಿಪತೀ ||

ನಯನದೊಳವೆರ್ದೆಯೊಳಂ ನಿ-
ನ್ನಯ ರೂಪಿರ್ದಪುದು ನಿನ್ನ ಮಾತಿರ್ದಪುದೆ-|
ನ್ನಯ ಕಿವಿಯೊಳಮಿನನಂದನ
ವಿಯೋಗವೆಂತಾದುದಱಿಯೆನಂಗಾಧಿಪತೀ ||

ಇಂದಾನಾಡೆಂ ಮೇಣಿನ-
ನಂದನ ಕೇಳ್ ಪಾಂಡುತನಯರಾದರ್ ನಿನ್ನಂ |
ಕೊಂದುಂ ದುಶ್ಶಾಸನನಂ
ಕೊಂದುಂ ಬರ್ದುಕುವನದಾವನಂಗಾಧಿಪತೀ ||

ಆರೊಡನೆ ನುಡಿವೆನಟ್ಟಿಯೊ-
ಳಾರೊಡನೋಲಗದೊಳಿರ್ಪೆನಾರೊಡನೆ ಸಮಂ-|
ತಾರೋಗಿಪೆನೇಱುವೆನಾ-
ನಾರೊಡನೆನ್ನಣುಗರಿಲ್ಲದಿಭವಾಜಿಗಳಂ ||

ಕೆಳೆಯಂಗಾಯ್ತುಸುಮೋಕ್ಷಮಾಗದೆನಗಂ ಬಾಷ್ಪಾಂಬುಮೋಕ್ಷಂ ಧರಾ-
ತಳಮಂ ಕೊಟ್ಟನಿವಂ ಜಳಾಂಜಳಿಯುಮಂ ನಾಂ ಕೊಟ್ಟೆನಿಲ್ಲನ್ಯಮಂ-|
ಡಳಮಂ ಸುಟ್ಟನಿವಂ ಪ್ರತಾಪಶಿಖಿಯಿಂದಾನೀತನಂ ಸತ್ಕ್ರಿಯಾ
ನಳನಿಂ ಸುಟ್ಟೆನುಮಿಲ್ಲ ಮತ್ಪ್ರಿಯತಮಂ ಕರ್ಣಂಗಿದೇಂ ಕೂರ್ತೆನೋ ||

ದುರ್ಯೋಧನನ ಛಲ

ನರಶರಕೋಟಿ ಜರ್ಜರಿಸೆ ತನ್ನ ಶರೀರಮನಸ್ತ್ರವೇದನಾ-
ಪರವಶನಾಗಿಯುಂ ಮಱೆದನಿಲ್ಲ ಮುಕುಂದನನೇಕಚಿತ್ತದಿಂ |
ಸ್ಮರಿಯಿಸುತಿರ್ದುಮತ್ತ ಕುರುಭೂ [ಮಿಯೊಳೀಗಳದೆಂ]ತುಟಾದುದೋ
ಕುರುಪತಿಗೆಂದನಾ ಪರಮಯೋಗಿಗಮಿಂತುಟು ಮೋಹಮಾಗದೇ ||

ಅಂತಿರ್ದ ನದೀನಂದನನಂ ರಾಜರಾಜಂ ನೋಡಿ ಮನ್ಯೂದ್ಗತಕಂಠನಾಗಿ
ವಿನಯಮನೊಕ್ಕು ನಿಮ್ಮ ಗುರುವೃದ್ಧರ ಪೇಳ್ದ ಹಿತೋಪದೇಶಮಂ
ಮನದೊಳಿಳಿಂಕೆಗೊಂಡನಿಲನಂದನವೈರದೆ ನಿಮ್ಮನಿಂದ್ರನಂ-|
ದನನೊಡನಾನೆ ಕಾದಿಸಿದೆನಾನೆ ಕಡಂಗಿದೆನೆನ್ನ ಪಾಪಕ-
ರ್ಮನ ಕತದಿಂದಮೀ ನಿಮಗವಿಾಯಿರವಾದುದೆ ಸಿಂಧುನಂದನಾ ||

ನಿಮಗೆ ಪೊಡೆಮಟ್ಟು ಪೋಪುದೆ
ಸಮಕಟ್ಟೆ [ನೆ] ಬಂದೆನಹಿತರೊಳ್ ಸಂಧಿಯನೇಂ|
ಸಮಕೊಳಿಸಲೆಂದು ಬಂದೆನೆ
ಸಮರದೊಳೆನಗಜ್ಜ ಪೇಟಿಮಾವುದು ಕಜ್ಜಂ||

ನೆಲಕಿಱುವೆನೆಂದು ಬಗೆವಿರೆ
ಛಲಕಿಱುವೆಂ ಪಾಂಡುಸುತರೊಳೀ ನೆಲನಿದು ಪಾ-|
ಪ್ನೆಲನೆನಗೆ ದಿನಪಸುತನಂ
ಕೊಲಿಸಿದ ನೆಲನೊಡನೆ ಮತ್ತೆ ಪುದುವಾೞ್ದಪೆನೇ||

ಕೂಡೆ ವಿರೋಧಿಯುಂ ತಱಿದು ತದ್ವಸಮಾಂಸದೆ ಭೂತಭೋಜನಂ
ಮಾಡದೆ ವೈರಿವಾರವನಿತಾವದನಾಂಬುರುಹಂಗಳಂ ಬೆಳ-|
ರ್ಮಾಡದೆ ಬಂಧುಶೋಕದೊಳೆ ಪೊರ್ದಿದ ಬಂಧುಜನಕ್ಕೆ ಸಂತಸಂ
ಮಾಡದೆ ಸಂಧಿಮಾಡುವನೆ ಪಾಂಡವರೊಳ್ ಫಣಿರಾಜಕೇತನಂ||

ಬಾಡಮುನಯ್ದು ನವರ್ ಮುಂ
ಬೇಡಿದೊಡಾನಿತ್ತೆನಿಲ್ಲ ರಾಜ್ಯಾರ್ಧಮನಾಂ|
ಬೇಡಿಯವರಲ್ಲಿಗಟ್ಟಿದೊ—
ಡೇಡಿಸಿ ಱೋಡಿಸನೆ ಪವನನಂದನನೆನ್ನಂ||

ಪುದುವಾೞಲ್ಕಣಮಾಗದೆಂತುಮವರೊಳ್ ಸಂಧಾನಮಂ ಮಾಡಲಾ|
ಗದು ನೀಮಿಲ್ಲದೆಯಜ್ಜ ಬಿಲ್ಲ ಗುರುಗಳ್ ತಾಮಿಲ್ಲದಾ ಕರ್ಣನಿ|
ಲ್ಲದೆ ದುಶ್ಶಾಸನನಿಲ್ಲದಾರೊಡನೆ ರಾಜ್ಯಂಗೆಯ್ವೆನಾರ್ಗೆನ್ನ ಸಂ|
ಪದಮಂ ತೋಱುವೆನಾರ್ಗೆ ತೋಱಿ ಮೆಱೆವೆಂ ನಾನಾವಿನೋದಂಗಳಂ||

ಖಂಡಿತಮೆನಿಪ್ಪ ವರಮಹಿ|
ಮಂಡಲಧವಳಾತಪತ್ರ ಸಂಪದಮೆನಗೇ|
ಭಂಡಮದನೊಲ್ಲೆನೊಲ್ಲೆನ|
ಖಂಡಿತಮಭಿಮಾನಮದನೆ ಬಲ್ವಿಡಿವಿಡಿವೆಂ||

ಪುಟ್ಟಿದ ನೂರ್ವರುಮೆನ್ನೊಡ|
ವುಟ್ಟಿದ ನೂರ್ವರುಮಿದಿರ್ಚಿ ಸತ್ತೊಡೆ ಕೋಪಂ|
ಪುಟ್ಟಿ ಪೊದಳ್ದುದು ಸತ್ತರ್
ಪುಟ್ಟರೆ ಪಾಂಡವರೊಳಿಱಿದು ಛಲಮನೆ ಮೆಱೆವೆಂ||

ಕಾದದಿರೆಸಜ್ಜ ಪಾಂಡವ
ರಾದರ್ ಮೇಣಿಂದಿನೊಂದೆ ಸಮರದೊಳಾಂ ಮೇ |
ಣಾದೆನದಱಿಂದೆ ಪಾಂಡವ |
ರ್ಗಾದುದು ಮೇಣಾಯ್ತು ಕೌರವಂಗವನಿತಳಂ ||

ಭೀಮಸೇನಾಡಂಬರ

ತೊದಳಾಯ್ತೆನ್ನಯ ಪೂಣ್ದ ಪೂಣ್ಕೆ ಸಭೆಯೊಳ್ ಪಾಂಚಾಲ ರಾಜಾತ್ಮಜಾ-
ವದನ ಮ್ಲಾನತೆ ಮಾಣ್ದುದಿಲ್ಲ ಗಡ ಮದ್ದೋರ್ದಂಡಕಂಡೂತಿ ತೀ-|
ರ್ದುದುಮಿಲ್ಲಿನ್ನುಮೊಳಂ ಸುಯೋಧನನದಕೆ [F]ೀಗೆಯ್ವೆನೆಂತಕ್ಕುಮೆಂ-
ಬುದನೆಂದುತ್ಸುಕಚಿತ್ತನುಮ್ಮಳಿಸಿದಂ ಕೌರವ್ಯಕೋಳಾಹಳಂ ||

ಮಿಱುದ ಪಗೆವನ ಪಟ್ಟಂ
ಪಱುಸುವೆನೊ ಮುನ್ನಮಮರರುಂಡಮೃತಮನೇಂ |
ಕಾಱುಸುವೆನೊ ಖಚರರನಡ-
ರ್ದೇಱುಸುವೆನೊ ಮೇರುಗಿರಿಯ ತೊಱಲ ತುದಿಯಂ ||

ಎತ್ತುವೆನೊ ಮಂದರಾದ್ರಿಯ-
ನೊತ್ತುವೆನೊ ರಸಾತಳಕ್ಕೆ ನೆಲನಂ ದೆಸೆಯಂ |
ಪತ್ತುವೆನೊ ಪಗೆಯ ಬೆನ್ನಂ
ಪತ್ತುವೆನೊ ದಿಶಾಗಜಂಗಳಂ ತುತ್ತುವೆನೋ ||

ದಾಂಟುವೆನೊ ಕುಲನಗಂಗಳ-
ನೀಂಟುವೆನೊ ಚತುಸ್ಸಮುದ್ರಮಂ ರವಿಶಶಿಯಂ |
ಮಿಾಂಟುವೆನೊ ಗಗನ ತಳದಿಂ
ಗಂಟಲನೊತ್ತುವೆನೊ ಸಕಲ ದಿಕ್ಪಾಲಕರಂ ||

ರಸೆಗಿೞಿದನೊ ಮೇಣ್ ನಾಲ್ಕುಂ
ದೆಸೆಗಳ ಕೋಣೆಗಳೊಳುಳಿದನೋ ಖಳನಿಲ್ಲೀ |
ವಸುಮತಿಯೊಳ್ ಗಾಂಧಾರಿಯ
ಬಸಿಱಿಂ ಮೇಣ್ ಮಗುೞೆ ಪೋಗಿ ಪೊಕ್ಕಿರ್ದಪನೋ ||

ಚರಮಚರಮೆಂಬ ಜಗದಂ
ತರದೊಳ್ ಖಳನೆಲ್ಲಿ ಪೊಕ್ಕೊಡಂ ತದ್ಭುಜಪಂ।
ಜರದೊಳಗಿರ್ದೊಡೆ ಹರಿಹರ
ಹಿರಣ್ಯಗರ್ಭರ್ಕಳಲ್ಲಿಯುಂ ಕೊಲ್ಲದಿರೆಂ ||

ಚತುರಂತಕ್ಷಿತಿಕಾಂತೆ ಕೇಳ್ ಜಲಧಿ ಕೇಳ್ ಸಪ್ತಾರ್ಚಿಕೇಳ್ ತಾತ ಮಾ-
ರುತ ಕೇಳ್ ಮಾರುತಮಾರ್ಗ ಕೇಳ್ ಪಗೆವಸಂ ಕೊಂದೆನ್ನ ಕೋಪಾಗ್ನಿಗಾ
ಹುತಿಮಾಪ್ಪೆಂ ಕೊಲಲಾಱದಂದು ತಱಸಂದಾನೆನ್ನ ಸಂದಗ್ನಿಗಾ-
ಹುತಿಮಾಪ್ಪೆಂ ಗಡಿಮೆಂದು ಪೂಣ್ದೊದಱದಂ ಕೌರವ್ಯ ಕೋಳಾಹಳಂ ||

ಕುರುಕುಲಕದಳೀಕಾನನ-
ಕರಿಕಳಭಂ ಶತ್ರು ಶಲಭ ಸಂಪಾತನ ವಿ-।
ಸ್ಫುರಿತ ಪ್ರದೀಪನಾ ಕುರು-
ಧರೆಯೊಳ್ ಕುರುಪತಿಯನಱಸಿದಂ ಪವನಸುತಂ ||

ದೆಸೆಯಂ ತಕ್ಕನೆ ತೀವಿ ಪರ್ವಿ ಗಗನಂ ಕೂಡಿಟ್ಟವೋಲ್ ನೀಳ್ದಗು-
ರ್ವಿಸೆ ಬಾಹುಭ್ರಮಿತಾಭ್ರಮುಗದಂ ಕೌರವ್ಯರಂ ತಿಂದ ರ-।
ಕ್ಕಸನೋ ಈತನೊ ಭೀಮಸೇನನೆನುತುಂ ಗಾಂಧಾರಿ ಬಳ್ಕುತ್ತೆ ಬೆ-
ಕ್ಕಸಮುತ್ತಳ್ ಬರೆ ಕಂಡು ಪಾಂಡವಬಲ ಪ್ರಾಕಾರನಾಕಾರಮಂ ||

ಅಂತು ಕಂಡು ಬಿಲ್ಲುಂಬೆಱಗುಮಾಗಿ

ಎನ್ನಾತ್ಮಜರಂ ನೂರ್ವರು-
ಮಂ ನುಂಗಿದ ತೆಱದೆ ನುಂಗೆ ಬಂದಂ ಭರದಿಂ।
ಪನ್ನಗ ಕೇತನನುಮನಿಂ-
ತನ್ನೆಯಮಾಯ್ತೆಂದು ಪಿರಿದುಮುಮ್ಮಳಿಸುತ್ತುಂ ||

ಇರ್ಪನ್ನೆಗಂ ಕಯ್ವೆಸರದಿಂ ಗುರುಜನಕ್ಕೆ ಸಮುಚಿತಾಚಾರಮಂ ಮೆಱೆದು ಭೀಮಂ ಭೀಮನಾದಮಂ ನೆಗೆಟ್ಟಿ
ಧೃತರಾಷ್ಟ್ರ ಕ್ಷಿತಿಪಾಲ ಕೇಳ್ ಜನನಿ ಕೇಳ್ ಗಾಂಧಾರಿ ಕೊಂದೆಂ ಭವ-
ತ್ಸುತರಂ ನೂರ್ವರುಮಂ ಗದಾಪ್ರಹತಿಯಿಂ ದುಶ್ಶಾಸನೋರಃಸ್ಥಳ-।
ಕ್ಷತ-ಜಾಸೃಗ್ಜಲಸೇಕದಿಂ ತಣಿಪಿದೆಂ ಕೋಪಾಗ್ನಿಯಂ ಬಂದೆನು-
ದ್ಧತನಂ ಕೋಪಕೃತಾಪರಾಧಶತನಂ ನುಂಗಲ್ಕೆ ಪಿಂಗಾಕ್ಷನಂ ||

ಎಂಬುದುಂ ಗಾಂಧಾರಿ ಜರಾಸಂಧಾರಿಗೆ ಬದ್ಧಾಂಜಲಿಯಾಗಿ

ಅನಿಬರ್ ತನಯರ ದುಃಖಮ-
ನನುಭವಿಸಿಯುಮಣಮೆ ಪೋಗವೆಮ್ಮ ಸುಗಳ್ ನೀ-|
ನ್ನಿನಿತನೆವಂಗೊಳ್ಳಿಕಯ್ ಭೀ-
ಮ ನುಂಗು ಮಱನ್ನೆಮ್ಮನೆಮ್ಮ ಸುತನಂ ಬಟಿಯುಂ ||

* * *

ದುರ್ಯೋಧನಂ ವೈಶಂಪಾಯನಸರೋವರದೊಳಗಿರಲ್ ಈ ಬೂತು ಎನ್ನ ಸರಂಗೇಳ್ದೊಡಲ್ಲದೆ ಪೊಱಮಡುವನಲ್ಲಂ ಇವಂಗಾನೆ ಸಾಲ್ವೆನೆಂದು ಭೀಮಸೇನನುದ್ದಾಮ ಕೋಪಾಟೋಪರಚಿತ ಬದ್ಧಭ್ರುಕುಟಿಯಾಗಿ

ಜಳದೊಳ್ ಮೀನಿರ್ಪವೊಲ್ ನೀಂ ಕೊಳದೊಳೆ ಮುೞುಗಿರ್ದಕ್ಕಟಾ ಕೋಡ ಸೇಡಿಂ|
ಗೊಳಗಾದಯ್ ನಿನ್ನ ದುರ್ಯೋಧನವೆಸರ್ಗಿದು ಲಜ್ಜಾಕರಂ ತೋಱಿದಯ್ ನಿ-|
ನ್ನಳವಂ ಚೀಃ ಸತ್ತರೇಂ ಪುಟ್ಟರೆ ಪೊಱಮಡು ನೀಂ ಕಯ್ದುಗೊಳ್ ಕೌರವೇಂದ್ರಾ|
ಚಳವಜ್ರಂ ಬಂದನೀತಂ ಕುರುಕುಲಮಥನೋದ್ಭೀಕರಂ ಭೀಮಸೇನಂ||

ಹರಿಸಂಧಾನಕ್ಕೆ ವಂದಂದವಗಡಿಸಿದಹಂಕಾರಮೆಲ್ಲಿತ್ತೊ ಕೃಷ್ಣಾಂ|
ಬರಕೇಶಾಕೃಷ್ಟಿಯುಂ ಮಾಡಿಸಿದ ಮದಮದೆಲ್ಲಿತ್ತೊ ಕೌಂತೇಯರಂ ಮ|
ಚ್ಚರದಿಂ ಕಾಂತಾರದೊಳ್ ತಿಱ್ರನೆ ತಿರಿಪಿದ ಸೊರ್ಕೀಗಳೇನಾದುದೆಂದಾ
ಕುರುವಂಶಾಧೀಶನಂ ಮೂದಲಿಸಿದನದಟಂ ಭೀಮನುದ್ದಾಮಭೀಮಂ||

ಎಂದು ಮತ್ತಮಿರದೆ

ಒಡೆಯುಲಜಾಂಡಂ ಕುಲಗಿರಿ
ಕೆಡೆಯಲ್ ಪಿಟಿಯಲ್ಕೆ ಧಾತ್ರಿ ದಿವಿಜರ್ ನಡುಗ|
ಲ್ಕೊಡರಿಸುವಿ [ನಂ] ಜಟಾಸುರ|
ಹಿಡಿಂಬಬಕವೈರಿ ಸಿಂಹನಾದಂಗೆಯ್ದಂ ||

ಅನಿಲತನೂಜನ ಸಿಂಹ
ಧ್ವನಿಯುಂ ಕೇಳ್ದಳ್ಕಿ ತತ್ಸರೋವರದೆರ್ದೆ ಪ|
ವ್ವನೆ ಪಾಱುವಂತೆ ಪಾಱಿದು|
ವನಾಕುಳಂ ಕೊಳದೊಳಿರ್ದ ತದ್ವಿಹಗಕುಳಂ ||

ಅಳರ್ದು ಕೊಳೆ ಭೀಮಕೋಪಾ |
ನಳನೆಸವೊ೯ಯ್ದಿಟ್ಟ ಜಲದವೊಲ್ ಮಱುಗಿದುದಾ |
ಕೊಳದ ಜಲಮೆಯ್ದೆ ಕಾಯ್ದೆ ಸ—
ರೊಳೆ ಕೂಡ್ ಕುದಿವಂತೆ ಕುದಿದುವನಿಮಿಷತತಿಗಳ್ ||

ಅಂತು ಜಲಚರಜೀವರಾಶಿಗಳೆಲ್ಲವಸುಂಗೊಳೆ ಗೋಱುಂಡೆಗೊಳೆ ಕೂಱ್ಗುದಿಗೊಳೆ ಮಹೋತ್ತುಂಗ ಸಿಂಹಕೇತನಂ ಸಿಂಹನಾದಂಗೆಯ್ಯೆ

ಆ ರವಮಂ ನಿರ್ಜಿತಕಂ |
ಠೀರವರವಮಂ ನಿರಸ್ತ ಘನರವಮಂ ಕೋ |
ಪಾರುಣನೇತ್ರಂ ಕೇಳ್ದಾ
ನೀರೊಳಗಿರ್ದುಂ ಬೆಮರ್ತನುರಗಪತಾಕಂ ||

ವ || ಆಗಳಾ ಜಲಸ್ತಂಭಮಂತ್ರಮೆಲ್ಲಂ ಪರಿಣಾಮರಮಣೀಯಮಾಗದೆ ಕಿಡೆಯುಂ ಅಹಂಕಾರಂಗಿಡದೆ

ನಿಜಮಕುಟಸ್ಫುರನ್ಮಣಿಗಣಚ್ಛವಿಯಿಂ ಸುರಚಾಪಲೀಲೆ ಪಂ-
ಕಜವನದೊಳ್ ಮಸಂಗೊಳಿಸೆ ತನ್ನಯ ಮೇಗೊಗೆದಿರ್ದ ನೀಲಸೀ- |
ರಜವನದಿಂ ಕಱಂಗಿ ಕಮಲಾಕರದಿಂ ಪೊಱಮಟ್ಟನುನ್ನತೋ-
ದ್ಭುಜಯುಗತೋರಣಾಯಿತ ಗದಾಪರಿಘಂ ಫಣಿರಾಜಕೇತನಂ ||

ರಸೆಯಿಂ ಕಾಲಾಗ್ನಿ ರುದ್ರಂ ಪೊಱಮಡುವವೊಲಂತಾ ಸರೋಮಧ್ಯದಿಂ ಸಾ-
ಹಸಗರ್ವಾಲಂಕೃತಂ ತೊಟ್ಟನೆ ಕೊಳೆ ಪೊಱಮಟ್ಟೆಲ್ಲಿದಂ ಭೀಮಸೆಂದೆ- |
ಣ್ದೆಸೆಯಂ ನೋಡುತ್ತೆ ಮತ್ತದ್ಭುತನಟನಿಟಲಾಲೋಲಕೀಲಾಕ್ಷಿವೊಲ್ ದ-
ಳ್ಳಿಸೆ ಕೋಪಾರಕ್ತನೇತ್ರಂ ನಿಜಭುಜಗದೆಯಂ ತೂಗಿದಂ ಧಾರ್ತರಾಷ್ಟ್ರಂ ||

ಗದಾಯುದ್ಧ

ಸ್ಥಿರಬದ್ಧ ಮತ್ಸರರ್ ಭೀ-
ಕರ ಬದ್ಧಭ್ರುಕುಟಿ ಘಟಿತರದ್ಭುತರಟ್ಟಾ-|
ಸುರರಧಿಕಕೋಪಪಾಟಳ-
ಪರುಷೇಕ್ಷಣರೆನಿಸಿ ದೃಷ್ಟಿಯುದ್ಧಂಗೆಯ್ದರ್ ||

ದೆಸೆದೇವತೆಗಳ್ಗೆ ಜಪಾ-
ಪ್ರಸೂನಮಂ ರಕ್ತಬಲಿಯುಮಂ ತಾಂ ಕುಡುವಂ-|
ತೆಸೆದಿರ್ದರೊ ಕಡೆಗಣ್ಣೊಳ್
ಪಸರಿಸೆ ಕಡುಗೆಂಪು ಸಿಂಹಭುಜಗಧ್ವಜರಾ ||

ಉರಿಯನುಗುಳ್ವಂತೆ ಬಿಸುನೆ-
ತ್ತರನೆತ್ತಂ ಸೂಸುವಂತೆ ಬಚ್ಚನೆ ಬಿಟ್ಟಿ-|
ರ್ದ್ದಿರಡುಂ ಕಣ್ಗಳೊಳವರೊ-|
ರ್ಬರನೊರ್ಬರ್ ನುಂಗುವಂತೆ ನೋಡಿದರೆನಸುಂ ||

ಉದಯಾದ್ರಿಯುಮಸ್ತಾದ್ರಿಯು-
ಮುದಗ್ರಕೋಪೋತ್ಕರಂಗಳಿರ್ಪಂತಿರೆ ಸೀ-|
ಳ್ದೊದವಿದರುನ್ನತ ಮೂರ್ತಿಗ-
ಳೊದವಿ ಗದಾಯುಧದೆ ಭೀಮಭುಜಗಧ್ವಜರುಂ ||

ದಪ್ಪರಿದಟ್ಟುಂ ಪೊಟ್ಟನೆ
ದೊಪ್ಪಧೊಗಪ್ಪನೆ ದಿಧಿಲ್ ಬುಧಿಲ್ಲನೆ ಮೆಯ್ಗಳ್ |
ಸೊಪ್ಪುಸೊವಡಪ್ಪಿನಂ ಸೂಚ್
ತಪ್ಪದೆ ಕಡುಕಯ್ದು ಪೊಯ್ದರೊರ್ವರನೋರ್ವರ್ ||

ಪಗಲುಳ್ಕಮುಳ್ಕುವಂದದಿ-
ನೊಗೆವ ಗದಾ [ಶ] ಲ್ಕಮುಳ್ಕೆ ಕಣ್ಣಂ ಮುಚ್ಚಲ್ |
ಬಗೆಯೆ ದಿವಿಜರ್ ಗದಾಹ [ವ]
ಮಗುರ್ವುಮದ್ಭುತವುಮಾಯ್ತು ಕುರುಪಾಂಡವರಾ ||

ಗದೆ ಗದೆಯಂ ಘಟ್ಟಿಸೆ ಪು-
ಟ್ಟಿದ ಕೆಂಡದ ಕಿಡಿಯ ತಂಡವೆಂಟು ದೆಸೆಯುಂ |
ಪುದಿಯೆ ಪದಧೂಳಿ ಗಗನದೊ-
ಳೊದವೆ ಸುರರ್ ಬೆದಱಿ ಕಾದಿದರ್ ಕಡುಗಲಿಗಳ್ ||

ಕರಿಯಂ ನುಂಗಿ ಕಳಿಂಗನಂ ನೊಣೆದ ದರ್ಪಕ್ಕೊಂದುಗೊಳ್ ಮತ್ಸಹೋ-
ದರರಂ ಕೋಪದೆ ತಿಂದುದರ್ಕೆರಡುಗೊಳ್ ದುಶ್ಶಾಸನೋರಃ ಸ್ಥಳ-|
ಕ್ಷರ [ದಸ್ರಾ ಂ] ಬುವನಾರ್ದು ಪೀರ್ದ ಮುಳಿಸಿಂಗಂ ಮೂಱುಗೊಳ್ಳೆಂದು ಮ-
ತ್ಸರದಿಂದೋವದೆ ಪೊಯ್ದನೆತ್ತಿ ಗದೆಯಂ ದುರ್ಯೋಧನಂ ಭೀಮನಂ ||

ಇದು ಲಾಕ್ಷಾಗೇಹದಾಹಕ್ಕಿದು ವಿಷಮವಿಷಾನ್ನಕ್ಕಿದಾ ನಾಡಜೂದಿಂ-
ಗಿದು ಪಾಂಚಲೀಪ್ರಪಂಚಕ್ಕಿದು ಕೃತಕಸಭಾಳೋಕನಭ್ರಾಂತಿಗೆಂದೋ-|
ವದೆ ಪೊಯ್ದಿಂ ಕಾಲ್ಗಳಂ ತೋಳ್ಗಳನಗಲುರಮಂ ಕೆನ್ನೆಯಂ ನೆತ್ತಿಯಂ ಕೋ-
ಪದಿನಯ್ದುಂ ದುರ್ನಯಕ್ಕಯ್ದೆಡೆಯನುರುಗದಾದಂಡದಿಂ ಭೀಮಸೇನಂ ||

ಚರಣಾಕ್ರಾಂತಂ ಮಹೀಮಂಡಲಮದಿರ್ದೆ ಭುಜಾಕ್ರಾಂತಮಾಶಾ
ಗಜೇಂದ್ರೋ
ತ್ಕರಮಾಶಾಭಿತ್ತಿಯಿಂದಂ ಪೆಱದೆಗೆಯೆ ಗದಾಕ್ರಾಂತ ಮುದ್ಭ್ರಾಂತ ವಿದ್ಯಾ-|
ಧರ ಚಕ್ರಮಂ ಗೆಂಟುಗೆಂಟಾಗಿರಿಸೆ ನಿಜವಿಮಾನಂಗಳಂ ಭೈರವಾಡಂ-
ಬರಮಾಕಲ್ಪಾಂತಕಾಲಂ ನೆಗಟ್ದುದು ಸಮರಂ ಭೀಮದುರ್ಯೋಧನೀಯಂ ||

ದುರ್ಯೋಧನಾವಸಾನ

ಅಂತಿರ್ದ ಕುರುನಂದನನಂ ಗುರುನಂದನಂ ನೋಡಿ

ಕುಳಿಕನ ಪಲ್ಗಳಂ ಮುಱಿಯೆ ಮೋದಿದರಾರ್ ಪಿಡಿದೆತ್ತಿ ಸಿಂಹಮಂ
ಮುಳಿಯಿಸಿ ದಾಡೆಯಂ ಪಿಡಿದು ಕಿಟ್ತುವರಾರ್ ಮದಹಸ್ತಿಯಂ ನೆ[ಱಂ]-|
ಗೊಳೆ ನೆಲಕಿಕ್ಕಿ ಕೋಡೆರಡುಮಂ ಕುಸಿಯೊತ್ತಿದರಾರ್ ಸುರಾದ್ರಿನಿ-
ಶ್ಚಳನಿಬಿಡೋರುಮಂಡಲಮನಾರುಡಿದರ್ ಫಣಿರಾಜಕೇತನಾ ||

ಎನ್ನ ವಂಚಿಸಿ ಬಂದುದ
ಱಿಂ ನಿನಗಿನಿತಾಯ್ತುವಸ್ಥೆ ಕುರುಪತಿ ಕೇಳ್ ನೀ |
ನಿನ್ನುಂ[ಪ್ರತಿಕಾರ]ಮನಱಿ
[ಪಿ]ನ್ನುಂ ನೋಡೆನ್ನ ಶಕ್ತಿಯಂ ಭಕ್ತಿಯುಮಂ ||

ಎಂದು ನುಡಿದ ಭಾರದ್ವಾಜತನೂಜನ ನುಡಿಗೆ ರಾಜರಾಜನವಧಾರಿಸಿ

ಅರಿಚರಣಪಾಂಸು ಪತ್ತಿರೆ
ಶರೀರಮಂ ತೊಡೆದು ಕಳೆದೆ ವಸ್ತ್ರಾಂಚಲದಿಂ |
ಗುರುನಂದನ ನೀನೆನ್ನೀ
ಪರಿಭವಪಾಂಸುವನದೆಂತು ಪೇಟ್ ಕಳೆದಪೆಯೋ ||

ವ || ಎಂದು ಪರಮನಿರ್ವೇಗಪರಾಯಣನಾಗಿ ನುಡಿದು

ಹರಿಯನುಬಲದಿಂ ಪಾಂಡವ-
ರರಿಯರ್ ಗೆಲಲೀಶ್ವರಾಂಗನಶ್ವತ್ಥಾಮಂ |
ಪರಬಲಕಜೇಯನೆಂದಂ-
ತರಮಂ ನೃಪನಂತರಂಗದೊಳ್ ಚಿಂತಿಸಿದಂ ||

* * *

ಕಂಜವನದಂತೆ ಲಕ್ಷ್ಮೀ-
ರಂಜಿತಮುಂ ಚಿತ್ರಪತ್ರಮುಂ ಚಕ್ರಾಂಕ-|
ವ್ಯಂಜಿತಮುಮಪ್ಪ ಬೀಡಂ
ಮಂಜಿಱುವಂತಿರುಳೊಳಿಱಿದನಶ್ವತ್ಥಾಮಂ ||

ವ || ಅಂತಿಱುವಾಗಳ್ ಪಲವು ದಿವಸಂ ಕಾದಿ ಪಿರಿದುಂ ಪಯಣಂ ಬಂದು ಬೞಲ್ದು ಕೋರೈಸಿ ನಿದ್ರೆಗೆಯ್ದುವರ್ ತೊಟ್ಟನೆ ನಿದ್ರೆಯಿಂದೆೞ್ಚತ್ತು ಮುಟ್ಟೆವಂದಾಗಳಾ ಕಳಕಳಮಂ ಕೇಳ್ದು ಕರತಳದಿಂ ಕಣ್ಣಂ ಪೊಸೆಯುತ್ತುಮೆೞ್ದು ತಂತಮ್ಮ ತಲೆದೆಸೆಯೊಳಿರ್ದ ಕರವಾಳಂ ಕೊಂಡು ನಿಂದ ನೆ[ಲೆ]ಯೊಳ್ [ತ]ಳರದಿರ್ದ ತಲೆಗಾಪಿನಾಳುಕ್ಕಡದಾಳಮೇಲಿಕ್ಕಿ ಉಕ್ಕಡದಾಳ್ [ಘ]ರ-ವಟ್ಟಿಗೆಯಾಳ ಮೇಲಿಕ್ಕಿ [ಘ]ರವಟ್ಟಿಗೆಯಾಗೆ ಮಾಮಸಕಂ ಮಸಗಿ ಜವಂ ನೇಱು ಬರ್ಚಿ ದಂತೆ ಪೆಂಡಿರ್ ಮಕ್ಕಳೆನ್ನದೆ ನಿವಳಿವಟ್ಟಮಪ್ಪಿಸಂ ಬಂದಕ್ಷೋಹಿಣೀಬಲ ಮೆಲ್ಲಮಂ ಪೇಱೆ ಪೆಸರಿಲ್ಲವೆಂಬಂತೆ ಕೊಂದು ತನಗೆ ಕಟ್ಟಿದಿರೊಳಿರ್ದ ಧೃಷ್ಟ ದ್ಯುಮ್ನನುಮಂ ಮುಟ್ಟೆ ಮೂದಲಿಸಿ ತಮ್ಮಯ್ಯನಂ ಪರಿಭವಿಸಿದ ಪಗೆಯಂ ಕೊಂದು ದೆಸೆವಲಿಗೆಯ್ದು ಶಿಖಂಡಿ ಚೇಕಿತಾನಕ ಯುಧಾಮನ್ಯೂತ್ತ— ಮೌಜಸಪ್ರಭೃತಿಗಳುಮನಿಕ್ಕಿ ಪಾಂಡವರ ಶಂಕೆಯಿಂ ಶ್ರುತಸೋಮಕ ಪ್ರಭೃ ತಿಗಳಪ್ಪ ಪಂಚಪಾಂಡವರ ತಲೆಗಳಂ ಕೊಂಡು ಥಳಥಳನೆ ನೇಸಱ್ ಮೂಡು ವಾಗಳ್ ಬಂದು ಕೊಳ್ ನಿನ್ನ ನಚ್ಚಿನ ಪಾಂಡವರ ತಲೆಗಳಿವೆಯೆಂದು ದುರ್ಯೋಧನನ ಮುಂದಿಕ್ಕಿದೊಡೆ ಆ ಮಹಾನುಭಾವನಾ ತಲೆಗಳಂ ನೀಡುಂ ಭಾವಿಸಿ ನೋಡಿ

ಪವನಜನಾಸ್ಯಮುಲ್ಲಿದವನಾನನಮಪ್ಪೊಡೆ ಮಟ್ಟಮಿರ್ದು ನೋ-
ಡುವುದೆ ಮದೀಯವಕ್ತ್ರಮನೆ ಕೆಮ್ಮನೆ ಪೋಯ್ತುಱಿವಿಲ್ಲದಾಯ್ತು ಪಾಂ-|
ಡವರ ಶಿರಂಗಳಲ್ಲಿವಿವು ಪಾಂ[ಡವ]ಸೂನುಗಳಪ್ಪ ಪಂಚಪಾಂ-
ಡವರ ಶಿರಂಗಳಂ ನೆಱೆ ವಿಚಾರಿಸದಕ್ಕಟ ಕೊಂಡು ಬರ್ಪುದೇ ||

ಪರಮೇಶ್ವರಾವತಾರನೆ
ಪರಮಜ್ಞಾನಿಯೆ ವಿವೇಕವಿಕಳರವೋಲ್ ಬಾ-|
ಲರ ತಲೆಯನರಿದು ತಂದೆಯೊ
ದೊರೆಕೊಂಡುದು ನಿನಗೆ ಪಾತಕಂ ಬಾಲವಧಂ ||

ಅದು ಕಾರಣಂ ರೌದ್ರಪ್ರಾಯಶ್ಚಿತ್ತ ಪ್ರವರ್ತನಾರ್ಥಂ ಹಿಮವತ್ಪರ್ವತಕ್ಕೆ ಪೋಪು[ದೆಂದು] ಚಿತ್ತಸಮಾಧಾನಂಗೆಯ್ದು[ಅ]ಜಿತನಂ ಸ್ಮರಿಯಿಸಿ ಸುರಲೋಕಮಂ ಸಾಧಿಸುವೆನೆಂದು ಅಶ್ವತ್ಥಾಮಾದಿಗಳಂ ಪಿಸರ್ಜಿಸಿ ತದ್ದಿನಾವಸಾನದೊಳ್ ದುರ್ಯೋಧನಂ ಪ್ರಾಣವಿಸರ್ಜನೋನ್ಮುಖನಾದಂ

ಪಂಕಜಮುಂ ಸುಹೃದ್ವದನ ಪಂಕಜಮುಂ ಮುಗಿವನ್ನಮುಗ್ರತೇ-
ಜಂ ಕಿಡುತಿರ್ಪಿನಂ ನಿಜಕರಂಗಳನಂದುಡುಗುತ್ತುಮಿರ್ಪ ಚ
ಕ್ರಾಂಕಮಗಲ್ವಿನಂ ಕ್ರಮದಿನಂಬರಮಂ ಬಿಸುಟುರ್ವಿಗಂಧಕಾ-
ರಂ ಕವಿತರ್ಪಿನಂ ಕುರುಕುಲಾರ್ಕನುಮರ್ಕನುಮಸ್ತಮೆಯ್ದಿದರ್ ||

ಕರ್ನಾಟಕ ಕಾದಂಬರೀ ಸಂಗ್ರಹ

ಮಹಾಶ್ವೇತೆಯ ಸಂದರ್ಶನ

ಲಲಿತ ಲತಾಗೃಹದಿಂದೂ
ಪಲಮಂ ಸಾರ್ದುಂಡೆಸುತ್ತಿ ಮೇಲುದನಾಗಳ್
ತಲೆಗಿಂಬುಮಾಡಿ ನೃಪಕುಲ
ತಿಲಕಂ ಪಟ್ಟಿರ್ದನಿರ್ಪುದುಂ ತತ್‌ಕ್ಷಣದೊಳ್—

ಮುರಿದ ಕೊರಲ್ ಬಟಲ್ದೆಳಪಲಾಟಿಪ ಮೆಯ್ ಕಡೆವಾಯ ಲೋಳೆಯೊಳ್
ಪೊರೆದುಗುತರ್ಪ ಪಚ್ಚಪಸಿಯಚ್ಚ ಗಱುಂಕೆ ಮರಲ್ದ ದಿಟ್ಟಿ ಕ
ತ್ತರಿಮೊನೆಗೊಂಡೆಬಲ್ವ ಕಿವಿ ಸೂಚಿಸಿದಪ್ಪುದು ಸೋಲ್ತ ಭಾವಮಂ
ತುರಗಮಿದೇನನಾಲಿಸುತುಮಿರ್ದಪುದೆಂದು ನರೇಂದ್ರ ಚಂದ್ರಮಂ.

ವ || ಅಂದದನಚ್ಚರಿವಟ್ಟು ವೀಣಾವಿದ್ಯಾಧರಂ ಭಾವಿಸಿ ನೋಡುತ್ತುಮಿರ್ದನನ್ನೆಗಂ

ಎಲೆ ಪೆಣ್ದುಂಬಿಯ ಗಾವರಂಬೊರೆದು ಪೊಣ್ಮುತ್ತಿರ್ದ ಪುಷ್ಪಾಸ್ತ್ರಚಾ
ಪಲತಾ—ಜ್ಯಾರವದಂತಮಾಸುಷಮೆನಿಪ್ಪೊಂದೋಜೆಯೊಳ್ ಸಂದ ಕಾ
ಕಲಿಯಿಂದಂ ಪುದಿದೊಯ್ಯನೊಯ್ಯನೆ ವಿಪಂಚೀನಾದಮಿಂತೀಪಳಂ
ಚಲೆಯುತ್ತಿರ್ದಪುದಲ್ತೆ ಸಾಲ್ವುದಿದೆ ತದ್ಗಂಧರ್ವರಂ ಸೋಲಿಸಲ್.

ಇದು ಮನುಜರ್ಗಗೋಚರಮೆನಿಪ್ಪ ಹರಾದ್ರಿಯ ತಪ್ಪಲಲ್ಲಿ ಗೇ
ಯದ ದನಿ ನುಣ್ಪುವೆತ್ತೆಸೆಯುತಿರ್ದಪುದೀಗಳೆ ಪೋಗಿ ನೋಡ್ಪೆನಾ
ನಿದನೆನುತುಂ ಕುತೂಹಲಿತ ಮಾನಸನಂದು ನರೇಂದ್ರನಂದನಂ
ಕುದುರೆಯ ಬೆನ್ಗೆ ವಂದು ನಡೆದಂ ಮೃಗಸೂಚಿತ ಗೇಯಮಾರ್ಗದಿಂ.

ವ || ಅಂತಿರ್ದ ಚರಾಚರಗುರುವಪ್ಪ ಶೂಲಪಾಣಿದೇವರಂ ಕಾಣ್ಬುದುವಾ ಪರಮೇಶ್ವರನ ಸಕಳಜಗದಭೀಷ್ಟಫಲದಾಯಕಮಪ್ಪ ದಕ್ಷಿಣಾಮೂರ್ತಿಯ ನಾಶ್ರೈಸಿ

ಅಮೃತಾಂಭೋರಾಶಿಪೂರಪ್ರತಿಮ ನಿಜತಪಸ್ಸಂಚಯಂ ಪರ್ವಿತೋ ಲೋ
ಕಮನೆಂಬಂತಿರ್ದ ದೇಹಾಂಶುಗಳ ಬಳಗದಿಂ ಕಾನನಾಸೀಕಮಂ ದಂ
ತಮುಯಂ ಮಾಟ್ಪಂತೆ ತಾರಾಚಳಮನಸದಳಂ ಸುಣ್ಣಿಪಂತೊರ್ವಳತ್ಯು
ತ್ತಮದಿವ್ಯಾಕಾರೆ ಕುಳ್ಳಿರ್ದತಸುಹರನನಾರಾಧಿಸುತ್ತಿರ್ದಳಾಗಳ್.

ಕಡೆದರೊ ಶಂಖದಿಂ ತೆಗೆದರೋ ನವಮೌಕ್ತಿಕದಿಂ ಮೃಣಾಳದಿಂ
ಪಡೆದರೊ ದಂತದಿಂದೆಸೆಯೆ ಮಾಡಿದರೋ ರುಚಿರೋಜ್ಜ್ವಲಾಂಗಮಂ
ಬಿಡದಮೃತಾಂಶುರಶ್ಮಿಗಳ ಕುಂಚಿಗೆಯಿಂದಮೆ ಕರ್ಚಿ ಪಾರದಂ|
ದೊಡೆದರೊ ಪೇಡೆನಲ್ ಕರಮೆ ಕಣ್ಗೆಸೆದಿರ್ದುದು ರೂಪು ಕಾಂತೆಯಾ.

ಪೊಳೆವೆಳನೇಸಱುಂ ತೆಗೆದ ರಶ್ಮಿಗಳಂತೆ ಮಡಲ್ತು ಕಾಂತಿಯಂ
ತಳೆದಳಮಿಂಚಿನೊಳ್ದಳಿರ್ಗಳಂತೆ ಕವಲ್ತು ಮೃಗಾಂಕಮೌಳಿ ನಿ
ರ್ಮಳ ಪದ ಭಸ್ಮ ರೇಣುಗಳೆನಲ್ ನವಮಜ್ಜನವಾಃಕಣಂಗಳಂ
ತಳೆದು ಪೆಗಲ್ಪರಂ ಬಳೆದು ರಂಜಿಸುಗುಂ ಜಡೆಗಳ್ ಮೃಗಾಕ್ಷಿಯಾ.

ರಸವೊಸರ್ವಂತು ಪಾಡುತಿರೆ ಶುದ್ಧಮನೋಮಣಿದೀಪ್ತಿ ಪೊಣ್ಮಿ ರಾ
ಜಿಸಿದಪುದೋ ಸ್ತುತಿಪ್ರಕರನಿರ್ಮಳವರ್ಣಸಮೂಹಮೊತ್ತುಗೊಂ
ಡೆಸೆವುದೊ ಪೇಡೆನಲ್ ಪೊಳೆವ ದಂತಮರೀಚಿಗಳಿಂದಮೀಶ್ವರಂ
ಗೊಸೆದಭಿಷೇಕಮಂ ಮಗುಡೆ ಮಾಡುವವೊಲ್ ಬಗೆಗೊಪ್ಪಿ ತೋಱಿದಳ್.

ವ || ಅಂತು ವಿರೂಪಾಕ್ಷದೇವರನಾರಾಧಿಸುತ್ತುಮಿರ್ದ

ಅತಿಗಂಭೀರೆಯನೂರ್ಜಿತ
ಮತಿಯಂ ನಿರ್ಮಳೆಯನಮಳಧೈರ್ಯಾದಿ ಗುಣಾ
ನ್ವಿತೆಯಂ ದೃಢಪಾಶುಪತ
ವ್ರತೆಯಂ ಕನ್ಯಕೆಯನಂದು ಕಂಡಂ ಕ್ಷಿತಿಪಂ

ವ || ಅಂತು ಕಂಡವನಿತಳಕ್ಕವತರಿಸಿ ತುರಂಗಮನೊಂದು ತರುಶಾಖೆಯೊಳ್ ಕಟ್ಟಿ ಭಗವದಿಂದುಮೌಳಿಯ ಪುರೋಭಾಗದೊಳ್ ನಿಂದು ಪೊಡವಟ್ಟು ದಿವ್ಯ ಕಾಂತೆಯ ರೂಪಸಂಪತ್ತಿಗಂ ಕಾಂತಿಗಮುಪಶಾಂತಿಗಂ ವಿಸ್ಮಯಂಬಟ್ಟು ನೋಡುತ್ತುಮಿರ್ದು

ಕಿನ್ನರಯುಗ್ಮಮೆತ್ತ ವನಮೆತ್ತ ಸರೋರುಹಷಂಡಮೆತ್ತ ಗೀ-
ತಂ ನಯದಿಂದೆ ಬಂದೆಸೆವುದೆತ್ತ ಭವಾಲಯಮೆತ್ತ ಭೋಂಕನೀ
ಕನ್ನೆಯ ಕಾಣ್ಕೆಯೆತ್ತ ಮನುಜಂಗೆನಗೆಂದು ನರೇಂದ್ರನಂದನಂ
ತನ್ನೊಳೆ ತಾನೆ ವಿಸ್ಮಯದೆ ಭಾವಿಸುತಿರ್ದನದೊಂದು ಜಾವಮಂ.

ಸುರಮುನಿಸಿದ್ಧಖೇಚರರೊಳಾವ ಕುಲಂ ನಿಜಜನ್ಮದಿಂದಲಂ-
ಕರಿಸಿತೊ ಪಂಚಭೂತಮಯಮಾಗಿಯುಮೀ ತನುವಿಂದುಕಾಂತಿಯಂ
ತಿರೆ ಪೊಳೆಯುತ್ತುಮಿರ್ದಪುದಿದೇಂ ಪೊಸಜವ್ವನದೇೞ್ಗೆಯೊಳ್ ತಪ-
ಶ್ಚರಣಮಿದೇಂ ಪೊದಳ್ದಿಡಿದ ಕಾನನದೊಳ್ ಜಿಡದೊರ್ಬಳಿರ್ಪುದೇಂ

ವ|| ಎಂದು ಬೆಸಗೊಳ್ವುದುಂ ಕಿಱಿದು ಬೇಗಂ ತನ್ನೊಳ್ ತಾನೆ ಭಾವಿಸಿ

ಪೊಳೆವಲರ್ಗಣ್ಗಳಿಂ ಮಿಳಿರ್ವ ಬೆಳ್ಪು ರಸಾತ್ಮಕಮಾಗಿ ಗಂಡಮಂ-
ಡಳತಳದಿಂದಮಂದಿಟಿಯುತಿರ್ದುದೆನಲ್ ನಯನಾಂಬು ಲೋಚನಂ-
ಗಳಿನಿರದುಣ್ಮೆ ಶಬ್ದಮಣಮಿಲ್ಲದೆ ತೊಟ್ಟನೆ ಕಣ್ಮುಗುಟ್ದು ಳ-
ಗ್ಗಳಿಪಬಲಿಂದೆ ಮಾನಿನಿ ಮನಕ್ಕತಿವಿಸ್ಮಯಮಾಗೆ ಭೂಪನಾ

ವ|| ಅಂತಾ ಕಾಂತೆ ಶೋಕಾಕ್ರಾಂತೆಯಾಗಿ

ರಸೆಯಂ ತಾಂ ತಾಂಕಿ ಕಲ್ಪಾಂತದ ಬಱಸಿಡಿಲೆಯ್ತಂದು ಪೊಯ್ಯಲ್ ನೆಲಂ
ಕಂಪಿಸುವಂತತ್ಯಂತಶೋಕಾಕುಲತೆಯಿನಱುತಿರ್ದಪ್ಪಳೋರಂದದಿಂ ಮು-
ಟ್ಟಿಸಲಿನ್ನಾರಾರ್ಪರೀ ಶೋಕಮನೆನುತೆ ಭಯಂಗೊಂಡಿದೆತ್ತೆತ್ತಲೀಗಳ್
ಬೆಸಗೊಂಡೆಂ ಕೆಮ್ಮನೆಂದುಮ್ಮಳಿಸಿ ಪಿರಿದುಮಂದಾ ನೃಪಂ ವ್ಯಗ್ರನಾದಂ

ವ|| ಅಂತು ನೃಪನತಿವ್ಯಗ್ರನಾಗಿ ಮುಖಪ್ರಕ್ಷಾಳನಾರ್ಥಂ ಪೇರಡವಿಯೊಳಂಜುಳಿಯಿಂ ಜಲಮಂ ತಂದು ದೇವಿಯುರವಧಾರಿಸುವುದೆಂದು ಭೂಪನಿಳಿಂಪನುಪರೋಧಿಸುತ್ತುಮೆಱೆಯೆ

ಅಳವಿಲ್ಲದಱುತ್ತಿರೆ ಕೆಂ-
ಪೆಳಸಿದ ಬಾಷ್ಪಾಂಬುಪೂರ್ಣಲೋಚನಂ ತ-
ಜ್ಜಳದಿಂದೆ ಕರ್ಚಿ ವಲ್ಕಾಂ
ಚಲದಿಂ ನಿಜವದನ ಬಿಂಬಮಂ ಸತಿ ತೊಡೆದಳ್

ವ|| ಅಂತಾ ಕಾಂತೆ ಶೋಕಾಕ್ರಾಂತೆಯಾಗಿರ್ಪುದಂ ಕಂಡಿಂತಪ್ಪವರುಮಱುವಂದಮದ್ಭುತಮೆಂದು ಮನದೊಳ್ ಭಾವಿಸುತ್ತುಮಿರೆ

ಉರಗಮುಖೋಗ್ರದಂಷ್ಟ್ರ ಸಹಜಾತೆಯನೂರ್ಜಿತಕಾಲಪಾಶ ನಿ-
ಷ್ಠುರತರರೂಪೆಯಂ ಸಹಜಶಾಕಿನಿಯಂ ವಿಷಕನ್ಯಕಾ ಸಹೋ-
ದರಿಯನಪಾರಘೋರದುರಿತಾರ್ಣವ ಜಾತೆಯನಾತ್ಮವಲ್ಲಭಾಂ
ತರಿತೆಯನೆನ್ನನಣ್ಣ ಬೆಸಗೊಳ್ವುದೆ ಪೇೞ್ವೆನೆ ತತ್ಪ್ರಪಂಚಮಂ

ಗತಭಾಗ್ಯೆಯೆನಿಪ ಪಾಪಾ
ನ್ವಿತೆಯಂ ಪತಿದುಃಖಭಾಜನೆಯ ವೃತ್ತಾಂತ
ಸ್ಥಿತಿಯನದೇಂ ಕೇಳ್ದಪೆ ನೃಪ-
ಸುತ ಕೌತುಕಮೆಂಬೆಯಪ್ಪೊಡುಸಿರ್ದಪೆನೀಗಳ್

ಮಹಾಶ್ವೇತೆಯ ವೃತ್ತಾಂತ

ನಿನಗೇಂ ಪೇಱ್ದಪೆನಾಂ ಮಹಾತ್ಮರೆನಿಸಿರ್ದಾ ತಂದೆಗಂ ತಾಯ್ಗಮೊ-
ರ್ವನೆ ನಿರ್ಭಾಗ್ಯನಿವಾಸೆಯೆಂ ನಿಖಿಲಪಾಪಾಕಾರೆಯೆಂ ದುಃಖಭಾ-
ಜನೆಯೆಂ ಪುಟ್ಟಿದೆನೆನ್ನನೀಕ್ಷಿಸಲೊಡಂ ತಾತಂ ಮಹಾಶ್ವೇತೆಯೆಂ
ದನುರಾಗಂಬೆರಸಿಟ್ಟನೆನ್ನ ಪೆಸರಂ ಗಂಧರ್ವಚಕ್ರೇಶ್ವರಂ

ವ|| ಆಗಳೊರ್ಮೆ ವಸಂತದೊಳುಳ್ಳಲರ್ದ ನವನಳಿನ ಕುಮುದ ಕುವಲಯ ಕಲ್ಹಾರಂಗಳಿಂ ಕಣ್ಗೊಳಿಪಚ್ಛೋದಸರಸಿಗೆ ಜನನಿವೆರಸು ಮಜ್ಜನಕ್ಕೆಂದು ನಡೆತಂದು ನೋಟ್ಪಲ್ಲಿ ಮುಂದೆ ಮುನಿಕುಮಾರನೊರ್ವನೆಯ್ತರುತಿರೆ-

ಕರತಳಮೊಂದಱೊಳ್ ಮಣಿಕಮಂಡಲು ನಾಳಸಮೇತಮಪ್ಪ ಕೇ
ಸರ ಫಲದಂತಿರ್ದುದು ಮನೋಜವಿನಾಶದಿನಟ್ಟ ತನ್ನ ನೋ
ಹರಿಯ ಪೊದಳ್ದ ಕಣ್ಬನಿಗಳಂತಮಲಸ್ಫಟಿಕಾಕ್ಷಮಾಲೆ ಸುಂ
ದರತರಮಾದುದೊಂದು ಕರಪಲ್ಲವದೊಳ್ ಮುನಿಪಾಗ್ರಗಣ್ಯನಾ

ತನಗನುರೂಪಮೆಂಬಿನೆಗಮೊರ್ವ ಕುಮಾರ ತಪಸ್ವಿ ದೇವತಾ
ರ್ಚನೆಗೆ ವನಕ್ಕೆ ಬಂದು ಪೊಸವೂಗಳನಟ್ತಿಯೊಳಾಯ್ದು ಕೊಯ್ದು ಬೆ-
ನ್ನನೆ ಬರಲೀ ವನಾಂತರಸರೋವರದಲ್ಲಿಗೆ ಮಿಾಯಲೆಂದು ಮೆ-
ಲ್ಲನೆ ಬರುತಿರ್ದ ತನ್ಮುನಿಕುಮಾರನನಾಂ ಬಿಡೆ ನೋಡಿದೆಂ ನೃಪಾ

ನವಯೌವನದೊಳ್ ಗುಣದೋ-
ಷವಿಚಾರಮನಿಂತು ಮಾಡಲೀಯದ ಭಾವೋ-
ದ್ಭವನಿಂ ಪರವಶೆಯಾದೆಂ
ನವಕುಸುಮಾಸವದೆ ಸೊರ್ಕಿದಳಿನಿಯ ತೆಱದಿಂ

ಪಲಬರ್ ಕಾಂತೆಯರೊಲ್ದು ಪೋದರೊಳರೆಂತುಂ ಕಾಂತರೊಳ್ ಬೇಟವ-
ಗ್ಗಲಿಸಲ್ ಕಾಣದೆ ಲಜ್ಜೆಗೆಟ್ಟರೊಳರಿಂತೀ ಲೋಕದೊಳ್ ರೂಪುಗಾ-

ಣಲೊಡಂ ತೊಟ್ಟನೆ ಲಜ್ಜೆಗೆಟ್ಟಱಿವುಗೆಟ್ಟೆನ್ನಂತೆ ಕಣ್ಗೆಟ್ಟು ಪೇ-
ಱೊಲವಿಂದಿಂತೆರ್ದೆಗೆಟ್ಟರಾರೆನುತುಮತ್ಯೌತ್ಸುಕ್ಯಮಂ ತಾಳ್ದಿದೆಂ

ಪೆಸರೇನಾರ್ಗೀತನೀ ಜವ್ವನಿಗ ತವಸಿ ತೊಟ್ಟಿರ್ಪ ಕರ್ಣಾವತಂಸಂ
ಪೊಸತೀ ಲೋಕಕ್ಕಿದಾವಂಘ್ರಿಪದ ಪೊಳೆವ ಪೂಗೊಂಚಲಿಂದಾದುದೋ ನೀಂ
ಬೆಸಸಲ್ವೇಟ್ಕಿಂತಿದಂ ಕೌತುಕಮನೆನಗೆನುತ್ತುಂ ನಮಸ್ಕಾರಪೂರ್ವಂ
ಬೆಸಗೊಂಡೆಂ ತನ್ಮನೀಂದ್ರಾನುಚರ ಮುನಿಯನಾನೆಂದತಿಪ್ರೀತಿಯಿಂದಂ

ವ || ಅಂತು ಬೆಸಗೊಳೆ

ಬೆಸಗೊಳ್ವುದಱಿಂದಿದನು-
ದ್ದೆಸವಾವುದು ತರುಣಿ ನಿನಗೆ ಕೌತುಕಮೆನೆ ಕೇ-
ಳುಸಿರ್ದಪೆನೆಂದಾ ಮುನಿಪಂ
ನಸುನಗುತುಂ ಪೇೞಲಾಗಳುದ್ಯತನಾದಂ

ವ || ಅದೆಂತೆನೆ ಶ್ವೇತಕೇತು ಮಹಾಮುನಿಗಂ ಲಕ್ಷ್ಮಿಗಂ ಕುಮಾರಂ ಪುಂಡರೀಕ ನೆಂಬೊನೀತಂಗೆ ಶೈಶವಂ ಪತ್ತುವಿಡಲೊಡಮಖಿಳ ವಿದ್ಯಾ ಕಲಾಪದೊಳ್ ಪರಿಣತನಂ ಮಾಡಿ ಯತಿತ್ವಮಂ ಕಯ್ಕೊಳಿಸೆ ತದನುಷ್ಠಾನಪರಾಯಣನಾದ ಮಹಾನುಭಾವನೀತಂಗೀ ವ್ರತವಿರುದ್ಧಮಪ್ಪ ಕುಸುಮಮಂಜರಿಯೆಂತು ಬಂದುದೆಂಬೆಯಪ್ಪೊಡೆ

ಇಂದು ಚತುರ್ದಶಿಯಪ್ಪುದ-
ಱಿಂದಂ ಕೈಲಾಸವಾಸಿಯಂ ಕಾಣಲ್ಕಾ-
ನಂದದೆ ದಿವದಿಂದಿರ್ಬರು-
ಮೊಂದಾಗಿ ಬರುತ್ತುಮಿರ್ಪುದುಂ ತತ್‌ಕ್ಷಣದೊಳ್

ವ || ವನದೇವತೆಯೊರ್ವಳ್ ಬಂದು ಪೊಡಮಟ್ಟು ಭುವನತ್ರಯಾಭಿರಾಮಮಪ್ಪ ನಿನ್ನ ಸೌಕುಮಾರ್ಯಕ್ಕೆ ತಕ್ಕಲಂಕಾರಮಿ ದಿವ್ಯಕುಸುಮಮಂಜರಿಯನವ ತಂಸಂ ಮಾಡಿ ಪಾರಿಜಾತಜನ್ಮಮಂ ಸಫಲಂ ಮಾಟ್ಪುದೆಂದು ಬಿನ್ನವಿಸೆ ನಿಜ ರೂಪಸ್ತುತಿಗೆ ಲಜ್ಜಿಸಿ ಕೇಳದಂತೆ ಪೋಗೆ ಮತ್ತಂ ಬೆನ್ನನೆ ಪತ್ತಿ ಬರುತಿರ್ಪುದು ಮಾಂ ಕಂಡು ಕಾರುಣ್ಯದಿಂದೀ ಕಾಂತೆಗೆ ಸಂತೋಷಮಂ ಮಾಡಿಮೆನಲಿದೇಕೆ ಬೇಡವೇಡೆನೆಯುಂ ಕಿವಿಯೊಳ್ ತೊಡರ್ಚಿ ಪೋದಳೀ ಕುಸುಮಮಂಜರಿಯ ನೆಂದು ಸಹಚರಮುನಿ ಪೇೞೆ ಪುಂಡರೀಕಂ ದರಹಸಿತಾಧರಕಪೋಲತಲನಾಗಿ

ಎಳಸುತ್ತಿರ್ದಪೆ ಪುಷ್ಪಮಂಜರಿಗೆ ಕೊಳ್ಳೀ ಸುತ್ತಿದೇಕೆಂದು ಸಂ-
ಚಳಿಸುತ್ತುಂ ನಿಜಕರ್ಣದಿಂ ತೆಗೆದು ಸೋಲ್ತೆಂ ಕೂಡು ನೀನೆನ್ನೊಳೆಂ-

ದಳಿಮಾಲಾರವದಿಂದೆ ಪೇಟ್ವ ತೆಱದಿಂ ಮತ್ಕರ್ಣದೊಳ್ ತಾರಕೋ-
ಜ್ಜ್ವಲಮಂ ರಂಜಿಪ ಪುಷ್ಪ ಮಂಜರಿಯನತ್ಯೌತ್ಸುಕ್ಯದಿಂದಿಕ್ಕಿದಂ

ಇಂ ಪೇಟ್ವುದೇನನೆನ್ನ ಕ-
ದಂಪಿನ ನಸುಸೋಂಕಿನೊಂದು ಸುಖದಿಂದಾದಂ
ಕಂಪಿಸುತಿರೆ ಕರತಳದಿಂ-
ದಂ ಪೋದತ್ತಕ್ಷಮಾಲೆ ನಾಣ್ಚೆರಸಾಗಳ್

ವ|| ಅಂತು ಪೋದೊಡವಱಿಯದಿರಲಾನಾ ಅಕ್ಷಾವಳಿಯಂ ನೆಲಕೆ ಬೀಟ್ವನಂ ಪಿಡಿದು ತೊಳಗುವ ಹಾರಮಂ ತಳೆವಂತೆ ಕೊರಲೊಳ್ ತಳೆದು ಸುಖಮಂ ತಳೆಯಲಿಂತಾ ವ್ಯತಿಕರದೊಳೆನ್ನಂ ಛತ್ರಧಾರಿಣಿ ನೋಡಿ

ತಡೆದಿರಲಾಗದಿಂತು ಮೊಗಮಜ್ಜನಮಂ ನೆಱೆ ಮಾಡಿ ದೇವಿಯರ್
ನಡೆಗೊಳಲಿರ್ದಪರ್ ಮನೆಗೆ ಮಜ್ಜನಕೀಗಳೆ ರಾಜಪುತ್ರಿ ನೀಂ
ನಡೆವುದೆನುತ್ತುಮಿಚ್ಚೆಯಣಮಿಲ್ಲದೊಡಂ ತೆಗೆದಳ್ ಕರಂ ಮನಂ-
ಕಿಡೆ ಪೊಸತಪ್ಪದೊಂದು ಪಿಡಿಗಂಕುಂಶಮಿಟ್ಟು ಮರಳ್ಚುವಂದದಿಂ

ಕಾದಂಬರಿಯ ಪ್ರಥಮದರ್ಶನ

ವ|| ಅನಂತರಂ ಮಹಾಶ್ವೇತೆ ಕಾದಂಬರಿಯನಿಂತೆಂದಳ್ ಚಂದ್ರಾಪೀಡನೆಂಬೀ ಮಹಾನುಭಾವಂ ಭಾರತವರ್ಷದ ರಾಜನುಂ ಕ್ಷಪಿತ ಪ್ರಜಾಪೀಡನುಮೆನಿಸಿದ ತಾರಾಪೀಡನರೇಂದ್ರಂಗೆ ನಂದನಂ ದಿಗ್ವಿಜಯ ಪ್ರಸಂಗದಿಂ ಬಟಿಸಂದೀ ಪ್ರದೇಶಕ್ಕೆ ಬಂದನಲ್ಲದೆಯುಂ ಪರಿತ್ಯಕ್ತ ಸಕಲಸಂಗೆಯಾಗಿ ಕಲ್ಲೆರ್ದೆಯ ಳೆನಿಸಿದೆನ್ನಂ ಕಾಣಲೊಡನೆ ಸ್ವಭಾವಸರಳತೆಯನಪ್ಪುಕಯ್ದು ನಿಜಗುಣದಿಂ ನಿಷ್ಕಾರಣಬಂಧುವುಂ ನಿರ್ನಿಮಿತ್ತನುಮೆನಿಸಿದನೀ ಮರ್ತ್ಯಲೋಕದ ಸಫಲತೆ ಯುಮಂ ಸೌಭಾಗ್ಯದ ಭಾಗ್ಯಮುಮಂ ಮನುಷ್ಯರಗ್ರಾಮ್ಯತೆಯುಮಂ ನೀನುಂ ಕಾಣ್ಬೆಯೆಂದೇ ತಾನುಮಿಲ್ಲಿಗೊಡಗೊಂಡು ಬಂದೆಂ

ಅರಸನನಾಂ ಕಂಡಱಿಯೆಂ
ಪರಿಚಯಮಿಲ್ಲೆನ್ನೊಳೆಂದು ಮಿಗೆ ತಾಂ ನಾಣ್ಚು-
ತ್ತಿರದಿಂದೆನ್ನೊಳದೆಂತಂ
ತಿರೆ ನೀಂ ನೆಗಟ್ವುದು ನಿರಂತರಂ ಕಮಲಮುಖೀ

ವ || ಎಂದು ಮಹಾಶ್ವೇತೆಕಾದಂಬರಿಗಱಿಪುವುದುಂ ಚಂದ್ರಾಪೀಡನುಂ ಕಯ್ಗಳಂ ಮುಗಿಯೆ ಸರ್ವಾಂಗ ಪುಳಕಮುಂ ತಳೆದು

ಪಿರಿದೊಂದಟ್ಟುಱೊಳೊಲ್ದು ನೋೞ್ಪವಳ ದೀರ್ಘಾಪಾಂಗದೇಶಕ್ಕೆ ಚೆ-
ಚ್ಚರಮಾಗಳ್ ಪರಿತಂದ ಸೇದೆಯೊದವಲ್ ಘರ್ಮೋದಬಿಂದೂತ್ಕರಂ
ಸುರಿಯುತ್ತಿರ್ಪುದು ಕಣ್ಣ ಪಾಪೆಗೆಲೆ ನೋಡೆಂಬಂದದಿಂ ಸ್ನೇಹನಿ-
ರ್ಭರವಾ ಕಾಂತೆಗೆ ಭೋಂಕೆನಲ್ ಸುರಿದುವಾನಂದಾಶ್ರುಬಿಂದೂತ್ಕರಂ

ವ || ಅನಂತರಂ ಪರಿಜನಂ ಸಂಭ್ರಮಂಬೆರಸು ತಂದು ಶಯನತಳ ಶಿರೋಭಾಗದೊಳಿಕ್ಕಿದ ಹೇಮಪದಾಂಕಿತಾಸನದೊಳರಸಂ ಕುಳ್ಳಿರೆ ಕಾದಂಬರಿ ಮಹಾಶ್ವೇತೆಯೊಡನೆ ನಿಜಪರ್ಯಂಕದೊಳ್ ಕುಳ್ಳಿರ್ಪುದುಂ ಮಹಾಶ್ವೇತೆಯ ಕಣ್ಣಱಿದು ವೇಣುರವಂಗಳುಮಂ ವೀಣಾನಾದಂಗಳುಮಂ ಗೀತಸ್ವನಂಗಳುಮಂ ಮಾಗಧಿಯರ ಜಯಶಬ್ದಂಗಳುಮಂ ಪ್ರತೀಹಾರಿಯರ್ ನಿಮಿರಿಸುತ್ತುಮಿರ್ದರನ್ನೆಗಂ

ಪ್ರಿಯದಿಂ ಕಾಂತೆ ಮಹಾಶ್ವೇ-
ತೆಯ ಕಾಲಂ ತಾನೆ ಕರ್ಚಿ ಪದಪಿಂದೆ ನಿಜ-
ಪ್ರಿಯಸಖಿಯೆನಿಸಿದ ಮದಲೇ-
ಖೆಯೆಂಬಳಿಂ ನೃಪನ ಕಾಲ್ಗಳಂ ಕರ್ಚಿಸಿದಳ್

ವ || ಅನಂತರಂ ತಾಂಬೂಲ ಪ್ರದಾನೋದ್ಯತೆಯಾದ ಕಾದಂಬರೀದೇವಿಯುಂ ಮಹಾಶ್ವೇತೆಯಿಂತೆಂದಳ್

ಭುವನಾಧೀಶ್ವರ ಸುತನಭಿ
ನವಾಗತಂ ಮಾನ್ಯನಪ್ಪನಾರಾಧ್ಯನೆ ದಲ್
ನವಗೆಲ್ಲ ತೆಱದಿನದಱಿಂ-
ದವೀವುದರಸಂಗೆ ಮುನ್ನಮಿಾ ತಂಬುಲಮಂ

ವ || ಎಂದು ನುಡಿಯೆ

ಆನಕ್ಕ ನಾಣ್ಚುವೆಂ ಪಿಡಿ
ನೀನೆ ನೃಪಂಗಿಕ್ಕು ತಂಬುಲಮನಱಿವೆನೆ ಪೇ-
ಡೀಸುಮನಾನೆಂದತಿ ಲ-
ಜ್ಜಾನತ ಮುಖಿಯಾಗಿ ಕಾಂತೆ ಮೆಲ್ಲನೆ ನುಡಿದಳ್

ವ || ಅಂತು ನುಡಿಯೆ ಮಹಾಶ್ವೇತೆ ಮತ್ತಮಾಗ್ರಹಿಸೆ ತಂಬುಲಂಗುಡಲುಜ್ಜು ಗಂಗೆಯ್ದು

ಬೆಮರಿಂ ಮುಟುಗಿದಪೆಂ ಸಂ-
ಭ್ರಮದಿಂ ಬಿಬ್ದಪ್ಪೆನರಸ ಕಯ್ಯುಗುಡು ನೀಂ ಬೇ-
ಗಮೆನಿಪ್ಪ ತೆಱದೆ ತಾಂಬೂ
ಲಮಿಳಿತಮಂ ಕಾಂತೆ ನೀಡಿದಳ್ ನಿಜಕರಮಂ

ವ || ಆಗಳ್ ಪಂಚೇಂದ್ರಿಯ ವೃತ್ತಿಗಳೆ ಬೇಱೆ ಬೇಱೆ ರೂಪಂದಳೆದುವೆನಿಪಂಗುಳಿಗಳಿಂ ಮನಂಗೊಳಿಸುವ ಕರಕಮಲಂಗಳಂ ಚಂದ್ರಾಪೀಡಂ ನೀಡೆ

ಎನಸುಂ ಮುಂದೆ ನಖಾಂಶು ನಿಳ್ಕೆ ನೃಪಹಸ್ತಾನ್ವೇಷಣಂಗೆಯ್ವವೋಲ್
ನಿನಗೆನ್ನಂ ಬಿಡದುಣ್ಮಿದೀ ಬೆಮರೆ ಕಯ್ನೀರಾಗಿರಲ್ ತೋರ್ಕೆಗೊ
ಟ್ಟನನಂಗಂ ಪಿಡಿ ನಿನ್ನ ಕಯ್ಯೆಡೆಯನೊಂದಿರ್ದಪ್ಪುದಿನ್ನೆನ್ನ ಜೀ
ವನವೆಂಬಂದದಿನಿಕ್ಕಿದಳ್ ನಡುಗುತುಂ ತನ್ವಂಗಿ ತಾಂಬೂಲಮಂ

ವ || ಅನಂತರಂ ಮಹಾಶ್ವೇತೆಗಂ ತಾಂಬೂಲಂಗೊಟ್ಟಳನ್ನೆಗಮೊರ್ವಂ ಕಂಚುಕಿ ಬಂದು ಗಂಧರ್ವರಾಜನುಂ ಮದಿರಾಮಹಾದೇವಿಯುಂ ನಿಮ್ಮಂ ನೋಡಲುತ್ಕಂಠರಾಗಿ ಕರೆಯಲಟ್ಟಿದರೆಂಬುದುಂ ಮಹಾಶ್ವೇತೆ ಪೋಗಲುದ್ಯೋಗಂಗೆಯ್ದರಸಂಗಿರ್ಕೆದಾಣಮಾವುದೆಂದು ಕಾದಂಬರಿಯಂ ಬೆಸಗೊಳ್ವುದುಮಾಕೆಯಿಂತೆಂದಳ್

ಮೊದಲೀ ಯರಸನನಾಂ ಕಾ
ಣ್ಬುದುಮೆನ್ನಯ ತನುವುಮೆನ್ನದಲ್ತೆನೆ ಮನೆಯಾ
ರದು ನೃಪತಿಗೆಲ್ಲಿ ಬಗೆ ಬ-
ರ್ಪುದಾವೆಡೆ ಭವನ್ಮನೋಜ್ಞಮಲ್ಲಿಯೆ ನಿಲಿಸಿಂ

ಪಂಪ ರಾಮಾಯಣ

ಸೀತಾ ಸ್ವಯಂವರ

ಜನಕಜೆ ವಶ್ಯದೀಪ ಕಲಿಕಾಕೃತಿಯಿಂ ಪುಗೆ ತತ್ಸಭಾ ನಿಕೇ-
ತನ ಕುಸುಮೋಪಹಾರ ಮಣಿರಂಗಮನಂಗಣಮಂ ನರೇಂದ್ರನಂ
ದನರ್ಗೆ ಮನೋವಿಕಾರದೊಡನಂಗವಿಕಾರಮದೇಂ ಪೊದಟ್ದುದೋ
ನನೆಕೊನೆಯೇಱುವಂತೆ ವನರಾಜಿ ಮಧು ಪ್ರಥಮ ಪ್ರವೇಶದೊಳ್

ಉದಯಿಸೆ ಶಶಿಕಳೆ ತೆರೆಮಸ
ಗಿದ ಪಾಲ್ಗಡಲಂತೆ ನೃಪಕುಮಾರ ಕದಂಬಂ
ಸುದತಿ ಪುಗೆ ಸಭೆಯನೊಳಕೊಂ
ಡುದು ಮದನ ವಿಕಾರ ಚೇಷ್ಟೆಯಂ ಬಹುವಿಧಮಂ

ದಿನ ಲಕ್ಷ್ಮಿಯು ಪುಗಿಲೊಳ್ ಕೋ
ಕನದಾಕರ ನಿಕರವೊಡನೆಸಲ್ಮಸಗುವವೋಲ್
ಜನಕಾತ್ಮಜೆ ಪುಗೆ ಸಭೆಯಂ
ಜನಿಯಿಸಿದುದು ಮದನಚೇಷ್ಟೆ ರಾಜನ್ಯಕದೊಳ್

ನನೆಯ ಸರಲ್ಗಳಂತೆ ನೆಱೆದಿಂಗಳ ತಣ್ಗದಿರಂತೆ ಕಂತುರಾ
ಜನ ಕರವಾಳ ಮೆಯ್ವೊಳಪಿನಂತೆ ನವೋತ್ಪಲ ದಾಮದಂತೆ ಪೂ
ವಿನ ಮಱೆಯಂತೆ ತುಂಬಿಗಳ ಮಾಲೆ ತೆಱಂಬೊಳೆವಂತೆ ಲೋಲಲೋ
ಚನ ರುಚಿ ಸುತ್ತಿ ಮುತ್ತಿದುದಶೇಷ ನೃಪಾಲ ಸಭಾಂತರಾಳಮಂ

ಎಱಗದೆ ಪೂತ ಚಂಪಕವನಕ್ಕೆ ನಮೇರು ಮಹೀರುಹಕ್ಕೆ ಬಂ
ದೆಱಗುವ ಚಂಚರೀಕದವೊಲಾಕೆಯ ಕೇಕರಮನ್ಯರಾಜಕ
ಕ್ಕೆಱಗದೆ ರಾಘವಂಗೆಱಗೆ ಕಂಚುಕಿ ಕಣ್ಣಱಿದು ಲತಾಂಗಿಗ
ಟ್ಕಱೊಳಭಿವರ್ಣಿಸಲ್ ಬಗೆದಳಾ ಧರಣೀಶ ಗುಣೈಕ ದೇಶಮಂ

ಪ್ರಾಕೃತನಲ್ಲನೀ ದಶರಥಾಗ್ರತನೂಭವನೇಕವಾಕ್ಯನಾ
ಶಾಕರಿಕರ್ಣಚಾಮರಯಶಂ ಚರಮಾಂಗನನಂತವೀರ್ಯನಿ
ಕ್ಷ್ವಾಕುಕುಲಾಮೃತಾರ್ಣವಸುಧಾಕಿರಣಂ ರಣಮೇರು ಲೋಕ ಲುಂ
ಟಾಕನಿದಾಘತಾಪ ಹರ ವರ್ಷಣ ಮೇಘಸುದಾತ್ತರಾಘವಂ

ರಸನಾಶಂಪಾಶತಂ ಸಂಚಳಿಸೆ ಪುದಿಯೆ ಘೂತ್ಕಾರಮಾಶಾಂತಮಂ ದ
ಳ್ಳಿಸೆ ವಹ್ನಿಜ್ವಾಲೆ ದೀರ್ಘಾನನ ಕುಹರ ಸಹಸ್ರಂಗಳಿಂ ಕಣ್ಗಳಿಂದೆ
ಣ್ದೆಸೆಗಂಗಾರಂಗಳೆತ್ತುಂ ಕೆದಱೆ ಫಣಸಹಸ್ರಂಗಳಂ ಬಿರ್ಚೆ ಕಣ್ಗ
ರ್ಗಿಸಿ ವಜ್ರಾವರ್ತ ಚಾಪಂ ಪಡೆದುದು ಭಯಮಂ ಕಾಳಕಾಳಾಹಿರೂಪಂ

ಸಿಡಿಲಂತೆ ಮೊಳಗಿ ನೆಲನಂ
ಪೊಡೆಯುತ್ತುಂ ಪತ್ತು ದೆಸೆಗಮುವ್ವಳಿಸುತ್ತುಂ
ಪಡೆದುವಗುರ್ವಂ ಜವನೆರ್ದೆ
ಗಿಡೆ ವಜ್ರಾವರ್ತ ಸಾಗರಾವರ್ತಂಗಳ್

ದೂರದೊಳಂಜದೀಕ್ಷಿಸುವ ಕಣ್ಗಲಿಗಳ್ ನೃಪರಾರುಮಿಲ್ಲೆನಲ್
ಸಾರೆವರಲ್ ಮನಂಗಿಡದ ಮೆಯ್ಗಲಿಯಾವನೊ ಬಾಹುವೀರ್ಯದಿಂ
ದಾರಿವನೆತ್ತಲಾರ್ಪನೆನಲೇಱಿಸುವುದ್ಧತವೃತ್ತಿ ನಾಡೆಯುಂ
ದೂರಮಿವರ್ಕೆ ಬಿಲ್ವೆಸರನಿಟ್ಟವನುರ್ವಿಗೆ ನಂಜನಿಟ್ಟವಂ

ವ|| ಎಂದು ನೆರೆದರಸುಮಕ್ಕಳೆಲ್ಲರಾ ಬಿಲ್ಲಂ ಕಂಡು ಬಲ್ಗರಂ ಪೊಡೆದಂತೆ ಪೆಡಂ ಮಗುಳೆ—

ಡೇಶಾಧೀಶ ತನೂಭವರ್ ಸೆಡೆವುದುಂ ಸಾಕೇತ ಸಿಂಹಾಸನಾ
ಧೀಶಂ ಕಂಡು ದರಸ್ಮಿತಂ ದಶರಥಂ ಭ್ರೂವಲ್ಲರೀ ಪಲ್ಲವಾ
ದೇಶಂ ನೋಡೆ ಮುಖಾಬ್ಜಮಂ ಸಭೆಯಿನೆಟ್ದಂ ತುಂಗವಂಶಂ ಸುರೇಂ
ದ್ರಾಶಾದಂತಿಬಲಂ ಜಿತಾಹಿತಬಲಂ ದುರ್ವಾರ ಬಾಹಾಬಲಂ

ಜನ ನಯನ ಪ್ರತಿಬಿಂಬಂ
ತನುರುಚಿಯೊಳ್ಪೊಳೆಯೆ ನಡೆವ ನೆಯ್ದಿಲ್ಗೊಳನಂ
ನೆನೆಯಿಸಿ ಮಾಣ್ದನೆ ರಾಮಂ
ನೆನೆಯಿಸಿದನನುಕ್ಷಣಂ ಸಹಸ್ರೇಕ್ಷಣನಂ

ಪುಲಕಂ ಜಾನಕಿಗುತ್ಸವಂ ಜನಕರಾಜಂಗುಮ್ಮಳಂ ಖೇಚರಾ
ವಲಿಗುದ್ವೇಗಭರಂ ನರೇಂದ್ರ ಸುತ ಸಂದೋಹಕ್ಕೆ ಸಮ್ಮೋಹನಂ

ಲಲನಾಶ್ರೇಣಿಗೆ ವಿಸ್ಮಯಂ ಪುರಜನಕ್ಕಾಕರ್ಷಣಂ ಲೋಚನಾ
ವಲಿಗಾಯ್ತೇಱುಸಿ ನೀವಿ ಜೇವೊಡೆಯೆ ವಜ್ರಾವರ್ತಮಂ ರಾಘವಂ

ಸಮದಂ ಲೀಲೆಯಿನೆತ್ತೆ ಖೇಚರ ಬಲಂ ಕಿಱ್ತೆತ್ತಿ ಪಾಱುತ್ತಸು
ಕ್ರಮದಿಂದಾನತಮಾಗೆ ಕೊಪ್ಪು ಪಿರಿದುಂ ಲಜ್ಜಾನತಂ ರಾಜಲೋ
ಕಮಣಂ ಬೆಕ್ಕಸಮುತ್ತುದೇಱುಸುವುದುಂ ಕೋದಂಡಮಂ ರಾಮನ
ಶ್ರಮದಿಂ ಮನ್ಮಥನಾಗಳೇಱುಸದೆ ಮಾಱೆಚ್ಚಂ ಪುರಸ್ತ್ರೀಯರಂ

ಉಪರಂಭೆಯ ವ್ಯಾಮೋಹ

ನಳಕೂಬರನ ಕುಲಾಂಗನೆ
ವಿಳಾಸವತಿ ರಾವಣಂಗೆ ಪಲಕಾಲಂ ಮು
ನ್ನೆಳಸಿರ್ಪ ಕಾಮಕಾತರೆ
ಕೆಳದಿಗೆ ತಿಳಿವಂತು ತನ್ನ ತೆಱನಂ ಪೇೞ್ದಳ್

ವ || ಅಂತು ವಿದ್ಯಾಧರಪರಮೇಶ್ವರಿ ಚಿತ್ರಮಾಲೆಗೆ ನಿಜಾಭಿಪ್ರಾಯಮಂ ಕಲಿಸಿ ರಾವಣನಲ್ಲಿಗಟ್ಟುವುದುಂ—

ನೀಲ ಪಟಚ್ಛದೆ ನಿಶೆಯೊಳ್
ಲೋಲೇಕ್ಷಣೆ ಗಗನಮಾರ್ಗದಿಂ ರಾವಣನಿ
ದಾರ್ಲಯಮಂ ವಿಜಯಶ್ರೀ
ಲೀಲೆಯಿನಾ ಚಿತ್ರಮಾಲೆ ಬಂದೊಳಪೊಕ್ಕಳ್

ವ || ಅಂತು ಪೊಕ್ಕು ರಾವಣನ ಕೆಲಕ್ಕೆ ವಂದು—

ಉಪರಂಭೆಯೆಂಬಳೆಮ್ಮರ
ಸಿ ಪೋಲಿಪೊಡೆ ರಂಭೆಗಗ್ಗಳಂ ಚೆಲ್ವಿಂದಾ
ರುಪಮೆಗೆ ಪೆಱರೆನಿಸಳ್ ಪೀ
ನಪಯೋಧರೆ ನಿನ್ನ ಸಾರ್ಕೆಗಟ್ಟಿದಳೆನ್ನಂ

ಪಲವುದಿನಂ ನಿನ್ನೊಳ್ ತೊ
ಟ್ಟೊಲವಿಂದಾ ಚೆನ್ನ ನಿನ್ನನನವರತಂ ಪಂ
ಬಲಿಸುತ್ತುಂ ಚಿತ್ತೋದ್ಭವ
ನಲರಂಬುಗಳುರ್ಚೆ ನಾಡೆ ಪಾಡಟಿದಿರ್ದಳ್

ಏವೊಗಳ್ವೆನತನು ವಿದ್ಯಾ
ದೇವತೆ ನಿರತಿಶಯಮೆನಿಪ ರೂಪಿಂ ವಿದ್ಯಾ
ದೇವತೆ ಸಾಮರ್ಥ್ಯದಿನೆನಿ
ಪಾ ವಧು ಬರೆ ದೇವ ನಿನಗೆ ತೀರದುದುಂಟೇ

ವ|| ಎನೆ ದಶಾನನಂ ಪಟಿಯುಂ ಪಾಪಮುಮಪ್ಪ ದುಶ್ಚರಿತ್ರಮನೇವೆನೆಂದು ಮನದೊಳೆ ನಿಶ್ಚಯಿಸಿ ವಿಭೀಷಣನಂ ಬರಿಸಿ ರಹಸ್ಯದೊಳದನಱಿಪುವುದು ಮಾತಂ ವಿದ್ಯಾಪ್ರಾಕಾರಮಂ ಕಿಡಿಸುವಂತುಟಂ ಪ್ರತಿವಿದ್ಯೆಯನಾಕೆಯಂ ಬರಿಸಿ ಪುಸಿದು ನಂಬಿಸಿ ಕಲ್ತುಕೊಳ್ವುದೆನೆ ರಾವಣನಾ ದೂದವಿಗೆ ನಿನ್ನ ನುಡಿ ಗೊಡಂಬಟ್ಟೆನಾಕೆಯಂ ತಾಯೆಂದು ವಕ್ರೋಕ್ತಿಯಿಂ ನುಡಿವುದುಮಾಕ್ಷಣ ದೊಳೆ ಪೋಗಿ ಬೇಗಂ ತರ್ಪುದುಮುಪರಂಭೆಗೆ ಪುಸಿನಣ್ಪುದೋಱಿ ನಿನಗ ಮೆನಗಂ ದುರ್ಲಂಘ್ಯಪುರದೊಳ್ ಕೂಟಮಪ್ಪಂತು ಮಾಡೆನೆ ಮನದೆ ಕೊಂಡಂತೆಗೆಯ್ವೆನೆಂದು ಸಾಲವಿದ್ಯಾಭೇದಿನಿಯುಂ—

ಪ್ರತಿವಿದ್ಯೆಯನಾಕೆ ಕುಲ
ಕ್ಷಿತಿಯುಂ ಪತಿಗಪ್ಪ ಹಾನಿಯುಂ ಬಗೆಯದೆ ದು
ರ್ಮತಿ ಕೊಟ್ಟಳದೆನ್ನರುಮಂ
ಮತಿಗಿಡು(ಡಿ?)ಪುದು ಚೋದ್ಯಮಲ್ತು ಮದನೋನ್ಮಾದಂ

ವ|| ಅಂತಾಕೆಯು ಕೈಯೊಳಾ ವಿದ್ಯೆಯುಂ ಕೊಂಡು ಕಟಿಪಿ ಮರುದೆವಸಂ ಸಾಲ ವಿದ್ಯೆಯುಂ ಪ್ರತಿವಿದ್ಯೆಯಿಂ ಕಿಡಿಸಿ ದುರ್ಲಂಘ್ಯ ಪುರಮಂ ರಾವಣಂ ಮುತ್ತು ವುದುಂ—

ಸೆರಗಂ ಬೆರಗಂ ಬಗೆಯದೆ
ಪುರಮಂ ಪೊಱಮಟ್ಟು ಕಾದುವಾಗಳ್ ನಳಕೂ
ಬರನಂ ವಿಭೀಷಣಂ ಮದ
ಕರಿಯಂ ಮೃಗವೈರಿ ಪಿಡಿವ ತೆಱದಿಂ ಪಿಡಿದಂ

ದನುಜಾಧೀಶ್ವರನ ಪುರಾ-
ತನ ಪುಣ್ಯದ ಫಲದಿನಾಯುಧಾಗಾರದೊಳೇಂ

ಜನಯಿಸಿದುದೊ ವಿದ್ವಿಷ್ಟಾ-
ವನಿಪಾಲ ಪ್ರಳಯ ಕಾಲಚಕ್ರಂ ಚಕ್ರಂ

ವ|| ಅಂತು ಸುದರ್ಶನ ಚಕ್ರಂ ಪುಟ್ಟುವುದುಂ ರಾವಣಂ ಮಹೋತ್ಸವದಿಂ ಚಕ್ರ ಪೂಜೆಯುಂ ಮಾಡಿ ರಹಸ್ಯದಿಂದಾಕೆಯುಂ ಕರೆದು ನೀಂ ವಿಶುದ್ಧ ಕುಲದ ಕುಶಧ್ವಜಂಗಂ ಮಧುಕಾಂತೆಗಂ ಪುಟ್ಟಿದುದಱಿಂ ನಿಜ ಕುಲಾಚಾರಮಂ ಬಗೆದು ಶೀಲ ಪರಿಪಾಲನಂಮಾಳ್ಪುದಂತಲ್ಲದೆಯುಂ ನೀನೆನಗೆ ವಿದ್ಯೋಪ ದೇಶಂಗೆಯ್ದುದಱಿಂ ಗುರುವಾದೆ ಪೆಱತೇನುಮಂ ಬಗೆಯದೆ ನಳಕೂಬರನೊಳ್ ಕೂಡಿ ಸುಖಮಿರೆಂದಾಕೆಯ ದುಷ್ಪರಿಣಾಮಮಂ ಪತ್ತುವಿಡಿಸಿ—

ನಳಕೂಬರನುಮನಾಕ್ಷಣ
ದೊಳೆ ಬರಿಸಿ ನಿಜಾಗ್ರತನಯನಿಂದಗಿಯಿಂದ
ಗ್ಗಳಮೆನೆ ಮನ್ನಿಸಿ ಭಯಮಂ
ಕಳೆದಿತ್ತಂ ಭೃತ್ಯ ಪದವಿಯುಂ ದಶವದನಂ

ಸೀತಾಪಹರಣ

ಅನ್ನೆಗಮತ್ತ ರಾವಣಂ ಖರದೂಷಣರಟ್ಟಿದ ಸುದ್ದಿಯಂ ಕೇಳ್ದು ಶಂಭುಕನ ಸಾವಿಂಗಟಲ್ದು ಕಡು ಮುಳಿದು—

ಬೆದಱಿಸಿದತ್ತು ಕಾರಿರುಳನುರ್ವಿದ ಪುರ್ವಿನ ಗಂಟಿಸೊಳ್ ಕಱಿಂ
ಗಿದ ಮೊಗಮಂಜಿಸಿತ್ತು ಕಿಸುಸಂಜೆಯನಾಸುರಮಾಗೆ ಕೆಂಪುವೇ
ಱಿದ ಬಿಡುಗಣ್ಣ ಬಣ್ಣವಱೆಯುಟ್ಟಿದುದುಳ್ಕುಱೆ ಕಣ್ಣೊಳುಳ್ಕುವು
ಳ್ಕದ ತೆಱನಂ ಸಕಂಪವಧರಂ ದಶಕಂಧರ ಚಕ್ರವರ್ತಿಯಾ

ಒದವಿದ ಕೋಪ ವಹ್ನಿಯುರಿಯುಂ ಪೊಗೆಯುಂ ನೆಗೆವಂತೆ ಪದ್ಮರಾ
ಗದ ಹರಿನೀಲದುಸ್ಮುಖವಿಭೂಷಣರಶ್ಮಿ ಪಗಂಡುಗೊಳ್ವಿನಂ
ಕದನ ಮದೋದ್ಧತಂ ಖಚರನಾಯಕರಂ ಬರವೇಳ್ವು ಸಿಂಹ ಪೀ
ಠದಿನಿರದೆದ್ದನಸ್ತಮಿತಪುಣ್ಯದಶಾನನನಾ ದಶಾನನಂ

ಸೆಡೆಯೆ ಹಿಮಪ್ರಭಂ ನಿಜ ಯಶಃ ಪ್ರಭೆಯಿಂದಿನನಂಶುಮಾಲೆ ಕೀ
ಳ್ವಡೆ ಬಲಗೈಯ ಬಾಳ ಪೊಳೆಪಿಂ ಕಡುಗಟ್ಟಲೆ ದೇಹದೀಪ್ತಿಯಿಂ
ದೊಡರಿಸೆ ರಾಹು ತನ್ನ ಹರಿನೀಲ ವಿಮಾನಮನೇಱುವಂತಿರಾ
ಗಡೆ ಕಡುಕೆಯ್ದು ಪುಷ್ಪಕ ವಿಮಾನಮನೇಱಿದನಿಂದ್ರವಿದ್ವಿಷಂ

ಪ್ರತಿಕೂಲಾಸಿಲನಿಂ ಪತಾಕೆ ಮಗುಡೆಂಬಂತಾಗೆ ಕೈಸನ್ನೆಯಿಂ
ಶ್ರುತಿಯುಂ ಸಾರ್ತರೆ ಪೋಪುದಲ್ತು ನಯಮೆಂಬಂತಾಗಿ ಘಂಟಾ ರಣ
ತ್ಕೃತಿ ಸಾರ್ತಂದುದು ಪುಣ್ಯದೇವತೆಯ ಕಣ್ಣೀರೆಂಬಿನಂ ಮೇಘಸಂ
ಹತಿಯಿಂದಲ್ಲುಗೆ ಮುತ್ತು ಪುಷ್ಪಕವಿಮಾನಂ ದಂಡಕಾರಣ್ಯಮಂ

ವ|| ಆ ಸಮಯದೊಳ್ ದಶಾಸ್ಯನೊಂದು ತಣ್ಬುಟಿಲ ತಾಣದೊಳ್ ಬಱಿಸಿಡಿಲ ಬಟಿವಿಡಿದು ಪೊಳೆವ ಕುಡುಮಿಂಚಿನಂತೆ ಬಲಭದ್ರನ ಕೆಲದೊಳಿರ್ದ ಸೀತೆಯಂ ಕಂಡು—

ಒಲೆ ದೃಷ್ಟಿಗೆ ವಜ್ರದ ಸಂ
ಕಲೆ ಹೃದಯಕ್ಕೆನಿಪ ರೂಪವತಿ ಜಾನಕಿ ಕ
ಣ್ಬೊಲದೊಳಿರೆ ಪದ್ಮ ಪತ್ರದ
ಜಲಬಿಂದುವಿನಂತೆ ಚಲಿತಮಾದುದು ಚಿತ್ತಂ

ಎನಗಾಲೋಕನ ಮಾತ್ರದಿ
ನನುರಾಗಮನಿತ್ತು ತಮ್ಮ ನೀಲಚ್ಛವಿಯಿಂ
ಮನಮಂ ಋಜು ಮಾಡಿದುವೀ
ವನಿತೆಯ ಕೊಂಕಿದ ಕುರುಳ್ಗಳಿದು ಬಿಸವಂದಂ

ತಳತಳಿಸಿ ಪೊಳೆಯೆ ಸೀತೆಯ
ಚಳನಯನಂ ಖಚರ ಚಕ್ರವರ್ತಿಯ ಚಿತ್ತಂ
ಕೊಳದೊಳಗೆಳಮಳಿ ತೆಱಂ-
ಬೊಳೆವಂತೆ ಕಲಂಕಿ ಕದಡಿದತ್ತಾ ಕ್ಷಣದೊಳ್

ಹಾರ ಮರೀಚಿ ಮಂಜರಿ ಸುಧಾರಸ ಧಾರೆ ಸುಧಾಂಶು ಲೇಖೆ ಕ
ರ್ಪೂರ ಶಲಾಕೆ ನೇತ್ರಸುಖ ದಾಯಕ ಮಾದೊರೆತಲ್ಲವೀಕೆ ಶೃಂ
ಗಾರ ಸಮುದ್ರಮಂ ಕಡೆಯೆ ಹೃದ್ಭವನುದ್ಭವೆಯಾದಳೆಂದು ಕ
ಣ್ಣಾರೆ ದಶಾಸ್ಯನೀಕ್ಷಿಸಿದನೀಕ್ಷಿಸಿ ಕಣ್ಣಱಿದಾರೆ ಮನ್ಮಥಂ

ಪಲರುಂ ವಿದ್ಯಾಧರಸ್ತ್ರೀಯರುಮಮರಿಯರುಂ ಮಾನವಸ್ತ್ರೀಯರುಂ ತ
ನ್ನೊಲವಿಂ ಮೇಲ್ವಾಯ್ದೊಡಂ ಮುಂ ಬಗೆಯದ ಬಗೆಯೇನಾದುದೆಂದುದ್ಧತಂ ಮೂ
ದಲಿಸುತ್ತುಂ ರೂಪಿನೊಳ್ ಮಚ್ಚರಿಸುವನೆನಗೆಂದಂಬನಂಬಟ್ಟುವನ್ನಂ
ಪಲಕಾಲಕ್ಕೇಸುವೆತ್ತಂ ದಶಮುಖನೆನುತುಂ ಮನ್ಮಥಂ ಮಾಣದೆಚ್ಚಂ

ನಡೆ ನಡುಗೋಲ್ವರಂ ದಶಮುಖಂ ಮನಮಂ ಸುಮನಶ್ಶಿಲೀಮುಖಂ
ನಡೆಗಿಡೆ ಕೀರ್ತಿ ಬಾರ್ತೆಗಿಡೆ ಲಕ್ಷ್ಮಿ ಮೊದಲ್ಗಿಡೆ ಮಾನಸಿಕ್ಕೆ ನೇ-
ರ್ಪಡುಗಿಡೆ ಸತ್ಯ ಶೌಚ ಗುಣ ಸಂಪದವೇಳಿದನಾದನೆನ್ನರುಂ
ಕಿಡಿ ಮಸಿಯಾದವೋಲ್ ವಿಷಯಲೋಭದಿನೇಳಿದರಾಗದಿರ್ಪರೇ

ವಿಹಿತಾಚಾರಮನನ್ವಯಾಗತ ಗುಣ ಪ್ರಖ್ಯಾತಿಯಂ ದುಷ್ಟ ನಿ
ಗ್ರಹ ಶಿಷ್ಟ ಪ್ರತಿಪಾಲನ ಕ್ಷಮತೆಯಂ ಕೈಗಾಯದನ್ಯಾಂಗನಾ
ಸ್ಪೃಹೆಯಂ ತಾಳ್ದಿದನಲ್ತೆ ಕಾಲವಶದಿಂ ಲಂಕೇಶ್ವರ ವಿಸ್ಮಯಾ
ವಹಮಲ್ತಬ್ಧಿಯುಮೊರ್ಮೆ ಕಾಲವಶದಿಂ ಮರ್ಯಾದೆಯಂ ದಾಂಟದೇ

ಅವಿವೇಕಿ ದಶಮುಖಂ ದೃ
ಷ್ಟಿವಿಷಾಹಿಯ ಪೆಡೆಯ ಮಣಿಶಲಾಕೆಗೆ ಕೈನೀ
ಡುವ ಗಾಂಪನಂತೆ ರಘುವೀ
ರ ವಧೂ ಜನಕಜೆಗೆ ಮನದೊಳಟಿಪಂ ತಂದಂ

ಪರವಧುಗಾಸೆಗೆಯ್ವಧಿಕ ಪಾತಕಮೊಂದು ರಘುಪ್ರವೀರನೊಳ್
ಧುರದೊಳಿದಿರ್ಚದೋಸರಿಸಿ ವಂಚಿಸಿ ಸೀತೆಯನುಯ್ವ ಭೀತಿಯೊಂ
ದೆರಡಱೊಳಂ ಜಸಂ ಮಸುಳೆ ತನ್ನವಲೋಕಿನಿಯಂ ದಶಾನನಂ
ಸ್ಮರಿಸಿದನಾತ್ಮಸತ್ವಗುಣ ಹಾನಿಯೆ ಸೂಚಿಸದೇ ವಿನಾಶಮಂ

ವ|| ಅಂತು ನೆನೆಯಲೊಡಮವಲೋಕಿನೀವಿದ್ಯೆ ಮನದೊಡನೆ ಬಂದು ಬೆಸನಾವುದೆನೆ ದಶಮುಖನಿವರಾರೆಂಬುದುಮಯೋಧ್ಯಾಸಿಂಹಾಸನಕ್ಕಧಿಪತಿಯುಮಿಕ್ಷ್ವಾಕು ವಂಶ ಸಂಭವನುಮಪ್ಪನರಣ್ಯತನೂಭವಂ ದಶರಥ ನರನಾಥಂ ತದಪತ್ಯರಿವರೀ ಕಾಲದ ಬಲದೇವ ವಾಸುದೇವರ್ ದೇವತಾಧಿಷ್ಠಿತಂಗಳಪ್ಪ ವಜ್ರಾವರ್ತ ಸಾಗರಾವರ್ತ ಚಾಪ ರತ್ನಂಗಳನಪ್ರಯತ್ನದಿಂ ಪಡೆದ ರಾಮ ಲಕ್ಷ್ಮಣರೆಂಬರ್, ಮಹಾಬಲಪರಾಕ್ರಮರೀಕೆ ರಾಮನ ಮಹಾದೇವಿ ಮಿಥಿಲಾಪುರವರೇಶ್ವರನಪ್ಪ ಹರಿವಂಶದ ಜನಕನ ತನೂಭವೆ ರಥನೂಪುರಚಕ್ರವಾಳಪುರಮನಾಳ್ವ ಚಂಡಬಲ ಪರಾಕ್ರಮನಪ್ಪ ಪ್ರಭಾಮಂಡಲನ ತಂಗೆ ಸೀತಾದೇವಿಯೆಂಬಳೆಂಬುದುಮಾಕೆಯನೀತನಿಂದಗಲ್ಚುವುಪಾಯಮಾವುದೆನೆ ದೇವತೆ ಭಯಚಕಿತಚಿತ್ತೆಯಾಗಿ—

ಆರಯ್ಯೆ ವಿರೋಧಂ ಸಾ
ಧಾರಣ ಪುರುಷರೊಳಮುಚಿತಮಲ್ತಧಿಕ ಬಲರ್
ಕಾರಣ ಪುರುಷರಿವರ್ ನಿ-
ಷ್ಕಾರಣಮಿವರೊಳ್ ವಿರೋಧಮಂ ಮಾಡುವುದೇ

ಕಾವ ಬೆಸಂ ನಿನ್ನದು ಸಕ
ಲಾವನಿಯುನಧರ್ಮನಿರತರಂ ನಿಯಮಿಸಿ ನೀ
ನೀವಿಷಯಕ್ಕೆಱಗುವುದುಂ
ಕಾವರೆ ಕಣೆಗೊಂಡರೆಂಬ ನುಡಿಗೆಡೆಯಕ್ಕುಂ

ಅನ್ನೆಯದಿಂ ನಡೆವವರಂ
ನೀನ್ನಿಯಮಿಸುವೈ ದಶಾಸ್ಯ ಪೇಱನಾವಂ ನಿ
ನ್ನನ್ನಿಯಮಿಸುವಂ ಮುನ್ನೀರ್
ಬೆನ್ನೀರನೆ ಬೆರಸಲಣ್ಣ ತಣ್ಣೀರೊಳವೇ

ವ || ಎಂದು ತೆಱೆಯೆ ನುಡಿದುದರ್ಕೆ ಕಡುಮುಳಿದು—

ಮದನಯಶಃಪಟಹಧ್ವನಿ
ಪುದಿಯೆ ಏಯುಚ್ಚರನ ಕರ್ಣವುಂ ಹೃದಯ
ಕ್ಕೆಯ್ದಿದುದಿಲ್ಲ ದಿವ್ಯ ವಚನಂ
ಬಿದಿಯುಂ ಮಿಾಱುಗುಮೆ ಪೇಱರ ಪೇೞ್ದುಪದೇಶಂ

ಆನೊಂದಂ ಬೆಸಗೊಂಡೊಡೆ
ನೀನೊಂದನಿದೇಕೆ ಪೇೞ್ದೆ ಪೇೞ್ದದನೇಗೊ
ಳ್ಳೇನೆಂದು ಕೇಱ ನುಡಿವೈ
ಮಾನವರಾಂತಪರೆ ಮುರುಳೆ ಲಂಕಾಪತಿಯುಂ

ವ || ಎಂಬುದುಂ ವಿದ್ಯಾದೇವತೆ ಕನಲ್ದು—

ಜನಕಜೆಯುನುಯ್ಯೆ ದಶರಥ
ತನೂಜರಿಂ ಮರಣಮಾಗಲೆಂದಿರ್ದಪುದೀ
ತನ ಕೈಯುಳವಲ್ತು ಪುರಾ-
ತನ ಕರ್ಮಾಯತ್ತಮಲ್ತೆ ದೇಹಿಗಳೆಸಕಂ

ಅಱಿಪಿ ಪರವಧುಗಧೋಗತಿ
ಗಿಱಿವುದನಭಿನಯಿಸುವಂತೆ ಸೀತೆಯ ಸಾರ
ಣ್ಗೆಱಿದಂ ಸಭದಿಂ ಖಚರಂ
ಪಱಿಗಂ ಪಾಪಕ್ಕಮಂಜದವರೇಗೆಯ್ಯರ್

ದೋಷಿ ಪಿಡಿವಂತೆ ದಿವ್ಯದ
ಕಾಸಿದ ಕುಱುವಂ ಕಡಂಗಿ ಕಾಳೋರಗನಂ
ಕೂಸು ಪಿಡಿವಂತೆ ಪಿಡಿದಂ
ಸಾಸಿಗನವಿವೇಕಿ ಸೀತೆಯಂ ದಶಕಂಠಂ

ವ|| ಅಂತು ಬಿಟ್ಟು ಜಟಾಯು ಕಂಠಗತ ವಾಯುವಾಗೆ ದಶಕಂಠ ನುಯ್ವ ಸಮಯ ದೊಳ್—

ಸಿಂಗದ ಕೈಗೆ ಬಿಟ್ಟ ಹರಿಣಾಂಗನೆವೋಲೆರ್ದೆಗೆಟ್ಟು ರಾಮಚಂ
ದ್ರಾಂಗನೆ ಸೀಳ್ದ ಕಣ್ಮಲರ್ಗಳಿಂದುಗೆ ಕಣ್ಬನಿಗಳ್ ಮಡಲ್ತ ಪ
ಕ್ಷ್ಮಂಗಳನೊತ್ತಿ ಕಾರ ಮುಗಿಲಿಂದುಗುತಿರ್ಪ ಸವೋದ ಬಿಂದು ಜಾ
ಲಂಗಳೆನಲ್ ಬೆಮರ್ತಳೆಸಸುಂ ತನುವಲ್ಲಿ ಮುಗುಳ್ತುದೆಂಬಿನಂ

ಮನಮೆಳದಾಗೆ ಮನ್ಯು ಮಿಗೆ ತಳ್ತಿಮೆಯಿಂ ಕರೆಗಣ್ಮೆ ಸೂಸೆ ಕ
ಣ್ಬನಿ ಗಳಕಂದಳಂ ಬಿಗಿಯೆ ಗದ್ಗದ ನಿಸ್ವನಮುಣ್ಮೆ ಹಾರವಂ
ಜನಿಯಿಸೆ ಸೀತೆ ಭೀತೆ ದೆಸೆಗೆಟ್ಟೆರ್ದೆಗೆಟ್ಟಳೆ ಪೊಣ್ಮೆದತ್ತು ಮಾ
ರ್ದನಿ ದೆಸೆಯೊಳ್ ದಿಗಂಗನೆಯರುಂ ಬಿಡದಂದೊಡನಟ್ಟು ಮಾಳ್ಕೆಯಿಂ

ಭೋಂಕನೆ ಕಂಡು ಸೀತೆ ದಶಕಂಧರನಂ ನೆಲೆವೆರ್ಚೆ ಶೋಕವಾ
ತಂಕಮೊಡರ್ಚೆ ಪುಷ್ಪಕ ವಿಮಾನದ ರತ್ನ ವಿಚಿತ್ರ ಪುತ್ರಿಕಾ
ಸಂಕುಲವಪ್ಪೊಡಟ್ಟುವು ಬೆಮರ್ತೊಡೆ ಕೂಡೆ ಬೆಮರ್ತುವಾಗಳಾ
ಲಂಕೆಯ ಸೂಡಸುನ್ನತಿಯ ಕೇಡನವಂಗೆ ನಿವೇದಿಪಂತೆವೋಲ್

ಬಲೆಗೊಳಗಾದ ಸೋಗೆನವಿಲಂತೆ ಭಯಾಕುಳೆ ತನ್ನ ಚಿತ್ತದೊಳ್
ನೆಲಸಿದ ರಾಮನಂ ಬಯಸಿ ನೋಡಲಪೇಕ್ಷಿಸಿ ಬಾಹ್ಯದರ್ಶನ
ಕ್ಕಲಸಿದಳೆಂಬಿನಂ ಮುಗಿಯೆ ಕಣ್ಮಲರ್ಗಳ್ ನಸು ಮುಚ್ಚೆವೋಗಿ ತ
ಣ್ಣೆಲರಲೆಪಿಂದೆ ಮೂರ್ಛೆದಿಳಿದಳ್ ಮಗುಳ್ದುಂ ಪೊಱಪೊಣ್ಮೆ ಹಾರವಂ

ಕ್ರೂರಾತ್ಮಂ ವಂಚಕನವಿ
ಚಾರಿ ದುರಾಚಾರಿ ಬಗೆಯದುಯ್ದಪನೆನ್ನಂ
ಹಾರಾಮಾ ಹಾರಾಮಾ
ಬಾರಿಪರಾರೆಂದು ಸೀತೆ ಶೋಕಂಗೆಯ್ದಳ್

ವ|| ಅಂತು (ರಾಮಂ) ಮಗುಳ್ದು ಬಂದು ಮುನ್ನಮಿರ್ದ ಲತಾಭವನದೊಳ್ ಮನೋವಲ್ಲಭೆಯಂ ಕಾಣದೆ ಶಿಖಿಮುಖಕ್ಕೆ ವಂದ ಪಾದರಸದಂತೆ ನಿಜ ನಿಸರ್ಗ ಧೈರ್ಯಗುಣಮದೃಶ್ಯಮಾಗೆ—

ಹಾಹಾ ಜನಕಸುತೇ ವೈ
ದೇಹೀ ವೈದೇಹಿಯೆಂದು ಪುದಿದಿರೆ ಮನಮಂ
ಮೋಹತಮಂ ದೀಪಂ ವಾ
ತಾಹತಿಯಿಂ ನಂದುವಂತೆ ಮೂರ್ಛೆಗೆ ಸಂದಂ

ವ|| ಅಂತು ಮೂರ್ಛೆವೋಗಿ ಕಿಱಿದಾನುಂ ಬೇಗದಿಂ—

ನಸು ಬಿಸುಪೇಱೆ ಮೆಯ್ಮಗುಡೆ ಕೆತ್ತುವ ತಾಣವೆ ಕೆತ್ತೆ ಮಂದಮಾ
ದುಸಿರ್ಗಳೆ ನಾಸಿಕಾಮುಕುಲದಿಂದಿನಿಸುಂ ಪೊಱಪೊಣ್ಮೆ ತಳ್ತು ಸಂ
ದಿಸಿದೆವೆ ಬಿರ್ಚೆ ಕಣ್ಮಲರ್ಗಳುಳ್ಳಲರುತ್ತಿರೆ ಜಾನಕೀ ಯೆಸು
ತ್ತುಸಿರ್ದುಸಿರ್ದೆಟ್ದನಾ ರಘುಕುಲಾಂಬರ ಚಂಡಮರೀಚಿ ಮೂರ್ಛೆಯಿಂ

ವ|| ಅಂತು ಮೂರ್ಛೆಯಿಂದೆೞ್ಚತ್ತು ಸುತ್ತಲುಂ ತೊಲಲ್ದಱಸುತ್ತುಮಡವಿಯೊಳಗನೆ ಬರುತ್ತುಮಿರ್ಪಾಗಳೊಂದೆಡೆಯೊಳಸು ವಿಯೋಗ ಸಂಕಟದಿಂ ಸರಂಗೆಯ್ವ ಜಟಾಯುವಂ ಕಂಡು ಸೀತಾಹರಣಮಿದರ್ಕೆ ಮರಣನಿಮಿತ್ತಮಾದು-ದೆಂದುಬ್ಬೆಗಂಬಟ್ಟು ಸಂಸಾರವಿಷಮ ವಿಷಾಪಹಾರಮಂ ಪಂಚ ನಮಸ್ಕಾರ-ಮನದರ್ಕೆ ಪೇೞ್ದಮರಗತಿಯನೆಯ್ದಿಸಿ ವೈದೇಹಿಯನಾಪನಾಂತರದೊಳೆ-ಲ್ಲಿಯುಮಱಸಿ ಕಾಣದೆ—

ಕಳಹಂಸಾಲಸ ಯಾನೆಯುಂ ಮೃಗಮದಾಮೋದಾಸ್ಯ ನಿಶ್ವಾಸೆಯುಂ
ತಳಿರೇ ತಾವರೆಯೇ ಮದಾಳಿಕುಲಮೇ ಕರ್ನೆಯ್ದಿಲೇ ಮತ್ತಕೋ
ಕಿಳಮೇ ಕಂಡಿರೆ ಪಲ್ಲವಾಧರೆಯನಂಭೋಜಾಸ್ಯೆಯಂ ಭೃಂಗ ಕುಂ
ತಳೆಯಂ ಕೈರವನೇತ್ರೆಯಂ ಪಿಕರವಪ್ರಖ್ಯಾತೆಯಂ ಸೀತೆಯಂ

ಮಲಯಜ ಗಂಧ ಬಂಧುರ ಸರೋರುಹಮಂ ವರಹಾಸ ಚಂದ್ರಿಕಾ
ವಿಲಸಿತ ಚಂದ್ರ ಮಂಡಲಮನಾ ರಮಣೀ ರಮಣೀಯ ಲೋಚನೋ
ತ್ಪಲ ಸಹಜ ಪ್ರಸನ್ನ ಕಮಲಾಕರಮಂ ಸ್ಮರರಾಜ ರಾಜ್ಯ ಮಂ
ಗಲ ಮಣಿದರ್ಪಣೋಪಮಮನೋಪಳ ವಕ್ತ್ರಮನೆಲ್ಲಿ ಕಾಣ್ಬೆನೋ

ಕಳರುತಿ ಮತ್ತಕೋಕಿಲಮನೀಕ್ಷಣಮುತ್ಪಲಮಂ ವಿನೀಲ ಕುಂ
ತಳಮಳಿಮಾಲೆಯಂ ಕಚಭರಂ ನವಿಲಂ ನಡೆ ಹಂಸಿಯಂ ತಳಂ
ತಳಿರ್ಗಳನಾನನಂ ಕಮಲಮಂ ನಳಿತೋಳ್ ಲತೆಯಂ ಲತಾಂತ ಕೋ
ಮಳೆ ಮಱೆಗೊಂಡು ಮೆಯ್ಗರೆದು ಕಾಡುವ ಕಾರಣಮೇನೋ ಜಾನಕೀ

ಎನಿತಾನುಂ ತೆಱದಿಂ ಪಲುಂಬಿ ಪಲವಾಡುತ್ತುಂ ಮನಸ್ತಾಪದಿಂ
ತನು ಸಂತಾಪಮನಪ್ಪುಕೆಯ್ಯೆ ಬಱಲುತ್ತುಂ ಕಂತು ಸಂತಾಪದಿಂ
ದೊನಲುತ್ತುಂ ಕನಲುತ್ತು ಮಂದವಿರಳ ಪ್ರಸ್ಯಂದಿ ಬಾಷ್ಪೋದಕಾ
ನನನಾ ಕಾನನದೊಳ್ ತೊೞಲ್ದು ರಘುರಾಮಂ ಸೇದೆವಟ್ಟಿರ್ಪಿನಂ

ವ|| ಅನ್ನೆಗಮಿತ್ತ ದಶಮುಖಂ ಲಂಕೆಗಭಿಮುಖನಾಗಿ ಪೋಗುತ್ತುಂ—

ಬಗೆ ಸಂಭೋಗ ಸುಖಕ್ಕೆ ಕಾತರಿಸೆ ಕಣ್ಗಳ್ ಕೀೞು ಸರ್ವಾಂಗವಂ
ತೆಗೆದಾಲಿಂಗಿಸೆ ಮಾತುಗಳ್ ಮದನರಾಗೋನ್ಮಾದಮಂ ಬೀಱಿ ಬಾ
ಹುಗಳಾಲಿಂಗನ ಲಾಲಸಂಗಳೆನೆ ಧೈರ್ಯಂಗೆಟ್ಟು ಮೇಲ್ವಾಯ್ವ ಚೇ
ಷ್ಟೆಗೆ ಪೌಲಸ್ತ್ಯನುಮೊತ್ತುಗೊಟ್ಟನೆನಲಾರಂ ದರ್ಪಕಂ ದಂಡಿಸಂ

ವ|| ಆಗಳವನಟಿಪಿನಟಿಗೆಯ್ತುಕ್ಕೆ ಸೀತೆ ಸೈರಿಸದೆ ನೀನೆನ್ನ ಸೋಂಕಿದೊಡೆ ನಾಲಗೆ ಗಿಱ್ತು ಸಾವೆನೆಂದು ಪರಿಚ್ಛೇದಿಸಿ ನುಡಿಯೆ ದಶಾಸ್ಯನೋಸರಿಸಿ ಮಹಾ ಸತಿಯ ಶೀಲದಳವನಱಿಯನಪ್ಪುದಱಿನನಂತ ವೀರ್ಯ ಕೇವಲಗಳಿತ್ತ ಪರವಧೂ ವಿರತಿವ್ರತ ಪರಿಪಾಲನವೆನಗರಿದಾದುದೆನೆ ನಿಸರ್ಗರಾಗಿಗಳಪ್ಪ ಪೆಂಡಿರ ಪರಿಣಾಮವೆಲ್ಲಿವರಂ ನಡೆದಪ್ಪುದೀಕೆಯನಾವ ತೆಱದೊಳವೊಡಂಬಡಿಸುವು ದಾವ ಗಹನಮೆಂದು ತನ್ನಿಂ ತಾನೆ ಸಂತಯಿಸುತ್ತುಂ ಪೋಪ ಸಮಯ ದೊಳ್—

ಅನಶನಮಂ ಕೈಕೊಂಡಳ್
ಮನದೊಳ್ ಸತಿ ಪತಿಯ ಕುಶಲವಾರ್ತೆಯನಾಂ ಕೇ
ಳ್ವಿನಮುಣ್ಣೆನೆಂದು ನೃಪಮಾ
ನಿನಿಯರ್ ಸಜ್ಜನಿಕೆಗಿಂತು ನೋಂತರುಮೊಳರೇ

ಪರಿನೀರೊಳಗಣ ನೆೞಲಂ
ತಿರೆ ತನ್ನಂ ಸೋಡಿ ನಡುಗೆ ಜಾನಕಿ ದಶಕಂ
ಧರನಂಜಲೆನುತ್ತಂತಃ
ಪುರಮಂ ಕಣ್ಸನ್ನೆಯಿಂದಮಲ್ಲಿಂ ಕಳೆದಂ

ವ|| ಅನಂತರಂ ಜಾನಕೀವದನ ವಿನ್ಯಸ್ತ ವಿಲೋಚನಂ ಕಮಲಿನಿಯನೆಳಸುವ ಹಿಮಕರ ಕಿರಣದಂತೆ ದಂತಕಾಂತಿ ಪಸರಿಸೆ ಪೌಲಸ್ತ್ಯನಿಂತೆಂದಂ—

ನೂಪುರಮಂ ಪದಕ್ಕೆ ಮಣಿಮೇಖಲೆಯಂ ಜಘನಕ್ಕೆ ಕುಂಕುಮಾ
ಲೇಪನಮಂ ಕುಚಕ್ಕೆ ಪಸುರ್ಗಂಕಣಮಂ ನಳಿತೋಳ್ಗೆ ಪತ್ರ ಲೇ
ಖಾ ಪರಿಶೋಭೆಯಂ ನಿಜ ಕಪೋಲ ತಳಕ್ಕೆ ಕುಡಲ್ ಮನೋಜ ಸಂ
ತಾಪನತಪ್ತಮಾತುರಿಸಿದಪ್ಪುದು ಮನ್ಮನಮಂಬುಜಾನನೇ

ಆನೆಯ ಮೇಲೆ ಬೆಳ್ಗೊಡೆಯ ತಣ್ಣೆೞಲೊಳ್ ನೆಲಸಿರ್ದೆಲೇ ಸರೋ
ಜಾನನೆ ಪೆಂಡವಾಸದ ವಿಲಾಸಿನಿಯರ್ ಬರೆ ನಿನ್ನ ಸುತ್ತಲುಂ
ಜಾನಕಿ ನೋಡ ನಿನ್ನ ನಗೆಗಣ್ ಪರಿತುಷ್ಟಿಯನಪ್ಪುಕೆಯ್ಯೆ ಲಂ
ಕಾನಗರೀ ಬಹಿಃಪುರ ನಮೇರು ವಿಲಾಸ ವನಂಗಳೇೞುಮಂ

ಕುಲನದಿಯಂ ಕುಲಾದ್ರಿ ಶಿಖರಂಗಳ ದಿವ್ಯ ಸರೋವರಂಗಳಂ
ಮಲಯ ಗಿರೀಂದ್ರ ಸಾನು ವನಮಂ ಲವಣಾರ್ಣವ ವಜ್ರವೇದಿಕಾ
ವಿಲಸನಮಂ ವಿಲೋಚನ ಪಥಾತಿಥಿಮಾಡು ವಿಯದ್ವಿಲಾಸಿನೀ
ತಿಲಕಮೆನಿಪ್ಪ ಪುಷ್ಪಕ ವಿಮಾನಮನೆನ್ನೊಡನೇಱು ಜಾನಕೀ

ಎನ್ನೊಳ್ ಪೋರ್ದೞಿದಿಂದ್ರ ಸಿಂಧುರದ ಕೋಡಿಂದಾದ ಪಲ್ಯಂಕದೊಳ್
ಮುನ್ನಂ ಪದ್ಮಜನಂಚೆಯುಂ ತಱಿದು ತುಪ್ಪುಡ್ಗೊಂಡು ದಿಕ್ಪಾಲಕರ್
ಬೆನ್ನಿತ್ತಿಕ್ಕಿದ ಚೀಲದಿಂ ಸಮೆದ ಕೇಳೀತಲ್ಪದೊಳ್ ನಿದ್ರೆಗೆಯ್
ನಿನ್ನಂ ನಿದ್ರೆಯಿನೆಬ್ಬುವನ್ನಮಮರೀ ಮಾಂಗಲ್ಯ ಗೀತ ಸ್ವನಂ

ಅಸಿರತ್ನಂ ಚಕ್ರರತ್ನಂ ನವನಿಧಿ ಪಲವುಂ ವಿದ್ಯೆ ಕೈಸಾರ್ದುವುಳ್ಳಂ
ಜಸಿದೆಂ ದಿಕ್ಪಾಲರಂ ಕಟ್ಟಿದೆನುಱದಿದಿರಾದಿಂದ್ರನಂ ಲೀಲೆಯಿಂ ಚಾ
ಳಿಸಿದೆಂ ಕೈಲಾಸಮಂ ದಕ್ಷಿಣ ಭರತ ಧರಾಚಕ್ರಮಂ ಚಕ್ರದಿಂ ಸಾ
ಧಿಸಿದೆಂ ಪೌಲಸ್ತ್ಯನಂ ಮೀಱುವರೆ ಸಮರದೊಳ್ ಮಾನವರ್ ಮೀನನೇತ್ರೇ

ಕಾಡಂ ಕೂಡೆ ತೊೞಲ್ಚಿ ಕಾಡೊಡಮೆಯಿಂ ಭೋಗೋಪಭೋಗಂಗಳೊಳ್
ನೀಡುಂ ತೃಪ್ತಿಯನೀವ ರಾಘವನೊಳೇಂ ವೈದೇಹಿ ವಿದ್ಯಾಧರ
ಕ್ರೀಡಾ ಸದ್ಮದೊಳಂಗರಾಗ ವಸನಾದಿ ದ್ರವ್ಯದಿಂ ಮನ್ಮಥ-
ಕ್ರೀಡಾ ಸೌಖ್ಯಮನಪ್ಪುಕೆಯ್ದು ಮೆಱೆ ನೀಂ ನಾನಾ ವಿನೋದಂಗಳಂ

ವ|| ಎಂದು ಪರನಿಂದಾಪರನುಮಾತ್ಮಸ್ತವನ ತತ್ಪರನುಮಾಗಿ—

ಅನುನಯ ಶತಂಗಳಂ ನುಡಿ
ದನುವಶೆ ಮಾಡಲ್ ವಿಯಚ್ಚರೇಂದ್ರನುಮೇನಾ
ರ್ತನೆ ಜನಕಜೆಯುಂ ಗಗನಮ
ನನುಲೇಪಂಗೆಯ್ದೊಡಲ್ಲಿ ಮಸಿ ಪತ್ತುಗುಮೇ

ಸಿರಿಯುಂ ಮೆಯ್ಸಿರಿಯುಂ ಮೆಱೆ-
ದು ರಾವಣಂ ಸತಿಯನೆಱಗಿಸಲ್ ನೆಱೆದನೆ ಪೊ
ನ್ನೊರೆಗನ್ಯ ದೀಪಮೆಱ ಪಂ
ತಿರೆ ಮಾಣಿಕ್ಯ ಪ್ರದೀಪಮೇನೆಱಗುಗುಮೇ

ವ|| ಅಂತಾ ದುರಾತ್ಮನ ದುರುಕ್ತಿಗೆ ಜನಕಸುತೆ ಕಡುಮುಳಿದು ಮುನಿಸಂ ಮೊಗಕ್ಕೆ ತಾರದೆ—

ನುಡಿಯಲ್ ತಕ್ಕುದೆ ಪಾಟಿದಪ್ಪಿ ಪಟಿಗಂ ಪಾಪಕ್ಕಮುಳ್ಳಕ್ಕದೀ
ನುಡಿಯಂ ಚೀಃ ಪರದಾರವನ್ಯಶಯನಸ್ಥಾನಂ ಪೆಱರ್ ಮಿಂದ ನೀರ್
ಮುಡಿದುತ್ಫುಲ್ಲಕದಂಬಕಂ ತೊಡೆದ ಕಾಶ್ಮೀರಾಂಗರಾಗಾದಿಕಂ
ಮಡೆಗೂಟಿಬ್ ಬೀಟುಡೆ ಬಾಯ ತಂಬುಲಮಿವಸ್ಪೃಶ್ಯಂಗಳೇನಲ್ಲಮೇ

ಗುಣಹಾನಿಯಿಂದಧೋಗತಿ
ಗುಣದಿಂ ಸ್ವರ್ಗಾಪವರ್ಗ ಸುಖಮುಕ್ಕುಮೆನಲ್
ಗುಣಹೀನನ ಸಿರಿಯಿಂದಂ
ಗುಣಿಗಳ ಬಡತನಮೆ ನಾಡೆಯುಂ ಲೇಸಲ್ತೇ

ಆಹವ ದೋಹಳಂ ಮಸುಜಿ ಮತ್ಪತಿಯಿಂದಮಗಲ್ಚಿ ತಂದೆ ವೈ
ದೇಹಿಯನೆನ್ನನುಕ್ಕೆವದಿನಲ್ಲದೊಡೇಂ ದಶಕಂಠ ರಾಮ ಬಾ
ಣಾಹತಿಯಿಂ ನಭಂಬರೆಗಮಂಬಿಜುವಿಟ್ಟು ಮಡಲ್ತ ವಿದ್ವಿಷ
ಲ್ಲೋಹಿತದಿಂದಕಾಂಡ ಲಯ ಕಾಲದ ಸಂಜೆ ಮುಗಿಲ್ಗಳಾಗವೇ

ಬಿಡೆನುಡಿಯೆ ಸೀತೆ ಮುಳಿಸಿನ
ಪಡೆಮಾತಂತಿರ್ಕೆ ರಾವಣಂಗೊಲವು ಪದಿ
ರ್ಮಡಿಸಿತ್ತಪ್ರಾಪ್ತಿ ರಸಂ
ಬಡೆಗುಂ ವೈಷಯಿಕಸುಖದೊಳಿದು ವಿಸ್ಮಯಮೇ

ವ|| ಅಂತು ದಶಕಂಠನಾ ಕಂಬುಕಂಠಿಯ ಕನಲ್ದೊಸಲ್ದು ನುಡಿವ ವಚನಮೆ ಸುಗ್ಗಿಯ ಕಳಕಂಠಿಯ ಪುಗಲೆಂಬ ವಕ್ರವಚನದಂತೆ ತನಗೆ ಮದನರಾಗ ಹೇತುವಾಗೆ—

ನಯದಿಂದಮಿಾ ಸರೋರುಹ
ನಯನೆಯನಳವಡಿಸಲಾರ್ತೆ ನಿಲ್ಲಳವಡಿಪೆಂ
ಭಯದಿಂದಮೆಂದು ವಿದ್ಯಾ
ದಯಿತಂ ಪಡೆದಂ ವಿಕುರ್ವಣಾವೈಭವಮಂ

ತೋರವೆಣಂಗಳಂ ತಳೆದು ಭೂತಗಣಂ ಕುಣಿದಾಡುವಂತಿರಲ್
ಕ್ರೂರ ಮೃಗಂಗಳವ್ವಳಿಸಿ ಗರ್ಜಿಸಿ ನುಂಗಲೊಡರ್ಚುವಂತು ಭೋ

ಭೋರೆನೆ ರಕ್ತವೃಷ್ಟಿ ಕಱೆವಂತು ಸಿಡಿಲ್ ಪೊಡೆವಂತು ಸುತ್ತಲುಂ
ವಾರಿಧಿ ಮೇಱೆದಪ್ಪಿ ಕವಿವಂತು ಬಿಗುರ್ವಿಸಿದಂ ದಶಾನನಂ

ವ || ಅಂತು ಬಿಗುರ್ವಿಸುವುದುಂ—

ಬಗೆಯೊಳ್ ಜೈನ ಪದಂ ನಾ
ಲಗೆಯೊಳ್ ಪಂಚಪದಮಗಲದಿರೆ ರನ್ನದ ದೀ
ವಿಗೆ ಪರುಷ ಪವನ ಹತಿಯಂ
ಬಗೆಯದವೊಲ್ ಸೀತೆ ಬಗೆದಳಿಲ್ಲುಪಹತಿಯಂ

ರಾವಣನ ಪಶ್ಚಾತ್ತಾಪ

ಸಮಧಿಕರಾರ್ ಜಗತ್ತ್ರಯದೊಳಿನ್ನೆನಗೆನ್ನೊಳಿದಿರ್ಚುವನ್ನರಾರ್
ಸಮರದೊಳೆಂದು ತನ್ನ ಭುಜದಂಡಮನೀಕ್ಷಿಸಿ ಜಾನಕೀ ಮುಖಾ
ಬ್ಜಮನವಲೋಕಿಸಲ್ ಕರಮೆ ಕಾತರನಾಗಿ ವಿಯಚ್ಚರಾಧಿಪಂ
ಪ್ರಮದ ವನಕ್ಕೆ ಬಂದನರಲಂಬುಗಳಿಲ್ಲದ ಕಾಮನೆಂಬಿನಂ

ವ || ಅಂತು ಭೋಂಕನೆ ಬರ್ಪ ರಾವಣನ ಗಂಡಗಾಡಿಯಂ ಕೆಲದೊಳಿರ್ದ ಖಚರ ಕಾಂತೆಯರ್ ಸೀತಾದೇವಿಗೆ ತೋರ್ಪುದುಂ—

ರಾವಣನ ರೂಪು ಸೀತಾ
ದೇವಿಗೆ ತೃಣಕಲ್ಪಮಾಯ್ತು ಪತಿಭಕ್ತಿಯೊಳಾ
ರೀ ವನಿತೆಯು ತೆಱದಿಂ ಸ-
ದ್ಭಾವಮನೊಳಗೊಂಡ ಪುಣ್ಯವತಿಯರ್ ಸತಿಯರ್

ಏನಂ ಕೇಳ್ದಪೆನೋ ರಘು
ಸೂನುವ ಲಕ್ಷ್ಮಣನ ಪೊಲ್ಲ ವಾರ್ತೆಯನಿನ್ನೆಂ
ದಾ ನಳಿನಾನನೆ ಬರ್ಪ ದ
ಶಾನನನಂ ಕಂಡು ತಾಳ್ದಿದಳ್ ತಲ್ಲಳಮಂ

ವ || ಅಂತು ತಲ್ಲಳಿಸುತಿರ್ದ ಮಾನಿನಿಯನೆಯ್ದೆ ವಂದು ದಶಾನನನಿಂತೆಂದಂ ಬಹುರೂಪಿಣೀ ವಿದ್ಯೆ ಸಾಧಿತಮಾದುದಿನ್ನೆನಗಸಾಧ್ಯಮಪ್ಪ ಮರುವಕ್ಕ

ಮಿಲ್ಲ ನಿನ್ನ ನಚ್ಚಿನ ರಾಮನ ದೆಸೆಯಂ ಬಿಟ್ಟೆನಗೊಡಂಬಟ್ಟು ಸಾಮ್ರಾಜ್ಯ
ಸುಖಮನನುಭವಿಸೆನೆ ಸೀತೆ ವಿಹ್ವಲೀಭೂತ ಚಿತ್ತೆಯಾಗಿ—

ಕರುಣಿಸುವೊಡೆನಗೆ ದಶಕಂ
ಧರ ಧುರದೊಳ್ ರಘುತನೂಜನಾಯುಃ ಪ್ರಾಣಂ
ಬರೆಗಂ ಬಾರದಿರೆಸುತುಂ
ಧರಿತ್ರಿಯೊಳ್ ಮೆಯ್ಯನೊಕ್ಕು ಮೂರ್ಛೆಗೆ ಸಂದಳ್

ಜಾನಕಿ ಮೂರ್ಛಿತೆಯಾಗೆ ದ
ಶಾನನನನುಕಂಪೆ ಪುಟ್ಟೆ ಕರುಣಿಸಿ ತನ್ನಂ
ತಾನೇ ಪಟಿದುಟಿದು ಕರ್ಮಾ—
ಧೀನ ಸಮುತ್ಪನ್ನ ದುರಘ ದುಷ್ಪರಿಣತಿಯಂ

ಕದಡಿದ ಸಲಿಲಂ ತಿಳಿವಂ-
ದದೆ ತನ್ನಿಂ ತಾನೆ ತಿಳಿದ ದಶವದನಂಗಾ
ದುದು ವೈರಾಗ್ಯಂ ಸೀತೆಯೊ
ಳುದಾತ್ತನೊಳ್ ಪುಟ್ಟದಲ್ತೆ ನೀಲೀರಾಗಂ

ಪತ್ತುವಿಡದಿರ್ದನೇ ರವಿ
ಪತ್ತಿದ ಸಂಧ್ಯಾನುರಾಗಮಂ ಮನದಟಿಪಿಂ
ದೆತ್ತಾನುಂ ಪೊಲ್ಲೆನಿಪುದ
ನುತ್ತಮನಾಚರಿಸಿ ಪತ್ತುವಿಡದಿರ್ದಪನೇ

ವ|| ಅಂತು ಮನದೊಳೊಗೆದ ಕಾರುಣ್ಯ ರಸಮೆ ಸೀತೆಯೊಳಾದನುರಕ್ತತೆಯಂ
ಕರ್ಚಿ ಕಳೆವುದುಂ ಸ್ವಭಾವಪರಿಣತಿಯೊಳ್ ನಿಂದು ಸ್ವಕೀಯಾಪ್ತ ಪುರುಷ
ಪರಿಷಜ್ಜನಕ್ಕಿಂತೆಂದಂ

ಗುಣ ಪರಿಪಾಲನಾರ್ಥಮೆನಗಂ ಬಗೆದೋರಿದಳಿಲ್ಲ ದಿವ್ಯಭೂ
ಷಣ ವಸನಾಂಗರಾಗಮುಮನೊಲ್ಲದೆ ಖೇಚರ ರಾಜ್ಯ ಲಕ್ಷ್ಮಿಯಂ
ತೃಣ ಸಮನಾಗೆ ಭಾವಿಸಿದಳೀ ಸತಿಯುಂ ಮೊದಲಾಗಿ ಪೌರುಷ
ಪ್ರಣಯಿಯೆನಿಂತಪೇಕ್ಷಿಸುವೆನೇ ಗುಣಹಾನಿಯನೆನ್ನ ಪಾಪದಿಂ

ಇವರಂ ಪ್ರಾಣಪ್ರಿಯರಂ
ನೆವಮಿಲ್ಲದೆ ಕರ್ಮವಶಮೆ ನೆವಮೆನೆ ಕಂದ
ರ್ಪ ವಿಮೋಹದಿಂದಗಲ್ಚಿದೆ
ನವಿವೇಕಿಯೆನೆನ್ನ ಕುಲದ ಪೆಂಪಟಿವಿನೆಗಂ

ರಾಮನನಗಲ್ಚಿ ತಂದಾ
ನೀ ಮಾನಿನಿಗಿನಿತು ದುಃಖಮಂ ಪುಟ್ಟಿಸಿದೆಂ
ಕಾಮವ್ಯಾಮೋಹದಿನಾ
ಶಾಮುಖಮಂ ಪುದಿಯೆ ದುರ್ಯಶಃ ಪಟಹರವಂ

ಎನಗೆ ವಿಭೀಷಣಂ ಹಿತಮನಾದರದಿಂದಮೆ ಪೇಟೆ ಕೇಳದಾ
ತನನವಿನೀತನೆಂ ಗಜಱಿ ಗರ್ಜಿಸಿ ಬಯ್ದು ಸುಜಾತನಂ ವಿನೀ
ತನನಱಿಯಟ್ಟಿ ದುರ್ವ್ಯಸನಿಯೆಂ ಕಟಿದೆಂ ವ್ಯಸನಾಭಿಭೂತನಾ
ವನುಮನುರಾಗ ವೇಗದೆ ಹಿತಾಹಿತ ಚಿಂತೆಯನೇಕೆ ಮಾಡುಗುಂ

ಜನದಱಿವಂ ಪರಾಭವದ ಪತ್ತುಗೆಯಂ ದೊರೆವೆತ್ತ ತಮ್ಮ ಮಾ
ನಸಿಕೆಯ ಕೇಡನುನ್ನತಿಯ ಬನ್ನಮನನ್ಯ ಭವಾನುಬದ್ಧಮ
ಪ್ಪ ಸುಗತಿಯಂ ಸುಹೃಜ್ಜನದ ಬೇವಸಮಂ ಜನತಾಪವಾದಮಂ
ವ್ಯಸನಿಗಳಾರುಮೆತ್ತಲಱಿವರ್ ವಿಷಯಾಸವಮತ್ತಚೇತಸರ್

ವ|| ಎಂದುದ್ವೇಗಪರನಾಗಿ ನುಡಿದಾತ್ಮಗತದೊಳಿಂತೆಂದಂ—

ಇರದುಯ್ದಾಗಳೆ ಕೊಟ್ಟೊಡೆನ್ನ ಕಡುಪುಂ ಕಟ್ಟಾಯಮುಂ ಬೀರಮುಂ
ಬಿರುದುಂ ಬೀಸರಮಕ್ಕುಮೋಸರಿಸಿದಂತಾಗಿರ್ಕುಮಂತಾಗದಂ
ತಿರೆ ದೋರ್ಗರ್ವಮನಿರ್ವಲಂ ಪೊಗಟ್ವಿನಂ ಸೌಮಿತ್ರಿಯುಂ ರಾಮನುಂ
ವಿರಥರ್ಮಾಡಿ ರಣಾಗ್ರದೊಳ್ ಪಿಡಿದು ತಂದಾಂ ಕೊಟ್ಟಪೆಂ ಸೀತೆಯಂ

ಹರಿಹರನ ಗಿರಿಜಾ ಕಲ್ಯಾಣ

ಬೃಹಸ್ಪತಿಕಾಮ ಸಂದರ್ಭ

ವ|| ಮೂಱುಂ ಜಗಮಂ ಏೞಱ ಗೆಲಲೆಂದು ಸಂಗಡಿಸಿ ಶೃಂಗಾರರಸಮಂಗಂ ಬಡೆದಂತೆ ಸುಕುಮಾರತೆ ಸಾಕಾರಂಗೊಂಡಂತೆ ಸೊಬಗು ಸಂದಣಿಸಿದಂತೆ ನಳನಳಿಕೆ ಬಳೆದಂತೆ ಕಣ್ಗಳ ಭಾಗ್ಯಂ ಕವಲ್ತಂತೆ ಮನೋರಥಂ ಮದವೇಱ ದಂತೆ ಪುಟವಿಟ್ಟ ಪುಣ್ಯಂ ಪುರುಷಾಕಾರಮಾದಂತಿರ್ದ ಕಂದರ್ಪರಾಜನ ಕಮನೀಯರೂಪಂ ಬೃಹಸ್ಪತಿಯ ಕಣ್ಗಳೊಳಪೊಕ್ಕು ಮನಮನಲ್ಲಾಡಿಸೆ ಬುದ್ಧಿ ಬೆದಱಯಹಂಕಾರವಳಿದು ಚಿತ್ತಂ ಸೂಸಿ ಮದನವಿಕಾರದ ಜಮ್ಮು ಜಕ್ಕುಲಿಸಿ ಹಮ್ಮದಂಬೋಗಿ ಜೀವಂ ಸುಖದ ಜೀವಕಳೆಯ ಕಳಾಸದ ಕುಣಿಕೆ ಕಳಲ್ಜಿ ತನ್ನ ನಱಯದಿದಿರನಱಯದೆ ಬಂದುದಂ ಮಱೆದು ಕಜ್ಜಮಂ ತೊಱೆದಿನಿತುಂ ಬೇಗಂ ಸುಖದ ಸೊಂಕಿಂದುರ್ಕುವ ಕಾಮರಸದ ತೆರೆಯೊಳ್ ತೇಂಕಾಡುತಿರ್ದೆಂತಾಸುಮೆಳ್ಚತ್ತು ಸಂತೈಸಿಕೊಂಡು ;

ಮಱೆಯುತ್ತೆಳ್ಚಱತುಂ ಕುಱು-
ಕುಱುಮೆಟ್ಟುತ್ತಡಿಯನೆತ್ತಿ ತಾನೆಂದಿದಿರಿಂ-
ದಱಯದೆ ಕಾಮವಿಕಾರಂ
ನೆಱೆ ಪತ್ತಿ ಸುರೇಂದ್ರಮಂತ್ರಿ ದಡದಡಿಸುತ್ತುಂ

ಮೆಲ್ಲನೆ ಮೆತ್ತನೆ ನಡೆತರು
ತಲ್ಲಲ್ಲಿ ಕುಸುಂಗಿ ಕುರ್ಗಿ ಪಂಚಶರಂಗು
ತ್ಫುಲ್ಲನವಕುಸುಮಸಂಕುಳ
ವಲ್ಲರಿಯಂ ಕಾಣ್ಕೆಯಿತ್ತನಮರಾಚಾರ್ಯಂ

ಕಂಪಂ ಕೆಯ್ಕೊಳುತುಂ ಮೆಯ್
ಜೊಂಪಿಸಿ ಬೀಳ್ವಳಿನಿಕಾಯಸಹಿತಂ ಜೀವಂ
ಪೆಂಪಿನ ಸೊಂಪಿನಲಂಪಿನ
ಸಂಪಗೆಯುಲದೊರ್ಗಲಂ ರತೀಶಂಗಿತ್ತಂ

ವ|| ಅಂತು ಕಾಣ್ಕೆಯಿತ್ತು ಕುಳ್ಳಿರ್ದ ವಾಚಸ್ಪತಿಯ ಮುಖಮಂ ಮಕರಧ್ವಜಂ ನೋಡಿ

ಸುರಪತಿ ಸರಸಿಜಭವ ಪಂ
ಕರುಹಾಕ್ಷರ್ ಸುಖದೊಳಿರ್ದಪರೆ ತಾರಕಸಂ
ಗರಮೇನಾದುದು ಸುರಕುಲ
ಗುರುವೇ ನೀಂ ಬಂದ ಕಜ್ಜಮೇನೀ ಪದದೊಳ್

ಎನೆ ಗುರುವೆಂದಂ ತಾರಕ
ನನುವರಮಂ ಮಾಣ್ದು ಮೇರುಗಿರಿತಟದೊಳ್ ಶ
ಕ್ರನುಮಜನುಂ ಸರಸಿಜನಾ
ಭನುಮೇಕಾಂತದೊಳಗಿರ್ದು ಕಳುಪಿದರೆನ್ನಂ

ಅತುಳತರಗುಪ್ತ ಕಾರ್ಯ
ಸ್ಥಿತಿಯಾಳೋಚನೆಗಳುಂಟು ನೀಂ ಚೆಚ್ಚರಮ
ಪ್ರತಿಮಂ ಕಾಮನನೊಡಗೊಂ
ಡು ತರ್ಪುದೆನೆ ಬಂದೆನಿದೆ ಪದಂ ನಡೆ ಮದನಾ

ಎನುತುಂ ಗುರು ನುಡಿಯೆ ಸುಖಾ
ಸನದಿಂದಿದಿರೆಳ್ದು ಶಶಿವಸಂತಾದಿಗಳಂ
ಬನದೊಳ್ ಪಿಂತಿರಿಸುತೆ ಭೋಂ
ಕನೆ ರತಿವೆರಸೇಱಿ ದರ್ಪಕಂ ಪುಷ್ಪಕಮಂ

ತಾನುಂ ವಾಚಸ್ಪತಿಯುಂ
ನಾನಾವಿಧಕಾರ್ಯಗತಿಗಳಂ ನುಡಿಯುತ್ತುಂ
ಸಾನಂದಂ ಹರಿಯಜರಾ
ಸ್ಥಾನನಿಕೇತನದ ಮುಂದೆ ಬಂದಿಳಿತಂದರ್

ಆರಿಂದಂ ಸಾಯಂ ತ್ರಿಪು
ರಾರಿಗೆ ಪುಟ್ಟಿದ ಕುಮಾರನಿಂದಲ್ಲದವಂ
ತೀರಂ ತಾರಕನಂತದು
ಕಾರಣದಿಂ ಮಾಳ್ಪ ಕಜ್ಜಮುಂಟೀ ಪದದೊಳ್

ಹರನತ್ಯಧಿಕತಪೋವಿ
ಸ್ತರಮನನಾಗಿರ್ದಪಂ ಮದನ ತತ್ತಪಮಂ

ಕೊರಗಿಸಿ ವರಗಿರಿಸುತೆಯೊಳ್
ನೆರೆಪಲ್ಲಿಗೆ ನೀನೆ ಬಲ್ಲೆ ನೀನೆ ಸಮರ್ಥಂ

ಇಂತಪ್ಪ ನಿನಗೆ ಮನ್ಮಥ
ಮುಂತಿದಿರಪ್ಪವರದಾರೊ ಶಶಿಚೂಡನ ತ
ಚ್ಛಾಂತಿಯನುಡುಗಿಸಿ ಗಿರಿಜಾ
ಕಾಂತೆಯ ಸಮಸುಖಸಮುದ್ರ ಮಧ್ಯದೊಳಿರಿಸಯ್

ಎನೆ ಮದನಂ ನುಡಿದಂ ನಿಜ
ಜನಕನೊಳಕ್ಕಕ್ಕಿದಪ್ಪುದಪ್ಪುದು ಸರ್ವೇ
ಶನನಸವಧಿಗುಣನಂ ಶ
ರ್ವನನೆಸುವುದನೆನಗೆ ಬೆಸಸುವುದು ನಿಮಗರಿದೇ

ಶ್ರುತಿಗಳ್ ಕಾಣದ ಮನುಗಳ
ಮತಿಯೆಯ್ದದ ಮುನಿಗಳಱಿವು ನಿಲ್ಕದ ಶಾಸ್ತ್ರ
ಪ್ರತತಿ ನೆಱೆಯಱಿಯದಪ್ರತಿ
ಹತರೂಪನನೆಂತು ಕಾಣ್ಬೆನೆಂತಾನೆಸುವೆಂ

ತಿಳಿಯದೆ ಶೂಲಿಯ ತಪಮಂ
ಚಲಿಯಿಸು ನೀನೆಂಬುದಹಿತಮೆನಗೆ ಹೆಱರ ಮ
ಕ್ಕಳನಿಕ್ಕಿ ನಲೆಯನಱಿವುದ
ನಿಳೆಯೊಳಗೆನ್ನಲ್ಲಿ ಮಾಳ್ಪರೇ ಕಮಲಾಕ್ಷಾ

ಹರಿಯಲ್ಲಿಗೆ ತಮಮುಂ ಕೇ
ಸರಿಯಲ್ಲಿಗೆ ಕರಿಯನಭ್ರಶಿಖಿಯಲ್ಲಿಗೆ ಕೇ
ಳುರಗನನಟ್ಟುವ ತೆಱದಿಂ
ಹರನಲ್ಲಿಗೆ ತಂದೆ ಕಳಿಪುವರೆ ನೀವೆನ್ನಂ

ಎಂದೊಡೆ ಮುಕುಂದನೆಂದಂ
ಕಂದರ್ಪ ಬಹೂಕ್ತಿಯಿಂದಮೇನಪ್ಪುದು ನಿ
ನ್ನಿಂದಂ ಸಕಳಜಗಂ ಸುಖ
ದಿಂದಿರ್ಪೊಡೆ ಹರಣದೊಂದು ಹುರುಳಱಸುವರೇ

ಎನೆ ಕಂದರ್ಪಂ ಸಕಳಭು
ವನಮೆನ್ನಿಂ ಪರವುಸುಖದೊಳಿರ್ಪುದು ಗಡಮಾ
ನೆನಿತಱವನೆನ್ನ ಹರಣಂ
ಘನವೇ ತೆಗೆಯಿಂದೆ ನೂಱು ತೀವಿತ್ತೆಂದಂ

ವ|| ಎಂದು ಮಿಾಱುನುಡಿಯುತ್ತೊಡಂಬಟ್ಟು ಬೀಳ್ಕೊಂಡು ನಡೆತಂದು ಪೊಱಗಿಕ್ಕಿದ ಸಿಂಹವಿಷ್ಟರಮನವಷ್ಟಂಭಿಸುತುನ್ನತಚಿತ್ತಂ ಪುಷ್ಪಧನ್ವಂ ತನ್ನೊಳಿಂತೆಂದಂ

ಪೊಡವಿಯೊಳುಳ್ಳ ಮುಖ್ಯ ಮುನಿಗಳ್ ಮನುಗಳ್ ಜಿತಕಾಮರುಂ ಸಮಂ
ತೆಡೆಗುಡದೆನ್ನ ಕಾರ್ಮುಕದ ಟಂಕೃತಿಮಾತ್ರದೊಳತ್ತಲಿತ್ತಲುಂ
ಸಡೆದು ಸುರುಳ್ದುರುಳ್ದು ರತಿಯುನ್ನತಿಯಿಂ ರತರಪ್ಪರೆಂದೋಡೀ
ಸಡಿಫಡ ಶೂಲಿಗೀಲಿಯ ತಪಂಗಿಪವೊಡ್ಡಿಪುದೇ ರತೀಶನೊಳ್

ಕಾಮದಹನ—ರತಿವಿಳಾಸ

ತೆಗೆದಾಕರ್ಣಾಂಬರಂ ಶಂಬರರಿಪು ನೆರೆ ಹೂಡಿರ್ದ ಪುಷ್ಪಾಸ್ತ್ರದೊಂದು
ಜ್ಜುಗಮಾಕಾಶಸ್ಥನಾಕೌಕರೊಳೊದವಿದನೂನಾರ್ತಿ ಕೂರ್ತೆಯ್ದೆ ನಿಂದಿ
ರ್ಪಗಜಾಚಿತ್ತಾಭಿಲಾಷಾವಿತತಿ ನೆರೆದು ಭೂತೇಶಚಿತ್ತಾಂತದೊಳ್ ಪೊ
ಕ್ಕು ಗಭೀರೋದ್ಯತ್ತಪೋಬೀಜಮನತಿಭರದಿಂದೊತ್ತಿ ಮುತ್ತಿತ್ತು ಸುತ್ತಂ

ಇಂತು ಸಕಲ ಜಗದ್ಧಿತಾರ್ಥಮಪ್ಪ ಹರಿವಿರಿಂಚಿಗಳ ಮನದ ಬಯಕೆಯುಂ ಕಂದರ್ಪನ ಪಂಚಬಾಣಾನುಸಂಧಾನಮುಂ ಪಾರ್ವತಿಯ ಮನೋರಥಮುಂ ಮುಪ್ಪುರಿಗೊಂಡು ಶಿವನ ನಿಷ್ಪ್ರತ್ಯಯಾತ್ಮಕನಿರುಪಾಧಿಕನಿರಾವರಣಸ್ವಾನುಭವ ಸಂವೇದ್ಯ ಸ್ವಯಂಪ್ರಕಾಶಮಂ ಸುತ್ತಿ ಮುತ್ತಿ ಪತ್ತಿ ಚಿಗಿಲ್ತು ಬಿಡದಿರೆ ನಿರ್ವಿಕಾರ ಸ್ವರೂಪನಪ್ಪ ಪರಮಂಗೆ ಸ್ವಪ್ನೋಪಮಾಹಂ ಮಮತೆ ತಲೆಯೇಱೆ ಜೀವನಾಗಿ ಜೀವನಿಂ ಪ್ರಾಣಾನಿಲಂ ಪ್ರಾಣಾನಿಲನಿಂ ಚಿತ್ತಂ ಚಿತ್ತದಿಂದಹಂಕಾರಂ ಅಹಂಕಾರ ದಿಂ ಬುದ್ಧಿ ಬುದ್ಧಿಯಿಂ ಮನಂ ಜನಿಯಿಸಿತ್ತಂತರಂಗಭಾವಮಂ ನೆನೆಯೆ ನೆನೆವಲ್ಲಿಂ ಮುನ್ನಂ ಮದನನ ಪಂಚಬಾಣಂ ಪರಿತಂದು ನೆರೆದಡಸಿ ಬೆರಸಿ ಕವಿದು ಮನಮ ನಿರ್ಮೆಯ್ಗೊಂಡು ಸಹಸ್ರಮುಖದಿಂ ಸಂಚಳಮನೀಯೆ ನಿಲಲ್ ಬಾರದೆ ತಪೋಭರದ ಬೆಸುಗೆ ಬಿಡುವಂತೆ ಮೆಯ್ಯ ಸಂಪುಟಂ ಬಿರ್ಚಲೊಡಂ ನೋಡಿ ನೋಡಿ ನೋಡಲಣ್ಮದೆ ಪುಷ್ಪಶರಮಂ ನೂರ್ಮಡಿಸುವಂತೆ ಪುಷ್ಪಾಂಜಲಿಯಂ ಕೊಟ್ಟಂತೆ ಕಂಪಿಸಿ ಮುಂತೆ ಮೆಯ್ಯಿಕ್ಕಿರ್ದ ಗಿರಿಜಾತೆಯಂ ಭೂತೇಶ್ವರಂ ಕಂಡಾನೇಕೆಯಿಾ ಮಾನಿನಿಯೇಕೀ ತಪದೊಳೆಲ್ಲಿಯದೆತ್ತಣಿಂ ಬಂದುದಾರಿಂದಾದುದೆಂದು ಕಾಮನಿರ್ಪ ವಾಮಭಾಗಮಂ ನಿಟಿಲಾಕ್ಷಂ ನಸುಗೋಪದಿಂ ನೋಡಿದಾಗಳ್,

ನೋಡದ ಮುನ್ನಂ ಕೋಪಂ
ನಾಡೆಯುಮೊತ್ತರಿಸಿ ನೀಳ್ದು ನಿಟಿಲೇಕ್ಷಣದೊಳ್
ಕೂಡೆ ಬಳಿಬಳಿದು ಸುಳಿ ಸುಳಿ
ದೀಡಿಱಿದೊಳಗೊಳಗೆ ಘುಳುಘುಳಿಸಿ ಕುದಿದಾಗಳ್

ಪೊಗೆದುದು ಪೊತ್ತಿದತ್ತು ಕಿಡಿಯಿಟ್ಟುದು ನಾಲ್ದೆಸೆದೋಱಿದತ್ತು ಬಾನ್
ಗೊಗೆದುದು ನಿಂದು ಪೊಂಬೆಳಗುವಂ ಪರಪುತ್ತುದು ಧಂ ಧಗಿಲ್ ಧಗಿಲ್
ಧಗಿಲೆನುತಟ್ಟಿದುದು ಮುಟ್ಟಿತು ಸುಟ್ಟಿತು ತಿಂದು ತೇಗಿದ
ತ್ತಗಿಯದೆ ನಿಂದ ಪೂಗಣೆಯನಂ ಪಣೆಗಣ್ಣುರಿ ಹಂಪೆಯಾಳ್ದನಾ

ಇಟ್ಟಣಿಸಿ ಘುಡುಘುಡಿಸಿ ಕಿಡಿ
ಗುಟ್ಟಿ ಕಸಲ್ದಡಸಿ ಸಿಡಿಲ ಬಳಗದ ಮುಳಿಸಂ
ತೊಟ್ಟುದು ಬಿಸುಗಣ್ಣುರಿ ಪೊಱ
ಮಟ್ಟುದು ಸುಟ್ಟುದು ರತೀಶನಂ ನಿಮಿಷಾರ್ಧಂ

ಗಗನದ ಹರಿಸುರಪತಿಗಳ್
ಜಗದ್ಧಿತಾರ್ಥಂ ಮಹೇಶ ಕರುಣಿಪುದೆಂಬ
ನ್ನೆಗಮೆತ್ತಲ್ ಘಱ ಘಱ ಭುಗಿ
ಭುಗಿಲೆನೆ ನೆರೆ ಕಾಮನುರಿದು ಕರಿವುಱವೋದಂ

ಸಂದಣಿಸಿ ಪತ್ತಿದುರಿ ಘುರಿ
ಲೆಂದುರುಪಿಡೆ ಬೇಗದಿಂದೆ ಉರಿದಾಕ್ಷಣದೊಳ್
ಬೆಂದ ನುಲಿಯಂತೆ ಮದನಂ
ನಿಂದಿರೆ ಕಂಡಭವನೆಯ್ದಿ ಮುಳಿದಂ ತುಳಿದಂ

ಶಿವನಧಿಕಾಕ್ಷಕ್ರೋಧೋ
ದ್ಭವಶಿಖಿಯಿಂ ಮದನನುರಿಯೆ ರತಿಗತಿಶೋಕಂ
ಕವಿದಳ್ಕಿದಳಿಂದುಗುಪ-
ಪ್ಲವಮಾಗೆ ಚಕೋರಿ ಕರಗಿ ಕೊರಗುವ ತೆಱದಿಂ

ಬೆಂದಿರ್ದ ಕಾಮನಂ ಕಂ
ಡಂದಳಲೊಳಗೇಱ ನುಡಿಯಲಱಯದೆ ನಿಲೆ ಶೋ
ಕಂ ದಳವೇಱುತೆ ಮಿಱುತೆ
ಸಂದಣಿಸುತ್ತಳಿಸಿತಸ್ತುರತಿಯುಂ ರತಿಯುಂ

ಎತ್ತಣ ಹರನೆತ್ತಣ ತಪ
ಮೆತ್ತಣ ತಾರಕನ ಬಾಧೆ ಎತ್ತಣ ಬಿಸುಗಣ್
ಎತ್ತಣುರಿ ಎತ್ತಣೆರವಿದು
ಎತ್ತಣ ಕೋಟಲೆಯನೆನಗೆ ಮಾಡಿದೆ ಮದನಾ

ಎಳೆಯನೆ ಸುಕುಮಾರನೆ ಸದ
ಮಳನೆ ಸುಖಪ್ರದನೆ ಸೊಬಗೆ ಸುರತರುವೇ ತತ್
ಫಳಮೆ ಸುಧಾರಸಮೋ ನಿ
ನ್ನಳವಱಿಯದೆ ನೊಸಲ ಕಣ್ಣ ಮುಸುಕಂ ತೆಱೆದಯ್

ಕಂತುವೆ ನೀನಿಂತಾದೊಡ
ದೆಂತುಳಿವೆನದೆಂತು ನಿಲ್ವೆನೆಂತೊಪ್ಪುವೆನಿ
ನ್ನೆಂತುಸಿರ್ವೆನೆಂತು ಬಾಳ್ವೆನ
ದೆಂತೀಕ್ಷಿಪೆನೆಂತು ಪೋಪೆನೆಂತಾನಿರ್ಪೆಂ

ಭಾವಿಸಿ ಭವನಂ ಕುಸುಮಾ
ಸ್ತ್ರಾವಳಿಯಿಂದೆಚ್ಚು ಗೆಲ್ವೆಯೆಂದಿರ್ದೆನಿದಿಂ
ತೋವೊ ನಿಟಿಲಾಗ್ನಿಯಿಂದಂ
ಬೇವುದನಾನೆತ್ತ ಬಲ್ಲೆನಲರ್ವಿಲ್ಲರಸಾ

ಲಾವಣ್ಯಂ ಲಯಮಾಯ್ತು ವಿಭ್ರಮವಿಳಾಸಂ ಮಾಯಮಾಯ್ತುಕ್ಕಟಾ
ಜೀವಂ ಬೆಂದುದು ಚೆಲ್ವು ಸತ್ತುದು ಸುಖಂ ಹಾಳಾಯ್ತು ಕಂದರ್ಪ ಸದ್
ಭಾವಂ ಭಸ್ಮಮದಾಯ್ತು ಮೆಯ್ಮೆ ಮಡಿಯಿತ್ತುತ್ಸಾಹವಿಂಗಿತ್ತದಿ
ನ್ನೇವೇಳ್ವೆಂ ನಡೆದೆತ್ತ ಸಾರ್ವೆನಿಳೆಗಿನ್ನೇನಪ್ಪೆನಂತಿರ್ಪೆನೋ

ಎಲ್ಲಿತ್ತೊ ಶಶಿಯ ಬೆಳ್ಗೊಡೆ
ಎಲ್ಲಿತ್ತೋ ಪೂತ ನೂತ್ನ ಚೂತಗಜಂ ತಾ
ನೆಲ್ಲಿತ್ತೊ ಪಂಚಬಾಣಮ
ದೆಲ್ಲಿತ್ತೋ ಕುಸುಮಚಾಪವಿಭ್ರಮಮೀಗಳ್

ಕೇಳಿಲೆ ಮನ್ಮಥ ಹಂಸೆಯ
ತೂಳದ ತಳ್ಪಂ ಕಠಿನಮೆಂದೀಗಳ್
ಭಾಳಾಕ್ಷಿಯರಮನೆಯೊಳಾ
ಭೀಳದ ದಳ್ಳುರಿಯ ಮಂಚದೊಳ್ ಪವಡಿಸಿದಯ್

ಹಾ ಮದನ ಹಾ ಮನೋಹರ
ಹಾ ಮಕರಪತಾಕ ಹಾ ಮಹಾವಿಭ್ರಮ ಹಾ
ಹಾ ಮನ್ಮಥ ಹಾ ಸಮ್ಮದ
ಹಾ ಮತ್ಪ್ರಾಣೇಶ ಹಾ ವಿಳಾಸ ವಿನೋದಾ

ಪಸಿವಱಿಯದೆ ತೃಷೆಯಱಿಯದೆ
ದೆಸೆಯಱಿಯದೆ ಮದನ ಮದನ ಪಲವುಂ ಕಾಲಂ
ಕುಸುಮದ ಲಿಂಗಮನೊಸೆದ
ರ್ಚಿಸಿದ ಫಲಂ ಕಿರ್ಚಿನೊಳಗೆ ಬೇವಂತಾಯ್ತೇ

ಸುರತಶ್ರಾಂತಿಯೊಳೀಷತ್
ಪರಿಸುಪ್ತಿಯನೆಯ್ದಿ ಸುಖದೊಳಾನಿರೆ ನೀಂ ಮೆಯ್
ಗರೆದೆನ್ನನಂದು ನೋಯಿಪ
ಪರಿ ತಾಂ ದಿಟಮಾದುದಿಂದು ಮನ್ಮಥಭೂಪಾ

ಬೆಳಗಾಯ್ತುತ್ಪ್ರವಡಿಸು ಬೆಳ
ಬೆಳಗುವ ಮಣಿಮುಕುರಮಂ ನಿರೀಕ್ಷಿಸು ಹಂಸಾ
ವಳಿಯುಂ ನಡೆಪಾಡಿಸು ಕೋ
ಕಿಳನಾದಮನಾಲಿಸುಸಿರದಿರ್ಪರೆ ಮದನಾ

ಎಂದುಂ ಮುಳಿದೊಡೆ ತಿಳಿವಂ
ಮುಂದಿಟ್ಟಲ್ಲದೆ ಮದೀಶ ಮುಳಿಸಿಲ್ಲಿಲ್ಲೀ
ಯಂದಂ ಪೊಸತಿಂದಿನ ಮುಳಿ
ಸೆಂದಿನ ಮುಳಿಸಿನವೊಲಲ್ತು ಮದನನೃಪಾಲಾ

ಪನ್ನಗ ಭೂಷನ ವಿಷಸಂ
ಪನ್ನನ ನಿಷ್ಠುರಗುಣಗಳುರಿಪುವುದುಚಿತಂ
ನಿನ್ನಂ ನಿನ್ನೀ ಸದ್ಗುಣ
ಮೆನ್ನಂ ನೆರೆದುರಿಪಲೇಕೆ ಮನ್ಮಥರಾಜಾ

ವಟುವೇಷದ ಶಿವನೊಡನೆ ಪಾರ್ವತಿ

ಇಂದುಗೆ ಮೇಘಂ ಕವಿದೊಡ
ಮಂದೀ ಲೋಕಕ್ಕೆ ತಣ್ಪು ತಪ್ಪದ ತೆಱದಿಂ
ದಿಂದುಧರಂ ವರವಟುವೇ-
ಷಂದಳೆದೊಡನಗಜೆಗಾದುದತಿ ಹರ್ಷಮುಖಂ

ವ|| ಅಂತು ಹರ್ಷವನಿಮಿತ್ತಮೇಕಾದಪುದೆಂದು ನಿಮಿತ್ತಮನಱಿಯದೆ ಬೆಱಗಾಗಿ ನೋಡುತಿರ್ಪಲ್ಲಿ

ಗಿರಿಸುತೆಯ ಮಧುರದೃಷ್ಟಿಗ
ಳುರವಣೆಯಿಂ ತಾಗೆ ತನ್ನನಾಗಳ್ ವಿಪ್ರಂ
ಕರಗಿ ನಿಲಲಾರದೆಳ್ದಂ
ತುರುಪುಳಕಮನಂತುಮಿಂತು ಸಂತಮಿಡುತ್ತುಂ

ನೆಗೆವ ಜಡೆಮುಡಿಯ ನೊತ್ತು
ತ್ತೊಗೆವ ಭುಜಾಳಿಯನಡಂಗಿ ಸುತ್ತೂರುಗಳಿಂ
ಮಿಗುವ ವೃಷೇಂದ್ರನನೌಂಕು
ತ್ತಗಲದೆ ನಿಜಮೂರ್ತಿಯೊಳಗೆ ಗಜಬಜಿಸುತ್ತುಂ

ಎಂತಾನುಂ ನಿಜರೂಪಂ
ಸಂತವಿಡುತ್ತಲ್ಲಿ ವಿಪ್ರನತಿಧೈರ್ಯತೆಯಂ
ಮುಂತಿಟ್ಟು ಗಿರಿಜೆಯೊಡನುಸಿ-
ರ್ದಂ ತಡಬಡಿಸುತ್ತೆ ಮಿಸುವ ಪೊಸಪುಸಿವಾತಂ

ಈ ಸುಕುಮಾರತೆಯಿಾ ನಿಲ
ವೀ ಸುಕರತೆಯಿಾ ನವೀನಯೌವನಮುದವೀ
ಭಾಸುರತೆಯಿಾ ಸುಧಾಮಯ
ವೀ ಸುಖದೊಳ್ ತಪಮಿದೆಂತು ಬಂದುದು ಮುಗ್ಧೇ

ನಿನಗೇಕೀ ತರುಣತೆಯೊಳ್
ಘನತಪವೆಡೆಗೊಂಡುದಕಟ ನವಲತೆಯಂ ಸೂ
ರ್ಯನ ಬಿಸಿಲಿಂ ಕೊರಗಿಪ ದು
ಷ್ಟನನೆನಗಱಿಪಬಲೆ ಸೌಕುಮಾರ್ಯಾವರಣೇ

ಎಳೆಗೆಂಪನುಗುಳ್ವ ಮೃದಕೋ
ಮಳಪದಕಮಳಂಗಳೀಗಳತಿಕಠಿನಮೆನಿ
ಪ್ಪಿಳೆಯೊಳ್ ಹರಹರ ಕಲ್ನೆಲ
ಕಳವಟ್ಟುವಿವೆಂತು ಬಾಲಹಂಸೀಯಾನೇ

ಎಳೆವೆಳ್ದಿಂಗಳ ಸೋಂಕಿಂ
ಗಳವಡದಳ್ಕುವ ಶಿರೀಷ ಸುಕುಮಾರಾಂಗಂ

ಬಳವತ್ ಕರ್ಕಶತರದಿಂ
ಬಳಸಿದಿರ್ದ ನಾರಸೀರೆಗೊಂತುದು ಚಿತ್ರಂ

ಎಳಲತೆಯಂ ಜೋಡಾಡುವ
ನಳಿತೋಳ್ ಕೋಕಂಗಳಂ ವಿಭಾಗಿಪ ಕುಚಮಂ
ಡಳವುಸಿರಲುಪವನ ಪಥದ
ತುಳಮಧ್ಯಂ ತಪದ ಕೋಟಲೆಗೆ ಸಂಗಡವೇ

ಮಿಸುಗುವ ಶಶಿವದನಂ ಕಡು
ಬಿಸಿಲಿಂ ಕೊರಗಿತ್ತು ಕುಸುಮಮಾಳಿಕೆಯಿಂ ರಾ
ಜಿಸುವ ಕಚಭಾರಮಯ್ಯೋ
ಪೊಸಜಡೆಯಂ ಪಡೆದುದಕಟ ಘನಯೌವನದೊಳ್

ಬಿಸಿಲೆನ್ನದೆ ಮಳೆಯೆನ್ನದೆ
ಶಿಶಿರಮಿದೆನ್ನದೆ ತೃಷೋಷ್ಣತಿ ಕ್ಷುಧೆ ನಿದ್ರಾ
ವಿಸರಮುಮಂ ನೆಱೆ ಗೆಲ್ದೀ
ವಸುಮತಿ ಬೆಱಗಾಗೆ ತಪದೊಳಿರ್ಪವರುಂಟೇ

ವನಜಾನನೆ ಏಱುಂಜ
ವ್ವನದೊಳ್ ವನದೊಳ್ ನಿರೋಧದೊಳ್ ಪೇಳಿಂತಾ
ವನನುದ್ದೇಶಿಸಿ ತಪಮಿದ
ನೆನಗಱುಪಿದೊಡೇನೊ ದೋಷಮೇ ಮೃಗನಯನೇ

ವ || ಎಂದು ಪ್ರೇಮ ಜನಪ್ರಣಯ ಕಲಹಲೀಲಾಲೋಲಚಿತ್ತನಪ್ಪ ವಿರೂಪಾಕ್ಷಂ ಪರಮವಟುವೇಷದಿಂ ನುಡಿದ ಮೃದುಕಠಿನಾಕ್ಷೇಪಗರ್ಭಿತವಚೋವಿಳಾಸಮಂ ಶೈಳಜೆ ಕೇಳ್ದು ಚಿಂತೆಯಂ ತಾಳ್ದು

ಬೆಸಗೊಂಡಪನಮಳದ್ವಿಜ
ನುಸಿರಲ್ ತಾಂ ಬಾರದುಸಿರದಿರಬಾರದೆನು
ತ್ತಸದೃಶತಪಮಂ ಮನದು
ಬ್ಬಸದಿಂದೆ ಭವಾನಿ ಮಾನಿ ಮೆಲ್ಲನೆ ನುಡಿದಳ್

ಬಗೆವೆರ್ಚಿ ಕೇಳುತಿರ್ದಪೆ
ಮಿಗೆ ಪೇಳ್ದಪೆನಲೆಲೆ ಧೂರ್ತವಿಪ್ರನೆ ಕೇಳ್ ಶಂ
ಭುಗೆ ಕಾರುಣ್ಯಾಬ್ಧಿಗೆ ಶೂ
ಲಿಗೆ ಕರುಣಂ ಪುಟ್ಟುವಂತೆ ತಪದಿಂದಿರ್ಪೆಂ

ಎನುತಮಂ ಗದ್ಗದಿಸುತೆ ಪುಳ
ಕನಿಕಾಯಮನಾನುತಶ್ರುವಂ ಕಳೆಯುತ್ತುಂ
ಘನಹರ್ಷಚಿತ್ತೆಯಾಗು
ತ್ತೆ ನಗೇಶ್ವರಪುತ್ರಿ ಶಂಕರನ ಪೆಸರ್ಗೊಂಡಳ್

ವ || ಎಂದು ವಿರೂಪಾಕ್ಷಂಗೆ ತಪಮಿರ್ದಪೆನೆಂಬ ನುಡಿಯಂ ಕೇಳ್ದು ದುಷ್ಟ ಧರಾಮರನಟ್ಟಹಾಸದಿಂದಿಂತೆಂದಂ

ಅಕ್ಕಕ್ಕ ಕಾಮಹರನೊಳ್
ಮುಕ್ಕಣ್ಣನೊಳಖಿಳವೇದಶಾಸ್ತ್ರಕ್ರಮಮಂ
ಮಿಕ್ಕವನೊಳ್ ಪಿತೃವನದೊಳ್
ಪೊಕ್ಕವನೊಳದೆಂತು ಚಿತ್ತವಿಟ್ಟೆ ಲತಾಂಗೀ

ಉತ್ಪಲ

ಭೀಕರವಪ್ಪ ಶೂಲಿಯಭಿಲಾಷೆಯೊಳೀ ತಪವಾತನೇಕೆ ನೀ
ನೇಕೆ ಕೃಪಾಣವೇಕೆ ಲತೆಯೇಕೆ ಲಸತ್ಕರಿಯೇಕೆ ರಂಭೆ ತಾ
ನೇಕೆ ಕೃಶಾನುವೇಕೆ ಪೊಸ ಪೂವಿನ ಮಾಲೆಯದೇಕೆ ಭಾನುವೇ
ಕಾ ಕುಮುದಂ ದಲೇಕೆ ಸಿಡಿಲೇಕೆ ಮರಾಳನದೇಕೆ ಲೋಕದೊಳ್

ನೀನಿನಿಯಳ್ ವಿಷಮಾತಂ
ನೀನತಿಮೃದು ಕಠಿಣಗುಣಗಣಾಶ್ರಯನಾತಂ
ನೀನಬಲೆಯುಗ್ರನಾತಂ
ನೀನುರುತರ ಭೀರು ಸರ್ಪಭೂಷಣನಾತಂ

ಪುಲಿದೊವಲುಡಃಗೆಯ ಹಾವಿನ
ನೆಲೆದೊಡಿಗೆಯ ನೊಸಲ ಕಣ್ಣ ಖಟ್ವಾಂಗದ ಪಂ
ದಲೆಗಳ ಮಾಲೆಯ ಶೂಲದ
ಕಲಿಗಂಜದೆ ಮನವನೆಂತು ಮಾಡಿದೆ ಮುಗ್ಧೇ

ವ || ಎಂದು ವಿಪ್ರಂ ನುಡಿದ ಶಿವನಿಂದೆಗೆ ಭವಾನಿ ಮುನಿದು ಕನಲ್ದು ಕಿನಿಸಿ ಕಿಡಿಕಿಡಿವೋಗಿ

ತಪವಂತದಿರ್ಕೆ ಮಾಡುವ
ಜಪವಿರ್ಕೆ ಮೃಗಾಂಕ ಮೌಳಿಯಂ ಭರದಿಂ ಧ್ಯಾ
ನಿಪುದಿರ್ಕೆ ಶಂಭುವಂ ನಿಂ
ದಿಪುದಂ ಕೇಳ್ದೊಂದು ಪಾಪಮಿಂದೆನಗಾಯ್ತೇ

ಘೋರತಪದಲ್ಲಿ ಕೋಪಿಸೆ
ಬಾರದು ತಾಂ ತಪದ ಕೇಡು ಪತಿನಿಂದೆಯುಮಂ
ಸೈರಿಸಬಾರದೆಸುತ್ತೆ ವಿ
ಚಾರಮನುಳಿದಗಜೆ ಮನದ ಮುಳಿಸಿಂದಾಗಳ್

ಆದ ನಿರೋಧದ ನಿಂದೆಯ
ನಾದರಿಸದೆ ಭಸಿತದಿಂದೆ ವಿಪ್ರನನಿಡೆ ಪೋ
ಪೋದುದು ವಟುವೇಷಂ ಶಿವ
ನಾದೊಡದೇಂ ಪುಸಿ ದಿಟಕ್ಕೆ ನಿಲ್ವುದೆ ಜಗದೊಳ್

ಮುಗಿಲ ತೆಱೆ ಸರಿದ ಶಶಿಯಂ
ತೊಗೆದ ತಮಂ ತಿಗೆದ ತರುಣ ತರುಣಿಯ ತೆಱದಿಂ
ಪೊಗೆ ತಳ್ಗಿದಗ್ನಿಯಂತಿರೆ
ಮಿಗೆ ವೇಷಂ ತೊಲಗಿ ಶಂಭು ತೊಳಗುತ್ತಿರ್ದಂ

ಜಡೆಮುಡಿ ಪಂಚಮುಖಂ ನೆಗೆ
ದುಡುಪತಿಕಳೆ ದಶಭುಜಂ ತ್ರಿಣೇತ್ರಂ ಗಾತ್ರಂ
ಬಿಡಿದ ನವಭೂತಿ ಪುಲಿದೊವ
ಲುಡಿಗೆಗಳಿಂ ಶಂಕರಂ ಕರಂ ಮೆಱೆದಿರ್ದಂ

ಸರಿದುದು ಪುಸಿವೇಷದ ತೆಱೆ
ಸುರಿದುದು ಕೆಯ್ಸಾರ ತೆಱದೆ ಪೂವಳೆ ಸರಿಸಂ
ಬರಿದುದು ಜೇರಿಗೆ ಬೆಲ್ಲದ
ಪರಿಯಿಂ ಮುಳಿದಿಟ್ಟ ಭಸಿತಮದೆ ಮದುವೆಯವೋಲ್

ನೇಮಿಚಂದ್ರನ ಲೀಲಾವತಿ

ಹೇಮಂತವರ್ಣನೆ

ನೀಳಲ ಕಂಪನೊಟ್ಟಿ ನಳಿನಂಗಳನಳ್ಕಿಸಿ ಬೆಳ್ಮುಗಿಲ್ಗಳಂ
ತೂಳಮನೆತ್ತುವಂತೆಬೆದು ಸೋಗೆಯ ಸೀಲಿಯ ಬೇಱನೆತ್ತಿ ಹಂ
ಸಾಳಿಯ ತುಪ್ಪುೞಂ ತುೞಿದು ಪಶ್ಚಿಮದಿಂ ಬಡವಾಗಿ ಬರ್ಪ ಮೆ
ಲ್ಲಾಗಳಿಯನೊತ್ತಿ ತೀಡಿದುದು ಮೂಡಣ ಗಾಳಿ ಹಿಮಪ್ರವೇಶದೊಳ್

ಇಂದಾರಂ ಕುಳಿರ್ದಪ್ಪುದಿಂದು ಪಗಲುಂ ಮೆಯ್ಯೋಡಿತಿಂದೊಳ್ಪಿಸಿಲ್
ನಾಂದಂತಿರ್ದಪುದಿಂದು ಪಾಲ ಬಸಿಱುಂ ಬಂದಂತಿರಿಂದಿಂತು ನೀರ್
ಪೊಂದಿತ್ತಿಂದಱಜಾವಮಾಯ್ತು ಮುಗಿದಲ್ತಿಲ್ಲುತ್ಪಳಂ ಪಂಕಜಂ
ಕುಂದಿತ್ತಿಂದೆಲೆ ಪೊಕ್ಕುದಕ್ಕುಮಿಳೆಯೊಳ್ ಹೇಮಂತಮೇಮಂತಣಂ

ಒಂದೆ ಕುಂದಮಲರ್ದತ್ತು ಗಾಳಿಗೊ
ಲ್ದೊಂದಿತೊಂದೆ ಗುಣಮಧ್ವಗ ವ್ರಜ
ಕ್ಕೊಂದೆ ಮಗ್ಗುಲಮರ್ದತ್ತು ಪೊತ್ತಡ
ರ್ದೊಂದೆ ಬೆಳ್ಳಿ ಬೆಳಗಿತ್ತು ಮಾಗಿಯೊಳ್

ಮುಗಿಯೆ ಕರದ ಕಂಜಂ ವಾಜಿಗಳ್ ಸುರ್ಕೆ ಸೂತಂ
ಸುಗಿದು ಪೆಱವನಾದಂತೈಕಿಲಿಂ ಪೆರ್ಸರಂಗಳ್
ತೆಗೆಯೆ ರಥದ ಕೀಲಂ ಕಿತ್ತು ಪೊತ್ತಿಕ್ಕೆ ಕಣ್ಣೊಳ್
ಪುಗೆ ಪೊಗೆ ರವಿ ಸಾರ್ತಂದೂದುಮಂ ಪೋಪ ಕಿಚ್ಚಂ

ಮಾಸಱಮೆಸೆ ಪಾರದದಿಂ
ಪೂಸಿದವೋಲ್ ಪೊನ್ನ ಮುಕುರಮಂ ಹಿಮಲಿಪ್ತಂ
ನೇಸಱ ಬಿಂಬಂ ತಿಂಗಳ
ಕೂಸಿನವೊಲ್ ಕೋಡುತಿರ್ದುದಂದಿನ ದಿನದೊಳ್

ಚಳಿಗಳ್ಕಿ ಕಱಿಯ ಪೊಸಕಂ
ಬಳಿಯಂ ಮುಸುಕಿದವೊಲಗ್ನಿಯುಮುಪಗತತಾರ್ಣಾ
ನಳರಾಶಿಯೆಸೆದುವಂತ
ಜ್ವಾಳದುಲ್ಮುಕಮೊಟ್ಟೆ ಪೋಗೆ ಪಥಿಕರ್ ಪಥದೊಳ್

ತಡಿವಿಡಿದು ನಡೆದು ಮೆಲ್ಲಗೆ
ತಡಾಗಜಳದೊಳಗೆ ಪೊಳೆವ ನಿಜಚಂಚುಗಳಂ
ಮಿಡುಕುವ ಮೀನ್ಗೆತ್ತೊಡರಿಸಿ
ತುಡುಕಿದುವಡಿಗಡಿಗೆ ಬಾಳಖಗಸಂತತಿಗಳ್

ಸಂದುವ ಪುಲ್ಲ ಕಿಚ್ಚಿಸೊಳೆ ಕಪ್ಪಡಮಂ ಪರಿದಿಕ್ಕಿ ಪಾಂಥನುಃ
ಪೆಂದಿರದೂದೆ ಪೊಣ್ಮೆ ಪೊಗೆ ಕಣ್ಗೊಳಗಂ ಪುಗೆ ಬಾಷ್ಪ ಬಿಂದು ಬೀ
ೞ್ತಂದು ತದಗ್ನಿಯಂ ಸದಿಪಿದತ್ತಕಟಾತನ ಬೆನ್ನ ಕಪ್ಪಡಂ
ಬೆಂದುದು ಬಂದುದಾಗಳೆ ಹಿಮಾನಿಳನಿಂತುಟು ಪಾಂಥರುಬ್ಬಸಂ

ಪೊಸಪುಲ್ಲೊಳ್ ಕಿಚ್ಚನಿಟ್ಟೂದಿದೊಡುರಿದುರಿ ಕೂರ್ಚಾಗ್ರಮಂ ಪತ್ತೆ ಕೆಯ್ಯಂ
ಪೊಸೆದುಂ ವಸ್ತ್ರಾಗ್ರದಿಂ ಮೋದಿಯುಮುಗುಳ್ವಪೆಯಿಂ ನಾಂದಿಯುಂ
ಮೊಕ್ಕಳಂ ನಂ
ದಿಸಲೆಂತುಂ ಪಾಂಥನಂದಾಱದೆ ನಡುಮಡುವಂ ಪೋಗಿ ಬಿರ್ದೈಕಿಲಿಂ ಕಂ
ಪಿಸುತಿರ್ದಂ ಪುಲ್ಲಕಿರ್ಚುಂ ಪೊಲೆಯನ ಕೆಳೆಯುಂ ಮಾಡದಾವಂಗೆ ಕೇಡಂ

ತಳಿರೊಳ್ ಮುಚ್ಚಿಟ್ಟು ಕೂಸಂ ಶಬರಿ ತೆಗೆದು ನಿಶ್ಚೇಷ್ಟವಾಗಿರ್ದೊಡಂ ಕ
ಣ್ಗಳ ನೀರಂ ತೀವಿ ಬೇಗಂ ತೊಡೆದು ಹಿಮಕಣಾನೀಕಮಂ ತೇಂಕುದಾಣಂ
ಗಳನಂಟಂಟೆಲ್ಲಿಯುಂ ಕಾಣದೆ ಹರಣಮನತ್ಯುಷ್ಣದಿಂ ಸುಯ್ಯೆ ಸುಯ್ಯಿಂ
ದೆಳಗೂಸೆಚ್ಚತ್ತು ಕಾವ್ಕಾವೆನೆ ತೊಱೆದ ಕುಚಾಗ್ರಗಳಂ ಸೀಡುತಿರ್ದಳ್

ವಸಂತವರ್ಣನೆ

ಉಗುೞೆ ಮದಾಳಿ ನೆಯ್ದಿಲ ಮಧುದ್ರವಮಂ ವನದೊಳ್ ಪಿಕಂ ಸರಂ
ದೆಗೆಯೆ ಸರಂಗಳಂ ಶಿಶಿರಮಂ ಬಿಸಿಲಾಯ್ದು ಕುಱಿಂಕೆ ಮೆಲ್ಲನ
ಲ್ಲುಗೆ ಕಟಿವಂದ ಕುಂದದಲರ್ಗಳ್ ಗಿಳಿ ತತ್ತಿಯನಿಕ್ಕಿ ಪಕ್ಕಮಂ
ನೆಗೆದೆಲೆದೊಂಗಲೊಳ್ ತೊಡೆಯೆ ತೀಡಿದುದೊಯ್ಯನೆ ದಕ್ಷಿಣಾನಿಳಂ

ಕೊನರನೆ ಸಾರ್ದ ಕೋಗಿಲೆಯ ಸತ್ತಸರಂ ಪೊಸತಾಗಿ ಪುಟ್ಟಿತೆಂ
ಬಿನಿತೆ ಜನಂಗಳೊಳ್ ಕೊನರ್ವ ಕನ್ನಡವಕ್ಕಿಯನಾದ ಮೆತ್ತರು
ದ್ರನ ಮುಸಿಸಿಂದೆ ಬೆಂದತನುವುಂ ಮಱುವುಟ್ಟಿಗನಾದನಂದು ಮಾ
ವಿನ ಕಳಿಕಾರಸಂ ನವಸುಧಾರಸಮಲ್ಲವೆ ಚೈತ್ರಮಾಸದೊಳ್

ಕಲಿಕೆ ಕವಲ್ತು ಮೂಡಿದುದು ಮಾಮರದೊಳ್ ಬನದೊಳ್ ಪೊರಳ್ದು ಸಾ
ಯಲೆ ಪೊಲಗಟ್ಟಿ ಪೊಕ್ಕುದು ವಿಯೋಗಿಮೃಗಾವಳಿ ಕೊಲ್ವುದೆಂದು ಮು
ನ್ನುಲಿಯದೆ ಕೊಂಬುಗೊಂಡುಲಿದ ಕೋಗಿಲೆ ಕರ್ಬಿನ ಬಿಲ್ಗೆ ಕೂರ್ತು ಕ
ರ್ಬಿಳನನೆಗೊಬ್ಬಿಸಿಂ ಕರೆವವೊಲ್ ಕರೆದತ್ತು ವಸಂತಮಾಸದೊಳ್

ಚಂಚು ವಿಘಾತಜಾತ ವಿಳಸದ್ವಿವರಂ ಸಹಕಾರಕೋರಕಂ
ಬಂಚದ ಭಂಗಿಯೊಳ್ ಬೆರಸೆ ಸೂಸೆ ರಸಂ ಮೊಗಮಿಟ್ಟು ರಾಗದಿಂ
ಪಂಚಮುಂದಿಂಚರಂ ನಿಮಿರೆ ಪಂಚಸರಂ ಭಯದಿಂದೆ ಕೇಳ್ದು ರೋ
ಮಾಂಚಮನಾಂತು ಮೆಚ್ಚುತಿರೆ ಕೇಳಿಸಿದಂ ಕಳಕಂಠವಾಂಶಿಕಂ

ತಳಿರಂ ತಾಳ್ದಿ ಬಬಲ್ದು ಪೊತ್ತು ನನೆಯಂ ಪೂಗೊಂಚಲಂ ಪೇಱಿ ಬ
ಳ್ವಳನಲ್ಲಾಡುವ ಭೃಂಗಕೋಕಿಳಶುಕವ್ರಾತಂಗಳಿಂ ಬಬ್ಬುವೀ
ಸೆಳೆಗೊಂಬುಂ ಕೊನೆಗೊಂಬುಮೆಂತು ಫಳಭಾರಕ್ಕಾರ್ಪುವೆಂದಾಂತವೋ
ಲೆಳಮಾವಂ ಮಳಯಾನಿಳಂ ಬಳಸಿಕೊಂಡಿರ್ದತ್ತು ಚೈತ್ರಾದಿಯೊಳ್

ಗಿಳಿ ತಳಿರಂ ಮುದಂ ಮಗುೞ್ದು ಕೋಗಿಲೆ ಕೋರಕಮಂ ಮದಾಳಿ ಪೂ
ಗಳನರೆಗರ್ಚಿ ಪಾಱಿದುವು ನೂತನಮುಂ ನವವಸ್ತು ಜಾತಮುಂ
ಬಳಿದೊಲವಿಂದವೋಲಗಿಸಿ ಬಂದ ಬಸಂತದ ಸೊಂಪನಟ್ಟಿಯಿಂ
ತಳೆದಱಿಪಲ್ಕೆ ಪೋಪ ವನಪಾಲಕರಂತೆ ಮನೋಜ ರಾಜನಾ

ಮೀಂಗಳ್ ಮಿಗೆ ಮೋಕ್ಷಸ್ನಾ
ನಂಗುಡುವವೊಲೊಡನೆ ಮುೞಿಗೆ ತಾನುಗುೞ್ದಂದು ಮುಂ
ನುಂಗಿದ ದಿನಕರನಂ ಮಿಗೆ
ಪಿಂಗುತ್ತುಂ ರಾತ್ರಿರಾಹು ಶಿಶಿರಾತ್ಯಯದೊಳ್

ಭರವಸದೆ ಕವಿವ ಖರಕರ
ಕಿರಣಂಗಳ್ಗಳ್ಕಿ ಪುಲ್ಗಳಂ ಕರ್ಚಿದವೋ
ಲರುಣಿತತುಪಾರಜಳಶೀ
ಕರಮೆನೆ ಪಸಿಪುಲ್ಲ ಪನಿಗಳಲುಗಿದುವೆಲರಿಂ

ಪಿರಿದುಮನಂಗನಾವ ಸಿರಿ ಕಮ್ಮನೆ ಕೂರ್ಗಣೆ ಮಾಡೆ ನಲ್ಲರಂ
ಬಿರಿಯಿಗಳಂ ಮನಂ ಬಿರಿಯೆ ತಾಗಿ ಕರಂಬಿಗಿವಂತೆ ಬೇಗದಿಂ
ಬಿರಿಯಿಯ ಚಿತ್ತಮಂ ಪಿರಿದು ನುಂಗಲೆ ಬಾಯ್ದೆಱೆವಂದದಿನೇಂ
ಬಿರಿದುವೊ ತೋರಮಲ್ಲಿಗೆಗಳಬ್ಬರಮಾಗಿ ಬಸಂತಮಾಸದೊಳ್

ನೇಮಿಚಂದ್ರನ ಅರ್ಧನೇಮಿ ಪುರಾಣ

ಮಳೆಗಾಲದ ವರ್ಣನೆ

ನೀರಂ ನೀರಂಧ್ರಮೇಘಂ ಸುರಿಯೆ ಮೊರೆಯೆ ಭೀಮಾರುತಂ ಮಾರುತಂ ಕೊ
ಳ್ಗಾರಂ ಗಾರಂಬೊಲಾಯ್ತೆಂದಗಿಯೆ ಪಥಿಕರುಚ್ಚಾತಕಂ ಚಾತಕಂ ಕಾ
ಸಾರಾಸಾರಾರ್ಥಿ ಗೋಲಂಗುಡಿಯೆ ಸಲಿವನೋಜಂಬುವಂ ಜಂಬುವಂ ಸೋ
ತ್ಕೀರಂ ಕೀರಂ ಕದುರ್ಂಕುತ್ತಿರೆ ಕೆರಳಿಸಿದತ್ತೋವಿಕಾರಂ ವಿಕಾರಂ

ಎಳಮಿಂಚಂ ತಳೆಯಿಕ್ಕಿ ಚಾದಗೆಗಳಂ ಬಿಟ್ಟೋಡಿ ಬಲ್ಗಿಚ್ಚಲಿ
ಟ್ಟಳಿನೀಳಾಂಬುದದಿಂ ಬೞಲ್ದ ಗಗನಶ್ರೀ ಧೇನುವಂ ಕೋಮಳಾ
ಮಳದೀರ್ಘಾಮೃತಧಾರೆಗಳ್ಸುರಿಯೆ ಭೋರ್ಭೋರೆಂಬಿನಂ ಶಕ್ರಚಾ
ಪಳತಾದಾಮಕದಿಂದೆ ಕಟ್ಟಿ ಕಱೆದಂ ಕಾರೆಂಬ ಗೋಪಾಳಕಂ

ಕಳಕೇಕಾರುತಿ ಪೋಲೆ ವೇಣುರುತಿಯಂ ಬೀಸುತೆ ಮಿಂಚೆಂಬ ಗೋ
ವಳಗೋಲಂ ಪೊಡೆಸೆಂಡುವೊಯ್ದು ಸಿಡಿಲಂ ಗೀರ್ವಾಣಬಾಣಾಸನ
ಚ್ಛಳದಿಂ ಕತ್ತರಿವೀಲಿಯೊಂದು ಪಣೆಕಟ್ಟಂ ಕಟ್ಟಿಕೊಂಡಭ್ರಕಂ-
ಬಳಮಂ ಗೋವನವುಂಕಿ ಬಂದೊದಱಿದಂ ಕಾರೆಂಬ ಗೋಪಾಳಕಂ

ಕಡಲೊಳ್ಪಟ್ಟಿರ್ದವಂ ಪುಟ್ಟಿರದಿರೆ ಬನದೊಳ್ಬಂದು ಸಪ್ತಾರ್ಣವಂ ಮೇ
ಗೊಡೆವಿರ್ದಂತಾಗೆ ಮಿಂಚೆಂಬುರಿ ಮಿಗೆ ನಭಮಾಶಾಮುಖಶ್ರೇಣಿಯಂ
ಗೋ
ಟಿಡುವಂತೋರಂದದಿಂದಂ ಮೊೞಗೆ ಮುಸುಱೆ ಮೇಘೌಘಮುಬ್ಜಾಕ್ಷನಂ ಬ
ಲ್ಸಿಡಿಲಿಂದಿಟ್ಟಾಲಿಕಲ್ಲಿಂದೆೞಗಿ ಕಱೆದುದಾಗೋಕುಲಂ ತೇಂಕುವನ್ನಂ

ಮೊೞಗಿ ಮಿಂಚಿ ಮುಂಚಿ ಕೊಳ್ಳ ಮಡೆಗಳಂಬುರಾಶಿಯೊಳ್
ಕೞಿಯೆ ನೀರನುಂಡು ಮೇಘ ಮೊೞಗಿ ಕಾಱುವಂತುಟಾಯ್ತು

ಪೊಡೆವ ಸಿಡಿಲ್ಗಳನೆಳೆಯೊಳ್
ಕೆಡೆದೇಡೆಂಟಣಂಕು ನೆಗೆದು ನುರ್ಗಪ್ಪಿನೆಗಂ
ಪೊಡೆದಂ ಗೋವಳಿಗೋಲಿಂ
ಪೊಡೆಸಂಡಾಡುವವೊಲೇಂ ಬಲಸ್ಥನೊ ಕೃಷ್ಣಂ

ಕರಗದ ಮುಗಿಲಂ ಪರೆಯದ
ಸುರಧನುವಂ ಮಿಂಚಿ ಕಿಡದ ಮಿಂಚಂ ಪೊಡೆದೋ
ಸರಿಸದ ಸಿಡಿಲಂ ಸವೆಯದ
ಸರಿವಡೆಯುಂ ಕಂಡು ಬೆಗಡುಗೊಂಡರ್ ಗೋವರ್

ಕಂಸವಧೆ

ವ|| ಅಂತು ಕಂಸಂ ಕೃಷ್ಣಂಗೆ ಕಡಿವಂದುದಂ ಕಂಡು ವಸುದೇವಂ ಬಲದೇವಂ ಬೆರಸು ಚಾತುರ್ದಂತಬಲಮಂ ಕೂಡಿಕೊಂಡು ನಿಯುದ್ಧರಂಗದ ಕೆಲದೊಳ್ ಯುದ್ಧಸನ್ನದ್ಧರಾಗಿರ್ದಾಗಳುದ್ಧತನಾಗಿರ್ದ ಕಂಸಂ ಪಡಿಯುಱಂ ಕರೆದು ಕಿವಿಯೊಳ್ ಪರ್ಚುವುದುಮಾತನಂತೆಗೆಯ್ವೆನೆಂದು ಪೋಗಿ ಯಶೋದೆಗೆಂದಂ—ನಿನ್ನ ಮಗನೆಲ್ಲಿಗಾದೊಡಂ ಕಾಳೆಗವೆಂದೊಡೆ ಪೂಣಿಗನಾಗಿ ಪರಿವರಿಯಪ್ಪನ ವ್ಯಸನಮುಂ ವ್ಯಸನಮುಳ್ಳೊಡೆ ಬಂದು ಚಾಣೂರಮಲ್ಲನೊಳ್ ಮಲ್ಲವೋರ್ದು ಪರ್ವಕ್ಕೆ ನೆರೆದರಸುಮಕ್ಕಳ ಕಣ್ಗೆ ಪರ್ವಮಂ ಮಾಡ್ಕೆಂದು ಕಂಸಮಹಾರಾಜಂ ಬೆಸಸಿಯಟ್ಟಿದಂ; ನೀವೆ ತಿವುರುಂ ತಿಳಕವುಂ ಬೆರಸು-ತ್ತೊರಿಸಿಕೊಂಡು ಬರ್ಕೆ ಕೊಳ್ಳಿಮಾತನೆಲ್ಲಿದನೆಂಬುದುಂ ಯಶೋದೆ ಮುಗುಳ್ನಗೆ ನಗುತಿಂತೆಂದಳ್—

ಎನ್ನೆ ಮಗನಾವ ತಿವುರಿಂ
ಮುನ್ನಿಕ್ಕಿದನಣ್ಣ ಶಕಟನಂ ಪೂತನಿಯಂ
ಪನ್ನಗನಂ ಯಮಳಾರ್ಜುನ
ರನ್ನರಕನನವನಿನಧಿಕನೇ ಚಾಣೂರಂ

ವ|| ನಿಜದಿಂ ಕೂರ್ಪುಳ್ಳನುಮಂ ಕತ್ತರಿವಾಣಿಯುಮಂ ಮಸೆಯಲೇಕೆ ಸಿಂಗಮಾನೆಯುಂ ಮುಱಿವಲ್ಲಿಗಾವಭ್ಯಾಸಮಂ ಮಾಡಿದುದು; ಮುರಾಂತಕನುಂ ಅಂತಕನುಂ ಕೊಲ್ವುದನಿನ್ನು ಕಲ್ತಪರೆ ಕೇಳಿಮೆನ್ನ ಮಗಂ ಸೀರೊಳ್ನಾನಂ ಬಿಸಿಲೊಳಬ್ಬಡಂ ಬೆಂಕಿಯೊಳ್ಬೇಯಂ ಜವನ ಕೆಯ್ಯೊಳ್‌ಸಾಯಂ ಏನುಂ ಬೇಡೊಡಗೊಂಡು ಪೋಗಿ ಮೆಂಬಿನಿತರ್ಕೆಯಂಬುಜೋದರಂ ಬಂದಬ್ಬಾ ಪಸಿದೆನೆಂಬುದುಂ ಯಶೋದೆಯಿಂತೆಂದಳ್—

ಸಮೆದೆಂ ಮೊಸಱಂ ಬಾಳ್ಮೊಸ
ಱುಮನಾಂ ಘನವಾಗಿ ತಂದೆಸಿಕ್ಕಿದಪೆಂ ಲಂ
ಜಮನೆನ್ನ ಮಲ್ಲ ಚಾಣೂ
ರಮಲ್ಲನಂ ಮುಱಿದು ಬಂದು ಹಸಿವಂ ಮುಱಿಯಾ

ಉತ್ತಮಸತ್ವದಿಂ ಪಿಡಿದು ಚಾಣೂರನಂ ನೆಲಕಿಕ್ಕಿ ಕೃಷ್ಣನಾ
ಳ್ದೊತ್ತಿದೊಡೊತ್ತಿ ಧಾತ್ರಿ ರಸೆಗರ್ದುದು ರಕ್ಕಸನೊಯ್ದು ಧಾತ್ರಿಯಂ
ಕೆತ್ತಿದನಾತನುಂ ಹರಿಯ ಗೋವನಿಱಿಂಕೆ ತದಂಘ್ರಿಘಾತದಿಂ
ದತ್ತ ಪತಂಗವೊಂದು ಶಕಟಂ ಮುಱಿದಾಶಕಟಂಬೊಲಿರ್ಪಿನಂ

ಓರೊರ್ವರನಕ್ಷಡದಿಂ
ದೂರಂ ಪೊಱಗಿಕ್ಕಿ ಪೋರ್ದು ಪಾದಾಹತಿಯಿಂ
ಭೂರೇಣುವಾಗೆ ಹರಿಚಾ
ಣೂರರ್ಮತ್ತೊಂದು ಮಲ್ಲಗಳನಂ ಸಮೆದರ್

ಬೆದಱಿದ ಬೆಱಗಿಂ ಬೆನ್ನಿ-
ಕ್ಕಿದ ಕೃಷ್ಣಂ ಮೊಗದೆಗೊಂಡು ಮೊಗದೊಳ್ಮೆಯ್ಸಿ
ಕ್ಕಿದ ಚಾಣೂರನನಾರ್ದೆ
ತ್ತಿದನವನಿಯನೆತ್ತುವಂತಿರಾದಿವರಾಹಂ

ಕೆಡೆದವರ್ಪೋರ್ದರ್ ಪೊರಳ್ದರ್ವಿರ್ಗೆ ಪಿಡಿದರಾರ್ದೊತ್ತಿದರ್ಮತ್ತಮೆರ್ದರ್
ನಿಡುಕೆಯ್ಯಂ ಬೇಡಿದರ್ನೀಡಿದರೆಸೆದು ನೆಲಕಿಕ್ಕಿದರ್ಕೊಂಕಿದರ್ಮೇ
ಗಡೆಯೂದರ್ಪತ್ತಿ ಗಾಯಂಗೊಳಲೆ ಮಿಡುಕದಾರಯ್ದರಾರಯ್ದು ಗಾಯ
ಕ್ಕಡೆಗೊಟ್ಟುರ್ಕಿಟ್ಟುಕೊಂಡರ್ಪೊಳೆದು ಬಿಡಿಸಿದರ್ ಕೃಷ್ಣಚಾಣೂರಮಲ್ಲರ್

ಪಿಡಿವಡೆ ಕೃಷ್ಣನ ತೋಳುಂ
ತೊಡೆಯುಂ ದೊಡ್ಡಿದುವಿದೆನ್ನ ಮುಷ್ಟಿಗೆ ಪವಣಿಂ
ದಡಹಡಿಸಿ ನಳಿನನಾಭನ
ನಡುವಂ ಮುಱಿಯಲ್ಕೆ ನೋಡಿದಂ ಚಾಣೂರಂ

ಮರನಂ ಕಿತ್ತು ಮುರಾರಿಯಾಱನೆ ಕಿಱಲ್ಮುಂಗೆಯ್ಯ ರೋಮಂಗಳಂ
ಕರಮಂ ಕೊಟ್ಟೊಡಮಾರ್ತನಿಲ್ಲ ಪಿಡಿಯಲ್ತತ್ಕಾಳಿಯುಗ್ರಾಹಕಂ
ಧರೆಯಂ ಬೆಂಬಲದೊತ್ತಿ ಪತ್ತೆಗಿರಿಯಂ ಮುನ್ನೆತ್ತಿ ಪೊತ್ತಾಮಹೀ
ಧರನಂತಿಂತು ತಳರ್ಚಲಾಱನೆ ಕರಂ ಚಾಣೂರನೇಂ ಶಕ್ತನೋ

ನೆಲನುಂ ಜಲನಿಧಿಯುಂ ಸಲೆ
ತಲೆವತ್ತುವ ತೆಱದಿನಿರ್ದು ಕಡೆಯೊಳ್ ನೆಲನಂ
ಜಲಧಿ ಕಿಡಿಪಂತೆ ಕಿಡಿಸಿದ
ನಲಸದೆ ಚಾಣೂರಮಲ್ಲನಂ ಮುರಮಥನಂ

ವ|| ಮತ್ತೆ ಬಿಡದ ಮಲ್ಲರನಾನೆ ಮೆಟ್ಟಿದುದೆ ಸಂಡೆಂಬಂದಾವೆಡೆಯುಂ ಪಿಡಿದೊಡಂ ಪಿಡಿದೆಡೆಯೆ ಗಾಯವಾಗೆ ಬಳೆಯ ಪೇಜನಾನೆ ಮೆಟ್ಟಿದಂತೆಲುವೆಲ್ಲ ನುರ್ಗುನುರ್ಗಾಗೆ ಮೆಯ್ಯ್ಯ ತೊವಲಾಗೆ ಸಡಿಯಾಡುಗಳಂ ತಿವದವಲ ಬೇರಂಗಳನೀಡಾಡುವಂತೀಡಾಡಿದ ಚಾಣೂರಮಥನನ ಮೇಲೆ ಯಗಸ್ತ್ಯನ ಮೇಲೆ ಕವಿದ ಕಡಲಂತೆ ಕವಿವ ಕಂಸನ ಚಾತುರ್ಬಲಮಂ ಬಲದೇವನುಂ ವಸುದೇವನುಂ ಕಂಡು ತಮ್ಮ ಬಲಮಂ ಕೈವೀಸೆ ಪೆಣಮಯಂ ಮಾಡೆ ನೆತ್ತರುಗಡಲಂ ಪರಿಯಿಸಿ ಕಟ್ಟೇವಮುಂ ಕಡುಮುಳಿಸು ಅಳವಿಗಟಿಯೆ ಸಿಗ್ಗಾಗಿ ಸೈರಿಸಲಾಱದೆ ಅಭಿನವನಾರಸಿಂಹಾಡಂಬರಮಗುರ್ವುಮದ್ಭುತಮು ಮಾಗೆ—

ಮಾಡದ ಕಂಭಮಂ ಮಲಗಿನೊಳ್ಪರಿಪಾಯ್ದು ನೆಲಕ್ಕೆ ಬಾಳನ
ಲ್ಲಾಡೆ ನೆಗಪ್ಪಿಕೊಂಡು ತೊಡೆಗಾನರಸಿಂಹನವುಂಕಿ ಕಂಭದಿಂ
ಮಾಡಿದ ಕಾಳರಕ್ಕಸನಸಿಕ್ಕುವವೋಲ್ ನಖದಿಂ ಕರುಳ್ಗಳಂ
ತೋಡಿ ಪಿಸುಳ್ದು ನೀಬ್ದು ಬಿಸುಟಂ ಕಲಿಕಂಸನನಬ್ಜಲೋಚನಂ

ಕೆಡೆಕೆಡೆಯೆಂದರಮುಗನೊದೆ
ದೆಡಗಾಲೊಳ್ ತೊಡರ್ದು ಕರುಳೊಳೇನಿರ್ದಂ ಕ
ರ್ದಡಿಗಂ ಗೋವಳನಿಕ್ಕಿದ
ತೊಡರೊಳ್ ಮಿಗೆ ಕೋದಿಟಲ್ವ ಪಾಪೆಯ ತೆಱದಿಂ

ಕ್ಷಿತಿಗೊರ್ವನೆ ದುರ್ಜನನೊಂ
ದತಿವೇಗದೆ ಸತ್ತು ಮಾಡುವುಪಕಾರಮನ
ಪ್ರತಿಮರ್ ಸಜ್ಜನರಾಜಂ
ದ್ರತಾರಕಂ ಬರ್ದು ಮಾಡಲೇನಾರ್ತಪರೇ

ರುದ್ರಭಟ್ಟನ ಜಗನ್ನಾಥವಿಜಯ

ಕಂಸನಿಗೆ ಕೃಷ್ಣಭೀತಿ

ವ|| ಅಂತು ಸೂತಿಕಾಸದನಮಂ ಪೊಕ್ಕು ದೇವಕಿಯ ಮುಂದೆ ಪಟ್ಟಿರ್ದ
ಶಿಶುವಿನ ಪಿಂಗಾಲಂ ಪಿಡಿದುಕೊಂಡು ಸಡೆತಂದು

ಅಸುರಂ ಕನ್ನೆಯಸುಯ್ದು ವಧ್ಯಶಿಲೆಯೊಳ್ ಪೊಯ್ವಲ್ಲಿ ಕೈಯಿಂ ಸಿಡಿ
ಲ್ದು ಸಿಡಿಲ್ ಪೋಪವೊಲಂಬರಕ್ಕೆ ನೆಗೆದೆಂದಳ್ ಸಿನ್ನನಾಂ ಕಂಸರಾ
ಕ್ಷಸ ಕೇಳ್ಕೊಲ್ವೊಡೆ ಕಾವರಾರೆಲವೊ ಮಾಣ್ ನಿನ್ನಂ ಕೊಲಲ್ವೇಡಿ ಪು
ಟ್ಟಿ ಸರೋಜೇಕ್ಷಣನತ್ತಲೊಂದೆಡೆಯೊಳಾಯಿರ್ದಪ್ಪಸೆಮ್ಮಗ್ರಜಂ

ವ|| ಎನೆ ಕೇಳ್ದು ತದೀಯಪರುಷ ಭಾಷಿತಂ ತನಗೆ ಕರ್ಣಶೂಲಮಾಗೆ,

ಈ ಕೃತಕಿಯೇಕೆ ಪುಟ್ಟಿದ
ಳೇಕಾರಣದಿಂದೆ ಪಾಱಿ ಪೋದಳ್ ಗಗನ
ಕ್ಕೀಕೆಯದಾವಳೊ ಮೃತ್ಯುವೊ
ಮಾಕಾಳಿಯೊ ಚಂಡಿಯೋ ಮಹಾಭೈರವಿಯೋ

ವ|| ಎಂದನಿಮಿಷದ್ರೋಹನನಿಮಿಷಮಾರ್ಗದೊಳಿರ್ದ ದುರ್ಗಿಯನನಿಮಿಷ
ಸೇತ್ರನುಮುತ್ತಾನಿತಾನನನುಮತ್ಯಂತ ವಿಸ್ಮಯಸ್ವಾಂತನುಮಾಗಿ ಸೀಡುಂ
ಸೋಡುತ್ತುಮಿರೆ,

ವದನಂ ಪೂರ್ಣ ಶಶಾಂಕನಂತೆಸೆಯೆ ಮೇಘಶ್ಯಾಮಳಾಂಗಂ ತ್ರಿಭಂ—
ಗದಿಸಿಂಬಾಗಿರೆ ನೀಲಚೇಲದುಡೆಯುಂ ಮೇಲ್ಕೊಂಡ ಪೊಂಬಟ್ಟೆಯುಂ
ಕದಪಂ ಮೋದುವ ಕುಂಡಲದ್ವಿತಯಮುಂ ಚೆಲ್ವಾಗೆ ತಾನಾಗಳಾ
ಡಿದಳೆಂಟುಂ ನಳಿತೋಳ್ಗಳಂ ಪಸರಿಸುತ್ತುಂ ಕನ್ಯೆ ರೋದೋಂತದೊಳ್

ದನುಜಂ ದುರ್ಗಿಯ ತೇಜದೊಂದು ತೆಱನಂ ಕೈಮಿಕ್ಕು ಪೋದಂದಮಂ
ತನಗೆಂದುಗ್ರದುರುಕ್ತಿಯಂ ನೆಸೆದಿದೇನಾಶ್ಚರ್ಯಮೆಂದಂದು ನೆ

ಟ್ಟನೆ ಚಿಂತಾಗಿರಿ ಮೇಲೆ ಬೀಡೆ ಪಿರಿದುಂ ಬೆಂಬಿಟ್ಟು ಬಂದೆಯ್ದಿ ಪೊ
ಕ್ಕು ನಿಜಾವಾಸಮನಾಪ್ತಮಂತ್ರಿನಿವಹಕ್ಕಿಂತೆಂದನಾಸ್ಥಾನದೊಳ್

ಅಶರೀರಧ್ವನಿಯಂತೆ ನಾರದನ ಪೇಟ್ದಾದೇಶಮಿಂದಾಯ್ತು ವ
ಧ್ಯಶಿಲೋಚ್ಛೃಂಖಲೆಯಾಗಿ ದುರ್ಗೆ ಸುಡಿದಳ್ ಪುಟ್ಟಿರ್ದನೀಗಳ್ ಚತು
ರ್ದಶಲೋಕಪ್ರಭು ವಿಷ್ಣು ನಿನ್ನ ಪಗೆಯೆಂದಾರ್ಗೆಲ್ವರೀಭದ್ಮಬಾ
ಲಿಶನಂ ದೈವವಿಸೂತ್ರಮಂ ಪುರುಷಕಾರಂ ಮೀಱಲೇನಕ್ಕುಮೇ

ಆ ನೆಗಟ್ದಿಂದ್ರನೆಕ್ಕತುಳದೊಳ್ ಧುರದೊಳ್ ಬಲದೊಳ್ ಕಡಂಗಿ ನಿಂ
ದಾನಲೊಡರ್ಚಲಾಂಕೆಗೊಳಲಾಱದೆ ಪೋಗಿ ಗಡಂ ಮುರಾಂತಕಂ
ಗಾನತನಾಗಿ ಪುಯ್ಯಲಿಡೆ ಕೇಳ್ದು ಮದೀಯವಧಾರ್ಥಮಾ ಸುಧಾಂ
ಭೋನಿಧಿತಳ್ಪನಿಂದು ಗಡ ಪುಟ್ಟಿದನಿಲ್ಲಿಗದಾವುದುದ್ಯಮಂ

ವ || ಎಂದು ಸಚಿವರೊಳ್ ಸಮಾಳೋಚನಂಗೆಯ್ದಾಗಳಂತೆ ನಿಜ ವಿವೇಕವನಮಂ ಸ್ವಕೀಯಕೋಪವಹ್ನಿ ಸುಡಲೊಡರ್ಚೆ,

ತೊಡೆವೆಂ ಶಕ್ರನ ನಾಮಮಂ ತುಡುಕಿ ನೀರೊಳ್ ಮೆಟ್ಟುವೆಂ ವಹ್ನಿಯಂ
ಪೊಡೆವೆಂ ಕಾಲನನಿಕ್ಕಿ ಡೊಕ್ಕರಿಸುವೆಂ ದೈತೇಯನಂ ಕಟ್ಟುವೆಂ
ಜಡರಾಶೀಂದ್ರನನೆಯ್ದುವೆಂ ಪವನನಂ ಸರ್ವಸ್ವಮಂ ಕೊಂಡು ಕೂ
ಗಿಡಿಪೆಂ ವಿತ್ತಪನಂ ಪರಾಭವಿಸುವೆಂ ದಕ್ಷಾಧ್ವರಧ್ವಂಸಿಯಂ

ವ || ಎಂದಾಸ್ಫೋಟಿಸಿ ಲೋಕಪಾಲಕರಂ ನೀರ್ದಾಂಟಿಸಿ,

ಅಸುಹೃದ್ದ್ವೇಷಾಂಕುರಮುದ
ಯಿಸಿದತ್ತುಗುರೊಳ್ ಚಿವುಂಟುವೆಂ ಕೊಡಲಿಗೊಳಲ್
ಬಸಮಲ್ಲದು ಬಳೆದೊಡೆ ಬಳೆ
ಯಿಸುವುದು ನೀತಿಯೆ ವಿರೋಧಿಯಂ ವ್ಯಾಧಿಯುಮಂ

ವೇಣುರಾಸಕೇಳಿ

ಕಳೆಯಂ ಪತ್ತಿಸಿ ರಾಗಮಂ ಸುಣ್ಪಂ ಸಣ್ಪುಗೆಯ್ದಿಂಪನಿ
ರ್ಕುಳಿಗೊಂಡೊಟ್ಟಜೆಯಂ ನಿಮಿರ್ಚಿ ನಯಮಂ ತಳ್ಪೊಯ್ದಲಂಕಾರಮಂ
ಕೆಳೆಗೊಂಡಾಣತಿಯಂ ತೆರಳ್ಚಿ ಜತಿಯಂ ಸ್ಥೈತೋಜೆಯಂ ತಾಳ್ದಿ ಗೋ-
ವಳರಾಯಂ ಕೊಟಲೂದಿದಂ ನೆಗಟ್ಟಿನಂ ಮಾಧುರ್ಯತೂರ್ಯಸ್ವನಂ

ರಸಭಾವಂ ಪೆಱಿತೋಜೆ ಬೇಱೆ ಜತಿ ಮತ್ತೊಂದಿಂಪಪೂರ್ವಂ ನಯಂ
ಪೊಸತೆಂಬಂತಿರೆ ನಾಳಿಕೇರರಸಧಾರಾವೃಷ್ಟಿ ಜೇನ್ಸೆಯ್ಯ ಸೋ
ನೆ ಸುಧಾಸಾರವಿದೆತ್ತಣಿಂ ಪಸರಿಸಿತ್ತೆಂಬಂತು ದೈತ್ಯಾರಿ ಬಾ
ಜಿಸಿದಂ ಬಣ್ಣಿಸೆ ವಾಸವಂ ಮಧುರನಾದಾವಾಸವಂ ವಾಸವಂ

ಕಮಳದಳಾಕ್ಷನಾಕೃತಿಯನೀಕ್ಷಿಸಿ ಸಾಸಿರ ಕಣ್ಗಳಂಗದೊಳ್
ಸಮನಿಸಿದೀ ಕ್ರಮಂ ಸಫಲಮಾಯ್ತೆಸಗೀತನದೊಂದು ವೇಣುನಾ
ದಮನೊಸೆದಾಲಿಸಲ್ ಕಿವಿಗಳೇಕೆಯೊ ಸಾಸಿರವಾದುವಿಲ್ಲೆನು—
ತ್ತಮರವರಂ ಮನಂಗೊಳೆ ನೆಗಬ್ದುದು ಕೃಷ್ಣನ ವೇಣುನಿಸ್ವನಂ

ಅಸಕೃದ್ಭ್ರೂಪಲ್ಲವೋಲ್ಲಾಸಿತವೆಸೆಯೆ ಚಳಲ್ಲೋಚನಾರೇಚನಂ ರಂ
ಜಿಸೆ ಮುಕ್ತಾಚ್ಛೋಟಿಕಾಡಂಬರಮಳವಡೆ ಬಾಹಾಲತಾಂದೋಳಮುನ್ಮೀ
ಲಿಸೆ ಕೃಷ್ಣಂ ನೃತ್ಯಮಂ ಸೂತ್ರಿಸುವುದುಮೊಲವಿಂ ಪಾಡುತುಂ ಗೋಪಿಯರ್ನ
ರ್ತಿಸಿದರ್ ಚೈತ್ರಾನಿಳಂ ಸೂತ್ರಿಸೆ ವನಲತೆಗಳ್ ನರ್ತಿಪೊಂದಂದದಿಂದಂ

ಇನಿಸಂ ಕೀಱ್ಮಾಡಿ ಭೃಂಗೀರುತಿಯನಿಟಿಸಿ ಪುಷ್ಪಾಯುಧಜ್ಯಾಲತಾನಿ-
ಸ್ವನಮಂ ವಾಣೀವಿಪಂಚೀರವಮನಲೆದು ಗೇಯಸ್ವನಂ ಪೊಣ್ಮೆ ಗೋವಿಂ
ದನೆ ನಾನಾರೀತಿಯಿಂ ಕತ್ತುರಿಯ ಸೆಳೆಯನಳ್ಕಾಡಿದೊಂದಂದದಿಂ ವಾ-
ಸನೆಯಾದತ್ತೆಂಬಿನಂ ಪಾಡಿದುದೆಸೆಯೆ ನಟದ್ಗೋಪಕಾಂತಾತದಂಬಂ

ತನತನಗೆ ಗೋಪಿಯರ್ ಕೃ
ಷ್ಣನಂಕಮಾಲೆಯನೆ ಪಾಡಿದರ್ ಕೃಷ್ಣಂ ಚಂ
ದ್ರನ ಬೆಳ್ದಿಂಗಳ ತಣ್ಣೆಲ-
ಲ ನೆಯ್ದಿಲೊಪ್ಪಮೆನೆ ಪಾಡಿದಂ ಕಳರವದಿಂ

ವಲಯಾಳೀರವಮಂಘ್ರಿಭೂಷಣರವಂ ಕಾಂಚೀರವಂ ಪೊಣ್ಮೆ ಸು
ಯ್ವೆಲರ್ಗಂಪಣ್ಪಿನ ಕಂಪು ಪೂಮುಡಿಯ ಕಂಪೊಂದೊಂದನೊಟ್ಟೈಸೆ ದೋ
ರ್ವಲನಂ ಭ್ರೂವಲನಂ ಕಟಾಕ್ಷವಲನಂ ಚೆಲ್ವಾಗೆ ಗೋಪಾಂಗನಾ-
ವಲಿಯೊಳ್ ರಂಜಿಸಿದತ್ತು ಕಂಜನಯನಸ್ವಾಂತಕ್ಕಣಂ ಪೆಕ್ಕಣಂ

ಗೀತರಸಪ್ರವಾಹನದಿ ಚಂಚಳನೇತ್ರಮರೀಚಿವೀಚಿ ಸಂ-
ಘಾತಿತಹೃದ್ಯವಾದ್ಯಘನ ಘೋಷಣದೇಳ್ಗೆ ನಿಸರ್ಗವಾದ ಸಂ
ಗೀತರಸಾಬ್ಧಿ ಪೆರ್ಚೆ ಹರಿಲೋಚನಚಂದ್ರಿಕೆಯಿಂ ವಿಧೂದಯ
ಸ್ಫೀತಸುಧಾಬ್ಧಿಯಂತೆ ಪರಿಪೂರ್ಣಿಸುತಿರ್ದುದು ರಾಸಕೇಳಿಯೊಳ್

ನವಯೌವನೆಯರ್ ಲಾವ
ಣ್ಯವತಿಯರಜುದದ್ರಿಧರನ ಮನಮಂ ಕೋಲಾ
ಟವನಾಡಲ್ ಕೆಲರಾಟಂ
ದು ವಿನೋದದೆ ಕನಕದಂಡಮಂ ಪಿಡಿದೆಸೆದರ್

ಯುಗಪತ್ಕೂರ್ಮವಿಧಾನದಿಂ ಯುಗಪದುತ್ತಾನಾಂಗಸಂಸ್ಥಾನದಿಂ
ಯುಗಪದ್ವಿಭ್ರಮವೇಗದಿಂ ಯುಗಪದಭ್ಯಾಯಾತ ಚಾತುರ್ಯದಿಂ
ಯುಗಪದ್ದಂಡಖಣಿಲ್ ಖಣಿಲ್‌ಕ್ವಣಿತದಿಂ ಕೋಲಾಟದೊಳ್ ಕೃಷ್ಣನಂ
ಬಗೆಗೊಂಡರ್ ಸಮಸತ್ತ್ವವಿಭ್ರಮಣೆಯರ್ ಶ್ರೀರೂಪೆಯರ್‌ಗೋಪಿಯರ್

ನಗೆಮೊಗದಿಂ ಮುಗುಳ್ನಗೆ ತುಳುಂಕೆ ಬಳಲ್ಕುಡಿಯಿಂದರಲ್ಗಳ
ಲ್ಲುಗೆ ನಿಡುಗಣ್ಗಳಿಂ ಪೊಳೆಪುಸಾಲಿಡೆ ಸೀಳಚಳಾಳಕಾಳಿಯಿಂ
ಮೃಗಮದರೇಣು ಸೂಸೆ ಲತೆ ತೆಂಬೆಲರ್ಗೊಯ್ಯನೆ ಸರ್ತಿಪಂದದಿಂ
ಸೊಗಯಿಸೆ ಗೋಪಿ ಡಕ್ಕೆಯ ಲಯಕ್ಕೆ ಪೆಟಿಳ್ ಜತಿಮೆಟ್ಟುತಾಡಿದಳ್

ಅಲಕಚಯಂಗಳಾಡೆ ನೊಸಲೊಳ್ ಕಬರೀಭರವಾಡೆ ಬೆನ್ನೊಳು
ಜ್ಜ್ವಲತರಹಾರವಾಡೆ ಕುಚದೊಳ್ ಮಿಸುಪೋಲೆಗಳಾಡೆ ಗಂಡಮಂ
ಡಲದೊಳದೊಂದು ಕಂತುಕದ ಬೆಂಬಟಿಯೊಳ್ ಪೊಳದಾಡೆ ಕಣ್ಬೊಣರ್
ಸುಲಲಿತೆಸೆಂಡನಾಡಿ ಮುಳುಗಾಡಿಸಿದಳ್ ಹರಿಯಂ ಸುಖಾಬ್ಧಿಯೊಳ್

ಕೃಷ್ಣನ ಬಾಲಲೀಲೆ

ಘನಕುಚೆ ಗೋಪಿ ಪಾಲ್ಗಡೆಯುತುಂ ಮನೆವಾಣ್ತೆಗೆ ಪೋಗೆ ಗೆಜ್ಜೆಯಿಂ
ದನಿ ನಸುಪೊಣ್ಮದಂತು ಪರಿತಂದೆಡಗೆಯ್ಯೊಳೆ ತೋಡಿ ಬೆಣ್ಣೆಯಂ
ತಿನುತಿರೆ ಗೋಪಿ ಕಂಡೆಲೆಲೆ ಕಳ್ಳತನಂಗಳನಣ್ಣ ಕಂಡೆವಾ
ವೆನೆ ಕಡೆವಾಯ ಬೆಣ್ಣೆವೆರಸೊಯ್ಯನೆ ಪಿಂಗುವ ಕೃಷ್ಣನೊಪ್ಪಿದಂ

ವ || ಮತ್ತೊಂದು ಸಮಯದೊಳ್ ಪಾಲ್ಗುಡಿಯಲೊಲ್ಲದಾಟಿಗುಟ್ಟುವ ದಾಮೋ-
ದರನಂ ಯಶೋದೆ ಕಂಡು

ಶಕಟವಿಮರ್ದನಾ ಮುಸಲಿ ಬಾರದ ಮುನ್ನಮೆ ನಮ್ಮ ಹೇಮಘಂ
ಟಿಕೆ ಫಣಿಲೆಂಬ ನಂದಿನಿಯ ಪಾಲಿದೆ ನೀಂ ಕುಡಿಯಲ್ಕೆ ನಿನ್ನ ಜೆಂ
ಡಿಕೆ ಬಳೆದಪ್ಪುದೆಂದಬಲೆ ನಂಬಿಸೆ ಪಾಲ್ಗುಡಿದೀಗಳಬ್ಬೆ ಜೆಂ
ಡಿಕೆಯೆನಿತುದ್ದವಾದುದೆನುತುಂ ಬೆಸಗೊಳ್ವ ಮುಕುಂದನೊಪ್ಪುಗುಂ

ಚಾರಿವೆಟ್ಟುವ ಭಂಗಿ ದೋರ್ವಲನಂ ಮನಂಗೊಳೆ ಮಂಜುಮಂ
ಜೀರಕಂಕಣಕಿಂಕಿಣೀರುತಿ ಪೊಣ್ಮೆ ವಕ್ರಿತಕಂಧರಂ
ಸ್ಮೇರವಕ್ತ್ರಸರೋರುಹಂ ಲಲಿತಾಯತೇಕ್ಷಣನಾಗಿ ಸಂ
ಸಾರನಾಟಕಸೂತ್ರಧಾರಿ ಮುರಾರಿ ಕೈಪಱುಗಾಡಿದಂ

ನೀರದೋತ್ಪಲವರ್ಣನಾಡಿದನಾಡಿದಂ ಕಮಲೇಕ್ಷಣಂ
ಚಾರುಹಾಸನಿವಾಸನಾಡಿದನಾಡಿದಂ ಸುಭಗಂ ಶುಭಾ
ಕಾರನಾಡಿದನೆಂದು ಗೋಪಿಯರಾಡಿಸುತ್ತುಮಿರಲ್ಕೆ ಸಂ
ಸಾರನಾಟಕಸೂತ್ರಧಾರಿ ಮುರಾರಿ ಕೈಪಱುಗಾಡಿದಂ

ಕ್ಷೀರಲಂಪಟನಾಡಿದಂ ನವನೀತಚೋರಕನಾಡಿದಂ
ದಾರಕವ್ರಜಮಲ್ಲನಾಡಿದನಾಡಿದಂ ಹರಿ ಗೋಕುಲಾ
ಧಾರನಾಡಿದನೆಂದು ಗೋಪಿಯರಾಡಿಸುತ್ತುಮಿರಲ್ಕೆ ಸಂ
ಸಾರನಾಟಕಸೂತ್ರಧಾರಿ ಮುರಾರಿ ಕೈಪಱುಗಾಡಿದಂ

ದಾರುಣಾಕೃತಿಪೂತನಾಂತಕನಾಡಿದಂ ಶಕಟಪ್ರಸಂ
ಹಾರನಾಡಿದನಾಡಿದಂ ಯಮಳಾರ್ಜುನದ್ರುಮಘಾತಿಯೆಂ
ಬೀ ರವಂ ನೆಗಱಲ್ಕೆ ಗೋಪಿಯರಾಡಿಸುತ್ತುಮಿರಲ್ಕೆ ಸಂ
ಸಾರನಾಟಕಸೂತ್ರಧಾರಿ ಮುರಾರಿ ಕೈಪಱುಗಾಡಿದಂ

ವೀರದೈತ್ಯರಸಿಕ್ಕಲಾಡಿಯೆ ಪುಟ್ಟಿದಂ ಹರಿಯೆಂದು ಕೈ
ವಾರದಿಂದವೆ ಮಾತನಾಡೆ ವಿರೋಧಿಗಳ್ ಯಮಲೋಕಮಂ
ಸಾರಲಾಡೆ ಯಶೋದೆ ರಾಗರಸಾಬ್ಧಿಯೊಳ್ ತುಳುಕಾಡೆ ಸಂ
ಸಾರನಾಟಕಸೂತ್ರಧಾರಿ ಮುರಾರಿ ಕೈಪಱುಗಾಡಿದಂ

ಆನಂದಮೂರ್ತಿ ಸುಖಲ
ಕ್ಷ್ಮೀನಿಳಯಂ ಸಕಲಸಾರಸರ್ವಸ್ವನೆನಿ
ಪ್ಪಾ ನೀರಜನೇತ್ರನ ಲೀ
ಲಾನುಷ್ಠಿತ ಬಾಲಕೇಳಿ ಬಣ್ಣಿಪರಳವೇ

ವನಜಜ ಬನ್ನಿ ಮಿತ್ರಹರ ಕುಳ್ಳಿರಿಮುನ್ನತಪೀಠದೊಳ್ ಪದಾ
ವನತಿಯಿನೇಟ್ ಮಹೇಂದ್ರದಿವಿಜರ್ ಪುಗೆ ಬಾರಿಸವೇಡೆನುತ್ತೆ ಮು
ನ್ನಿನ ನಿಜಲೀಲೆಯೋಲಗದ ಪೆರ್ಮೆಯ ಮಾತನದೊರ್ಮೆ ಸುಪ್ತಿಯೊಳ್
ಕನವರಿಸುತ್ತುಮಿರ್ಪ ಹರಿ ಗೋಪಿಗೆ ವಿಸ್ಮಯಮಂ ನೆಗಟ್ಚಿದಂ

ಒಂದಲ್ಲದೊಂದನೆನುತುಮು
ದೊಂದುದಿನ ಕೃಷ್ಣನಾಟಿಗುಟ್ಟಿದೊಡದನೇ
ನೆಂದುಂ ಮಾಣಿಸಲಱಿಯದ
ದೊಂದು ಕಥಾಂತರದೆ ಗೋಪಿ ಮಾಣಿಪ ಬಗೆಯಿಂ

ಕತೆಯಂ ಕೇಳಲೆ ಕಂದ ಹುಂ ರಘುಜನೆಂಬಂ ಹುಂ ಸಕಾಂತಂ ವನ
ಸ್ಥಿತನಾದಂ ಗುರು ಪೇಳೆ ಹುಂ ದಶಶಿರಂ ಕೊಂಡುಯ್ದನಾರಾಮನಾಂ
ಸತಿಯಂ ತಾನೆನೆ ಪೂರ್ವಮಂ ನೆನೆಯುತುಂ ಹುಂಕೊಳ್ಳದುತ್ಕೋಪಹುಂ
ಕೃತಿಯಂ ಮಾಡುತುಮೌಂಡುಗರ್ಚಿ ಕಿಸುಗಣ್ಬಿಟ್ಟಚ್ಯುತಂ ರಂಜಿಕುಂ

ಆಡುತ್ತುಂ ಸಹಪಾಂಸು
ಕ್ರೀಡಿತರೊಳ್ ಕೃಷ್ಣನಬ್ಬ ಮಣ್ಣಂ ತಿಂದಂ
ನೋಡೆಂದು ಹಳಧರಂ ಪಿಸು
ಣಾಡಲ್ ಕೇಳ್ದೊರ್ವೆ ಗೋಪಿ ಸೆಳೆವಿಡಿದೊಲವಿಂ

ಹರಿ ನೀಂ ಮಣ್ದಿಂದೆ ತಿನ್ನೆಂ ಜನನಿ ಪುಸಿದನೆಮ್ಮಗ್ರಜಂ ತೋಱು ವಕ್ತ್ರಾಂ
ತರಮಂ ನೋಡೆಂದು ಬಾಯಂ ತೆಱೆವುದುಮದಱೊಳ್ ವಾರ್ಧಿಯೇೞುಂ ಕುಲೋರ್ವೀ
ಧರವೇೞುಂ ದ್ವೀಪವೇೞುಂ ಬೆರಸು ಜಗಮನೀರೇೞುಮಂ ಕೂಡೆ ಕಂಡ
ಚ್ಚರಿವಟ್ಟಂ ಮುಚ್ಚು ಮುಚ್ಚಾನನಮನೆನುತುಮಾಕಾಂತೆ ವಿಭ್ರಾಂತೆಯಾದಳ್

ಕಮಳಾಕ್ಷನ ಮಹಿಮೆಯನಱಿ
ದುಮದಂ ತನ್ಮಾಯೆಯಿಂದೆ ಮಱೆವರ್ ಗೋಪರ್
ಯಮಿಗಳುಮಂ ಮೋಹಿಪ ವಿ
ಷ್ಣುಮಾಯೆ ಮೋಹಿಸದೆ ಗೋಪರಂ ತತ್‌ಕ್ಷಣದೊಳ್

ಜನ್ನನ ಯಶೋಧರ ಚರಿತೆ

ಅಮೃತಮತಿಯ ವ್ಯಾಮೋಹ

ಅನಿತೆಸೆವ ಚಂದ್ರಮತಿಗಂ
ಜನಪತಿಗಂ ಪುಟ್ಟಿದಂ ಯಶೋಧರನೆಂಬಂ
ಜನಮೋಹನ ಬಾಣಂ ಕ
ರ್ಬಿನ ಬಿಲ್ಗಂ ನನೆಯ ನಾಱಿಗಂ ಪುಟ್ಟಿದವೊಲ್

ಅಮೃತಮತಿ ಗಡ ಯಶೋಧರ
ನ ಮನಃಪ್ರಿಯೆ ಆಕೆ ದೀವಮಾಗೆ ಪುಳಿಂದಂ
ಸುಮನೋಬಾಣಂ ತದ್ ಭೂ
ರಮಣನೊಲಿದಂತೆ ಗೋರಿಗೊಳಿಸುತಿರ್ಕುಂ

ನರೆಯೆಂಬ ಹೊಱಸು ಮೊಗಮೆಂ
ಬರಮನೆಯಂ ಪೊಕ್ಕೊಡಂಗನಾಲೋಕನಮೆಂ
ಬರಸೆಂತಿರ್ದಪನೆಂದಾ
ನರನಾಥಂ ತೊಱೆದನಖಿಳವಿಷಯಾಮಿಷಮಂ

ಧರಣೀಭಾರಕ್ಕೆ ಯಶೋ
ಧರನನೊಡಂಬಡಿಸಿ ನೂರ್ವರರಸುಗಳೊಡನಾ
ದಱಿಂ ಕಂಬಂದಪ್ಪಿದ
ಕರಿಯಂತೆ ತಪೋವನಕ್ಕೆ ನಡೆದನಿಳೇಶಂ

ಅಳವಡೆ ಭುಜದೊಳ್ ಮೃಗಮದ
ತಿಳಕದವೊಲ್ ಸಕಲಧರಿಣಿ ಯೌವನ ಭೂಷಾ
ವಳಿಯೆನೆ ತಿರ್ದುವನಾ ನೃಪ
ಕುಲಶೇಖರನಮೃತಮತಿಯ ಮುಖದರ್ಪಣದೊಳ್

ಅವನಿಪಸೊರ್ವೆ ಸಭಾಮಣಿ
ಭವನದಿನಂಬರ ತರಂಗಿಣೀಪುಳಿನಮನೇ
ಱುವ ಹಂಸನಂತೆ ಶಯ್ಯಾ
ಧವಳ ಪ್ರಾಸಾದತಳಮನೇಱುದನರಸಾ

ಹೃದಯಪ್ರಿಯರಂತೊಱಗಿದ
ಪದದೊಳ್ ಗರಟಿಗೆಯು ಜಾವದುಕ್ಕಡದುಲಿ ಮು
ಗ್ಗಿದ ಪೊತ್ತು ಸೂಳ್ಗೆ ಕರುಮಾ
ಡದ ಪಕ್ಕದೊಳಿರ್ದ ಪಟ್ಟದಾನೆಯ ಬದಗಂ

ಬಿನದಕೆ ಪಾಡುತ್ತಿರೆ ನುಣ್
ದನಿ ನಿದ್ರೆಗೆ ಕತಕ ಬೀಜಮಾಯ್ತೆನೆ ಮೃಗಲೋ
ಚನೆ ತಿಳಿದಾಲಿಸಿ ಮುಟ್ಟಿದ
ಮನಮಂ ತೊಟ್ಟನೆ ಪಸಾಯದಾನಂಗೊಟ್ಟಳ್

ಅಂತೆಸೆಯೆ ಪಾಡುತಿರೆ ತ
ದ್ದಂತಿಪನತಿನೂತ್ನ ಗೀತ ಪಾತನ ವಿಕಲ
ಸ್ವಾಂತೆಗೆ ನೋಡುವ ಕೂಡುವ
ಚಿಂತೆ ಕಡಲ್ವರಿದುದಂದು ಬೆಳಗಪ್ಪಿನೆಗಂ

ಮನದನ್ನಳಪ್ಪ ಕೆಳದಿಗೆ
ಮನಮಂ ಮುಂದಿಟ್ಟು ಬಟಿಕ ಕಟಿಪಿದೊಡವಳಾ
ತನ ರೂಪುಗಂಡು ಕಣ್ಗಂ
ಮನಕ್ಕಮುದ್ಗಾರವೆತ್ತು ಭೋಂಕನೆ ಮುಗುಳ್ದಳ್

ಅಮೃತಮತಿಯೆತ್ತ ರೂಪಾ
ಧಮನಪ್ಟಾವಂಕನೆತ್ತ ಚಿತ್ರಮಪಾತ್ರೇ
ರಮತೇ ನಾರೀ ಎಂಬುದು
ಸಮನಿಸಿದುದು ಬೆಂದ ಬಿದಿಗೆ ಕಣ್ಣಿಲ್ಲಕ್ಕುಂ

ಎನುತುಂ ಬಂದು ವಿಷಣ್ಣಾ
ನನೆಯಂ ಮಾರ್ಗಾವಲಗ್ನನೇತ್ರೆಯನುಚಾಳ್ಭವ
ಸ ನಿತಪ್ರಾಧರರುಚಿಯಂ
ಮನುಜೇಂದ್ರಾಂಗನೆಯನೆಯ್ದಿ ಕಂಡಿತೆಂದಳ್

ಕಂತುವಿನ ಕಯ್ಯ ಕೂರಸಿ
ಯಂತಿರೆ ಗರಗರಿಕೆವಡೆದು ಪೊಳೆವಸಿಯಳೆ ನೀನ್
ಇಂತಪ್ಪ ಕಾಮದೇವಂ
ಗೆಂತೆಂತಾಯ್ದುೞಿಸಿ ಕೂರ್ತೆಯೆಂದಾಸಱಿಯೆಂ

ಈ ದೊರೆಯನೆಂದು ತೋಱಿಲ್
ಮೇದಿನಿಯೊಳಗಾತನಲ್ಲದಿಲ್ಲೆಸೆ ಪೇೞ್ಪೇೞ್
ಕಾದಲನಂತಿರೆ ಚೆಲ್ವನೆ
ದೂದವಿ ನೀನೆನ್ನ ಕೊಂದೆಯೆಂದೊಡೆ ಪೇೞ್ದಳ್

ಪಱಿದಲೆ ಕುಟಿನೊಸಲಟಿಗ
ಣ್ಣೊಱೆವಾಯ್ ಹಪ್ಪಳಿಕೆಮೂಗು ಮುರುಟಿದ ಕಿವಿ ಬಿ
ಬ್ಬಿಱಿವಲ್ ಕುಸಿಗೊರಲಿಟಿದೆರ್ದೆ
ಪೊೞಂಟ ಬೆನ್ ಬಾತ ಬಸಿೞಿಡಂಗಿದ ಜಘನಂ

ಕಱಿದೊವಲ ಪಱೆಯ ಕುಟಿಯಂ
ತೆಱೆದಂದದ ಮಯ್ಯ ನಾತಮಾತನ ಕಯ್ಗಳ್
ಕುಱುಗಣ್ಣ ಕೂನಬೆನ್ ಕಾಲ್
ಮಱೆಯಿಸುವುದು ಟೊಂಕಮುಱಿದ ಕತ್ತೆಯ ಕಾಲಂ

ಮುದುಗರಡಿಯು ಮುದುದೊವಲಂ
ದದ ಕರಿಯಂ ತಾಳಕಾಯ ಮೋೞಿಗೆಯೊಂದಂ
ದದ ಮುರುಡನಷ್ಟವಂಕಂ
ಮೊದಲೊಣಗಿದ ಕೂನ ಗೊರಡಿನಂದದ ಕೊಂಕಂ

ಎಂದೊಡೆ ದೂದವಿಗವಳಿಂ
ತೆಂದಳ್ ಗರಗರಿಕೆ ಕೊರಲೊಳೀಕ್ಷಣದೊಳ್ ವಾರ್
ಬಿಂದು ಮಿಡುಕೆರ್ದೆಯೊಳೊದವೆ ಪು
ಳಿಂದನ ಕಣೆ ನಟ್ಟುನಿಂದ ವನಹರಿಣಿಯವೊಲ್

ಕರಿದಾದೊಡೆ ಕತ್ತುರಿಯಂ
ಮುರುಡಾದೊಡೆ ಮಲಯಜಂಗಳಂ ಕೊಂಕಿದೊಡೇಂ
ಸ್ಮರಚಾಪಮನಿಳಿಕಯ್ವರೆ
ಮರುಳೇ ಪೊಲ್ಲಮೆಯೆ ಲೇಸು ನಲ್ಲರ ಮೆಯ್ಯೊಳ್

ಬಲವಾದೊಡೆ ರೂಪಿನ ಕೋ
ಟಲೆಯೇವುದೊ ಕಾರ್ಯಮಾಗೆ ಕಾರಣದಿಂದಂ
ಫಲಮೇಸಿಂದೆನಗಾತನೆ
ಕುಲದೈವಂ ಕಾಮದೇವನಿಂದ್ರಂ ಚಂದ್ರಂ

ಎಂದಾಕೆಗೆ ಲಂಚಮನಿ
ತ್ತೆಂದುದನೆಂದೆರವಿಗೊಂಡು ಕಟಿಪುವುದುಮವಳ್
ಸಂದಿಸಿದೊಡಮೃತಮತಿ ರಾ
ತ್ರಿಂ ದಿವಮಾತನೊಳೆ ಸಲಿಸಿದಳ್ ತೆಱಪುಗಳಂ

ಆ ವಿಕಟಾಂಗನೊಳಂತಾ
ದೇವಿಗೆ ರುಚಿಯಾಗೆ ರತಿಫಲಾಸ್ವಾದನದೊಳ್
ಬೇವಂ ಮೆಚ್ಚಿದ ಕಾಗೆಗೆ
ಮಾವಿಳಿದಪ್ಪಂತೆ ಪತಿಯೊಳಿಳಿದಾಯ್ತು ಮನಂ

ನೋಡುವ ಮಾತಾಡುವ ಬಾಯ್
ಗೂಡುವ ಪದನಮೃತಮತಿಗೆ ಪೂರ್ವಸ್ಥಿತಿಯಿಂ
ಪಾಡಟಿಯುತ್ತಿರೆ ನೋಡಲ್
ವೇಡಿ ಯಶೋಧರನದೊರ್ಮೆ ಶಯ್ಯಾತಳದೊಳ್

ಮಱೆದೊಱಗಿದನಂತೆವೊಲಿರೆ
ಪಱಮೆ ಪಗಲ್ ಮುಗಿಯೆ ಸಿಲ್ಕಿ ಕೈರವದಿನಿರುಳ್
ಪೊಱಮಡುವಂತರಸನ ತೋಳ್
ಸೆಱೆಯಿಂ ನುಸುಳ್ದರಸಿ ಜಾರನಲ್ಲಿಗೆ ಪೋದಳ್

ಬೆನ್ನೊಳೆ ಪೋದಂ ದೋಷದ
ಬೆನ್ನೊಳೆ ಸಂದಿಸುವ ದಂಡದಂತರಸಂ ಪ್ರ
ಚ್ಛನ್ನದಿನುರ್ಚಿದ ಬಾಳ್ವೆರ.
ಸನ್ನೆಗಮಾ ಬದಗನರಸಿ ತಡೆದೊಡೆ ಮುಳಿದಂ

ಮುಳಿದಾಕೆ ತಂದ ಮಾಲಾ
ಮಳಯಜ ತಾಂಬೂಲ ಜಾಲಮಂ ಕೆದಱಿ ಕುರು
ಳ್ಗಳನಪೆದು ಬೆನ್ನ ವಿಳಿಯಿಂ
ಕಳಹಂಸೆಗೆ ಗಿಡಿಗನೆಱಗಿದಂತಿರೆ ಬಡಿದಂ

ತೋರಮುಡಿವಿಡಿದು ಕುಡಿಯಂ
ನಾರಂ ತದೆವಂತೆ ತದೆದು ಬೀಟೆಯ ಕಾಲಿಂ
ಬಾರೇಪೆ ಬದಗನೊದೆದೊಡೆ
ಕೇರೆ ಪೊರಳ್ವಂತೆ ಕಾಲಮೇಲೆ ಪೊರಳ್ದಳ್

ತಡವಾದುದುಂಟು ನಲ್ಲನೆ
ಬಿಡು ಮುಳಿಯದಿರರಸನೆಂಬ ಪಾತಕನೆನ್ನಂ
ತೊಡೆಯೇಱಸಿ ಕೇಳಿಕೆಯಾ
ದೊಡೆ ನೋಡುತ್ತಿರ್ದೆನುಂತೆ ನಿಲಲಣ್ಮುವೆನೇ

ಕಿವಿಸವಿ ದನಿ ಕಣ್ಸವಿ ರೂ
ಪವಧರಿಸಲೆ ಗಜವೆಡಂಗ ನೀನುಟಿದೊಡೆ ಸಾ
ವವಳೆನಗೆ ಮಿಕ್ಕ ಗಂಡರ್
ಸವಸೋದರರೆಂದು ತಿಳಿಪಿದಳ್ ನಂಬುಗೆಯಂ

ಆಗಳ್ ಬಾಳ್ ನಿಮಿರ್ದುದು ತೋಳ್
ತೂಗಿದುದು ಮನಂ ಕನಲ್ದುದಿರ್ವರುಮನೆರಪ್
ಬಾಗಂ ಮಾಡಲ್ ಧೃತಿ ಬಂ
ದಾಗಳ್ ಮಾಣೆಂಬ ತೆಱದೆ ಪೇಸಿದನರಸಂ

ಪರನೃಪರನಲ್ಲದೀ ಪುಟಿ
ಕರನಿಱುವುದೆ ಮದ್ ಭುಜಾಸಿಯಿದು ಕೈಯಿಕ್ಕಲ್
ಕರಿ ಕರಿಗಲ್ಲದಿಱುಂಪೆಗೆ
ಪರಿವುದೆ ಹರಿ ಕರಿಯನಲ್ಲದಿಱುವುದೆ ನರಿಯಂ

ಅಸಿಲತೆ ರಣಧೌತಮದೀ
ಮಸಿ ಮುಸುಡನ ಜೀವ ಕಪ್ಪಿನಿಂ ಕಂದಿದೊಡೆನ್
ದೆಸೆಯನಡರ್ಪೆನ್ನ ಕೀರ್ತಿ
ಪ್ರಸರದ ಕುಡಿ ಕಯ್ಪೆಸೊರೆಯ ಕುಡಿಯವೊಲಕ್ಕುಂ

ಅಳಿಪುಳ್ಳೊಡೆ ನೋಡಿಱುದೊಡ
ನಟಿವುದೆ ಪೆಣ್ ತಪ್ಪಿ ನಡೆಯೆ ಚಿಃ ಕಿಸುಗುಳವೆಂ
ದುಟಿವುದೆ ಗೆಲ್ಲಂ [ಕೊಂದಾ]
ಪುಟಿ ಪುಟ್ಟುವ ನರಕದೊಳಗೆ ಬೀಟ್ವನೆ ಚದುರಂ

ಎಂದು ನೆನೆದಿಱುಯಲೊಲ್ಲದೆ
ಬಂದರಸಂ ಮುನ್ನಿನಂತೆ ಪವಡಿಸೆ ತಾನುಂ
ಒಂದು ಮಱೆದರಸನೊಱಗಿದ
ನೆಂದೊಯ್ಯನೆ ಸಾರ್ದು ಪೆಱಗೆ ಪಟ್ಟಿರ್ಪಾಗಳ್

ಬಡಗುಳಿಗನ ತೋಳ್ ಮುಟ್ಟಿದ
ಸುದತಿಯೊಳಿಂಪಾಗದಂತೆ ಕೆಟ್ಟುದು ಪುಟಿ ಮು
ಟ್ಟಿದ ದುಗ್ಧದಂತೆ ನೀರ್ ಮು
ಟ್ಟಿದ ಜೇನೆಯ್ಯಂತೆ ಪತಿಗೆ ಶಯ್ಯಾತಳದೊಳ್

ಆಗಂಡನನಪ್ಪಿದ ತೋಳ್
ಪೋಗಂಡನನಪ್ಪುವಂತೆ ಮಾಡಿದ ಬಿದಿಯುಂ
ಮೂಗಂ ಕೊಯ್ದಿಟ್ಟಿಗೆಯೊಳ್
ಪೋಗೊರಸದೆ ಕಂಡೆನಾದೊಡೇಂ ಬಿಟ್ಟಪೆನೆ

ಎನೆ ಕೇಳ್ದು ಮಾರಿದತ್ತಾ
ವನಿಪನವಂಗಭಯರುಚಿ ಬಟಿಕ್ಕಿಂತೆಂದಂ
ಮನಸಿಜನ ಮಾಯೆ ವಿಧಿವಿಳ
ಸನದ ನೆರಂಬಡೆಯೆ ಕೊಂದು ಕೂಗದೆ ನರರಂ

ಪದವಿಯ ರೂಪಿನ ಸೊಬಗಿನ
ಮದಮುಂ ಮಾಡುವರ ಮೂಗಿನೊಳ್ ಪಾತ್ರಮನಾ
ಡದೆ ಮಾಣದನಂಗನ ಕೃತಿ
ಸುದತಿಯರ ವಿಕಾರಮೆಂಬ ವಿದ್ಯಾಬಲದಿಂ

ವ್ಯಾಮೋಹದ ಪರಿಣಾಮ

ಶ್ರೀರಮಣಿ ತೋರಮುತ್ತಿನ
ಹಾರದೊಳೊಲೆದುಯ್ಯಲಾಡೆ ನಿತ್ಯವಸಂತಂ
ಪೇರುರಮಾಗಿರೆ ತಾಳ್ದಿದ
ರಾರೊ ಯಶೋಧರ ನೃಪೇಂದ್ರ ನೀನಲ್ಲದವರ್

ನಿನಗೆ ಶುಭವೆಂದ ವಂದಿಯ
ಮನೆಯಂಗಣದೊಳಗೆ ಪಣ್ತು ಪರ್ವಿದ ಮಂದಾ
ರ ನಮೇರು ಪಾರಿಜಾತದ
ಬನದೊಳ್ ಸಿರಿ ಮೆಱೆವುದಲ್ತೆ ವನಕೇಳಿಗಳಂ

ಕೊಱತೆ ನಿನಗಿಲ್ಲವೇಕೆಂ
ದಱಿಯೆಂ ನೀರೋಡಿ ನಿನ್ನ ತನುವಿನ ಬಣ್ಣಂ
ಬಱುಗೊಳದವೊಲಾಯ್ತೀಕ್ಷಿಸಿ
ಮಱುಗಿದುದಱುನೀರ ಮೀನ್‌ಬೊಲಿಂದೆನ್ನ ಮನಂ

ಎಂದು ಬೆಸಗೊಂಡ ತಾಯ್ಗೆ ಮ
ನಂದೋಱದೆ ನೆವದಿನರಸನಿಂತುಸಿರ್ದಂ ಸುಯ್
ಕಂದಿಸಿದಧರಕ್ಕೆ ಸುಧಾ
ಬಿಂದುಗಳಂ ತಳಿಯೆ ದಂತಕಾಂತಿಪ್ರಸರಂ

ದೇವಿಯರ ಪರಕೆಯಿಂದೆನ
ಗಾವುದಱೊಳ್ ಕೊಱತೆಯಿಲ್ಲ ಪೋದಿರುಳೊಳ್ ಪೊಂ
ದಾವರೆಗೊಳದಂಚೆ ಕಱ-
ಲ್ದಾವರೆಗೊಳದೊಳಗೆ ನಲಿವ ಕನಸಂ ಕಂಡೆಂ

ಗೋದಾಮೆಗಂಡ ನವಿಲಂ
ತಾದುದು ಕಾರ್‌ಗಂಡ ಹಂಸನವೊಲಾದುದಲರ್
ವೋದ ಲತೆಗಂಡ ವಿರಹಿವೊ
ಲಾದುದು ದುರ್ನಯದ ಕಾಣ್ಕೆಗೆನ್ನಯ ಚಿತ್ತಂ

ವನಿತೆಯ ಕೇಡಂ ಜನಪತಿ
ಕನಸಿನ ನೆವದಿಂದೆ ಮಱಸೆ ತಲ್ಲಣದಿಂ ತಾಯ್
ನೆನೆದಳ್ ಪೊಲ್ಲಮೆಯುಂ ವಂ
ಚನೆಯೆಲ್ಲಿಯುಮೊಳ್ಪನಾಗಲೀಯದು ಕಡೆಯೊಳ್

ಅಡಸಿದ ನಲ್ಲಳ ತಪ್ಪಂ
ತಡವಿಕ್ಕಿದೊಡೇಱು ಭವದ ಕೇಡಡಸುವ ಕಿಱ್
ನುಡಿಯುಂ ನುಡಿದಳ್ ತಾಯ್ ಒಂ
ದಡಸಿದೊಡೇಱಡಸಿತೆಂಬ ನುಡಿ ತಪ್ಪುಗುಮೇ

ಆದೊಡೆ ಪಿಟ್ಟಿನ ಕೋಟಿಯ
ನಾದೊಡಮಿಂದೊಂದನಿಕ್ಕವೇಟ್ಪುದು ಮಿಕ್ಕಂ
ದಾ ದೇವಿಗೆನ್ನನಿಕ್ಕಿಯುಃ
ಮೀ ದುರಿತಮನಿಂದು ಮಗನೆ ಪರಿಹರಿಸದಿರೆಂ

ಎನೆ ತಾಯ ಮೋಹದಿಂದಂ
ಜನಪನೊಡಂಬಟ್ಟು ಮನದೊಳಿಂತೆಂದಂ ಭಾ
ವನೆಯಿಂದಮಪ್ಪುದಾಸ್ರವ
ಮೆನಗಿನ್ನೆಂತಪ್ಪ ಪಾಪಮಿದಿರ್ ವಂದಪುದೋ

ಮಾಡದೊಡೆ ತಾಯ್ಗೆ ಮರಣಂ
ಮಾಡಿದೊಡೆನ್ನೊಂದು ಗತಿಗೆ ಕೇ[ಡಿಂ]ದೇನಂ
ಮಾಡುವೆನೆಂದಾಂದೋಳಮ
ನಾಡೆ ಮನಂ ತಮಮನಪ್ಪುಕಯ್ದನಿಳೇಶಂ

ಆ ನೃಪತಿ ಬಟಿಕ ತಾಯುಂ
ತಾನುಂ ಚಂಡಿಕೆಯ ಪೂಜೆಗೆಂದೆಟ್ಟಂದಂ
ನಾನಾ ವಿಧದರ್ಚನೆಯಿಂ
ಮಾನೋಮಿಯ ಮುಂದೆ ಬಂದ ಭೌಮಾಷ್ಟಮಿಯೊಳ್

ಕರಮೆಸೆಯೆ ಸಮೆದು ಬಂದುದು
ಚರಣಾಯುಧಮುದಱ ಚಿತ್ರಪರಿಶೋಭೆಗೆ ಬೆಂ
ತರನೊಂದಾಶ್ರಯಿಸಿರ್ದುದು
ಪರಸಿದಳುಗ್ಗಡಿಸಿ ಜನನಿ ಪುತ್ರಂ ಪೊಯ್ದಂ

ತಲೆಯಿಂ ಕುಕ್ಕೂಕೂ ಎಂ
ಬುಲಿ ನೆಗೆದುದು ಕೂಗಿ ಕರೆವ ದುರಿತಂಗಳ ಬ
ಲ್ಲುಲಿಯೆನೆ ಪಿಟ್ಟಿನ ಕೋಟಿಯ
ತಲೆಯುಂ ಪಿಡಿವಂತಿರಟ್ಟೆ ಪಾಱಿದುದಿನಿಸಂ

ಪೊಡೆಯೆ ಕೃಕವಾಕು ನಿನದಂ
ಬಿಡದುಣ್ಮುತಿರಲ್ಕೆ ಕಯ್ಯ ಬಾಳ್ ಬೀೞ್ತರೆ ಪೊಯ್
ವಡೆದಂತೆ ಪಂದೆಯಂ ಪಾ
ವಡರ್ದಂತಾಗಿರೆ ಯಶೋಧರಂ ಬೆಱಗಾದಂ

ಏಕೆ ಕನಸೆಂದು ನುಡಿದೆನಿ
ದೇಕಂಬಿಕೆ ಬಲಿಯನೊಡ್ಡಿದಳ್ ಕೂಗಿದುದೇ
ಕೀ ಕೃತಕ ತಾಮ್ರಚೂಡನಿಂ
ದೇಕೆಂದಾರಱಿವರಯ್ಯ ವಿಧಿ ವಿಳಸನಮಂ

ಅಮೃತಮತಿಯೆಂಬ ಪಾತಕಿ
ಯ ಮಾಯೆ ಬನಮಾಯ್ತು ಚಂದ್ರಮತಿಮಾತೆಯು ಮಾ
ತೆಮಗೆ ಬಲೆಯಾಯ್ತು ಹಿಂಸನ
ಮಮೋಘ ಶರಮಾಯ್ತು ಕೆಡೆದುದಾತ್ಮಕುರಂಗಂ

ಜನ್ನ : ಅನಂತನಾಥ ಪುರಾಣ

ಚಂಡಶಾಸನ ಕಥೆ

ವ|| ಅಂತು ನಿರ್ವಿಕಲ್ಪಮುಂ ನಿರಂತರಿತಮುಮಾದ ಸೌಹಾರ್ದದೊಳ
ಪ್ಪೈಕಸದನದ ಸಹಪಙ್ತಿ ಭೋಜನದ ಸಹವಿಳಾಸಕ್ರೀಡಿತದ ಸಮಯಂಗ
ಳೊಳಗೆ ವಸುಷೇಣನಂಗನೆ ಸುಸಂದಾದೇವಿಯ ಭಾವಂಬಡೆದ ಕುಸುಮ
ಕೋದಂಡನ ವಶೀಕರಣಕಾಂಡಂ ಕೀಲ್ಮಸೆಯಿಟ್ಟು ಗಱಿಗಟ್ಟಿ ತಿರ್ದಿ ಬಣ್ಣ
ವಿಟ್ಟಂತೆ ಕಣ್ಣತವಕಮಂ ಕಡೆಗೋಡಿವರಿಯಿಸುವ ರೂಪಿಂಗನುರೂಪಮಾಗಿ
ತಿಳಕಿತಮಾದ ಮದನ ಮತ್ತಗಜದುತ್ತರದೇಸೆಯಂತೆ ಚಿತ್ತಮಂ ತೊತ್ತಱದುಱಿ
ದೇಱುಂಜವ್ವನಕ್ಕಳಂಕಾರವಾಗಿ ಕೈಮಾಡಿ ಮೆಱೆವ ಕಾಮದೇವನ ಕರವಾ
ಳಂತೆ ಕಣ್ಣೊಳ್ ಪೊಳೆದೆರ್ದೆಯೊಳುಳ್ಕಿ ಕೊಳ್ಕುಬೆಳ್ಕುಗೊಳಿಸುವ ವಿಳಾಸ
ದೊಳಂ ವಿಳಾಸಕ್ಕೆ ದಯಂಬಡೆದು ಮನ್ಮಥ ಚಕ್ರವರ್ತಿಯ ಸಮ್ಮೋಹನ
ಶಕ್ತಿಯಂತೆ ಭಾವಕರ ಬಗೆಯ ಬಯ್ಕೆಯನಗೆಯೆತ್ತಿ ಸೂಱೆಗೊಳ್ವ ಕಳಕಳಾ
ಪ್ರೌಢಿಯೊಳಂ ದುರಾತ್ಮಕನಪ್ಪ ಚಂಡಶಾಸನನ ಕಣ್ಮಲರ್ ಕವಿದು ಕವ್ವರೆ
ಗೊಂಡು ಮಂಡಳಿಸಿ ಬಳಸಿ ಸೋಲಕ್ಕಾಲಂಬವಂ ಪಡೆವೆರ್ದೆಗಾದದವಱಲುಂ
ತನುವಿಂಗೆ ತಾಪಮುಮನೊಡನೆ ಬಳೆಯೆ ವಳೆಯೆ

ಕೆಳೆಯನ ಪಙ್ತಿಭೋಜನದೊಳೊರ್ವೆ ವಿಳಾಸದೆ ಬಡ್ಡಿಸುತ್ತುಮಿ
ರ್ಪೆಳೆಯಳ ತೋಳ ಮೂಲದ ಪೊಗರ್ಮಣಿಬಂಧದ ಚೆಲ್ವಕೋಮಲಾಂ|
ಗುಳಿಗಳ ಕೊಂಕು ಕಣ್ಗೆ ಕುಡೆ ಕೌತುಕಮಂ ಭ್ರಮೆಗೊಂಡು ಕಾಮುಕಂ
ವಳಿಗೆಯನೆತ್ತಿ ಬೊಟ್ಟಿಡಲೊಡರ್ಚೆ ಬಱಿಕ್ಕೆ ಪೊಗಪ್ತೆಗಿಕ್ಕಿದಂ ||

ನಗೆಗಣ್ನಲ್ಲಳ ಕೂಟಮಂ ಪಡೆದುವಿಂಪಂ ಶ್ರೋತ್ರಮಿಂಬಿತ್ತು ಮಾ
ತುಗಳಂ ನಾಸಿಕೆಗಾಯ್ತುವಳ್ಸುಱಿದ ಸೂಪೊಳ್ ಸೌರಭಂ ಸ್ವಾದು ನಾ |
ಲಗೆಗಾಯ್ತಾಕೆಯ ಹಸ್ತಪಲ್ಲವರಸಾನ್ನಾದ್ಯಂಗಳಿಂ ಸೋಂಕುವಾ
ಸೆಗೆ ಪಕ್ಕಾಗದೆ ನಿಂದ ಪಲ್ಲವಕಸಂಗಕ್ಕಾಯ್ತು ಸಂಗಜ್ವರಂ ||

ವ|| ಅಂತು ಕಂತುಸಂತಾಪಕ್ಕೆ ಪಕ್ಕಾಗಿ ಕುಕ್ಕುಳಗುದಿದುರ್ಕದೊಳಗೊಳಗೆ ಬೇವ
ಹೃದಯಮಂ ಪದವಡಿಸಲಾಱದೆ ತನಗೆ ಬೀಡುಂದಾಣವಾದ ಮಾಡದ

ಪೆಱಗಣ ನಂದನವನದ ಮಾಕಂದಭೂರುಹದ ಮಂದಚ್ಛಾಯೆಯೊಳ್ಬೀಸುವ ಕುಱುವೆಯ ಬಿಜ್ಜಣಿಗೆಯೊಳಂ ಪಾಸುವ ಬಾಳಪ್ರವಾಳ ತಳ್ಪತಳದೊಳಂ ಸೂಸುವಾಲಿನೀರ್ತುಂತುಱೊಳಂ ಪೂಸುವ ಚಂದನಸ್ಥಾಸಕದೊಳಂ, ವಸಂತ-ಸಮಯಾನುಭೂಪಭದ್ರ ಶಿಶಿರೋಪಚಾರಚಾರುಚಾತುರತ್ವಂ ಮೆಱೆಯೆ ಮಮ್ಮಲಮಱುಗುತ್ತುಮಿರ್ದ ತನ್ನವಸ್ಥಾಂತರಮನಱಿದು ಮಱೆಯದಂತೆ ಬೆಸಗೊಂಡ ಸುದರ್ಶನನೆಂಬ ಕೆಳೆಯಂಗಿಂತೆಂದಂ

ನುಡಿಯಲ್ಬಾರದು ತೀರದು
ನುಡಿಯದೊಡೆಲೆ ಕೆಳೆಯ ನಿನಗೆ ಬೆಂದ ಮನಂ ಸಂ|
ಡೆಡೆಯೆನ್ನದೆ ಪೇೞ್ದಪೆನೀ
ಕಡುನಂಟನ ಸತಿಯ ರೂಪು ಸೋಲಿಸಿತೆನ್ನಂ ||

ಭ್ರಮೆ ಪತ್ತಿತ್ತು ಮನಕ್ಕೆ ಕಣ್ತಿರಿಪಿ ಬಿಟ್ಟಂತೇಸುಮಂ ಕಾಣವಂ
ಗಮನಂಗೋದ್ಭವವಹ್ನಿ ಸುಟ್ಟಪುದು ಕಾಣೆಂ ಪ್ರಾಣಸಂಧಾರಣೋ|
ದ್ಯಮಮಂ ಪೇೞ್ಸಖ ಬಾೞ್ವುಪಾಯಮೆನಗಿನ್ನೆಂತೋರ್ವೆ ಕಾರುಣ್ಯದಿಂ
ರಮಣೀಲೋಚನಚುಂಬನಂ ಕಳೆಗುಮೇ ಸಟ್ಟಿರ್ದ ಹೃತ್ಯಲ್ಯಮಂ ||

ವ || ಎಂದು ತನ್ನ ಹೃದಯಕವಾಟಮಂ ತೆಟ್ಟಂದೆಱೆದತ್ತಳಗಮಾದುತ್ತುಂಡ-ವೇಟಮಂ ಬಯಲೊಳಿಕ್ಕಿ ಬಾಯಳಿದ ನಿಜಪತಿಯ ನುಡಿಗೆ ಸಂದರ್ಶನನೆಂದಂ ಮೇರೆಗೞಿದ ಬೞಿಕಾರ ಸ್ವೈರಣೆಯುಮೊರೆವೋಗದಿರವು ; ಪರಿವ ಮನಕ್ಕೆ ಪಗ್ಗಮಿಲ್ಲಂ ; ನೋಡುವ ಕಣ್ಗಳ್ಗೆಡೆಗಟ್ಟಿಲ್ಲಮದಲ್ಲದೆಯುಂ

ಒಡೆಯನ ಕಾಪು ಕಟ್ಟಣಕಮೆಂದೊಡೆ ಬಂಧುಗಳಾಪ್ತರಾಗರೆಂ
ದೊಡೆ ಮನಮಿತ್ತುಮೀಯ್ಯರಳವೆಂದೊಡಸಾಧ್ಯಮಿದೆಂದೊಡೊಲ್ಲಳೆಂ|
ದೊಡೆ ಮೊಱೆಯಾಗದೆಂದೊಡೆ ಪರಾಂಗನೆಯೆಂದೊಡೆ ಸಾವ್ಯಮಲ್ಲವೆಂ
ದೊಡೆ ತಲೆಹೋಗಿಯುಂ ಬಸಿದು ಬೀಳದೆ ಸ್ವೈರಿಸರಲ್ತೆ ಕಾಮುಕರ್ ||

ವ || ಆದೊಡೇನಾದುದಾನಿತಂಬಿನಿಯೊಳ್ ನಮ್ಮ ಮನೋರಥಸಿದ್ಧಿಗವಕಾಶ-ಮುಂಟದೆಂತೆಯಪ್ಪೊಡೆ

ನಯದಿಂ ಕೋಕಿಳನಾದೆ ನಿಮ್ಮರಸರಿಂತೇಕಾರಣಂ ಬಂದರಿ
ಲ್ಲಿಯ ಕಾರ್ಯಾಂತರಮೇಂ ಪ್ರಯಾಣದಿನಮಿನ್ನೆಂದೆಂತು ತಾಂ ಪೆತ್ತ ತಂ|
ದೆಯ ಮಿತ್ರಂಗೊಡವುಟ್ಟಿದಣ್ಣನ ಸಹಾಯಂಗಾಡುವಂತೀಗಳೆ
ನ್ನಯ ಕೂಡಾಡಿದಳಿಂತಿದೇನಳಿಪೊ ಮೇಣ್ ನಿರ್ಮೋಹಮೋ ಭಾವಿಸಾ ||

ವ || ಎಂದಾಕೆ ತನ್ನ ವಲ್ಲಭಂಗಭಿನವಪುರುಷಸಂಗೋಷ್ಠಿ ಸಮನಿಸಿ ನಿಜಾತ್ಮ ವಲ್ಲಭನ ಸುಖಾನುಭವಕ್ರೀಡೆಗೆಡೆವಡೆಯದೆ ಸಿಡಿಮಿಡಿಗೊಳುತ್ತಿರ್ದ ಭಾವಮುಮಾ ವಿನಯಮದಾಳಿಯುಂ ಮತ್ತಿಗೆ ಪತ್ತಿಸುವಂತೆ ನುಡಿದು ಮನದ ಪಿಶಾಚಕ್ಕೆ ವಚನರಚನಾಧೂಪಮಂ ತೋಱಿ ವಿರಹವಿಕಾರಮಂ ಕೆಳರ್ಚಿ ನಿನ್ನೊಳಾಕೆಯುಂ ಕೂಡುವುಪಾಯಮನೀಗಳೆ ಮಾಡಿದಪೆನೆಂದು ಪೋಗಿ ಬಟಿಕ ಮಾಧೂರ್ತನಾಡುತ್ತುಮಿರ್ದನಿತ್ತ ವಿರಹಾರ್ಥಂ ಬಾಡುತ್ತುಮಿರ್ದ ನಲ್ಲದೆಯುಂ

ಒರ್ಮೆ ಸಭಾವಿಭೂಷಣ ಮಹಾಕವಿಲೀಲೆಗಳಿಂದೆ ತಮ್ಮ ತೀ
ರ್ಮಮರ್ದದಿಂದಮಿರ್ದರಿರೆ ಕತ್ತರಿವೀಲಿಯ ಬೇಂಟೆಯುಂ ಮರು |
ಳ್ಮಮರ್ಕಮೆಂಬುದಂ ತಿಳಿಪದಂಗಿಗೆಯಕ್ಕನೆ ಕೋಲ ಮಿಂಚು ತಾಂ
ಕಾರ್ಮೊಗವೆಂಬಿನಂ ಸತಿಗೆ ದೀವರ ಬೇಂಟೆಯ ಮುಖ್ಯನಾಯಕಂ ||

ವ || ಆವಿನೋದಮಂ ನೀಡುಂ ನೋಡಿ ಪೊಗಟ್ದು ಪೋಪುದುಮರಸನರಸಿವೆರಸು ಬೋನಮನೀನಂದನವನಕ್ಕೆ ಬರವೇಟೆಂದು ಸೂಟಾಯ್ತುರನರಮನೆಗೆ ಕಟಿಪಿ ಪೊಳೆವ ಪುಲ್ಲೆಗಳ ಬಟಿವಿಡಿದು ಕಾಪುಗಾಡಿನೊಳ್ ಸೋಹಿನ ಬೇಂಟೆಯ ಬಿನದದಿನೀರ್ವರ ರಥಮುಂ ಬೇಱವೇಱಾದಲ್ಲಿ ಚಂಡಶಾಸನಂ ವಸುಷೇಣ ಸರಸಿ ಬರ್ಪ ಬಟ್ಟೆಯತ್ತಲೆ ಸಾರ್ದುಕೊಂಡಿರ್ಪಿನಂ ಪರಿಮಿತಾಂಗರಕ್ಷಕ ಪರೀತೆಯುಂ ಪರಿಧಾವತ್ಕತಿಪಯಚೇಟಿಕಾಪುರೋಭಾಗೆಯುಂ ದೋಲಾ ದಂಡಿಕೋಭಯಭಾಗ ಸಂಭಾಷಿತ ಸಹಚರೀಯುಗಳೆಯುಮಾಗಿ ನಿಜವಲ್ಲಭ ನಟ್ಟಿದ ಬಟಿಗೆ ಬರುತ್ತುಮಿರ್ದ ಸುನಂದಾದೇವಿಯುಂ ಕಂಡು

ಕಡೆಗಣ್ಗಳ್ಪರಿದೆಯ್ದಿ ಮತ್ತೆ ಮನಮಂ ಗೋಪಾಂಗಸಂಗಕ್ಕೆ ದಾ
ಟಿಡೆ ಕಾಯ್ದಳ್ಪೆರ್ದೆಗೂಡುವಾಯೆ ಪಿರಿದೊಂದೌತ್ಕಂಠ್ಯದಿಂ ಕಂಠದೊ |
ಳ್ಮಿಡುಕುಣ್ಮತ್ತಿರೆ ಮೇಲೆವಾಯ್ದು ಭರದಿಂದಂ ನಲ್ಲಳಾಂದೋಳದಿಂ
ಕಡುಕೆಯ್ಯಂ ತೆಗೆದಿಟ್ಟುಕೊಂಡು ರಥದೊಳ್ಬಂದಂ ಮನೋವೇಗದಿಂ ||

ವ || ಎಂದು ಪೇೞ್ದು ಕಥಾಂತರದೊಳಾತಂಗಾತಳೋದರಿಯೊಡಂಬಟ್ಟಂತಳೆಗೆತ್ತು ಚಿತ್ರಲತೆಯಿಂತೆಂದಳ್

ಸುದತಿಯರೆಂಬ ಪಾಪಿಗಳು ಮಾಡದುದೇನನೆ ಮತ್ತೆ ತಂಗಿಯುಂ
ಮದನಪತಾಕೆಯೆಂದಳವಳಿಂದೆ ಪತಿವ್ರತೆಯಿಲ್ಲ ನೋಡ ಲೋ |
ಕದೊಳದನಾಡದಿರ್ಕರುಳ ಕತ್ತರಿ ನಂಟರ ಮಾರಿ ತುತ್ತುಮಿಂ
ಚಿದೊಡೊಡನುಂಡು ಮತ್ತೆ ತೊಡೆ ಮಿಂಚಿದೊಡಾಖಳನಿಂತು ಮಾಡಿದಂ ||

ವ || ಅಂತು ಪಿಡಿದೊಯ್ವಾಗಳುರಗಂ ಪಿಡಿದಂತೆ ಬೆದಱಿ ಪಾವು ಪಿಡಿದಂ ತಿರೊದಱಿ ಕಡುಜರ ಪತ್ತಿದಂತು ಕಳವಳಿಸಿ ಠಕ್ಕು ಪತ್ತಿದಂತೆ ಮತಿಗೆಟ್ಟು ಸಿಡಿಲ್ ಪೊಡೆದಂತೆ ಹಮ್ಮದಂಬೋಗಿ ಸುನಂದೆಯಾಗಿಯುವಸು ನಂದೆ ಕಿಱಿದಾಸುಂ: ಬೇಗದಿಂ ಬಟಿಕ್ಕೆ ಕಾಮುಕಾಂಡಖಂಡಿತ ಹೃದಯಂ ಚಂಡ ಶಾಸನಂ ವಿಶ್ವಾಸ ಘಾತಕಂ ಕಾತರತೆಯಿಂ ತನ್ನಂ ಪಿಡಿದುದನಱಿದು

ಇನನಂ ವಂಚಿಸಿ ಚಂಡಶಾಸನನವಂ ಕಳ್ದೊಯ್ದಪಂ ನಾಥನಂ
ಗನೆಯಿಂದೆನ್ನ ಸುನಂದೆಯಂ ಸುಭಟರಣ್ಮಿಂ ವೀರರಡ್ಡೈಸಿಮೆ |
ನ್ನಿಸಿಯಂಗೆಯ್ದಿಸಿಮೂರನಾಡಜನಮಿಾ ಪೆಣ್ಬುಯ್ಯಲಂ ಹಾ ಸುಷೇ
ಣನೃಪ ಹಾ ನೃಪ ನೀಱನೆಂದಬಲೆ ಬಾಯ್ವಿಟ್ಟಟ್ಟು ಹುಯ್ಯಲ್ಚಿದಳ್ ||

ಪರವೆಣ್ಗಾಟಿಸಿ ಕಳ್ದ ಕಾತರನನಾರುಂ ಕಾಣರಾರುಂ ಕನ
ಲ್ದರಿದಿಕ್ಕರ್ಧರೆ ಸುಂಗದೇಂ ನೋಣೆಯರೀದಿಗ್ದೇವಿಯರ್ತಿನ್ನರೇ |
ಗಿರಿಗಳ್ಬೆಂದೆನನಾಥೆಯಾದೆನೆನಗಿನ್ನಾರಾಸೆಯಾರ್ಕಾವರಾ
ರ್ಶರಣೆಂದಾ ಕಳಕಂಠನಾದೆ ಬಸಿಱಂ ಬಾರೇಟ್ವಿಸಂ ಮೋದಿದಳ್ ||

ಮುನಿಸುಂಟಾದೊಡೆ ಮುಟ್ಟಿ ಮೂದಲಿಸಿ ಬಲ್ಪಿಂ ನಿನ್ನ ಬಾಳಾತನಾ
ತನ ಬಾಳ್ನಿನ್ನ ಕಪಾಲದೊಳ್ಮುಱಿದು ಮುಂತೆಟ್ಟುರ್ವಿದಿನ್ನೊಪ್ಪುವಾ |
ಳ್ತನಮುಂ ಗಂಡರ ಪಿಂದೆ ಕಳ್ವುದರಿದೇ ಸ್ತ್ರೀಬಾಲೆಯುಂ ಬೂತೆ ಪಾ
ೞ್ಮನೆಯೊಳ್ ನಾಯ್ ಘೃತಭಾಂಡಮಂ ತೆಗೆವವೊಲ್ಕಳ್ದೊಯ್ವು-
ದಾಳ್ವಾಟಿಯೇ ||

ಬಿದಿಯೆಂಬ ಮದಗಜಂ ನೃಪ
ಸದನಸರೋವರದೊಳಿಟಿದು ಸೆಳೆತಂದು ವನಾಂ |
ತದೊಳಿಕ್ಕಿದ ಬಾಳಮೃಣಾ
ಳದವೊಲ್ ಸತಿ ಕೊರಗಿ ಕಣ್ಗೆ ಕರಮೆಸೆದಿರ್ದಳ್ ||

ವ || ಅಂತು ಸಾರ್ದು ತನ್ನೊಡವಂದು ಬಾಗಿಲೊಳ್ ನಿಂದ ಪರಿಜನಮುಮಂ ಕೆಲಬಲದೊಳಿರ್ದ ಪಸಾಯಿತರುಮಂ ಪರಿಹರಿಸಿ ಕೃತಕವಿನಯೋಪಚಾರ ಮೆಸೆಯೆ ಚಂಡಶಾಸನಂ ಸುಸಂದಾದೇವಿಗಿಂತೆಂದಂ

ನಯದಿಂ ನಿನ್ನೊಳೊಡಂಬಡಂಪಡೆಯದಿಂದೌತ್ಸುಕ್ಯದಿಂ ತಂದ ಸ
ಲ್ಗೆಯ ನೀಂ ಮನ್ನಿಸು ಕಾಮಿ ಕಣ್ಣಿಱಿವನಲ್ಲಾತ್ಮಂ ಗಂಡುದೊಳ್ತೆನ್ನರಾ |
ಣಿಯ ವಾಸಂ ಪರಿಚಾರಕಾದಿ ನಿನಗೀಸಾಮ್ರಾಜ್ಯ ಲಕ್ಷ್ಮೀಸುಖೋ
ದಯದೊಳ್ವಲ್ಲಭೆಯಾಗಿ ನೀನಿರು ದಲಂ ನೀಲಾಬ್ಜಲೋಲೇಕ್ಷಣೆ ||

ಸುಡಿಯಲೊಡಂ ಮಿಂ(?) ಪೇೞ್ವಡ
ಸುಡಿಯಂ ತನ್ನಿದಿರೊಳಾಖಳಂ ಕಡೆಗಣ್ಣಿಂ।
ಕಿಡಿಸೂಸೆ ಘೃತಾಹುತಿಯಂ
ಪೊಡೆವ ಶಿಖಿಜ್ವಾಲೆಯಂತೆ ಬಾಲೆ ಕನಲ್ದಳ್ ॥

ವ॥ ಆಕೆಯಿಂತೆಂದಳ್

ಮಾವಿನ ಕೊಂಬಿನೊಳ್ನಲಿದು ನರ್ತಿಪ ಕೋಗಿಲೆ ಪತ್ತಿದಂಟಿನಿಂ
ಬೇವಿನ ಕೊಂಬಿನೊಳ್ ನಲಿವುದೇ ಪ್ರಿಯನಿರ್ದವೊಲಪ್ರಿಯರ್ಗೆ ಸಂ॥
ಭಾವನೆಗೆಯ್ವರೇ ಸತಿಯರೇಂ ಗಡ ವೀರನ ತೋಳ ಬಾಳುಮಂ
ನಾವಿದ ಬಾಳುಮಂ ಸಮನೆ ಪತ್ತಿಪ ಸಾಣೆಯೊ ಮದ್ಭುಜಸ್ರಜಂ॥

ವಸುಷೇಣ ನೃಪನೆ ಕೈವಿಡಿ
ದಸುವಿಂಗೊಡೆಯಂ ಚಿತಾಗ್ನಿಗೊಡೆಯಂ ಒಡಲಿಂ।
ತೆಸೆದೀ ಪಾತಿವ್ರತ್ಯದ
ಮಿಸುಗುವ ಜಸವೆಣ್ಣ ತಲೆಗೆ ತಪ್ಪೆನು ಪುಲ್ಲಂ॥

ವ॥ ಎಂಬುದುಮಾಕುಟಿಲನಾಕೆಯೊಳ್ ತೆಱಪುಗಾಣದೆ ಮುಳಿದು ಮಾಣದೆ ಮತ್ತಮಿಂತೆಂದಂ

ಜಿಡೆ ನಾಂ ನೀಂ ಸಯೆ ಸಾವೆನಲ್ಲದುಟಿಯೆಂ ನೀನೊಲ್ದಡೇನೊಲ್ಲದಿ
ರ್ದೊಡಮೆನ್ನಾ್ನೆರಡಿಲ್ಲದೊಲ್ವೆನದಱಿಂ ಬೇಱಾರಬೇಟಕ್ಕೆ ಬಾಯ್।
ಬಿಡಲಾಱೆಂ ಸೆಱೆಯಿಂದಮೆನ್ನ ಮನೆಯೊಳ್ನೀನಿರ್ದಯೆಂಬಾಸೆಯು
ಳ್ಳೊಡೆ ಸಾಲ್ಗುಂ ಬಟಿಕಪ್ಪುದಕ್ಕೆ ರಣದಿಂದಂಭೋಜಪತ್ರೇಕ್ಷಣೆ॥

ವ॥ ಅಂತು ನೇಸವರ್ೞಡಲೊಡಂ ಮುನ್ನೆ ಮುನ್ನೆ ಮೂಡಿರ್ದ ವಿರಹಪರಿತಾಪಂ ತೀರದೆಯುಮೇತಱೊಳಮಾತಳೋದರಿಯನೊಡಂಬಡಿಸಲ್ಬಾರದೆಯುಮಾಕಿತವಂ ತನ್ನ ಕೈತವದೊಳ್

ಪತಿಯಿರೆ ಪಿಂಗದಾಸೆ ಮನದೊಂದಟಿಯಾಸೆಯಿನೆನ್ನನೊಲ್ಲಳೀ
ಸತಿಯೀವಳಂ ಮರಳ್ಚಿದಪೆನೆಂದು ಬೆಸಂಗುಡೆ ಚಂಡಶಾಸನಂ।
ಪ್ರತಿಬಳಮೆಯ್ದೆ ಕಟ್ಟುದಟಿದಂ ವಸುಷೇಣನೃಪೇಂದ್ರನೆಂಬ ಸಂ
ಗತಿಯನೊಡರ್ಚಿದಂ ಜನದ ಕಣ್ಬೆರಗಪ್ಪಿನಮಿಂದ್ರಜಾಲಿಗಂ॥

ವ॥ ಆ ವ್ಯತಿಕರಮಂ ಕಂಡು ಸಮ್ಮರಸನಿರುಳಿನ ಕಲಿಯಕಾಳೆಗದೊಳ್ ಮುತ್ತಿದ ಬೀಡಂ ತೊತ್ತಳದುಟಿದು ಪಗೆಯ ಪಂದಲೆ ಕೆಯ್ಗೆವಂದುದಿನ್ನೇನಿನ್ನೇನೆಂದು

ಕೋಟೆಯೊಳಗೆ ಜನಂ ಕೋಟಿಕೆಱಿದಿಂ ನಾಟಕಂ ನಲಿದು ಬೊಬ್ಬಿಱಿಯುತ್ತಿರೆ
ಸುನಂದಾದೇವಿಯಿರ್ದ ಸೆಱೆವನೆಗೆ ತಾನೆ ವಂದು

ವಸುಷೇಣನೆ ಪತಿಯೆನಗೆಂ
ದು ಸುನಂದೆ ಸಿಡಿಲ್ವೆಮಾೞ್ಪ ಸೋವಡಿಕೆಯನೀ |
ಬಸಿವ ತಲೆಗೆನುತುಮಿಾಡಾ
ಡಿಸಿದಂ ಮಾಯಾವಿ ಪತಿಯ ಮಾಯದ ಶಿರವಂ ||

ವ || ಅಂತು ಶಂದಿಟಿಪಿದ ಶಿರಮುಮಂ ಕಳ್ದು ತಱಿದ ವಲ್ಲಭನ ಮಣಿಮಕುಟ ಕೇಯೂರಮಂಡಳಾದೀಪನಮಂಡನಮುಮಂ ಪೇರುರದೊಳೋರಂತೆ ಮೆಱೆವ ತೋರಮುತ್ತಿನ ಹಾರಮುಮಂ ಕಾಣಲೊಡಂ

ಹೃದಯದೊಳಿರ್ದ ವಲ್ಲಭನನಾಕ್ಷಣಭೀತಿಯಿನೀಕ್ಷಿಪಂತೆ ಮು
ಚ್ಚಿದುವಲರ್ಗಣ್ ಪೊಣರ್ತಡವಿ(ಸಿ ?) ನೋಡುವವೋಲ್ಕುಚಮಧ್ಯದಲ್ಲಿಗಾ |
ದುದು ಕರಪಲ್ಲವಂ ಸರಮನಾಲಿಸುವಂತೆ ಮೊಗಂ ಮಲಂಗಿತಂ
ಗದೊಳಿರ್ದ ಶೂನ್ಯಮಾಗಱಿಸುವಂತಸು ಪೋಯ್ತುಸಿತಾಬ್ಜ ನೇತ್ರೆಯಾ ||

ಬಟಿಯಟ್ಟಿ ಬಂದು ಮುನ್ನಂ
ಪುಟುವಗೆಗೊಳಗಾದಳೆಂದು ಸಾವಾಸಿಗಳಂ |
ಕಟಿಪಿದನೆಲ್ಲಂ ತಲೆಯುಂ
ಬಟಿಯಟ್ಟಿದನೆಂದು ಪೋದುದಸು ಶಶಿಮುಖಿಯಾ ||

ಇನಿಯಸಿರೆ ನೋಡ ಮತ್ತೊ
ರ್ಬನ ಕಣ್ಗಂ ಬಗೆಗವೊಪ್ಪಿದಪುದು ಸುಡಲೀ |
ತನುವನಿದನೆಂದು ಜೀವಂ
ಮುನಿದಂತಿರೆ ಬಿಟ್ಟು ಪೋಯಿತಸು ಶಶಿಮುಖಿಯಾ ||

ವ || ಆಗಳಾ ವ್ಯತಿಕರಮಂ ಕಂಡತಿಚಕಿತಹೃದಯನುಮಾಕುಳಿತವಿಳೋಕನುಮಾಗಿ

ಸ್ಮರನೊಳ್ದಾಯಿಗನಾಗಿ ಬೆಂದ ವಿಧಿಯೊಂದಂ ಮಾಡಿದಂ ಕೂಡುವೆಂ
ಬೆರಗಿಂದಿಂದಿದನಿಂತು ಮಾಡೆ ಮರಣಂ ಮೂಡಿತ್ತು ಹೋ ಬೆಂದೆನಾ |
ಸುರಿದೆನ್ನಂದಿದೆನೆಂದು ಬಂದು ಭರದಿಂ ತಚ್ಕೈಸೆ ತಳ್ತಾಂತು ತ
ತ್ತರುಣೀಗಾತ್ರದ ಸೋಂಕು ಸಮ್ಮನಿಸೆ ಮೂರ್ಛಾಪನ್ನನಾದಂ ಖಳಂ ||

ವ || ಅಂತು ಮೂರ್ಛೆಯಿಂದೆಚ್ಚತ್ತು ಬೆಚ್ಚನೆ ಸುಯ್ದು ಬೆದೆ ಬೆದೆ ಬೆಂದು ನೊಂದು ನಿಂದಿಸಿ ಕೊಂಡು ಮಾಣದೆ

ನೋಡಿ ಕನಲ್ದು ಬಾಯ್ಮುಸಿದು ಪೊಸದಿನೇಕೆಲೆ ದೇವಿ ನಿಮ್ಮನಂ
ನೋಡುವೆ ಸಾವಿನಿಂ ಸರಸವಾಡುವರೀ ಮಱುಮೆಯ್ಯೊಳಾದೊಡಂ |
ಕೂಡದೆ ಮಾಣೆನಬ್ಜದಳಲೋಚನೆ ನಿನ್ನೊಡನೆಂದು ಪೆಯ್ಗೆ ಮೆ
ಯ್ಗೂಡುವೆ ಧೂಮಸೌಧಗೃಹದೊಳ್ ಶಿಖಿಪಲ್ಲವರಾಗತಲ್ಪದೊಳ್ ||

ವ || ಎಂದು ಬಾಯಟಿದು ಪಟಯಿಸಿ ಬಸಮಟಿದಸುವೊಱೆಯಾಗಿ ಮನಮಸಱಿದು ಕಳವಳಿಸಿ

ಎನಗಿನ್ನೋಲಗಸಾಲೆಯೇಕಿದು ವಿಮಾನಂ ನಂದೆಯುಂ ಲೋಲಲೋ
ಚನೆಯುಂ ಕುಳ್ಳಿರಿಸಿಲ್ಲಿ ಕೂಡೆ ಬಟಸಲ್ವಂತಃಪುರಸ್ತ್ರೀಯರಾ |
ಳ್ತನಮಂ ತೋಱುವ ಲೆಂಕರೊಳ್ನುಡಿಯ ವೇಟ್ಪಿದ್ಯಾಜಸಂಬರ್ಕ ಚಂ
ದನಗಂಧಾವಿಧದಿಂದಮೆನ್ನ ವಿರಹಜ್ವಾಲಾಗ್ನಿಯಂ ನಂದಿಪೆಂ ||

ವ || ಎಂದು ತನ್ನ ಲಕ್ಷ್ಮೀಭವನಮೆನಿಸುವುಪರಿಮಂಡಪಮನೆ ಚಿತ್ರಕ್ಕೆ ಮಾಡಿ ಸುನಂದಾದೇವಿಯುಂ ತಾನುಮೇಕಾಸನದೊಳ್ಕುಳ್ಳಿರ್ದು ರಾಣಿಯವಾಸದ ಪೆಂಡವಾಸದ ಭಾಷೆಯ ಲೆಂಕರ ಭಾರತಿಕನಿಕರದೋಲಗದ ಕೇಳೀವಿಳಾಸಮಂ ಕಳಗೆ ತಗುಳ್ಚಿದ ಹುತವಹಜ್ವಾಲಾಕಲಾಪಮಂ ಮೆಚ್ಚಿದಂತೆ ಮೂರ್ಚ್ಛೆ ಕೊಳ್ವಿನಮೊಡನಟಿಯಲ್ಪರಿಚ್ಛೇದಿಸಿದ ಕುಲಸ್ವಾಮಿಯವಸಾನಸಮಯಮಾಗೆ

ಊದುವ ಕಾಳೆ ವೀರವಱೆಯೆತ್ತುವ ಪುಷ್ಪಕಮೊರ್ವರೊರ್ವರಂ
ಮೂದಲೆಗೆಯ್ವ ಸೂಳ್ನೆರೆದವಂದಿಗೆ ಸಬ್ಬವಮಪ್ಪ ಭಾಗವೊ |
ಲ್ದೋದಿಪ ಗಾಹೆ ಪಾಡೆ ಪದಮಂ ಪೊಸಮಾವಿನ ಹೊನ್ನ ಪಚ್ಚಮಂ
ದಾದುರಿ ಚಂಡಶಾಸನನ ಬಾಲೆಯ ಲೆಂಕರ ಕೇರಿಕೇರಿಯೊಳ್ ||

ವ || ಅನ್ನೆಗಮಿತ್ತಲ್

ವಸುಷೇಣಂ ಲಗ್ಗೆ ಮಾಡಲ್ಮೊಗಸಿ ಪೊಗಿಸೀ ದುರ್ಗಕ್ಕಿಭವ್ರಾತಮಂ ಪ
ಣ್ಣಿಸಿ ವಾಹವ್ಯೂಹಮಂ ಪಲ್ಲಣಿಸಿ ಸುಭಟರಂ ಕೈದುಕೊಳ್ವಂತಿರಾಳೋ |
ಚಿಸಿ ರಾಜಾವಾಸದಿಂ ತಾಂ ಪೊಱಮಡುತಮಿದೇಂ ಕೊಟೆಯೊಳ್ಕಾಮಿನೀವೀ
ರಸಮೂಹೋದ್ರೇಕಶೋಕಾಕುಳ ಬಹಳರವಂ ತಿಣ್ಣಮಾಯ್ತೆಂದನಾಗಳ್ ||

ಚರನೆಯ್ತಂದೊರ್ವನಾ ವೃತ್ತಕಮನುಸಿದೊರ್ಡುರ್ವೀಶ್ವರಂ ಪ್ರಾಣನಾಥಾ
ಮರಣೋದಂತಾಭ್ರವಹ್ನಿಸ್ಫುಟಿತಹೃದಯನುಚ್ಛಾಶ್ವಸನಿಶ್ವಾಸ ಮೂಥಾಂ |

ತರಿತಂ ಬಾಷ್ಪಾಂಬುನಿಷ್ಪಂದಿತನಯನಯುಗಂ ಖೇದದಿಂ ಕೀಲಿಸಿರ್ದ
ರ್ಕರುವಿಟ್ಟಂತಿರ್ದರ್ವಿಟ್ಟರ್ಪರೆದು ಕರಿಯಮೇಲಿಟ್ಟರೆಂಬಂತಿರಿರ್ದಂ ||

ವ || ಅಂತು ಕಿಱುದು ಬೇಗಮಿರ್ದಂತೆ ತಾನುಂ ತನ್ನ ತಾನಱಿದು ಬಾಯಟಿದಾ
ಕಾಶವಚನನಿಂತೆಂದಂ

ಆನಟಿದೆನೆಂದು ಪುಸಿದೊಡೆ
ಮಾನಿನಿ ನೀಂ ಕಟಿದೆ ನಿನ್ನ ಸಾವನೆ ಕಂಡಿಂ |
ತಾನುಟಿದೇಂ ನಿರ್ಲಜ್ಜರ್
ದೀನಕೃಪಾಣರ್ ಕೃತಘ್ನರಾರೆನ್ನಿಂದಂ ||

ವ || ಅನಂತರಂ ಪಾರ್ಷ್ಣಿಕಗ್ರಾಹಕನಾಗಿ ತನ್ನಂ ನೆಮ್ಮಿಸಿಕೊಂಡಿರ್ದ ದಯಿತ-
ಸಾಮಂತನೊಳಿಂತೆಂದಂ

ಇನಿಯಳ್ ಪೋದಬಟಿಕ್ಕಮೆನ್ನಿರವು ತಾರಾಮಂಡಲಂ ಪೋದ ಲೋ
ಚನಮಿರ್ಪಂತೆ ಸುಗಂಧ ಪೋದ ಕಳಿವೂವಿರ್ಪಂತೆ ತೀವಿರ್ದ ಜೀ |
ವನಮೆಲ್ಲಂ ನೆಱೆಪೋದ ಹೊಟ್ಟುಗೆಱೆ ತಾನಿರ್ಪಂತೆ ದೈನ್ಯಕ್ಕೆ ಭಾ
ಜನಮಿರ್ದೇನಸು ಪೋದ ಬಾಷ್ಪೆಣಸಿದರ್ಕಾನಿರ್ದೊಡೇಂ ಬೀಡ್ದೊಡೇಂ ||

ವ | ಅಂತುಮಲ್ಲದೆಯುಂ

ಇದಱೊಳ್ವಲ್ಲಭೆ ಕಾದಿ ಕೊಳ್ವ ಧನಮಾಪ್ರಾಣೇಶ್ವರೀರತ್ನಮಿ
ಲ್ಲದ ಬಾಳ್ಗೋಟೆ ಗಡೇಕೆ ಕೋಟಲೆಗಳೇಳಲ್ಕಾ ಶತ್ರುಸಾಯಲ್ಕಡಂ |
ಗಿದಪಂ ತಾಂ ಗಡ ಕೊಲ್ಪುದಾರನಕಟೇಬೇಳಂಬಮಿನ್ನೇಕೆ ಸಾ-
ಯದೊಡಂ ತೀರದೆ ಕಾಯಮಂ ತೊಱೆಯಲಿನ್ನುಂ ರಾಜ್ಯದೊಳ್ಬಾಳ್ವುದೇಂ ||

ಆಂಡಯ್ಯ: ಕಬ್ಬಿಗರ ಕಾವಂ

ಕಾವುನ ಸೈನ್ಯ

ಅರಗಿಳಿವಿಂಡು ವಾರುವದ ಮೋಹರವಾಱಡಿವಿಂಡು ಬಿಲ್ಲ ಬೀ
ರರ ಪಡೆ ಕೊಂಚೆಪಿಂಡು ಪಲವಡ್ಡಣದೊಡ್ಡಮಳ್ವಕ್ಕಿಪಿಂಡು ಮೆ-
ಯ್ವೆರಸುವ ಕೊಂತಗಾಱರಣಿಯಾಗಿರೆ ಬಂದು ಬಸಂತನೊಲ್ದು ಸಂ
ವರಣೆಯನೆಯ್ದೆ ತೋಱಿ ತಲೆದೂಗಿಸಿದಂ ನನೆವಿಲ್ಲಬೀರನಾ

ಅಂತೊಯ್ಯನೆ ಮುಂದೆ ಮೋಹರಂಬಡೆದು ತಳರ್ವ ಪುಸಿವಡೆಯಲ್ಲಿ—

ಗಲ್ಲದ ಸೊರ್ಕುನೀರ ಪೊನಲಿಂ ಸೆಲೆವೆರ್ಚೆ ಕಡಲ್ ತುಳುಂಕೆ ಬೆ
ಟ್ಟೆಲ್ಲಮನೌಂಕುವಂತಿಡುವ ಕಾಲ್ವೊಱೆಯಿಂ ನೆಲನಾಡೆ ಬೇಗದಿಂ
ನೆಲ್ಲಿಯ ಕಾಯ್ಗಳಂ ಬಡಿಗೆ ಕೊಂಡವೊಲೆತ್ತಿದ ತೋರಹತ್ತದಿಂ
ಜಲ್ಲನೆ ತುಂಬಿಗಳ್ ಕೆದಱೆ ಬಂದುವು ಬಿಂಕದಿನಂಕದಾನೆಗಳ್

ತೊಳಗುವ ಪೊನ್ನ ಪಲ್ಲಣದ ಸುಣ್ಬೆಳಗಾಗಸಮಂ ಮುಸುಂಕೆ ಪ
ಜ್ಜಳಿಸುವ ಪಕ್ಕರಕ್ಕೆಗಳ ಗೆಜ್ಜೆಯ ಬಲ್ಲುಲಿ ನೀಳ್ದು ದಿಕ್ಕಿನೊಳ್
ಬಳಸೆ ಕೊಡಂಕೆಯೊಳ್ ಪೊಳೆವ ಚೌರಿಯ ಗಾಳಿಯ ಕೋಳ್ಗೆ ಬೆಟ್ಟುಗಳ್
ತಳರೆ ಪೊಗಪ್ತೆಯುಂ ತಳೆದ ತೇಜಿಯ ತಟ್ಟು ತೆರಳ್ದುದೆತ್ತಲುಂ

ಪೂಡಿದ ವಾರುವಂಗಳ ತೆರಳ್ಕೆಗೆ ನೇಸಱ ತೇರ ತೇಜಿಗಳ್
ಪಾಡೞಿದಿರ್ಪಿನಂ ಪರಿವ ಗಾಳಿಯ ಕೋಳ್ಗೆ ಕೆಳರ್ತು ಬೆಟ್ಟುಗಳ್
ಕೂಡೆ ಸಡಿಲ್ವಿನಂ ಪೊಡೆವ ಬೀರರ ಜಂಕೆಗೆ ಗೊಂಟಿನಾನೆಗಳ್
ಕೋಡುವಿನಂ ಕಡಂಗಿ ಪರಿತಂದುವು ತೋರ್ಕೆಯ ತೇರ್ಗಳೋಳಿಯಿಂ

ಸಿಡಿಲ ಪೊಡರ್ಪನೇೞಿಸುವ ಸಿಂಗಮುಸಂಜೆಪ ರಕ್ಕಸರ್ಕಳಂ
ನಡುಗಿಪ ಮಾರಿಯುಂ ಪೊಸದು ಮುಕ್ಕುವ ಮಿಬ್ಬುವಸೊತ್ತಿ ಸೊರ್ಕಿನಿಂ
ಪಿಡಿವ ಕಡಂಗಿ ನಿಂದ ಜವನಂ ಮುಱಿದಿಕ್ಕುವ ತಕ್ಕನಾಂತು ಮುಂ
ಗುಡಿಯೊಳೆ ಬಂದುದಂದು ತುಱಿಲಾಳ್ಗಳ ಬಲ್ಲಣಿ ಗೆಲ್ಲವೆಂಬಿನಂ

ಕುದುರೆಯ ತಟ್ಟುಗಳ್ ನೆರೆದ ಒಲ್ದೆರೆಯುಂ ಪಿಡಿದಿರ್ದ ಬಾಳ್ಗಳು
ಣ್ಮಿದ ನಿಡುವಾಳೆಯುಂ ಬಿಳಿಯ ಸತ್ತಿಗೆಗಳ್ ನೊರೆವಿಂಡನಾನೆಗಳ್
ಕೆದಱದೆ ಹಂತಿಗೊಂಡ ನೆಗಟಂ ಪೊಸತೇರ್ ಪಡಗಂ ನೆಗಟ್ಟೆ ಪೆ
ರ್ಚಿದ ಕಡಲೆಂಬಿನಂ ಮುಸಗಿ ಬಂದುದು ಪೆರ್ಬಡೆ ಕರ್ಬುವಿಲ್ಲನಾ

ಅಂತು ಜಿಡಂಗುವೆತ್ತು ನಡೆವ ಪುಸಿವಡೆಯ ಪೆಱಗೆ ಪಡೆಯ ಪಾಡಿಯುಂ ಕೂಡಿ ಕೊಂಡು—

ಮಿಳಿರ್ವ ಪೊಸದಳಿರೆ ಪಟಯಿಗೆ
ಗಿಳಿಗಳೆ ಪೂಡಿರ್ದ ಕುದುರೆ ತೆಂಗಾಳಿಯೆ ಕ
ಣ್ಗೊಳಿ ತೇರೆಸಗುವನೆನ ಬಂ
ದೆಳಮಾವಿನ ತೇರನೇಱ ನಡೆದಂ ಕಾವಂ

ತರದಿಂದೆತ್ತಿದ ಕೆಂದಾ
ವರೆಗಳ್ ಕೆಂಗೊಡೆಗಳಂದಮುಂ ಪಡೆವಿನಮಾಂ
ತರಸಂಜೆಯೆಂಬ ಸಾವಂ
ತರ ಬಳಗಂ ಬಳಸೆ ಬಂದನಂದು ಬಸಂತಂ

ನನೆಯೆಸಳಂದವಾದ ಗುಟಮುಂ ಪೊಳೆಯುತ್ತಿರೆ ನೀಳ್ಪುವೆತ್ತು ಪೂ
ವಿನ ಪೊಸಟೆಕ್ಕೆಯುಂ ಮಿಳಿರೆ ಪಕ್ಕದ ಕೋಗಿಲೆಯೆಂಬ ಗಂಟೆಗಳ್
ದನಿಗುಡೆ ಕೈಯ ಕೋಲ್ಗೆ ಕಡುಗೂರದವರ್ ದೆಸೆಯುತ್ತು ಜೆಲ್ಲೆ ಮೆ
ಲ್ಲನೆ ನಡೆತಂದುವಂದು ಪೊಸಮಾವೆನಿಪುಗ್ಗಡದಗ್ಗದಾನೆಗಳ್

ಕೆಂದಳಿರ ಪಕ್ಕರಕ್ಕೆಗ-
ಳಂದಂಬಡೆದೆಸೆವ ಪಲ್ಲಣಂಗಳ ಸೊಂಪುಂ
ಸಂದಿಸೆ ನೀಳ್ಪಿಂ ನಡೆದುದು
ಸಂದರಗಿಳಿಯೆಂಬ ಕುದುರೆಗಳ ದಟವೆತ್ತಂ

ಮಿಸಗುವ ಕೊಂಬಿನಚ್ಚು ಕಿಱುಗೊಂಬಿನ ತಳ್ತರಗೀಲ್ ಕವಲ್ತ ಕೊಂ
ಬಿನ ಮಡವಡ್ಡವಂದ ಸಳಿಗೊಂಬಿನ ಪತ್ತುಗೆ ಜೋಲ್ವ ಬಳ್ಳಿಗೊಂ
ಬಿನ ಬಳೆ ತೋರಗೊಂಬಿನ ನೊಗಂ ನಿಡುಗೊಂಬಿನ ಮೂಂಕು ಕಣ್ಗೆ ಚೆ
ಲ್ವಿನೆ ನಡೆತಂದುವಂದಸುಗೆಯೆಂಬ ನೆಗಟ್ತೆಯ ತೇರ್ಗಳೆತ್ತಲುಂ

ಕಿಱುಮುಗುಳ ಗೆಜ್ಜೆಯಿಂದಂ
ಮಿಱುಗುವ ಕೆಂದಳಿರ ಹರಿಗೆ ಬಗೆಗೊಳೆ ಬಂದ

ತ್ತುಱದೆ ವಱುಗೋಗಿಲೆಗಳಿಂ
ಬಱಕೆಯು ಪೆಸರ್ವೆತ್ತ ಹರಿಗೆಕಾಱರ ತಂಡಂ

ಪಿಡಿದಲರ್ವಿಲ್ಲುಂ ಮೆಲ್ಲಿಸ
ಳುಡಿದೊವಲುಂ ಮಿಸುಪ ಸನೆಯ ಮೊನೆಯಂಬುಂ ನೇ
ರ್ಪಡೆ ಮೇಲೆ ಮೇಲೆ ನಡೆದುದು
ಗಡಣದೆ ಮಱದುಂಬಿಯೆಂಬ ಬಿಲ್ಲಣಿಬೀರರ್

ಕಡು ನಿಮಿರ್ದು ಪೊಳೆವ ಪೊಸಪೂ
ಗುಡಿಯೆಂಬಗ್ಗಳಿಕೆವಡೆದ ಸಬಳಮನೊಲವಿಂ
ಪಿಡಿದು ಬರುತಿರ್ದುದೆತ್ತಂ
ಕಡು ಸೊರ್ಕಿದ ತುಂಬಿಯೆಂಬ ಡೊಂಕಣಿಕಾಱರ್

ತಪಸ್ವಿಯ ಮುಂದೆ ಕಾಮನ ಶರಣಾಗತಿ

ವ || ಅಂತು ನಡೆತರ್ಪ ಪಡೆವೆರಸು ಸಿಚ್ಚವಯಣಂ ಬರುತಿರ್ಪಾಗಳ್ ; ಪಲವುಂ ಪರಿಯ ಪಕ್ಕಿಗಳ ಪೆರ್ಚಿದ ಸರಂಗಳಿಂ ಹರಣಂಬಡೆದಂತೆ ಪರಿವಡೆದು ತಿಂತಿಣಿವಡೆದ ಪೇರಡವಿಯೊಳ್ ಪೊಗಟ್ಟೆವೆತ್ತು

ತುಱುಗಿ ನಡೆವ ಮುಗಿಲ ನಡುವೆ ಪೊಳೆವ ಮಿಂಚಿದೆಂಬಿನಂ |
ಮಿಱುಪ ತೆರೆಗಳೆಡೆಗಳೊಳಗೆ ಸುಳಿವ ಮೀನ್ಗಳಾವಗಂ ||
ಮೆಱೆವ ತೊಱೆಯ ತಡಿಯ ತಳಿರ ಮನೆಗಳಲ್ಲಿ ಸಿಚ್ಚಮುಂ |
ಬಱದೆ ಮುಳಿದು ತಿಳಿಪೆ ತಿಳಿದು ನೆರೆವ ಬೇಡವೆಣ್ದಿರಿಂ ||

ವ || ಗಾಡಿವಡೆದ ಕಾಡಂ ಪಿಂದಿಕ್ಕಿ ಮೆಲ್ಲಮೆಲ್ಲನೆ ನಡೆವಾಗಳ್

ಕಟ್ಟಿದ ತಂತಿಯಂ ಮಿಡಿದು ಗೊಂದಣದಿಂದರುಹಂತನೇಟ್ಗೆಯಂ |
ನೆಟ್ಟನೆ ಪಾಡಿ ಸೋಲಿಸುವ ಸಗ್ಗದ ಪೆಣ್ದಿರ ನುಣ್ಚರಕ್ಕೆ ಮೆ ||
ಯ್ಗೆಟ್ಟೆಳವಲ್ಲೆಗಳ್ ಪಲವುಮಾಲಿಸೆ ಮೆಯ್ಸಿರಿವೆತ್ತ ತಪ್ಪಲಿಂ |
ಬೆಟ್ಟಮದೊಂದು ದಿಟ್ಟಿಗೆಡೆಯಾದುದು ತೊಟ್ಟನೆ ಕರ್ವುವಿಲ್ಲನಾ ||

ಅಂತು ನೆಗಟ್ದಿರ್ದ ಬೆಟ್ಟಂ |
ಸಂತಸದಿಂ ಸಿಂದು ನೋಡುತಿರೆ ಬಿಸ್ನಪವೆಂ ||
ದಿಂತೆಂದಂ ಕೈಮುಗಿದು ಬ |
ಸಂತಂ ಜತಿಯೊರ್ವನಿಲ್ಲಿ ನೆಲಸದೆ ಮಾಣಂ ||

ವ|| ಎಂಬನ್ನೆಗಂ

ಕೊಲ್ಲದುದೆ ದಿಟದಿನಱಸಿಂ-|
ದೆಲ್ಲಾ ಪರಿಯಿಂದೆ ಪೇಲ್ದ ಪಿರಿಯರ ನುಡಿಯುಂ ||
ಬಲ್ಲಿತೆನೆ ನಂಬಿ ಬೇಂಟೆಯ |
ನೊಲ್ಲದೆ ಬಿಟ್ಟಿರ್ದ ಬಿಯದರೊಪ್ಪಿದರದಱೊಳ್ ||

ಮಡುಗಳೊಳಗಲರ್ದ ಪೂವಂ |
ಕಡುನಲವಿಂ ತಿಱಿದು ಬೇಗದಿಂ ಸವಣನ ಮೆ ||
ಲ್ಲಡಿಗೆ ತಲೆದುಡಿಗೆಮಾಡುವ |
ಪಿಡಿಗಳ್ ನೆಗೞ್ದಿರ್ದುವದಱ ತಪ್ಪಲ ಬನದೊಳ್ ||

ತೊಲಗದೆ ಗೆಡೆಗೊಂಡಿರ್ದುವು |
ಸಲೆ ಮುಳಿಸಂ ಬಿಟ್ಟು ನೋಗೆಯುಂ ಪಾವುಗಳುಂ ||
ಪುಲಿಯುಂ ಮಱಿವುಲ್ಲೆಗಳುಂ |
ಕಲಿಸಿಂಗಮುಮಾನೆಯುಂ ಕರಂ ನಲವಿಂದಂ ||

ವ|| ಅಂತು ಮೈಮೆವಡೆದ ಬೆಟ್ಟದ ಮೇಲೆ ಕೈಯೆತ್ತಿ ಪಲರುಂ ಜತಿಗಳ್ ತವಸಿಂಗೊಳಗಾಗಿ

ಬಗೆ ನೊಸಲಲ್ಲಿ ಕೂಡೆ ನಿಲೆ ತಪ್ಪದೆ ಮೂಗಿನ ಚೌಕದಲ್ಲಿ ದಿ |
ಟ್ಟಿಗಳಿರೆ ಮೆಯ್ಯ ಮಣ್ ಕೊರಲ್ಗೆ ಪುತ್ತಿಡೆ ಪರ್ಬಿದ ಬಳ್ಳಿ ಸುತ್ತಲುಂ ||
ಸೊಗಯಿಸೆ ಕೈಯನಿಕ್ಕಿ ಮಿಗೆ ತನ್ನನೆ ತಾನೊಲವಿಂದೆ ಜಾನಿಸು |
ತ್ತಗಲದೆ ನಿಂದನೊರ್ವ ಸವಣಂ ಬಗೆಗೊಳ್ವೆಱ ತಟ್ಟಿತೆಂಬಿನಂ ||

ವ|| ಅವರಂ ಭೋಂಕನೆ ಕಟ್ಟಿದಿರೊಳ್ ಕಂಡು ಕಿಡಿಕಿಡಿಯೋಗಿ ಕರ್ವುಎಲ್ಲ ನಿಂತೆಂದಂ—ಇನ್ನೆಗಮೆನಗಿದಿರಾಗಿ ಮಲೆದು ಪೋಗದೆ ನಿಲ್ವ ತವಸಿಗಳ ನೊರ್ವರುಮಂ ಕನಸಿನೊಳಂ ಕಂಡೆನಿಲ್ಲ, ಸವಣನೊರ್ವನೆ ತೊಲಗದಿದಿರಾಗಿ ನಿಂದಂ ಇದರ್ಕೆ ತಕ್ಕುದಂ ಮಾೞ್ಪೆನೆಂದು ಕರ್ವುಎಲ್ಗೆ ಕೈಯಂ ನೀಡೆ ಬಸಂತನಿಂತೆಂದಂ:—

ತನಗೆ ಸವನಪ್ಪವಂ ಪೊಣ |
ರ್ದನೆ ಕಾದುವುದಜ್ಜನಪ್ಪವಂಗೆಱಗುವುದೆಂ ||
ಬಿನಿತೆ ವಲಮುರಸುಗಾದೆಗ |
ಳನುವಂ ನೀನಱಿದು ಬಿಲ್ಗೆ ಕೈನೀಡುವರೇ ||

ಪಟುವಗೆಗಳಾಱುಮಮಂ ಗೆ |
ಲ್ದುಳವಿಂ ಕೈಯಿಕ್ಕಿ ಸಿಂದ ಕಲಿಯೆಂದುಂ ತ ||
ನ್ನೊಳಗುಂ ಪೊಱಗುಂ ತೋಱದ |
ಬಳಿಯಂಗೆಱಗಿರ್ದು ಬಾಟ್ಟುದೀ ಮೂಲೋಕಂ ||

ಕಿಱುಕುಳಸೆಂದೇಟಿಸಲೀ
ತೆಱನಲ್ಲವೆ ಮುಂದೆ ನಿಂದ ಸವಣನ ರೂಪೇ ||
ತಱ ಮಾತೊ ! ಗಂಡುತನಮಂ
ಮೆಱೆ ತಿಸುಳಿಯೊಳೆಱಗು ಸಿಱಿಯವರ್ಗೆಳೆಯೊಡೆಯಾ ||

ವ || ಎನೆ ಗದಗದನೆ ನಡುಗಿ ಮುಂದೆ ತಿಸುಳಿಯುಂ ಗೆಲ್ವುದರ್ಕೆ ಮುಡಿಗಿಕ್ಕುವಂತೆ ನಿಡುಗೈಗಳಂ ಮುಡಿಗಿಕ್ಕಿ ನಡೆದು ಅಂತುಮಲ್ಲದೆಯುಂ

ಉಱದಟಲಿಂದಮಾತವಸಿಯಂ ಮುಳಿದೆಚ್ಚೊಡೆ ಕರ್ವುವಿಲ್ಲು ತಾಂ |
ಮುಱಿಯದೆ ಪೂವಿನಂಬು ಕರಿಕೇಟದೆ ತುಂಬಿಯ ನಾರಿ ಜೇಗದಿಂ ||
ಪಱಿಯದೆ ತನ್ನ ಸಚ್ಚಿ ಸೆಲರೊಯ್ಯನ ಜಾಱದೆ ಒಂದ ಮಾವು ಬೀ |
ತೊಱಗದೆ ಗಂಡುಗೋಗಿಲೆಯ ಸೊರ್ಕೊಳಸೊಱದೆ ಸ್ಮತೆ ಪೋಕುಮೇ ||

ಷಡಕ್ಷರಿ : ಶಬರಶಂಕರ ವಿಳಾಸಂ

ಕಿರಾತಾರ್ಜುನರ ಸಂವಾದ

ಕೆಡೆ ಕೆಡೆಯೆಂದಾರ್ದೆಚ್ಚಂ
ಘುಡುಘುಡಿಪ ಮಹಾವರಾಹನಂ ಕೂರ್ಗಣೆಯಿಂ
ಕಡುಗಲಿ ಪಾರ್ಥಂ ನೆಱಿಸಂ
ನಡೆ ಗೋಣಡಿಗೊಂಡು ಪಂದಿ ಕೆಡೆದತ್ತಾಗಳ್

ಜವದಿನಲ್ಲಿಗೆ ಬಂದು ಶಂಕರನೆಂದನೀ ಕಿಟಿಯೆಮ್ಮದಾಂ
ತವಿಸಿದೆಂ ತೆಗೆಯೆಂದು ಭೂತಗಣಕ್ಕೆ ಪೇೞ್ವುದುಮಾಲಿಸು
ತ್ತ ವಿಕಲಂ ಕೆಡೆದತ್ತಿದೆನ್ನಯೆ ಬಾಣದಿಂ ಕಡೆಸಾರ್ ಬಿಡೆಂ
ದವನನೀಶ್ವರನೆಂದು ಬಲ್ಲನೆ ಪಾರ್ಥನೊತ್ತಿ ಕೆರಳ್ಚಿದಂ

ಮತ್ತೆಮಿಂತೆಂದಂ

ಎಲೆ ಶಬರ ಕಾಡ ಬಡನರಿ
ಮೊಲ ಪುಲ್ಲೆಗಳಲ್ಲಿ ನಿನ್ನ ಸಾಹಸಮುಂ ದೋ
ರ್ಬಲಮುಂ ಮೆಱೆಗುಮದಲ್ಲದೆ
ಚಲದಂಕನೊಳೆನ್ನೊಳೆಂತುಮೇಂ ಮೆಱೆದಪುದೇ

ಬೇಡ ನಿನಗೇಕೆ ಸಾಹಸ
ದಾಡಂಬರಮೆನ್ನೊಳಾಹವಕ್ಕನುಗುಣನಂ
ಜೋಡಿಸು ನಿನಗುಳ್ಳೊಡೆಯನಂ
ನಾಡಲದೇಂ ತೋರ್ಪೆನೆನ್ನ ಸಾಹಸದಿರವಂ

ಕರಿ ಕೇಸರಿಯುಂ ಕೆಣಕಿದ
ಪರಿಯಂ ಪರುಟವಿಸದಿರ್ ಮದಾಂಧತೆಯಿಂದಾಂ
ತರಿಬಲಬಲಾಹಕಪ್ರ-
ಸ್ಫುರಿತಮಹಾನಿಲನೊಳತುಳಬಳಗಾಂಡಿವಿಯೊಳ್

ಎನೆ ನಸುನಕ್ಕು ಮಾರಾಂಪುವಾತನ ಧೈರ್ಯಮನಾತನೇಡ್ಡ ವೆ-
ತ್ತ್ರಸುಗತಶೌರ್ಯಮಂ ಒಟಿಯೊಳಿರ್ಪಗಜಾತೆಗೆ ಸೂಚಿಸುತ್ತೆ ಪು
ರ್ಜಿನ ಕೊನೆಸನ್ನೆಯಿಂ ಗೊರವ ನಿನ್ನಯೆ ಶೌರ್ಯಮದಿರ್ಕೆ ಖಡ್ಗಮಾ
ಧನುಶರಮೆತ್ತ ನಿನ್ನ ತಪಮೆತ್ತ ವಿಚಿತ್ರಮಿದಲ್ತೆ ಧಾತ್ರಿಯೊಳ್

ವ || ಎಂದೇಳಿದಂಗೆಯ್ದುಟ್ಟು ನುಡಿದ ಕಪರ್ದಿಯ ಕಟೂಕ್ತಿಯಂ ಕೇಳ್ದು,

ವಿಪಿನಚರ ನಿನಗೆ ತಕ್ಕುದು
ಚಪಲಮೃಗವ್ರಜದ ಬೇಂಟೆಯುಜ್ಜುಗಮೆಮ್ಮಾ
ತಪದ ವಿಚಾರಂ ತಕ್ಕದೆ
ವಿಪರೀತಂ ನಿನ್ನ ನುಡಿಯನೊಲ್ವರೆ ಬಲ್ಲರ್.

ಎಂದವಸುಕ್ತಿಯಂ ಗಿರಿಶನಾಲಿಸಿ ತಾಪಸ ಲೇಸನಾಡಿದಯ್
ಕುಂದದೆ ಬೇಂಟೆಯುಜ್ಜುಗಮಿದೆಮ್ಮಯೆ ಕಜ್ಜಮಿದಪ್ಪುದಪ್ಪುದಾ
ವಂದದಿನಿಂತು ನಿನ್ನವೊಲದಾವನೊ ಶಾಂತಿಸಮಗ್ರನುಗ್ರಶೌ
ರ್ಯಂ ದಿಟಮಸ್ತ್ರಶಸ್ತ್ರಧರನಾದ ತಪಸ್ವಿ ಧರಾತಳಾಗ್ರದೊಳ್

ಎಂದು ನುಡಿಯಲೊಡನೆ,

ಕಟಕಿಯಿದೇಂ ಪುಳಿಂದ ಬಿಡು ನಿನ್ನ ದುರುಕ್ತಿಯನೆಮ್ಮ ವೃತ್ತಿಯಂ
ಪಟುತಪಮಾಂತ ತಾಪಸರೆ ಬಲ್ಲರುದಾರಜಟಾಮೃಗಾಜಿನ
ಸ್ಫುಟಭಸಿತಂಗಳಂ ಶರಶರಾಸನಖಡ್ಗಮನಾಂತು ತಾಪಸೋ
ತ್ಕಟಮೃಡನಿರ್ಪನಾ ಮೃಡನ ಶಿಷ್ಯತೆಯಾಂತೆನಗೇನಿದೊಪ್ಪದೇ

ನೀನೆನ್ನೊಳಾಹವಕ್ಕೆ ಸ
ಮಾನನೆ ತೊಲಗಾಂಪ ಧೀರನಂ ಬರಿಸೀಗಳ್
ಕಾನನಚರ ಸಮರದೊಳಭಿ
ಮಾನಮನುಟಿಯೆನೆ ಮಹೇಶ್ವರಂ ಮುಗುಳ್ದೆಂದಂ

ಏನಾದೊಡೇನೊ ನಿನ್ನ ತ-
ಪೋನೀತಿಯದಂತದಿರ್ಕೆ ನಿನ್ನ ಧನುರ್ವಿ
ದ್ಯಾನಿಪುಣತೆಯೆಂತೆಂತನು
ಮಾನಮಿದೇಂ ತೋರ್ಪುದೆನ್ನೊಳಡಗಿನಿಸರಿವೆಂ

ಬಱಿದೇಕೆ ಗಟಪಿದಪೆ ನೀಂ
ಪೊಱಮಡು ಸಮರಕ್ಕೆ ನಿನ್ನ ಭುಜಬಲದಿರವಂ
ನೆಱೆ ಕಾಣ್ಬೆನೆನ್ನ ವಾಸಿಯು
ತೆಱನಂ ಕಡೆಗಣ್ಚಿ ಪಿಂಗಿ ಪೆಱಸಾರ್ದಪನೇ

ಎಂದು ದೂರ್ಜಟಿ ಗಭೀರಧ್ವನಿಯಿಂ ಗಜರಿ ಗರ್ಜಿಸಿ ನುಡಿಯೆ,

ಒಳಸೋರ್ದುದು ಶಾಂತಿರಸಂ
ಮೊಳೆತುದು ಕೋಪಾಗ್ನಿ ಪೊಗೆದುದುಸಿರೊಳ್ ನಿಡುಗ
ಣ್ಗಳ ಕಡೆಯೊಳ್ ಕಿಡಿಗೆದರ್ದುದು
ಬಳಿಕಲರ್ದುದು ಮೊಗದೊಳಚಲರಿಪುನಂದನನಾ

ಬಡಬಾಗ್ನಿಯುಳುರ್ಕೆಯೊ ಬಱ
ಸಿಡಿಲೇಳ್ಗೆಯೊ ಮುಳಿದ ಸಿಂಹದುಗ್ರತೆಯೊ ಪೊಡ-
ರ್ಪಿಡಿದ ಲಯಕಾಲಮೃತ್ಯುವಿ
ನಡರ್ಪೊ ಎನೆ ಮಿಸುಪ ಮಸಕಮಂ ತಳೆದನವಂ ||

ಶಬರನಲ್ಲಿ ಶಿವದರ್ಶನ

ಮಣಲ ಲಿಂಗದ ಮಸ್ತಕಾಗ್ರದ ಪುಷ್ಪಮಂಜರಿ ಮಾಣದಾ
ಕ್ಷಣಮೆ ತಳ್ತಡದಿರ್ದಾ ಕಿರಾತನ ಮಂಡೆಯಲ್ಲಿರೆ ಕಂಡು ಕಾ
ರಣಮಿದೇಂ ಪೊಸತೆಂದು ಸಾದ್ಭುತಮಾನಸಂ ಮಗುಟ್ದೀಕ್ಷಿಸು
ತ್ತಣೆಯುರಂ ಬಿಡದಿತ್ತ ಲಿಂಗದ ಶೂನ್ಯಶೀರ್ಷಮನರ್ಜುನಂ

ಇದನಿನ್ನುಂ ಮಗುಳ್ದೊರ್ಮೆ ನೋಳ್ಪೆನೆನುತುಂ ಪೂಗೊಂಚಲಂ ತಂದು ಸೂ
ಡಿದನಾ ಲಿಂಗದ ಮಸ್ತಕಾಗ್ರದೊಳೆ ಸಮ್ಯಗ್ಭಕ್ತಿಯಿಂದಾಗಮೋ
ಕ್ತದ ಮಾರ್ಗಂಪಿಡಿದೊಲ್ದು ಪೂಜಿಸಿ ಕರಂ ಕೊಂಡಾಡಿ ಮೆಯ್ಯಿಕ್ಕಿ ನೋ
ಡಿದನಿತ್ತಲ್ ಶಬರೋತ್ತಮಾಂಗದೆಡೆಯುಂ ಪ್ರಾಂಚದ್ಗುಣಂ ಫಲ್ಗುಣಂ

ಹರ ಹರ ದೇವದೇವನಿವನಲ್ತೆ ಶಿವಂ ಭುವನೈಕವಲ್ಲಭಂ
ಗುರು ಸಕಲಾಮರರ್ಗೆ ಶಬರಾಕೃತಿಯಿಂ ಮದನುಗ್ರಹಾರ್ಥಮಿಾ
ಪರಿ ನಡೆತಂದನಲ್ತೆ ತಪದುಬ್ಬೆಗದುದ್‌ಭ್ರಮೆ ನೆತ್ತಿವತ್ತೆ ನೈ
ತಿರದೆ ಮರುಳ್ತನಂದಳೆದಿದಿರ್ಚಿದೆನೆನ್ನವೊಲಜ್ಞನಾವನೋ

ಪಡಿದೆಱೆದಂತೆ ಪಾಱುತಿರ್ದ ಪವ್ವನೆ ಜುಮ್ಮನೆ ಮೆಯ್ಯನಿರ್ ಪೊದ
ೞ್ದಿಡಿಕಿಱಿದತ್ತು ಘರ್ಮಜಲಮುಣ್ಮಿದುದಂಗದೊಳಾಗ್ರಹಗ್ರಹಂ
ಕಡೆದೊಲಗಿತ್ತು ಕೌತುಕರಸಂ ಬಗೆಗುರ್ವಿದುದುತ್ಸವಂ ಮುಡ
ಲ್ತುಡರ್ದುದು ಭೀತಿ ಬೇರ್ವಱಿದುದೇೞ್ಗೆಯನಾಳ್ದುದು ರಾಗಸಂಪದಂ

ಬೀತುದು ಜಿಂಕವೋಡಿದುದು ಮೂಢತೆ ಮೂಡಿದುದಶ್ರು ಕಣ್ಗಳೊಳ್
ಕಾತುದು ಭೀತಿವಲ್ಲರಿ ಮನೋಗದಮುಂ ತಱಿಸಂದು ಸಿಂದುದು
ದ್ಭೂತ ಮಹಾದ್ಭುತಂ ಮನದೊಳಂಗದೊಳಾಯ್ತು ವಿವರ್ಣವೃತ್ತಿ ಚಿಂ
ತಾತುರನಾಗಿ ಬೆಳ್ಪಳಿಸಿ ಬೇವಸಮಂ ತಳೆದಂ ಧನಂಜಯಂ

ಉಳಿವೇಳಗು ಸಂಜೆ ನಸುಮ
ರ್ಬಳುರ್ದಂಬರದಂತೆ ತಿಳಿವು ರಾಗಂ ನೆಗೞ್ದು
ಮ್ಮಳಮನೊಳಕೊಂಡ ಬಗೆಯಿಂ
ತಳವೆಳಗಾಗುತ್ತೆ ಪಾರ್ಥನಂದಿಂತೆಂದಂ

ತಿಳಿದೆನೆ ಶಂಭುವೆಂದು ಬಹುಬಾಣದಿನೆಚ್ಚೊಡೆ ತಾಗದಂದದೇಂ
ತಿಳಿದೆನೆ ದಿವ್ಯಮಾರ್ಗಣದಿನಾನಿಸೆ ತಳ್ವದೆ ನುಂಗಿದಂದದೇಂ
ತಿಳಿದೆನೆ ಕೆಯ್ಯ ಚಾಪಮನಡಾಯುಧಮಂ ಸೆಳೆದೀೞ್ದು ಕೊಂಡೊಡಂ
ತಿಳಿವೊಳಸಾರ್ದುದಕ್ಕಟ ಪುರಾಕೃತಕರ್ಮದ ಪೆರ್ಮೆಯೆಂತುಟೋ

ಆವನ ಮಾಯೆಯಿಂ ತ್ರಿಜಗಮಾದುದು ಸೂರ್ಯಸುಧಾಕರರ್ ಪೊದ
ೞ್ದಾವನ ತೇಜದಿಂ ಬೆಳಗುವರ್ ಭುವನೋತ್ಕರರಕ್ಷೆ ಶಿಕ್ಷೆ ಮೇಣ್
ಆವನಧೀನಮಾವನೊಳೆ ತೋರ್ಪುದು ವಿಶ್ವಮಿದೆಂದುಮಾ ಮಹಾ
ದೇವನೊಳಾಹವಂ ಗಡೆನಗದ್ಭುತಮದ್ಭುತಮೇನಸಂದಪಂ

ಆವನನರ್ಚಿಪರ್ ಮಖದೊಳಾವನ ಮಂತ್ರಜಪಂಗಳಿಂದೆ ಸಂ
ಭಾವಿಪರಾವನಂ ಭಜಿಯಿಪರ್ ಮುನಿಗಳ್ ಮನುಗಳ್ ಸುಭಕ್ತಿಯಿಂ
ದಾವನ ಪಾದಪದ್ಮಮನೆ ಜಾನಿಪರಗ್ಗದ ಯೋಗಿವರ್ಯರಾ
ದೇವನೊಳಕ್ಕಟಾ ಪೊಣರ್ದೆನೆನ್ನದೊ ಸಂದ ವಿಮೋಹದೞ್ತಿರಂ

ಅನವದ್ಯನೊಳಪ್ರತಿಮನೊ
ಳನಘನೊಳಾದ್ಯಂತಶೂನ್ಯನೊಳ್ ಸಕಲಜಗ
ಜ್ಜನಕನೊಳಭ್ಯರ್ಹಿತಚೇ
ತನಗತನೊಳಿದಿರ್ಚಿ ಘುರದೊಳೆಚ್ಚಾಡಿದೆನೇ

ಶಿವ ಶಿವ ಸಲ್ಲುದೇ ಸಮರಮಿಂತೆನಗದ್ವಯನೊಳ್ ಮಹೇಶನೊಳ್
ಭವಹರನೊಳ್ ಮಹಾಮಹಿಮನೊಳ್ ಜ್ವಲನಾಕ್ಷನೊಳಕ್ಷಯಾಂಗನೊಳ್
ಪ್ರವಿದಿತನಾದಬಿಂದು ಕಳೆಯಿಂ ಮಿಗೆ ಮೀಱಿದನೊಳ್ ಶ್ರುತಿ ಸ್ಮೃತಿ
ಸ್ತವನಕತೀತನೊಳ್ ಜಗದ ಜೀವರನಾಡಿಪ ಸೂತ್ರಧಾರನೊಳ್

ಕಲಹಂ ತಕ್ಕುದೆ ನೋಡೆ ಪೋಡಿಂತೆನಗೆ ಸಚ್ಚಿದ್ರೂಪನೊಳ್ ನಿತ್ಯನಿ
ರ್ಮಳನೊಳ್ ಪ್ರಾಕೃತನಾಮರೂಪಗುಣಚೇಷ್ಟಾಲಂಬನಂದೋಱದು
ಜ್ಜ್ವಳನೊಳ್ ಸಂದಣುವಿಂಗಣುಸ್ಥಿತಿ ಮಹತ್ತಿಂಗಂ ಮಹತ್ತಾದ ನಿ
ಶ್ಚಲನೊಳ್ ನಿರ್ಭಯನೊಳ್ ನಿರಸ್ತಜಡತಾಸಂಸರ್ಗನೊಳ್ ಭರ್ಗನೊಳ್

ಮುಳಿದಾಂ ನೋೞ್ಪಂದಮೀ ಕಣ್ಣೆರಡರೊಳೆ ಮಹಾವಿಶ್ವತಶ್ಚಕ್ಷುವಂ ಕೆಯ್
ಗೊಳಿಸುತ್ತಿರ್ಕೆಯ್ಗಳಿಂ ಕಾದುವ ಸಡಗರಮೀ ವಿಶ್ವತೋಬಾಹುವೊಳ್ ಸಾ
ರ್ದೆಳಸುತ್ತುಂ ಪೋರ್ವ ಬಿಂಕಂ ಪದಯುಗದೊಳಮೀ ವಿಶ್ವತಃಪಾದನೊಳ್ ಸಂ
ಗಳಿಸಿತ್ತೀ ವಿಶ್ವತೋವಕ್ತ್ರನೊಳೆ ಪುರುಡುವಾತೆನ್ನದೋ ಮದ್ವಿಮೋಹಂ

ಮೂದಲೆವಾತುಗಳ್ ಗಡ ಮಹಾನಿಗಮೋಕ್ತಿಗತೀತನೊಳ್ ಜಯಾ
ಹ್ಲಾದದ ಝುಂಕೆಗಳ್ ಗಡ ಜಗತ್ತ್ರಯದುರ್ಜಯನೊಳ್ ಶರೌಘದಿಂ
ಭೇದಿಪ ಬಿನ್ನಣಂ ಗಡ ಜಿತಾಂಕನೊಳ್ ಮಿಗೆ ಮುಷ್ಟಿಯುದ್ಧದಿಂ
ಕಾದುವ ಕಜ್ಜಮುಂ ಗಡ ನಿರಂಗನೊಳಿಂತಿದು ಚಿತ್ರಮಲ್ಲವೇ

ಭಯಭಕ್ತಿಸ್ಪೃಹೆವೆತ್ತು ನೋೞ್ಪ ನಯನಂ ರೋಷಾರುಣಾವೇಶದು
ರ್ಣಯಕಿಂಬಾಯ್ತು ಪದಾಬ್ಜಪೂಜನಕೆ ಪಕ್ಕಾಗಿರ್ದ ಕೆಯ್ ಕೆಯ್ಯುದ್ಧವಂ
ರಯದಿಂ ತಾಳ್ದಿದಿರಾಂತುದೀಶ್ವರಮಹಾಮಂತ್ರಕ್ಕೆ ಬೀಡಾದ ಜಿ
ಹ್ವೆಯೆ ಮಾಱುತ್ತರವಾಂತುದಕ್ಕಟ ಮಹಾವ್ಯಾಮೋಹಮೇಗೆಯ್ಯದೋ

ಪೊಗೆಯುಳಿದಗ್ನಿಯಂತೆ ಮುಗಿಲೋಡಿದ ಭಾಸ್ಕರನಂತೆ ಮಾಯೆಮೆಯ್
ದೆಗೆದ ನಿಜಾತ್ಮನಂತಿರೊಱೆಯುರ್ಚಿದ ಕೂರಸಿಯಂತೆ ಕಾಂತಿ ಕೆಯ್
ಮಿಗೆ ಶಬರಾಂಗಮಂ ತೊಱೆದು ಪೂರ್ವನಿಜಾಕೃತಿವೆತ್ತಲಂಪಿನಿಂ
ಸೊಗಯಿಸುತಿರ್ದನಾಗಮಶಿರಂ ಪೊಗೞುತ್ತಿರೆ ಚಂದ್ರಶೇಖರಂ

ಷಡಕ್ಷರಿ: ರಾಜಶೇಖರವಿಳಾಸ

ಪುತ್ರದೋಹದ

ಅಕಳಂಕಾನನಮಿಂದುವಂ ಗೆಲೆ ಧರಾಭಾರಾವಹಂ ಬಾಹುದಿ|
ವ್ಯಕರಿಶ್ರೀಕರಮಂ ಕರಂ ಜರಿಯೆ ಚಂಚದ್ರಶ್ಮಿ ವಿಸ್ಮೇರದೃ||
ಷ್ಟಿಕಳಾಪೇಕ್ಷಣಮಬ್ಜಮಂ ಪಳಿಯೆ ಸೌಂದರ್ಯಾಂಗನೀಶಾಂಘ್ರಿಸೇ|
ವಕನಾ ದರ್ಪಕನಂ ತಿರಸ್ಕರಿಸಿದಂ ಶ್ರೀಚೋಳಭೂಪಾಲಕಂ||

ಸುರಸದಿಯಲ್ಲಿ ಮಿಂದು ಸುರಮಾರ್ಗಕಚೌಘಮನ್ನೈದೆ ಬಿರ್ಚಿ ವಿ|
ಸ್ಫುರಿತತದುತ್ಪ್ರತಾಪತಪನಾತಪದಾರಿಸಿ ಸೂಡಿ ತಾರಕೋ||
ತ್ಕರಕುಸುಮಂಗಳಂ ತಳೆದು ಚಂದ್ರಿಕೆಯೆಂಬ ವಿಶಾಲಚೇಲಮಂ|
ಧರಿಣಿಪಕೀರ್ತಿಕಾಂತೆ ವಿಧುದರ್ಪಣಮಂ ನೆರೆ ನಿಂದು ನಿಟ್ಟಿಪಳ್||

ವ|| ಇಂತೊಪ್ಪುವಿಳಾಕಾಂತನಂತಃಪುರಕಮಳದೊಳ್ಕಮಳೆಯಂತೆ ಕಮನೀಯತೆಯಸಪ್ಪುಗ್ಗೈದು

ಅಮೃತಮಯವಾಣಿ ಪರಿಲಸ|
ದಮೃತಾಧರೆಯಮೃತಕಿರಣ ಮಂಡಳ ಮುಖಿ ತಾ||
ನಮೃತ ಮತಿಯೆಂಬ ಪೆರ್ವೆಸ|
ರಮರ್ದಿರೆ ತನ್ಮಹಿಪಮಹಿಳೆ ಕರಮೆಸೆದಿರ್ದ್ದಳ್||

ವ|| ಅಂತರ್ಚಿಸಿ ಪೊಗಳ್ದು ಮಗುಳ್ದೆರಗಿ ಕೈಂಕರ್ಯಮನಾಂತವರ ಕಾರುಣ್ಯಮಂ ಪಡೆದರಸನನವರತಮಿಂತು ಪೊಳ್ತುಗಳೆವುತ್ತುಮಿರ್ದನನ್ನೆವರಮಂತವುರದೊಳ ಮೃತಮತಿ ಮಹಾದೇವಿಯೆಂದು ಪುಣ್ಯಾವಾಸರಸುಪ್ರಭಾತಸಮಯದೊಳ್ಶಿವ ಲಿಂಗ ಪೂಜಾಸಂತರಂ ಪುರಾಣಮಂ ಕೇಳ್ವಲ್ಲಿ ಮಾರ್ಕಂಡೇಯಚರಿತಂ ಬರೆವರೆ ತದ್ಬಾಲೀಲೆಯನಾಕರ್ಣಿಸಿ ತನಗೆ ತನಯನಿಲ್ಲವ್ಪುದರಿಂ ನೆಸೆದು ಬಿಸುಸುಯ್ದು ಕೆಲದೊಳಿರ್ದ್ದ ಕೆಳದಿಯೊಡನಿಂತೆಂಗಳ್

ಎಳೆವರೆಯದೊಳೆಳೆಯರ್ಕ್ಕಳ|
ನೆಳಸುತೆ ನಳಿತೋಳ್ಗಳಿಂದೆ ಬಿಗಿದಪ್ಪಿ ಮನಂ||

ಗೊಳೆ ತಳ್ತು ನೋಡಿ ಮುದ್ದಿಪ |
ವಿಳಾಸವೊಂದಕ್ಕೆ ನೋಂತುದಿಲ್ಲಾಂ ಕೆಳದೀ ||

ಶಿವಭಕ್ತಿಯಿಲ್ಲದವನ ಬಾ |
ಳ್ಪವಿತ್ರಮಿಲ್ಲದನ ಜಾಣ್ಮೆ ಕಳೆಯಿಲ್ಲದ ಪೆಣ್ ||
ಜವಮಿಲ್ಲದಶ್ವಮುಂ ತನು |
ಭವನಿಲ್ಲದ ಭಾಗ್ಯಮೆಂತುಮೇಂ ಮೆರೆದಪುದೆ ||

ಅರಳೆಲೆ ಮಾಗಾಯ್ಮುಣಿಯು |
ತ್ತಿರೆ ನುಣ್ಣೊಸಲೊಳ್ಕದಂಪಿನೊಳ್ಮೃದುಹಾಸ ||
ಸ್ಫುರಿತಂ ಮೊಳೆವಲ್ಮಿಸುಗು |
ತ್ತಿರೆ ಪರಿದಾಡುವ ಕುಮಾರನೆಂದಾದಪನೋ ||

ಕರತಳದಿಂದೆನ್ನಯ ನು |
ಣ್ಬೆರಲಂ ಪಿಡಿದೇಳ್ದು ಜನನಿ ನಡೆದಪೆನೆನುತೊಂ ||
ದೆರಡಡಿಯನಿಟ್ಟು ನಿರಿಯಂ |
ಭರದಿಂ ತಳ್ಕೈಪ ಮಗನನೆಂದೀಕ್ಷಿಪೆನೋ ||

ಅರಸನ ಪಿಂದೆಸೆಯೊಳ್ಮೆ |
ಯ್ಗರೆದೆಲ್ಲಿರ್ದಪೆನೊ ಜನನಿ ಪೇಳೆನುತೊಲವಿಂ ||
ಪರಿತಂದೆಳಸಗೆ ಮಿಸುಗು |
ತ್ತಿರೆ ಕುವರಂ ಕೊರಲನೆಂದು ಬಿಗಿದಪ್ಪುವನೋ ||

ಮಗನಂ ತಳ್ತಮರ್ದಪ್ಪಿ ನೋಡಿ ಮೊಗಮಂ ಮುಂಡಾಡಿ ನೇಹಂ ಮನಂ |
ಬುಗೆ ಮಾತಾಡಿಸಿ ಲಲ್ಲೆಗೈದು ನಗಿಸುತ್ತಿಕ್ಕೈಗಳಂ ಸಾರ್ಚಿ ಮಂ ||
ಡೆಗೆ ಬಟ್ಟಾಡೆ ಕೆಲಕ್ಕೆ ಚಿಮ್ಮಿ ಮೊಲೆವಾಲಂ ಮತ್ತೆ ಬಾಯ್ಗೂಡಿ ಮೆ |
ಲ್ಲಗೆ ತೊಟ್ಟಿಲ್ಗಿರಿದಿಟ್ಟು ತೂಗುವೆಳವೆಣ್ಣೇಂ ನೋಂಪಿಯಂ ನೋಂತಳೋ ||

ಪಡಿನೆಳಲಂ ಮಣಿಕುಟ್ಟಿಮ |
ದೆಡೆಯೊಳ್ನಡೆ ನೋಡಿ ನೋಡಿ ದಾಯೆನುತುಂ ಕೈ ||
ದುಡುಕಲದು ತುಡುಕೆ ನಗೆ ನಗೆ |
ಕಡುಬಿನದಂಬಡೆವ ಕಂದನೆಂದಾದಪನೋ ||

ಇಂತು ಪಲುಂಬಿ ಪಂಬಲಿಸಿ ಭೂಷಣಮಂ ತೆಗೆದಿಟ್ಟು ಚಿತ್ತದೊ |
ಳ್ಚಿಂತೆಯನಾಂತು ಕಾಂತೆ ಬಿಸುಸುಯ್ಯೆಲರಿಂ ತನುವಲ್ಲ ಕಂದಿತೆಂ ||
ಬಂತಿರೆ ತಮ್ಮೊ ಳಾಳಿಯುಡಿದೇನೆನುತಳ್ಕಿರೆ ತಳ್ಪದೈದಿದೇ |
ಕಾಂತನಿಕೇತನಕ್ಕೆ ಧರಣೀಪತಿ ಬಂದೊಳಪೊಕ್ಕು ನೋಡಿದಂ ||

ಎಡಗೈಯಿಂದೊತ್ತಿ ಶಯ್ಯಾತಳಮನಿನಿಸುಜಾರಿರ್ದುದಂ ಮೇಲುದಂ ಪೊಂ|
ಗಡಗಂ ಗಲ್ಕೆಂದು ಶಬ್ದಂಗುಡೆ ಬಲದ ಕರಾಂಭೋಜದಿಂದೇರಸೂಂಕು ||
ತ್ತೊಡನುತ್ತುಂಗಸ್ತನಾಗ್ರಕ್ಕಿಳಿವ ಮುಡಿಯನಾಂತೌಂಕುತುಂ
ಕಂಠದಿಂ ಮುಂ|
ಗಡೆಯೊಳ್ಕಂಡೇಳ್ವಳಂ ಕೈವಿಡಿದವಳೊಡನರ್ಧಾಸನಂಗೊಂಡನಾಗಳ್ ||

ಮೃಗಮದಗಂಧಿ ನಿನ್ನ ಮೊಗವೆಂಬ ಸುಧಾಕರಬಿಂಬಮಿಂದು ಬೆ|
ಳ್ನಗೆ ತಿಳಿಜೊನ್ನಮಂ ತೊರೆದುದಿಂದುಟಿ ಚೆಂದಳಿರ್ವುಗುಂದಿದ ||
ತ್ತಗಲದ ರಾಗಸಾಗರದ ಪೆರ್ಚ್ಚುಗೆ ತಗ್ಗಿದುದಕ್ಷಿಕೈರವಂ|
ಮಿಗೆ ಕೊರಗಿತ್ತು ಚಿತ್ತ ಪರಿತಾಪ ಮಹಾತಪದಿಂ ಮನೋರಮೇ ||

ವದನಸ್ಥಿತ ವಾಣಿಯ ಕ|
ಣ್ಗಿದಿರುರ್ವ್ವಿದುದೆಂಬ ಭಾವಮಂ ಬೀರಿಲಸ ||
ದ್ರದನದ್ಯುತಿ ಪಸರಿಸೆ ತ|
ತ್ಸದತಿ ಮೃದೂಕ್ತಿಯೊಳೆ ಕಾಂತನೊಡನಿಂತೆಂದಳ್ ||

ಪರರಾಜಾಶೇಷ ತೇಜಃಸ್ಥಿತಿ ಕೆಡೆ ಕಮಳಾಮೋದಮಿಂಬಾಗೆ ಧಾತ್ರೀ|
ಪರಿತೋಷಂ ಪೆರ್ಚ್ಚೆ ಪೂರ್ವಕ್ಷಿತಿ-ಭೃದಧಿಕರಾಗಂ ಸಮಂತಾಗೆ ಸನ್ಮಾ ||
ರ್ಗರುಚಿ ಪ್ರಸ್ಫೂರ್ತಿ ಚೆಲ್ವಾಗಿರೆ ಕರಮುದಯಂಗೊಂಬ ಬಾಲಾರ್ಕನಂ ಮ|
ದ್ವರಚೇತಃಪದ್ಮ ವಿಾಗಳ್ಬಯಸಿದಪುದು ಕೇಳ್ಭೂಮಿಪಾಲಾವತಂಸಾ ||

ಗಿಳಿವರಿ ಮೆರೆಯದ ನಂದನ|
ಮೆಳಶಿಶು ವಿಹರಿಸದ ಪೂಗೊಳಂ ಕಳರವದಿಂ ||
ದೆಳ ಅಂಚೆಯಡಿಯಿಡದ ತ|
ಣ್ಬುಳಿಲರ್ಭಕನಾಡದಂಗಳಂ ಮಂಜುಳಮೇ ||

ಎನೆ ನೃಪನೆಂದಂ ಕೇಳಂ|
ಗನೆ ನೀನೆಂದಂತೆ ತನಯನಂ ಪಡೆಯದೆ ಬಾ ||
ಳ್ವನ ಸಂಸಾರಮಸಾರಂ|
ತೆನೆಯಿಲ್ಲದ ನವಪಲಾಲದಂತಿರೆ ಧರೆಯೊಳ್ ||

ಸುರತರುವಿರೆ ಸಿರಿವಡೆವುದು|
ಪಿರಿದೆ ಸರೋಜಾಕ್ಷಿ ಮದ್ಗುರೂತ್ತಮನೊಲ್ದೊ ||
ಪ್ಪಿರೆ ತತ್ಪ್ರಸಾದಬಲದಿಂ|
ಪಿರಿದುಮದಿಷ್ಟಮನೆ ಪಡೆಯಲಕ್ಕುಮಮೋಘಂ ||

ಅದರಿಂ ಚಿಂತೆಯನುಳಿವುದು ||
ಸುದತಿ ಸುಧಾಕರಧರಾಂಘ್ರಿಯಂ ಪೂಜಿಪುದ ||
ಭ್ಯುದಯಕರ ಧರ್ಮಮಂ ಮಾ |
ಳ್ಪುದು ದೊರೆತಪುದಲ್ತೆ ಭವದಭೀಪ್ಸಿತಮಬಲೇ ||

ಇಂತೆಂದು ತಿಳಿಪೆ ಧರಿಣೀ |
ಕಾಂತಂ ಬಗೆವಿಡಿದು ಚಿಂತೆಯಂ ತಾನುಳಿದಳ್ ||
ಕಾಂತೆ ಬಿಡದಾಪ್ತವಚಸದಿ |
ನೇಂ ತಿಳಿವೊಡೆ ಚಿಂತೆಗೌಷಧಂ ಪೆರತುಂಟೇ ||

ತಿರುಕೊಳವಿನಾಚಿಯ ಶೋಕ

ಎಲೆ ಸುಕುಮಾರ ಶಂಕರಕುಮಾರಕ ಬಾರ ಮದೀಯಲೋಚನೋ |
ತ್ಪಲರಜನೀಶ ನಿನ್ನ ಮೊಗದಾವರೆಯಂ ಮಿಗೆ ತೋರದೆತ್ತ ಪೋ ||
ದೆ ಲಲಿತಮಂದಹಾಸ ಲಲಿತಸ್ಖಲದಕ್ಷರವಾಣಿ ಗೆಜ್ಜೆ ಮೆ |
ಲ್ಲುಲಿಗುಡೆ ಬಂದು ಬಳ್ಳಿರಿಯಸಪ್ಪದೆ ತಳ್ವಿದೆಯೈ ತನೂಭವಾ ||

ವ || ಎಂದು ನಿಡುಸರದಿಂ ಕೂಗಿ ಕರೆಕರೆದು ಕಾಣದೆ ಕರಕರಿಸಿ ರಾಜಪುತ್ರನ ವಿಹರಣಮಂ ನೋಡಲೆಳಸಿ ರಾಜವೀಧಿಗೆ ಬಂದನೆಂದು ಬಗೆದು ಬಗೆಗೆಟ್ಟು ಬಾಯ್ವಿಟ್ಟು ಜನನಿ ಜವದಿನೇಳ್ತಂದಲ್ಲಿಯುಮರಸಿ ಕಾಣದೆ

ಕರಿಗಳ ಕಾಲ್ಗೊಳಗಾದನೊ |
ವರೂಥಚಕ್ರಕ್ಕೆ ಸಿಲ್ಕಿದನೊ ಹಯಚಂಚ ||
ತ್ಖುರಹತಿಯಿಂದಳಿದನೊ ಶಂ |
ಕರನಕಟಕಟೆಂದು ಬಗೆದು ಬಾಯ್ವಿಡುತಿರ್ದಳ್ ||

ತನುಭವನೆಲ್ಲಿದನೆಲ್ಲಿದ |
ನಿನಿವಾತಿನ ನೀರಸಲ್ಲಿದಂ ಮೆಲ್ನಗೆಯಿಂ ||
ಪಿನ ಸೊಬಗನೆಲ್ಲಿದಂ ಚೆ |
ಲ್ವಿನ ಕಣಿಯೆಲ್ಲಿದನೊ ಮನ್ಮನೋಂಬುಜಹಂಸಂ ||

ವ || ಎಂದು ಪಲುಂಬಿ ಪಲವಾಡಿ ಬಪ್ಪಾಗಳಾ ಪುರಜನಂ ಕಂಡೀ ಮಡಿದ ಶಿಶುವಿವಳದೆಂದು ತಿಳಿದಳವಳಿದು ಪಳಯಿಸುವಳಂ ಕರೆದು ನೆರೆದ ಜನದೊಳ-ಪುಗಿಸಿ ನರೇಂದ್ರತುರಗಖುರಹತಿಯಿಂ ಮಡಿದನೆಂದು ತೊಟ್ಟನೆ ತೋರ-

ಲೊಡನಾರುಂಡಮುಂ ಮುಂಡಮುಂ ಕಂಡಡವಿಗಿಚ್ಚುರ್ಗೊಂಡ ಪುಲ್ಲೆಯಂತೆ ಹರಣಂ ಹಂಮ್ಮೈಸಿ ಪರ್ದ್ದರಗಿದುರಗಿಯಂತೆ ಮಿಡುಮಿಡನೆ ಮಿಡುಕಿ ಕಡಿವಡೆದೆಳವಳ್ಳಿಯಂತೆ ಕೊರಗಿ ಪೊಸದಿಟ್ಟ ಪೂಮಾಲೆಯಂತೆ ಕಂದಿಕುಂದಿ ಮಂದೈಸಿದಳಲಿಂ ಮುಂದುಗೆಟ್ಟು ಕಟ್ಟೇಂಕಟ್ಟೆಸೆಂದು ಬಸಿರುಪೊಸೆದು ದೆಸೆ-ದೆಸೆಗೆ ಬಾಯಂಬಿಟ್ಟು ಮೊರೆಯಿಟ್ಟು ಮರುಗಿ

ಎಳಗಿಳಿಯಂ ಕೊರಲ್ಮುರಿದು ಮೋದಿದರಾರ್ಮ್ಮರಿಯಂಚೆಯಂ ಭಯಂ |
ಗೊಳಿಸುತೆರಂಕೆಯಂ ಪರಿದು ಪೊಯ್ದವರಾರ್ಮ್ಮಗಶಾಬಮುಂ ಕರಂ ||
ಮುಳಿದು ಶಿರೋಧಿಯಂ ಕೆಡೆಯಲೆಚ್ಚವರಾರ್ಬ್ಬಿಸನಾಳಕಾಂಡಕೋ ||
ಮಳತರಕಂಠಮುಂ ಕಡಿದುರುಳ್ಚಿದರಾರ್ಸ್ಸುಕುಮಾರ ಶೇಖರಾ ||

ವ || ಎಂದಾ ಕಬಂಧಮನೆತ್ತಿ ತೊಡೆಯೊಳಿಟ್ಟಾ ರುಂಡಮುಂ ಕರಯುಗದೊಳ್ಪಿಡಿದ-ಶ್ರುಮಿಶ್ರಕಟಾಕ್ಷದಿನೀಕ್ಷಿಸಿ ಮೊಗದೊಳ್ಮುಸುಂಕಿದ ಧೂಳಿಯಂ ಮೇಲು-ದಿಸೂಳೊಯ್ಯನೊರಸಿ ಕೆಲಸರಿದ ಮಾಂಗಾಯ್ಗಳನೋಸರಿಸಿದರಳೆಲೆಯಂ ಸೈತುಮಾಡಿ ಗಲ್ಲಮುಂ ಪಿಡಿದು ಮೆಲ್ಲಸಲುಗಿ ಮುದ್ದಿಸಿ ಮುಂಡಾಡಿ ನೋಡಿ ಮೇರೆದಪ್ಪಿದಳಲಂ ಸೈರಿಸಲಾರದೆ

ಹಾ ಮಗನೆ ಹಾ ಮನೋಜ್ಞನೆ |
ಹಾ ಮುದ್ದುಗ ಹಾ ಮದೇಭಗತಿಮಂಜುಳ ಹಾ ||
ಹಾ ಮಧುರವಾಣಿ ಹಾ ಮ |
ತ್ಪ್ರೇಮಾಸ್ಪದ ಹಾ ಮದೀಶವಂಶಲಲಾಮಾ ||

ಎಲ್ಲಿಯ ಹಯಮೆಲ್ಲಿಯನೃಪ |
ನೆಲ್ಲಿಯ ವೈಹಾಳಿ ಯೆಲ್ಲಿಯತಿಕಳಕಳಮಿಂ ||
ತೆಲ್ಲಿಯ ದರ್ಶನಗಮನಮಿ |
ದೆಲ್ಲಿಯ ಮೃತಿ ನಿನಗೆ ಬಂದುದೆಲೆ ಸುಕುಮಾರಾ ||

ಮುನ್ನರುವರಳಿದಳಲನೆಲೆ |
ನಿನ್ನಂ ನೆರೆನೋಡಿ ಮಗನೆ ಮರೆದಿರ್ದ್ದೆಂ ಪೇಳ್ ||
ಇನ್ನಾರಿಂದಂ ಮರೆದಪೆ
ನೆನ್ನೊಳುಸಿರ್ಸ್ಸುಮ್ಮನಿರದಿರೆಲೆ ತನುಜಾತಾ ||

ಗಳಗಳನೆ ಬಳೆದು ಧನಮುಂ |
ಗಳಿಸಿ ಚರಾರ್ಚೆಯಃನೆಸಗಿ ಹರಕೃಪೆವಡೆದುಃ ||
ಜ್ಜಳ ಸುಖಮನೀವನೆಂದಿರೆ |
ತಿಳಿವಿಲ್ಲದೆ ಮಗನೆ ತುರಗಹತಿಯಿಂ ಮಡಿದೈ ||

ಕೊರಲಂ ಮೆಟ್ಟುವ ಪದದೊ।
ಳ್ತುರಗಂ ಕಂಗೆಟ್ಟು ಜನನಿಯೆಂದೆನ್ನಂ ನೀಂ॥
ಕರೆದೆಯೊ ಮರೆದೆಯೊ ದೋಷಾ।
ಕರೆಯೆಂದೇಂ ತೊರೆದೆಯೋ ತನೂಜನೆ ಪೇಳ್ವೈ॥

ಅಳಲದಿರು ತಾಯೆ ದುಃಖಂ।
ಗೊಳದಿನ್ನಿರ್ನೆಂದು ನೋಡಿ ಸಂತೈಸದೆ ಕ॥
ಣ್ಗಳ ಜಳಮಂ ತೊಡೆಯದೆ ಕಡು।
ಮುಳಿದರವೋಲ್ಸುಮ್ಮನಿರ್ಪುದೇ ಸುಕುಮಾರಾ॥

ನೋಡುವ ಕಣ್ಣೊಡೆದುದು ಮಾ।
ತಾಡಿಪ ನಾಲಿಗೆ ಮುರುಂಟಿದುದು ನಿನ್ನಂ ಮುಂ॥
ಡಾಡುವ ಕಯ್ಯುಡಿದುದು ಸಲೆ।
ಪಾಡುವ ಬಾಯ್ಮುಂದುದಣುಗ ನೀಂ ಮಡಿಯಲೊಡಂ॥

ಆರೊಡಸುಸಿರ್ವೆಂ ದುಃಖಮ।
ನಾರುಂಟೆನಗಕಟ ಮಗನೆ ಮಗನೆ ಮನೋಜಾ॥
ತಾರಿಯ ಕೃಪೆ ತಪ್ಪಿದ ಬಳಿ-।
ಕಾರಾದೊಡಮೇಸೊ ಸಿನ್ನನೇಂ ಕಾಣಿಪರೇ॥

ವ॥ ಎಂದಾಕ್ರಂದಸಂಗೈದಳಲ್ದು ಬಳಲ್ದು ಬಸವಳಿದು ಬಲ್ಪುಗುಂದಿ ಬಿಸುಸುಯ್ದು ಬಸಿರಂ ಪೊಸೆದು ದೈನ್ಯಂಬಟ್ಟು ಬಾಯಂಬಿಟ್ಟು ಪೆಸರ್ಗೊಂಡು ಕರೆಕರೆದೊಳದ್ದುರ್—

ಮಗನೆ ನೀನಿಂತಳಿಯೆ ಸೈರಿಪೆನೆಂತೊ ಪೇಳ್ವೈ ಶಂಕರಾ
ಸುಗುಣನಿಧಿ ನೀನೆನ್ನ ಮೊರೆಗಳನೊಮ್ಮೆ ಕೇಳ್ವೈ ಶಂ-

ಪರಸಿ ಪಾಡಿ ಮಹೇಶನಿಂದವೆ ಬೇಡಿ ಮುನ್ನಂ ಶಂ-
ತುರಗಖುರಕೆಂದಕಟ ಪೆತ್ತೆನೆ ಕುವರ ನಿನ್ನಂ ಶಂ

ಎಂತು ಮರೆವೆನೊ ಸವಿಯ ಸಾಲಿಡುವಮುದ್ದುಪಣೆಯಂ ಶಂ
ಕಾಂತಿ ಶೋಭಿಸೆ ಮುದ್ದುವೀರುವ ಮೊಗದ ಬಗೆಯಂ ಶಂ

ಝಣಝಣಿಸೆ ಕಿರುಗೆಜ್ಜೆ ಕರತಳತಾಳರವಕೆ ಶಂ
ಕುಣಿವ ನಿನ್ನಯ ಬಿನದವೊಪ್ಪುಗುಮೆನ್ನ ಮನಕೆ ಶಂ

ಶರಣಪದ ಪಂಕಜರಜಂಗಳೊಳಾಳದಂತು ಶಂ
ತುರಗಖುರಹತಿಜನಿತಧೂಳಿಯೊಳಳಿದೆಯಿಂತು ಶಂ

ಎನ್ನನೋವುವನೆಂದು ನಂಬಿರಲಿಂತು ಮಡಿದೈ ಶಂ
ಮುನ್ನಮೆನ್ನಯ ಹರ್ಷವಲ್ಲಿಯ ಕುಡಿಯನುಡಿದೈ ಶಂ

ನಿನ್ನ ಳಿವನೀಕ್ಷಿಸಿಯುಮೆನ್ನಸು ಪೋಗದಂದು ಶಂ
ನಿನ್ನೊಳೆನ್ನಯ ಕೂರ್ಮೆ ನಿಜಮೆಂತೆನಿಪುದಿಂದು ಶಂ

ಹರಣದಳಿವಿಂಗಂಜುವೆನೆ ನಿನ್ನಾಣೆ ಮಗನೇ ಶಂ
ಶಿರವರಿದು ನಿನ್ನಂದವಾಗದೆ ಪಿಂಗಿದಪನೇ ಶಂ

ಕನ್ನಡ ಕಾವ್ಯ ಸಂಚಯ

ನಡುಗನ್ನಡ ಕಾವ್ಯ

ವಚನಗಳು ೧

ಅಲ್ಲಮಪ್ರಭು

ಶಿಲೆಯೊಳಗಣ ಪಾವಕನಂತೆ, ಉದಕದೊಳಗಣ ಪ್ರತಿಬಿಂಬದಂತೆ, ಬೀಜದೊಳಗಣ ವೃಕ್ಷದಂತೆ ಶಬ್ದದೊಳಗಣ ನಿಶ್ಶಬ್ದದಂತೆ ಗುಹೇಶ್ವರಾ ನಿಮ್ಮ ಶರಣಸಂಬಂಧ.

ನೆಲದ ಮರೆಯ ನಿಧಾನದಂತೆ, ಮುಗಿಲ ಮರೆಯಲಡಗಿರ್ದ ಮಿಂಚಿನಂತೆ, ಬಯಲ ಮರೆಯಲಡಗಿರ್ದ ಮರೀಚನಂತೆ ಕಂಗಳ ಮರೆಯಲಡಗಿರ್ದ ಬೆಳಗಿನಂತೆ ಗುಹೇಶ್ವರಾ ನಿಮ್ಮ ನಿಲವು.

ರಕ್ಕಸಿಗಿಬ್ಬರು ಮಕ್ಕಳು, ತೊಟ್ಟಿಲ ಮೇಲೈವರು, ರಕ್ಕಸಿ ಬಾಣತಿಯಾದರೆ, ಮಕ್ಕಳಿಗಿನ್ನೆಂತೊ? ತೊಟ್ಟಿಲ ತೂಗುವೆ, ಜೋಗುಳವಾಡುವೆ. ರಕ್ಕಸಿ ಬಾಣತಿಯ ತೊಟ್ಟಿಲು ನುಂಗಿತ್ತು. ಇದೇನು ಹೇಳಾ ಗುಹೇಶ್ವರಾ?

ಮುಗಿಲಬಣ್ಣದ ಪಕ್ಷಿ, ಮಗನ ಕೈಯರಗಿಳಿ ಗಗನ ಕೋಲಂಬಿನಲ್ಲಿ ಸ್ವಪ್ನದ ನಿಲವನು ತೆಗೆದೆಚ್ಚವನಾರೋ? ಉಪಮಿಸಬಾರದು. ಜಾಗ್ರತ್ ಸ್ವಪ್ನ ಸುಷುಪ್ತಿಯ ನಡುವೆ ತ್ರಿಜಗವಾಯಿತ್ತು. ಜಗಂಜ್ಯೋತಿ ನಿನ್ನ ಮಾಯೆಯನೇನೆಂಬೆನು ಗುಹೇಶ್ವರಾ.

ಕಾಲುಗಳೆರಡು ಗಾಲಿ ಕಂಡಯ್ಯ. ದೇಹವೆಂಬುದು ತುಂಬಿದ ಬಂಡಿ ಕಂಡಯ್ಯ. ಬಂಡಿಯ ಹೊಡೆವವರೈವರು ಮಾನಿಸರು. ಒಬ್ಬರಿಗೊಬ್ಬರು ಸಮವಿಲ್ಲಯ್ಯ. ಅದರಿಚ್ಛೆಯನರಿದು ಹೊಡೆಯದಿದ್ದರೆ ಅದರಚ್ಚು ಮುರಿಯಿತ್ತು ಗುಹೇಶ್ವರಾ.

ಪಾತಾಳದಿಂದತ್ತ ಮಾತ ಬಲ್ಲವರಿಲ್ಲ. ಗಗನದಿಂದ ಮೇಲೆ ಅನುಭಾವ ತಾನಿಲ್ಲ. ಒಳಗಣ ಜ್ಯೋತಿಯ ಬೆಳಗ ಬಲ್ಲವರಿಲ್ಲ. ಹೊರಗಣ ಹೊರಗನು ಅರಿಯ ಬಲ್ಲವರಿಲ್ಲ. ಹಿಂದಣ ಹಿಂದನು, ಮುಂದಣ ಮುಂದನು ತಂದೆ ತೋರಿದ ನಮ್ಮ ಗುಹೇಶ್ವರನು.

ಎತ್ತಣ ಮಾಮರ? ಎತ್ತಣ ಕೋಗಿಲೆ? ಎತ್ತಣಿಂದೆತ್ತ ಸಂಬಂಧವಯ್ಯಾ? ಬೆಟ್ಟದ ನೆಲ್ಲಿಯ ಕಾಯಿ ಸಮುದ್ರದೊಳಗಣ ಉಪ್ಪು ಎತ್ತಣಿಂದೆತ್ತ ಸಂಬಂಧ? ಗುಹೇಶ್ವರ ಲಿಂಗಕ್ಕೆಯು ಎನಗೆಯು ಎತ್ತಣಿಂದೆತ್ತ ಸಂಬಂಧವಯ್ಯಾ?

ಅಕ್ಷರವ ಬಲ್ಲೆವೆಂದು ಅಹಂಕಾರವೆಡೆಗೊಂಡು ಲೆಕ್ಕಗೊಳ್ಳರಯ್ಯಾ! ಗುರು ಹಿರಿಯರು ತೋರಿದ ಉಪದೇಶದಿಂದ ವಾಗದ್ವೈತವ ಕಲಿತು ವಾದಿಪರಲ್ಲದೆ ಆಗು ಹೋಗೆಂಬುದನರಿಯರು. ಯುಕ್ತಿಯನರಿಯರು ಮುಕ್ತಿಯನರಿಯರು ಭಕ್ತಿಯನರಿ ಯರು. ಮತ್ತೆ ವಾದಿಗಳೆನಿಸುವರು ಹೋದರು ಗುಹೇಶ್ವರಾ ಸಲೆ ಕೊಂಡ ಮಾರಿಂಗೆ.

ಹೊನ್ನು ಮಾಯೆ ಎಂಬರು, ಹೆಣ್ಣು ಮಾಯೆ ಎಂಬರು, ಮಣ್ಣು ಮಾಯೆ ಎಂಬರು. ಹೊನ್ನು ಮಾಯೆಯಲ್ಲ, ಹೆಣ್ಣುಮಾಯೆಯಲ್ಲ, ಮಣ್ಣು ಮಾಯೆಯಲ್ಲ. ಮನದ ಮುಂದಣಾಸೆಯೆ ಮಾಯೆ ಕಾಣಾ ಗುಹೇಶ್ವರಾ.

ಕಳ್ಳಗಂಜಿ ಕಾಡ ಹೊಕ್ಕಡೆ, ಹುಲಿ ತಿಂಬುದ ಮಾಬುದೆ? ಹುಲಿಗಂಜಿ ಹುತ್ತವ ಹೊಕ್ಕಡೆ ಸರ್ಪ ತಿಂಬುದ ಮಾಬುದೆ? ಕಾಲಕ್ಕಂಜಿ ಭಕ್ತನಾದಡೆ ಕರ್ಮ ತಿಂಬುದ ಮಾಬುದೆ? ಮೃತ್ಯುವಿನ ಬಾಯ ತುತ್ತಾದ ವೇಷಡಾಂಭಕರನೇನೆಂಬ ಗುಹೇಶ್ವರಾ?

ಆರು ಇಲ್ಲದಾರಣ್ಯದೊಳಗೆ ಮನೆಯ ಕಟ್ಟಿದರೆ ಕಾಡಕಿಚ್ಚೆದ್ದು ಒಂದು, ಹತ್ತಿ ತ್ತಲ್ಲಾ. ಆ ಉರಿಯೊಳಗೆ ಮನೆ ಬೇವಲ್ಲಿ ಮನೆಯೊಡೆಯನೆತ್ತ ಹೋದನೊ? ಉರಿ ಯೊಳಗೆ ಬೆಂದ ಮನೆ ದೆಗೆಯಾಗದುದ ಕಂಡು ಮನೆಯೊಡೆಯನಳಲುತ್ತ ಒಳಲು ತ್ತೈದಾನೆ. ಗುಹೇಶ್ವರಾ ನಿಮ್ಮ ಬಲವಿಲ್ಲದ ಠಾವ ಕಂಡು ಮನದಲ್ಲಿ ಹೇಸಿ ತೊಲಗಿದೆ ನಯ್ಯಾ.

ಅದ್ವೈತವ ನುಡಿದು ಅಹಂಕಾರಿಯಾದೆನಯ್ಯಾ! ಬ್ರಹ್ಮವ ನುಡಿದು ನಾನು ಭ್ರಮಿತನಾದೆನಯ್ಯಾ! ಶೂನ್ಯವ ನುಡಿದು ನಾನು ದುಃಖಕ್ಕೆ ಗುರಿಯಾದೆನಯ್ಯಾ! ಗುಹೇಶ್ವರಾ ನಿಮ್ಮ ಶರಣ ಸಂಗನಬಸವಣ್ಣನ ಸಾಂನಿಧ್ಯದಿಂದಾನು ಸದ್ಭಕ್ತನಾದೆ ನಯ್ಯಾ.

ಬೆಟ್ಟಕ್ಕೆ ಚಳಿಯಾದಡೆ ಏನ ಹೊದ್ದಿಸುವರಯ್ಯಾ. ಬಯಲು ಬತ್ತಲೆ ಇರ್ದ್ದರೆ ಏನನುಡಿಸುವರಯ್ಯಾ. ಭಕ್ತನು ಭವಿಯಾದಡೆ, ಅದೇನನುಪಮಿಸುವೆನಯ್ಯ ಗುಹೇಶ್ವರಾ.

ಉದಯವಾಯಿತ್ತ ಕಂಡು, ಉದರಕ್ಕೆ ಕುದಿವರಯ್ಯಾ. ಕತ್ತಲೆಯಾಯಿತ್ತ ಕಂಡು, ಮಜ್ಜನಕ್ಕೆರೆವರಯ್ಯಾ. ಲಿಂಗಕ್ಕೆ ನೇಮವಿಲ್ಲ. ಇರುಳಿಗೊಂದು ನೇಮ ಹಗಲಿ ಗೊಂದು ನೇಮ. ಲಿಂಗಕ್ಕೆ ನೇಮವಿಲ್ಲ. ಕಾಯ ಒಂದೆಸೆ ಜೀವ ಒಂದೆಸೆ ಗುಹೇಶ್ವರ ನೆಂಬ ಅಂಗವು ತಾನೊಂದೆಸೆ.

ಅಗ್ಘವಣಿ, ಪತ್ರೆ, ಪುಷ್ಪ, ಧೂಪ, ದೀಪ, ನಿವಾಳಿಯಲ್ಲಿ ಪೂಜಿಸಿ ಪೂಜಿಸಿ, ಬಳಲುತ್ತಿದ್ದಾರೆ. ಏನೆಂದರಿಯರು ಎಂತೆಂದರಿಯರು. ಜನ ಮರುಳೊ ಜಾತ್ರೆ ಮರುಳೊ ಎಂಬಂತೆ ಎಲ್ಲರೂ ಪೂಜಿಸಿ, ಏನನೂ ಕಾಣದೆ ಲಯಕ್ಕೊಳಗಾಗಿ ಹೋದರು ಗುಹೇಶ್ವರಾ.

ಸಾಸವೆಯಷ್ಟು ಸುಖಕ್ಕೆ ಸಾಗರದಷ್ಟು ದುಃಖ ನೋಡಾ! ಗಳಿಗೆಯ ಜೀಟವ ಮಾಡಿಹೆನೆಂಬ ಪರಿಯ ನೋಡಾ. ತನ್ನನಿಕ್ಕಿ ನಿಧಾನವ ಸಾಧಿಸಿಹೆನೆಂದಡೆ, ಬಿನ್ನಾಣ ತಪ್ಪಿತ್ತು ಗುಹೇಶ್ವರಾ.

ಒಳಗೆ ತೊಳೆಯಲರಿಯದೆ, ಹೊರಗೆ ತೊಳೆದು ಕುಡಿವುತ್ತಿರ್ದರಯ್ಯಾ! ಪಾದೋದಕ ಪ್ರಸಾದವನರಿಯದೆ ಬಂದ ಬಟ್ಟೆಯಲ್ಲಿ ಮುಳುಗುತ್ತಿದ್ದಾರೆ ಗುಹೇಶ್ವರಾ.

ಮರ್ತ್ಯಲೋಕದ ಮಾನವರು ದೇಗುಲದೊಳಗೊಂದು ದೇವರ ಮಾಡಿದಡೆ ಆನು ಬೆರಗಾದೆನಯ್ಯ. ನಿಚ್ಚಕ್ಕೆ ನಿಚ್ಚ ಅರ್ಚನೆಯ ಪೂಜನೆಯ ಮಾಡಿಸಿ ಭೋಗವ ಮಾಡುವವರ ಕಂಡು ನಾನು ಬೆರಗಾದೆನು. ಗುಹೇಶ್ವರಾ ನಿಮ್ಮ ಶರಣರು ಹಿಂದೆ ಲಿಂಗವನಿರಿಸಿ ಹೋದರು.

ಭಾವದಲೊಬ್ಬ ದೇವರ ಮಾಡಿ ಮನದಲೊಂದು ಭಕ್ತಿಯ ಮಾಡಿ, ಕಾಯದ ಕಯ್ಯಲಿ ಕಾರ್ಯ ಉಂಟೆ? ವಾಯಕ್ಕೆ ಬಳಲುವರು ನೋಡಾ! ಎತ್ತನೇರಿ ಎತ್ತನರಸುವರು ಎತ್ತ ಹೋದರೈ ಗುಹೇಶ್ವರಾ.

ಹೊಟ್ಟೆಯ ಮೇಲೆ ಕಟ್ಟೋಗರದ ಮೊಟ್ಟೆಯ ಕಟ್ಟಿದರೇನು? ಹಸಿವು ಹೋಹುದೆ? ಅಂಗದ ಮೇಲೆ ಲಿಂಗ ಸ್ವಾಯತವಾದರೇನು? ಇಟ್ಟಕಲ್ಲು ಮಳೆಯ ಮೇಲೆ ಸಿಕ್ಕಿದಡೆ, ಆ ಕಲ್ಲು ಲಿಂಗವೆ? ಆ ಮೆಳೆ ಭಕ್ತನೆ? ಇಟ್ಟಾತ ಗುರುವೆ? ಇಂತಪ್ಪವರ ಕಂಡಡೆ ನಾನು ನಾಚುವೆನಯ್ಯ! ಗುಹೇಶ್ವರಾ.

ಎನಗೊಂದು ಲಿಂಗ, ನಿನಗೊಂದು ಲಿಂಗ, ಮನೆಗೊಂದು ಲಿಂಗವಾಯಿತ್ತು. ಹೋಯಿತ್ತಲ್ಲಾ ಭಕ್ತಿ ಜಲವ ಕೂಡಿ. ಉಳಿ ಮುಟ್ಟಿದ ಲಿಂಗವ ಮನ ಮುಟ್ಟ ಬಲ್ಲುದೆ ಗುಹೇಶ್ವರಾ?

ಕಲ್ಲುದೇವರೆಂದು, ಪೂಜಿಸುವರು. ಆಗದು ಕಾಣಿರೋ. ಅಗಡಿಗರಾದಿರಲ್ಲಾ! ಮುಂದೆ ಹುಟ್ಟುವ ಕೂಸಿಂಗೆ ಇಂದು ಮೊಲೆಯ ಕೊಡುವಂತೆ ಗುಹೇಶ್ವರಾ.

ಕಲ್ಲ ಮನೆಯ ಮಾಡಿ, ಕಲ್ಲ ದೇವರ ಮಾಡಿ ಕಲ್ಲು ಕಲ್ಲ ಮೇಲೆ ಕೆಡೆದರೆ, ದೇವರೆತ್ತ ಹೋದರೋ? ಲಿಂಗ ಪ್ರತಿಷ್ಠೆಯ ಮಾಡಿದವಂಗೆ, ನಾಯಕ ನರಕ ಗುಹೇಶ್ವರಾ.

ದೇಹದೊಳಗೆ ದೇವಾಲಯವಿರ್ದು, ಮತ್ತೆ ಬೇರೆ ದೇವಾಲಯವೇಕೆ? ಎರಡಕ್ಕೆ ಹೇಳಲಿಲ್ಲಯ್ಯಾ ಗುಹೇಶ್ವರ ನೀನು ಕಲ್ಲಾದರೆ ನಾನೇನಪ್ಪೆನು?

ನಿರಾಳವೆಂಬ ಕೂಸಿಂಗೆ ಬೆಣ್ಣೆಯನಿಕ್ಕಿ ಹೆಸರಿಟ್ಟು ಕರೆದವರಾರೋ ಅಕಟಕಟಾ ಶಬ್ದದ ಲಜ್ಜೆಯ ನೋಡಾ! ಗುಹೇಶ್ವರನರಿಯದ ಅನುಭವಿಗಳೆಲ್ಲರ ತರಕಟಗಾಡಿತ್ತು.

ಹಾಳೂರೊಳಗೊಂದು ಮನೆಯಮಾಡಿ, ಬದುಕಿಹೆನೆಂದರೆ, ಕಾಳೋರಗ ಬಂದು ಕಡಿಯಿತ್ತು, ನೋಡಾ! ಕೇರಿಕೇರಿಯೊಳಗೆಲ್ಲಾ ಹರಿದಾಡುತ್ತಿರ್ದ್ದವು ಮಾರಿಯ ತೊರೆದ ಮದಗಜಂಗಳು. ಚಿತ್ರಗುಪ್ತರ ಕಯ್ಯ ಪತ್ರವ ತಿಳಿದು, ನೋಡಿದರೆ ಹಾಳೂರು ಹಾಳಾಯಿತ್ತು, ಗುಹೇಶ್ವರಾ.

ನಾನು ಘನ ತಾನು ಘನವೆಂಬ ಹಿರಿಯರುಂಟೆ ಜಗದೊಳಗೆ. ಹಿರಿಯರ ಹಿರಿತನದಿಂದೇನಾಯಿತ್ತು? ಹಿರಿದು ಕಿರಿದೆಂಬ ಶಬ್ದವಡಗಿದರೆ, ಆತನೆ ಶರಣ ಗುಹೇಶ್ವರಾ!

ಬಿರುಗಾಳಿ ಬೀಸಿ, ಮರ ಮುರಿವಂತೆ, ಸುಳುಹ ಸುಳಿಯದೆ ತಂಗಾಳಿ ಪರಿಮಳದೊಡಗೂಡಿ ಸುಳಿವಂತೆ, ಸುಳಿಯಬೇಕು. ಸುಳಿದಡೆ ನೆಟ್ಟನೆ ಜಂಗಮವಾಗಿ ಸುಳಿಯಬೇಕು. ಸುಳಿದಡೆ ನೆಟ್ಟನೆ ಭಕ್ತನಾಗಿ ನಿಲಬೇಕು. ಸುಳಿದು, ಜಂಗಮವಾಗಲರಿಯದ, ನಿಂದು ಭಕ್ತನಾಗಲರಿಯದ, ಉಭಯ ಭ್ರಷ್ಟರನೇನೆಂಬೆ ಗುಹೇಶ್ವರಾ?

ಅರಿದೆವರಿದೆವೆಂಬಿರಿ. ಅರಿದ ಪರಿ ಎಂತು ಹೇಳಿರೆ? ಅರಿದವರು ಅರಿದೆನೆಂಬರೆ? ಅರಿಯಬಾರದ ಘನವನರಿದವರು ಅರಿಯದಂತಿರ್ಪರಾ ಗುಹೇಶ್ವರಾ.

ವೇದವೆಂಬುದು ಓದಿನ ಮಾತು. ಶಾಸ್ತ್ರವೆಂಬುದು ಸಂತೆಯ ಸುದ್ದಿ. ಪುರಾಣವೆಂಬುದು ಪುಂಡರ ಗೋಷ್ಠಿ. ತರ್ಕವೆಂಬುದು ಟಗರ ಹೋರಟೆ. ಭಕ್ತಿಯೆಂಬುದು ತೋರಿ ಉಂಬ ಲಾಭ. ಗುಹೇಶ್ವರನೆಂಬುದು ಮೀರಿದ ಘನವು.

ಸಕಲೇಶ ಮಾದರಸ

ನೀನೆನ್ನನೊಲ್ಲದಿದ್ದರೆ ನಾನಾರ ಸಾರಿ ಬದುಕುವೆನಯ್ಯಾ? ಮೇಕು ದೋರಿ ಗಂಡನ ಮಾಡಿಕೊಂಡವರುಂಟೆ? ನಿಮ್ಮಿಂದ ಅಧಿಕರುಂಟೆ ಹೇಳಾ? ತಲೆಯೂರಿ ತಪಸ್ಸಿದ್ದೊಡೆ ಅಲ್ಲಿ ಮೂರ್ತಿಯ ತೋರುವಾತನು ನೀನೆ. ಕಣ್ಣಮುಚ್ಚಿ ಕಮ್ಮರಿಯ ಹಾಯ್ದರೆಯೂ, ಅಲ್ಲಿ ಪದವಿಯ ಕೊಡುವನು ನೀನೆ. ನೀನು ಕರುಣಿಸುವನ್ನಕ್ಕರ ನಾನು ಹಿಂಗಿದೆನೆ ಹೇಳಾ ಸಕಳೇಶ್ವರಾ?

ಜ್ಯೋತಿಯ ಮುಟ್ಟಿದ ಬತ್ತಿ ಎಲ್ಲ ಜ್ಯೋತಿಯಪ್ಪವಯ್ಯಾ! ಸಾಗರವ ಮುಟ್ಟಿದ ನದಿಗಳೆಲ್ಲ ಸಾಗರವಪ್ಪವಯ್ಯಾ! ಪ್ರಸಾದವ ಮುಟ್ಟಿದ ಪದಾರ್ಥವೆಲ್ಲ ಪ್ರಸಾದವಪ್ಪವಯ್ಯಾ! ಲಿಂಗವ ಮುಟ್ಟಿದಂಗವೆಲ್ಲ ಲಿಂಗವಪ್ಪವಯ್ಯಾ! ಸಕಳೇಶ್ವರ ದೇವಾ, ನಿಮ್ಮ ಮುಟ್ಟಿದವರೆಲ್ಲ ನಿಮ್ಮಂತಪ್ಪರಯ್ಯಾ!

ಏರಿಯ ಕಟ್ಟಬಹುದಲ್ಲದೆ, ನೀರ ತುಂಬಬಹುದೆ? ಕೈದು ಕೊಡಬಹುದಲ್ಲದೆ, ಕಲಿತನವ ಕೊಡಬಹುದೆ? ವಿವಾಹವ ಮಾಡಬಹುದಲ್ಲದೆ, ಪುರುಷತನವನರಸಬಹುದೆ?

ಘನವ ತೋರಬಹುದಲ್ಲದೆ ಸೆನಹ ನಿಲಿಸಬಹುದೆ? ಒದೊಕ್ಕಾಲು ಬುದ್ಧಿ ಮುಕ್ಕಾಲು ಎಂಬ ಲೋಕದ ಗಾದೆ ಮಾತಿನಂತೆ ಸದ್ಗುರು ಕಾರುಣ್ಯವಾದರೂ ಸಾಧಿಸದವನಿಲ್ಲ ಸಕಳೇಶ್ವರಾ.

ಮೆಳೆಯ ಮೇಲೆ ಕಲ್ಲನಿಕ್ಕಿ, ಮೆಳೆ ಭಕ್ತನಾಗಬಲ್ಲುದೆ? ಮೇಹನಿಕ್ಕಿ ಮೆಯ್ಯನೊರಸಿದೊಡೆ ಪಶುಗಳು ಮೆಚ್ಚುವವು. ಅನ್ನವನಿಕ್ಕಿ ಹಿರಣ್ಯವ ಕೊಟ್ಟರೆ ಜಗವೆಲ್ಲ ಹೊಗಳುವದು. ಒಳಗನರಿದು ಹೊರಗೆ ಮರೆದವರ ಎನಗೆ ನೀ ತೋರಾ ಸಕಳೇಶ್ವರಾ.

ಚಂದ್ರೋದಯದಲುಂಬ ಚಕೋರಕೋಗರವ ಹಾಕಿ ಬಸಿರ ಬಡಿದುಕೊಂಡು ಉಣ್ಣದೆಂದಳುವರು ನೋಡಾ! ಲೋಕದ ಚಿಂತೆಯನನಂತವನಾಡುವರಲ್ಲದೆ ತಮ್ಮ ಚಿಂತೆಯನಾಡರೊಪ್ಪಚ್ಚಿಯು ನೋಡಾ ಮಹಂತ ಸಕಳೇಶ್ವರದೇವಾ ನಿಮ್ಮ ಶರಣರ ನಿಲವಿಂಥದಯ್ಯ.

ಕಾಡ ಪತ್ರೆಯನಾ ಕೀಡಿ ತಿಂದಿರವೆ? ಉಡು ಏಕಾಂತ ನಿವಾಸಿಯೇ? ತೋಳ ದಿಗಂಬರಿಯೆ? ಎತ್ತು ಬ್ರಹ್ಮಚಾರಿಯೆ? ಬಾವುಲು ತಲೆ ಕೆಳಗಾಗಿರ್ದಡೆ ತಪಸಿಯೆ? ಸಕಳೇಶ್ವರದೇವಾ, ನಿಮ್ಮ ನಿಜವನರಿಯದ ಶರಣರು ಹೊರಹಂಚು ಒಳಬೊಳ್ಳೆ. ಬಲ್ಲರು ಲಿಂಗೈಕ್ಯರು.

ಬಸವೇಶ್ವರ

ಉದಕದೊಳಗೆ ಬೈಚಿಟ್ಟ ಬಯಕೆಯ ಕಿಚ್ಚಿನಂತಿದ್ದಿತ್ತು. ಶಶಿಯೊಳಗಣ ರಸದ ರುಚಿಯಂತೆ ಇದ್ದಿತ್ತು. ನನೆಯೊಳಗಣ ಪರಿಮಳದಂತೆ ಇದ್ದಿತ್ತು. ಕೂಡಲ ಸಂಗಮ ದೇವರ ನಿಲವು ಕನ್ನೆಯ ಸ್ನೇಹದಂತಿದ್ದಿತ್ತು.

ಕರಿ ಘನ, ಅಂಕುಶ ಕಿರಿದೆನ್ನಬಹುದೆ? ಬಾರದಯ್ಯಾ. ಗಿರಿ ಘನ, ವಜ್ರ ಕಿರಿದೆನ್ನಬಹುದೇ? ಬಾರದಯ್ಯಾ! ತಮಂಧ ಘನ ಜ್ಯೋತಿ ಕಿರಿದೆನ್ನಬಹುದೆ? ಬಾರದಯ್ಯಾ! ಮರಹು ಘನ, ನಿಮ್ಮ ನೆನೆವ ಮನ ಕಿರಿದೆನ್ನಬಹುದೇ? ಬಾರದಯ್ಯಾ ಕೂಡಲಸಂಗಮದೇವಾ.

ಕಪ್ಪೆ ಸರ್ಪನ ನೆಳಲಲ್ಲಿ ಇಪ್ಪಂತೆ ಎನಗಾಯಿತ್ತಯ್ಯಾ! ಅಕಟಕಟಾ, ಸಂಸಾರ ವೃಥಾ ಹೋಯಿತ್ತಲ್ಲಾ! ಕರ್ತುವೇ ಕೂಡಲಸಂಗಮದೇವಾ, ಇವ ತಪ್ಪಿಸಿ, ಎನ್ನುವ ರಕ್ಷಿಸಯ್ಯಾ.

ಶೂಲದ ಮೇಲಣ ವಿಭೋಗವೇನಾದರೇನೋ. ನಾನಾವರ್ಣದ ಸಂಸಾರ ಹಾವ ಹಾವಡಿಗನ ಸ್ನೇಹದಂತೆ. ತನ್ನಾತ್ಮ ತನಗೆ ಹಗೆಯಾದ ಬಳಿಕ, ಜಿನ್ನಾಣ ಉಂಟೇ, ಮಹಾದಾನಿ ಕೂಡಲಸಂಗಮದೇವಾ?

ಚಂದ್ರೋದಯಕ್ಕೆ ಅಂಬುಧಿ ಹೆಚ್ಚುವದಯ್ಯಾ! ಚಂದ್ರ ಕುಂದೆ, ಕುಂದುವುದಯ್ಯಾ! ಚಂದ್ರಂಗೆ ರಾಹು ಅಡ್ಡಬಂದಲ್ಲಿ, ಅಂಬುಧಿ ಬೊಬ್ಬಿಟ್ಟಿತ್ತೆ? ಅಂಬುಧಿಯ ಮುನಿ ಆಪೋಷಣವ ಕೊಂಬಲ್ಲಿ, ಚಂದ್ರಮನಡ್ಡ ಬಂದನೆ? ಆರಿಗಾರು ಇಲ್ಲ, ಕೆಟ್ಟವಂಗೆ ಕೆಳೆ ಇಲ್ಲ. ಜಗದ ನಂಟ ನೀನೇ ಅಯ್ಯಾ ಕೂಡಲಸಂಗಮದೇವಾ.

ಒಲೆ ಹತ್ತಿ ಉರಿದಡೆ ನಿಲ್ಲಬಹುದಲ್ಲದೆ, ಧರೆ ಹತ್ತಿ ಉರಿದಡೆ ನಿಲ್ಲಬಹುದೇ? ಏರಿ ನೀರುಂಬಡೆ, ಬೇಲಿ ಕೆಯ್ಯ ಮೇವಡೆ, ನಾರಿ ತನ್ನ ಮನೆಯಲ್ಲಿ ಕಳವಡೆ, ತಾಯಿ ಮೊಲೆಹಾಲು ನಂಜಾಗಿ ಕೊಲುವಡೆ, ಇನ್ನಾರಿಗೆ ದೂರುವೆ ಕೂಡಲಸಂಗಮದೇವಾ?

ಎನ್ನ ಚಿತ್ತವು ಅತ್ತಿಯ ಹಣ್ಣು ನೋಡಯ್ಯಾ! ವಿಚಾರಿಸಿದರೆ ಏನು ಹುರುಳಿಲ್ಲವಯ್ಯಾ! ಪ್ರಪಂಚಿನ ಡಂಭಿನಲ್ಲಿ ಎನ್ನನೊಂದು ರೂಪುಮಾಡಿ, ನೀವಿರಿಸಿದಿರಯ್ಯಾ ಕೂಡಲಸಂಗಮದೇವಾ.

ಎನ್ನ ನಡೆಯೊಂದು ಪರಿ, ಎನ್ನ ನುಡಿಯೊಂದು ಪರಿ. ಎನ್ನೊಳಗೇನು ಶುದ್ಧವಿಲ್ಲ, ನೋಡಯ್ಯಾ! ನುಡಿಗೆ ತಕ್ಕ ನಡೆಯ ಕಂಡರೆ, ಕೂಡಲಸಂಗಮದೇವನೊಳಗಿಪ್ಪ ನೋಡಯ್ಯಾ.

ತುಪ್ಪದ ಸವಿಗೆ ಅಲಗ ನೆಕ್ಕುವ ಸೊಣಗನಂತೆ ಎನ್ನ ಬಾಳುವೆ. ಸಂಸಾರ ಸಂಗವ ಬಿಡದು ನೋಡೆನ್ನ ಮನವು. ಈ ನಾಯಿತನವ ಮಾಣಿಸು, ಕೂಡಲಸಂಗಮದೇವ ನಿಮ್ಮ ಧರ್ಮ.

ಬೆಳೆವ ಭೂಮಿಯಲೊಂದು ಪ್ರಳಯದ ಕಸ ಹುಟ್ಟಿ, ತಿಳಿಯಲೀಯ್ಯದು, ಎಚ್ಚರಲೀಯ್ಯದು. ಎನ್ನವಗುಣವೆಂಬ ಕಸವ ಕಿತ್ತು, ಸಲಹಯ್ಯ ಲಿಂಗತಂದೆ. ಸುಳಿದೆಗೆದು ಬೆಳೆವೆನು, ಕೂಡಲಸಂಗಮದೇವಾ.

ವಿಷಯವೆಂಬ ಹಸರನೆನ್ನ ಮುಂದೆ ತಂದು ಪಸರಿಸಿದೆಯಯ್ಯ! ಪಶುವೇನ ಬಲ್ಲುದು, ಹಸುರೆಂದೆಳಸುವುದು. ವಿಷಯರಹಿತನ ಮಾಡಿ, ಭಕ್ತಿರಸವ ದಣಿಯ ಮೇಯಿಸಿ, ಸುಬುದ್ಧಿ ಎಂಬ ಉದಕವನೆರೆದು, ನೋಡಿ ಸಲಹಯ್ಯ, ಕೂಡಲಸಂಗಮದೇವಾ.

ಕೆಸರಲ್ಲಿ ಬಿದ್ದ ಪಶುವಿನಂತೆ, ಆನು ದೆಸೆದೆಸೆಗೆ ಬಾಯಬಿಡುತಿದ್ದೆನಯ್ಯಾ! ಅಯ್ಯಾ ಆರೈವರಿಲ್ಲ, ಅಕಟಕಟಾ! ಪಶುವೆಂದೆನ್ನ ಕೂಡಲಸಂಗಮದೇವ ಕೊಂಬ ಹಿಡಿದೆತ್ತುವನ್ನಕ್ಕ.

ಬಡ ಪಶು ಪಂಕದಲ್ಲಿ ಬಿದ್ದರೆ, ಕಾಲ ಬಡಿವುದಲ್ಲದೆ, ಬೇರೆ ಗತಿಯುಂಟೆ? ಶಿವ, ಶಿವಾ! ಹೋದಹೆ ಹೋದಹೆನಯ್ಯಾ! ನಿಮ್ಮ ಮನದತ್ತವೆನ್ನ ತೆಗೆಯಯ್ಯ. ಪಶುವಾನು, ಪಶುಪತಿ ನೀನು. ತುಡುಗುಣಿ ಎಂದು ಎನ್ನ ಹಿಡಿದು ಬಡಿಯದ ಮುನ್ನ, ಒಡೆಯ, ನಿಮ್ಮ ಬಯ್ಯುದಂತೆ ಮಾಡು, ಕೂಡಲಸಂಗಮದೇವಾ.

ಸಮುದ್ರದೊಳಗಣ ಸಿಂಪಿನಂತೆ, ಬಾಯ ಬಿಡುತ್ತಿದ್ದೆನಯ್ಯಾ! ನೀವಲ್ಲದೆ ಮತ್ತಾರೂ ಎನ್ನನರಿವರಿಲ್ಲ ನೋಡಯ್ಯ, ಕೂಡಲಸಂಗಮದೇವಾ, ನೀನಲ್ಲದೊಳ ಕೊಂಬುವರಿಲ್ಲ ನೋಡಯ್ಯ.

ಅಯ್ಯಾ! ಅಯ್ಯಾ! ಎಂದು ಕರೆವುತ್ತಲಿದ್ದೇನೆ. ಅಯ್ಯಾ, ಅಯ್ಯಾ ಎಂದು ಒರಲುತ್ತಲಿದ್ದೇನೆ. ಓ ಎನ್ನಲಾಗದೆ ಅಯ್ಯಾ! ಆವಾಗಳೂ ನಿಮ್ಮುವ ಕರೆವುತ್ತಲಿದ್ದೇನೆ. ಓ ಎನ್ನದೆ ಮೌನವೇ ಕೂಡಲಸಂಗಮದೇವಾ?

ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯಾ ತಂದೆ! ಸುತ್ತಿ ಸುಳಿದು ನೋಡದಂತೆ ಅಂಧಕನ ಮಾಡಯ್ಯಾ ತಂದೆ. ಮತ್ತೊಂದ ಕೇಳದಂತೆ, ಕಿವುಡನ ಮಾಡಯ್ಯಾ ತಂದೆ. ನಿಮ್ಮ ಶರಣರ ಪಾದವಲ್ಲದೆ ಅನ್ಯವಿಷಯಕ್ಕೆಳಸದಂತೆ ಇರಿಸು ಕೂಡಲಸಂಗಮದೇವಾ.

ನೀನೊಲಿದರೆ ಕೊರಡು ಕೊನರುವದಯ್ಯಾ! ನೀನೊಲಿದರೆ ಬರಡು ಹಯನಹುದಯ್ಯಾ! ನೀನೊಲಿದರೆ ವಿಷವೆಲ್ಲ ಅಮೃತವಹುದಯ್ಯ! ನೀನೊಲಿದರೆ, ಸಕಲ ಪಡಿಪದಾರ್ಥ ಇದಿರಲ್ಲಿಪ್ಪವು, ಕೂಡಲ ಸಂಗಮದೇವಾ.

ಕುಂಬಳಕಾಯಿಗೆ ಕಬ್ಬುನದ ಕಟ್ಟ ಕೊಟ್ಟರೆ
ಕೊಳೆವುದಲ್ಲದೆ ಬಲುಹಾಗಬಲ್ಲುದೇ?
ಅಳಿಮನದವಂಗೆ ಶಿವದೀಕ್ಷೆಯ ಕೊಟ್ಟರೆ
ಭಕ್ತಿ ಎಂತಹುದೋ?—ಮುನ್ನಿನಂತೆ!
ಕೂಡಲಸಂಗಯ್ಯಾ, ಮನಹೀನನ ಮೀಸಲ ಕಾಯ್ದಿರಿಸಿದಂತೆ!

ಎನ್ನವರೆನ್ನ ಹೊಗಳಿ ಹೊನ್ನಶೂಲದಲಿಕ್ಕಿದರು ಎನ್ನ ಹೊಗಳಿ ಹೊಗಳಿ. ಎನ್ನ ಹೊಗಳತೆ ಎನ್ನ ಮೈಗೊಂಡಿತಲ್ಲಾ! ಅಯ್ಯಾ ನಿಮ್ಮ ಮನ್ನಣೆಯೇ ಮಸೆದಲಗಾಗಿ ತಾಗಿತ್ತಲ್ಲಾ! ಅಯ್ಯಾ, ನೊಂದೆನು, ಸೈರಿಸಲಾರೆನು. ಕೂಡಲ ಸಂಗಮದೇವಾ, ನೀನೆನಗೊಳ್ಳಿದನಾದರೆ, ಎನ್ನ ಹೊಗಳತೆಗಡ್ಡಬಾರಾ, ಧರ್ಮಿ.

ಸಗಣೆಯ ಬೆನಕಂಗೆ ಸಂಪಗೆಯರಳಲ್ಲಿ ಪೂಜಿಸಿದರೆ
ರಂಜನೆಯಲ್ಲದೆ ಅದರ ಗಂಜಳ ಬಿಡದಣ್ಣಾ!
ಮಣ್ಣ ಪುತ್ಥಳಿಯ ಮಾಣದೆ ಜಲದಲ್ಲಿ ತೊಳೆದರೆ

ನಿಚ್ಚ ನಿಚ್ಚಕ್ಕೆ ಕೆಸಱಹುದಲ್ಲದೆ ಅದಱಿಚ್ಛುಗ ಬಿಡದಣ್ಣಾ!
ಲೋಕದ ಮಾನವಂಗೆ ಶಿವದೀಕ್ಷೆಯ ಕೊಟ್ಟರೆ
ಕೆಟ್ಟವನೇಕೆ ಶಿವಭಕ್ತನಹನು ಕೂಡಲಸಂಗಮದೇವಾ?

ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೊ?
ಹೊಸ್ತಿಲಲ್ಲಿ ಹುಲ್ಲುಹುಟ್ಟಿ, ಮನೆಯೊಳಗೆ ರಜ ತುಂಬಿ,
ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೊ?
ತನುವಿನೊಳಗೆ ಹುಸಿ ತುಂಬಿ, ಮನದೊಳಗೆ ವಿಷಯತುಂಬಿ,
ಮನೆಯೊಳಗೆ ಮನೆಯೊಡೆಯನಿಲ್ಲಾ,
ಕೂಡಲಸಂಗಮದೇವ.

ಎನಿಸುಕಾಲ ಕಲ್ಲು ನೀರೊಳಗಿರ್ದಡೇನು,
ನೆನದು ಮೃದುವಾಗಬಲ್ಲುದೇ?
ಎನಿಸುಕಾಲ ನಿಮ್ಮ ಪೂಜಿಸಿ ಏವೆನಯ್ಯಾ,
ಮನದಲ್ಲಿ ದೃಢವಿಲ್ಲದನ್ನಕ್ಕ?
ನಿಧಾನವ ಕಾಯ್ದಿರ್ದ ಬೆಂತರನಂತೆ!—
ಅದಱ ವಿಧಿಯೆನಗಾಯಿತ್ತು, ಕೂಡಲಸಂಗಮದೇವಾ.

ಒಲೆಯ ಬೂದಿಯ ಬಿಲಿಯಲು ಬೇಡ,
ಒಲಿದಂತೆ ಹೂಸಿಕೊಂಡಿಪ್ಪುದು.
ಹೂಸಿ ಏನು ಫಲ ಮನದಲ್ಲಿ ಲೇಸಿಲ್ಲದನ್ನಕ್ಕ?
ಒಂದನಾಡಹೋಗಿ ಒಂಬತ್ತನಾಡುವ
ಡಂಭಕರ ಮೆಚ್ಚ ಕೂಡಲಸಂಗಮದೇವ.

ಧರಣಿಯ ಮೇಲೊಂದು ಹಿರಿದಪ್ಪ ಅಂಗಡಿಯನಿಕ್ಕಿ
ಹರದ ಕುಳ್ಳಿರ್ದ ನಮ್ಮ ಮಹದೇವಸೆಟ್ಟಿ.
ಒಮ್ಮನವಾದರೆ ಒಡನೆ ನುಡಿವನು; ಇಮ್ಮನವಾದರೆ ನುಡಿಯನು.
ಕಾಣಿಯ ಸೋಲ: ಅರ್ದ್ದಗಾಣಿಯ ಗೆಲ್ಲ!
ಜಾಣ, ನೋಡವ್ವಾ, ನಮ್ಮ ಕೂಡಲಸಂಗಮದೇವ.

ಲೋಕದ ಡೊಂಕ ನೀವೇಕೆ ತಿದ್ದುವಿರಿ?
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ;
ನಿಮ್ಮ ನಿಮ್ಮ ಮನವ ಸಂತಯಿಸಿಕೊಳ್ಳಿ.
ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ
ಕೂಡಲಸಂಗಮದೇವ.

ಒಲವಿಲ್ಲದ ಪೂಜೆ! ನೇಹವಿಲ್ಲದ ಮಾಟ!!
ಆ ಪೂಜೆಯು ಆ ಮಾಟವು
ಚಿತ್ರದ ರೂಹು ಕಾಣಿರಣ್ಣಾ! ಚಿತ್ರದ ಕಬ್ಬು ಕಾಣಿರಣ್ಣಾ!!
ಅಪ್ಪಿದರೆ ಸುಖವಿಲ್ಲಾ! ಮೆಲಿದರೆ ರುಚಿಯಿಲ್ಲ!!
ಕೂಡಲಸಂಗಮದೇವಾ ನಿಜವಿಲ್ಲದವನ ಭಕ್ತಿ!!

ಹಬ್ಬಕ್ಕೆ ತಂದ ಹರಕೆಯ ಕುಱಿ
ತೋರಣಕ್ಕೆ ತಂದ ತಳಿರ ಮೇಯಿತ್ತು;
ಕೊಂದಹರೆಂಬುದನಱಿಯದೆ
ಬೆಂದವೊಡಲ ಹೊರೆಯ ಹೋಯಿತ್ತಲ್ಲದೆ!
ಅದಂದೇ ಹುಟ್ಟಿತ್ತು, ಅದಂದೇ ಹೊಂದಿತ್ತು.
ಕೊಂದವರುಳಿದರೆ ಕೂಡಲ ಸಂಗನುದೇವಾ?

ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯಾ:
ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯಾ;
ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯಾ,
ಕೂಡಲಸಂಗಮದೇವಾ.

ಆದ್ಯರ ವಚನ ಪರುಷ ಕಂಡಣ್ಣಾ:
ಸದಾಶಿವನೆಂಬ ಲಿಂಗವ ನೆಱೆನಂಬುವುದು;
ನಂಬಲೊಡನೆ ನೀ ವಿಜಯಿ ಕಂಡಣ್ಣಾ.
ಅಧರಕ್ಕೆ ಕಹಿ, ಉದರಕ್ಕೆ ಸಿಹಿ,
ಕೂಡಲಸಂಗನ ಶರಣರ ವಚನ ಬೇವ ಸವಿದಂತೆ.

ಕಲ್ಲ ನಾಗರ ಕಂಡರೆ ಹಾಲನೆಱೆಯೆಂಬರು:
ದಿಟದ ನಾಗರ ಕಂಡರೆ ಕೊಲ್ಲೆಂಬರಯ್ಯಾ!
ಉಂಬ ಜಂಗಮ ಬಂದರೆ ನಡೆಯೆಂಬರು,
ಉಣ್ಣದ ಲಿಂಗಕ್ಕೆ ಬೋನವ ಹಿಡಿಯೆಂಬರಯ್ಯಾ!
ನಮ್ಮ ಕೂಡಲ ಸಂಗನ ಶರಣರ ಕಂಡುದಾಸೀನವ ಮಾಡಿದರೆ
ಕಲ್ಲ ತಾಗಿದ ಮಿಟ್ಟೆಯಂತಪ್ಪರಯ್ಯಾ.

ಭಕ್ತಿಯೆಂಬುದ ಮಾಡಬಾರದು,
ಕರಗಸದಂತೆ ಹೋಗುತ್ತ ಕೊಯ್ವುದು ಬರುತ್ತ ಕೊಯ್ವುದು!
ಘಟಸರ್ಪನಲ್ಲಿ ಕೈದುಡುಕಿದರೆ ಹಿಡಿವುದ ಮಾಣ್ಬುದೆ
ಕೂಡಲಸಂಗಮದೇವಾ?

ಸಜ್ಜಿದೆಸೆಂದರೆ, ಮಜ್ಜಿದೆಸೆಂದರೆ, ಸಲೆ ಮಾಱುವೋದೆಸೆಂದರೆ
ತನುವನಲ್ಲಾಡಿಸಿ ನೋಡುವೆ ನೀನು,
ಮನವನಲ್ಲಾಡಿಸಿ ನೋಡುವೆ ನೀನು,
ಧನವನಲ್ಲಾಡಿಸಿ ನೋಡುವೆ ನೀನು.
ಇದಕ್ಕೆಲ್ಲ ಅಂಜದಿದ್ದರೆ ಭಕ್ತಿಕಂಪಿತ ನಮ್ಮ ಕೂಡಲಸಂಗಮದೇವ!

ಕಳಬೇಡ, ಕೊಲಬೇಡ; ಹುಸಿಯ ನುಡಿಯಲುಬೇಡ;
ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ;
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ.
ಇದೇ ಅಂತರಂಗಶುದ್ಧಿ, ಇದೇ ಬಹಿರಂಗಶುದ್ಧಿ,
ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ!

ದೇವಲೋಕ ಮರ್ತ್ಯಲೋಕವೆಂಬುದು ಬೇಱಿಲ್ಲ ಕಾಣಿ ಭೋ!
ಸತ್ಯವ ನುಡಿವುದೆ ದೇವಲೋಕ; ಮಿಥ್ಯವ ನುಡಿವುದೆ ಮರ್ತ್ಯಲೋಕ!
ಆಚಾರವೆ ಸ್ವರ್ಗ, ಅನಾಚಾರವೇ ನರಕ
ಕೂಡಲಸಂಗಮದೇವಾ, ನೀವೇ ಪ್ರಮಾಣು.

ಪುಣ್ಯ ಪಾಪವೆಂಬುವು ತಮ್ಮಿಷ್ಟ ಕಂಡಿರೇ:
'ಅಯ್ಯಾ' ಎಂದರೆ ಸ್ವರ್ಗ, 'ಎಲವೋ' ಎಂದಡೆ ನರಕ!
"ದೇವಾ, ಭಕ್ತ ಜಯಾ ಜೀಯಾ" ಎಂಬ ನುಡಿಯೊಳಗೆ
ಕೈಲಾಸವಿದ್ದುದೇ, ಕೂಡಲಸಂಗಮದೇವಾ.

ದಯವಿಲ್ಲದ ಧರ್ಮವದೇವುದಯ್ಯಾ?
ದಯವೇ ಬೇಕು ಸಕಲ ಪ್ರಾಣಿಗಳೆಲ್ಲಱಲ್ಲಿಯೂ;
ದಯವೇ ಧರ್ಮದ ಮೂಲವಯ್ಯಾ,
ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ.

ತನಗೆ ಮುನಿದವರಿಗೆ ತಾ ಮುನಿಯಲೇಕಯ್ಯಾ?
ತನಗಾದ ಆಗೇನು? ಅವರಿಗಾದ ಚೇಗೇನು?
ತನುವಿನ ಕೋಪ ತನ್ನ ಹಿರಿಯತನದ ಕೇಡು!
ಮನದ ಕೋಪ ತನ್ನಱಿಹಿನ ಕೇಡು!
ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ
ನೆರೆಮನೆಯ ಸುಡದು, ಕೂಡಲಸಂಗಮದೇವಾ!

ಕರಗಿಸಿ ಎನ್ನ ಮನದ ಕಾಳಿಕೆಯ ಕಳೆಯಯ್ಯಾ ;
ಒರೆ ಬಣ್ಣಕ್ಕೆ ತಂದೆನ್ನ ಪುಟವಿಕ್ಕಿ ನೋಡಯ್ಯಾ ;
ಕಡಿಹಕ್ಕೆ ಒಡಿಹಕೆ ತಾದೆನ್ನ ಕಡೆಯಾಣಿಯಮಾಡಿ,
ನಿಮ್ಮ ಶರಣರ ಪಾದಕ್ಕೆ ತೊಡಿಗೆಯ ಮಾಡಿ ಸಲುಹು,
ಕೂಡಲಸಂಗಮದೇವಾ !

ಅರಿಸಿನವನೆ ಮಿಂದು, ಹೊಂದೊಡಿಗೆಯನೆ ತೊಟ್ಟು
ಪುರುಷನ ಒಲವಿಲ್ಲದ ಲಲನೆಯಂತಾಗಿರ್ದೆನಯ್ಯಾ!
ವಿಭೂತಿಯನೆ ಹೂಸಿ, ರುದ್ರಾಕ್ಷಿಯನೆ ಕಟ್ಟಿ,
ಶಿವ ನಿಮ್ಮೊಲವಿಲ್ಲದಂತೆ ಆಗಿರ್ದೆನಯ್ಯಾ!
ಕೆಟ್ಟು ಬಾಳುವರಿಲ್ಲಾ ಎಮ್ಮವರ ಕುಲದಲ್ಲಿ :
ನೀನೊಲಿದಂತೆ ಸಲಹಯ್ಯಾ, ಕೂಡಲಸಂಗಮದೇವಾ.

ವಚನದಲ್ಲಿ ನಾಮಾಮೃತ ತುಂಬಿ, ನಯನದಲ್ಲಿ ಮೂರುತಿ ತುಂಬಿ
ಮನದಲ್ಲಿ ನಿಮ್ಮ ನೆನಹು ತುಂಬಿ, ಕಿವಿಯಲ್ಲಿ ಕೀರುತಿ ತುಂಬಿ,
ಕೂಡಲಸಂಗಮದೇವಾ, ನಿಮ್ಮ ಚರಣಕಮಲದಲಾನು ತುಂಬಿ !

ಎನ್ನ ಕಾಯವ ದಂಡಿಗೆಯ ಮಾಡಯ್ಯಾ;
ಎನ್ನ ಸಿರವ ಸೋರೆಯ ಮಾಡಯ್ಯಾ;
ಎನ್ನ ನರವ ತಂತಿಯ ಮಾಡಯ್ಯಾ;
ಎನ್ನ ಬೆರಳ ಕಡ್ಡಿಯ ಮಾಡಯ್ಯಾ!
ಬತ್ತೀಸ ರಾಗವ ಹಾಡಯ್ಯಾ; ಉರದಲೊತ್ತಿ ಬಾರಿಸು,
ಕೂಡಲಸಂಗಮದೇವಾ.

ಕೊಲುವನೇ ಮಾದಿಗ, ಹೊಲಸ ತಿಂಬವನೇ ಹೊಲೆಯ !
ಕುಲವೇನೋ, ಅವಂದಿರ ಕುಲವೇನೊ ?
ಸಕಲ ಜೀವಾತ್ಮರಿಗೆ ಲೇಸನೇ ಬಯಸುವ
ನಮ್ಮ ಕೂಡಲಸಂಗನ ಶರಣರೇ ಕುಲಜರು.

ದೇವನೊಬ್ಬ, ನಾಮ ಹಲವು :
ಪರಮ ಪತಿವ್ರತೆಗೆ ಗಂಡನೊಬ್ಬ;
ಮತ್ತೊಂದಕ್ಕೆಱಗಿದರೆ ಕಿವಿಮೂಗಕೊಯ್ವನು !
ಹಲವು ದೈವದ ಎಂಜಲ ತಿಂಬವರನೇನೆಂಬೆ,
ಕೂಡಲಸಂಗಮದೇವಾ ?

ಜೋಳವಾಳಿಯಾನಲ್ಲ, ವೇಳೆವಾಳಿಯವ ನಾನಯ್ಯಾ :
ಹಾಳುಗೆಟ್ಟೋಡುವ ಆಳು ನಾನಲ್ಲಯ್ಯಾ ;
ಕೇಳು, ಕೂಡಲಸಂಗಮದೇವಾ,
ಮರಣವೇ ಮಹಾನವಮಿ !

ಊರ ಮುಂದೆ ಹಾಲ ಹಳ್ಳ ಹರಿಯುತ್ತಿರಲು,
ಓಱೆಯಾವಿನ ಬೆನ್ನಲ್ಲಿ ಹರಿಯಲದೇಕಯ್ಯಾ?
ಲಜ್ಜೆಗೆಡಲೇಕೆ ? ನಾಣುಗೆಡಲೇಕೆ ?
ಕೂಡಲಸಂಗಮದೇವಯ್ಯನುಳ್ಳನ್ನಕ್ಕ
ಬಿಜ್ಜಳನ ಭಂಡಾರವೆನಗೇಕಯ್ಯಾ?

ಚೆನ್ನಬಸವೇಶ್ವರ

ಹೆಗ್ಗಣವನಿಕ್ಕಿ ಸೆಲಗಬ್ಬುಕಟ್ಟಿದಂತೆ ಆಯಿತ್ತೆನ್ನ ಕಾಯಗುಣ ;
ಅಹಂಕಾರ ಪ್ರಬೋಧೆಗಳೇಕಯ್ಯಾ ?
ಕಾಮಕ್ರೋಧಲೋಭ ಮೋಹಮದ ಮತ್ಸರಂಗಳನಿಕ್ಕಿ ಎನ್ನ ಮಾಡಿದಿರಿ
ಎನ್ನ ಬಾಧಿಸಲೆಂದು ಲಿಂಗಯ್ಯ ತಂದೆ!
ಆಧಿವ್ಯಾಧಿಗಳೆಲ್ಲವ ಕಳೆದು, ನಿರ್ವಾಣವಪ್ಪ ಪದವ ಕರುಣಿಸಯ್ಯಾ ಕೂಡಲ
ಚನ್ನಸಂಗಮದೇವಾ.

ಎನಗೆ ನಾನೇ ಹಗೆಯು ನೋಡಯ್ಯಾ
ಎನಗೆ ನಾನೇ ಕೆಳೆಯು ನೋಡಯ್ಯಾ
ನಿನ್ನ ಸದ್ಭಕ್ತರೊಡನೆ ವಿರೋಧವ ಮಾಡಿದಡೆ ಎನ್ನ ಕೊಲ್ಲುವರಾಗಿ.
ನಿಮ್ಮ ಪುರಾತನರ್ಗೆ ಅಂಜಿ ಬೆಸಕೆಯ್ದುದೇ ಎನ್ನ ಕಾಯ್ದುದಾಗಿ
ಅನ್ಯರು ಹಗೆಯಲ್ಲ ; ಕೆಳೆಯಲ್ಲ.
ಬಾಗಿದ ತಲೆ, ಮುಗಿದ ಕೈಯಾಗಿರಿಸು ಕೂಡಲಚನ್ನಸಂಗಮದೇವಾ !

ಜ್ಞಾನಾಮೃತವೆಂಬ ಜಲನಿಧಿಯಮೇಲೆ
ಸಂಸಾರವೆಂಬ ಹಾವಸೆ ಮುಸುಕಿಹುದು.
ನೀರವೊಗೆವರು ಬಂದು ನೂಕಿದಲ್ಲದೆ ತೆರಳದು
ಮರಳಿ ಮುಸುಕುವುದು ಮಾಣಿಸಯ್ಯಾ !
"ಆಗಳು ಎನ್ನುವ ನೆನೆವುತ್ತಿರಬೇಕೆಂ"ದು ಬೇಗ ಗುರು ಒಪ್ಪಿಸಿ
ತನ್ನ ಪ್ರಸಾದವೆಂದು ಕುಱುಹ ಕೊಟ್ಟನು.

ದಿವಾರಾತ್ರಿ ತನ್ನನಱಿಯಬೇಕೆಂದು
ಕೆಱೆಯ ನೀರನುಂಡು ತೊಱೆಯ ನೀರ ಹೊಗಳುವ
ಅರೆಮರುಳರ ಮೆಚ್ಚುವನೆ ನಮ್ಮ ಕೂಡಲಚೆನ್ನಸಂಗಮದೇವ.

ಅನುಭಾವ ಅನುಭಾವವೆಂದೆಂಬಿರಿ
ಅನುಭಾವವೆಂಬುದು ನೆಲದ ಮಱೆಯ ನಿಧಾನ ಕಾಣಿ ಭೋ !
ಅನುಭಾವವೆಂಬುದು ಶಿಶುಕಂಡ ಕನಸುಕಾಣಿ ಭೋ !
ಅನುಭಾವವೆಂಬುದು ರಚ್ಚೆಯೆ
ಅನುಭಾವವೆಂಬುದು ಸಂತೆಯ ಸುದ್ದಿಯೆ ?
ಅನುಭಾವವೆಂಬುದು ಬೀದಿಯ ಪಸರವೆ ?
ಏನೆಂಬೆ ಹೇಳಾ ಮಹಾಘನವನು ?
ಆನೆಯ ಮಾನದೊಳಿಕ್ಕಿದಡಡಗಾತ್ರದೆ, ದರ್ಪಣದೊಳಡಗಾತ್ರದಲ್ಲದೆ ?
ಕಂಡಕಂಡಲ್ಲಿ ಗೋಷ್ಟಿ, ನಿಂದನಿಂದಲ್ಲಿ ಅನುಭಾವ
ಬಂದಬಂದಲ್ಲಿ ಪ್ರಸಂಗವ ಮಾಡುವ
ಪಾತಕರ ತೋಱದಿರಯ್ಯ, ಕೂಡಲ ಚನ್ನಸಂಗಮದೇವಾ.

ಮಹಾದೇವಿಯಕ್ಕ

ವನವೆಲ್ಲ ನೀವೆ, ವನದೊಳಗಣ ದೇವತರುವೆಲ್ಲ ನೀವೆ. ತರುವಿನೊಳಗಾಡುವ ಖಗಮೃಗವೆಲ್ಲ ನೀವೆ, ಚನ್ನಮಲ್ಲಿಕಾರ್ಜುನ ಸರ್ವಭರಿತನಾಗಿ ಎನಗೆ ಮುಖದೋರ.

ತೆರಣಿಯ ಹುಳು ತನ್ನ ಸ್ನೇಹದಲ್ಲಿ ಮನೆಯಮಾಡಿ, ತನ್ನ ನೂಲು ತನ್ನ ಸುತ್ತಿಸಾವ ತೆರನಂತೆ, ಮನಬಂದುದ ಬಯಸಿ ಬೇವುತ್ತಿದ್ದೇನೆ ಅಯ್ಯ ! ಎನ್ನಮನದ ದುರಾಶೆಯ ಮಾಣಿಸಿ ನಿಮ್ಮತ್ತ ತೋರಾ ಚನ್ನಮಲ್ಲಿಕಾರ್ಜುನಾ.

ಎನ್ನ ಮಾಯದ ಮದವ ಮುರಿಯಯ್ಯ ! ಎನ್ನ ಕಾಯದ ಕತ್ತಲೆಯ ಕಳೆಯಯ್ಯ ! ಎನ್ನ ಜೀವದ ಜಂಜಡವ ಮಾಣಿಸಯ್ಯ ! ಎನ್ನ ದೇವ ಚನ್ನಮಲ್ಲಿ ಕಾರ್ಜುನ ದೇವಯ್ಯ, ಎನ್ನ ಸುತ್ತಿದ ಪ್ರಪಂಚವ ಬಿಡಿಸು ನಿಮ್ಮ ಧರ್ಮಾ.

ಊರ ಸೀರೆಗೆ ಅಸಗ ತಡಬಡಗೊಂಬಂತೆ ಹೊನ್ನೆನ್ನದು, ಹೆಣ್ಣೆನ್ನದು, ಮಣ್ಣೆನ್ನದು ಎಂದು ನೆನೆನೆನೆದು ನಿಮ್ಮನರಿಯದ ಕಾರಣ ಕೆಮ್ಮನೆ ಕೆಟ್ಟೆನಯ್ಯ ಚನ್ನಮಲ್ಲಿಕಾರ್ಜುನಯ್ಯ.

ಹರನೇ ನೀನೆನಗೆ ಗಂಡನಾಗಬೇಕೆಂದು ಅನಂತಕಾಲ ತಪಸಿದ್ದೆ ನೋಡಾ. ಹಸೆಯ ಮೇಲಣ ಮಾತ ಬೆಸಗೊಳಲಟ್ಟಿದರೆ, ಶಶಿಧರನ ಹತ್ತಿರಕ್ಕೆ ಕಳುಹಿಸಿದರೆಮ್ಮವರು. ಭಸ್ಮವನೆ ಹೂಸಿ, ಕಂಕಣವನೇ ಕಟ್ಟಿದರು, ಚನ್ನಮಲ್ಲಿಕಾರ್ಜುನಯ್ಯ, ನನಗೆ ನೀನಾಗಬೇಕೆಂದು.

ಪಚ್ಚೆಯ ನೆಲಗಟ್ಟು, ಕನಕದ ತೋರಣ, ವಜ್ರದ ಕಂಭ, ಪವಳದ ಚಪ್ಪರವನಿಕ್ಕಿ ಮುತ್ತುಮಾಣಿಕದ ಮೇಲುಕಟ್ಟ ಕಟ್ಟಿ, ಮದುವೆಯ ಮಾಡಿದರು, ನಮ್ಮವರೆನ್ನ ಮದುವೆಯ ಮಾಡಿದರು ಕಂಕಣ ಕೈದಾರ ಸ್ಥಿರ ಸೇಸೆಯನಿಕ್ಕಿ, ಚನ್ನಮಲ್ಲಿಕಾರ್ಜುನನೆಂಬ ಗಂಡಗೆನ್ನ ಮದುವೆಯ ಮಾಡಿದರು.

ಜಲದ ಮಂಟಪದ ಮೇಲೆ ಉರಿಯ ಚಪ್ಪರವನಿಕ್ಕಿ, ಆಲಿಕಲ್ಲ ಹಸೆಯ ಹಾಸಿ, ಕಾಲಿಲ್ಲದ ಹೆಂಡತಿಗೆ, ತಲೆಯಿಲ್ಲದ ಗಂಡ ಬಂದು ಮದುವೆಯಾದನು. ಎಂದೆಂದೂ ಬಿಡದ ಬಾಳುವೆಗೆ ಕೊಟ್ಟರೆನ್ನ ಚನ್ನಮಲ್ಲಿಕಾರ್ಜುನನೆಂಬ ಗಂಡಂಗೆನ್ನ ಮದುವೆಯ ಮಾಡಿದರು.

ಮಂಗಳವೇ ಮಜ್ಜನವೆನಗೆ, ವಿಭೂತಿಯೇ ಒಳುಗುಂದದರಿಸಿನವೆನಗೆ, ದಿಗಂಬರವೇ ದಿವ್ಯಾಂಬರವೆನಗೆ, ಶಿವಪಾದರೇಣುವೆ ಅನುಲೇಪನವೆನಗೆ, ರುದ್ರಾಕ್ಷಿಯೇ ಮೈದೊಡಿಗೆ ಎನಗೆ, ಶರಣರ ಪಾದಂಗಳೇ ತೊಂಡಿಲ ಬಾಸಿಗವೆನಗೆ, ಚನ್ನಮಲ್ಲಿಕಾರ್ಜುನನೇ ಗಂಡನೆನಗೆ, ಆನು ಚನ್ನಮಲ್ಲಿಕಾರ್ಜುನಂಗೆ ಮದುವಳಿಗೆ, ಎನಗೆ ಬೇರೆ ಶೃಂಗಾರವೇಕೆ ಹೇಳಿರವ್ವಾ?

ನಿತ್ಯವೆನ್ನ ಮನೆಗೆ ನಡೆದು ಬಂದಿತ್ತು. ಮುಕ್ತಿ ಎನ್ನಮನೆಗೆ ನಡೆದು ಬಂದಿತ್ತು. ಜಯ ಜಯ ಗುರುವೇ, ನಮೋ ಪರಮಗುರುವೇ, ನಮೋ ನಮೋ ಚನ್ನಮಲ್ಲಿಕಾರ್ಜುನನ ತಂದೆನಗೆ ತೋರಿಕೊಟ್ಟ ಗುರುವೇ ನಮೋ ನಮೋ.

ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಂಗಳಿಗಂಜಿದಡೆಂತಯ್ಯ! ಸಮುದ್ರದ ತಡಿಯಲ್ಲಿ ಮನೆಯಮಾಡಿ, ನೊರೆತೆರೆಗಳಿಗಂಜಿದಡೆಂತಯ್ಯ! ಸಂತೆಯೊಳಗೊಂದು ಮನೆಯ ಮಾಡಿ ಶಬ್ದಕ್ಕೆ ನಾಚಿದಡೆಂತಯ್ಯ! ಚನ್ನಮಲ್ಲಿಕಾರ್ಜುನದೇವ ಕೇಳಯ್ಯ! ಲೋಕದೊಳಗೆ ಹುಟ್ಟಿರ್ದ ಬಳಿಕ ಸ್ತುತಿನಿಂದೆಗಳು ಬಂದಡೆ, ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು.

ಅಯ್ಯಾ ನೀ ಕೇಳಿದರೆ ಕೇಳು, ಕೇಳದಿರ್ದೊಡೆ ಮಾಣು. ನಾನಿನ್ನ ಹಾಡಿದಲ್ಲದೆ ಸೈರಿಸಲಾರೆನಯ್ಯ! ಅಯ್ಯಾ ನೀ ಒಲಿದರೆ ಒಲಿ, ಒಲಿಯದಿರ್ದೊಡೆ ಮಾಣು, ನಾ ನಿನ್ನ ಪೂಜಿಸಿದಲ್ಲದೆ ಸೈರಿಸಲಾರೆನಯ್ಯ! ಅಯ್ಯಾ ನೀ ಮೆಚ್ಚಿದರೆ ಮಚ್ಚು, ಮಚ್ಚದಿರ್ದೊಡೆ ಮಾಣು ನಾನಿನ್ನನಪ್ಪಿದಲ್ಲದೆ ಸೈರಿಸಲಾರೆನಯ್ಯ! ಅಯ್ಯಾ ನೀ ನೋಡಿದೊಡೆ ನೋಡು, ನೋಡದಿರ್ದೊಡೆ ಮಾಣು ನಾನಿನ್ನ ನೋಡಿ ಹಿಗ್ಗಿ ಹಾರೈಸಿದಲ್ಲದೆ ಸೈರಿಸಲಾರೆನಯ್ಯ! ಚನ್ನಮಲ್ಲಿಕಾರ್ಜುನಯ್ಯ ನಾ ನಿಮ್ಮ ಪೂಜಿಸಿ ಹರುಷದೊಳೋಲಾಡುವೆನಯ್ಯ.

ಅಕ್ಕ ಕೇಳವ್ವ, ಅಕ್ಕಯ್ಯ ನಾನೊಂದು ಕನಸು ಕಂಡೆ. ಅಕ್ಕಿಯಡಕೆ ತೆಂಗಿನ ಕಾಯ ಕಂಡೆ. ಚಿಕ್ಕ ಚಿಕ್ಕ ಜಡೆಗಳ ಸುಲಿಪಲ್ಲಗೊರವನು ಬಿಕ್ಷಕ್ಕೆ ಬಂದುದ ಕಂಡೆನವ್ವ. ಮಿಕ್ಕು ಮೀರಿ ಹೋಹನ ಬೆಂಬತ್ತಿ ಕೈವಿಡಿದೆನು. ಚನ್ನಮಲ್ಲಿಕಾರ್ಜುನನ ಕಂಡು ಕಣ್ದೆರೆದೆನು.

ಸಾವಿಲ್ಲದ, ಕೇಡಿಲ್ಲದ ರೂಹಿಲ್ಲದ, ಚೆಲುವಂಗಾನೊಲಿದೆನವ್ವ. ಎಡೆ ಇಲ್ಲದ ಕಡೆ ಇಲ್ಲದ ತೆರಹಿಲ್ಲದ ಕುರುಹಿಲ್ಲದ ಚಲುವಂಗಾನೊಲಿದೆ ಎಲೆ ಅವ್ವಾ. ನೀನು ಕೇಳಾ ತಾಯೆ. ಭವವಿಲ್ಲದ ಭಯವಿಲ್ಲದ ನಿರ್ಭಯ ಚಲುವಂಗೊಲಿದೆ ನಾನು. ಕುಲ ಸೀಮೆ ಇಲ್ಲದ ನಿಸ್ಸೀಮ ಚಲುವಂಗೆ ನಾನೊಲಿದೆ. ಇದು ಕಾರಣ ಚನ್ನಮಲ್ಲಿಕಾರ್ಜುನ ಚಲುವ ಗಂಡನೆನಗೆ. ಈ ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು.

ಮರ ಮರ ಮಥನಿಸಿ, ಕಿಚ್ಚು ಹುಟ್ಟಿ, ಸುತ್ತಣ ತರುಮರಾದಿಗಳ ಸುಡಲಾಯಿತ್ತು. ಆತ್ಮವಾತ್ಮ ಮಥನಿಸಿ, ಅನುಭಾವ ಹುಟ್ಟಿ, ತನುಗುಣಾದಿಗಳ ಸುಡಲಾಯಿತ್ತು. ಇದುಕಾರಣ ನಿಮ್ಮ ಮಹಾನುಭಾವಿಗಳ ಅನುಭಾವವ ತೋರಿ, ಎನ್ನೊಡಲನುಳುಹಿಕೊಳ್ಳಾ ಚನ್ನಮಲ್ಲಿಕಾರ್ಜುನಾ.

ಅರಿಯದವರೊಡನೆ ಸಂಗವ ಮಾಡಿದರೆ, ಕಲ್ಲು ಹೊಯ್ದು ಕಿಡಿಯ ತೆಗೆದುಕೊಂಬಂತೆ. ಬಲ್ಲವರೊಡನೆ ಸಂಗವ ಮಾಡಿದರೆ, ಹೊಸೆದು ಬೆಣ್ಣೆಯ ತೆಗೆದುಕೊಂಬಂತೆ. ಚನ್ನಮಲ್ಲಿಕಾರ್ಜುನಯ್ಯ, ನಿಮ್ಮ ಶರಣರ ಸಂಗ ಕರ್ಪುರ ಗಿರಿಯ ಉರಿಕೊಂಡಂತೆ.

ಹಿಂಡಸಗಲಿ ಹಿಡಿವಡೆದ ಕುಂಜರ ತನ್ನ ವಿಂಧ್ಯವ ನೆನೆವಂತೆ, ನೆನೆವೆನಯ್ಯ! ಬಂಧನಕ್ಕೆ ಬಂದ ಗಿಳಿ ತನ್ನ ಬಂಧುವ ನೆನೆವಂತೆ ನೆನೆವೆನಯ್ಯ! ಕಂದಾ ನೀನಿತ್ತಬಾ ಎಂದು ನೀವು ನಿಮ್ಮಂದವ ತೋರಯ್ಯ ಚನ್ನಮಲ್ಲಿಕಾರ್ಜುನಾ.

ಗಿರಿಯಲ್ಲದೆ ಹುಲ್ಲು ಮೊರಡಿಯಲ್ಲಾಡುವದೆ ನವಿಲು? ಕೊಳನಲ್ಲದೆ ಕಿರುವಳ್ಳಕ್ಕೆಳಸುವುದೆ ಹಂಸೆ? ಮಾಮರ ತಳಿತಲ್ಲದೆ ಸ್ವರಗೈವುದೆ ಕೋಗಿಲೆ? ಪರಿಮಳವಿಲ್ಲದ ಪುಷ್ಪಕ್ಕೆಳಸುವುದೇ ಭ್ರಮರ? ಎನದೇವ ಚನ್ನಮಲ್ಲಿಕಾರ್ಜುನನಲ್ಲದೆ, ಅನ್ಯಕ್ಕೆಳಸುವುದೇ ಎನ್ನ ಮನ ಕೇಳಿರೆ, ಕೆಳದಿಯರಿರಾ?

ಕಡೆಗೆ ಮಾಡದ ಭಕ್ತಿ, ದೃಢವಿಲ್ಲದಾಳುತನ, ಮೃಡನೊಲಿಯ ಹೇಳಿದರೆ, ಎಂತೊಲಿವನಯ್ಯ? ಮಾಡಲಾಗದು, ಅಳಿಮನವ ಮಾಡಿದೊಡೆ ಮನದೊಡೆಯ ಬಲ್ಲನೈಸೆ. ವಿರಳವಿಲ್ಲದೆ ಮಣಿಯ ಪೋಣಿಸಿಹೆನೆಂದೊಡೆ, ದುರುಳ ಚನ್ನಮಲ್ಲಿಕಾರ್ಜುನಯ್ಯ ನಂತೊಲಿವನಯ್ಯ?

ಹಸಿವಾದೊಡೆ ಭಿಕ್ಷಾನ್ನಂಗಳುಂಟು. ತೃಷೆಯಾದೊಡೆ, ಕೆರೆಹಳ್ಳಭಾವಿಗಳುಂಟು. ಶಯನಕ್ಕೆ ಹಾಳು ದೇಗುಲಗಳುಂಟು. ಚನ್ನಮಲ್ಲಿಕಾರ್ಜುನಯ್ಯ ಆತ್ಮಸಂಗಾತಕ್ಕೆ ನೀನೆನಗುಂಟು.

ಆರೂ ಇಲ್ಲದವಳೆಂದು ಅಳಿಗೊಳಲುಬೇಡ ಕಂಡೆಯ. ಏನು ಮಾಡಿದರೆಯೂ, ನಾನಂಜುವವಳಲ್ಲ. ತರಗೆಲೆಯ ಮೆಲ್ಲಿದ್ದು ನಾನಿಹೆನು. ಸುರಿಗೆಯ ಮೇಲೊರಗಿ ನಾನಿಹೆನು. ಚನ್ನಮಲ್ಲಿಕಾರ್ಜುನಯ್ಯ ಕರಕೆಡೆನೋಡಿದೊಡೆ, ಒಡಲನು ಪ್ರಾಣವನು ನಿಮಗೊಪ್ಪಿಸಿ ಶುದ್ಧಳಹೆನು.

ಕಿಡಿ ಕಿಡಿಕೆದರಿದಡೆ, ಎನಗೆ ಹಸಿವು ತೃಷೆ ಅಡಗಿತೆಂಬೆನು. ಮುಗಿಲು ಹರಿದು ಬಿದ್ದರೆ, ಎನಗೆ ಮಜ್ಜನಕ್ಕೆರೆದರೆಂಬೆನು. ಗಿರಿಮೇಲೆ ಬಿದ್ದರೆ ಎನಗೆ ಪುಷ್ಪವೆಂಬೆನು. ಚನ್ನಮಲ್ಲಿಕಾರ್ಜುನಯ್ಯಾ, ಶಿರಹರಿದು ಬಿದ್ದರೆ, ಪ್ರಾಣನಿಮಗರ್ಪಿತವೆಂಬೆನು.

ಚಂದನವ ಕಡಿದು ಕೊರೆದು ತೇದೊಡೆ, ನೊಂದೆನೆಂದು ಕಂಪ ಬಿಟ್ಟಿತ್ತೆ? ತಂದು ಸುವರ್ಣವ, ಕಡಿದೊರೆದೊಡೆ, ಬೆಂದು ಕಳಂಕಹಿಡಿದಿತ್ತೆ? ಸಂದು ಸಂದು ಕಡಿದ ಕಬ್ಬನು ಗಾಣದಲಿಕ್ಕಿ ಬೆಂದು ಪಾಕಾಗುಳ್ಳ ಸಕ್ಕರೆಯಾಗಿ ನೊಂದೆನೆಂದು ಸವಿಯ ಬಿಟ್ಟಿತ್ತೆ? ನಾ ಹಿಂದೆ ಮಾಡಿದ ಹೀನಂಗಳೆಲ್ಲವ ತಂದು ಮುಂದಿಳುಹಲು ನಿಮಗೆ ಹಾನಿಯೆ? ಎನ್ನ ತಂದೆ ಚನ್ನಮಲ್ಲಿಕಾರ್ಜುನದೇವಯ್ಯ. ಕೊಂದಡೆ ಶರಣೆಂಬುದ ಮಾಣೆ.

ಕಾಯ ಕರ್ರನೆ ಕಂದಿದರೇನು? ಕಾಯ ಮಿರ್ರನೆ ಮಿಂಚಿದರೇನು? ಅಂತರಂಗ ಶುದ್ಧವಾದ ಬಳಿಕ, ಚನ್ನಮಲ್ಲಿಕಾರ್ಜುನನೊಲಿದ ಕಾಯ ಎಂತಾದೊಡೆಮಗೇನಯ್ಯ?

ಹಾವಿನ ಹಲ್ಲ ಕಳೆದು ಹಾವನಾಡಿಸಬಲ್ಲರೆ ಹಾವಿನ ಸಂಗವೇ ಲೇಸು ಕಂಡಯ್ಯ. ಕಾಯದ ಸಂಗವೇ ಲೇಸು ಕಂಡಯ್ಯ. ತಾಯಿ ರಕ್ಕಸಿಯಾದಂತೆ ಕಾಯವಿಕಾರವು. ಚನ್ನಮಲ್ಲಿಕಾರ್ಜುನಯ್ಯ ನೀನೊಲಿದವರು ಕಾಯಗೊಂಡಿದ್ದ ರೆನಬೇಡ.

ಪಂಚೇಂದ್ರಿಯದ ಉರುವಣೆಯಹುದು. ಮದದ ಭರದ ಜವ್ವನದೊಡಲು ವೃಥಾ ಹೋಯಿತ್ತಲ್ಲಾ! ತುಂಬಿ ಪರಿಮಳವನೆ ಕೊಂಡು ಲಂಬಿಸುವ ತೆರನಂತೆ, ಇನ್ನೆಂದಿಗೆ ಒಳಕೊಂಬೆಯೋ ಅಯ್ಯ ಚನ್ನಮಲ್ಲಿಕಾರ್ಜುನಾ.

ಕಳವಳದ ಮನವು ತಲೆಕೆಳಗಾದುದವ್ವಾ! ಸುಳಿದು ಬೀಸುವ ಗಾಳಿ ಉರಿಯಾಯಿತ್ತವ್ವಾ! ಬೆಳುದಿಂಗಳು ಬಿಸಿಲಾಯಿತ್ತು ಕೆಳದಿ. ಹೊಳಲು ಸುಂಕಿಗನಂತೆ ತೊಳಲುತ್ತಿದೆನವ್ವಾ! ತಿಳುಹಾ ಬುದ್ಧಿಯ. ಹೇಳಿ ಕರತಾರೆಲೆಗವ್ವಾ! ಚನ್ನಮಲ್ಲಿಕಾರ್ಜುನಂಗೆ ಎರಡರ ಮುನಿಸವ್ವಾ.

ಅರಿಸಿನವನೆ ಮಿಂದು, ಹೊಂದುಡಿಗೆಯನೆ ತೊಟ್ಟು, ದೇವಾಂಗವನುಟ್ಟು, ಪುರುಷಬಾರಾ! ನಿನ್ನ ಬರವೆನ್ನ ಸುವಿನ ಬರವು ಬಾರಯ್ಯ! ಚನ್ನಮಲ್ಲಿಕಾರ್ಜುನಯ್ಯ ಬಂದಾನೆಂದು ಬಟ್ಟೆಗಳ ನೋಡಿ ಬಾಯಾರುತ್ತಿಹೆನು.

ಅಳಿಸಂಕುಳವೇ, ಮಾಮರವೇ, ಬೆಳುದಿಂಗಳೇ, ಕೋಗಿಲೆಯೇ, ನಿಮ್ಮ ನಿಮ್ಮನೆಲ್ಲರನು ಒಂದು ಬೇಡುವೆನು. ಎನ್ನೊಡೆಯ ಚನ್ನಮಲ್ಲಿಕಾರ್ಜುನದೇವರ ಕಂಡರೆ ಕರೆದು ತೋರಿರೆ.

ಚಿಲಿಮಿಲಿ ಎಂದೋದುವ ಗಿಳಿಗಳಿರಾ, ನೀವು ಕಾಣಿರೆ, ನೀವು ಕಾಣಿರೆ. ಸರವೆತ್ತಿ ಪಾಡುವ ಕೋಗಿಲೆಗಳಿರಾ, ನೀವು ಕಾಣಿರೆ, ನೀವು ಕಾಣಿರೆ. ಎರಗಿ ಬಂದಾಡುವ ತುಂಬಿಗಳಿರಾ, ನೀವುಕಾಣಿರೆ, ನೀವುಕಾಣಿರೆ. ಕೊಳನ ತಡಿಯೊಳಾಡುವ ಹಂಸೆಗಳಿರಾ, ನೀವುಕಾಣಿರೆ, ನೀವುಕಾಣಿರೆ. ಗಿರಿಗಂಪ್ವರದೊಳಗಾಡುವ ನವಿಲುಗಳಿರಾ, ನೀವುಕಾಣಿರೆ, ನೀವುಕಾಣಿರೆ. ಚನ್ನಮಲ್ಲಿಕಾರ್ಜುನನೆಲ್ಲಿರ್ದಿಹನೆಂದು ನೀವು ಹೇಳಿರೆ, ನೀವು ಹೇಳಿರೆ.

ನಿನ್ನರಿಕೆಯ ನರಕವೇ ಮೋಕ್ಷ ನೋಡಯ್ಯ! ನಿನ್ನನರಿಯದ ಮುಕ್ತಿಯೇ ನರಕ ಕಂಡಯ್ಯ! ನೀನೊಲ್ಲದ ಸುಖವೇ ದುಃಖ ಕಂಡಯ್ಯ! ನೀನೊಲಿದ ದುಃಖವೇ ಪರಮಸುಖ ಕಂಡಯ್ಯ! ಚನ್ನಮಲ್ಲಿಕಾರ್ಜುನಯ್ಯ ನೀ ಕಟ್ಟಿ ಕೆಡಹಿದ ಬಂಧನವೇ ನಿರ್ಬಂಧನವೆಂದಿಪ್ಪೆನು.

ಎಲ್ಲ ಎಲ್ಲವನರಿದು ಫಲವೇನಯ್ಯ, ತನ್ನ ತಾನರಿಯಬೇಕಲ್ಲದೆ? ತನ್ನಲ್ಲಿ ಅರಿವು ಸ್ವಯವಾಗಿರಲು, ಅನ್ಯರ ಕೇಳಲುಂಟೆ? ಚನ್ನಮಲ್ಲಿಕಾರ್ಜುನ ನೀ ಅರಿವಾಗಿ ಮುಂದುದೋರಿದ ಕಾರಣ, ನಿಮ್ಮಿಂದಲರಿದೆನಯ್ಯ ಪ್ರಭುವೇ.

ಅಂಗದ ಭಂಗವ ಲಿಂಗ ಸುಖದಿಂದೆ ಗೆಲಿನೆ. ಮನದಭಂಗವ ಅರಿವಿನ ಮುಖದಲ್ಲಿ ಗೆಲಿದೆ. ಜೀವನ ಭಂಗವ ಶಿವಾನುಭಾವದಿಂ ಗೆಲಿದೆ. ಕರಣದ ಕತ್ತಲೆಯ ಬೆಳಗನುಟ್ಟು ಗೆಲಿದೆ. ಜವ್ವನದ ಹೊರಮಿಂಚಿನಲಿ ನಿಮ್ಮ ಕಣ್ಣಿಗೆ ತೋರುವ ಕಾಮನ ಸುಟ್ಟುರುಹಿದ ಭಸ್ಮವ ನೋಡಯ್ಯ. ಚನ್ನಮಲ್ಲಿಕಾರ್ಜುನ ಕಾಮನ ಕೊಂದು ಮನಸಿಜನಾಗುಳುಹಿದರೆ ಮನಸಿಜನ ತಲೆಯ ಬರಹ ತೊಡೆದೆನು.

ಅಕ್ಕ ಕೇಳಕ್ಕ ಆನೊಂದು ಕನಸ ಕಂಡೆ. ಚಿಕ್ಕ ಚಿಕ್ಕ ಜಡೆ ಸುಲಿಪಲ್ಲಗರುವನು ಬಂದೆನ್ನ ನೆರೆವನು ನೋಡವ್ವಾ! ಆತನನಪ್ಪಿಕೊಂಡು ತಳವೆಳಗಾದೆನೆಲಗೆ ಚನ್ನಮಲ್ಲಿಕಾಜುನನ ಕೂಡಿ ಕಣ್ಮುಚ್ಚಿ ತೆರೆದು ತಳವೆಳಗಾದೆನೆಲಗೆ.

ಕದಳಿಯೆಂಬುದು ತನು, ಕದಳಿ ಎಂಬುದು ಮನ, ಕದಳಿ ಎಂಬುದು ವಿಷಯಂಗಳು, ಕದಳಿ ಎಂಬುದು ಭವರೋಗದರಣ್ಯ. ಕದಳಿ ಎಂಬುದ ಗೆದ್ದು ಸಲೆ ಬದುಕಿ ಬಂದು, ಕದಳಿಯ ಬನದಲ್ಲಿ ಭವಹರನ ಕಂಡೆನು. ಭವಗೆಟ್ಟ ಮಗಳೆಂದು ಕರುಣದಿಂ ತೆಗೆದು ಬಿಗಿದಪ್ಪಿದಡೆ, ಚನ್ನಮಲ್ಲಿಕಾರ್ಜುನನ ಹೃದಯ ಕಮಲದಲ್ಲಿ ಅಡಗಿದೆನು.

ಹೊಳೆವ ಕೆಂಜೆಡೆಗಳ ಮಣಿಮಕುಟ, ಒಪ್ಪುವ ಸುಲಿಪಲ್ಲ, ನಗೆಮೊಗದ ಕಂಗಳ, ಕಾಂತಿಯಿಂ ಈರೇಳು ಭುವನವಂ ಬೆಳಗುವ ದಿವ್ಯ ಸ್ವರೂಪನ ಕಂಡೆ ನಾನು. ಕಂಡೆನ್ನ ಕಂಗಳ ಬರ ಹಿಂಗಿತ್ತಿಂದು. ಗಂಡ ಗಂಡರೆಲ್ಲ ಹೆಂಡ ಹೆಂಡರಾಗಿ, ಆಳುವ ಗರುವನ ಕಂಡೆ ನಾನು. ಜಗದಾದಿ ಶಕ್ತಿಯೊಳು ಬೆರಸಿಯೊಡನಾಡುವ ಪರಮ ಗುರು ಚನ್ನಮಲ್ಲಿಕಾರ್ಜುನನ ಸಿಲವ ಕಂಡು ಬದುಕಿದೆನು.

ಇತರ ವಚನಕಾರರು

ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ, ಸುಳಿದು ಬೀಸುವ ವಾಯು ನಿಮ್ಮ ದಾನ. ನಿಮ್ಮ ದಾನವನುಂಡು ಅನ್ಯರ ಹೊಗಳುವ ಕುನ್ನಿಗಳನೇನೆಂಬೆ ರಾಮನಾಥಾ ?

ಕಾಯ ನಿಮ್ಮ ದಾನ, ಜೀವ ನಿಮ್ಮ ದಾನ, ಕಾಯಜೀವವುಳ್ಳಲ್ಲಿಯೇ ಪೂಜಿಸದ ಅನ್ಯಾಯಿಗಳನೇನೆಂಬೆ ಹೇಳಾ ರಾಮನಾಥಾ ?

ಎತ್ತು ನಿಮ್ಮ ದಾನ, ಬಿತ್ತು ನಿಮ್ಮ ದಾನ, ಸುತ್ತಿ ಹರಿವ ಸಾಗರವೆಲ್ಲ ನಿಮ್ಮ ದಾನ. ನಿಮ್ಮ ದಾನವನುಂಡು ಅನ್ಯರ ಹೊಗಳುವ ಕುನ್ನಿಗಳನೇನೆಂಬೆ ಹೇಳಾ ರಾಮನಾಥಾ ?

ಇಂತೆಂದ ಭೂಮಿಯ, ಇಂತೆಂದ ಗಗನವ, ಇಂತೆಂದ ಸಪ್ತಸಾಗರವ, ಇಂತೀ ಲೋಕದೊಳಗೆ ತಿಂತಿಣಿಯಾಗಿಪ್ಪ ಅಚಿಂತ್ಯನನಾರು ಬಲ್ಲರೈ ! ರಾಮನಾಥಾ ?

ಮರೀಚಿಯೊಳಗಣ ಬಿಸಿಲಿನಂತೆ ಇದ್ದಿತ್ತು. ಕ್ಷೀರದೊಳಗಣ ತುಪ್ಪದಂತೆ ಇದ್ದಿತ್ತು. ಚಿತ್ರಿಕನೊಳಡಗಿದ ಚಿತ್ರದಂತೆ ಇದ್ದಿತ್ತು. ಆಲಿಯೊಳಗಡಗಿದ ತೇಜದಂತೆ ಇದ್ದಿತ್ತು. ನುಡಿಯೊಳಡಗಿದ ಅರ್ಥದಂತಿದ್ದಿತ್ತು ಕೂಡಲ ಚನ್ನಸಂಗಯ್ಯ ನಿಮ್ಮ ನಿಲವು.

ಹೂವಿನೊಳಗಣ ಕಂಪ ಹೊರಸೂಸಿ ಸುಳಿವ ಅನಿಲನಂತೆ, ಅಮೃತದೊಳಗಣ ರುಚಿಯ ನಾಲಿಗೆಯ ತುದಿಯಲ್ಲಿ ಅರಿವನ ಚೇತನದಂತೆ, ನಿಲವಿಲ್ಲದ ರೂಪ ಕಳೆಯಲ್ಲಿ ಭೇದಿಸುವನ ಪರಿ ರಾಮನಾಥಾ.

ಕಲ್ಲದೇವರು ದೇವರಲ್ಲ. ಮಣ್ಣು ದೇವರು ದೇವರಲ್ಲ. ಮರ ದೇವರಲ್ಲ. ಪಂಚಲೋಹದಲ್ಲಿ ಮಾಡುವ ದೇವರು ದೇವರಲ್ಲ. ಸೇತುಬಂಧ, ರಾಮೇಶ್ವರ, ಗೋಕರ್ಣ, ಕಾಶಿ, ಕೇದಾರ ಮೊದಲಾದ ಅಷ್ಟಾಷಷ್ಟಿ ಪುಣ್ಯತೀರ್ಥಂಗಳು ಪುಣ್ಯ

ಕ್ಷೇತ್ರಂಗಳಲ್ಲಿಹ ದೇವರು ದೇವರಲ್ಲ. ತನ್ನ ತಾನರಿದು ತಾನಾರೆಂದು ತಿಳಿದಡೆ ತಾನೇ ದೇವ ನೋಡಾ ಅಪ್ರಮಾಣಕೂಡಲಸಂಗಮದೇವಾ.

ಅಯ್ಯ ತನ್ನ ತಾನರಿದೊಡೆ, ತಾನೇ ಚಿನ್ಮಯನಾದ ಪರಬ್ರಹ್ಮ ನೋಡಾ. ತಾನೇ ಚಿನ್ನಾದ ಚಿದ್ಬಿಂದು ಚಿತ್ಕಳಾಮೂರ್ತಿ ನೋಡಾ. ತಾನೇ ಸಕಲ ಚೈತನ್ಯ ಚಿತ್ಸೂತ್ರಧಾರಿ. ತನ್ನಿಂದಧಿಕ ಪರದೈವವಿಲ್ಲ ನೋಡಾ. ತಾನೇ ಸಚ್ಚಿದಾನಂದ ಸ್ವರೂಪವಾದ ಚಿದ್ಘನಲಿಂಗ ನೋಡಾ, ಅಪ್ರಮಾಣಕೂಡಲಸಂಗಮದೇವಾ.

ಜ್ಯೋತಿಯು ಬೆಳಗಿನಲ್ಲಿ ಜ್ಯೋತಿಯ ಕಪಟವ ಕಾಂಬಂತೆ, ಕಣ್ಣಿನಿಂದ ಕನ್ನಡಿಯ ನೋಡಿ ಕಣ್ಣಕಲೆಯ ಕಾಂಬಂತೆ, ತನ್ನಿಂದ ತಾ ನೋಡಿ ತನ್ನ ನರಿಯಬೇಕು. ತನ್ನನರಿಯದವ ನಿಮ್ಮನೆತ್ತ ಬಲ್ಲನೋ? ತನ್ನನರಿವುದಕ್ಕೆ ದೃಷ್ಟವ ಕಯ್ಯಲ್ಲಿ ಕೊಟ್ಟ. ಕಾಣದುದಕ್ಕೆ ಚಿತ್ತವ ನೆನಹಿಂಗೆ ಇತ್ತ. ಚಿತ್ತ ಇಷ್ಟದಲ್ಲಿ ಅಚ್ಚೊತ್ತಿದ. ಮತ್ತೆ ದೃಷ್ಟವ ಕಾಂಬುದಿನ್ನೇನೋ? ಉರಿಯೊಳಗಣ ಕರ್ಪುರ, ಅನಲನೊಳಗಣ ಪಾವಕ, ಸಿಲೆಯುಂಡ ಎಣ್ಣೆ, ಅಳತೆಯುಂಟೇ ಅಯ್ಯಾ? ಲಿಂಗವ ಮುಚ್ಚಿದ ಅಂಗಕ್ಕೆ ಜಗದ ಹಂಗಿಲ್ಲ. ಅನಂಗ ಅತೀತ ನಿಷ್ಕಳಂಕ ಮಲ್ಲಿಕಾರ್ಜುನ ಲಿಂಗವೇ ತಾನಾದ ಶರಣಂಗೆ.

ಏತದ ತುದಿಯಲ್ಲಿ ಕಟ್ಟಿದ ಮಡಿಕೆಯಂತೆ, ಅದ ನೀತಿವಂತರು ಮೆಟ್ಟಿದರೆ ಪಾತಾಳದ ಉದಕವ ತಂದು ಪಾತೆಗೆ ಹರಹಿದ ತೆರದಂತೆ, ಸರ್ವಮಯದಲ್ಲಿ ಒಪ್ಪಿಪ್ಪ ವಸ್ತುವನರಿದು ನಿಜಾರ್ತನಾಗಬಲ್ಲರೆ ಆತನೇ ಜೀವನ್ಮುಕ್ತ, ನಿಷ್ಕಳಂಕ ಮಲ್ಲಿ ಕಾರ್ಜುನಾ.

ತನ್ನ ತಾನರಿದಡೆ ತನ್ನರಿವೇ ಗುರು, ತಾನೇ ಲಿಂಗ, ತನ್ನ ನಿಷ್ಪತ್ತಿಯೇ ಜಂಗಮ. ಇಂತೀ ತ್ರಿವಿಧವು ಒಂದಾದಡೆ ಕಾಮೇಶ್ವರ ಲಿಂಗವು ತಾನೆ.

ಜನಮೆಚ್ಚು ಶುದ್ಧನಲ್ಲದೆ, ಮನಮೆಚ್ಚು ಶುದ್ಧನಲ್ಲವಯ್ಯ. ನುಡಿಯಲ್ಲಿ ಜಾಣ ನಲ್ಲದೆ, ನಡೆಯಲ್ಲಿ ಜಾಣನಲ್ಲವಯ್ಯ. ವೇಷದಲ್ಲಿ ಅಧಿಕನಲ್ಲದೆ, ಭಾಷೆಯಲ್ಲಿ ಅಧಿಕನಲ್ಲ ವಯ್ಯ. ಧನದೊರಕದೆ ನಿಸ್ಪೃಹನಲ್ಲದೆ, ಧನದೊರಕಿ ನಿಸ್ಪೃಹನಲ್ಲವಯ್ಯ. ಏಕಾಂತ ದ್ರೋಹಿ, ಗುಪ್ತಪಾತಕಿ, ಯುಕ್ತಿಶೂನ್ಯಂಗೆ ಸಕಳೇಶ್ವರದೇವರು ಒಲಿ, ಒಲಿ, ಎಂದರೆ ಎಂತೊಲಿವನಯ್ಯ?

ಬಟ್ಟೆಯಲ್ಲಿ ಹೋಗುತ್ತಿಪ್ಪ ಮನುಜನೊಬ್ಬನನ್ನು ಹುಲಿ, ಕಾಡುಗಿಚ್ಚು ರಕ್ಕಸಿ, ಕಾಡಾನೆಗಳು ನಾಲ್ಕು ದಿಕ್ಕಿನಲ್ಲಿ ಅಟ್ಟಿ ಬರುತ್ತಿರಲು ಅವಂ ಕಂಡು ಭಯದಿಂದ ಹೋಗಲು, ದಿಕ್ಕು ತೋರದು, ಹಾಳು ಭಾವಿಯಂ ಕಂಡು, ತಲೆಯೂರಿ ಬೀಳುವಲ್ಲಿ, ಹಾವ ಕಂಡು ಬೀಳಲಮ್ಮದೆ, ಇಲಿ ಕಡಿದ ಬಳ್ಳಿಯಂ ಹಿಡಿದು ನಿಲ್ಲಲು, ಜೇನಹುಳು ಮೈನೂರುವಾಗ ಮೂಗಿನ ತುದಿಯಲೊಂದು ಹನಿಯ ಮಧುಬಿಂದು

ಬೀಳಲಾಗಿ, ಆ ಮಧುವಂ ಕಂಡು, ಹಿಂದಪ್ಪ ದುಃಖವನೆಲ್ಲವ ಸೈರಿಸಿ, ನಾಲಿಗೆಯಲ್ಲಿ ಆ ಮಧುವ ಸೇವಿಸುವಸಂತೆ, ಈ ಸಂಸಾರಸುಖವ ವಿಚಾರಿಸಿ ನೋಡಿದರೆ, ದುಃಖದಾಗರವು. ಇದನರಿದು ಸಕಲವಿಷಯಂಗಳಲ್ಲಿಯ ಸುಖವಿಂತುಟೆಂದು ನಿರ್ವಿಷಯಿಯಾಗಿ ನಿಂದ ನಿಲವು ನೀನೇ, ಸಿಮ್ಮಲಿಗೆಯ ಚನ್ನರಾಮಾ.

ಎನ್ನ ತಪ್ಪು ಅನಂತಕೋಟಿ. ನಿಮ್ಮ ಸೈರಣೆಗೆ ಲೆಕ್ಕವಿಲ್ಲ. ಇನ್ನು ತಪ್ಪಿದೆನಾದಡೆ ನಿಮ್ಮ ಪಾದವೇ ದಿಬ್ಯ. ಕೂಡಲಸಂಗಮದೇವಯ್ಯ ನಿಮ್ಮ ಪ್ರಮಥರ ಮುಂದೆ ಕಿನ್ನರಿ ಬೊಮ್ಮಣ್ಣನೇ ಸಾಕ್ಷಿ.

ಅಡವಿಯಲ್ಲಿರ್ದ ಗೋವು ಮನೆಯಲ್ಲಿರ್ದ ಕರುವಿಗೆ ಚಿಂತಿಸಿ, ಬಂದು ಹಾಲ ನೀಡಿ, ಮೋಹವ ಮಾಡುವದಲ್ಲದೆ, ಆ ಕರುವೆತ್ತ ಬಲ್ಲುದಯ್ಯಾ? ನಾನು ಕರ್ಮದೇಹವಿಡಿದು ಪರಿಭವದಲ್ಲಿ ತೊಳಲುತ್ತಿರಲು, ನೀನು ದಯಹುಟ್ಟಿ ಎನ್ನ ಮರವೆಯ ಸಂಸಾರವಂ ತೊಲಗಿಸಿ, ಕರುಣದಿಂದ ಸಲಹಬೇಕೆಂಬ ಚಿಂತೆ ನಿನಗಲ್ಲದೆ ನಾನೇನ ಬಲ್ಲೆನಯ್ಯಾ ಅಖಂಡೇಶ್ವರಾ?

ವಚನಗಳು ೨

ಘನವೆಂಬ ಮನದ ತಲೆವಾಗಿಲಲ್ಲಿ ಸದಾ ಸನ್ನಿಹಿತನಾಗಿ ನೀನಿಪ್ಪೆಯಲ್ಲಾ, ಎಲೆ ಅಯ್ಯ! ಬಂದ ಪದಾರ್ಥದ ಪೂರ್ವಾಶ್ರಯವ ಕಳೆದು ನೀನೆ ಯವಧರಿಸುತ್ತಿಪ್ಪೆಯಲ್ಲಾ, ಎಲೆ ಅಯ್ಯ! ನಿಮ್ಮ ಮುಟ್ಟಿ ಬಹುದಲ್ಲದೆ, ನಿಮ್ಮ ಮುಟ್ಟದೆ ಬಾರದೆಂಬುದಕ್ಕೆ ನಿಮ್ಮ ಮನಕ್ಕೆ ನೀವೇ ಸಾಕ್ಷಿಯಲ್ಲಾ ಕೂಡಲಚನ್ನಸಂಗಮದೇವಾ.

ಬಸಿರೊಳಗಣ ಕೂಸಿಗೆ ಬೇರೆ ಊಟ, ಬೇರೆ ಮೋಹ ಉಂಟೆ? ಜ್ಞಾನವೆಂಬ ಗರ್ಭದೊಳಗೆ ಲಿಂಗವೆಂಬ ಶಿಶುವಿರಲು ಬೇರೆ ಕೊಡುವ ಕೊಂಬ ಪರಿ ಎಂತೋ? ದೇಹದೊಳಗಣ ಪ್ರಾಣವ ಬೇರು ಮಾಡಿ ಭೋಗಿಸಲುಂಟೆ? ಅನುಮಾನವಳಿದ ಮಹದಲ್ಲಿ ಮನ ಮುಸುಕಿದ ಬಳಿಕ ಭಿನ್ನ ಮಾಡಲುಂಟೇ ಗುಹೇಶ್ವರಾ?

ನೆಲ ತಳವಾರನಾದಡೆ, ಕಳ್ಳಂಗೆ ಹೋಗಲೆಡೆಯುಂಟೇ? ಸರ್ವಾಂಗ ಲಿಂಗಿಗೆ ಅನರ್ಪಿತ ಉಂಟೇ ನಿಃಕಳಂಕ ಮಲ್ಲಿಕಾರ್ಜುನಾ?

ಎನ್ನ ಮನದ ಬಾಗಲಲ್ಲಿದ್ದು ಪಂಚೇಂದ್ರಿಯಂಗಳನರಿದು ಸುಖಿಸುವ ಅರಿವುಮೂರ್ತಿ ನೀನಯ್ಯ. ಎನ್ನ ನೇತ್ರದ ಬಾಗಲಲ್ಲಿದ್ದು ಸುರೂಪು ಸುಖಂಗಳ ಭೋಗಿಸುವಾತ ನೀನಯ್ಯ. ಎನ್ನ ತ್ವಕ್ಕಿನ ಬಾಗಲಲ್ಲಿದ್ದು ಸ್ಪರ್ಶನವ ಮಾಡಿ ಆ ಸ್ಪರ್ಶನದ ಸುಖವ ಸುಖಿಸುವಾತ ನೀನಯ್ಯ. ಎನ್ನ ಶ್ರೋತ್ರದ ಬಾಗಲಲ್ಲಿದ್ದು ಸುಶಬ್ದ ಸುಖಂಗಳ ಭೋಗಿಸುವಾತ ನೀನಯ್ಯ. ಎನ್ನ ಘ್ರಾಣದ ಬಾಗಲಲ್ಲಿದ್ದು ಸುವಾಸನೆಯ ಸುಖಂಗಳ ಭೋಗಿಸುವಾತ ನೀನಯ್ಯ. ಎನ್ನ ಜಿಹ್ವೆಯ ಬಾಗಲಲ್ಲಿದ್ದು ಸುರುಚಿಯ ಸುಖಂಗಳ ಭೋಗಿಸುವಾತ ನೀನಯ್ಯ. ಅದೇನು ಕಾರಣವೆಂದರೆ ನೀನಾಡಿಸುವ ಜಂತ್ರದ ಬೊಂಬೆ ನಾನೆಂದು ಅರಿದ ಕಾರಣ ನಿಮ್ಮ ಕರಣಂಗಳೇ ಎನ್ನ ಹರಣಂಗಳಾಗಿ ಎನ್ನ ಹರಣ ಕರಣಂಗಳೇ ನಿಮ್ಮ ಕಿರಣಂಗಳಾಗಿ ಇರುವ ಕಾರಣ ಕೂಡಲಚನ್ನಸಂಗಮದೇವಾ ನೀ ನಾಡಿದಂತೆ ನಾನಾಡಿದೆನಯ್ಯ.

ತನುವಿನೊಳಗಿದ್ದು ತನುವ ಗೆದ್ದಳು. ಮನದೊಳಗಿದ್ದು ಮನವ ಗೆದ್ದಳು. ವಿಷಯದೊಳಗಿದ್ದು ವಿಷಯಂಗಳ ಗೆದ್ದಳು. ಅಂಗ ಸಂಗವ ತೊರೆದು ಭವವ ಗೆದ್ದಳು. ಕೂಡಲಚನ್ನಸಂಗಯ್ಯನ ಹೃದಯ ಕಮಲವ ಬಗಿದು ಹೊಕ್ಕು ನಿಜಪದವನೈದಿದ ಮಹಾದೇವಿಯಕ್ಕನ ಶ್ರೀಪಾದಕ್ಕೆ ನಮೋ ನಮೋ ಎಂಬೆನು.

ಶೂನ್ಯ ಸಂಪಾದನೆ

ಗುಡಿಗೋಪುರ ಕೆಱೆಯಾರವೆ
ಗಡಣಗಳಂ ಬಿಡಿಸಿಯಲ್ಲಮಪ್ರಭುರಾಯನು
ಮೃಡ ಸಿದ್ಧರಾಮಗೊಲಪಿಂ
ಸಡಗರದಿಂ ನಿಜವನಿತ್ತುದೆಂತೆನೆ ಪೇಳ್ವೆಂ

ಅದೆಂತೆಂದೊಡಾ ಪ್ರಭುದೇವರು ಮುಕ್ತಾಯಕ್ಕಗಳ ಪ್ರಲಾಪವಂ ನಿಲಿಸಿ, ಮಹಾನುಭಾವವಂ ಬೋಧಿಸಿ, ಅಜಗಣ್ಣದೇವರ ನಿಲವನು ಆಕೆಯ ಸರ್ವಾಂಗದೊಳು ಪ್ರತಿಷ್ಠಿಸಿ ತೋಱಿ, ನಿರವಯಲ ಸಮಾಧಿಯೊಳು ನಿಲಿಸಿ, ಅಲ್ಲಿ ಸೊನ್ನಲಿಗೆಯ ಪುರಕ್ಕಭಿಮುಖವಾಗಿ ಬರುತ್ತಿರಲತ್ತ ಕೈಲಾಸದಿಂದ ಶ್ರೀ ಪರಮೇಶ್ವರನ ಶುದ್ಧ ಸಾತ್ವಿಕವೆ ಜಗಹಿತಾರ್ಥವಾಗಿ ಮರ್ತ್ಯಕ್ಕವತರಿಸಿ, ಸಿದ್ಧರಾಮೇಶ್ವರನೆಂಬಭಿಧಾನದಿಂದ ಕೆಱೆಯಬಿಪಟ್ಟಿಗೆ ಗುಡಿ ಗೋಪುರಂಗಳಂ ರಚಿಸುತ್ತಿರಲು, ಅಲ್ಲಿಗೆ ಪ್ರಭುದೇವರು ಬಂದು, ಆ ಪುರದ ಜನಪದದ ನೆರವಿಯ ಕಂಡು ವಿಡಂಬಿಸುವ ಪ್ರಸ್ತಾವದ ವಚನ:

ಧರೆಯ ಮೇಲೊಂದು ಪಿರಿದಪ್ಪ ಸಂತೆಯ ನೆರವಿಗೆ ಬಂದವರನೇನೆಂಬೆನು! ಪರಿಪರಿಯ ಭಂಡದ ವ್ಯವಹಾರದೊಳಗೆ ಕೊಡಲಿಲ್ಲ, ಕೊಳಲಿಲ್ಲ. ವೃಥಾವಿಳಾಸವಿದೇನೋ? ಅರೆಮರುಳೆಂಬ ಶಿವನು ನೆಱೆಮರುಳೆಂಬ ಜಗವ ಹುಟ್ಟಿಸಿದ ಪರಿಯ ಕಂಡು ಬೆಱಗಾದೆ ಗುಹೇಶ್ವರಾ!

ಸಾಗರದೊಳಗಿಪ್ಪ ಪ್ರಾಣಿಗಳು ಮತ್ತೊಂದೆಡೆಯಲ್ಲಿ ಇರಬಲ್ಲವೇ? ಭವಸಾಗರದೊಳಗಿಪ್ಪ ಜೀವಿಗಳಿಗೆ ಅದೇ ಗತಿಯಲ್ಲದೆ ಬೇಱೆ ಮತ್ತೊಂದೆಡೆಯುಂಟೇ? ಗುಹೇಶ್ವರನ ಲೀಲೆ ಜಗನ್ಮಯವಾದಡೆ ನಾನು ಬೆಱಗಾದೆನು!

ಇಂತು ಪುರಜನಂಗಳಂ ನೋಡಿ ವಿಡಂಬಿಸುತ್ತ ಬರಲು, ಮುಂದೆ ಲಕ್ಷದ ಮೇಲೆ ತೊಂಬತ್ತಾಱುಸಾವಿರ ಶಿವಾಲಯಂಗಳಂ ಮಾಡುತ್ತಿರ್ಪವರಂ ಕಂಡು ವಿಡಂಬಿಸುವ ಪ್ರಸ್ತಾವದ ವಚನ:

ಕಲ್ಲ ಮನೆಯ ಮಾಡಿ, ಕಲ್ಲ ದೇವರ ಮಾಡಿ, ಆ ಕಲ್ಲು ಕಲ್ಲ ಮೇಲೆ ಕಡೆದರೆ ದೇವರೆತ್ತ ಹೋದರೋ? ಲಿಂಗ ಪ್ರತಿಷ್ಠೆಮಾಡಿದವರಿಗೆ ನಾಯಕನರಕ ಗೊಹೇಶ್ವರಾ.

ಮತ್ತಂ, ದೇಹವೆ ದೇಗುಲವಾಗಿರಲು, ಬೇಱೆ ಮತ್ತೆ ದೇವಾಲಯವೇಕಯ್ಯ? ಪ್ರಾಣವೆ ಲಿಂಗವಾಗಿರಲು, ಬೇಱೆ ಮತ್ತೆ ಲಿಂಗವೇಕಯ್ಯ? ಹೇಳಲಿಲ್ಲ, ಕೇಳಲಿಲ್ಲ. ಗೊಹೇಶ್ವರಾ, ನೀನು ಕಲ್ಲಾದರೆ ನಾನೇನಪ್ಪೆಯ್ಯ?

ಇಂತು ಶಿವಾಲಯ ಪ್ರತಿಷ್ಠೆಯಂ ನೋಡಿ ಹಾಸ್ಯವ ಮಾಡುತ್ತ ಬರಲು ಮುಂದೆ ಕೆಱೆಯ ಕಟ್ಟಿಸುವವರ ಕಂಡು ವಿಡಂಬಿಸುವ ಪ್ರಸ್ತಾವದ ವಚನ:

ಅನ್ನವನಿಕ್ಕಿ ನನ್ನಿಯ ನುಡಿದು, ಅಱವಟ್ಟಿಗೆಯನಿಕ್ಕಿ ಕೆಱೆಯ ಕಟ್ಟಿಸಿದರೆ ಮರಣದಿಂದ ಮೇಲೆ ಸ್ವರ್ಗ ಉಂಟಲ್ಲದೆ ಶಿವನ ನಿಜವು ಸಾಧ್ಯವಾಗದು. ಗೊಹೇಶ್ವರನ ನಱಿಯದ ಶರಣಂಗೆ ಆವ ಫಲವು ಇಲ್ಲಾ.

ಸಿದ್ಧರಾಮಯ್ಯ ದೇವರು ಕೆಱೆಯ ಕಟ್ಟಿಸುವದನು ವಿಡಂಬಿಸಿ ನಾನೊಂದ ಕೆಱೆಯ ಕಟ್ಟಿದೆನೆಂದು ಪರಮಾರ್ಥ ಸೂಚಕವಾಗಿ ನಿರೂಪಿಸಿದ ಪ್ರಸ್ತಾವದ ವಚನ:

ತನುವೆಂಬ ಏಱಿಗೆ ಮನವೆಂಬ ಕಟ್ಟೆ, ಆಚಾರವೆಂಬ ಸೋಪಾನ, ಪರಮಾನಂದ ವೆಂಬ ಜಲವ ತುಂಬಿ ಕೆಱೆಯ ಕಟ್ಟಬಲ್ಲವರನಾರನೂ ಕಾಣೆ. ನಾನು ಕಟ್ಟಿದ ಕೆಱೆ ಸ್ಥಿರವಾಯಿತ್ತು ಗೊಹೇಶ್ವರಾ, ನಿಮ್ಮಾಣೆ.

ಮತ್ತಂ ವಿಡಂಬನ:

ಕೆಱೆಯ ಕಟ್ಟಿಸುವ ಒಡ್ಡನ ಪ್ರತಾಪವನೇನೆಂಬೆನಯ್ಯಾ! ನೆಲನನಗಿದು ಜಲವ ತೆಗೆದಿಹೆನೆಂಬ ಬಳಲಿಕೆಯ ನೋಡಾ! ಒಂದು ಕಲ್ಲನು ಕಡಿದು ಮತ್ತೊಂದು ಭೋಗವ ಕೊಟ್ಟಿಹೆನೆಂಬ ಅಜ್ಞಾನವಿದೇನೋ? ಗೊಹೇಶ್ವರಾ, ಈ ಇರವಿನ ಪರಿಗೆ ಬೆಱಗಾದೆನು!

ಇಂತು ಕೆಱೆಯ ಕಟ್ಟಿಸುವದಂ ವಿಡಂಬಿಸುತ್ತ, ಆ ಕೆಱೆಯ ಕಟ್ಟುವ ಗುಡ್ಡುಗಳೊಡನೆ ಒಡ್ಡರಾಮಯ್ಯನಿದ್ದಹನೇ ಎಂದು ಬೆಸಗೊಂಬ ಪ್ರಸ್ತಾವದ ವಚನ:

ಒಳಗ ತೊಳೆದು ಜಲವ ತುಂಬಲಱಿಯದ ಅರೆಮರುಳನೇನಾದ ಹೇಳಿರೆ? ಜಲದ ಸಂಗವ ತೊಳೆಯಲಱಿಯದೆ, ಜಲವ ಬಯಸುವನೆಂತಿರ್ದಹ ಹೇಳಿರೆ? ನೆಲನ ಶೋಧಿಸಿ ನೆಲೆಯನಱಿಯದೆ, ಕೆಱೆಯ ಕಟ್ಟಿಸುವ ಒಡ್ಡರಾಮಯ್ಯನ ಇರವೆಂತು ಹೇಳಿರೆ? ನಮ್ಮ ಗೊಹೇಶ್ವರನ ನಿಲವನಱಿಯದ ಮರುಳು ಸಿದ್ಧರಾಮನೆಂತಿರ್ದಹ ಹೇಳಿರೆ?

ಇಂತು ಒಡ್ಡರಾಮಯ್ಯನೇನಾಗಿರ್ದಹನೆಂದು ಪ್ರಭುದೇವರು ಕೆಱೆಯ ಕಟ್ಟಿಸುವಂತಹ ಗುಡ್ಡುಗಳ ಬೆಸಗೊಳಲು, ಅವರೆಲ್ಲ ಗುರುನಿಂದೆಯ ಕೇಳಿ ಸುಮ್ಮನಿರ ಬಾರದೆಂದು ಕಲ್ಲು ಗುಂಡು ಬಡಿಗೆಗಳಿಂದಿಟ್ಟು ನೋಯಿಸಲು, ಆ ಪ್ರಭುದೇವರ ತಾಗಿದಂತಹ ಘಾಯಗಳೆಲ್ಲವೂ ಮರಳಿ ಗುಡ್ಡುಗಳನೆ ತಾಗಲು, ಆ ಪ್ರಸ್ತಾವಕ್ಕೆ ಪ್ರಭುದೇವರು ಹೇಳಿದ ವಚನ:

ಗುರುವೆಂದಱಿಯರು, ಹಿರಿಯರೆಂದಱಿಯರು; ದೇವರೆಂದಱಿಯರು, ಭಕ್ತರೆಂದಱಿಯರು; ಲಿಂಗವೆಂದಱಿಯರು, ಜಂಗಮವೆಂದಱಿಯರು; ಬಂದವರನಱಿಯರು, ನಿಂದವರ ನಿಲವನಱಿಯರು. ಶಿವಶರಣರ ನೋಯಿಸುವ ಪಾತಕರನೇನೆಂಬೆ? ಗೊಹೇಶ್ವರಾ, ನಿಮ್ಮ ಮನ ನೊಂದ ನೋವು ಬಱಿದೆ ಹೋಗದು.

ಮತ್ತಂ ಸಹಜವ ನುಡಿದರೆ ಸೇರುವರಿಲ್ಲ ಕಾಣಿರಣ್ಣಾ! ಅಸಹಜಕ್ಕಲ್ಲದೆ ಲೋಕ ಭಜಿಸದು. ಕೆಱೆ ಕಟ್ಟಿಸುವನ ಕಂಡು ಒಡ್ಡರಾಮಯ್ಯನೆಂದರೆ, ಮುಳಿಸಿಂದ ಲಿಂಗತನುವ ನೋಯಿಸುವರೆ? ನಮ್ಮ ಗೊಹೇಶ್ವರ ಲಿಂಗವು ಜಗದೊಳಗೆ ಪರಿಪೂರ್ಣವಾದಕಾರಣ ಶರಣರ ನೋವು ಮರಳಿ ಪಾತಕರ ತಾಗಿದರೆ, ಅಲ್ಲಯ್ಯ ನೋಡಿ ನಗುತಿರ್ದನು!

ತಾಯಿಗಾದ ಸುಖದುಃಖಂಗಳು ಬಸುಱ ಶಿಶುವಿಂಗೆ ನೋಡಯ್ಯಾ, ಶಿವಶರಣರಿಗೆ ಮಾಡಿದ ಸುಖದುಃಖಗಳು ಶಿವನ ತಾಗುವವು. ಕರಣವುಳ್ಳವರು ಮರಣವಿಲ್ಲದವರಿಗೆ ಮುನಿದರೆ, ತನುವುಳ್ಳವರ ಮುಟ್ಟುವುದಲ್ಲದೆ ಒಡಲಿಲ್ಲದಾತನ ಮುಟ್ಟಬಲ್ಲುದೇ? ಗೊಹೇಶ್ವರಾ, ಕೆಂಡವನೊಱಲೆ ಮುಟ್ಟಬಲ್ಲುದೇ?

ಇಂತಪ್ಪ ಅಜ್ಞಾನಿಗಳಿಗೆ ಉಪದೇಶವ ಮಾಡಿದ ಸಿದ್ಧರಾಮಯ್ಯನನು ಆ ಶಿಷ್ಯರು ಮಾಡಿದ ಪಾಪ ತಾಗುವುದೆಂದು ಪ್ರಭುದೇವರು ನಿರೂಪಿಸಿದ, ಪ್ರಸ್ತಾವದ ವಚನ:

ಜಗದ ಜನವ ಹಿಡಿದುಕೊಂಡು ಬಂದು ಉಪದೇಶವ ಮಾಡಿದ ಗುರುವಿಂಗೆ ಆ ಉಪದೇಶ ಕೊಟ್ಟು ಕೊಂಡ ಮಾಱಿಂಗೆ ಹೋಹುದಲ್ಲದೆ ಅಲ್ಲಿ ನಿಜವಳವಡುವುದೇ? ತೆಱನನಱಿಯದ ಸಂಸಾರಿ ಜೀವಿಗಳು ಮಾಡಿದ ದೋಷ ತಮ್ಮ ನುಂಗಿ, ಆ ಗುರುವಿಂಗೆ ಉಪಹತಿಯ ಮಾಡುವುದು ನೋಡಾ! ಗೊಹೇಶ್ವರಾ, ತಾನಿಟ್ಟ ಬೇತಾಳ ತನ್ನನೆ ತಿಂದರೆ, ಬೇಕು ಬೇಡೆನಲುಂಟೆ?

ಇಂತು ಪ್ರಭುದೇವರ ನೋಯಿಸಿದ ನೋವು ಆ ಗುಡ್ಡಗಳನೆ ಮರಳಿ ತಾಗಲು, ಆ ಘಾಯಂಗಳ ವಿಘಾತಿಯಿಂ ಗೋಳಿಡುತ್ತಲೋಡಿಬಂದು ಸಿದ್ಧರಾಮಯ್ಯ ದೇವರಿಗೆ ಮೊಱೆಯಿಟ್ಟು ದೂಱೆ: ದೇವಾ, ಆವನೊರ್ವ ಇಂದ್ರಜಾಲಕನು ನಿಮ್ಮನು ಬಾಯಿಗೆ ಬಂದಂತೆ ನಿಂದಿಸುತ್ತಿರಲು, ನಾವೆಲ್ಲರು ಗುರುನಿಂದೆಯ ಕೇಳಿ

ಸುಮ್ಮನೆ ಇರಬಾರವೆಂದು ಕಲ್ಲುಗುಂಡುಗಳನ್ನಿಟ್ಟು ಸೋಯಿಸಲು, ಆತನ ತಾಗಿದಂಥ ಘಾಯಗಳೆಲ್ಲವು ನಮ್ಮನೆ ತಾಗಿ, ದೆಸೆದೆಸೆಯಿಂದೆಲ್ಲರು ನೊಂದು ಘಾಸಿಯಾದೆವೆಂದು ಬಿನ್ನೈಸಲು, ಸಿದ್ಧರಾಮ ತಂದೆಗಳು ಬಂದು ಈತನು ಪ್ರಭುದೇವರೆಂದು ವಿಚಾರಿಸಿ ನೋಡದೆ ಕ್ರೋಧಕ್ಕೆ ಮನವನೆಡೆಗೊಟ್ಟು, ಗುಡ್ಡುಗಳ ನೋವೆ ತನ್ನ ನೋವಾಗಿ ಕೈಕೊಂಡು ನುಡಿವ ಪ್ರಸ್ತಾವದ ವಚನ:

ಎಲೆ ಅಯ್ಯಾ, ನಿಮ್ಮವರ ನೋವೆ ಎನ್ನ ನೋವು ನೋಡಾ! ಕಂಡು ಕಂಡು ಸೈರಿಸಲಾಱೆ ನೋಡಯ್ಯಾ! ನಿಮ್ಮವರೊಡನೆ ಬಱಸೂಱಸಾಗಿಪ್ಪವರ ಕಂಡರೆ ನಾನವರಿಗೆ ಮುನಿವೆ ನೋಡಾ. ಕಪಿಲ ಸಿದ್ಧಮಲ್ಲಿನಾಥಾ, ನೀನವರಲ್ಲಿಪ್ಪೆಯಾಗಿ.

ಇಂತು ಕ್ರೋಧಿಸಿ ಸಿದ್ಧರಾಮಯ್ಯದೇವರು ನೊಸಲ ಕಣ್ಣ ತೆಗೆವ ಪ್ರಸ್ತಾವದ ವಚನ:

ಎಕ್ಕೆವಿಂಡುಗಳೆಂಬವರು ಮುಕ್ಕಣ್ಣಾ, ನಿಮ್ಮ ಗಣಂಗಳು. ಬತ್ತಿದ ಕೆಱೆಗೆ ಬಾಯ ಬಿಟ್ಟಂತೆ ಮೊಱೆಯಿಟ್ಟು ಬರಲು, ಹೊತ್ತಿದ ಅಂಗಾಲ ಕಿಚ್ಚು ನೆತ್ತಿಯ ಮುಟ್ಟಿದರೆ, ಚೆಕ್ಕನೆ ಕಪಿಲ ಸಿದ್ಧಮಲ್ಲಿನಾಥ ನೊಸಲ ಕಣ್ಣ ತೆಗೆದನು.

ಇಂತು ನೊಸಲ ಕಣ್ಣ ತೆಗೆದ ಸಿದ್ಧರಾಮಯ್ಯದೇವರು ಆ ನೊಸಲ ಕಣ್ಣಿಗೆ ಬೆಸನನಿತ್ತ ಪ್ರಸ್ತಾವದ ವಚನ:

ಬ್ರಹ್ಮನಾದಡಾಗಲಿ ವಿಷ್ಣುವಾದಡಾಗಲಿ, ಇಂದ್ರನಾದಡಾಗಲಿ ಚಂದ್ರನಾದ ಡಾಗಲಿ, ಎಮ್ಮ ಶಿವಶರಣರ ನೋವು ಎನ್ನ ನೋವು ನೋಡಾ! ಅವರನೊಱಸುವೆನುಱು ಹುವೆನೆಂದು ಕಪಿಲಸಿದ್ಧ ಮಲ್ಲಿಕಾರ್ಜುನ ತನ್ನ ನೊಸಲ ಕಣ್ಣಿಂಗೆ ಬೆಸನನಿತ್ತರೆ ನಿಲ್ಲ ಬಲ್ಲ ಗರುವರನಾರನೂ ಕಾಣೆ.

ಇಂತು ನೊಸಲ ಕಣ್ಣಿನ ಕಿಚ್ಚಿಂಗೆ ಬೆಸನನಿತ್ತ ಸಿದ್ಧರಾಮಯ್ಯದೇವರು ಆ ನೊಸಲ ಕಣ್ಣಿನ ಮಹಾಜ್ವಾಲೆಯು ನೋಡಿ ನೋಡಿ ಆಶ್ಚರ್ಯಂಬಡುತ್ತಿರ್ದ ಪ್ರಸ್ತಾವದ ವಚನ:

ಅಯ್ಯಾ, ನಿಮ್ಮ ಮೂರ್ತಿಯ ನೋಡಿಹೆನೆಂದರೆ ದೃಷ್ಟಿಯಾನವು. ನಿಮ್ಮ ತೇಜವನಾರೂ ನೋಡಲಮ್ಮರಯ್ಯಾ! ನಿಮ್ಮ ತೇಜವನೊಬ್ಬರಿಗೆಯೂ ಉಪಮಿಸ ಬಾರದು. ನೀವು ಮುನಿದು ನೊಸಲ ಕಣ್ಣ ತೆಗೆದರೆ ಅದಕ್ಕೆ ಇದಿರಿಪ್ಪರಿನ್ನಾರು ಹೇಳಯ್ಯಾ? ಕಪಿಲಸಿದ್ಧ ಮಲ್ಲಿಕಾರ್ಜುನಾ, ನಿಮ್ಮ ತೇಜ ಮೂಱು ಲೋಕವ ನುಂಗಿದರೆ ನಾನು ನೋಡಿ ಕಣ್ಣ ಮುಚ್ಚುತಿರ್ದೆನು!

ಇಂತು ಸಿದ್ಧರಾಮಯ್ಯದೇವರ ನೊಸಲ ಕಣ್ಣಿನ ಮಹಾಜ್ವಾಲೆಯ ಧಾಳಿ ಬ್ರಹ್ಮಾಂಡಮಂಡಲಮಂ ಮುಸುಕುತ ಬಪ್ಪುದಂ ಕಂಡು ಅಲ್ಲಮಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ:

ಕಾಡುಗಿಚ್ಚೆದ್ದರೆ ಅಡವಿಯೆ ಗುಱಿ; ನೀರುಗಿಚ್ಚೆದ್ದರೆ ಸಮುದ್ರವೆ ಗುಱಿ. ಒಡಲುಗಿಚ್ಚೆದ್ದರೆ ಆ ತನುವೆ ಗುಱಿ; ಕಾಲಾಗ್ನಿ ಎದ್ದರೆ ಲೋಕಂಗಳೆ ಗುಱಿ. ಶಿವಶರಣರ ಮನದಲ್ಲಿ ಕೋಪಾಗ್ನಿ ಎದ್ದರೆ ನಿಂದಕರೆ ಗುಱಿ. ಗೊಹೇಶ್ವರಾ, ನಿಮ್ಮ ಮಾಯದ ಹೊಡೆಗಿಚ್ಚಿಂಗೆ ನಾನು ಗುಱಿಯಲ್ಲ ಕೇಳಾ.

ಇಂತು ಭೂಮಿಯಾಕಾಶಮಂ ತುಡುಕುತ ಬಪ್ಪ ಮಹಾಜ್ವಾಲೆಯನು ಇದೆಲ್ಲಿಯದೆಂದು ತಿಳಿದು ನೋಡಿ, ಸಿದ್ಧರಾಮಯ್ಯದೇವರ ನೊಸಲ ಕಣ್ಣ ಕಿಚ್ಚೆಂದಱಿದ ಪ್ರಸ್ತಾವದ ವಚನ:

ಕಾಯಗುಣವಳಿದು, ಮಾಯದ ಮದ ಮುಱಿದು, ಕಾಮಕ್ರೋಧಂಗಳೆಲ್ಲವು ಹೆಱಹಿಂಗಿ ಹೋದವು. ಅಂಗವೆಲ್ಲವು ಲಿಂಗಲೀಯವಾಗಿ, ಕಂಗಳ ಕಳೆಯು ಬೆಳಗಳಿದು, ಗೊಹೇಶ್ವರನ ವಿರಹದುರಿಯೊಳಗೆ ಬೆಂದವರ ಮರಳಿಸುಟ್ಟೆಹೆನೆಂಬ ಸಿದ್ಧರಾಮಯ್ಯ ಮರುಳು ನೋಡಾ ?

ತಾಪತ್ರಯದಲ್ಲಿ ಬೆಂದ ಒಡಲಹಿಡಿದು ತಂದು ಜ್ಞಾನವೆಂಬ ಉರಿಗೆ ಆಹುತಿಯ ಕೊಟ್ಟವನ, ಜ್ಞಾನವೆಂಬ ಕಾಯವ ಹಿಡಿದು ನಿಶ್ಶೂನ್ಯವೆಂಬ ತೇಜದಲ್ಲಿ ಸುಟ್ಟವನ, ನಿಶ್ಶೂನ್ಯವೆಂಬ ಶಬ್ದವ ಸುಟ್ಟು ಭಸ್ಮವ ಧರಿಸಿದ ಲಿಂಗೈಕ್ಯನ, ಲೋಕದ ಸ್ಥಿತಿಗತಿಯ ಮಱೆದು ನಿರ್ವಾಣದಲ್ಲಿ ನಿಂದವನ, ಗೊಹೇಶ್ವರಲಿಂಗದಲ್ಲಿ ತನ್ನ ಮಱೆದ ಅಲ್ಲಯ್ಯನ ಕೋಪದ ಕಿಚ್ಚಿನಲ್ಲಿ ಸುಟ್ಟೆಹೆನೆಂಬ ಸಿದ್ಧರಾಮಯ್ಯನನೇನೆಂಬೆನು ?

ಇಂತು ತಮ್ಮ ಮಹಾತ್ಮೆಯ ನಿರೂಪಿಸುತ್ತಿರ್ದ ಪ್ರಭುದೇವರು ಸಿದ್ಧರಾಮಯ್ಯದೇವರ ಗರ್ವವ ಮುಱಿದು, ನೊಸಲ ಕಣ್ಣಿನ ಮಹಾಜ್ವಾಲೆಯನು ತಮ್ಮ ಶ್ರೀಪಾದದೊಳಗಡಗಿಸಿಕೊಂಡ ಪ್ರಸ್ತಾವದ ವಚನ:

ನಿಮ್ಮ ಶಕ್ತಿ ಜಗದೊಳಗಿಪ್ಪುದು; ಜಗದ ಶಕ್ತಿ ನಿಮ್ಮೊಳಗಿಪ್ಪುದು. ಜಗಕ್ಕೆ ನಿನಗೆ ಭೇದವಾದುದಕ್ಕೆ ಬೆಱಗಾದೆನು ! ಅಂದೊಮ್ಮೆ ತ್ರಿಪುರವ ಸುಟ್ಟಲ್ಲಿ ನಾಚಿತ್ತೆನ್ನ ಮನವು. ಕಾಮನನುರುಹಿ ಕಾಮಹರನೆನಿಸಿಕೊಂಡರೆ, ನಿನ್ನ ಅಹಂಕಾರವ ನೋಡಿ ಹೇಸಿತ್ತೆನ್ನ ಮನವು. ಕಾಲನ ಸುಟ್ಟು ಬೊಟ್ಟನಿಟ್ಟರೆ, ಎನಗೆ ನಗೆಗೆಡೆಯಾಯಿತ್ತು ನಿಮ್ಮ ಘನವೆನಗೆ. ಗೊಹೇಶ್ವರಾ, ನೀ ಮುನಿದು ನೊಸಲಕಣ್ಣ ತೆಗೆದರೆ, ಎನ್ನಂಗಾ ಲೊಳಡಗಿತ್ತಯ್ಯಾ ನಿಮ್ಮ ಕೋಪ.

ಇಂತು ನೊಸಲ ಕಣ್ಣಿನ ಮಹಾಜ್ವಾಲೆಯನು ಪ್ರಭುದೇವರು ತಮ್ಮ ಅಂಗಾ ಲೊಳಗೆ ಅಡಗಿಸಿಕೊಂಡು, ಸಿದ್ಧರಾಮಯ್ಯ ದೇವರ ಶಕ್ತಿಯ ನೋಡಬೇಕೆಂದು ತಾವು ತಮ್ಮ ಅಂಗಾಲೊಳಗೆ ಉರಿಗಣ್ಣ ತೆಗೆದಿಹೆವೆಂದು ಉದ್ಯೋಗಿಸಿದ ಪ್ರಸ್ತಾವದ ವಚನ:

ಹರನ ಕರುಣವ ಪಡೆದ ಸಾಮರ್ಥ್ಯದ ಬಲುಹಿಂದ ಶಿವಶರಣರೊಡನೆ ಸೆಣಸಿದರೆ ಲೇಸುಂಟೇ? ಅಘಟಿತಘಟಿತರಿಗೆ ಅಘಟಿತರುಂಟು ನೋಡಾ| ಸೊಸಲ ಲೊಬ್ಬ ಕಣ್ಣ ತೆಗೆದರೆ ಅಂಗಾಲಲೊಬ್ಬರು ಕಣ್ಣ ತೆಗೆವರು. ಗೊಹೇಶ್ವರನ ಶರಣರು ಉಪಮಾತೀತರು.

ಹೀಗೆಂದು ಪ್ರಭುದೇವರು ಅಂಗಾಲ ಕಣ್ಣ ತೆಗೆದ ಪ್ರಸ್ತಾವದ ವಚನ:

ಎರಡು ಕಣ್ಣುಳ್ಳರೆ ಚತುರ್ಭುಜನೆಂಬೆನು. ಮೂಱು ಕಣ್ಣುಳ್ಳರೆ ಮಹೇಶ್ವರ ನೆಂಬೆನು. ಮೈಯೆಲ್ಲಾ ಕಣ್ಣಾದರೆ ಸದಾಶಿವನೆಂಬೆನು. ಗೊಹೇಶ್ವರಾ, ನಿಮ್ಮ ಶರಣಂಗೆ ಅಂಗಾಲ ಕಣ್ಣು ಮೂಡಿದರೆ, ನಿರುಪಮ ಮಹಿಮ ಅಲ್ಲಯ್ಯನೆಂಬೆನು.

ಇಂತು ಅಂಗಾಲೊಳಗೆ ಮೂಡಿದ ಕಂಗಳ ತೇಜವ ನೋಡಿ ಪ್ರಭುದೇವರು ಕೊಂಡಾಡುತ್ತಿರ್ದ ಪ್ರಸ್ತಾವದ ವಚನ:

ನಿಮ್ಮ ತೇಜವ ನೋಡಲೆಂದು ಹಱಸಾರಿ ನೋಡುತ್ತಿರಲು, ಶತಕೋಟಿ ಸೂರ್ಯರು ಮೂಡಿದಂತಿರ್ದುದಯ್ಯಾ! ಮಿಂಚಿನ ಬಳ್ಳಿಯ ಸಂಚವ ಕಂಡೆ. ಎನಗಿದು ಸೋಜಿಗವಾಯಿತ್ತು! ಗೊಹೇಶ್ವರಾ, ನೀನು ಜ್ಯೋತಿರ್ಲಿಂಗವಾದರೆ ಉಪಮಿಸಿ ನೋಡಬಲ್ಲವರಿಲ್ಲಯ್ಯಾ.

ಇಂತಪ್ಪ ಅಂಗಾಲ ಕಣ್ಣಿನ ಮಹಾಜ್ವಾಲೆಯನು ಪ್ರಭುದೇವರು ಸಿದ್ಧರಾಮಯ್ಯ ದೇವರ ಬಳಿಗೆ ಹೋಗೆಂದು ಬೆಸಸಿ ಕಳುಹುವ ಪ್ರಸ್ತಾವದ ವಚನ:

ಕಾಲಾಗ್ನಿಯೆಂಬ ಕಾಡುಗಿಚ್ಚೆದ್ದು ಲೋಕವ ಸುಟ್ಟಿತೆಂದರೆ ಶಿವಶರಣರಂಜರು. ಶಶಿಧರ ಮುನಿದು ಬಿಸಿಗಣ್ಣ ತೆಗೆದರೆ ಶಿವಶರಣರದ ಮನಸಿಗೆ ತಾರರು. ಅಸಮಾಕ್ಷ ಲಿಂಗವ ತಮ್ಮ ವಶಕ್ಕೆ ತಂದು ಶರಣರು ಮುನಿದು ಉರಿಗಣ್ಣ ತೆಗೆದರೆ ಚತುರ್ದಶ ಭುವನದೊಳಗೆ ಆರು ಗುಱಿಯಲ್ಲ? ಗೊಹೇಶ್ವರಾ, ನಿಮ್ಮ ಅಱಿವಿನ ಬೆಳಗು ಬಿಸಿ ಯಾದರೆ ಸಿದ್ಧರಾಮಯ್ಯ ದೇವರೆಂಬ ಶಿವಯೋಗಿಯ ಹೃದಯವೆ ಗುಱಿ ಎಂದು ಬೆಸಸಿದನಲ್ಲಯ್ಯನು.

ಇಂತು ತೇಜೋಮಯವಾಗಿ ಅಷ್ಟದಿಕ್ಕುಗಳನಾಲಿಂಗಿಸುತ್ತ, ಧರೆಯಾಕಾಶ ವನಾಗುಳಿಸಿ ನುಂಗುತ್ತ, ಸಚರಾಚರಂಗಳನುಃಪೆಂದು ಊದುತ್ತ, ಸಪ್ತಸಮುದ್ರಂಗಳ ನಾಪೋಷಣಂಗೊಳ್ಳುತ್ತ, ಭುಗಿರ್ಭುಗಿಲೆಂಬ ಮಹಾರಭಸಕ್ಕೆ ಬ್ರಹ್ಮಾಂಡ ಕಟಾಹಂ ಬಿರಿವುತ್ತ, ಚತುರ್ದಶಭುವನವೆಲ್ಲಂ ಪ್ರಳಯಕಾಲ ತುಂಬಿದ ಮುನ್ನವೆ ಮಹಾ ಪ್ರಳಯ ಬಂದಿತ್ತೆಂದು ಜಗ್ಗನೆ ಜರಿವುತ್ತ, ಹರಿ ವಿರಿಂಚಿ ಮೊದಲಾದ ಸಮಸ್ತ ದೇವರ್ಕಳೆಲ್ಲರು ಶಿವಧೋ ಎಂದು ಕೈಲಾಸದತ್ತಲೋಡುತ್ತಮಿರಲು ಅನಂತಮುಖ ಒಂದೇ ಮುಖವಾಗಿ, ಒಂದು ಮುಖ ಅನಂತಮುಖವಾಗಿ ಬಪ್ಪ ಮಹಾ

ತೇಜೋರಾಶಿಯಂ ಕಂಡು, ಸಿದ್ಧರಾಮತಂದೆಗಳು ಇದೆಲ್ಲಿಯ ಮಹಾಜ್ವಾಲೆಯೆಂದು ವಿವೇಕದಿಂ ತಿಳಿದು ನೋಡಿ, ಈತನು ಶಿವನಲಾ ಎಂದಱಿದು ಅನುತಾಪಿಸುತ್ತಿರ್ದ ಪ್ರಸ್ತಾವದ ವಚನ:

ಯುಗಜುಗ ಮಡಿವಂದು ಧಿಗಿಲುಭುಗಿಲೆಂದು ಮುಸುಕಿದ ಮಹಾಜ್ವಾಲೆ ಇದೇನೋ? ಇಂದೆನ್ನ ಕಂಗೆ ಗೋಚರವಾಯಿತ್ತಲೆ ಅಯ್ಯಾ! ನೀವೆಂದಱಿಯೆನಯ್ಯಾ! ನಾನೆನ್ನ ಕಾಯದ ಕಳವಳದಲ್ಲಿದ್ದೆನಲ್ಲದೆ ನೀವೆಂಬ ಬಗೆದೋಱದೆ ಕೆಟ್ಟೆನಲೆ ಅಯ್ಯಾ! ಆಳ್ದನೊಡನೆ ಆಳು ಮುನಿದರೆ ಆರು ಕೆಡುವರು ಹೇಳಾ ಕಪಿಲಸಿದ್ಧ ಮಲ್ಲಿಕಾರ್ಜುನಾ?

ಮತ್ತಂ, ಅಱಿಯಬಾರದ ಘನವನಱಿದು, ಸಾಧಿಸಿ, ಗೆದ್ದ ಘನ ಮಹಿಮ ಶರಣರ ಮುಂದೆ ಎನ್ನ ಪ್ರತಾಪ ನಿಲುಕದೆ, ಆವರಿರ್ಪರು ಲಿಂಗ ಪ್ರಭೆಯೊಳಗೆ; ನಾನಿಪ್ಪೆನು ಅಹಂಕಾರದ ಪಂಜರದೊಳಗೆ. ಎನ್ನ ನೊಸಲ ಕಣ್ಣಿನ ಕಿಚ್ಚುಡುಗಿ, ಲಜ್ಜಿತನಾಗಿ ಮರಳಿ ಬಂದೆನ್ನ ಸುತ್ತಿ ಮುತ್ತಿತ್ತು ನಾನು ಶರಣೆಂಬ ಗುರುವಚನವಿದಿರೆದ್ದು ಕೊಲುವರೆ, ಕಪಿಲಸಿದ್ಧ ಮಲ್ಲಿನಾಥನೊಳಗೆ ಅಳಿವೆನಲ್ಲದೆ ಉಳಿವನಲ್ಲ.

ಮತ್ತಂ ಅನುತಾಪಂಗೆಯ್ದ ಪ್ರಸ್ತಾವದ ವಚನ:

ಕಾಲವೇಕೆ ಬಾರದಯ್ಯಾ ಇಂದಿನ ಅವಸ್ಥೆಗೆ? ಲಿಖಿತವೇಕೆ ತೊಡೆಯದಯ್ಯಾ ಇಂದಿನ ಅವಸ್ಥೆಗೆ? ಇಂದಿನಿತೀಸು ಏಕೆ ಬಾರದಯ್ಯಾ? ಎನ್ನ ದೇವ ಕಪಿಲಸಿದ್ಧ ಮಲ್ಲಿಕಾರ್ಜುನಾ, ನಿಮಗೆ ಕೂರ್ತ ಅವಸ್ಥೆಯೊಳಗೆ ಲಿಖಿತ ತೊಡೆಯದು, ಪ್ರಾಣ ಜಿಡದು ಇಂತಿರಿಸದಿರಾ ಎನ್ನ ದೇವರ ದೇವಾ.

ಮತ್ತಂ, ಕಳವಳದ ಕಂದೆಱವೆಗೊಳಗು ಮಾಡಿದೆ. ಆಹಾ! ಎಲೆ ಅಯ್ಯಾ, ಎನ್ನ ವಿಕಾರದಲ್ಲಿ ಗುಱಿ ಮಾಡಿದಿರಯ್ಯಾ! ಕೋಪದ ಕಾಡುಗಿಚ್ಚಿಗೆ ಅಡವಿಯ ಗುಱಿ ಮಾಡಿದಿರಿ, ಎನ್ನ ಕಪಿಲಸಿದ್ಧ ಮಲ್ಲಿಕಾರ್ಜುನಾ.

ಇಂತು ಅನುತಾಪಮಂ ಸಂತೈಸಿಕೊಂಡು ಪ್ರಭುದೇವರ ಶ್ರೀಪಾದದಲ್ಲಿಗೆ ಅಱಸಿಕೊಂಡು ಬರುತ್ತಿರ್ಪ ಪ್ರಸ್ತಾವದ ವಚನ:

ಅಟ್ಟಡವಿಯೊಳಗೆ ಇರುಳು ಹಗಲೆನ್ನದೆ ನಾನು ಅಪ್ಪಾ ಅಯ್ಯಾ ಎಂದು ಅಱಸುತ್ತ ಹೋದರೆ, ನಾನಿದ್ದೇನೆ ಬಾ ಮಗನೆ ಎಂದು ಕರೆದೆನ್ನ ಕಂಬನಿಯ ತೊಡೆದು, ತನ್ನ ನಿಜವ ತೋಱಿದ ದೇವನ ಪಾದವಿಂದೆನ್ನಲ್ಲಿಗೆ ನಡೆದು ಬಂದರೆ, ನಾನಱಿಯದೆ ಮರುಳುಗೊಂಡೆನೆಂದು ಎನ್ನ ಮನದೊಳಗೆಚ್ಚಱ ಮಾಡಿದ. ಆತನನಱಸಿಕೊಂಡು ಬಂದೆನ್ನ ಹೃದಯದಲ್ಲಿ ಇಂಬಿಟ್ಟುಕೊಂಬೆನೆನ್ನ ಕಪಿಲಸಿದ್ಧಮಲ್ಲಿಕಾರ್ಜುನನಾ!

ಮತ್ತಂ, ತನ್ನ ನಱಸಿ ಬಪ್ಪವರ ತಾನಱಸಿ ಬಪ್ಪ ನೋಡಾ ! ಎನ್ನ ದೇವನೆಲ್ಲಿದ್ದ ನಲ್ಲಿಗೆ ಹೋಗಿ ಬಾರಾ ಬಾರಾ ಎಂದು ಮನದೊಳಗೆ ಅಜ್ಝೊತ್ತಿಕೊಂಬೆನೆನ್ನ ಕಪಿಲ ಸಿದ್ಧಮಲ್ಲಿನಾಥಯ್ಯನಾ.

ಇಂತು ಪ್ರಭುದೇವರನಱಸಿಕೊಂಡು ಬರುತ್ತಿರ್ಪ ಸಿದ್ಧರಾಮಯ್ಯದೇವರೊಡನೆ ಗುಡ್ಡುಗಳು ದೇವಾ, ಆತನು ನಿಂದರೆ ನೆಳಲಿಲ್ಲ, ಸುಳಿದರೆ ಹಜ್ಜೆಯಿಲ್ಲ, ಕಾಯವಿದ್ದೂ ಕಾಯವಿಲ್ಲ. ನೀವಿನ್ನು ಆವ ಪರಿಯಲ್ಲಿ ಮುನಿಸ ತಿಳುಹುತಪ್ಪಿರಿ ಎಂದೆನೆ, ಆ ಗುಡ್ಡು ಗಳೊಡನೆ ನುಡಿವ ಪ್ರಸ್ತಾವದ ವಚನ:

ಅವನಾದ ಗತಿಯ ನಾನಪ್ಪೆ; ಅವ ನಿಂದ ನಿಲವ ನಿಲುವೆನು. ಆತ ಬಿಟ್ಟುದ ಬಿಡುವೆನು; ಅವನ ಬೆಂಬಳಿಯ ನಲುವೆ. ಎನ್ನ ಪ್ರಾಣವನವನ ಮೇಲೆ ಇಕ್ಕಿ ನೆರೆವೆ ಕಪಿಲಸಿದ್ಧ ಮಲ್ಲಿಕಾರ್ಜುನನಾ.

ಹರಿಹರ: ಬಸವರಾಜದೇವರ ರಗಳೆ

ಜಸವಂ ಜನ್ಮದುರಾಶೆಯುಂ ಕಳೆದು ಕರ್ಮಾರಂಭವಂ ನೀಗಿ ಸಂ-
ತಸದಿಂದಂ ಪೊಱಮಟ್ಟು ಬಂದು ಘನನಿರ್ಮಾಯಪ್ರಕಾಶೋಜ್ಜ್ವಲ-
ಪ್ರಸರಪ್ರಸ್ಫುರಿತಪ್ರಮೋದಚರಿತ ಶ್ರೀಸಂಗಪಾದಾಬ್ಜಪಾ-
ಸಸುಪೂಜಾರಸಮಗ್ನ ಚಿತ್ತನೆನಿಸಿರ್ದಂ ಸತ್ಯಸಾರೋದಯಂ ||

ಇಂತು ಕಪ್ಪಡಿಸಂಗಮದೊಳಿರ್ದು ರಾಗದಿಂ
ಸಂತತಂ ಶಶಿಧರನನರ್ಚಿಪುದ್ಯೋಗದಿಂ |
ಬಸವಂ ಪ್ರಭಾತಸಮಯಕ್ಕೆ ಮುನ್ನವೆ ಎದ್ದು
ಒಸೆದು ಭಸಿತೋದ್ಧೂಳನಂ ಮಾಡುತಂ ಬಾಳ್ದು |
ಸಂಗಂಗೆ ಸಾಷ್ಟಾಂಗದಿಂದಲ್ಲಿ ಪೊಡಮಟ್ಟು
ಪಿಂಗದೀಶಂಗೆ ಭಯಭಕ್ತಿಯುಂ ಮುಂದಿಟ್ಟು |
ತಕ್ಕೈಸಿ ಮುಂಡಾಡಿ ಪುಳಕಿಸುತೆ ಕಂಪಿಸುತೆ
ಬೀಳ್ಕೊಂಡನಕ್ಕಱಿಂ ಲಾಲಿಸುತ್ತಾಲಿಸುತೆ
ಬಂದಗ್ಘವಣಿಯ ಕಂಬಿಗೆ ನಲಿದು ಮೈಯಿಕ್ಕಿ
ನಿಂದೆತ್ತಿ ಸಂಗ ಶರಣೆನುತೆ ಹೆಗಲೊಳಗಿಕ್ಕಿ
ತುದಿಕಂಜಿಯೊಳು ಕರಂಡಗೆಯನೊಲಿದಳವಡಿಸಿ
ಸದಮಳಂ ನಡೆದನಭವನನೊಳಗೊಡಂಬಡಿಸಿ |
ನಡೆತರುತೆ ದೂರದೊಳು ಪೂದೋಂಟಮಂ ಕಂಡು
ಪೊಡಮಟ್ಟು ಕುಣಿಕುಣಿದು ಸಂತಸಮನೆಡೆಗೊಂಡು
ಪರಿಮಳಂ ತೀಡಿದಡೆ ಕಡೆಗೆ ಸಂಗಂಗೆನುತೆ
ಚರಿತದಿಂ ಮುಖವಾಸವುಂ ಸುತ್ತಿ ರಂಜಿಸುತೆ |
ತೋಟಮಂ ಪೊಕ್ಕು ಕಂಜಿಯನೊಳ್ಳಿತಱೊಳಿರಿಸಿ
ಎಂಟುಮಡಿ ಹಿಗ್ಗಿ ಹೊರೆಯೇಱುತಂ ಸಡಗರಿಸಿ |
ಅಳಿಯೆಱಗದನಿಲನಲುಗದ ರವಿಕರಂ ಪುಗದ
ಸುಳಿಗೊಂಡು ದಳವೇಱಿ ಹಸುರಳಿದು ಬೆಳಪುಳಿದ
ಸುರಚಿರಮೆನಿಪ್ಪ ಮೀಸಲ ಮೊಗ್ಗೆಯುಂ ಕಂಡು

ಇರವಂತಿಯೊಳ್ ಮೆಱೆವ ಬಿರಿಮುಗುಳ್ಗಳಂ ಕೊಂಡು
ಸೊಂಪಿನಿಂ ಕಂಪಿಡುವ ಸಂಪಗೆಗಳಂ ಕೊಂಡು
ಹೊಂಪೆಸೆವ ಹೊಂಗೇದಗೆಯ ಹೂಗಳಂ ಕೊಂಡು
ಅದೆ ಮಲ್ಲಿಕಾಕುಟ್ಮಲಂ ಸಂಗಗೆಂದೆನುತೆ
ಜಾದಿಯುರಳಂ ಕೊಂಡು ಮಲ್ಲಿಗೆಗಳಂ ಕೊಂಡು
ಸೋದಿಸಿದ ಪರಿಮಳದ ಪಡ್ಡಳಿಗಳಂ ಕೊಂಡು
ಬದುಕಿದೆಂ ಬದುಕಿದೆನೆನುತ್ತೆ ನದಿಗೈತಂದು
ಸದಮಳಶಿವೈಕ್ಯಚಿತ್ತಂ ಹರುಷದಿಂ ನಿಂದು
ಸೋದಿಸಿದ ಶೀತೋದಕಂಗಳಂ ತೀವುತಂ
ಆದರಂ ಮಿಗೆ ಸಪುರದಿಂದ ಬಾಸಣಿಸುತಂ
ಸಹಜಸುಮ್ಮಾನಿ ಸುಖದಿಂದ ಬರುತಿರ್ದ
ಇಹಪುರದ ಪುಣ್ಯಪುರುಷಂ ನಡೆದು ಬರುತಿರ್ದ
ಅತ್ತಿತ್ತ ಚಲಿಸದಚಲಂ ನಡೆದು ಬರುತ್ತಿರ್ದ
ಉತ್ತಮೋತ್ತಮ ಭಕ್ತಿಯುಕ್ತನೆಳ್ತರುತಿರ್ದ

ಒಲವಿಂದ ನಡೆತಂದು ಶಿವನಿಳಯಮಂ ಪೊಕ್ಕು
ನಲಿನಲಿದು ನೇಹವಂಕುರಿಸುತಿರೆ ಕೈಮಿಕ್ಕು
ಲಿಂಗ ಶರಣೆನುತಗ್ಘವಣಿಯನೊಲವಿಂದಿಳಿಪಿ
ಸಂಗಮೇಶ್ವರನ ಹತ್ತಿರೆ ಹದುಳದಿಂದಿಳಿಪಿ
ಬರವನೆಳಸಿರ್ದಯ್ಯ ದೇವ ತಳುವಿದೆನೆಂದು
ಉರವಣಿಸಿ ಬರುತಿರ್ದೆ ತಂದೆ ಮುಳಿಯದಿರೆಂದು
ಎನ್ನಯ್ಯ ಎನ್ನರಸ ಎನ್ನ ಬಂಧುವೆ ಎನುತೆ
ಎನ್ನ ಕಣ್ಣಿಂ ಗತಿಯೆ ಮತಿಯೆ ಕರುಣಿಪುದೆನುತೆ
ಅಲ್ಲಿ ಕತ್ತುರಿಯ ಶ್ರೀಗಂಧಂಗಳಿಂ ಪೊರೆದ
ಸಲ್ಲಲಿತದಿರವಂತಿಸಂಪಗೆಗಳಿಂ ಪೊರೆದ
ಸುತಶೀತಳಂಗಳಂ ಪೊಂಗಳಸದೊಳು ತೀವಿ
ಅತಿಶಯಾನಂದಾಶ್ರುವಂ ಕಣ್ಗಳೊಳು ತೀವಿ
ಕೊಂಡಾಡಿ ಕೊಂಡಾಡಿ ಮಜ್ಜನಕ್ಕೆಱೆವುತಂ
ಮುಂಡಾಡಿ ಮುಂಡಾಡಿ ನೊಸಲೊಳಚ್ಚೊತ್ತುತಂ
ಚಂದ್ರಚೂಡಂಗೆ ಸಿರಿಗಂಧಮನಲಂಕರಿಸಿ
ಸಾಂದ್ರಸೌರಭ್ಯಮಯ ಪುಷ್ಪದಿಂ ಸಿಂಗರಿಸಿ
ಪೂಜೆಯಂ ನೋಡಿ ಮೆಚ್ಚದೆ ಪೂಜೆಯಂ ಮಾಡಿ
ಓಜೆಗೆಟ್ಟಱುಹುಗೆಟ್ಟತಿಲಲ್ಲೆಯಂ ಮಾಡಿ
ನಯನಂಗಳೊಳು ಪೂಜೆ ಬರೆದಂತೆ ನೋಡುತಂ

ಭಯಭಕ್ತಿಯಿಂ ಪೂಜೆ ಮೆಱೆವಂತೆ ಮಾಡುತಂ
ಚಿತ್ತದೊಳು ಪೂಜೆಯುಚ್ಛೊತ್ತಿದಂತರ್ಚಿಸುತೆ
ಚಿತ್ತದೊಳು ಪೂಜೆ ಪುಟ್ಟಿರ್ದಂತೆ ಈಕ್ಷಿಸುತೆ!
ಧೂಪಧೂಮದ ತಿರುಳ ಪರಿಮಳಮನೊಲಿದಿತ್ತು
ದೀಪದೊಳು ಕಣ್ಬೆಳಗನೆತ್ತಿ ಸುಖಮಂ ಹೊತ್ತು
ರನ್ನದಡ್ಡಣಿಗೆಗಳ ಮೇಲೆ ಬೆಳಗಂ ಕಱೆವ
ಹೊನ್ನ ಪರಿಯಾಣದೊಳಗಮೃತಾನ್ನಮಂ ಮೆಱೆವ
ನವಘೃತಂ ನವಶಾಕಪಾಕಂಗಳಂ ಬಡಿಸಿ
ನವಮಧುರರಸವೊಸರ್ವ ಪಕ್ವಾನ್ನಮಂ ಬಡಿಸಿ
ನಡುವೆ ಜವನಿಕೆವಿಡಿದು ಪೊಱಗೆ ಕೈಮುಗಿದಿರ್ದು
ಕಡುಲಲ್ಲೆಯಿಂ ಭೀತಿಯಿಂ ಭಕ್ತಿಯಿಂದಿರ್ದು
ದೇವ ಚೆನ್ನನ ನಿಧಿಯೆ ಆರೋಗಿಸೆಲೆ ಸಂಗ
ದೇವ ಚೋಳನ ಸುಧೆಯ ಆರೋಗಿಸೆಲೆ ಸಂಗ
ಆರೋಗಿಸಯ್ಯ ನಿಜಲಿಂಗ ಸಂಗಮದೇವ
ಆರೋಗಿಸೈ ಉಮಾರ್ಧಾಂಗ ಸಂಗಮದೇವ
ಎನ್ನ ಸುಖನಿಧಿಯೆ ಗುಣನಿಧಿಯೆ ಕೂಡಲಸಂಗ
ಎನ್ನ ಭುಜಬಲವೆ ಮನದೊಲವೆ ಕೂಡಲಸಂಗ
ಎಂದು ಕೊಂಡಾಡುತ್ತ ವಾರೈಸಲರ್ಪಿಸುತೆ
ಬಂದು ಜವನಿಕೆಯೊಳಗೆ ನಿಂದು ಮನವಿಕ್ಕುತ್ತೆ
ಮೃದುಮೃದಂಗಂ ಬಹಳ ಕಹಳಾರವದ ನಡುವೆ
ಪದೆದು ಪೊಣ್ಮುವ ಶಂಖಭೇರೀರವದ ನಡುವೆ
ತಿಳಿದಗ್ಘವಣಿಯಿತ್ತು ಕೈಘಟ್ಟಿಯುಮನಿತ್ತು
ಬಳಸಿ ಕಂಪಿಡುವ ಕರ್ಪುರದ ವೀಳೆಯವಿತ್ತು
ಮಂಗಳಾರತಿಯಿತ್ತು ಚಮರಸೀಗುರಿಯಿಕ್ಕಿ
ಅಂಗಜಹರಂಗೆ ಮುಕುರಂದೋಱಿ ಮೈಯಿಕ್ಕಿ
ನಿಂದಿರ್ದು ಕೈಮುಗಿದು ನೋಡಿ ಕಣ್ಗಳು ತೊಱೆಯೆ
ಸಂದಣಿಸಿ ಮೈಯೊಳಗೆ ರೋಮಾಂಚತತಿ ನೆಗೆಯೆ

ಗುರುಸಂಗ ಶಿವಲಿಂಗ ಸತ್ಯಶರಣರ ಸಂಗ
ವರಸಂಗ ಲಿಂಗ ಶರಣಾಗು ಬಸವನ ಸಂಗ
ಕರುಣರಸನಿಧಿಘನತರಂಗ ಸಂಗಮದೇವ
ಗಿರಿಸುತೆಯುಸಮಸುಖಾಲಿಂಗ ಸಂಗಮದೇವ
ಸುಕುಮಾರಶಶಿಕಳಾಚೂಡ ಕೂಡಲಸಂಗ
ಸಕಲನಿರ್ಮಾಯಿಕಕ್ರೀಡ ಕೂಡಲಸಂಗ

ನಿತ್ಯನಿರ್ಮಳನೆ ನಿಃಕಳನೆ ಕೂಡಲಸಂಗ
ನಿತ್ಯನಿರ್ಭಯನೆ ನಿರುಪಮನೆ ಕೂಡಲಸಂಗ
ಹೊಗಳ್ವ ವೇದಾಳಿಗತಿಗೂಢ ಕೂಡಲಸಂಗ
ಸೊಗಯಿಸುವ ಘನವೃಷಾರೂಢ ಕೂಡಲಸಂಗ
ಎನ್ನನತಿ ಕರುಣದಿಂ ನೋಡು ಕೂಡಲಸಂಗ
ಎನ್ನ ಮನದಕ್ಕಱೊಳು ಕೂಡು ಕೂಡಲಸಂಗ
ಎನ್ನ ಕಣ್ಣೊಳಗೆ ಪರಿದಾಡು ಕೂಡಲಸಂಗ
ಎನ್ನ ಮನದೊಳಗೆ ಕುಣಿದಾಡು ಕೂಡಲಸಂಗ

ಎಂದು ಸ್ತುತಿಗೆಯ್ವುತಂ ಸ್ನೇಹರಸದೊಳ್ ಕೂಡಿ
ಇಂದುಧರನೊಳ್ ಸಲುಗೆಯಿಂ ಭಕ್ತಿಯಿಂ ಬೇಡಿ
ನಿಂದು ಭೀತಿಯ ತೋಱಿ ತೊದಳಿಂದ ನುಡಿವುತಂ
ಸಂದ ಗದುಗದಿಕೆಯಿಂದಾನಂದವೇಱುತಂ
ಪುಟವೆದ್ದು ಹೊಂಗುತಂ ದಳವೇಱಿ ಹಿಗ್ಗುತಂ
ಸಟ್ಟಿರ್ಪ ನೋಟದಿಂದೋಜೆಯಂ ಮಾಱುತಂ
ಭವದಿಂದ ಹಿಂಗುತಂ ನೆನಹಿಂದ ಹಿಗ್ಗುತಂ
ಬೆವರುತಂ ಬಿಕ್ಕುತಂ ತೇಗುತಂ ತೂಗುತಂ
ಕ್ರಮವಳಿದು ಸುಳಿದು ಸುಖಿಯಾಗುತಂ ಬೀಗುತಂ
ನಮಿಸುತಂ ಕಂಪಿಸುತೆ ಮನವೊಲಿದು ಹೊಗಳುತಂ
ಪುಳಕಂಗಳಿದಿರೇಱೆ ಸುಖಜಲಂ ಕಣ್ ತೀವೆ
ಬೆಳೆವ ಗದುಗದವಲರೆ ಭಕ್ತಿ ಚಿತ್ತಮನೋವೆ
ಕಂಪಿಸುತೆ ನಡೆಯುಡುಗೆ ಮನವಕ್ಕಱಿಂ ಕರಗೆ
ಜೊಂಪಿಸುತೆ ತನು ಜೋಲೆ ಸಾತ್ತ್ವಿಕರಸಂ ಮಸಗೆ
ಮಣಿಮಣಿದು ಕುಣಿಕುಣಿದು ಕೆಲೆಕೆಲೆದು ನಲಿದಾಡಿ
ತಣಿತಣಿದು ತಕ್ಕೈಸಿ ಮಿಕ್ಕು ಮಲೆಮಲೆದಾಡಿ
ಆಡಾಡುತ್ತಲ್ಲಿ ಪೊಗಳ್ವುದಂ ನೆಱೆ ಮಱೆದು
ನೋಡನೋಡುತ್ತಲ್ಲಿ ನೋಟಮಂ ಮಿಗೆ ಮಱೆದು
ಕಣ್ಮುಚ್ಚಿ ಗದುಗದಿಸಿ ಜೋಲ್ದು ಜೊಂಪಿಸಿ ಬಿದ್ದು
ಉಣ್ಮುವ ಶಿವಾನಂದರಸದ ಹೊನಲೊಳಗದ್ದು
ಈಸಾಡಿ ಗಂಗಾಧರನ ಚರಣಮಂ ಪಿಡಿದು
ಲೇಸಾಗಿ ಚಿತ್ತದೊಳು ಸಂಗನಂ ನೆಱೆ ಪಿಡಿದು
ಮನದೊಳಚ್ಚೊತ್ತಿ ಸುಖಮೂರ್ಛೆಯೊಳ್ ಸಂದಿರ್ದು
ಘನಸುಖದೊಳೆರಡಿಲ್ಲದೊಂದಲ್ಲದಿರುತಿರ್ದು
ನೆನೆದು ಚೇತರಿಸಿ ಮೆಲ್ಲಗೆ ಮೆಲ್ಲನೆಚ್ಚತ್ತು

ಅನುಪಮಶಿವೈಕಸುಖಮುಖತೃಪ್ತಿಯುಂ ಹೊತ್ತು
ಕಣ್ದೆಱೆದು ಕುಳ್ಳಿರ್ದು ಸಂಗನಂ ಸಡೆ ನೋಡಿ
ನುಣ್ದನಿಯೊಳರ್ಚನೆಯ ನೇಹಮಂ ಮಾತಾಡಿ
ಪಾದೋದಕಪ್ರಸಾದಂಗಳಂ ಕೈಕೊಂಡು
ಸಾದರಂ ಸಂಗನೊಲುಮೆಯನೊಚ್ಚತಂಗೊಂಡು

ದಿನದಿನಕೆ ಘಳಿಗೆಘಳಿಗೆಗೆ ಭಕ್ತಿಮಿಗಿಲಾಗೆ
ಅನುದಿನಂ ನೇಹವಿಮ್ಮಡಿಸಿ ನೂರ್ಮಡಿಯಾಗೆ
ಸಂಗನಾಮಂಗಳಂ ಪುರಜನಕೆ ಕಲಿಸುತಂ
ಸಂಗಶರಣೆಂದವರ ಪದತಳಕ್ಕೆಱಗುತಂ
ನಡೆವಲ್ಲಿ ನುಡಿವಲ್ಲಿ ಸಂಗ ಶರಣೆಂದೆನುತೆ
ಉಡುವಲ್ಲಿ ಉಂಬಲ್ಲಿ ಸಂಗ ಶರಣೆಂದೆನುತೆ
ಕೊಡುವಲ್ಲಿ ಕೊಂಬಲ್ಲಿ ಸಂಗ ಶರಣೆಂದೆನುತೆ
ತೊಡುವಲ್ಲಿ ಪೊದೆವಲ್ಲಿ ಸಂಗ ಶರಣೆಂದೆನುತೆ
ಸಂಗನಾಮದೊಳಚ್ಚುವಿಡಿದು ಬೆಳೆವಂತಿರ್ದು
ಅಂಗವನಿತುಂ ಸಂಗನಂತರದೊಳೊಲಿದಿರ್ದು
ಪೂಗೊಯ್ವ ನಿಮಿಷವದು ಕಲ್ಪಕೋಟಿಗಳಾಗೆ
ರಾಗದಿಂದರ್ಚಿಸುವ ಕಲ್ಪಂ ನಿಮಿಷವಾಗೆ
ಕೊಡುವಗ್ಘವಣಿಧಾರೆ ಮಱೆಯಾಗೆ ಹೆದಱುತಂ
ನಡುವೆ ಹೂವಡ್ಡಮಿರೆ ನಡುಗಿ ಕೆಲಸಾರ್ಚುತಂ
ಪೂಜಿಸುವ ಕೈ ಸಡಿಲಲಮರ್ದಪ್ಪಿ ನೆರೆವುತಂ
ನೋಟ ವಕ್ರತೆಯೆಂದು ಮೈಯಿಕ್ಕಲಂಜುತಂ
ಕೂಟಕ್ಕೆ ಪಗೆಯೆಂದು ಮುಟ್ಟಿ ಬಿಡಲಂಜುತಂ
ಪುಳಕಕ್ಕೆ ಪುರುಡಿಸುತೆ ಸೋಂಕಿ ಸುಖಿಯಾಗುತಂ
ಇಳಿವಶ್ರುಜಲಕೆ ಪುರುಡಿಸುತೆ ಸಡೆನೋಡುತಂ
ಗದ್ಗದವನೊಪ್ಪಿರಿಸಿ ಪೊಗಳೆ ಲಟಲಟಿಸುವಂ
ಉದ್ಗತಾನಂದಮಂ ನೂಂಕಿ ನೆನೆದುಬ್ಬುವಂ
ಶಿವಪೂಜೆಯೊಳಗೆ ಪುಟ್ಟಿದ ಸುಧಾಕರನಂತೆ
ಭವಪೂಜೆ ಬಲಿದು ಪುರುಷಾಕಾರವಾದಂತೆ
ಲಿಂಗ ಜಂಗಮವೊ ಮೇಣ್ ಜಂಗಮವೆ ಲಿಂಗವೋ
ಲಿಂಗಜಂಗಮವೆರಡು ಇಳೆಯೊಳು ವಿಭೇದವೋ
ಎಂಬಂತೆ ಸಾತ್ತ್ವಿಕಪ್ರಭು ಪೂಜಿಸುತ್ತಮಿರೆ
ಅಂಬಕತ್ರಯನ ಪುತ್ರಂ ಪೂಜಿಸುತ್ತಮಿರೆ
ಬಸವಣ್ಣನಪ್ರತಿಮನೊಲಿದು ಪೂಜಿಸುತಮಿರೆ
ಬಸವರಾಜಂ ಮಚ್ಚಿ ಪೂಜಿಸುತ್ತಿರೆಯಿರೆ

ರಾಘವಾಂಕ: ವೀರೇಶ ಚರಿತೆ

ಶಿವಸೈನ್ಯದ ವರ್ಣನೆ

ಕಡೆಗಾಲದ ಕಿಚ್ಚಿನ ಮುಚ್ಚಳ್ದಿಗೆದಂದದೆ
ಘುಡಿಘುಡಿಸುವ ನಡುಗಣ್ಣೊವೆಯೊಡೆಯಲು ತೊಂಗ
ಲ್ಗಿಡಿ ಕೆದರುತ್ತುಕ್ಕಿದ ದಳ್ಳುರಿ ಗಗನವ ತೀವಲು ಬಿರುವಿಸಿಯಿಂ ಕಾದು
ಜಡೆಯೊಳ್ಗಂಗೆಯು ಮಡುವುಕ್ಕುತ್ತೆಸರಿಡೆ ಹೊಗ
ಲೆಡೆಗಾಣದೆ ಸಸಿಬೆವರಿಳಿದುರೆ ಚುಯ್ಯೆನೆ ದನಿ
ಗೊಡುವ ಸುಧಾಬಿಂದುವಿನೊತ್ತುವಿಡಿದನೆಲೆಲೇ ವೀರಕುಲಾಧೀಶ್ವರನು

ಕಡುಪಿಂ ಹಾರಿದ ಭಾರಕ್ಕಿಳೆಬಿರಿದಹಿಪನ
ಹೆಡೆಮುರಿದೊಡ್ಡಿದ ಕಮಠನ ಬೆನ್ನಿನ ಕರ್ಪರ
ವೊಡೆದಡಿಯಣ ಲೋಕಂಗಳುಡುಗೆ ಕಳೆದುಳಿದಾಮೇಗಣ ಲೋಕಾವಳಿಯು
ನಡುವಣ ಬಾಂದಣಗೊರೆಯಲು ಮಕುಟಂ ರುದ್ರನ
ಮುಡಿಗೂರ್ವರೆ ಹಿಡಿದೇಳ್ನೆಲೆಯ ಮಹಾಸತ್ತಿಗೆ
ಗಡಸಿದ ಕಾವೋ ಎಂಬಂತಿರೆ ಬೆಳದಧಟೆಂಗತಿ ಬೆರಗಾದಂ ಶಿವನು

ಸಿಡಿದೆಲುವಿನ ಸೆಕ್ಕೆಯ ದಾವಾಗ್ನಿಯ ಮೊಳೆಗಳ
ಬಡಬಾಗ್ನಿಯ ಚರ್ಮದ ವಟ್ಟೆಗಳೆಳನೇಸರ
ಕಡುಹಿನ ತೊಡಹಂ ಕಾಲನ ಕಂಗಳ ಹುಬ್ಬುಗಳಸುರರ ತಲೆಗಳ ಗೆಜ್ಜೆ
ಮಡಿಸಿದ ಶೇಷನ ಬಂದಿಗೆ ಮಾರಿಯ ಮಂಡೆಯ
ನಡುಘಂಟೆಯ ಮೃತ್ಯುವಿನೊಳನರವುರಿದೊಂಗ
ಲ್ಪಿಡಿದೊಣಗಲ್ಗರಳುಳ್ಳ ಹಿಣಿಲಚರ್ಮದ ಹಲಗೆಯ ಕಡುಗಲಿ ಕಣ್ಗೊಪ್ಪಿದನು

ಬಳವತ್ಕಾಲನ ಕೋಪದ ಬಂಟಂ ಪ್ರಳಯಾ
ನಳನಿಂ ಕಾಯಿಸಿ ರಾಹುವ ಕೇತುವ ಬಲಿದಿ
ಕ್ಕುಳಿನಿಂ ತೆಗೆದಂಥಾಸುರನೆರ್ದೆಗಲ್ಲೊಳ್ ವಜ್ರದ ಸಮ್ಮಟಿಗೆಯು ನಿಗುಚಿ
ಕುಳಿಕನ ವಿಷದಿಂ ನೀರೂಡಿಸಿ ನೇಸರ ಮಂ
ಡಳದಿಂ ಮಸೆದೆಳೆವಿಂಚಿಂದಂ ಕಲ್ಪವನಿ
ಟ್ಟಳವಡೆ ರುದ್ರಂ ಮಾಡಿದ ಖಂಡೆಯದಧಟಿನ ಹಿಡಿತವನೇಂ ವಣ್ಣಿಪೆನು

ಘುಲಘುಲಘುಲ ಛಟಛಟಛಟ ಘಂಘಂ ಘುಲ
ಘುಲಘುಲವೆಂಬುಲುಹಿನ ಭುಜಶಾಖೆ ದಿಗುಭಿತ್ತಿಯ
ಹೊಲಿಗೆಯ ಹುರಿಹರಿಯಲು ಕೈಯೆತ್ತಿದೊಡಾಗಸದೊಡ್ಡೊಡದಜನರಮನೆಯ
ತೊಲೆಮುರಿಯಲು ನೆಲನಂ ಘಟ್ಟಿಸೆ ಕಮಠನ ಬೆ
ನ್ನೆಲು ನೆಗ್ಗಲ್ತಿರುಪಿನ ಗಾಳಿಗೆ ದಿಙ್ನಾಥರ್ನೆ
ಲೆದಪ್ಪಲು ಠಕ್ಕಿಸಿ ಭಾಷೆಯನವಧರಿಸವಧರಿಸೆಂದಂ ಪಟುಭಟನು

ಪೊಡವಿಯ ಬಗಿವೆನೊ ಫಣಿಪನನುಗಿವೆನೊ ಜಡಧಿಯ
ಕುಡಿವೆನೊ ವಡವನ ಹಿಡಿವೆನೊ ಹರಿಕಮಲಜರನು
ಜಡಿವೆನೊ ಕುಲಗಿರಿಗಳ ಹುಡಿಗೆಯ್ವೆನೊ ನಾನಾಭುವನ ವಜ್ರದಡಿಕೀಲ್ಗಳನು
ಕೆಡಹುವೆನೋ ಸುರಪುರವನು ಸುಡುವೆನೊ ಗಗನವ
ನೊಡೆವೆನೊ ಮಿಡಿವೆನೊ ಶಶಿರವಿಗಳ ತಾರಗೆಗಳ
ಮುಡುಗುವೆನೋ ಹೇಳೆನ್ನಾಣೆ ಬೆಸಸೆಂದು ನಮಿಸಿದನು ಪಟುಭಟನು

ಹರುಷದೆ ಹರಸಿ ಕರಂ ಪೋಗೆನ್ನದ ಮುನ್ನಂ
ತಿರುಗಿ ಕರಂ ಕೈವೀಸಿ ಭುಜಂಬೊಯ್ಯೊಡೆ ಸಾ
ಗರವುಕ್ಕಿದವಾರಿದೊಡಂಬರ ಜರಿಯುತ್ತಳ್ಕೀರಿದೊಡೆ ರಸೆ ಬಸವಳಿದು
ಉರಗನ ಹೆಡೆ ಮಣಿಯಿತ್ತುರವಣಿಸಿದೊಡೆ ದಿಶಾ
ಕರಿ ತೆರಳಿದುವಡಿಯಿಟ್ಟೆಡೆ ಬೆಟ್ಟಂ ಹಿಟ್ಟಾದುವು
ಚರಿತದೊಳತುಳಬಳ ಪರಾಕ್ರಮದಾ ವೀರನ ಸೇನೆಯನೇಂ ವರ್ಣಿಪೆನು

ಕುಲಗಿರಿಗಳ ಕೈಗುಂಡುಗಳ ಬ್ರಹ್ಮಾಡಂ
ಗಳ ಹೊಡೆಸೆಂಡುಗಳ ದಿಶಾಕರಿಗಳ ದಂತಂ
ಗಳ ಪಿಲ್ಲಣಿಗೆಗಳ ಮಹಾಕಾಲನ ಕೋಣನ ಕೋಡಿನ ಹೊಸಬಡಿಗೆಗಳ
ಕುಳಿಕನ ಕಡ್ಡಣಿಗೆಯ ಶಶಿರವಿಗಳ ತಾಳಂ
ಗಳ ಧರೆ ಗಗನಂಗಳ ಪಲ್ಲಟಿಸುವ ಬಲಯುತ
ಬಲದಿಂ ಗಣಕುಲ ನಡೆದುದು ವೀರೇಶನ ಕೆಲಬಲದಲಿ ಜಗದಗಲದೊಳು

ಜಗದಗಲದೊಳ್ಳೈದುವ ವೀರರ ಪದಹತಿಯಂ
ನೆಗೆದ ರಜ ರಜಯೆನಿಸುತಂ ಗಗನವ ಮೊಗೆಯಲ್
ಹಗಲಿನ ಹಣೆಯಕ್ಕರಮಂ ತೊಡೆದುದು ವೀರನ ನವಕೋಪಾಳನಳರಾಹು
ಗಗನಂ ಸರ್ಪಗ್ರಾಸಂ ಗೊಂಡುದು ಎನಿಸುವ
ಬಿಗಿಗತ್ತಲೆಯನು ಸಬಳಂಗಳು ವಿಾರಲು ಸ
ತ್ತಿಗೆಗಳು ಕತ್ತಲಿಸಲ್ಮತ್ತಸಿಲತೆಗಳು ಬೆಳಗಲು ಪಡೆ ಕಣ್ಗೊಪ್ಪಿದುದು

ರಾಘವಾಂಕ : ಸಿದ್ಧರಾಮ ಚರಿತೆ

ಮಲ್ಲಿಕಾರ್ಜುನ ದರ್ಶನ

ಮಱೆಯದೀ ತೆಱದೊಳಂದಂದಿಂಗೆ ಕಱುಗಾವ
ತೆಱದಿ ಲಿಂಗಾರ್ಚನಾಸುಖವಡೆ [ಯು] ತಂ ಹಾಲ
ಮಱೆಯ ಘೃತದಂತೆ ಮಾತಿನ ಮಱೆಯ ಸತ್ಯದಂತೊಡಲ ಮಱೆಯಾತ್ಮನಂತೆ
ಉಱುವ ಸಮತೆಯ ಮಱೆಯ ಪುಣ್ಯದಂದದಿ ಮರನ
ಮಱೆಯಗ್ನಿಯಂತೆ ಪುಷ್ಪದ ಮಱೆಯ ಫಲದಂತೆ
ಮೆಱೆವ ಬಾಲ್ಯದ ಮಱೆಯ ಪರಬೊಮ್ಮವಾಗಿ ಮೆಱೆ[ಯು]ತ್ತಿರ್ದನಪ್ರತಿಮನು

ಒಂದು ದಿನವೆಂದಿನಂದದಿ ಕಱುಗಳಂ ಹೊಡೆದು
ತಂದು ನಳನಳಿಸಿ ಕೋಮಳತೆಯಿಂ ಕೊಬ್ಬಿ ನಲ
ಎಂದೆ ಮಡಲಿಱಿದಡಸಿ ಬೆಳೆದು ಭಾರೈಸಿ ತನ್ನಂ ಹೊತ್ತ ಭೂವನಿತೆಗೆ
ವಂದಿಸುವ ತೆಱದಿಂದ ಬಾಗಿ ಬಳುಕುವ ತೆನೆಗ
ಳಿಂದೆಸೆವ ತಮ್ಮ ನವಣೆಯ ಕೆಯ್ಯ ಬಳಿಯೊಳಾ
ನಂದದಿಂದಿರ್ಪ ಸಿದ್ಧೇಂದ್ರನಂ ಮೆಱೆಯಲಸುಗೆಯ್ದ ನಗಜಾರಮಣನು

ಭುವನದೊಳು ಹರವರಿಯ ಕುಱುಹುಳ್ಳ ತನ್ನ ವೇ
ಷವನು ಜಂಗಮರೂಪಿನೊಳು ಮಡಗಿ ನಡೆತಂದು
ಶಿವಮಸ್ತು ನಿತ್ಯನಾಗೆಂದು ಭಸಿತವನಿತ್ತು ಕೆಲಸಾರ್ದು ನಿಂದಿರ್ದೊಡೆ
ರವಿ ಮುಗಿಲ ಮಱೆಗೊಂಡೊಡಂ ಬೆಳಗು ಲೋಕಮಂ
ಧವಳಿಸುವ ತೆಱದಿ ನಿಜಮಂ ಮಾಜಿ ಕೃತಕದೊಳ
ಗವಿದೊಡಂ ಹಳಹಳನೆ ಹೊಳೆಹೊಳೆದು ದೇವಕಳೆ ಮನಕೆ ಮಂಗಳವಿತ್ತುದು

ನ್ಯಾಯದಿಂ ಕಣ್ಣಱಿಯದಿರ್ದೊಡಂ ಕರುಳಱಿಯ
ವೇಯಾಗಳಂತಲ್ಲಿ ಕಾಣುಹ ತಡಂ ನೆನೆದು
ಫೋಯೆಂದು ಮೆಯ್ಯಿಕ್ಕಿ ಕುಣಿದು ಕುಕಿಲಿಱಿದಾಡಿ ಹಾಡಿ ಪದರಜದಿ ಹೊರಳಿ
ಕಾಯದಿಂ ಕರಣದಿಂ ಚರಣಂಗಳಂ ಮುಸುಕಿ
ಹಾಯೆಂದು ಹಾರೈಸಿಯತಿತುಷ್ಟಿಯಿಂ ದೇವ
ರಾಯನೀಕ್ಷಿಸಿ ಮೆಚ್ಚಿ ಮುಚ್ಚಲಱಿಯದೆ ನಿಜವ ತೋಱಲುದ್ಯೋಗಿಸಿದನು

ಜಡೆಯ ಮಕುಟದ ಶಶಿಯ ಸುರನದಿಯ ಕುಂಡಲದ
ನಡುಗಣ್ಣ ಪಂಚಾಸ್ಯದೀರೈದು ಭುಜದ ಕೊರ
ಲೆಡೆಯ ಗರಳದ ತಳೆದ ಭಸಿತದಹಿಭೂಷಣದ ಹೊದೆದ ಹೊಸ ಗಜಚರ್ಮದ
ಹಿಡಿದ ಡಮರುಗ ಶೂಲಫಲಕ ಧನು ಸರ್ಪನುಂ
ಖಡುಗ ಶಿಖಿ ಪರಶು ಮೃಗ ಪುಲಿದೊವಲು ಸುತ್ತಿ ಬಿಗಿ
ದುಡಿಯ ಹರಿನಯನವೆರಸಿದ ಮೆಲ್ಲಡಿಯ ನಿಜದ ಮೂರ್ತಿಯಂ ತೋಱಿಸಿದನು

ಘನಮೇಘವಂ ಕಂಡ ನವಿಲಂತೆ ದೇವರಾ
ಯನ ನಿಜಕೆ ಬೆಱಗಾಗುತುಸಿರಲಮ್ಮದ ಸುಖವ
ನನುಭವಿಸಿ ತಳಿರೆತ್ತ ಬಿಸಿಲೆತ್ತ ಹಂಸ ಶಿಶುವೆತ್ತ ಕಲುಮೊರಡಿಯೆತ್ತ
ನೆನಹು ನಿಲುಕದ ಸಹಜ ಸುಕುಮಾರ ನೀನೆತ್ತ
ಲನಿಮಿತ್ತವೀಯೆಡೆಗೆ ಬರವೆತ್ತ ನೀನಾರು
ಮನೆಯೆಲ್ಲಿ ಹೆಸರಾವುದಾವ ನಾಡವನೆಂದು ಕೇಳ್ದ ನಗಜೇಶ್ವರನನು

ಪತಿತಪಾವನ ಪರ್ವತಾಶ್ರಮದಲಿಪ್ಪೆನು
ನ್ನತಮಲ್ಲಿನಾಥನೆಂದೆನ್ನ ನಾಮಂ ನಿನ್ನ
ನತಿನೇಹದಿಂ ನೋಡಿ ಹಂಜಕ್ಕಿಯಂ ಬೇಡಿ ಮೆಲಬಂದೆನೆಂದು ನುಡಿಯೆ
ಅತುಳಬಳ ಹರುಷವನು ತಳೆದು ಕೆಯ್ಯೊಳು ತನ್ನ
ಮತಿಗೆ ಮಂಗಳವಪ್ಪ ತೆನೆಯನಱಿಸಿದನು ಸುರ
ಪತಿ ಸುರಭಿಗಿಕ್ಕಲೆಂದಮೃತ ಫಳಮಂ ಕಲ್ಪತರುವನವೊಳಱಿಸುವಂತೆ

ನಸಿದು ಬೆಳೆಯದೆ ಕೊಬ್ಬಿ ದೊಡ್ಡಿತಹ ತೆನೆಗಳೊಳು
ನಸುಗೆಂಪಿನಿಂ ಬೀಗಿ ಬಾಗಿ ತೂಗುವ ಚೆಲುವ
ಹೊಸಹಾಲ ಹನಿಗಳಡಸಿದ ತೆಱದ ತೆನೆಗಳಂ ತಿಱಿತಿಱಿದು ತಂದು ತಂದು
ಒಸೆದೊಸೆದು ಹೊಸೆದೊಸೆದು ರಸವುಳ್ಳ ಹಸುರುಳ್ಳ
ಬಿಸಿಯುಳ್ಳ ಹಸಿಯ ಕೆಂಪುಳ್ಳವಲನಿತ್ತು ಬೋ
ಧಿಸಿದನುರೆ ಕಲ್ಪಭೂಜವನು ಚಿಂತಾಮಣಿಯ ಚಿಣ್ಣನುಪಚರಿಸುವಂತೆ

ದೇವಪತಿ ದೇವಾಧಿದೇವ ದೇವರ ಗಂಡ
ದೇವ ನೆಱೆತಣಿದು ತಲೆಯೆತ್ತುವನ್ನಂ ಸವಿದು
ಕಾವುದೆನ್ನಂ ತಂದೆಯೆಂದು ಬಂದಡಿಗಡಿಗೆ ಪೊಡಮಟ್ಟು ನೀಡಿ ನೀಡಿ
ಭಾವಿಸುವ ಸುತನ ಕಡುಮೋಹಮಂ ಮದನವಸ
ದಾವನೀಕ್ಷಿಸಲಾಱದಾತನಂ ನಾನಿಪ್ಪ
ಠಾವಿಂಗೆ ಬರಿಸುವುದಕಾವುದೋ ಬುದ್ಧಿಯೆಂದಱಿಸಿ ಕಂಡಿಂತೆಂದನು

ಎಳ ಅವಲಿನಿಂ ತಣಿದೆನಳೆಯುಂಬಕಳಕೆ ಮನ
ವೆಳಸಿತ್ತು ನನಗೆಂದು ತಂದುದುಂಟೇ ಇಲ್ಲ
ಸಿಳಯದಿಂ ತಂದಪಾ ತಪ್ಪೆನೆಸೆ ತಾ ಪೋಪೆನೇ ಪೋಗು ಬೇಗವೆನಲು
ಹುಲಿಯುಂಟು ಕರಡಿಯುಂಟಮ್ಮಾವು ಉಂಟಿಲ್ಲಿ
ಖಳಮೂರ್ಖ ಚೋರರುಂಟೆಂತಿರಿಸಿ ಪೋಪೆನೆಂ
ದಳವಳಿಯುತಿರಲೆನ್ನ ದೆಸೆಗಂಜಬೇಡ ಹೋಗೆಂದ ನಡಗುವ ಭರದೊಳು

ಇರಲಾಱದಗಲಲಾಱದೆ ಸಂಕಟಂಗೊಂಡು
ಹಿರಿಯ ಮೆಳೆಯಡಿಯಲ್ಲಿ ಹೊದಕೆಯಂ ಹಾಸಿ ಕು
ಳ್ಳಿರಿಸಿ ವಂದಿಸಿ ಪೋಗಿ ಪೋಗಲಾಱದೆ ತಿರುಗಿ ಬಂದೋವಿ ಬಲ್ವಿನಿಂದ
ತಿರುಗಿ ನೋಡುತ್ತ ಬಾಡುತ್ತ ಕಣ್ಮಱೆಯಾಗೆ
ಮರಳಿ ನೋಡುತ್ತ ಮೆಳೆ ಮಱೆಯಾಗೆ ಮಱುಗುತ್ತ
ಹರಿದು ಮನೆವೊಕ್ಕು ಜನನಿಯನಪ್ಪಿ ಬೇಡಿದಂ ಭುಲ್ಲವಿಸಿ ಲಲ್ಲೆಗರೆದು

ಹಿಂದೆ ಕರೆದಡೆ ಬಾರ ನುಡಿಸೆ ನುಡಿಯಂ ಕೊಟ್ಟ
ಡೊಂದುವಂ ಕೊಳ್ಳನಿಕ್ಕಿದಡುಣ್ಣನಿಂದು ತ
ನ್ನಿಂದ ತಾಂ ಬೇಡಿದಂ ಮಗನೆಂದು ಸಡಗರಿಸಿ ಕಡೆದ ತಾರೆಗಳ ತಿರುಳ
ಚಂದದೋಗರದೊಳಗೆ ಚಂದ್ರಿಕೆಯ ಹೊಸ ಹಳುಕಿ
ನಂದದೆಮ್ಮೆಯ ಮೊಸರು ನೆಲ್ಲಿಮಾವ್ ಮೆಣಸುಗರೆ
ಯೆಂದಿವೆಲ್ಲವನಿರಿಸಿ ಕಟ್ಟಿಕೊಟ್ಟಳು ಕಂದ ಕೋ ಎಂದು ಸಂತಸದೊಳು

ನಿಂದಿರದೆ ಬಪ್ಪಾಗಳೆಡದ ಭಾಗಂ ಕೆತ್ತೆ
ಬೆಂದೆನೆನ್ನಯ ತಂದೆ ಹುಲಿಕರಡಿಗಳು ಕಚ್ಚೆ
ನೊಂದನೋ ಹಸಿದು ಬೆಂಡಾದನೋ ಹೋದನೋ ಏನಾದನೋ ಎನ್ನುತ್ತ
ಒಂದೊಂದನೆಣಿಸುತ್ತ ಬಂದು ನೋಳ್ಪಾಗಳ
ಲ್ಲಿಂದ ಮುನ್ನವೆ ಶಿವಂ ಹೋಗೆ ಕುಳ್ಳಿರ್ದ ಮೆಳೆ
ಇಂದು ತೊಲಗಿದ ರಾತ್ರಿಯಂತೊಪ್ಪವಳಿದಿರಲು ಕಂಡನಾ ಸಿದ್ಧೇಂದ್ರನು

ಬಹ ತವಕದಿಂ ಹೊಲಬುಗೆಡೆಸಲೇ ನಮ್ಮಕೆ
ಯ್ಯಹುದೊ ಅಲ್ಲವೊ ಎನುತ್ತಂ ಸುತ್ತಲುಂ ನೋಡಿ
ಸಹಸಿಗನ ಹಾವುಗೆಯ ಹಜ್ಜೆಯಿವೆ ನಿಂದಿರ್ದನಿಲ್ಲಿ ಕುಳ್ಳಿರ್ದನಿಲ್ಲಿ
ಬಹಳವೆಳಗಿನ ಕಮಂಡುಲವನಿಳುಹಿದನಿಲ್ಲಿ
ಕುಹಕದಿಂ ಹಂಜಕ್ಕಿಯಂ ಸವಿದನಿಲ್ಲಿ ಬಳಿ
ಕೆಹಗಡಗಿ ಹೋದನೋ ತಾನೆ ಬಲ್ಲಂ ಕುಱುಹು ತಪ್ಪದೆನುತಾರೈದನು

ಬೆಳಿಗೆಯ್ಯ ಹೊದಱಿನೊಳು ಮುನ್ನಾಡಿದೆಡೆಗಳೊಳು
ತಳಿತ ಮರನಡಿಗಳೊಳಗೆಳಲತೆಯ ತಂಪಿನೊಳು
ತಿಳಿಗೊಳನ ತೀರದೊಳು ದೇವಭವನದೊಳು ಕೆಱೆಯೊಳು ಪುಷ್ಪವಾಟಿಗಳೊಳು
ಗುಳಿಗಳೊಳು ಗುಡ್ಡೆಗಳ ಮಱೆಯೊಳೆಡೆಯಾಡುವವ
ರೊಳು ಮೇವ ತುಱುವಿಂಡಿನೊಳು ದಾರಿಯೊಳು ಸುತ್ತಿ
ಸುಳಿದಱಸಿದಂ ಸಿದ್ಧರಾಮನಾ ಪರ್ವತಾಗ್ರಣಿ ಮಲ್ಲಿಕಾರ್ಜುನನನು

ಬನ್ನವೆತ್ತಿದರಂತೆ ಮಱುಗಿ ಕಾಣದ ಕೋಪ
ದಿಂ ನಿನ್ನನಗಲಿದೆನೆನುತ್ತೋಗರವ ಕೆದಱಿ
ಕೆನ್ನೆಯಲಿ ಕೈಯಿಟ್ಟು ತಲೆಯೆತ್ತಿ ಬಿರಿಬಿರಿದು ಬಿಕ್ಕಿ ಬಾಯ್ವಿಟ್ಟೊಱಲುತ
ಚೆನ್ನಮಲ್ಲಯ್ಯ ಮಲ್ಲಯ್ಯ ಬಾ ಬಾ ಕಾಡ
ದೆನ್ನ ಮಲ್ಲಯ್ಯ ಎನ್ನಯ್ಯ ಮಲ್ಲಯ್ಯ ಬಾ
ಹೊನ್ನಮಲ್ಲಯ್ಯ ಬಾ ಎಂದೊಱಲಿ ಕರೆದು ಕರೆದತ್ತನಾ ಸಿದ್ಧೇಂದ್ರಸು

ಅತ್ತಲಾತಂ ಪರುಷೆಯೊಡನೆ ನಡೆಯೆ ಹಿಂ
ದಿತ್ತಲೂರೊಳಗೆಂದಿನಂತೆ ಕಱುಗಳು ಬಪ್ಪ
ಹೊತ್ತಾಗೆ ಸುಗ್ಗವ್ವೆ ಮಗನ ಬರವಂ ಪಾರ್ದು ಹೊಱಗೆ ಬಾಗಿಲ ಹುದಿಯನು
ಹತ್ತಿ ನಿಂದಿರ್ದು ಬಪ್ಪವರನಡಿಗಡಿಗೆ ಕೇ
ಳುತ್ತ ನೋಡುತ್ತ ನೆನೆಯುತ್ತ ಸುಯ್ಯುತ್ತ ಮಱು
ಗುತ್ತಮಿರಲಾ ಸತಿಯ ಹರುಷವಸ್ತಮಿಸುವಂತಿನನಸ್ತಗಿರಿಗಿಳಿದನು

ಕೆಟ್ಟನಿನ್ನೇವೆನೆನ್ನ ಣುಗನಡವಿಯೊಳು ಹೊಲ
ಗೆಟ್ಟನೋ ಸರ್ಪನಗಿಯುತ್ತೊ ಪೆರ್ಬುಲಿಗೆ ಮೈ
ಗೊಟ್ಟನೋ ಮರನೇಱಿ ಬಿದ್ದನೋ ನೀರೊಳದ್ದನೊ ನಂಜುಮುಳ್ಳಡಿಯನು
ನಟ್ಟು ನಡೆಗೆಟ್ಟನೋ ಗರಗಿರಂ ಹೊಡೆದವೋ
ಬಟ್ಟೆಯೊಳು ಕಳ್ಳರಿಂ ಹಿಡಿವಡೆದನೋ ಹುಯ್ಯ
ಲಿಟ್ಟಾರ್ಗಿರ್ದಂ ಪೇಳ್ವೆನೆಮ್ಮವರ್ ತಳುವಿದರೆನುತ್ತೂರ ಹೊಱವಂಟಳು

ಮುಂದೇನು ಸುಳಿದೊಡಂ ಸಿದ್ಧರಾಮಾ ಎಂದು
ಹಿಂದೆ ಹುಲು ಗಿಱಿಕೆನಲು ಸಿದ್ಧರಾಮಾ ಎಂದು
ಅಂದು ಮಾದಾರಿಯೊಳು ಬಪ್ಪರಂ ಸಿದ್ಧರಾಮಾ ಎಂದು ಕರೆದು ಕರೆದು
ನಿಂದಿರದೆ ಹರಿದು ತಡವರಿಸಿ ಕಾಣದೆ ಮನಂ
ನೊಂದು ಹಲುಬುತ್ತಮಿರಲಳುವ ಸತಿಯಾವಳೋ
ಎಂದು ಕೇಳುತ್ತ ಕೆಯ್ಯುತ್ತ ಕೆಲಸಂ ತೀರ್ದು ಬಂದರಾ ತಮ್ಮವರ್ಗಳು

ಮತ್ತಾವಳಱಿಮರುಳನಂ ಹೆತ್ತ ಕಡು ಪಾತ
ಗಿತ್ತಿಯಾನೆಂದಡೇನಾದನಿನ್ನುಂ ಬಾರ
ನತ್ತ ಕಱು ಬಂದವೆನಲಾಕೆವೆರಸವರೆಲ್ಲ ಹರಿದು ಬಂದಱಿಸುತಿರಲು
ಕತ್ತಲೆಯ ಕಾಹೊನ್ನಲನೀಸಾಡುವಂತೆ ತಡ
ವುತ್ತ ನೋಡುತ್ತ ಹರಿಯುತ್ತ ಹಳವಿಸುತ ಬಾಯ್
ಬತ್ತಲೊಱಲುತ್ತ ತಮತಮಗೆ ಕರೆದರು ಕರೆದರೇನೆಂಬೆನಚ್ಚರಿಯನು

ಒಬ್ಬನೆಲೆ ಸಿದ್ಧರಾಮಾ ಎಂದು ಹಿಂದೆ ಮ
ತ್ತೊಬ್ಬನೆಲೆ ಧೂಳಿಮಾಕಾಳನೇ ಎಂದು ಮ
ತ್ತೊಬ್ಬನೆಲೆ ತಮ್ಮ ಮರುಳುಮಗನೇ ಎಂದು ಮತ್ತೊಬ್ಬನೆಲೆ ತಮ್ಮ ಎನುತ
ಮಬ್ಬಿನೊಳು ಮೆಳೆಗಳೊಳು ಕುಳಿಗಳೊಳು ಕಲುಗಳೊಳ
ಗಬ್ಬಿಯೊಳು ಬೆಳೆಗೆಯ್ಯ ಸಂದಿಯೊಳು ಗೊಂದಿಯೊಳು
ಗಬ್ಬರಿಸಿ ತಮತಮಗೆ ಚೀಱಿ ಕರೆದರು ಕರೆದರೇನೆಂಬೆನದ್ಭುತವನು

ಗಿರಿಶನರ್ಧಾಂಗಿ ಕೊಂಡಾಡಿದೆನ್ನಂ ನಿರಾ
ಕರಿಸಿ ಕಱುಗಾಯಲಟ್ಟಿದರೆಂದು ಮುನಿದೆಯೋ
ಗುರುಸಿದ್ಧ ರೇವಣಾರ್ಯಂ ಬಂದು ನಮಿಸಿ ಸೂಚಿಸಿದ ತೆಱದಿಂ ಕಾಣದೆ
ಮರುಳೆಂದು ಬಗೆದರೆಂದಡಗಿದೆಯೊ ಈ ನಾಡ
ನರಕಿಗಳ ಸಂಗವೆನಗೇಕೆಂದು ಹೋದೆಯೋ
ಕರೆದಡೇಕೋಯೆನ್ನೆ ಸಿದ್ಧರಾಮಾ ಎಂದು ನುಡಿದಾಕೆ ಶೋಕಿಸಿದಳು

ಎಂತು ಮಱೆವೆನೊ ಬೆಣ್ಣೆಯಿಕ್ಕಿ ಮೊಲೆಯೂಡಿ ಮೈ
ಯಂ ತೊಳೆದುವುಣಲಿಕ್ಕಿ ಸಾಕಿ ಲೋಕದ ಬಾಲ
ರಂತಿರ್ದು ಕಳೆಯೆ ಸೈರಿಸುವೆನೆನಲಲ್ಲದೀ ಬಯಲು ಬಲಿದಾಕಾರವಾ
ದಂತಿಹ ಮಹಾಂತ ನೀನೆಂತಡಂಗಿದೆ ಜನನ
ದಂತಸ್ಥವಱಿಯದವರೀ ವೃದ್ಧರಿಗೆ ಈತ
ನೆಂತು ಮಗನಾದನೆಂದೆಲ್ಲರುಂ ನಗಲು ನೋಂತೆನೆ ಸಿದ್ಧಯೆಂದತ್ತಳು

ಅಲ್ಲಲ್ಲಿ ನೋಡುತವರವರ ಕೇಳುತ್ತ ನೆರ
ವಿಲ್ಲದಿರೆ ನಿಲುತ ಕೂಡಿದೊಡಾಗ ನಡೆಯುತ್ತ
ಮೆಲ್ಲನೀತಂ ಬರಲು ಮುಂದೆ ಮುಂಚಿದ ಪರುಷೆಯೊಡನೊಡನೆ ದಾರಿಯೊಳಗೆ
ಮಲ್ಲಯ್ಯ ಮಲ್ಲಯ್ಯಯೆಂದು ಕರೆಯುತ್ತ ಬಿ
ಟ್ಟಲ್ಲಿ ಬಿಡದೆಯ್ದಿ ಕಾಂಬಾತುರದ ತವಕದಿಂ
ಪಲ್ಲವಿಸಿ ಪರ್ವತವನೇಱಿದಂ ಸಿದ್ಧರಾಮಂ ದುರಿತಗಜ ಭೀಮನು

ಅಟ್ಟಡವಿಯೆನ್ನದೂರೆನ್ನದೆಡೆಯೊಳು ಬಪ್ಪ
ಬಟ್ಟೆಯೆನ್ನದೆ ಹಗಲಿರುಳದೆನ್ನದೇ ನಿನ್ನ
ಹುಟ್ಟಿದೂರ್ ಮೊದಲಿಲ್ಲಿತನಕೊಱಲಿ ಕರೆದು ಕರೆದಲವತ್ತು ಹಂಬಲಿಸುತ
ಬೆಟ್ಟದೊಳು ಘಟ್ಟದೊಳು ಸರುವಿನೊಳು ದರುವಿನೊಳು
ಕೆಟ್ಟ ಸಂದಿಯೊಳು ಗೊಂದಿಯೊಳಱಸಿ ಬಳಲಿ ಮನ
ನಟ್ಟು ಕಣ್‌ದಣಿವನ್ನ ನೋಡು ಬಾ ತಂದೆಯೆಂದೊಯ್ದರಾ ಶಿವನಿಳಯಕೆ

ಎಲ್ಲಿರ್ದಪಂ ತೋಱಿರಯ್ಯ ದಮ್ಮಯ್ಯ ತಳು
ವಿಲ್ಲಲೇ ಇಲ್ಲೀಗ ಕಂಡೆನಾದಡೆ ಚರಣ
ದಲ್ಲಿ ದೊಪ್ಪನೆ ಬಿದ್ದು ಬಿಗಿದು ತಕ್ಕೈಸಿ ಬಸಿಱಂ ಬಗಿದು ಹೊಕ್ಕು ಬೆರಸಿ
ತಲ್ಲೀಯವಪ್ಪೆನೆಂದಲವರುವ ಕರಣಂಗ
ಳೆಲ್ಲವಂ ಕಣ್ಣಬಾಗಿಲೊಳಿಟ್ಟುಕೊಂಡೆಯ್ದಿ
ಮಲ್ಲಯ್ಯ ಮಲ್ಲಯ್ಯಯೆನೆ ಮಂದಿಯಂ ಬಗಿದು ಲಿಂಗವಂ ತೋಱಿಸಿದರು

ಹಿಂದೆ ಕಂಡಾ ಮೂರ್ತಿಯೆಂದು ಬಗೆದತ್ಯಾರ್ತ
ದಿಂದ ನಡೆನೋಡಿ ಲಿಂಗಾಕಾರವಂ ಕಂಡು
ನೊಂದಡವಿಯೊಳಗೆ ಹೊಲಗೆಟ್ಟವ್ವೆಗತ್ತನ್ಯಳಂ ಕಂಡ ಶಿಶುವ ಪೋಲ್ತು
ತಂದೆ ಬಾ ತೋಱಿದಪನೆಂದಡಱಿಯದೆ ನಂಬಿ
ಬಂದು ಕೆಟ್ಟೆಂ ಕೆಟ್ಟೆನೆಂದು ಮಂದಿಗೆ ಮಱುಗು
ತಂದು ಮಲ್ಲಯ್ಯ ಮಲ್ಲಯ್ಯಯೆನುತಲಿ ಸಿದ್ಧರಾಮಯ್ಯ ಚಿಂತಿಸಿದನು

ಬಱಿದೇಕೆ ಬಾಯ್ಬಿಡುವೆ ತಮ್ಮ ಜೇಡೀ ಲೋಕ
ವಱಿಯುತಿರೆ ಮಲ್ಲಿಕಾರ್ಜುನನೀತನೆಂದೊಡಾ
ನಱಿಯೆನೇ ಸಾರೀತನಲ್ಲೆನಲು ನೀನಱಿವ ಕುಱುಹಾವುದೆನೆ ಮುಡಿಯೊಳು
ಹೆಱೆಯುಂಟು ತೊಱೆಯುಂಟು ಜಡೆಯುಂಟು ಕೊರಳೆಡೆಯ
ಕಱೆಯುಂಟು ಪಂಚಮುಖವುಂಟು ದಶಭುಜವುಂಟು
ಕಿಱಿಯ ಫಣಿದೊಡವುಂಟು ನೊಸಲ ಕಣ್ಣುಂಟಾತನಂ ತೋಱಿಕೊಡಿಯೆಂದನು

ಆತನಂ ತೋಱಲಾವಱಿಯೆವಳಬೇಡೆಂದ
ಡೇತೆಱದೊಳಂ ಮಾಣದಿರ್ದೊಡಾಸತ್ತು ಬಿ
ಟ್ಟೈತಂದರಿತ್ತಲಿವನೆಂತು ಮಱಸುತ್ತಾಗಳಳಲುರಿಯ ವಿರಹದಿಂದ
ಭೀತಿ ಬೀತಾಱೇಳವಸ್ಥೆ ತಲೆದೋಱೆ ಕಾಂ
ಬಾತುರದೊಳೆದ್ದು ಹೊಱವಂಟು ಬಳಿಕಾನಾವ
ಗೋತೆನಾರ್ಗೆಲ್ಲಿರ್ದೆನೇನಾದೆನೆಂದಱಿಯದಱಸಿದನದೇವೊಗಳ್ವೆನು

ಸುತ್ತಿದಳಿಗಿಳಿ ಕೋಗಿಲೆಯ ಸೊಗಸುತಿಹ ನಾದ
ದತ್ತಲಿರ್ದಪನೆಂದು ಹೋಗಿ ಕಾಣದೆ ಬಾಯಿ
ಬತ್ತಲೊಱಲಿದು ಕರೆದು ಕೇಳದಿರೆ ಹಂಬಲಿಸಿ ಹರಿಯುತ್ತ ಗಿರಿತಟದಲಿ
ಬೆತ್ತಬಿದಿರಿಡಿದಡಸಿ ಬೆಳೆದ ಮೆಳೆಗಳ ನಡುವೆ
ಹುತ್ತುಡರ್ದಱಿಯದ ಸಮಾಧಿನಿಷ್ಠರ ಚಿತ್ತ
ಹತ್ತಿದಡೆ ಸಿಲುಕಿ ನಿಂದೆಯೊ ಏಕೆ ಓಯೆನ್ನೆ ಮಲ್ಲಯ್ಯ ಎಂದತ್ತನು

ಗಂಗೆಯನು ತಳೆದನಾವೆಡೆಯೊಳಿರ್ದಪನೊ ಮಱಿ
ದಿಂಗಳನು ಮುಡಿದನೆಲ್ಲಿರ್ದಪನೊ ಹೊಳೆವ ಫಣಿ
ಪಂಗಳನು ತೊಟ್ಟವನು ಎತ್ತಹೋದಂ ಎತ್ತನೇಱಿರ್ದನನೇನಾದಪಂ
ಅಂಗನೆಯನೆಡದ ದೇಹದೊಳು ಮಡಗಿಟ್ಟವನ
ಕಂಗಳಿಂಗಳದಿಂದ ಪುರವ ನೆಱೆ ಸುಟ್ಟವನ
ನಂಗಭಸಿತನ ಕಂಡಿರೇನಯ್ಯ ಅಯ್ಯ ಎಂದವರವರ್ಗೆ ಬಾಯ್ವಿಟ್ಟನು

ಕರೆದಡೇಕೋಯೆನ್ನೆ ಮಲ್ಲಯ್ಯ ಬೆಂಬತ್ತಿ
ಹರಿದಡೇಕೋಯೆನ್ನೆ ಮಲ್ಲಯ್ಯ ಕಡುಬಿಸಿಲ
ಉರಿಗೆ ನೆಲಕಾಯ್ದು ಹುಡಿಯೊಳಗೆ ಹೊರಳಿದು ಮಿಡುಕೆ ಕರುಣವಿನಿತಿಲ್ಲ ನಿನಗೆ
ಮರುಳಂಗನಾಥಂಗನನ್ಯಗತಿಕಂಗಿನ್ನು
ಕರುಣಿಸೋ ಎಂಬ ಪ್ರಲಾಪಕ್ಕೆ ಸೈರಿಸದೆ
ತರುಗುಲ್ಮಲತೆಗಳೆದ್ದಳುತಿರ್ದವಂಬರದ ಕಂಬನಿಯ ಕೂಡೆಕೂಡೆ

ಕರೆಕರೆದು ಗಹ್ವರದ ಮಾರ್ದನಿಗಳಂ ಕೇಳ್ದು
ಗಿರಿಶನೋಯೆಂದನೆಂದೆಯ್ದೆ ಕಣ್ಮುಚ್ಚಿ ಹೃ
ತ್ಸರಸಿಜದೊಳಿರ್ದ ರೂಪಂ ಕಂಡು ಕಣ್ದೆಱೆದು ನೋಡಿ ಕಾಣದೆ ಮಱುಗುತ
ಭರವಸದಿ ನಡೆಯುಡುಗಿ ಬಿಱುಬಿಸಿಲೊಳಲ್ಲಲ್ಲಿ
ಹರಿಹರಿದು ಬಗಿಬಗಿದು ನೊಂದು ಪರಿಪರಿಯ ಕ
ಮ್ಮರಿಗಳೊಳು ನೋಡುತ್ತ ಬಾಡುತ್ತ ನೆಱೆ ರುದ್ರಗಮ್ಮರಿಗೆ ನಡೆತಂದನು

ಘನಸತ್ಯಮಯನಪ್ಪ ಸೀಂ ಪರ್ವತದಲಿಪ್ಪೆ
ನೆನೆ ನಿನ್ನ ಕಾಣಲೆಂದಾನಿಲ್ಲಿಗೈತಂದೊ
ಡನಿಮಿತ್ತ ಮುನಿದನಂತಡಗುವರೆ ಹಿಂದೆ ಕೆಯ್ಯೊಳಗೆ ತೋಱಿದ ನಿಜವನು

ಎನಗೀಗ ತೋಱುವುದು ಲೇಸ ಸಾಱಿದೆನು ದು
ರ್ಜನವಳಿಯಲಿನ್ನೊಮ್ಮೆ ಕರೆವೆನಲ್ಲಿಂ ಮೇಲೆ
ತನುವನೀ ಕಮ್ಮರಿಗೆ ಕುಡುವೆನೆಂದಾಡುತಿರೆ ಪರವಶಂ ಕೈಮಿಕ್ಕುದು

ಹೆಱೆಸೂಡಿದನ ಹಿಂದೆ ಕಂಡ ಮೂರ್ತಿಯು ಭಾವ
ವೆಱಗಿದಂತಾಗಿ ಚಿತ್ತದೊಳಗಜ್ಜೊತ್ತಿದಂ
ತಱಿದ ಸೊಗಸಿನ ಸೊಕ್ಕು ಮಿಕ್ಕು ಹೊಱಗಂ ಮಱೆದು ಸೈವೆಱಗುವಟ್ಟು ಹಿರಿಯ
ಸಱಯಲ್ಲಿ ಸಿಂದೂರ್ಧ್ವಬಾಹುವಾಗಿಯೆ ಬಾಯ
ತೆಱೆದು ವಾಯುವೆ ಭಕ್ಷ್ಯವಾದಂದು ತಲೆಯಿಟ್ಟು
ಬಿಱುವಿಸಿಲನಾಂತಿರಲು ಕಂಡು ಸೈರಿಸದೆ ಬಳಿಕೆಜ್ಜಱಸುತಿಂತೆಂದನು

ಕಡುಮೋಹವಱಯಲಾಸಡಗಿದಡೆ ಭಾಷೆಯಂ
ಪಿಡಿದನೇಗುವೆನಿವಂ ಕರೆದ ಬಾಯಿಂದೆ ಪೊಱ
ಮಡುವೆನೋ ಕರೆದಡೋಯೆಂಬೆನೋ ಕರೆದ ದೆಸೆಯಿಂದೆದ್ದು ಹರಿತಪ್ಪೆನೊ
ಪೊಡವಿಯಂ ಬಗಿದೇಳ್ವೆನೋ ಮಿಱು ಗಗನದಿಂ
ದೊಡಬೀಳ್ವೆನೋ ಬೀಳ್ವ ಕಮ್ಮರಿಯ ದರಿ ಗುಣ್ಪು
ಗೆಡೆ ಪೂಳ್ದು ಬೆಳೆವೆನೋ ಎಂದು ಶಿವನಸುಗೆಯ್ಯುತಿರ್ದನತಿತವಕದಿಂದ

ಕೊರಳೆತ್ತಿ ಕೈಮುಗಿದು ನೆಗಪಿ ಕಣ್ಣಂ ಮುಚ್ಚಿ
ಕರುಣಾಬ್ಧಿ ಮಲ್ಲಿನಾಥಾ ಎಂದಡೋ ಕಂದ
ಕರೆದು ಬಳಲಿದೆಯೆನುತ್ತೆತ್ತಿ ತಕ್ಕೈಸಿ ತಲೆದಡವಿ ಮುಂಡಾಡಿ ನೋಡಿ
ತರುಣೇಂದು ಸುರನದಿ ಜಟಾಮುಕುಟ [ವ] ಸಮಾಕ್ಷ
ವುರಗಕುಂಡಲವೈದುವದನವೀರೈದು ತೋಳ್
ಗರಳಗಳವಿಭಚರ್ಮವೆಡದ ಗಿರಿಸುತೆವೆರಸಿ ತೋಱಿದಂ ನಿಜರೂಪನು

ವರಮೂರ್ತಿಯಂ ಕಂಡು ಹಿಗ್ಗಿ ಹಾರೈಸಿ ಸೈ.
ತಿರಿಸಲಱಿಯದೆ ಕುಣಿದು ಕುಕಿಲಿಱಿದು ಕುಂಬಿಕ್ಕಿ
ಚರಣದಲಿ ಬಿದ್ದ ಬಾಲಕನ ತೊದಳಂತುವಂ ಕೈಯ ಕಂಪನದ ಕಡುಹಂ
ಸುರಿವ ಸುಖಜಲದ ಹೊನಲಂ ಸ್ವೇದದೊಱತೆಯಂ
ಪರವಸದ ಮಱವೆಯಂ ಗದುಗದದ ಭಾರಮಂ
ನೆರೆದ ಪುಳಕದ ಘಟ್ಟಿಯಂ ಕಂಡು ಬೆಱಗಾದರಾ ಪುಣ್ಯದಂಪತಿಗಳು

ಬಿಲ್ಲೇಶ ಬೊಮ್ಮಯ್ಯನ ಉದ್ಧಾರ

ಬಡತನಂ ಹೆಚ್ಚಿ ಸಾಲಂ ಹತ್ತಿ ದಾಯಾದ
ರೊಡವೆಯೆಲ್ಲವನಿಱಿಕಿಕೊಂಡರವರುರವಣಿಸಿ
ಹಿಡಿಹಿಡಿಯ ಏಱಱ ಮುಂಗೈಯ ಬಲುಹಿಂ ಕದ್ದು ಸೊನ್ನಲಿಗೆಗೋಡಿ ಬಂದು
ಅಡಗಿ ಬಿಲ್ಲೇಶಬೊಮ್ಮಯ್ಯನೆಂಬಂ ರೂಪ
ಮಡಗಿ ಶಿವಸಿದ್ಧಪತಿಯ ಕಂಡು ಕರುಣವಂ
ಪಡೆದೆಕ್ಕವಿಂಡಿಂಗೆ ಸಲುವ ವೇಷವನಾಂತು ಗುಡ್ಡನಾಗಿರುತಿರ್ದನು

ನುಡಿಯ ನಯುವಂ ವೇಷದೊಪ್ಪಮಂ ತೋಱುತ
ನ್ನೊಡಲೊಳನ್ಯಾಯಶತಮಂ ಮಡಗಿಕೊಂಡು ನೆಱೆ
ತೊಡೆದು ಹುಲುಹೊರೆದು ಮುಚ್ಚಿದ ಮಡಕೆಯಂದದಿ ಹೊಱಗೆ ನೆಱೆಯುತಿರಲು
ಒಡವೆ ಹೋದಳಲಿಗರು ನಿಲಲಾಱದಾತನೀ
ಯೆಡೆಯೊಳೀ ಪರಿಯೊಳಿರ್ದಪನೆಂದು ಕೇಳ್ದು ಘಡು
ಘುಡಿಸಿ ನಡೆತಂದರೈತಂದು ಕಂಡರು ಕಂಡು ಪಿಡಿದರಾ ಪುರದ ನಡುವೆ

ನೆವವೊಡ್ಡಿ ನೀಂ ಕದ್ದುಕೊಂಡು ಬಂದೆಮ್ಮ ವ
ಸ್ತುವನು ಕೊಡೆಂದೇಕಾಂತದೊಳ್ ನುಡಿದಡೆನ್ನ ವ
ಸ್ತುವನು ನಾಂ ತಂದೆನಲ್ಲದೆ ನಿಮ್ಮವಸ್ತುವಂ ತಂದೆನೇ ಎಂದಂಜದೆ
ಭವಿಗಳಿಂದೆಕ್ಕವಿಂಡಿಂಗುಱುವ ಗುಡ್ಡನಹ
ಶಿವಭಕ್ತನಹ ಸದಾಚಾರಿಯಪ್ಪೆನ್ನ ಮೇ
ಲವಿಚಾರದಿಂ ಕಳವನಿಟ್ಟರೆಂದಾಕ್ರೋಶದಿಂ ಜಱೆದು ಜಂಕಿಸಿದನು

ಇಲ್ಲಿ ಬಾಯಾಲಿದಲ್ಲದೆ ಹೋಗದೆಂದು ನೆನೆ
ದಿಲ್ಲದನ್ಯಾಯಮಂ ಎನ್ನ ಮೇಲಿಟ್ಟ ನಿ
ಮ್ಮೆಲ್ಲರಂ ಕೊಲುವೆನೆನ್ನೊಡಲ ನಿಮಗೊಪ್ಪಿಸುವೆನೆಂದು ದಿಟ ಶುದ್ಧನಂತೆ
ಕಲ್ಲ ಹಾಯ್ವಂತಿರಿದುಕೊಂಬಂತೆ ಸಂಭ್ರಮಿಸು
ತಲ್ಲಲ್ಲಿ ಹೋಹರಂ ಕರೆಕರೆದು ದೂಱುತಿಹ
ಘಲ್ಲಣೆಗೆ ತಲ್ಲಣಿಸಿ ಬಿಡಹೋಗಿ ಗಂಟಿಕ್ಕಿದಂತಾದರಾ ಬಡವರು

ಇನಿತುಗ್ರವೇಕೆ ಬೊಮ್ಮಯ್ಯ ನೀನೊಲಿದು ಕೊ
ಟ್ಟನಿತೆ ಸಾಕೆನಲು ಕೊಡುವಂತಾಗಿ ಮುನ್ನ ಕೊಂ
ಡೆನೆ ದಾನವಾಗಿ ಕೊಡು ಕೊಡುವಡೆನ್ನರ್ಥವಲ್ಲಲ್ಲದೊಡೆ ಬಳಿಕಾರದು
ಧನವೆಲ್ಲ ಮಲ್ಲಿಕಾರ್ಜುನನ ಧರ್ಮವ್ಯಯದ
ದೆನೆ ಧರ್ಮದೊಳಗೆಮ್ಮ ಭಾಗೆಯರ್ಥದಲಿ ಬೆಳೆ
ವನಿತು ಧರ್ಮವನಾದೊಡಂ ಕರುಣಿಸೆಮಗೆ ಕೈಮುಗಿದು ಬೇಡಿದೆವೆಂದರು

ಒಡಲಿಲ್ಲದುಸುರುಂಟೆ ನಿಮಗೆನ್ನ ಮೇಲೆ ಬ
ಪ್ಪೊಡವೆಯಿಲ್ಲೆನೆ ಧರ್ಮವುಂಟೆ ಕೆಡುವೊಡವೆಯಂ
ಕೊಡೆ ಕಂಡು ಕೆಡದ ಧರ್ಮವ ಕೊಡುವೆನೇ ಎನಲು ಕರುಣ ಹುಟ್ಟಿದ ದಿನದಲಿ
ಕೊಡು ಕೊಡದೆ ಮಾಣೆನ್ನು ಹೋಹೆವೇ ಎನಲೆನ್ನ
ಬಡವನಭಿಮಾನವಂ ಕೊಂಡು ಪೋದಪಿರೆನಲು
ಬಿಡುವೆನೇ ಹೋದಿರಾದೊಡೆ ಭಕ್ತರಾಣೆಯೆಂದಿಟ್ಟ ತಡೆಯಂ ಮೂರ್ಖನು

ನಾವಂಜಿ ಬಿಟ್ಟಡಂ ತಾಂ ಬಿಡಂ ಕಂಡ ನಾ
ವೀವೂರೊಳ್ಳೆದೆ ಮೊರೆಯಿಡುವೆವೆಂದಾ ಸಾಧು
ಜೀವಿಗಳು ಹುಲುವಿಡಿದು ಮೊರೆಯಿಟ್ಟಡಾ ಧ್ವನಿಯ ಕೇಳ್ದು ಸಿದ್ಧವರೇಣ್ಯನು
ಆವ ಪಾಪಿಷ್ಠನೂಳಿಗವೊ ನಮ್ಮೂರೊಳೆಂ
ದೂವಿಲ್ಲ ಕರೆಯೆನಲು ಕರೆದು ತಂದರು ಕವಿದ
ಗಾವಳಿಯ ಗಜಬಜದ ಮೊರೆಕಾಱಿರಂ ನೊರೆಗೆ ಗುಱಿಯಾದ ಪಾತಕನನು

ಹಲವು ಪಾಸಂ ಪತ್ತಿ ಬಱತ ಬಸುಱಱತ ಬಾಯ್
ಕುಳಿದ ಕಣ್ಣೆಳಿವ ಕಂಬನಿ ಹಿಡಿದ ಹುಲು ದರ್ಪ
ವಳಿದ ನಡೆ ನಡುಗುವೆದೆವೆರಸು ಮೊರೆಯಿಡುವವರಿಗಭಯವಿತ್ತೋವಿ ನಿಲಿಸಿ
ತಿಳಿಯ ಹೇಳೆನಲೀತ ಕದ್ದು ತಂದೆಮ್ಮರ್ಥ
ದೊಳಗೆಮ್ಮ ಭಾಗೆಯಂ ಕೊಡು ಕೊಡದೊಡದಱ ಬೆಂ
ಬಳಿಯ ಧರ್ಮವನಾದೊಡಂ ಕೊಡೆಂದೆನೆ ಕೊಡಂ ದೇವ ಚಿತ್ತೈಸೆಂದರು

ಧನದಾಸೆಯಂ ಬಿಟ್ಟೆವಾವು ಹದುಳದೊಳೆಮ್ಮ
ಮನೆಮುಖವ ಕಾಂಬಂತೆ ಕಳುಹಿಕೊಡು ಕರುಣಿಸಿ
ದ್ಧನಿಧಾನಯೆಂದು ಬಾಯ್ವಿಟ್ಟಡೆಲೆ ಬೊಮ್ಮಯ್ಯ ನಿನ್ನ ಮೇಲಿವರ ದೆಸೆಯು
ಎನಿತರ್ಥವುಂಟೆಲ್ಲವಂ ಕೊಡೆಂದೆನಲು ಕೊಡೆ
ನೆನಗಿದಂ ನೀವಾಡಬೇಡೆಂದೊಡೆಮ್ಮಾಜ್ಞೆ
ಯುನು ಮಿಾಱಿದಾ ಎನಲಿದೊಂದಕ್ಕೆ ಮಿಾಱಿದಾತಂ ಕೊಡುವನಲ್ಲೆಂದನು

ಇವ ಮೂರ್ಖನೆಮ್ಮಿಂದ ತಿದ್ದದಾರಿಂದಪ್ಪು
ದವರ ಮುಂದಾಡಿಕೊಳಿ ಹೋಗಿ ತಲ್ಲಣಿಸದಿರಿ
ಜವಗುಂದದಿರಿ ಇದಕ್ಕಾವಿದೇವೆಂಬ ಗುರುವಾಕ್ಯವಿಡಿದಾ ಖಳನನು
ಅವರು ಕೊಂಡಾವಾವ ಧರ್ಮಾಧಿಕರಣವುಂ
ಟವಕೈದಿ ಹೋಗೆ ಕಾಣುತ್ತ ಗುರುವಾಜ್ಞೆಗೆ
ಟ್ಟವನ ನೋಡುವರಲ್ಲವಾವೆಂದು ಕಣ್ಮುಚ್ಚಿಕೊಂಡು ನೂಕಿಸಿ ಕಳೆದರು

ಅವರ ಸುಡುನುಡಿಗೆಲ್ಲ ನಾಚಿ ಹೇವರಿಸಿ ಜ
ನ್ಮವ ಸುಡುಸುಡೆಂದು ಮನನೊಂದು ನಡೆತಂದೊಂದು
ಶಿವನಿಳಯಮಂ ಪೊಕ್ಕು ಭಿತ್ತಿಯಂ ನೆಮ್ಮಿ ಕೂರಲಗನುಗಿದರವರಿಸದೆ
ತಿವಿದುಕೊಂಡಂ ಕೊಂಡನೇಳೆಂಟು ಹತ್ತು ಘಾ
ಯವನೊಡನೆಯವರಂಜಿ ಬೇಡವೇಡೆನಲು ಜೀ
ವವನುಳಿದಧೋಗತಿಗೆ ಹೋದನೆನೆ ಗುರುವಾಜ್ಞೆಗೆಡಲದೇವಿಧಿಯಾಗದು

ಪ್ರತಿವಾದಿಗಳು ನಡುಗಿ ಬಾಯ್ಬಿಡುತ ಬಂದು ದು
ರ್ಮತಿ ಮೂರ್ಖ ಬೊಮ್ಮಯ್ಯನಿಱಿದು ಕೊಂಡಿಂದಿಂತು
ಹತವಾದ ನಮಗೇನು ಗತಿಯೆಂದಡಂಜಬೇಡೆಂದವರ ಧನವೆಲ್ಲವ
ಅತಿಕರುಣದಿಂ ಕೊಟ್ಟು ಕಳುಹಿ ಘನಪಾಪವೂ
ರಿತನನೆಳೆದಗಳೊಳೀಡಾಡೆಂದು ಬೆಸಸಿ ಜಿತ
ರತಿನಾಥನಪ್ರತಿಮನತುಳಬಳ ಸಿದ್ಧರಾಮಂ ಸುಖದೊಳಿರುತಿರ್ದನು

ಎಂದಿನಂತುದಯದೊಳು ಕೈಲಾಸಗಿರಿಗೆ ತರು
ಣೇಂದುಧರನೆಡೆಗೆ ಸಿದ್ಧೇಂದ್ರನೈತರ್ಪಾಗ
ಮುಂದ್ಯೆಸಿ ತಳಿತ ತಳೆಗಳ ತಂಪಿನೊಳು ಝೂಡಿಸುವ ಚಮರ ಸೀಗುರಿಗಳ
ಸಂದಣಿಸಿ ಹಾಡುವಾಡುವ ನುಡಿವ ಕೀರ್ತಿಸುವ
ವಂದಿಗಳ ವನಿತೆಯರ ವಾಹನದ ಪರಿಜನದ
ಸಂದಣಿಯೊಳಿದಿರಾಗಿ [ಬಂದೊರ್ವ ಗಂಧರ್ವನಿಂತೆಂದು ಬಿನ್ನವಿಸಿದಂ]

ಬಿಡೆ ನಿಮ್ಮ ಗುಡ್ಡ ಬಿಲ್ಲೇಶ ಬೊಮ್ಮಯ್ಯನೆಡೆ
ವಿಡದೆ ನರಕದೊಳದ್ದು ಕಡಿವ ಕಾಸುವ ಕೊಯ್ವ
ಸುಡುವ ದಂಡಣೆಗಾಱದೆಲೆ ಸಿದ್ಧರಾಮಯ್ಯ ರಾಮಯ್ಯ ರಾಮಯೆಂದು
ಅಡಿಗಡಿಗೆ ನೆನೆಯುತಿರ್ದಪನವನನಲ್ಲಿಂದ
ಬಿಡಿಸಿ ತರಬೇಕೀ ಮಹಾವೇಷವೀ ನಾಮ
ವಿಡಿದು ಮತ್ತೀ ನರಕವೇಕಾದುದೆನಗಿದಂ ತಿಳುಹಿಕೊಡಬೇಕೆಂದನು

ದುರುಳನವನಿರ್ದಪಂ ತೆಗೆಯಲೇಕೆನೆ ಜಗದ
ಗುರುವೆ ವತ್ಸನ ಗುಣವ ನೋಡಿತೇ ಧೇನು ಸುರು
ಚಿರಪಯಃಪಾನವುಂ ಕೊಡುವಳೆಂದಾಡಿದಾ ಗಂಧರ್ವವೆರಸು ನಡೆದು
ಹರನೋಲಗವನೈದಿ ಮೈಯಿಕ್ಕಿ ನಿಂದು ಪುರ
ಹರ ಕೃಪಾತರ ಶಿವಾವರ ಸುಖಂಕರ ಮಹೇ
ಶ್ವರ ಸುರಾಸುರನಮಿತಚರಣ ಶರಣೆಂದು ಹೊಗಳ್ದನು ಸಿದ್ಧಕುಲತಿಲಕನು

ಬಸುಱೊಳಗೆ ಮೊಳೆತ ಗರ್ಭವನು ತದ್ವದನ ಸೂ
ಚಿಸುವಂತೆ ಮನದ ಕಾರ್ಯವನು ತದ್ವದನ ಸೂ
ಚಿಸುತಿದೆಯಿದೇನು ಹೇಳೇಳೆಂದು ಹಿಡಿದೆತ್ತಿ ತಕ್ಕೈಸಿ ತೊಡೆಗೆ ತೆಗೆದು
ಬೆಸಗೊಳಲು ದೇವ ದೇವರ ಗುಡ್ಡ ಸಜ್ಞಾನ
ವಶದಿ ನರಕಂಜಡೆದನೆಂದೀತನಿಂ ಕೇಳ್ದೆ
ನಸುಗತಿಯನಳಿದೆತ್ತುವುದಕೆ ನೇಮವನೀಯಬೇಕೆಂದನಪ್ರತಿಮನು

ಗುಣಿಯೆ ಸೈಪಿನ ಕಣಿಯೆ ಶಿವಸಿದ್ಧ ಕುಲಶಿರೋ
ಮಣಿಯೆ ಭಕ್ತರ ಋಣಿಯೆ ಸಾಮರ್ಥ್ಯದಯದ ಸಂ
ದಣಿಯೆ ಇದಕೆನ್ನ ಕೇಳ್ವರೆ ನರಕದಿಂದವನನೆತ್ತು ಹೋಗೀಗಳೆಂದು
ಫಣಿಕಂಕಣಂ ಬೆಸಸೆ ತಿರುಗಿ ಮೇರುವಿನ ತೆಂ
ಕಣ ದೆಸೆಯೊಳಿಹ ಯಮನ ಸಂಯಮಿನಿಯೆಂಬ ಪ
ಟ್ಟಣದತ್ತ ನಡೆದನುಬ್ಬೆದ್ದ ಕತ್ತಲೆಯತ್ತ ನಡೆವ ಭಾನುವಿನಂದದಿ

ಆ ಮಹಾನರಕ ತೀರದೊಳಂದು ಶಿವಸಿದ್ಧ
ರಾಮನಾಥ ನಿಂದು ಕೊರಳೆತ್ತಿ ಕಣ್ಮುಚ್ಚಿ
ಕೈಮುಗಿದು ಪುಳಕಿಸುತ ಹಿಗ್ಗಿ ಹಾರೈಸಿಯುಚ್ಚರಿಸಲೆಂದಗಜೇಶನ
ನಾಮಮಂ ಮಂಗಳಸ್ತೋಮಮಂ ಭಕ್ತರ
ಪ್ರೇಮಮಂ ಪುಣ್ಯಾಭಿರಾಮಮಂ ನೆನೆವರ
ಕ್ಷೇಮಮಂ ಸುಕೃತವಿಶ್ರಾಮವೆಂದೆನಿಪ ಪಂಚಾಕ್ಷರಿಯನುಗೈದನು

ಹರ ಮಹಾದೇವ ಶಂಕರ ಮಹಾದೇವ ಪುರ
ಹರ ಮಹಾದೇವ ಸದ್ಗುರು ಮಹಾದೇವ ಸು
ಸ್ಥಿರ ಮಹಾದೇವ ಶಶಿಧರ ಮಹಾದೇವ ಲೋಕೈಕದೇವಾಧಿದೇವ
ಹರಹರ ನಮಃ ಶಿವಾಯೆಂದೂರ್ಧ್ವರವದೊಳು
ಚ್ಚರಿಸೆ ನಾಮಂ ಹರಿದು ನರಕಿಗಳನುದ್ಧರಿಸಿ
ಹೊಱವಂಡಿಸಲು ಕಂಡು ಹೊಱವಂಟುದಖಿಳ ನಾನಾ ಜೀವಜಾಲಂಗಳು

ಪರಿಪರಿಯ ದಂಡನೆಗಳುಳ್ಳಧೋಗತಿಯನು
ತ್ತರಿಸಿದೆವು ನಿನ್ನಿಂದ ತಂದೆ ಭರದಿಂದ ಪುರ
ಹರ ಬಂದಿಕಾಱ ಕೈವಲ್ಯದಳವುಳಕಾಱ ಶುಭಸುಕೃತಸೂಱೆಕಾಱ
ನರಕಮದ ಮಥನ ಮಾಯಾದಿಶಾಪಟ್ಟ ರತಿ
ವರದರ್ಪದಳನ ಸದ್ಗುರು ಸಿದ್ಧರಾಮಯ್ಯ
ಕರುಣಿ ಕೈಕೊಂಡಿನ್ನು ಜನನಮರಣಕ್ಕೆ ನೂಂಕದೆ ಸಲಹು ಸಲಹೆಂದರು

ಮೊದಲಲೇ ಜನನಮರಣಕ್ಕಾಱೆವೆಂದಡಾ
ಗದು ವಸುಧೆಯೊಳಗೆ ನೀವೆಲ್ಲರುಂ ಹುಟ್ಟಿ ಬೇ
ಗದಿ ಬಂದಡುಪದೇಶವಿತ್ತು ಗುಡ್ಡರ ಮಾಡಿ ಪುಣ್ಯಾಪಥವಮಂ ತೋಱುವೆಂ
ಅದಱಿಂದ ಜನನಮರಣವನು ಮಾಣಿಸಿ ಮುಕ್ತಿ
ಪದವನೀವೆಂ ಹೋಗಿ ಬೇಗವೆಂದಾ ಸತ್ಯ
ಸದನ ವರವದನ ಜಿತಮದನ ಬೀಳ್ಕೊಟ್ಟ ಬೊಮ್ಮಯ್ಯನೊಳಗಾದವರನು

ಹರಿಶ್ಚಂದ್ರ ಕಾವ್ಯ

ವಸಿಷ್ಠ ವಿಶ್ವಾಮಿತ್ರ ಕಲಹ

ಪುರುಷವಂಗಣದ ಕಲ್ ಸುರಭಿ ಕಱುಹಂ ಕಲ್ಪ
ತರು ಬನಂ ಸ್ವರ್ಗ ನಿಜದೇಶಮಮರಾವತಿಯೆ
ಪುರದುರ್ಗವಮರರಾಳ್ ಮೇರು ಕೇಳೀಶೈಲವಮೃತವೇ ಮನೆಯ ಬೀಯಂ
ವರರಂಭೆ ಸೂಳೆ ಶಚಿ ರಾಣಿಯೈರಾವತಂ
ಕರಿ ವಜ್ರವಾಯುಧಂ ನವನಿಧಿಯೆ ಬಂಡಾರ
ಹೊರೆವಾಳ್ದ ನಭವನೆಂದೆನಿಪ ದೇವೇಂದ್ರನೊಂದಿರುಳೋಲಗಂಗೊಟ್ಟನು

ಒಡಲನಾವರಿಸಿದಂಗೋಪಾಂಗಸಂಕುಲದ
ನಡುವೆ ನಯನದ್ವಯಂಗಳು ಸಲೆ ನವಗ್ರಹದ
ನಡುವೆ ಚಂದ್ರಾದಿತ್ಯರುರ್ವಿಯಂ ಪರ್ವಿ ಪಸರಿಸುವ ನಾನಾನದಿಗಳ
ನಡುವೆ ಸುರುಚಿರಗಂಗೆ ತುಂಗಭದ್ರೆಗಳೊಪ್ಪ—
ವಡೆದ ಮಹಿಮೆಯೊಳೆಸೆವ ತೆಱದಿ ಸುರಪನ ಸಭೆಯು-
ನೆಡೆಗೊಂಡ ಮುನಿಕುಲದ ನಡುವಿರ್ದರಾಗಳ್ ವಸಿಷ್ಠ ವಿಶ್ವಾಮಿತ್ರರು

ಅಲಸದೆ ಸಮಸ್ತ ಭೂಮಂಡಲವನಾಳ್ವ ರವಿ
ಕುಲಜರೆನಿಪಿಕ್ಷ್ವಾಕುವಂಶದರಸುಗಳೊಳತಿ-
ಬಲರೆನಿಸಿ ಮನವಚನ ಕಾಯದೊಳಗೊಮ್ಮೆಯುಂ ಹುಸಿಹೊರ್ದದಂತೆ ನಡೆವ
ಕಲಿಗಳಾರಯ್ಯ ಹೇೞವರ ಪಾರಂಪರೆಗೆ
ಸಲೆಸಂದ ರಾಜಗುರು ನೀನಱಿಯದವರಿಲ್ಲ
ವೆಲೆ ಮುನಿಪ ಹೇೞೆಂದು ಹಲವು ಕಣ್ಣಾದವಂ ನುಡಿದನು ವಸಿಷ್ಠ ಮುನಿಗೆ

ಬೆಸಗೊಂಡೊಡಿಕ್ಷ್ವಾಕುವಂಶದೊಳಗಣ ಚತು
ರ್ದಶಭುವನ ಪತಿಗಳೊಳಗಿಂದುತನಕಾನಱಿಯೆ
ಹುಸಿ ಹೊರ್ದದವರಿಲ್ಲ ಹಿಂದಣರಸುಗಳನುದ್ಧರಿಸಲೆಂದವತರಿಸಿದ
ವಸುಧಾಧಿಪತಿ ಹರಿಶ್ಚಂದ್ರನಾತನ ಸತ್ಯ
ದೆಸಕಮಂ ಪೊಗಟಲೆನ್ನಳವೆ ಫಣಿಪತಿಗರಿದು
ಶಶಿಮೌಳಿಯಾಣೆಯೆನಲಾ ವಸಿಷ್ಠಂಗೆ ಕೋಪಿಸಿದ ವಿಶ್ವಾಮಿತ್ರನು

ತೀವಿದೊಡ್ಡೋಲಗದ ನಡುವೆ ತನ್ನಂ ಮೊದಲೊ
ಳೋವಿ ನುಡಿಸದ ಕೋಪವೊಂದಾ ವಸಿಷ್ಠಮುನಿ
ಯಾವುದಂ ಪೇಡ್ದೊಡದನಲ್ಲೆಂಬ ಭಾಷೆಯೆರಡಖಿಳಜೀವಾವಳಿಯಲಿ
ಭಾವಿಪೊಡೆ ಕುಂದನೆಲ್ಲದೆ ಲೇಸ ಕಾಣದಿಹ
ಭಾವ ಮುಪ್ಪುರಿಗೊಂಡು ಕುಡಿವರಿದು ಕಡುಗೋಪ
ವಾವರಿಸಿ ಕೌಶಿಕಂ ನಿಂದು ನಿಲ್ ನುಡಿಯಬೇಡೆಂದು ಜಱೆದಿಂತೆಂದನು

ಕೋಣನೆರಡುಂ ಹೋರೆ ಗಿಡುವಿಂಗೆ ಮಿತ್ತೆಂಬ
ಕ್ಷೋಣಿಯಾಡುವ ಗಾದೆಯಂತೆ ವಿಶ್ವಾಮಿತ್ರ
ನೂಣೆಯುವ ಹಿಡಿವ ವಾಸಿಷ್ಠಮುನಿ ಸತ್ಯವಂ ಕೊಂಡಾಡುವೆರಡಱಿಂದೆ
ಕ್ಷೋಣೀಶನೆನಿಸುವ ಹರಿಶ್ಚಂದ್ರಭೂಪಂಗೆ
ಪ್ರಾಣಪರಿಯಂತದಲ್ಲಪಮೃತ್ಯು ಸಾರ್ಗೆಂದು
ಕ್ಷೀಣಮಂ ತೋಱಿ ನುಡಿವಂದದಿಂ ಕೋಪದೊಳು ಜಂಭಮರ್ದನ ನುಡಿದನು

ಏನನಾಂ ಬೆಸಗೊಂಡೊಡೇನನಾಡುವಿರಿಳೆಯ
ಭೂನಾಥರೊಳು ಸತ್ಯರಾರೆಂದು ಬೆಸಗೊಂಡೊ
ಡೀ ನಾಡ ಮಾತು ಮಾಱುತ್ತರವೆ ಮುನಿಗಳಿರ ಎಂದು ಸುರಪತಿ ನುಡಿಯಲು
ಏನೆಂದೊಡಂ ಹರಿಶ್ಚಂದ್ರನೇ ಸತ್ಯಸಂ
ಧಾನನೆಂದಾವಸಿಷ್ಠಂ ನುಡಿಯಲಲ್ಲ ನಿ
ಲ್ಲಾ ನಱಿಯಲಾನೃಪಂ ಸತ್ಯನಲ್ಲವನ ಮಾತೀಸಭೆಯೊಳೇಕೆಂದನು

ಹಲವು ಮಾತೇಕಾಹರಿಶ್ಚಂದ್ರ ಭೂನಾಥ
ನೊಳಗಸತ್ಯವನು ಕಾಣಿಸಲು ಬಲ್ಲರು ಧಾತ್ರಿ
ಯೊಳು ಮುನ್ನ ಹುಟ್ಟಿದವರಿಲ್ಲಿನ್ನು ಹುಟ್ಟುವರ ಕಾಣೆ ನಾನಿದ ಬಲ್ಲೆನು
ಉಟಿದವರ ಹವಣಾವುದೆಂದಾವಸಿಷ್ಠ ಮುನಿ
ಕುಲತಿಲಕನೆನಲು ವಿಶ್ವಾಮಿತ್ರ ಮನದೊಳತಿ
ಮುಳಿದು ನಿಲ್ಲಾಡದಿರು ಬಾಯಿ ಹಿರಿದುಂಟೆನುತಲೆಂದು ಜಱೆದಿಂತೆಂದನು

ವನಧಿ ಪರಿಯಂತ ಧರೆಗರಸುತನವದಱ ಮೇ
ಲನುವುಳ್ಳ ಶಿಷ್ಯನಾಗಿಯು ಹಿತವನತಿವಿಪುಳ
ಧನವನಾರಾಧಿಸುವನದಱ ಮೇಲಾತನಾರೈಕೆಯೊಳಗಿರ್ಪೆ ನೀನು
ಎನಿತನಗ್ಗಳಿಸಿ ಬಣ್ಣಿಸಲೊಪ್ಪದೈಯ ಹೇ
ಟೆನಲು ರಾಜಪರಿಗ್ರಹದ ಬಲದವನೆ ನಾನು
ಯೆನೆ ಮುನಿಯಬೇಡಾತ ಹುಸಿದನಾದೊಡೆ ನಿನ್ನನೇಗೈಯಬಹುದೆಂದನು

ಶ್ರುತಿಮತ ಕುಲಾಚಾರ ಧರ್ಮಮಾರ್ಗಂ ಮಹಾ
ವ್ರತವನುಷ್ಠಾನ ಗುರುವಾಜ್ಞೆ ಲಿಂಗಾರ್ಚನೋ
ನ್ನತಿ ತಪಂ ಬ್ರಹ್ಮಕರ್ಮಂ ಪುಣ್ಯದೊಳಗಾದವೆಲ್ಲವಂ ತೊಱೆದು ಕಳೆದು
ಸತಿಯನುಟಿದತಿದಿಗಂಬರನಾಗಿ ಮುಕ್ತಕೇ
ಶಿತನಾಗಿ ನರಕಪಾಲದೊಳು ಸುರೆಯೆಱೆದು ಕುಡಿ
ಯುತ ತೆಂಕಮುಖವಾಗಿ ಹೋಹೆಂ ಹರಿಶ್ಚಂದ್ರ ಮಱೆದು ಹುಸಿಯುಂ ನುಡಿದೊಡೆ

ಧರೆ ಗಗನವಡಸಿ ಕಾದುವೊಡೆಡೆಯಲಿಹ ಚರಾ
ಚರವೆಲ್ಲಿ ಹೊಗಲಿ ಮುನಿದಖಿಳಮಂ ಸುಟ್ಟೊಱಸಿ
ಮರಳಿ ಹುಟ್ಟಿಸಬಲ್ಲ ಮುನಿಗಳಿಬ್ಬರ ಶಾಂತಿಸವೆದ ಕೋಪದ ಮುಖದಲಿ
ಇರಬಾರದೇಟಬಾರದು ನುಡಿಯ ಬಾರದಂ
ತಿರಬಾರದಹುದೆನಲು ಬಾರದಲ್ಲೆನಬಾರ
ದೆರಡಱ ವಿರೋಧದಿಂದೊಡ್ಡೋಲಗಂ ಚಿಂತೆ ಮುಸುಕಿ ಸೈವೆಱಗಾದುದು

ಒಂದಕ್ಕೆ ಹಿತ ನುಡಿಯೆ ಪಕ್ಷವೆಂದೆರಡುಮಂ
ಹಿಂದುಗಳೆದಿರಲುಪೇಕ್ಷಿತವೆಂದು ಜಱೆದೊಡೆ
ಮ್ಮಿಂದಧಿಕನೇ ಎಂದು ಹೊಗೞ್ದೊಡುಪಚಾರವೆಂದೆತ್ತಿದೊಡೆ ಧೂರ್ತನೆಂದು
ನೊಂದು ಶಾಪವನೀಯದಿರರೆಂದು ಸುರಪನಾ
ನಂದರಸವಱತು ಬೆರಗಿನ ಮೊಗದೊಳಿರಲು ನಾ
ರಂದ ದಟ್ಟಿಸುತೆರ್ದು ಕುಡು ವಸಿಷ್ಠಂಗೆ ಭಾಷೆಯ ಕೌಶಿಕಾ ಎಂದನು

ಧರೆಯೊಳು ಚತುರ್ಯುಗಂಗಳು ಮರಳಿ ಮರಳಿ ಸಾ
ಸಿರ ಬಾರಿ ಬಂದೊಡಜನೊಂದು ದಿನವಾದಿನದ
ಪರಿ ದಿನಂ ಮೂವತ್ತು ಬರಲೇಕಮಾಸವಾಮಾಸ ಹನ್ನೆರಡಾಗಲು
ವರುಷವಾವರುಷಶತವೆಂಬುದೇ ಸುರಪತಿಗೆ
ಪರಮಾಯುವೀತನೀರೇೞ್ಭವಂ ಬರ್ಪನ್ನೆ
ವರ ದೇವಲೋಕಕ್ಕೆ ಬಾರೆಂ ಪ್ರತಿಜ್ಞೆಯೆನಗೆಂದ ವಿಶ್ವಾಮಿತ್ರನು

ಎಂದು ಭೂವರನಂ ಪರೀಕ್ಷಿಸುವೆಯೆನ್ನ ಮನ
ಬಂದ ದಿನಮೆನಿತು ಸೂಳಾತನೀ ಧರೆಯೊಳಿ
ರ್ಪಂದುತನಕಾನಾವ ಪರಿಯೊಳು ಸಹಸ್ರವಿಧದೊಳು ದಿಟವೆ ದಿಟವೆಂದೆನೆ
ಹಿಂದುಗಳೆಯಲದೇಕೆ ನಡೆಯೆನಲು ನೀನಾಡು
ವಂದವನುವಾಗಿರದೆನುತೆ ಕೌಶಿಕನಣಕ
ದಿಂಡಾಡಲೆಮ್ಮ ಕೂಡಿನಿತಣಕವೇಕೆಂದು ವಾಸಿಷ್ಠಮುನಿ ನುಡಿದನು

ಇನಿತು ಮುಳಿಸಾವುದು ಹರಿಶ್ಚಂದ್ರಭೂಭುಜನ
ಮನೆಗೀಗಳಿಂತು ನೀ ಹೋಗಿ ಕೌಶಿಕನು ನೆ
ಟ್ಟನೆ ನಿನ್ನನಂತಿಂತು ಕಿಡಿಸಿದಪ ನೀನಾವ ಪರಿಯಲೆಚ್ಚತ್ತಿರೆಂದು
ನೆನಸಿ ಕುಡು ಹೋಗೆಂದೊಡಾನಾಡುವವನೆ ಹೇ
ೞೆನಲೆನ್ನ ಗಾಸಿಗಾೞದೆ ನೃಪಂ ಹುಸಿ ನುಡಿಯೆ
ಮುನಿತನವನೀಡಾಡಿ ಹೋಹಂತಿರಾದಪುದು ಹೋಗಿ ನೀಂ ಹೇೞೆಂದನು

ತರಣಿ ತೇಜಂಗಿಡದಿರಗ್ನಿ ಬಿಸುಪಾೞದಿರು
ಸರಸಿರುಹವೈರಿ ತಂಪಂ ಬಿಡದಿರೆಲೆಲೆ ಮಂ
ದರವೆ ಚಲಿಸದಿರೆಂದು ಬೋಧಿಸಲದೇಕೆ ನಿಜವಟಿವವೇ ಸುಮ್ಮನಿರಲು
ವರ ಹರಿಶ್ಚಂದ್ರ ಸತ್ಯಂಗಿಡದಿರೆಂದು ಬೋ
ಧಿಸುವಂತಾಗಿ ಹುಸಿಯುಂಟೆ ಕೊಂಡೆಯವೆಮಗೆ
ಹಿರಿಯತನ ಕೆಟ್ಟಿಂತು ನುಡಿದೆ ಕಂಡ್ಯೆಯೆಂದು ವಾಸಿಷ್ಠಮುನಿ ನುಡಿದನು

ಸಿಡಿಲುಃ ಹೊಡೆವೊಡೆ ಹಿಡಿದ ಕೊಡೆ ಕಾವುದೇ ಮುನಿದು
ಪೊಡವಿ ನುಂಗುವೊಡೆ ಮನ ತೂಗುವುದೆ ಕವಿದು ಹೆ
ಗ್ಗಡಲುಕ್ಕಿ ಜಗವ ಮೊಗೆಯಲ್ಕೆ ಮೆಳೆಯಡ್ಡಬಹುದೇಯುೞಿದ ಹೊತ್ತು ನಿನ್ನ
ಬಡಬೋಧೆಗೀದೆಗಳು ರಕ್ಷಿಸುವುವಲ್ಲವಾಂ
ಕಡುಮುಳಿದ ಬಳಿಕವೇಗುವುವು ನೀಂ ಹೇೞದಿ
ರ್ದೊಡೆ ಮದನಹರನಾಣೆ! ಹೋಗೆಂದು ಕೌಶಿಕಂ ನುಡಿದನು ವಸಿಷ್ಠನೊಡನೆ

ಕುಲವ ನಾಲಗೆಯಱುಹಿತೆಂಬ ನಾಣ್ಣುಡಿಗಿಂದು
ನೆಲೆಯಾಯ್ತುಲಾ ಬ್ರಹ್ಮಋಷಿಯಾದೊಡೊಳಗು ನಿ
ರ್ಮಳವಹುದು ಕೇಳು ರಾಜರ್ಷಿ ಕೋಪಿಸದೆ ದಟ್ಟಿಸದೆ ಕೆಡೆನುಡಿಯದೆ
ನಿಲಲೆಂತು ಬಲ್ಲೆಯೆನಲೆನ್ನನೇ ಇಂತು ನೀಂ
ಚಲಿಸದಾಡುವೆಯೆಂದೊಡಹುದು ನಿನ್ನಂ ನಿನ್ನ
ನೆಲೆ ಮುನಿಪಯೆನೆ ಕೌಶಿಕಂ ಕುಪಿತನಾದುದದನಾವ ಕವಿ ಬಣ್ಣಿಸುವನು

ನುಡಿಯುರಿಯನುಗುೞೆ ಕಣ್ ಕಿಡಿಗೆದಱೆ ವದನ ಕೆಂ
ಪಡರೆ ನಿಟಿಲಂ ಬಿಸಿಯ ಬಿಂದುವಂ ತಳೆಯೆ ಕೈ
ನಡುನಡುಗೆ ಪುರ್ಬಲುಗೆ ಮಿಸುಪಧರ ಸಿಡಿಯೆ ಲಾಕುಳ ಹೊಗೆಯೆ ಕಾಲ್ಕುಂಬಿಡೆ

ತೊಡೆದ ಭಸಿತಂ ಧೂಮವಿಡೆ ಮೆಯ್ಯ ರೋಮ ಕೌ
ರಿಡೆ ಕಮಂಡಲುಜಲಂ ತೆಕ್ಕತೆಕ್ಕನೆ ಕುದಿಯೆ
ಮೃಡನ ಪಣೆಗಣ್ಣಿ ಮುನಿಯಾದಂತೆ ಕೌಶಿಕಂ ಮುನಿದನು ವಸಿಷ್ಠಮುನಿಗೆ

ನೋಡು ನೋಡಿಂದೆನ್ನ ರಾಜಋಷಿಯೆಂದು ಕೆ
ಟ್ಟಾಡಿತಕ್ಕಾ ಹರಿಶ್ಚಂದ್ರನನಸತ್ಯನಂ
ಮಾಡಿಸುವೆನಧಿಕ ಪ್ರತಿಜ್ಞೆಯಂ ನುಡಿದ ನಿನ್ನಂ ವ್ರತಭ್ರಷ್ಟನೆನಿಸಿ
ಋೋಡಾಡಿ ಕಾಡುವೆನೆನುತ್ತೆರ್ದು ಸಾವನೀ
ಡಾಡಿದವರೊಡೆಯನೋಲಗದಿಂದೆ ಹೊಱವಟ್ಟ
ನಾಡಂಬರದ ಸಿಡಿಲು ಗಜಱಿ ಗರ್ಜಿಸಿ ಮೇಘದಿಂದೆ ಪೊಱಮಡುವ ರವದಿ

ಹರಿಶ್ಚಂದ್ರ—ಹೊಲತಿಯರ ಸಂವಾದ

ಹಂದಿಯಂ ಕಾಣುತಹಡಂ ಕೋಪಗಿಚ್ಚು ಭುಗಿ
ಲೆಂದು ಜಪ ಜಾಱಿ ತಪ ತಗ್ಗಿ ಮತಿ ಗತವಾಗಿ
ಸಂದ ಯೋಗಂ ಹಿಂಗಿ ದಯೆ ದಾಂಟಿ ನೀತಿ ಬೀತಾನಂದವಱಿತು ಹೋಗಿ
ಹಿಂದ ನೆನೆದುರಿದೆದ್ದು ಸಿಕ್ಕಿದನಲಾ ಭೂಪ
ನಿಂದು ನಾನಾಯ್ತು ತಾನಾಯ್ತು ಕೆಡಿಸದೆ ಮಾಣೆ
ನೆಂದು ಘೂರ್ಮಿಸುವ ಕೌಶಿಕನ ಹೂಂಕಾರದಿಂದೊಗೆದರಿಬ್ಬರು ಸತಿಯರು

ಮುನಿಗೆ ಹೊಲೆಯಾವುದೆನೆ ಕೋಪ ಬದ್ಧದ್ವೇಷ
ವನಿಮಿತ್ತ ವೈರವದಱಿಂದ ಹುಟ್ಟಿದರಾಗಿ
ವನಿತೆಯರು ಕಡೆಗನಾಮಿಕರಾಗಿ ಹೆಱೆಸಾರ್ದು ನಿಂದು ಬೆಸನಾವುದೆನಲು
ಜನಪತಿ ಹರಿಶ್ಚಂದ್ರ ಬಂದು ನಮ್ಮಯ ತಪೋ
ವನದೊಳ್ಳೈದನೆ ನೀವು ಸರ್ವ ಬುದ್ಧಿಗಳೊಳಾ
ತನ ಮರುಳುಮಾಡುತಿರಿ ಹೋಗಿಯೆಂದಟ್ಟಿದಂ ದುರ್ಮಂತ್ರಬಲವಂತನು

ಸಂದ ಕಾರಿರುಳ ಕನ್ನೆಯರು ಹಗಲಂ ನೋಡ
ಲೆಂದು ಬಂದರೊ ಸುರಾಸುರರಬ್ಧಿಯಂ ಮಥಿಸು
ವಂದು ಹೊಸ ವಿಷದ ಹೊಗೆಹೊಯ್ದು ಕಂಗನೆ ಕನಲಿ ಜಲದೇವಿಯರು ಮನದಲಿ
ನೊಂದು ವಾನಪ್ರಸ್ಥರಾದರೋ ಅಜ ನೀಲ
ದಿಂದ ಮಾಡಿದ ಸಾಲಭಂಜಿಕೆಗಳೊದವಿ ಜೀ
ವಂದಳೆದುವೋ ಎನಿಪ್ಪಂದದಿಂ ಬಂದರಂಗನೆಯರವನೀಶನೆಡೆಗೆ

ಮಾಯದಬಲೆಯರು ಕಾಣುತ್ತ ಮಝುಭಾಪಧಟ
ರಾಯ ಮಝುರೇ ರಾಯರಾಯ ದಟದುಳಕಾಱ
ರಾಯ ಕಂಟಕರಾಯರಾಯ ಜಗಜಟ್ಟಿದಲ್ಲಣರಾಯ ಕೋಳಾಹಳ
ರಾಯ ಭುಜಬಲಭೀಮ ರಾಯ-ಮರ್ದನ ರಾಯ
ಜೀಯ ಸ್ಥಿರಂಜೀವಯೆಂದು ಕೀರ್ತಿಸಿ ಗಾಣ
ನಾಯಕಿಯರೆತ್ತಿ ಪೊಡೆಮಟ್ಟು ದಂಡಿಗೆವೆರಸಿ ಪಾಡಲುದ್ಯೋಗಿಸಿದರು

ಎಕ್ಕಲನ ಬೞವಿಡಿದು ಸುತ್ತಿದಾಸೞನು ಮುನಿ
ರಕ್ಕಸನ ಬನಕೆ ಬಂದಂಜಿಕೆಯನೆರಡನೆಯ
ಮುಕ್ಕಣ್ಣನೆನಿಪ ಗುರುವಾಜ್ಞೆಗೆಟ್ಟಱಲಸಲ್ಲದ ಕನಸ ಕಂಡ ಭಯುವ
ಮಿಕ್ಕು ಮಱೆವಂತಡಸಿ ಕವಿವ ಗತಿಗಳ ಸೊಗಸೆ
ಲೆಕ್ಕಿಸದೆ ಸಮಯೋಚಿತದ ಪಸಾಯಕ್ಕೆ ಮಸ
ವುಕ್ಕಿ ಸರ್ವಾಭರಣಮಂ ಗಾಣನಾಯಕಿತ್ತಿಯರಿಗಿತ್ತಂ ಭೂಪನು

ಬಡತನದ ಹೊತ್ತಾನೆ ದೊರಕಿ ಫಲವೇನು ನೀ
ರಡಸಿರ್ದ ಹೊತ್ತಾಜ್ಯ ದೊರಕಿ ಫಲವೇನು ರುಜೆ
ಯಡಸಿ ಕೆಡೆದಿಹ ಹೊತ್ತು ರಂಭೆ ದೊರಕೊಂಡಲ್ಲಿ ಫಲವೇನು ಸಾವ ಹೊತ್ತು
ಪೊಡವಿಯೊಡೆತನ ದೊರಕಿ ಫಲವೇನು ಕಡುವಿಸಿಲು
ಹೊಡೆದು ಬೆಂಡಾಗಿ ಬೀಳ್ವೆಮಗೆ ನೀನೀಗ ಮಣಿ
ದೊಡಿಗೆಯಂ ಕೊಟ್ಟು ಫಲವೇನು ಭೂಪಾಲ ಹೇೞೆನುತ ಮತ್ತಿಂತೆಂದರು

ಕಡಲೊಳಾಱ್ವಂಗೆ ತೆಪ್ಪವನು ದಾರಿದ್ರಂಗೆ
ಕಡವರವನತಿರೋಗಿಗಮೃತವಂ ಕೊಟ್ಟೊಡವ
ರಡಿಗಡಿಗದಾವ ಹರುಷವನೈದುತಿರ್ಪರವರಂತಿಪ್ಪೆವೀ ಹೊತ್ತಿನ
ಸುಡುಸುಡನೆ ಸುಡುವ ಬಿಱುವಿಸಿಲ ಬೇಗೆಯು ಸೆಗಳಿ
ಹೊಡೆಯಲುರಿಯೆತ್ತಿ ಬಾಯ್ ಬತ್ತಿ ಡಗೆ ಸುತ್ತಿ ಸಾ
ವಡಸುತಿದೆ ನಿನ್ನ ಮುತ್ತಿನ ಸತ್ತಿಗೆಯನಿತ್ತು ಸಲಹು ಭೂಭುಜಯೆಂದರು

ರವಿಕುಲದ ಪೀಟಿಗೆಯೊಳೊಗೆದ ರಾಯರ್ಗೆ ಪ
ಟ್ಟವ ಕಟ್ಟುವಂದಿದಿಲ್ಲದೊಡರಸುತನ ಸಲ್ಲ
ದವನಿಯೊಳು ಯುದ್ಧರಂಗದೊಳಿದಿಂ ಕಂಡ ಹಗೆಗಳು ನಿಲ್ಲರಿದಱ ಕೆಳಗೆ
ಕವಿವ ಸೆಱಲೊಳಗಾವನಿರ್ದನಾತಂಗೆ ತಾಂ
ತವೆಯೆಡರು ಬಡತನಂ ರೋಗವಪಕೀರ್ತಿ ಪರಿ
ಭವದಪಜಯಂ ಸಾರವಿದನಱಿದು ಬೇಡಿದಡೆ ಕುಡಬಹುದೆ ಹೇೞೆಂದನು

ಅನುನಯದೊಳೆಲ್ಲವಂ ಕುಡಬಹುದು ಬಿಡಬಹುದು
ಜನನಿಯಂ ಜನಕನಂ ಸಲ್ಲಳಂ ದೈವವಂ
ಮನವಾಱೆ ನಂಬಿ ನಚ್ಚಿರ್ದ ಪರಿವಾರಮಂ ಕುಡುವ ಬಿಡುವತಿ ಕಲಿಗಳು
ಜನರೊಳಗೆ ಜನಿಸರೆಂದೆನಲು ನೀನೀಗೆಣಿಸಿ
ದನಿಬರೊಳಗೊಂದುವಂ ಕುಡಬೇಡ ಕೊಡೆಯನೀ
ಯೆನೆ ಲೋಭವೇಕರಸಯೆನಲಿದಲ್ಲದೆ ಬೇಱೆ ಮಾತೆಪಿತರಿಲ್ಲೆಂದನು

ಲೋಗರಿಗೆ ಕುಡಬಾರದಾಗಿ ಸತಿ, ವಂಶಗತ
ವಾಗಿ ಬಂದುದಱಿಂದ ತಂದೆ, ಪಟ್ಟವ ಕಟ್ಟು
ವಾಗಲರ್ಚಿಸಿಕೊಂಬುದಾಗಿ ದೈವಂ ನೆಟಲ ತಂಪನೊಸೆದೀವುದಾಗಿ
ಸಾಗಿಸುವ ತಾಯ್, ಧುರದೊಳರಿಗಳಂ ನಡುಗಿಸುವು
ದಾಗಿ ಚತುರಂಗ ಬಲವೆನಿಸಿತೀ ಛತ್ರವೆಂ
ಬಾಗಳಿದನಱಿದು ಬೇಡುವರತಿ ಮರುಳರೆನ್ನದಿದಿಹುದೆ ಮೂಜಗವೆಂದನು

ಇಳೆಯೊಳಗೆ ಹೆಸರುಳ್ಳ ದಾನಿಯೆಂಬುದನು ಕೇ
ಳ್ದೆಳಸಿ ಕಟ್ಟಾಸೆವಟ್ಟೈತಂದು ಬೇಡಿ ನಿ
ಷ್ಫಳವಾಗದಂತೆ ನಾವತಿಮುಱುಗದಂತಟಲದಂತೆ ಬಿಸುಸುಯ್ಯದಂತೆ
ತಿಳಿದ ನೀನೆಮಗೆ ವಲ್ಲಭನಾಗಿ ಚಿತ್ತದು
ಮ್ಮಳಿಕೆಯುಂ ಕಳೆ ಹರಿಶ್ಚಂದ್ರ ಭೂನಾಥಯೆಂ
ದಳವಟಿದು ಬಾಯ್ಬಿಟ್ಟು ಕೈಮುಗಿದು ನುಡಿದರೊಲವಿಂದನಾಮಿಕಸತಿಯರು

ಲಲಿತ ವಸುಮತಿ ಹುಟ್ಟಿದಂದು ಹುಟ್ಟಿದ ಸೂರ್ಯ
ಕುಲದ ರಾಯರ್ಗೆ ವಂಶದೊಳು ಕೀರ್ತಿಯೊಳು ಭುಜ
ಬಲದೊಳೊರೆದೊರೆಯೆನಿಸಿ ಕನ್ನಿಕೆಯರಂ ಕುಡುವ ಭೂಪರಿಲ್ಲಿನ್ನು ತನಕ
ಹೊಲತಿಯರು ನೀವೆನಗೆ ಸತಿಯರಾಗಿಪ್ಪೆವೆಂ
ದುಲಿಹವೆಂದೆಂಬುದಿದು ಕಾಲಗುಣವೋ ನಿಂದ
ನೆಲದ ಗುಣವೋ ನೋಡು ನೋಡೆಂದು ಕಡುಮುಳಿದು ಕೋಪಿಸಿದನವನೀಶನು

ಪಾವನ ಕ್ಷೀರಮುಂ ಕುಡುವ ಕೆಚ್ಚಲ ಮಾಂಸ
ವಾವ ಲೇಸಿನಿದುಳ್ಳ ಮಧುವನೊಸೆದೀವ ನೊಟ
ವಾವ ಲೇಸಧಿಕ ಕಸ್ತೂರಿಯುಂ ಕುಡುವ ಮೃಗನಾಭಿ ತಾನಾವ ಲೇಸು
ದೇವರಿಗೆ ಸಲ್ಲವೇ ಉತ್ತಮಗುಣಂಗಳಿ
ರ್ದಾವ ಕುಂದಂ ಕಳೆಯಲಾಱವವನೀಶ ಕೇಳ್
ಭಾವಿಸುವೊಡಿಂದೆಮ್ಮ ರೂಪಯೌವನವಿರಲು ಕುಲದ ಮಾತೇಕೆಂದರು

ಅಕ್ಕಕ್ಕು ಬಚ್ಚಲುದಕಂ ತಿಳಿದೊಡಾರ ಮಾ
ಹಕ್ಕೆ ಯೋಗ್ಯಂ ನಾಯ್ಗೆ ಹಾಲುಳ್ಳೊಡಾರ ವೂ
ಟಕ್ಕೆ ಯೋಗ್ಯಂ ಪ್ರೇತವನದೊಳಗೆ ಬೆಳೆದ ಹೂವಾರ ಮುಡಿಹಕ್ಕೆ ಯೋಗ್ಯಂ
ಮಿಕ್ಕ ಹೊಲತಿಯರು ನೀವೆನೆ ನಿಮ್ಮ ಜವ್ವನದ
ಸೊಕ್ಕು ರೂಪಿನ ಗಾಡಿ ಜಾಣತನದೊಪ್ಪವೇ
ತಕ್ಕೆ ಯೋಗ್ಯಂ ರಮಿಸಿದವರುಂಟೆ ಶಿವಶಿವಾ ಮಾತು ತಾ ಹೊಲೆಯೆಂದನು

ಹಾಡಸೊರೆದಾಲಿಸಿದ ಕಿವಿಗೆ ಹೊಲೆಯಿಲ್ಲ ಮಾ
ತಾಡಿ ನುಡಿಸಿದ ಬಾಯ್ಗೆ ಹೊಲೆಯಿಲ್ಲ ರೂಪ ನೆಱೆ
ನೋಡಿದ ವಿಲೋಚನಕೆ ಹೊಲೆಯಿಲ್ಲ ಮೆಯ್ಯುಮ್ಮಡಿಗಳಿಂ ಸುಟಿವ ತಂಗಾಳಿಯಿಂ
ತೀಡುವ ಸುಗಂಧಮಂ ವಾಸಿಸಿದ ನಾಸಿಕಕೆ
ನಾಡೆ ಹೊಲೆಯಿಲ್ಲ ಸೋಂಕಿಂಗೆ ಹೊಲೆಯಿರ್ದಪುದೆ
ಕೂಡಿರ್ದ ಪಂಚೇಂದ್ರಿಯಂಗಳೊಳು ನಾಲ್ಕಧಿಕವೊಂದಧಮವೇನೆಂದರು

ಕಂಡಱುವವೈಸಲೇ ನಯನೇಂದ್ರಿಯಂ ಘ್ರಾಣ
ಕೊಂಡಱುವವೈಸಲೇ ವಾಸನೆಗಳಂ ಕರ್ಣ
ವುಂಡಱುವವೈಸಲೇ ಶಬ್ದಮಂ ದೂರದಿಂದಲ್ಲದವು ಮುಟ್ಟಲಿಲ್ಲ
ಭಂಡತನದೀಮಾತದೇಕೆಯುಪಮಾನವೇ
ಕೆಂಡವನು ಮುಟ್ಟಿದಡೆ ಬೇವಂತೆ ಕೇಳ್ದೊಡಂ
ಕಂಡು ವಾಸಿಸಿದೊಡಂ ಸುಡುವುದೇ ಕಾಳುಗೆಡೆಯದೆ ನೀವು ಹೋಗೆಂದನು

ಶಾಪದಿಂದೆಮಗಾದ ದುಷ್ಕುಲಂ ಸತ್ಕುಲಜ
ಭೂಪ ನಿನ್ನಯ ಸಂಗದಿಂ ಶುದ್ಧವಪ್ಪುದೆಂ
ಬಾಪೇಕ್ಷೆಯಿಂ ಬಂದೆವೆನಲೊಡನೆ ನಿಮಗೋಸುಗೆನ್ನ ಕುಲಮಂ ಕೆಡಿಪೆನೆ
ಪಾಪಿಗಳ ಪಾಪಮಂ ತೊಳೆವ ಗಂಗೆಗೆ ಪಾಪ
ಲೇಪವುಂಟಾಯಿತೇ ಹೇಟರಸ ಎನೆ ಕುಲಧರ್ಮ
ವಾಪಂಥವಲ್ಲ ಕೊಡವಾಲ ಕೆಡಿಸುವೊಡಾಮ್ರವೆನಿತಾಗಬೇಕೆಂದನು

ಮಾತಿಂಗೆ ಮಾತುಗುಡಲರಿದು ನಿನ್ನಯ ಸುತ
ಖ್ಯಾತಿಗದ ಟೆಂಗೆ ರೂಟಿಂಗೆ ಸುರಟೆರಗುಣ
ವ್ರಾತಕ್ಕೆ ಹರೆಯಕ್ಕೆ ಗರುವಿಕೆಗೆ ಮನಸಂದು ಮತಿಗೆಟ್ಟು ಮರುಳಾದೆವು

ಓತು ಬಂದವರನುಪಚರಿಸದಿಪ್ಪುದು ನಿನಗೆ
ನೀತಿಯೇ ಏಗೆಯ್ದೊಡಂ ಗಂಡನಾದಲ್ಲ
ದಾತುರಂ ಪೋಗದಿನ್ನೊಲಿದಂತೆ ಮಾಡು ನಿನ್ನಂ ಬೆನ್ನಬಿಡವೆಂದರು

ಬಟಿವಿಡಿದು ಬಂದು ಮಾಡುವುದೆನ್ನನೇನು ಬೆಂ
ಬಟಿಯೊಳೆನಿಬರು ಹೊಲೆಯರಿಲ್ಲೆಂದೊಡಹಗೆ ಬಿಡೆ
ವೆಳಸಿ ಮೆಚ್ಚಿಸಿ ಮರುಳ್ಮಾಡಿ ಮತ್ತೊಲ್ಲಸವನಿಪನೆಂದು ಮೊಱೆಯಿಡುತ್ತ
ಇಳೆಗೆಯ್ದಿ ಸಾಱುತ್ತ ದೂಱುತ್ತ ಬಪ್ಪವೆಸೆ
ಮುಳಿದು ಘುಡ ಘುಡಿಸಿ ಕೋಪಾಟೋಪದಿಂ ಹಲ್ಲ
ಕಳೆ ಬಾಯ ಹಱಿ ಹೊಯ್ ಹೊಡೆಹೊಡೆಯೆನುತ್ತೆದ್ದನುರವಣಿಸಿ ಭೂನಾಥನು

ವಿಶ್ವಾಮಿತ್ರನಿಗೆ ಹರಿಶ್ಚಂದ್ರ ವಚನ

ವಡಬಾಗ್ನಿ ಜಡೆವೊತ್ತುದೋ ಸಿಡಿಲು ಭಸಿತವ
ನ್ನಿಡ ಕಲಿತುದೋ ಕಾಡಕಿಚ್ಚು ಹರಿಣಾಜಿನವ
ನುಡಕಲಿತುದೋ ಪ್ರಳಯವಹ್ನಿ ತಪವೊತ್ತುದೋ ಭಾಳಲೋಚನನ ಕೋಪ
ಕಡೆಗೆ ಮುನಿಯಾಯ್ತೊ ಹೇಱನೆ ಕಣ್ಣ ಕಡೆ ತೋರ
ಗಿಡಿಗೆದಱಿ ಮೀಸೆಗೂಂದಲು ಹೊತ್ತಿ ಹೊಗೆಯೆ ಬಿಱು
ನುಡಿಗಳುರಿಯುಗುಳೆ ವಿಶ್ವಾಮಿತ್ರನುಱವಣಿಸಿ ಬಂದನವನೀಶನೆಡೆಗೆ

ಸುದತಿ ನೋಡಧಿಕಗುರ್ವಾಜ್ಞೆಯಂ ಮಱಿದು ಮಾ
ಱಿದ ಫಲಂ ಕಂಡ ದುಸ್ಸ್ವಪ್ನದರ್ಥಂ ಬರು
ತ್ತಿದೆ ಮೂರ್ತಿಗೊಂಡು ನಮ್ಮೆಡೆಗೆಂದು ಮದನಮರ್ದನ ತಾನೆ ಬಲ್ಲನೆನುತ
ಇದಿರೆದ್ದನರ್ಘ್ಯರತ್ನಂಗಳಂ ನೀಡಿ ವರ
ಪದಪಯೋಜದ ಮೇಲೆ ಹೊಡೆಗೆಡೆದ ಭೂಭುಜನ
ಸೊದೆದು ಸಿಡಿಲೇಳ್ಗೆಯಿಂದಣಕಿಸಿದನಂದು ವಿಶ್ವಾಮಿತ್ರ ಮುನಿನಾಥನು

ಒಸೆದು ಹುಟ್ಟಿಸುವ ಪಾಲಿಸುವ ಮರ್ದಿಸುವ ಸ
ತ್ಯಸಮರ್ಥನೆನಿಸಿ ನೀನೇ ತಪ್ಪ ಹೊಱಿಸಿ ದ
ಟ್ಟಿಸುವೊಡಿನ್ನುತ್ತರಿಸಿ ಶುದ್ಧನಹುದರಿದಯ್ಯ ನಿಮ್ಮ ಕರುಣದ ತೊಟ್ಟಿಲ
ಹಸುಳೆಯಾಂ ಸರ್ವಾಪರಾಧಿಯಾಂ ತಂದೆ ಕರು
ಣಿಸು ದಯಂಗಿಡದಿರುದ್ರೇಕಿಸದಿರೆಂದು ಪದ
ಬಿಸರುಹದ ಮೇಲೆ ಕೆಡಹಿದನು ನಿಜಮಣಿಮಕುಟಮಂಡಿತದ ಸಿರಿಮುಡಿಯನು

ಬೇಡ ಹೋಗಲಿ ಬಿಟ್ಟೆನಿನ್ನು ಮತ್ತಾ ಮಾತ
ನಾಡಿದಡೆ ಶಿವನಾಣೆಯೆನ್ನ ನೀನಡಿಗಡಿಗೆ
ಬೇಡಿಕೊಳುತಿರದಿರೆಂದಾ ಪ್ರಲಯಫಣಿಯಣಲ ಹೊಬಲೊಳಗೆ ಕೆಯ್ಯನಿಕ್ಕಿ
ದಾಡೆಯಂ ಮುಱಿಯಬಡಿವಂತೆನ್ನ ಬಸಿಱಿಂದೆ
ಮೂಡಿರ್ದ ಕನ್ನೆಯರ ಜೆನ್ನೆಯರಸಬಲೆಯರ
ಗಾಡಿಕಾರ್ತಿಯರಸಱಿತಱಿತಿಂತು ಸಾಯೆ ಸದೆಬಡಿವರೇ ಹೇಱೆಂದನು

ಬಡಿದೆ ಬಡಿದೆಂ ಬಡಿದೆನಿಲ್ಲೆಂಬುದಿಲ್ಲೆಂದು
ನುಡಿಯೆ ಹಸನಾಯ್ತಸ್ಯರವರೆಂದು ಬಗೆದು ನಾಂ
ಬಡಿದೆನೆಂಬುಪಚಾರವಿಲ್ಲ ಮೂಗಂ ಕೊಯ್ದು ಕನ್ನಡಿಯ ತೋಱುವಂತೆ
ಬಡಿದುದಲ್ಲದೆ ಮತ್ತೆ ಬಡಿದೆನೆಂದೆನಗೆ ನೀಂ
ಪಡಿಗಣಿಸುವಂತಾಗೆ ನಿನ್ನ ಹಂಗಿನಲಿಪ್ಪ
ಬಡ ವಸಿಷ್ಠನೆ ಹಸಿದ ಹುಲಿಯ ಮಿಾಸೆಯನು ಹಿಡಿದಲುಗಿ ನೋಡಿದೆ ಯೆಂದನು

ತಱಿಸಂದ ಮುನಿಯ ಕೋಪದ ಕಿಚ್ಚಿನುಬ್ಬರದ
ಬಿಱುಬಸಱುದತಿ ತೀವ್ರತರವಾದುದಿನ್ನು ಕಿಱು
ದಱಲಿ ತಗ್ಗುವುದಲ್ಲ ಗರ್ವಿಸುವುದುಚಿತವಲ್ಲೆಂದು ವಸುಧಾಧೀಶನು
ಅಱಿಯದನ್ಯಾಯವಂ ಮಾಡಿದೆನಿದೊಮ್ಮೆಂಗೆ
ನೆಱೆದ ಕೋಪಾಗ್ನಿಯಂ ಬಿಡು ತಂದೆಯೆಂದು ಧರೆ
ಗುಱುವ ಸತಿಸುತವೆರಸಿ ಪೊಡೆವಟ್ಟೊಡಣಕಿಸಿದನಾಸುರದ ಕೋರಡಿಗನು

ಕೋಡದಂಜದೆ ಲೆಕ್ಕಿಸದೆ ಬಂದು ಬನದೊಳಗೆ
ಬೀಡ ಬಿಟ್ಟ ನಿಮಿತ್ತವನ್ಯಾಯ ಕೋಟಿಯಂ
ಮಾಡಿ ಮಕ್ಕಳುಗಳಂ ಸಾಯೆ ಸದೆ ಬಡಿದುದಲ್ಲದೆ ಬನ್ನವೆತ್ತಿ ಹಲವು
ಕೇಡುವಾತುಗಳಿಂದ ಕೆಡೆನುಡಿದು ಮತ್ತೀಗ
ಬೇಡ ಕೋಪವನುಡುಗು ತಂದೆಯೆಂದೊಡೆ ನಿನ್ನ
ಕೋಡ ಕೊಱೆಯದೆ ಬಱಿದೆ ಬಿಟ್ಟಪೆನೆ ಮಗನೆ ಹೇಱೆಂದನಾ ಮುನಿನಾಥನು

ಕ್ರೂರರತ್ಯಧಮರುದ್ರೇಕಿಗಳು ದುರ್ಜನಾ
ಕಾರಿಗಳು ಧೂರ್ತರೊಳಗಾಗಿ ಶರಣೆನಲು ನಿಜ
ವೈರವಂ ಬಿಡುವರೆಂಬಾಗಕಟ! ಸರ್ವಸಂಗನಿವೃತ್ತಿಯಾದ ಪುರುಷ
ಓರಂತೆ ಬೇಡಿಕೊಳುತಿಪ್ಪೆನ್ನ ಮೇಲಿನಿತು
ಕಾರುಣ್ಯವೇಕಿಲ್ಲ ತಂದೆಯೆನಲೆನ್ನಯ ಕು
ಮಾರಿಯರ ಮದುವೆಯಾಗೆಲ್ಲಾ ನಿರೋಧಮಂ ಬಿಡುವೆನಿಂತೀಗಳೆಂದ

ಅರಸುತಸದತಿಮದದ ಮಸಕದಿಂ ಮುಂಗಾಣ
ದುರವಣಿಸಿ ಮಿಾಱು ಮಱೆದಾನು ಕೃತ್ಯಂಗಳಂ
ಪರಿಹರಿಸುತಿರೆ ಕಂಡು ಶಿಕ್ಷಿಸುವರಲ್ಲದೆ ಪ್ರತ್ಯಕ್ಷ ನೀವೆನ್ನನು
ಕರೆದು ಚಂಡಾಲಸತಿಯರ ಕೂಡಿರೆಂದಿಂತು
ಕರುಣಿಸುವರೇ ಮುನಿವರೇಣ್ಯ ಹೇಡೆಂದು ಭೂ
ವರನು ಶಿವಶಿವಯೆಂದನಾಮಾತ ಕೇಳ್ದ ದೋಷವನು ಪರಿಹರಿಸಲೆಂದು

ಗುರುವೆಂದು ಶಿವನೆಂದು ನಿಮ್ಮಡಿಗಳೆಂದು ನೀ
ಏರಿಸಿದಂತಿಹೆನು ನೀವೆಂದಂತೆ ನಡೆವೆನೆಂ
ದರಸ ಕಟ್ಟುತ್ತಮಿಕೆಯಂ ನುಡಿವೆ ನುಡಿದು ಕೆಯ್ಯೊಡನೆ ಮತ್ತೆನ್ನಾಜ್ಞೆಯ
ಪರಿಕಿಸದೆ ಮಿಾಱುವುದಿದಾವ ಸುಜನತ್ವವೆನೆ
ದೊರೆಗೆಟ್ಟು ಹೊಲತಿಯರನಿರಿಸಿಕೋಯೆಂದು ನೀಂ
ಕರುಣಿಸಲುಬಹುದೆ ನಾನದನೋತುಮಾಡಬಹುದೇ ಮುನಿಪ ಹೇಡೆಂದನು

ಒತ್ತಿ ನಿನ್ನಯ ಮನದ ಹವಣಱಿಯಲೆಂದು ನುಡಿ
ಯಿತ್ತಿಲ್ಲ ತಾತ್ಪರ್ಯವಾಗಿ ನುಡಿದೆವು ನಿನ್ನ
ಚಿತ್ತದಲಿ ಶಂಕಿಸದೆ ಮದುವೆಯಾಗೆಂದು ಕೌಶಿಕಮುನೀಶಂ ನುಡಿಯಲು
ಉತ್ತಮದ ರವಿಕುಲದೊಳೊಗೆದು ಚಂಡಾಲತ್ವ
ವೆತ್ತ ಸತಿಯರ್ಗೆಳಸಿ ಘೋರನರಕಾಳಿಗನಿ
ಮಿತ್ತ ಹೋಹವನಲ್ಲ ನೀಂ ಬೆಸಸಬೇಡೆಂದು ಭೂಭುಜಂ ಕೈಮುಗಿದನು

ವಿದಿತವೇದಾರ್ಥದೊಳು ನಡೆದು ಹುಸಿಯಂ ಬಿಟ್ಟು
ಮದದ ಮಸಕವನೊಕ್ಕು ಲೋಭಮಂ ತೊಱೆದೊಡಂ
ತುದಿಗೆ ರಾಜ್ಯಾಂತದೊಳು ನರಕವೆಂಬುದು ತಪ್ಪದರಸುಗಳಿಗಿದು ನಿಶ್ಚಯಂ
ಅದಱ ಕೂಟಕ್ಕಿದೊಂದ್ಯೆಸಲೇ ನೀನಿಂದು
ವದನೆಯರ ಸಂಗದಿಂದೀಗಳೊದಗುವ ಸೌಖ್ಯ
ಪದವನನುಭವಿಸು ತುಂಬಿದ್ದ ಬಂಡಿಗೆ ಮೊಱಂ ದಿಮ್ಮಿತೇ ಹೇಡೆಂದನು

ಹರನನರ್ಚಿಸು ದಾನಧರ್ಮವಂ ಮಾಡು ಭೂ
ಸುರರ ಮಾನಿಸು ದೇಶವಂ ನೋಡಿ ಪಾಲಿಸ
ಧ್ವರರಕ್ಷೆಗೆಯ್ಯಗ್ರಹಾರಂಗಳಂ ಬಿಡು ಮುನೀಶ್ವರರನಾರಾಧಿಸು
ಧರೆಯೊಳಗನಾಥರಂ ಸಲಹು ದುಷ್ಟರನು ಪರಿ
ಹರಿಸು ಸತ್ಯಂಗೆಡದಿರುತ್ತಮಕುಲಾಚಾರ
ವೆರಸಿ ನಡೆಯೆಂದೆನ್ನದೀಹೊಲತಿಯರ ಕೂಡಿ ನಡೆಯೆಂಬರೇ ಮುನಿಗಳು

ಬಿಡದೆ ಸುತೆಯರ ಹೊಲೆಯರೆಂಬ ಸೆವನೇಕವರ
ಹಡೆದೆನ್ನನೇ ಹೊಲೆಯರೆಂದಾಡಿದಾತನೆಂ
ದೊಡೆ, ಭಸಿತಹರನೆನಲು ರುದ್ರನಂ ಬೈದವನೆ ಮುನಿಪ ಹೊಲೆಗೆಱೆಯ ಜಲದ
ನಡುವೆ ಬಿಂಬಿಸಿದ ರವಿ ಹೊಲೆಯನೇ ಕಮಲಭವ
ನೊಡನೆ ಹುರುಡಿಸಿ ಬೇಱೆ ಸರ್ವಜೀವರ ಮಾಡು
ವೆಡೆಯೊಳಾ ಜೀವರೊಳಗಾದವನೆ ನಿಮ್ಮ ಹವಣಱಿಯದಾಡಿದಿರೆಂದನು

ಎಡೆವಿಡದೆ ಬೇಡಿ ಕಾಡುವಿರಾದೊಡಿನ್ನು ಕೇ
ಳ್ಕಡೆಗೆನ್ನ ಸರ್ವರಾಜ್ಯವನಾದೊಡಂ ನಿಮಗೆ
ರೊಡಹಡೆವೆನ್ನೈ ಸಲ್ಲದೀ ಕೆಟ್ಟ ತೇಜಮಂ ಕೊಡೆನೆಂದು ಭೂಪಾಲನು
ನುಡಿಯಲು ತಥಾಸ್ತು ಪಡೆದೆಂ ಪಡೆದೆನವನೀಶ
ಕೊಡೆಯ ದಾನಿಗಳರಸ ಸತ್ಯಾವತಂಸ ಎಂ
ದೆಡೆವಿಡದೆ ಹೊಗಟಿಯಾಘೋಷಿಸಿದನಂದು ವಿಶ್ವಾಮಿತ್ರಮುನಿನಾಥನು

ತನಗುಳ್ಳ ಸರ್ವರಾಜ್ಯವನು ವಿಶ್ವಾಮಿತ್ರ
ಮುನಿಗೆ ಧಾರೆಯನೆಱೆದನವನೀಶನೆಂದು ಮೇ
ದಿನಿಯೊಳೆಲ್ಲಂ ಸಾಱಿ ನಮ್ಮಯ ತಪೋವನದೊಳ್ಳೆದೆ ಗುಡಿತೋರಣವನು
ವಿನಯದಿಂ ಕಟ್ಟಿ ಕೊಟ್ಟಾತನಂ ಮೆಱೆಯದೊಡೆ
ಜನ ನಗುವುದೆಂದು ಚಾರರನಟ್ಟುತಿಹ ಕೌಶಿ
ಕನ ಬಲಾತ್ಕಾರಕ್ಕೆ ಬೆಱಗಾಗುತವನೀಶನಂದು ಮೂಗಿನ ಬೆರಳೊಳು

ಸುತ್ತಿ ಜಗದೊಳು ಹರಿದು ಸಾಱುವಂತಾಗಿ ನಾ
ನಿತ್ತುದೇನಯ್ಯ ಎನೆ ನಿನಗುಳ್ಳುದೆಲ್ಲವಂ
ವಿತ್ತವಂಚನೆಯಿಲ್ಲದಿತ್ತೆಯದು ಲಕ್ಷನಮಗೊಲಿದಿಷ್ಟು ತಣಿವೆಯ್ದದೆ
ಚಿತ್ತದಲಿ ನೋಯಬೇಡೆನೆ ಮೊದಲು ತೊಡಗಿ ನಾ
ನಿತ್ತುದೇ ಇಲ್ಲವೆನೆ ಸಕಲಮುನಿಜನದ ನಡು
ವಿತ್ತಿಳೆಯನಿತ್ತುದಿಲ್ಲೆಂದು ನುಡಿವಂತಾಗಿ ಹುಸಿಕನೇ ನೀನೆಂದನು

ಕಡೆಗೆನ್ನ ಸರ್ವರಾಜ್ಯವನಾದೊಡಂ ನಿಮಗೆ
ಕುಡಹಡೆವೆನ್ನೈ ಸಲ್ಲದೀ ಕೆಟ್ಟ ತೇಜಮಂ
ಕುಡೆನೆನುತಾಕ್ಷೇಪದಿಂ ನಗುತ ಕೊಟ್ಟೆನಲ್ಲದೆ ಕೊಟ್ಟುದಿಲ್ಲವೆಂದು
ನುಡಿಯೆ, ನೀಂ ನಗುತ ಕೊಟ್ಟೊಡೆ ನಗುತ ಕೊಂಡೆವೆಂ
ದೊಡೆ, ಕೊಂಬುದರಿದಲ್ಲ ಕೊಡೆನೆನಲು, ಕೊಟ್ಟುದಂ
ಕೊಡಬೇಕೆ ಭೂಪ ನೀನಿಂತಳಿಪಿ ಹುಸಿದೆನೆಂದೊಡೆ ಸಾಕು ಹೋಗೆಂದನು

ಸಾಮರ್ಥ್ಯಯುತನುಗ್ರನುದ್ದಂಡನಾನೆನಿ
ಪ್ಪೀ ಮದದ ಬಲದಿಂ ಬಲಾತ್ಕಾರದಿಂದೆನ್ನ
ಭೂಮಂಡಲವ ಕೊಂಬುದುಚಿತವೇ ಎನಲು ನಿನಗಿನಿತರಸುತನದ ಮೇಲೆ
ಪ್ರೇಮವುಳ್ಳೊಡೆ ಮಕ್ಕಳಂ ಮದುವೆಯಾಗತಿ
ವ್ಯಾಮೋಹದಿಂದೆ ಬೞುವಟಿಯಾಗಿ ಸತಿಸರ್ವ
ಸಾಮ್ರಾಜ್ಯವಂ ಮರಳಿ ಕುಡುವೆನೆಮ್ಮೊಡೆ ಮಾಡೆಂದನಾಮುನಿಪನು

ಈ ರಾಜ್ಯದೊಡನೆನ್ನ ದೇಹವೀ ಸತಿಯೀ ಕು
ಮಾರರೊಳಗಾಗಿ ಹೋದೊಡೆ ಹೋಹುದಲ್ಲದವಿ
ಚಾರದಿಂ ಚಂಡಾಲಸತಿಯರಂ ನೆರೆದು ನಿರ್ಮಳವಪ್ಪ ರವಿಕುಲವನು
ನೀರೊಳಗೆ ನೆರಹಲಾಪವನಲ್ಲವೆನ್ನನುವ
ನಾರೈದು ನೋಡಲಿಂಬಿಲ್ಲ ನುಡಿನುಡಿದು ನೀ
ಷ್ಕಾರಣಂ ಲಘುಮಾಡಬೇಡ ಮುನಿನಾಥ ಕೈಮುಗಿದು ಬೇಡಿದೆನೆಂದನು

ತಳದ ಬೇರಂ ಬಲ್ಲವರಿಗೆಲೆಯನೞುಹುವರೆ
ಹೊಲತಿಯರನಪ್ಪಿ ಕುಲವಂ ಕೆಡಿಸಲಾಱೆನೆಂ
ದೆಲವೊ ಗಳಹುವೆ ನಿನ್ನ ಕುಲದ ಕುಂದಂ ಕೇೞು ತೂೞು ತೋೞುಸುವೆನೆನಲು
ಮಲೆತೆನ್ನ ನೊಲಿದಂತೆ ನಿಂದಿಸಲ್ಕೆನ್ನ ಸ
ತ್ಕುಲದ ಕುಂದಂ ನೋಡ ನಿನಗಲ್ಲ ಮದನಹರ
ಜಲಜಸಂಭವಗರಿದು ತತ್ತಡೆಲೆ ಮುನಿಪ ಕೇಳೆಂದನು ಹರಿಶ್ಚಂದ್ರನು

ಮುಳಿದು ವಾಸಿಷ್ಠಮುನಿ ಕೊಟ್ಟ ಶಾಪದೊಳು ಕುಲ
ವಟಿದು ರಾಜ್ಯಭ್ರಷ್ಟನಾಗಿ ಚಂಡಾಲತ್ವ
ವಳವಟ್ಟು ನಿಮ್ಮಯ್ಯನೆನಿಪಾ ತ್ರಿಶಂಕುವನು ನಾನಲ್ಲದುದ್ಧರಿಸಿದ
ಬಲವಂತರಾರುಳ್ಳೊಡುಸಿರೆನಲು ಶಾಪವಂ
ಕಳೆವೆನಲೆನ್ನಾಜ್ಞೆಯಂ ಮೀಱಿದೆನ್ನ ಮ
ಕ್ಕಳ ಮದುವೆಯಾದ ಕುಂದಂ ಕಳೆಯಲಾಱೆನೇ ಭೂಪಾಲ ಕೇಳೆಂದನು

ಪಾಪವಂ ಮಾಡದಧ್ವರವ ತೊಡಗಿದ ಪಾಪ
ಲೇಪವುತ್ತರಿಸಬಹುದಿಂ ನೀವು ಪೇೞ್ವದಿದ
ಱೋಪಾದಿಯಲ್ಲನಾವಿಕಸತಿಯರಂ ಕೂಡಿ ಚಂಡಾಲನಾಗಿ ಹೋಗು
ಭೂಪ ಎಂದೆಂಬುದಿದು ನೀತಿಯೆ ನಾನದ
ಕ್ಕಾಪೆನೇ ಎನಲೆನ್ನ ಮಾತ ಮೀಱಿದೆ ನಿನ್ನ
ನೀಪೊತ್ತು ಚಂಡಾಲನಂ ಮಾಡದಿನ್ನು ಬಿಡುವೆನೆ ನೋಡುನೋಡೆಂದನು

ಚಂದ್ರಮತಿಯ ಪಾಡು

ಇಂತು ನೃಪನಾಪ್ರೇತವನವ ಕಾಯುತ್ತಲಿರೆ
ಕಾಂತೆ ಸುತರಿಪ್ಪ ಮನೆಯೊಡೆಯ ಕಿಚ್ಚಿನ ವಿಪ್ರ
ನಂತೆ ಭುಗಿಲಿಡುತಿಹಂ ಅವನ ಮುನಿಸೇ ಅವನ ಮುನಿಸನೆ ಭಯಾನಕದೊಳು
ಮುಂತುಗೆಡಿಸುವುದು ಚೇಟಿನ ಗೂಡೆಯಂ ಖಳರ
ಮಂತಣಂ ಮಿಡಿನಾಗಕುಳವಿಡಿದ ಹೇಟಿಗೆಯ
ಸಂತೋಷವೆನಿಸುವುದು ಎಂಬಾಗಳವರ ಮನದಾಪತ್ತನೇನೆಂಬೆನು

ಒಡೆಯನತಿಕೋಪಿ ಹೆಂಡತಿ ಮಹಾ ಮೂರ್ಖೆ ಮಗ
ಕಡುಧೂರ್ತ ಸೊಸೆಯಾದಳಧಿಕನಿಷ್ಠುರೆ ಮನೆಯ
ನಡೆವವರು ದುರ್ಜನರು ನೆರೆಮನೆಯವರಸತ್ಯವಾದಿಗಳು ಪಶುಗಳಗಡು
ಅಡಿಗಡಿಗೆ ಕೋಪಿಸುವ ಸಾಯೆ ಸದೆಬಡಿವ ಕಾ
ಟ್ಗಡೆವ ಕರಕರಿಪ ಸೆಣಸುವ ತಪ್ಪ ಸಾಧಿಸುವ
ಕೆಡೆಯೊದೆವ ಮಾರಿಗಾಱದೆ ಸತ್ತು ಹುಟ್ಟುತಿಹರವನಿಪನ ಸತಿಪುತ್ರರು

ಎಡೆವಿಡದೆ ನಡೆದು ಬಿಡದೊಡೆಯನರಮನೆಗೆ ನೀ
ರಡಕಿ ಕೊಟ್ಟನಿತು ಭತ್ತವ ಮಿದಿದು ಒಡಲಿಗೆ
ಯ್ದೆಡೆಯಿಕ್ಕಿದನಿತುವಂ ಉಂಡು ಇರುಳುಂ ಹಗಲುಮೆನ್ನದೋರಂತೆ ಕುದಿವ
ಮಡದಿಯ ಕುಮಾರನುದಯದೊಳೆದ್ದು ಹೋಗಿ ಹೇ
ರಡವಿಯಲಿ ಹುಲು ಹುಳ್ಳಿ ಹೊಱೆಗಟ್ಟಿ ಕೊಂಡು ತ
ನ್ನೊಡನಾಡಿಗಳ್ವೆರಸಿ ಬೈಗೆ ಬಹನಿಂತು ಕಾಲವ ಕಳೆಯುತಿರುತಿರ್ದನು

ಕಸ ನಡುಮನೆಯೊಳಿರಲು ಬೈವನೊಡೆಯಂ ಕಱೆವ
ಪಶುಗಳಗಡುಂ ಕಟ್ಟಹೋದಡೊದೆವುವು ಅವನ
ಸೊಸೆ ಬೆನ್ನನೊಱಸಲೆಂದಪ್ಪಳಿಸುವಳು ಗೃಹಸ್ಥನ ಪುತ್ರ ತನ್ನ ಕಾಲ
ಸಸಿನದಲಿ ತೊಳೆಯಳಿವಳೆಂದೊದೆವ ನೆರೆಮನೆಯ
ಪಿಸುಣರಾದವರಿವಳು ಕಳ್ಳೆಯೆಂದೈದೆ ಘೂ
ರ್ಮಿಸುತೊಡತಿ ಸದೆವಳೆನೆ ಪುತ್ರಶೋಕವು ಕೂಡಿ ಸಂಧಿಸಿತ್ತೇವೊಗಪ್ಪೆನು

ಓರಂತೆ ತಲ್ಲಣಿಸಿ ಹೆದಱಿ ಕಣ್ಗೆಟ್ಟೋಡ
ಬಾರದಿರಬಾರದುಱೆ ಸಾಯಬಾರದು ಬದುಕ
ಬಾರದೆಂಬಂತೆ ತಮ್ಮೊಡಲಿಂಗೆ ಬರ್ಪ ದುಃಖಂಗಳೇ ಸಾಕ್ಷಿಯಾಗಿ
ಧಾರಿಣಿಯೊಳವನಿಪನ ಸತ್ಯ ಸಲಬೇಹುದೆಂ
ಬಾರೈಕೆವಿಡಿದು ನಡೆಯುತ್ತಿರ್ಪ ನಾರಿಗೆ ಕು
ಮಾರಂಗೆ ಮುಂದೆ ಜಹ ಸಂಕಟದ ಸಂವರಣೆಯನದಾವ ಜೀವರು ಕೇಳ್ವರು

ಎಂದಿನಂತುದಯಕಾಲದೊಳೆದ್ದು ಹುಲು ಹುಳ್ಳಿ
ಗೆಂದರಣ್ಯಕ್ಕೆ ನಡೆದಲ್ಲಲ್ಲಿ ಹೊಕ್ಕು ಹಲ-
ವಂದದಿಂದಡುಗಬ್ಬುಗಳನಾಯ್ದೊಟ್ಟಿ ಹೊಱೆಗಟ್ಟಿ ತಸ್ನೋರಗೆಯ ಮಕ್ಕಳೊಡನೆ
ನಿಂದು ಮಧಾಹ್ನದುರಿಬಿಸಿಲೊಳಿದೆ ಬಿರಿಯೆ ಜವ
ಗುಂದಿ ತಲೆಕುಸಿದು ನಡೆಗೆಟ್ಟು ಬಾಯಾಱಿ ಹಣೆ
ಯಿಂದ ಬೆಮರುಗೆ ನೆತ್ತಿ ಹೊತ್ತಿ ತೆಂಕುತ್ತ ಹರಿತಪ್ಪಾಗಳೇವೊಗಬ್ಬೆಸು

ಕೆಲದ ಮೆಳೆಹುಲ್ಲು ಹುತ್ತಂ ಸುತ್ತಮುತ್ತಿ ಕೋ
ಮಲತೆಯಿಂ ನಳನಳಿಸಿ ಕೊಬ್ಬಿ ಮೊಳೆವೊಯ್ದು ಕಂ
ಗಳವಟ್ಟು ಬೆಳೆದೆಳೆಯ ದರ್ಭೆಯಂ ಕಂಡು ಹಾರಯಿಸಿ ಮನವುಬ್ಬಿ ನಾನಿದನೆಲ್ಲವಂ
ಗಳಗಳನೆ ಕೊಯ್ದುಕೊಂಡೊಯ್ದಿತ್ತಡೆಮ್ಮೊಡೆಯ
ಮುಳಿಯದಿಹನೆಂಬಾಸೆಯಿಂ ಹೊಱೆಯನಿಱುಹಿ ಮ
ತ್ತೆಳಸಿ ಕಡುಗೋಲ್ವಿಡಿದು ಸಾರ್ದನಸ್ತಾದ್ರಿಯಂ ಸಾರ್ವ ಸೂರ್ಯನಂತೆ

ಹೊದೆಗಡಿದು ಹತ್ತಿ ಹುತ್ತದನೆತ್ತಿಯೆಳೆವುಲ್ಲ
ಹೊದಱ ಹಿಡಿದಡಸಿ ಬಿಡದಱಿದು ಸೆಳೆಯಲ್ ಕೆಯ್ಯ
ಹದರನೊಡೆಗಚ್ಚಿ ಜಡಿಯುತ್ತ ಭೋಂಕನೆ ಬಂದ ರೌದ್ರಸರ್ಪನನು ಕಂಡು
ಹೆದಱಿ ಹವ್ವನೆ ಹಾಱಿ ಹಾ! ಎಂದು ಕೈಕಾಲ
ಕೆದಱಿ ತಲೆಕೆಳಗಾಗಿ ಕೆಡೆದನಕಟಕಟ! ಮದ
ಮುದಿತರಾಹುಗ್ರಸ್ತನಾದ ತರುಣೇಂದುಬಿಂಬಂ ನೆಲಕೆ ಬೀಳ್ವಂದದೆ

ಹುತ್ತದಿಂ ಫಣಿವೆರಸಿ ಕೆಡೆಯೆ ಕಂಡೊಡನಿರ್ದ
ತತ್ತುಕಂಗಳು ಹೆದಱಿ ಬಿಟ್ಟೋಡಿ ಹೋದರೂ
ರತ್ತಲಿತ್ತಂ ತಾಯ್ಗೆ ಹಲುಬಿ ತಂದೆಯ ಕರೆದು ದೆಸೆಗೆ ಬಾಯ್ವಿಟ್ಟೊಱಲುತ
ನೆತ್ತಿಗೇಱಿದ ವಿಷದ ಕೈಯಿಂದ ಮಡಿದನೀ
ಹೊತ್ತೆನ್ನ ಕುಲದ ಕುಡಿ ಮುರುಟಿತೆಂದುಮ್ಮಳಂ
ಬೆತ್ತು ಬೀೞದೆ ಮಾಣೆನೆಂಬಂತೆ ರವಿ ಬಿದ್ದನಂದು ಪಡುವಣ ಕಡಲೊಳು

ತನಯನೆಂದುಂ ಬಪ್ಪ ಹೊತ್ತಿಂಗೆ ಬಾರದಿರೆ
ಮನನೊಂದಿದೇನೊ ತಳುವಿದನೆನ್ನ ಕಂದನೆಂ
ದೆನುತ ಸುಯ್ಯುತ್ತ ಮಱುಗುತ್ತ ಬಸಿಱಿಂ ಹೊಸೆದು ಕೊನೆವೆರಲ ಮುಱಿದುಕೊಳುತ
ತನುವ ಮಱೆದಡಿಗಡಿಗೆ ಹೊಱಗನಾಲಿಸಿ ಮತ್ತೆ
ಮನೆಯೊಡತಿಗಂಜಿ ಕೆಲಸವನು ಮಾಡುತ್ತಿಪ್ಪ
ವನಿತೆಗಾದಾಪತ್ತನಾಲಿಸದೆ ಕೆಟ್ಟು ಧಟ್ಟಿಸುವರದನೇನೆಂಬೆನು

ಬಂದಿರನಲೇ ಎಂದು ಹೊಱವಟ್ಟೊಡೋಡಿದಪ
ಳೆಂದೆಂಬರೊಯ್ಯನೞುತಿರಲಮಂಗಳಗರೆದ
ಳೆಂದೆಂಬರೊಳಗೊಳಗೆ ಮಗನ ಗುಣಮಂ ಹಲುಬುತಿರಲು ಬೈದಪಳೆಂಬರು
ನಿಂದು ಬೆಱಗಾಗಿ ಮಱೆದಿರೆ ಕೆಲಸಗಳ್ಕೆಯಿವ
ಳೆಂದೆಂಬರೊಮ್ಮೆ ಬಿಸುಸುಯ್ಯೆ ಜೀಸತ್ತಳಿವ
ಳೆಂದೆಂಬರಂದು ಬೈವರು ಬೈದು ಬಡಿವರಾಮನೆಯವರು ಮಾನಿನಿಯನು

ಒಳಗುಡಿದ ನಾರಾಚದೇಱಿಸಂದದಿ ಹೊಱಗ
ಬಳಸದೊಳಗೊಳಗೇಗುವಾವಗೆಯ ಶಿಖಿಯಂತೆ
ಕಳೆಗೊಂಡ ಹಗೆಗಳೊಳಗಣ ಮುಳಿಸಿನಂದದಿಂ ಮನೆಯವರ ಮಾರಿಗಂಜಿ
ಬಳಸಿ ಬಿರಿವೆದೆ ಬಿಕ್ಕುವಕ್ಕೆ ಕಣ್ಗಳೊಳೊಱೆವ
ಜಲ ಸೆರೆಗಳೊಡೆದುಬ್ಬಿ ಬಿಗಿದು ಗಂಟಲಿನ ಮು
ಕ್ಕುಳಿಸಿದಕ್ಕಗಳೆಸೆವ ಸತಿಯೞಲು ಸೀಗೆಯೊಳಗಣ ಬಾಱೆಗೆಣೆಯಾದುದು

ಉರಿವ ಬಿಸಿಲೊಳು ಹಸಿದು ಬಸವೞಿದು ಬಂದು ಕೆಡೆ
ದಿರುತಿಪ್ಪನೋ ಎಂದು ಕೇಱಿಲೊಳು ಮಿಗೆ ಕಟ್ಟು
ತಿರೆ ಹಸುಗಳಿೞಿದು ಕೆಡೆದಿರುತಿಪ್ಪನೆಂದುಃ ಗೊಂದಣಿಯಲ್ಲಿ ಹುಲುಹುಳ್ಳಿಯು
ದೊರಕದಿರೆ ಮನೆಗೆ ಬರಲಂಜಿ ಹೊಱಹೊಱಗಾಡು
ತಿರುತಿಪ್ಪನೋ ಎಂದು ಬೀದಿಯೊಳು ನೋಡಿ ತಡ
ವರಿಸಿ ಕಾಣದೆ ಮಱುಗುತೞಲಿಂದ ಮನದೊಳಗೊಳಗೆ ಸತ್ತು ಹುಟ್ಟುತಿರ್ಪಳು

ಅಡವಿಯೊಳು ಹೊಲಬುಗೆಟ್ಟನೊ ಗಿಡುವಿನೊಳಗೆ ಹುಲಿ
ಹಿಡಿದುದೋ ಕಳ್ಳರುಯ್ದರೋ ಭೂತಸಂಕುಲಂ
ಹೊಡೆದುವೋ ನೀರೊಳದ್ದನೊ ಮರದ ಕೊಂಬಿನಿಂ ಬಿದ್ದನೋ ಫಣಿ ತಿಂದುದೋ
ಕಡು ಹಸಿದು ಬಾಯಾಱಿ ನಿಂದಿಪ್ಪನೋ ಎಂದು
ಮಡದಿ ಹಲವಂ ಹಲುಬುತಂಗಳದೊಳಿರೆ ಹೊತ್ತಿ
ಹೊಡಕರಿಸುವೞಲ ಕಬ್ಬೊಗೆಯಂತೆ ಕವಿವ ಕತ್ತಲೆಯೊಳಗೆ ನಿಂದಿರ್ದಳು

ಉಟ್ಟುಱವೆಯುಂ ಉರದ ಮೇಲಕ್ಕೆ ತೆಗೆಯುತ್ತ
ಬಿಟ್ಟ ಹಂಕಣಿದಲೆಯನಡಿಗಡಿಗೆ ತುಱುಸುತ್ತ
ಸಟ್ಟ ದಿಟ್ಟಿಯೊಳು ತನಯನ ಬರವ ನೋಡುತ್ತ ಕದಪಿನೊಳು ಕೆಯ್ಯನಿಟ್ಟು
ಕೆಟ್ಟೆನಿನ್ನೇಗುವೆನು ಏನ ಮಾಡುವೆ ಮಗನ
ಬಟ್ಟೆಯಂ ನೋಡಿ ಬೆಱಗಾಗುವಿನಿತಕ್ಕೊಡತಿ
ಘಟ್ಟಿಸುವಳೆಂದು ಸಿಡಿಮಿಡಿಗೊಂಡು ಮಱುಗುತ್ತ ನಿಂದು ಬೆಱಗಾಗಿರ್ದಳು

ಬಂದರಂ ಲೋಹಿತಾಶ್ವಾ ! ಎಂದು ಬಟ್ಟೆಯೊಳು
ನಿಂದರಂ ಲೋಹಿತಾಶ್ವಾ ! ಎಂದು ಗಾಳಿ ಗಿಱು
ಕೆಂದೊಡಂ ಲೋಹಿತಾಶ್ವಾ! ಎಂದು ಕರೆಕರೆದು ಬಿಡೆ ಬೀದಿಗಱುವಿನಂತೆ
ಮಂದಮತಿಯಾಗಿರ್ದ ಚಂದ್ರಮತಿಗೊಬ್ಬಸ್ಸೆ
ತಂದಿಂದು ಕೂಡೆ ಹೋಗಿರ್ದು ಕಂಡೆಂ ನಿನ್ನ
ಕಂದನೊಂದುಗ್ರಫಣಿ ತಿಂದು ಜೀವಂಗಳೆದನೆಂದು ಹೇೞಿದನಾಗಳು

ಏಕೆ ಕಚ್ಚಿತ್ತಾವ ಕಡೆಯಾವ ಹೊಲನಕ್ಕ
ಟಾ ! ಕುಮಾರಂ ಮಡಿದ ಠಾವೆನಿತು ದೂರವೆನ
ಲೀ ಕಡೆಯಲೀ ಹೊಲನಲೀ ಮರದ ಕೆಲದ ಹುತ್ತದ ಹುಲ್ಲ ಕೊಯ್ಯೆ ಕೆಯ್ಯ
ನೂಕಿ ಫಣಿಯಗಿಯೆ ಮಡಿದಂ ದೂರವಲ್ಲ ನೀಂ
ಬೇಕಾದೊಡೀಗ ಹೋಗಲ್ಲದಿರ್ದೊಡೆ ಬಟಕ
ನೇಕಭಲ್ಲುಕಜಂಬುಕಂ ಘೂಕವೃಕಗಳೆಱೆಯದೆ ಬಿಡವು ಕೇಳೆಂದನು

ನುಡಿಯುಲರಿದೆನಿಸಿ ಮೇರೆಯು ಮೀಱುವಱಲನಳ
ವಡಿಸಿ ಬಂದೊಡೆಯನಡಿಗಳ ಮೇಲೆ ಕೆಡೆದು ಬಾ
ಯ್ವಿಡುತಡವಿಯೊಳಿನ್ನ ಮಗನಸುಗ್ರಕಾಳೋರಗಂ ಕಚ್ಚಿ ಮಡಿದನೆಂದು
ನುಡಿಯೆ ಲೇಸಾಯ್ತು ಮಡಿದರೆ ಮಡಿದನೆಂದು ಕಾ
ಳ್ಗೆಡೆಯೆ ಬಂಟರಸಟ್ಟಿಯಱಿಸಿರ್ಪೆ ತಂದೆಯೆನೆ
ನಡುವಿರುಳು ಬಂಟರುಂಟೇ ನಿದ್ದೆಗೆಯ್ಯಬೇಕೇೞು ಕಾಡದಿರೆಂದನು

ನರಿಗಳೆಱೆಯದ ಮುನ್ನ ದಹಿಸಬೇಕೈ ತಂದೆ
ಕರುಣಿಸೆನೆ ದುರ್ಮರಣವಟ್ಟ ಶೂದ್ರನನು ಸಂ
ಸ್ಕರಿಸುವವರಾವಲ್ಲ ನಡೆಯೆಂದೊಡಾನಾದೊಡಂ ಹೋಗಿ ಕಂಡು ಮಗನ
ಉರಿಗಿತ್ತು ಬಪ್ಪೆನೇ ಎನೆ ಕೆಲಸಮಂ ಬಿಟ್ಟು
ಹರಿಯದುಳ್ಳುದನ್ನೆದೆ ಮಾಡಿ ಹೋಗೆನಲು ಚೆ
ಚ್ಚರದಿ ಮಾಡುವ ಕಜ್ಜವೆಲ್ಲವಂ ಮಾಡಿ ಹೊಱವಟ್ಟಳೊಯ್ಯನೆ ಮನೆಯನು

ದಟ್ಟೈಸಿ ಮಡಲಿಱುವ ಕಾಳದೊಳು ನಡುವಿರುಳು
ನಟ್ಟ ಮುಳ್ಳುಗಳನೆಡಹಿದ ಕಲ್ಲ ಹಾಯ್ದ ಮರ
ವುಟ್ಟನೇಱಿದ ತೆವರನಿಟಿದ ಕುಟಿಬಿದ್ದ ನಿಡುದರಿಗಳಂ ಹಿಡಿದ ಗಿಡುವ
ಬಿಟ್ಟ ತಲೆಯಂ ಬಿಚ್ಚಿದುಡಿಗೆಯಂ ಮಱೆದು ಗೋ
ಟಿಟ್ಟು ಬಾಯ್ಬಿಟ್ಟು ಹಲುಬುತ್ತ ನಡೆತಂದು ಹುಲು
ವಟ್ಟೆಯೊಳು ಬೆಳೆದ ಹೆಮ್ಮರನ ಮಲಗಿಸಿ ನಿಂದ ಪುಳ್ಳಿಹೊಱೆಯಂ ಕಂಡಳು

ಈಯೆಡೆಯೊಳಿನ್ನಿರದೆ ಮಾಣನೆಂದಳು ಕಂದಿ
ತಾಯಿ ಕರೆದಳು ಮಗನೆ! ಮಗನೇ! ಹರಿಶ್ಚಂದ್ರ
ರಾಯನ ಕುಮಾರಕಾ! ಲೋಹಿತಾಶ್ವಾ! ನಿನ್ನನಾವ ಕಾಡೊಳಕೊಂಡುದೋ
ಓಯೆಂಬುದೇನು ಕಂದಾ! ಬಾಯ ಬಿಡದಿತ್ತ
ಬಾಯೆಂಬುದೇನು ತಂದೆಯೆನ್ನನಲ್ಲದೊಡೆ
ಸಾಯೆಂಬುದೇನುಸಿರದಿರಲೇಕೆ ತರುಣಯೆಂದಟಲಿದಳು ಹಂಬಲಿಸುತ

ತೊಱೆದ ಮಱುಕದ ತವಕದಿಂದತ್ತಲಿತ್ತ ಹರಿ
ಹರಿದು ಕಂಬನಿಯ ಕೈಯಿಂದ ಮುಂಗಾಣದಾ
ತುರದೊಳಲ್ಲಲ್ಲಿ ತಡವರಿಸಿ ಕೆಡೆದೆದ್ದು ಕಟ್ಟಟಲುರಿಯ ಭರದೊಳೊಱಲಿ
ಕರೆಯುತ್ತ ಹಳವಿಸುತ ಹಂಬಲಿಸಿ ಬಾಯ್ಬಿಡುತ
ದೊರೆಗೆಡುತ ಮೊಱೆಯಿಡುತಲಟಲುತ್ತ ಬಟಲುತ್ತ
ಹರಹರ! ಮಹಾದೇವ! ಮಗನ ನುಂಗಿದ ಹುತ್ತದೆಡೆಗೆ ಬಂದಳು ಭರದೊಳು

ವಿಷದ ಹೊಗೆ ಹೊಯ್ದು ಹಸುರಾದ ಮೈ ಮೀಱಿ ನೊರೆ
ಯೊಸರ್ವ ಗಲ್ಲಂ ಕಂದಿದುಗುರ್ಗಳರೆದೆಱೆದಗು
ರ್ವಿಸುವ ಕಣ್ ಹರಿದು ಹುಲುಹಿಡಿದ ಹರಹಿದ ಕೈಗಳುಂಬ ಹೊತ್ತುಣ ಹಡೆಯುಡೆ
ಹಸಿದು ಬೆನ್ನಡರ್ದ ಬಸಿಱರಕಟಕಟ! ಮುರಿದ ಗೋಣ್
ದೆಸೆಗುರುಳಿ ಹುಡಿಹೊಕ್ಕು ಒಱತ ಬಾಯ್ವೆರಸಂದು
ಬಸವಟಿದ ನಿಜಸುತನ ಕಂಡಳು ಹರಿಶ್ಚಂದ್ರನರಸಿ ಹುತ್ತದ ಮೊದಲೊಳು

ಕಂಡ ಕಾಣ್ಕೆಯೊಳು ಶಿವಶಿವ! ನಿಂದ ನಿಲವಿನಲಿ
ದಿಂಡುಗೆಡೆದಳು ಮೇಲೆ ಹೊರಳಿದಳು ಬಿಗಿಯಪ್ಪಿ
ಕೊಂಡು ಹೊಟ್ಟೆಯನು ಹೊಸೆಹೊಸೆದು ಮೋಱೆಯ ಮೇಲೆ ಮೋಱೆಯಿ
ಟ್ಟೋವದೊಱಲಿ
ಮುಂಡಾಡಿ ಮುದ್ದುಗೆಯ್ದೋರಂತೆ ಕರೆದು ಕರೆ
ದಂಡಲೆದು ಲಲ್ಲೆಗರೆದತ್ತತ್ತು ಬಲವಟಿದು
ಬೆಂಡಾಗಿ ಮೈಮಱೆದು ಜೀವವುಂಟೆಂಬಾಸೆಯಿಂದ ನೋಡಲು ಬಗೆದಳು

ಲಲನೆ ಮೂಗಿನೊಳುಸಿರನಳ್ಳೆಯೊಳು ಹೊಯ್ಲನುಗು
ರೊಳು ರಜವನೆದೆಯೊಳಲ್ಲಾಟವುಂ ಕೈಯು ಮೊದ
ಲೊಳು ಮಿಡುಕನಂಗದೊಳು ನೋವನಕ್ಷಿಯೊಳು ಬೆಳ್ಪಂ ಭಾಳದೊಳು ಬೆಮರನು
ಲಲಿತಕಂಠದೊಳುಲುಕನಂಘ್ರಿಯೊಳು ಬಿಸಿಯುಸಂ
ಗುಲಿಗಳೊಳು ಚಿಟುಕನುಂಗುಟದೊಳರುಣಾಂಬುವಂ
ಸಲೆ ನಾಲಗೆಯೊಳಿಂಪ ರೋಮದಲಿ ಬಲುಹನಾರಯ್ದು ಕಾಣದೆ ನೊಂದಳು

ಹಡೆದೊಡಲು ಹುಡಿಯಾಯ್ತು ಮಗನೆ! ನೀನುಂಟೆಂದು
ಕಡೆಗೆ ಹೆಚ್ಚಿದ ಮನಂ ಹೊತ್ತಿ ಹೊಗೆಯಿತ್ತು ಬಿಡ
ದಡರಿ ನಿಟ್ಟಿಸಿ ನಲಿವ ದಿಟ್ಟಿಕೆಟ್ಟುವು ಸೋಂಕಿ ಪುಳಕಿಸುವ ಕರಣಂಗಳು
ಕಡಿವಡೆದುವೊಸೆದು ಹೆಸರ್ಗೊಳುತಿಪ್ಪ ನಾಲಗೆಯು
ಕುಡಿ ಮುರುಟಿತಡಿಗಡಿಗೆ ನುಡಿಯನಾಲಿಪ ಕಿವಿಯು
ಹಡಿಗೆಟ್ಟುದೆಲೆ ಕಂದ! ಎಂದೆನುತ್ತಿಂದುಮುಖಿ ಮಱುಗಿ ಬಾಯ್ಬಿಟ್ಟಳಂದು

ಸಿರಿಹೋದ ಮಱುಕವನು ನೆಲೆಗೆಟ್ಟ ಚಿಂತೆಯನು
ಪರದೇಶವಂ ಹೊಕ್ಕ ನಾಚಿಕೆಯನಱಿಯದ
ಸ್ವರಮನೆಗೆ ತೊತ್ತಾದ ಭಂಗವನು ನಿಮ್ಮೈಯ್ಯಗಜ್ಞಾತವಾದಱಲನು
ನೆರೆದು ಮನೆಯವರ್ಬೈದೆ ಕರಕರಿಪ ಚಿಂತೆಯನು
ತರಳ! ನಿನ್ನಂ ನೋಡಿ ಮಱೆದು ಪರಿಣಾಮವಂ
ಧರಿಸುತಿರ್ಪೆನ್ನ ಗೋಣಂ ಕೊಯ್ದೆ ಇನ್ನಾರ ನೋಡಿ ಮಱೆದಪೆನೆಂದಳು

ಅತಿಲಜ್ಜೆಗೆಟ್ಟನ್ಯರಾಳಾಗಿ ದುಡಿದು ಧಾ
ವತಿಗೊಂಡು ಧನವನಾರ್ಜಿಸಿ ಹರಿಶ್ಚಂದ್ರ ಭೂ
ಪತಿ ನಮ್ಮ ಬಿಡಿಸುವಾರ್ತದ ಮೋಹದಿಂ ಹಸಿವುತೃಷೆ ನಿದ್ರೆಯುಂ ತೊಱೆದು ಬಂದು
ಸುತನ ಕರೆಯೆಂದೊಡೇನೆಂಬೆನಾವುದ ನೋಡಿ
ಪತಿಯ ಮಱುಕವನು ಮಱೆಹಿಸುವೆನುಗ್ರಾಹಿಗಾ
ಹುತಿಯಾಗಿ ಕೊಟ್ಟೆನೈ ಕಂದನನು ಎಂದಿಂದುಮುಖಿಯುಱಲಿ ಬಾಯ್ಬಿಟ್ಟಳು

ಅರಮನೆಯ ಮಣಿಗೃಹದ ಸೆಜ್ಜೆಯೊಳು ರಿಪುನೃಪರ
ಕರಿದಂತದಿಂ ಕಡೆದ ಕಾಲ ಮಂಚದೊಳಿಟ್ಟ
ವರಹಂಸತೂಲತಲ್ಪದೊಳು ಮಣಿವೆಳಗಿನೊಳು ಸಾಗಿಸುವ ಜೋಗೈಸುವ
ತರುಣಿಯರ ನಡುವೆ ಪವಡಿಸುವ ಸುಕುಮಾರ! ನೀ
ನರವರಿಸದೀ ಕಾಡೊಳಿರುತ ಕತ್ತಲೆಯೊಳಾ
ಸುರದ ಕಲುನೆಲನೊಳೊಬ್ಬನೆ ಪವಡಿಸುವುದುಚಿತವೇ ಕಂದ ಹೇಳೆಂದಳು

ಬಸವ ಪುರಾಣ

ಬಸವೇಶ್ವರನ ಭಕ್ತಿಪ್ರತಿಜ್ಞೆ

ನಿಚ್ಚಲುಂ ಶಿವರಾತ್ರಿಯಂ ಮಾ
ಳ್ಪಚ್ಚರಿಯೆನಿಪ ಭಾಷೆ ಭಕ್ತರ
ನಚ್ಚಶಿವನೆಂದಿಪ್ಪ ಭಾಷೆ ಶಿವೈಕ್ಯರೆಗ್ಗುಗಳ
ಎಚ್ಚರಿಸದಿಹ ಭಾಷೆ ಶರಣರ
ಹೆಚ್ಚುಕುಂದುಗಳಂ ನುಡಿಯದಿಹ
ಸಚ್ಚರಿತ್ರದ ಭಾಷೆಯನುವನು ವಂಚಿಸದ ಭಾಷೆ

ಮೃಡನನಾದೊಡೆಯೊಂದು ಬಾರಿಗೆ
ಕಡಗಿ ಬೇಡದ ಭಾಷೆಯೇನಾ
ದೊಡೆ ಬಯಸಿದೊಡವೆಗಳಸಡಿಯಿಡದೀವುದದು ಭಾಷೆ
ನುಡಿದು ಹುಸಿಯದ ಭಾಷೆ ನೆನಹಿನ
ಗಡಣೆಯೆಂತಂತೋರೆಯಿಲ್ಲದೆ
ನುಡಿವ ಭಾಷೆ ನುಡಿಗಳಹಗೆ ತಾಂ ನಡೆಸುವುದು ಭಾಷೆ

ಛಲವನಿಳಿಯದ ಭಾಷೆ ಭಕ್ತರ
ಸಲಿಗೆಯಂ ಸಲಿಸುವುದು ಭಾಷೆಯ—
ಚಲಿತ ದಾಸೋಹವನವಿರತಂ ಮಾಡುವುದು ಭಾಷೆ
ನಲಿದು ಕನಸಿನೊಳಂ ಪಿನಾಕಿಗೆ
ಗೆಲವನೀಯದ ಭಾಷೆ ಭಕ್ತರು-
ಗಳಿಗೆ ಗೆಲವಂ ಕೊಟ್ಟು ತಾ ಶರಣೆಂಬುದದು ಭಾಷೆ

ನರರುಮಂ ಯಾಚಿಸದ ಭಾಷೆಯಿ
ತರಜನಕೆ ಕೈಮುಗಿಯದದು ನಿ
ಬ್ಬರದ ಭಾಷೆ ಭವೌಘಬಾಧೆಗೆ ಸಿಲುಕದಿಹ ಭಾಷೆ
ಕರಣವಿಷಯಕ್ಕಿಂಬುಗೊಡದ-
ಚ್ಚರಿಯ ಭಾಷೆ ಷಡರಿಗಳಂ ಪರಿ
ಹರಿಪ ಭಾಷೆ ಶಿವೈಕ್ಯಭಕ್ತಿಯನಲರಿಸುವ ಭಾಷೆ

ನೆಟ್ಟನೀಶಾಚಾರವಂ ಮುಂ
ದಿಟ್ಟು ಬೆಳೆಯಿಪ ಭಾಷೆ ತಲೆಪಱಿ
ದಟ್ಟಿಯುಳಿದೊಡೆ ಶರಣೆಸುತ್ತಿಹ ಭಾಷೆ ತಲೆಗಟ್ಟಿ
ಬಿಟ್ಟೊಡಂ ವಂದಿಸುವ ಭಾಷೆಯು
ಮುಟ್ಟಿದೊಡೆ ಹಿಮ್ಮೆಟ್ಟದಗ್ಗದ
ಘಟ್ಟಿಭಾಷೆಯಿವೆಲ್ಲವಂ ತುದಿಮುಟ್ಟಿಸುವ ಭಾಷೆ

ಬಸವರಾಜನ ಘನಚರಿತವಂ
ಬಸವರಾಜನೆ ಬಲ್ಲನಲ್ಲದೆ
ವಶವೆ ಯಾರಿಗೆ ಗಣುದಿಸಲು ವಾಙ್ಮನಕಗೋಚರವು
ಅಸಮ ವೀರದ ಪೆಂಪು ಧೈರ್ಯದ
ರಸದ ಸೊಂಪು ವಿವೇಕದಿಂಪು ವಿ
ಕಸಿತಸುಮತಿಯಲಂಪು ಶಾಂತಿಕೆಯರಳ ಪೊಸಕಂಪು

ಜ್ಞಾನವಹ್ನಿಯು ಬಾಗು ಸಾರಾ
ಸೂನ ಭಕ್ತಿತ್ರಿತಯದಾಗು ಸು
ಮಾನಸದ ಬ್ರತಿಗಳಿಗೆ ಲಾಗುವದನ್ಯರಿಗೆ ವೇಗು
ದಾನ ಧರ್ಮ ಖ್ಯಾತಿ ಭಕ್ತ
ಸ್ಥಾನ ಮಧ್ಯಜ್ಯೋತಿ ಸಂತತ
ಸೂನೃತಂಗಳ ಭೂತಿ ಶೈವಾಚಾರಸಂಪ್ರೀತಿ

ಸವಿನಯಂಗಳ ಮೇಟಿ ದಾಸೋ
ಹವನಲರ್ಚುವ ಚೇಟಿ ವೃತ್ಯುವ
ಜವನ ಮಾರಿಯ ದಾಟಿ ವೇದಾಂತಾದಿಗಳ ಪಾಟಿ
ಶಿವನ ಪೊಸ ಕರವಾಳು ಸುಖದನು
ಭವದ ಬಾಳು ವಿವೇಕತತ್ವೋ
ತ್ಸವದ ಸೂಳು ದಯಾಳುಶಂಕರನೊಲುಮೆಯುಳ್ಳಾಳು

ವಸುಧಿಯೊಳು ಸಾಮಾನ್ಯಭಕ್ತನೆ
ಬಸವನೆಂದೆಲ್ಲಾ ಜನಂ ಕೀ
ರ್ತಿಸುತಿರಲು ಪೊಂದೊಂದು ನಿಯಮಾಚರಣೆ ಕುಱುಹಾಗೆ
ಸಸಿನೆ ಘೋರೆಂದಾತನಂ ದ
ರ್ಶಿಸುವ ತವಕದಿ ಬಪ್ಪವರನು-
ಪ್ಸಿಸುವ ನಿಜನೇಮಂಗಳಂ ಸಲೆ ಸಲಿಸಿದಹನೆಂದ

ಆತನಂ ನೋಡಿದೊಡೆ ಸಾಕು ಪು
ನೀತ ಭಕ್ತಿಗುಣತ್ವವಹುದೆಂ
ಬಾತುರದೊಳೆಯ್ತಪ್ಪವರ್ಗಳು ಬಸವತೀರ್ಥಕ್ಕೆ
ಪ್ರೀತಿಯಿಂದೆಯ್ದುವ ಪರುಷೆಯೆನೆ
ಭೂತಳಂ ಬೆಸಲಾದುದೆಂಬ ವಿ
ಖ್ಯಾತಿಯಲಿ ನೆರೆ ತೀವಿ ಸಂದಣಿಸುತ್ತ ಬಪ್ಪವರು

ರಭಸದಿಂದೆವ್ರುಘೇ ವುಘೇ ಚಾಂ
ಗು ಭಲವೆಂಬ ಮಹಾನಿನದದಿಂ
ನಭವದಿರೆ ಘೂರ್ಮಿಸಲು ಬಸವಂ ಭಕ್ತಿಭಂಡಾರಿ
ಶುಭಗಸಜ್ಜನ ಭಕ್ತಿಯುಕ್ತಿ
ಪ್ರಭವಿಸಲು ತವಕದಿನಮಳ ಶಿವ
ವಿಭವದೆಸೆಯಲು ಭಕ್ತಕೋಟಿಯನಿಂತಿದಿರ್ಗೊಳುತ

ಹರಶರಣ ಕರುಣಾಮೃತದ ಮಳೆ
ಸುರಿಯೆ ತೊಪ್ಪನೆ ತೋದು ತೋದೀ-
ಶ್ವರಗಣಾಂಘ್ರಿಜಲದ ಕಡಲೊಳೋಲಾಡಿ ವೋಲಾಡಿ
ಪರಮಭಕ್ತಪ್ರಮುದಿತಾರ್ಥೋ-
ತ್ಕರ ಬಹಳ ನಿಶ್ಚಲ ಸಪರ್ಯಾ
ವಿರತಸಂಪದದಿಂದೊಡಲು ಕರಮುಬ್ಬಿ ಕರಮುಟ್ಟಿ

ದರಹಸಿತಮುಖವಲರಿ ನೋಡು
ತ್ತಿರೆ ತದಾಸ್ವಾದನದೊಳೆ ನಲಿ ನಲಿ
ದುರುತರ ಪ್ರಿಯಪರವಶದಿ ತನ್ನಂ ಮಱೆದು ಮಱೆದು
ಪರಿಪರಿಯೊಳಿಷ್ಟಾರ್ಥರಿಗೆ ವಿ
ಸ್ತರಿಸಿ ತನು ಮಾನಸ ಧನಂಗಳ
ನರಿದಿದೆನಲಿಂತಿತ್ತು ತಾಂ ಹೊಡವಂಟು ಹೊಡವಂಟು

ಶೀಲಸಂಬಂಧಬ್ರತಿಗಳಂ
ಶೀಲಸಂಬಂಧಸ್ಥಿತಿಯೊಳನು
ಕೂಲಭಾವದೊಳಿರಿಸಿಯಿರಿಸಿ ನಿಯಮಿತಶೀಲರನು

ಸ್ಥೂಲವಸ್ತುಗಳಂ ಸಮರ್ಪಿಸಿ
ಲಾಲಿಸುತ್ತಂ ಬಸವರಾಜನು
ಲೋಲಚಿತ್ತದಿ ಭಕ್ತಿರಾಜ್ಯವನಿಂತು ಮಾಡುತ್ತ

ಮೂಱುವಸರದೊಳೋಗರಂಗಳ
ನಾಱುರಸದ ರಸಾಯನಂಗಳ
ನೂಱುದ ಪದಾರ್ಥಂಗಳಂ ಬಾಸಣಿಸಿ ಏವರದಲಿ
ಬೇಱು ಬೇಱುಱು ಕಂಬಿಗಳೊಳಗೆ
ನೇಱು ತಪ್ಪದೆ ಕಳುಹುವನು ಮುಂದ
ವೇಱು ಜಂಗಮವಿದ್ದೆಡೆಗೆ ಶಿವಭಕ್ತಿಭಂಡಾರಿ

ಕೋಳೂರು ಕೊಡಗೂಸಿನ ಕತೆ

ಧಾರುಣೀವಳಯದೊಳೆಸೆವ ಕೋ
ಳೂರೊಳುತ್ತಮ ಶೈವಧರ್ಮಾ
ಚಾರನೊರ್ಬ ಶಿವಾರ್ಚಕಂ ಶಿವದೇವನೆಂಬಾತ
ನಾರಿಯುಂ ತಾನುಂ ಕಪಿಲಗೋ
ಕ್ಷೀರವೊಬ್ಬಳವಂ ಶಿವಂಗವ
ಧಾರೆನುತ್ತರ್ಪಿಸಿ ದಿನಂಪ್ರತಿಯಿಂದೆ ಭಜಿಸುತ್ತ

ಒಂದು ದಿವಸಂ ದೇವಕಾರ್ಯ
ಕ್ಕೆಂದು ನೆರೆಯೂರಿಂಗೆ ಪೋಗುತ
ತಂದೆ ತನ್ನಯ ಕಿಱಯ ಮಗಳಂ ಕರೆದು ಮೈದಡವಿ
ಮಂದಿರದ ಕಾಪಿರಿಸಿ ಮತ್ತಿಂ
ತೆಂದನೆಲ್ಲಿಗೆ ಮಿಸುಕದಿರು ಮನೆ
ಯಿಂದಗಲದಿರು ತರುವಲಿಗಳೊಡನಾಡದಿರು ತಾಯೆ

ನಿರುತವಾದೆಮ್ಮ ಬ್ರತವನಂ
ತರಿಸದೊಬ್ಬಳೇ ಹಾಲನಗಜಾ
ವರನಿವಾಸಕ್ಕೊಯ್ದು ಶಂಭುವಿಗುಣಬಡಿಸು ಕಂಡಾ
ಪರಿವಿಡಿಯ ದಿನವೇಳೆದಪ್ಪಿಸ
ದಿರು ಮಱೆಯದಿರು ನೀನಲಸದಿರು
ತರಳೆ ನಿನ್ನಂ ನಂಬಿ ಹೋದಹೆವಕ್ಕ ಚೆನ್ನಕ್ಕ

ಓಲೆ ಚೌಕುಳಿ ಕಡುಕು ಮೂಕುತಿ
ತಾಲಿ ಕಡಗಂ ಬಣ್ಣಸರವುಂ
ತೋಳಬಂದಿಯೆನಿಪ್ಪ ಚೆಲ್ವಿನ ಬಾಲದೊಡಿಗೆಗಳ
ಬಾಲೆಯುರು ಹಿಡಿದಾಡುವೊಳ್ಳಿಹ
ಕೀಲಬೊಂಬೆಯುನದಱುಡುಗೆಯುಂ
ಬಾಲೆ ತಂದಪೆವೆನುತ ಮನೆಯಿಂದಪ್ಪಯಿಸಿ ಹೋಗೆ

ಇಂತು ವರ ಕೊಡಗೂಸು ಆಗಳೆ
ದಂತಧಾವನಗೆಯ್ದು ಮಿಂದೊಲ
ವಾಂತು ದಣಿಬವನುಟ್ಟು ಭಸಿತವನಿಟ್ಟು ಭಾಳದಲಿ
ಕಾಂತೆ ಮಡಗಿದ ಜನ್ನಿಗೆಯ ಪಾ
ಲಂ ತೆಗೆದು ಚೆನ್ನಾಗಿ ಕಾಸಿದ
ನಂತರದೊಳಾ ತರುಣಿಯೊಬ್ಬಳವಳೆದು ಬಟ್ಟಲಲಿ

ಹಿಡಿದುಕೊಂಡು ಸೆಱಂಗಿನಿಂದಿ
ಮ್ಮಡಿಸಿ ಮುಚ್ಚಿ ಕಡಂಗಿ ಭೋರನೆ
ನಡೆದು ಪೊಕ್ಕಾ ದೇಗುಲದೊಳಿಪ್ಪಭವನಂ ಕಂಡು
ಹೊಡವಡುತ್ತಂ ಬಟ್ಟಲಂ ಮುಂ
ಗಡೆಯೊಳಿಟ್ಟಾರೋಗಿಸೈಯೆ
ನ್ನೊಡೆಯನೇ ಗುರು ಕಲ್ಲಿನಾಥಾ ಎಂದು ಬಿನ್ನೈಸಿ

ಬಂದಿನಿತು ಹಿಮ್ಮೆಟ್ಟಿ ಮಱೆಯಲಿ
ನಿಂದು ಮತ್ತೆಯ್ತಂದು ನೋಡಲು
ಮುಂದೆ ಬಟ್ಟಲು ತರುಣಿ ತಾ ಮುನ್ನಿರಿಸಿದಂತಿರಲು
ಕುಂದಿ ಮನದೊಳು ತಾಪದಿಂ ತನು
ಕಂದಿ ಎಲೆ ನಾ ತಂದ ಪಾಲಂ
ತಂದೆ ನೀನಾರೋಗಿಸದ ಕಾರಣವದೇನಯ್ಯ

ಹಾಲು ಕಾಯವೊ ಪರಿಮಳಿಸವೋ
ಹಾಲು ಕಡುಬಿಸಿಯಾದವೋ ಚಿಲು
ಪಾಲಿವಲ್ಲವೊ ಒಡೆದವೋ ಆರೋಗಿಸುವೊಡಿನ್ನು
ವೇಳೆಯಾಗದೊ ನಿನ್ನ ಮೀಸಲ
ಹಾಲು ಬೇಸರವಾಯಿತೋ ನಾ
ಬಾಲೆಯೆಂದೊಲ್ಲೆಯೊ ತರಲ್ಕಾರಕ್ಕೆ ನೋಡಿದರೋ

ಬಟ್ಟಲಂ ಬೆಳಗೆಸೊ ಮನವ ನಾ
ನಿಟ್ಟಸೋ ಪಾಲಿಂಗೆ ಪಾಲ್ಕೆನೆ
ಗಟ್ಟವೋ ನೀರ್ವೆರಸಿದವೊ ಆರೋಗಿಸುವ ಬುದ್ಧಿ
ಹುಟ್ಟದೋ ಸೀಯಿತ್ತೊ ತುಪ್ಪವ
ನಟ್ಟನೆಂದೋ ಕುಡಿಯಲಱಿಯೋ
ಹೊಟ್ಟೆಗೆಯ್ದವೊ ಮಧುರವಿಲ್ಲವೊ ಹೊತ್ತು ಹೋಯಿತ್ತೋ

ಬೇಕು ಬೇಡೆಂದುಸುರಲೊಲ್ಲೆಯ
ದೇಕೆ ಪಾಲಂ ಕುಡಿಯೆ ಕರೆಯಲು
ಮೂಕನೇ ಮಾರ್ನುಡಿಯೆ ನೀಂ ದಿಟವಾಗಿ ಹಸಿಯದೊಡೆ
ಓಕರಿಸದೊಕ್ಕುಡಿತೆಗೊಂಡೊಡೆ
ಸಾಕು ಮಿಕ್ಕಿನ ಹಾಲಸಿರಿಸು ಪಿ
ನಾಕಿ ತಹೆನೇ ಉಂಬೊಡಟ್ಟೋಗರವನೊಂದಿನಿತ

ಮನೆಯ ಬೋನದ ಭಾಜನದೊಳಿನಿ
ದೆನಿಪ ಹೂರಿಗೆ ಘಾರಿಗೆಗಳಂ
ನಿನಗೆ ಮೆಲುವೊಡೆ ತಂದು ಕೊಡುವೆನು ಕಳುಹು ನೀನೆನ್ನ
ಮನಕೆ ಬಂದೊಡೆ ತುಪ್ಪವದೆ ನೆಲ
ಹಿನ ಗಡಿಗೆಯಲಿ ಮಡಗಿ ಬೇಕಾ
ದನಿತನಾದೊಡೆ ತಂದಪೆಂ ನಿನಗಿಷ್ಟವೇಂ ಪೇಳು

ತಂದುಕೊಡುವರು ನಾಳೆಯೆಮ್ಮಯ
ತಂದೆತಾಯಿಗಳೆನಗಿವೆಲ್ಲವ
ತಂದುಕೊಡುವೆನು ನಾ ನಿನಗೆ ಹುಸಿಯಲ್ಲ ನಿನ್ನಾಣೆ
ಮುಂದೆ ಬಟ್ಟಲೊಳಿರ್ದ ಪಾಲಂ
ಚಂದವಳಿಯದ ಮುನ್ನ ಕುಡಿಯೈ
ಇಂದುಧರ ಎನ್ನೊಡನೆ ನುಡಿಯದೆ ಕಾಡಲೇಕೆನುತ

ಬಟ್ಟಲಂ ನೋಡುಗುಮಭವನಂ
ದಿಟ್ಟಿಸುಗು ನೆಱೆ ನಂಬಿಸುಗು ಮಱ
ವಟ್ಟು ನಿರ್ಜೀವಿಯು ತೆಱದೊಳಿರ್ದಂತಿರುತ್ತಳುಗು
ದಟ್ಟಿಸುಗು ತೊಪ್ಪನೆ ಕೆಡೆಗು ದನಿ
ಗೊಟ್ಟು ಕರೆದು ಕರಂ ಮುಗಿದು ಹೊಡ
ವಟ್ಟು ಗಿಣ್ಣಲನಂತು ನೂಕುಗು ಮತ್ತೆ ಮುಂದಿಡುಗು

ಮೃಡನಡಿಗೆ ಹೊಡವಡುಗು ಪಾಲಂ
ಕುಡಿಯದಿರ್ದೊಡೆ ನೋಡಿ ಕಡು ಸಿಡಿ
ಮಿಡಿಗೊಳುತ್ತೋರಂತೆ ಚಿಂತಿಸುತಿರ್ಕು ಕೊಡಗೂಸು
ಬಡಮಗುವು ನಾನೆಂದು ಕಾಡುವೊ
ಡೊಡೆಯ ನಿಮ್ಮುವನೇನನೆಂಬೆನು
ಕಡೆಗೆಯಾರೋಗಿಸಿದೊಡಲ್ಲದೆ ಬಿಡೆನು ನಿಮ್ಮಾಣೆ

ಹಾಲನೀಗಳೆ ಕುಡಿಯದಿರ್ದೊಡೆ
ಕೇಳಿ ಎಮ್ಮವರೆನ್ನನಾಗಳೆ
ಬೀಳಸದೆದಸುಗಳೆವರಿನ್ನವರಿಂದಲುಂ ನನಗೆ
ಮೇಲದೆಂತುಂ ಸಾವು ತಪ್ಪದು
ಶೂಲಿ ಚಿತ್ತೈಸಯ್ಯ ಹಿಂದಕೆ
ಕಾಲನಿಕ್ಕುವಳಲ್ಲ ಇಲ್ಲಿಯೆ ಸತ್ತು ಸರಿಯಹೆನು

ಎಂದು ಶಿವನೊಳು ತನ್ನ ತಲೆಯಂ
ನಿಂದು ತಾಟಿಸಿಕೊಳುವನಿತಱಲಿ
ನಂದನೆಯನಾಗಳೆ ಹಿಡಿದು ದರಹಸಿತ ಮುಖನಾಗಿ
ಇಂದುಮೌಳಿ ದಯಾಳು ಭಕ್ತಾ
ನಂದಕರನಘವೈರಿ ಬಾಲಕಿ
ತಂದ ಬಟ್ಟಲ ಹಾಲನೀಂಟಲು ತರುಣಿ ನಗುತಾಗ

ಕಿಱಿಯಳಿವಳೆಂದೆನ್ನುವಂ ನೀಂ
ಬಱಿದೆ ಕಾಡದಿರೆಮ್ಮ ಬೊಪ್ಪಂ
ಗಱಿಹಿಯೆಲ್ಲಾ ನಿನಗೆ ಎನಗಂ ಮತ್ತೆ ಸಂವಾದ
ಮಱೆಯದಿರು ಕಱಕಂಠ ಎನುತಿಂ
ತೊಱಲಿ ಬಟ್ಟಲಸೀಸಿಕೊಂಡೆ
ಜ್ಜಱಿಸಿ ನಿಚ್ಚಂ ಹಾಲನೀಯಲು ಶಿವನವಧರಿಸಲು

ಈ ಪ್ರಕಾರದಿ ಮನೆಗೆ ಹೋಗಿ ದಿ
ನಂಪ್ರತಿಯೊಳಾ ಬಾಲೆಯತ್ಯಂ
ತ ಪ್ರಯತ್ನದಿ ಜಸ್ನಿಗೆಯ ಹಾಲಂ ಕಱೆದು ಕಾಸಿ
ಕ್ಷಿಪ್ರದಿಂದಂ ತಂದುಕೊಡಲಂ
ಬಾಪ್ರವರನುಂ ಕೊಳುತಿರಲು ಚಿ
ತ್ತ ಪ್ರಿಯದೊಳಾ ಬಱಿಯ ಬಟ್ಟಲನ ಬಳೆ ಹಿಡಿತರಲು

ಅತ್ತಲೂರಿಗೆ ಹೋದವರು ತಾ
ವಿತ್ತ ಮನೆಗೆಯಿತರುತಲಿದಿರೊಳು
ತತ್ತರುಣಿಯಂ ಕಂಡು ಪಿತನಾಗ್ರಹಿಸುತಿಂತೆಂದ
ಎತ್ತಲೆಯ್ದಿದೆ ಹಾಲನಿಂತಾ
ಗ್ಗಿತ್ತೆ ತರುವಲಿ ಬಱಯ ಬಟ್ಟಲ
ನೆತ್ತಿಕೊಂಡೆಲ್ಲಿರ್ದು ಬಂದಪೆ ಹೇಳು ಹೇಳೆನಲು

ನೀವು ಹೇಳಿದ ಹಾಂಗೆ ಮನೆಯಿಂ
ದಾವಗಂ ತಂದಣ್ಣೆವಾಲಂ
ತೀವಿ ಬಟ್ಟಲೊಳೊಬ್ಬಳವನಿಂತಳೆದು ಕೊಂಡೊಯ್ದು
ಈವೆನೀಯಲೊಡಂ ಮೃಡಂ ಕಲಿ
ದೇವನಾರೋಗಿಸೆ ನಮಿಸಿ ನಲ
ವೋವಿ ಗಿಣ್ಣಲನೀಸಿಕೊಂಡೆಯಿತಪ್ಪೆ ನಾನೆನಲು

ಕ್ಷೀರವಂ ಸೇವಿಸುವ ನೇಮದ
ನಾರಿಯೆಂದುಂ ಕಾಳುನುಡಿದೆ ವಿ
ಕಾರಿ ತರುವಲಿ ನೀನೆ ಕುಡಿದೆಯೊ ನಿನ್ನ ಸಂಗಡದ
ವಾರಿಗೆಯ ಮಕ್ಕಳಿಗೆ ಕೊಟ್ಟೆಯೊ
ಆರು ಕೊಂಡರು ಹೇಳು ನಡೆವುತ
ದಾರಿಯಲಿ ಕೆಡಹಿದೆಯೊ ಮೈಮಱೆದೆಲ್ಲಿ ಚೆಲ್ಲಿದೆಯೋ

ಅಸಮಮಾಹೇಶ್ವರರನುದ್ದೇ
ಶಿಸಿ ಮಹಾಶಿವಲಿಂಗವಾರೋ
ಗಿಸಿತೆನುತ್ತತಿ ಭಕ್ತಿಯಿಂ ಪ್ರಾರ್ಥಿಸುತ ವಂದಿಸಲು
ಒಸೆದು ತಾನಿಂತಭವನಾರೋ
ಗಿಸುವದಿದು ದುರ್ಲಭವೆನಲ್ಕೀ
ಶಿಶುವಿನಿಂದಾರೋಗಿಪನೆ ಇದು ಹುಸಿಯೆನುತ ಬೈದು

ನಾವಿದಂ ನೋಡುವೆವೆನುತ ಶಿವ
ದೇವನಾ ಮಱುದಿವಸವಬಳೆಯ
ನಾ ವಿಧದೊಳೊಬ್ಬಳವಳೆದು ಪಾಲ್ಬಟ್ಟಲಂ ಕೊಟ್ಟು
ದೇವನಿಳಯಕೆ ಕಳುಹುತಂ ಮೇಣ್
ತಾವು ಹಿಂದೆ ತನೂಜೆ ಮುಂದೆಯು
ಮಾವರನ ಸಮ್ಮುಖಕೆ ನಡೆತಂದಾಗ ನೀಡಲ್ಕೆ

ಕೊಟ್ಟ ಪಾಲಂ ಕಲ್ಲಿನಾಥಂ
ಮುಟ್ಟದಾದನದೇಕೆ ಬಾಲೆಯು
ಘಟ್ಟಿಯುಹ ಮುಗ್ಧ ಸ್ವಭಾವವನಚಳಭಕ್ತಿಯನು
ನೆಟ್ಟನೀ ಲೋಕಕ್ಕೆ ತೋಱಲ್
ಪಟ್ಟಿರಲು ಬಳಿಕನಿತಱಲಿ ಕ
ಣ್ಬಿಟ್ಟು ನೋಡುತ್ತಾಗ್ರಹಿಸುತಂ ತಂದೆಯಿಂತೆಂದ

ಎಲಗೆ ತರುವಲಿ ಮೂಲ ಹಾಲಂ
ಸಲೆಯುಭವನಿಂದೇಕೆ ವೊಲ್ಲನು
ಹಲವ ಗಳಹಿದೆ ಮುಟ್ಟಿದನೆ ಪಾಲ್ ಮೂಸಿನೋಡಿದನೆ
ಮಲಹರಂಗುಂಣಿಸಿದ ಪಾಲಂ
ನಲಿದು ನಿಚ್ಚಂ ಕುಡಿದ ಪಾತಕಿ
ತಲೆಯನಟ್ಟಿಯೊಳೆತ್ತಿ ಬಿಸುಡದೆ ಮಾಣ್ಬೆನೇ ನಿನ್ನ

ಎನ್ನ ಬಾಧೆಯೊಳೆಂತು ಬದುಕುವೆ
ಛಿನ್ನ ಭಿನ್ನಂ ಮಾಡುವೆನು ನಾ
ನಿನ್ನನೆನುತತಿ ಕೋಪದಿಂದಱೆಯಟ್ಟಿಬರೆ ಮುನ್ನ
ಕನ್ನೆಯೊಱಲುತ ಹಾ ಶಿವಾ ಹಾ
ಪನ್ನಗಾಧಿಪಹಾರ ಹಾ ಎನ
ಗಿನ್ನು ಗತಿ ನೀನೊಬ್ಬನೆನುತಂ ಸಾರ್ದಿರಲು ಮುಂದೆ

ಕೈಯ ಬಟ್ಟಲ ಹಾಲಿಗಂ ತಾಂ
ಕೈಯ ನೀಡುತ್ತೀಂಟಿ ಬಾಲಕಿ
ಅಯ್ಯನಂ ಬಿಟ್ಟೋದಱಲೋಹೋ ಅಂಜಬೇಡೆನುತ
ಮೈಯನೊರಸುತ್ತಪ್ಪಿ ಅಭಯದ
ಕೈಯ ನೀಡುತ್ತುದರಮಂ ಬಗಿ
ದೊಯ್ಯನೊಯ್ಯನೆ ತತ್ತರುಣಿಯಂ ಪೊಗಿಸುತಿರಲೊಡನೆ

ಆ ಹೊಗುವಳೀ ಹೊಗುವಳದೆಯಿದೆ
ಹೋಹಳೆಂದತಿ ಶೀಘ್ರದಲಿ ನಿರ್
ಮೋಹದಲಿ ಪಿತನೆಯ್ದಿ ಚಂಡಿಕೆಯಂ ಪಿಡಿಯಲೊಡನೆ
ಆಹ ಶಿಖಿ ಹೊಱಗುಳಿದುದಬಳೆಯು
ದೇಹವಾ ಲಿಂಗದೊಳು ಸಿಕ್ಕಿದು
ದೀ ಹದನನಱದೆಲ್ಲರುಂ ಗುಡಿಗಟ್ಟಿ ಕೊಂಡಾಡೆ

ಪ್ರಕಟವಿದು ಮುಂಗೈಯ ಕಡಗಕೆ
ಮುಕುರವೇತಕೆ ಬೆಳೆವ್ರತಿಹ ಚೆಂ
ಡಿಕೆಯ ಕೂದಲನಾಱುತಿಂಗಳಿಗೊಮ್ಮೆ ಕತ್ತರಿಸಿ
ಅಕುಟಿಲ ಸ್ಫುಟ ಮುಗ್ಧ ಭಕ್ತಿಗೆ
ಸುಕರಮೆನೆ ಕೊಡಗೂಸು ಸೆಗಳ್ವೀ
ಸುಕಥೆಯಂ ಕೇಳ್ದವರಿಗಭಿಮತ ಸೌಖ್ಯವೊಂದುವುದು

ಕುಮಾರವ್ಯಾಸ ಭಾರತ

ಸಂಭವಪರ್ವ

ಪಾಂಡುವಿನ ಮರಣ

ಕೇಳು ಜನಮೇಜಯ ಧರಿತ್ರೀ
ಪಾಲ ಶತಶೃಂಗಾದ್ರಿಯಲಿ ಭೂ
ಪಾಲನಿದ್ದನು ತನ್ನ ವೀರಕುಮಾರಕರು ಸಹಿತ
ವ್ಯಾಳಮೃಗಶಾರ್ದೂಲವನಗಜ
ದಾಳಿಭಯವನು ಪರಿಹರಿಸಿ ಮುನಿ
ಜಾಲಕಾಶ್ರಮದೊಳಗೆ ಸುಖಮಯನಾಗಿ ನೃಪನೆಸೆದ

ಆ ಸಮಸ್ತ ಮುನೀಂದ್ರರೊಡನ
ಭ್ಯಾಸವಾ ದಿವ್ಯಾಶ್ರಮದ ವನ
ವಾಸವಾ ತಪವಾ ಕುಮಾರಪರಾಕ್ರಮಾಲೋಕ
ಆ ಸಮಂಜಸಸತಿಯರಿಬ್ಬರು
ಪಾಸನೆಗಳಾ ವಿಭವಕಿಭಪುರಿ
ಯಾ ಸಮಸ್ತೈಶ್ವರ್ಯವದು ತೃಣವಾಯ್ತು ಭೂಪತಿಗೆ

ಸುತವಿನೋದದ ಸಿರಿಗೆ ದಿವಿಜರ
ಪತಿಯ ಸಿರಿ ತೊತ್ತೆಂದು ವಿಮಳ
ವ್ರತತಪೋಲಕ್ಷ್ಮಿಗೆ ವಿಲಾಸಿನಿ ಮುಕ್ತಿವಧುವೆಂದು
ಯತಿಪದಾಂಬುಜನಿತ್ಯ ಸೇವಾ
ಸತಿಗೆ ದಾಸಿ ಜಗತ್ತ್ರಯಾಧಿ
ಪ್ಥಿತಪದವಿಯೆಂದುಬ್ಬಿದನು ಕಲಿ ಪಾಂಡು ವಿಪಿನದಲಿ

ತೆಗೆದುದಗ್ಗದ ತಂಪು ನದಿಸರ
ಸಿಗಳ ತಡಿಯಲಿ ಹೆಜ್ಜೆಯಾದುವು
ಹಗಲು ಹಂಸೆಯು ನೆಳಲುಗೊಂಡುದು ಬಯಸಿ ಹಿಮಜಲವ
ಸೊಗಸಿದುವು ನೆಳಲುಗಳು ದೂರಕೆ
ಸೆಗಳಿಕೆಗಳಗ್ಗಳಿಸೆ ತಂಗಾ
ಳಿಗೆ ವಿಹಾರಿಸಿ ಮೆಯ್ಯುತೆತ್ತುದು ಕೂಡೆ ಜನನಿಕರ

ಯೋಗಿಗೆತ್ತಿದ ಖಡ್ಗಧಾರೆ ವಿ
ಯೋಗಿಗೊಡ್ಡಿಹ ಸಬಳ ಸಕಳವಿ
ರಾಗಿಗಳ ಹೆಡತಲೆಯ ದಡಿ ಸೃಷ್ಟಿಕರಿಗಲಗಣಸು
ಆಗಮಿಕರೆದೆಶೂಲ ಗರ್ವಿತ
ರಾಗಿಗಳ ಗಳನಾಳವಗ್ಗದ
ಭೋಗಿಗಳ ಕುಲದೈವವೆನಿಸಿತು ಕುಸುಮಮಯಸಮಯ

ಮೊಱೆವ ತುಂಬಿಯ ಗಾಯಕರ ನಯ
ಸರದ ಕೋಕಿಲಪಾಠಕರ ಬಂ
ಧುರದ ಗಿಳಿಗಳ ಪಂಡಿತರ ಮಾಮರದ ಕರಿಘಟೆಯ
ಅರಳಿದಬುಜದ ಸತ್ತಿಗೆಯ ಮಂ
ಜರಿತಕುಸುಮದ ಚಾಮರದ ಭಾ
ಸುರವಸಂತನೃಪಾಲ ನಡೆದನು ಪಾಂಡುವಿನ ಮೇಲೆ

ಫಲಿತಚೂತಕದಿಂಪುಗಳ ನೆಱೆ
ತಳಿತಶೋಕೆಯ ಕೆಂಪುಗಳ ಪರಿ
ದಳಿತಕಮಲದ ಕಂಪುಗಳ ವನವನದ ತಂಪುಗಳ
ಎಳೆಲತೆಯ ಸುಂಪುಗಳ ನವಪರಿ
ಮಳದ ಪವನನ ಸೊಂಪುಗಳ ವೆ
ಗ್ಗಳಿಕೆ ಝಳಪಿಸೆ ಹೊಯ್ದು ಸೆಳೆದುದು ಜನದ ಕಣ್ಮನವ

ಪಸರಿಸಿತು ಮಧುಮಾಸ ತಾವರೆ
ಯೆಸಳ ದೋಣಿಯ ಮೇಲೆ ಹಾಯ್ದುವು
ಕುಸುಮಶರನುಬ್ಬರದ ತೊಱೆಯನು ಕೂಡಿ ತುಂಬಿಗಳು
ಒಸರ್ವ ಕರದಂಡದ ಪರಾಗದ
ಕೆಸರಲದ್ದವು ಕೊಂಚೆಗಳು ಹಗ
ಲೆಸೆದ ದಂಪತಿವಕ್ಕಿ ಸಾರಸರಾಜ ಹಂಸೆಗಳು

ಜಗವ ಹೊರೆದುದು ಬಹಳ ಪರಿಮಳ
ದೊಗುಮಿಗೆಯ ತಂಗಾಳಿ ವನವೀ
ಧಿಗಳ ವಳಯವ ಹೊರೆದು ಮರುಳುವರಿಲ್ಲ ವಿರಹಿಗಳು
ಹೊಗುವ ಕಾಮನ ದಳದ ಚೂಣಿಯು
ಸೊಗಡು ಹೊಯ್ದೊಡೆ ಕೈದುವಿಕ್ಕಿತು
ವಿಗಡಮುನಿಜನಕೇನಸೆಂಬೆನು ನೃಪತಿ ಕೇಳೆಂದ

ಆ ವಸಂತದೊಳೊಮ್ಮೆ ಮಾದ್ರೀ
ದೇವಿ ವನದೊಳಗಾಡುತಿರ್ದಳು
ಹೂವಿನಲಿ ಸರ್ವಾಂಗಶೃಂಗಾರದ ವಿಳಾಸದಲಿ
ಆವಳಿವಳೂರ್ವಶಿಯೊ ರಂಭೆಯೊ
ದೇವವಧುಗಳ ಸುಟಿವೊ ತಾಸಿಂ
ನಾವ ಚಲುವಿಕೆ ಶಿವ ಶಿವಾ ಯೆಂದರಸ ಬೆಱಗಾದ

ತಾಗಿದುದು ಕಾಮನ ಶರನಿಕರ
ಲಾಗು ವೇಗದಲೆಂತುಟೋ ತೆಗೆ
ಪೂಗಣೆಗಳೈದಲ್ಲ ರೋಮಗಳೆಲ್ಲ ಬಾಣಮಯ
ವಾಗೆ ನಟ್ಟವು ಕಣೆಗಳೆಂಬವೊ
ಲಾಗಱಿವನಟಿಪಿದನು ಪ್ರಜ್ಞಾ
ಸಾಗರಂಗಳು ಮಧ್ಯಕಟಿಜಾನ್ವಂಘ್ರಿಮಿತವಾಯ್ತು

ಮಱೆದು ಹಿಂದೆಲ್ಲವನು ಕುಂತಿಯ
ನಱಿಯಲೀಯದೆ ಮೆಲ್ಲಮೆಲ್ಲನೆ
ತುಱುಗಿದೆಳೆಲತೆವನದಲಾಡುವ ಸತಿಯ ಸಾಱಿದನು
ಸೆಱಗ ಹಿಡಿದರೆ ಬೇಡಬೇಡೆಂ
ದೆಱಗಿದಳು ಚರಣದಲಿ ತರುಣಿಯ
ತುಱುಬ ಹಿಡಿದೆತ್ತಿದನು ಹೆಣಗಿದನೊಡನೆ ಝೋಂಪಿಸಿದ

ಕೊಂದೆಲೈ ಕಡು ಪಾಪಿ ಮಱೆದಾ
ಹಿಂದೆ ಮಾಡಿದ ವೃತ್ಯವನು ಮುನಿ
ಯೆಂದ ನುಡಿ ಹೊಳ್ಳಹುದೆ ಸುಡು ದುರ್ವಿಷಯಕೆಳಸಿದೆಲೈ
ಬೆಂದುದೇ ನಿನ್ನಱಿವು ಧೈರ್ಯವ
ನಿಂದು ನೀಗಿದೆ ಯಕಟ ನಿನ್ನಯ
ನಂದನರಿಗಾರುಂಟೆನುತ ಹೆಣಗಿದಳ ಲಲಿತಾಂಗಿ

ಕೊಂಬುದೇ ಬಯಲಱಿತಗಿಱಿತದ
ಡೊಂಬಿನಾಗವನೀತಿಗೀತಿಯು
ಶಂಬರಾರಿಯ ಸಬಳವಲ್ಲಾ ಬೇಗೆ ಮೋಹಿದುದು
ತುಂಬಿದೊಡೆ ಮಗುಚಿದೊಡೆ ಮಱುಮೊನೆ
ಗೊಂಬುದೆಂಬವೊಲವನಿಪತಿಯೊ
ತ್ರಂಬರದಿ ಹಿಡಿದಬಲೆಯನು ಕೂಡಿದನು ಕಳವಳಿಸಿ

ಅಂಬು ಮಱುಮೊನೆಗೊಂಡುದೆಂಬುದ
ನಿಂಬಿನಲಿ ತಾ ಕಾಣಬಂದುದು
ಬೆಂಬಿಡದೆ ತಾ ಹಿಡಿದನಾಗಲು ಪಾಂಡು ತತ್ಸತಿಯ
ಅಂಬುಜಾಕ್ಷಿಯನವಚಿ ವಿಮಳಾ
ಡಂಬು ಬೇಡೆಲೆ ಯವನಿಪತಿಯೆನೆ
ಯಂಬರವ ಸೆಳೆದಪ್ಪಿ ರಮಿಸಿದ ನೃಪತಿಯುರವಣಿಸಿ

ಆ ಸುಖದ ಝೋಂಪಿಸಲಿ ಮಱೆದವೊ
ಲೋಸರಿಸಿದುದು ವದನ ಕಂಗಳು
ಪೈಸರಿಸಿದವು ತೆಕ್ಕೆ ಸಡಿಲಿತು ದೇಹ ಬಾರಿಸಿತು
ಸೂಸಿದುದು ನಿಟ್ಟುಸುರು ರಾಣೀ
ವಾಸದುರದಲಿ ಕದಪನಿಟ್ಟು ಮ
ಹೀಶನೊಱಗಿದ ಹದನ ಕಂಡಳು ಮಾದ್ರಿ ಭೀತಿಯಲಿ

ಅಕಟ ಪಾಂಡುಮಹೀಶ ವಿಷಕ
ನ್ನಿ ಕೆಯನೆನ್ನನು ಮುಟ್ಟಿದೈ ಬೇ
ಡಕಟ ಕೆಡಿಸದಿರೆಂದೆನೇ ತಾನಱಿಯನೇ ಹದನ
ಪ್ರಕಟ ಕುರುಕುಲತಿಲಕರನು ಬಾ
ಲಕರನಾರಿಗೆ ಕೊಟ್ಟೆ ತನ್ನೊಡ
ನಕಟ ಮುನಿದೈ ಮಾತನಾಡೆಂದೊದಱಿದಳು ಮಾದ್ರಿ

ಏನಿದೆತ್ತಣ ರಭಸ ಮಾದ್ರೀ
ಮಾನಿನಿಯು ಹಾ ರಾಯನಾವೆಡೆ
ಹಾನಿ ಹಿರಿದುಂಟಱಿವೆನಂಗಸ್ಪಂದಶಕುನದಲಿ
ಏನು ಮಾರಿಯೊ ಶಿವ ಶಿವಾ ಯೆನು
ತಾ ನಿತಂಬಿನಿ ಗಾಢಗತಿಯಲಿ
ಕಾನನದೊಳೈತಂದಳಾಕೆಯ ಸರದ ಬಟವಿಡಿದು

ಕಂಡಳಿವಳಿಬ್ಬರನು ಥೊಪ್ಪನೆ
ದಿಂಡುಗೆಡೆದಳು ಮೂರ್ಛೆಯಲಿ ಮಱ
ಗ್ಗೊಂಡುದೆಚ್ಚರು ಮಾದ್ರಿಯೊಳು ಹಲುಬಿದಳು ಗೋಟಿಡುತ
ಚಂಡಿಕೆಗಳಲ್ಲಾಡೆ ಹರಿದರು
ಪಾಂಡುನಂದನರೈವರೀತನ
ಕಂಡು ಹಾಯೆಂದೊಱಲಿ ಹೊರಳಿದರವನಿಪನ ಮೇಲೆ

ಸಭಾಪರ್ವ

ದ್ರೌಪದಿ ಮಾನಭಂಗ

ಹೇಟಲೇನದನವರು ರಚಿಸಿದ
ಬೇಳುವೆಯನಾ ಶಕುನಿಯೊಡ್ಡಿದ
ಕಾಲುಕಣ್ಣಿಯೊಳಾರು ಬೀಟರು ನೃಪತಿ ನಿಮಿಷದಲಿ
ಬೀಟುಕೊಟ್ಟನು ತನ್ನನಾ ಜನ
ಜಾಲವಿದ್ದುದು ಬಿಗಿದ ಬೆಱಗಿನೊ
ಳಾಲಿಸುತ್ತಿರೆ ಜೀಯ ಧನವೇನೆಂದನಾ ಶಕುನಿ

ಎಲವೊ ಸೌಬಲ ಸಾಕಿದೊಂದೇ
ಹಲಗೆಯಲಿ ಸರ್ವಸ್ವವನು ತಾ
ನಿಳುಹುವೆನು ನೀಲಾಲಕಿಯನೊಡ್ಡುವೆನು ದ್ರೌಪದಿಯ
ಉಟಿದ ಧನವೆಮ್ಮೈವರಿಗೆ ನಿ
ಶ್ಚಲಿತವಿದು ಹೂಡೆನಲು ಹರುಷದ
ಲಳಿಯ ಚೌಪಟಮಲ್ಲ ಸಾರಿಯ ಸಾಲ ಜೋಡಿಸಿದ

ಆಡಿದನು ಯಮಸೂನು ಮಿಗೆ ಹೋ
ಗಾಡಿದನು ಮನುಮಥನ ಖಾಡಾ
ಖಾಡಿಖಾತಿಯನಕಟ ಮದನನ ಮಂತ್ರದೇವತೆಯ
ಕೂಡೆ ತಿವಿದನು ಕಟ್ಟಿದನು ಕಳಿ
ದೋಡಿಸಿದ ಸಾರಿಗಳ ಸೋಲದ
ಝಾಡಿಯಲಿ ಚಿತ್ರಿಸಿದನರಸನ ಚಿತ್ತಭಿತ್ತಿಯಲಿ

ಬೆಱಗು ಬಲಿದುದು ಮನದ ಮಿಡುಕಿನ
ಮುಱುಕ ಮುಂದಲೆಗೊಟ್ಟುದಱುವಿನ
ಸೆಱಗು ಹಾಱಿತು ಲಜ್ಜೆ ಬೆಗಿತು ಬಿಟ್ಟ ಬೀದಿಯಲಿ
ಉಱುಬಿತಪದೆಸೆ ರಾಜ್ಯಲಕ್ಷ್ಮಿಯ
ತುಱುಬು ಕೈದೊಳಸಾಯ್ತು ಹಗೆಗಾ
ನಱುಯೆನರಸನ ಚಿತ್ತವೃತ್ತಿಯ ಭಾವಭಂಗಿಯಲಿ

ವಿದುರ ಬಾರೈ ನಮ್ಮ ವಶ ದ್ರೌ
ಪದಿಯ ಕರೆ ಬೆಸಗೊಂಬ ತೊತ್ತಿರ
ಸದನದಿಚ್ಛೆಯೊ ರಾಣಿವಾಸದ ಮನೆಯುಪೇಕ್ಷಿತವೊ
ಬೆದಱಬೇಡಿನ್ನಬುಜಮುಖಿಗಾ
ವುದು ಮನೋರಥವೇನು ಹದನೆಂ
ಬುದ ಲತಾಂಗಿಯು ಕರೆಸಿಯೆಂದನು ಕೌರವರ ರಾಯ

ಸಿಡಿಲ ಪಟ್ಟಣಗಟ್ಟಿ ಶಾಖವ
ಗೊಡುವರೇ ಹರನೇತ್ರವಹ್ನಿಯೊ
ಳಡಬಳವ ಸುಡಬಗೆವರೆ ಮರುಳೇ ಮಹಿಪತಿಯೆ
ಹೆಡತಲೆಯ ತುಱಿಸುವರೆ ಹಾವಿನ
ಹೆಡೆಯೊಳಕಟಾ ಪಾಂಡುಪುತ್ರರ
ಮಡದಿ ತೊತ್ತಹಳೇ ಶಿವಾ ಯೆಂದಬಲಿದನು ವಿದುರ

ಕಾಳಕೂಟದ ತೊಱೆಗಳಲಿ ಜಲ
ಕೇಳಿಯೇ ಕಾಲಾಂತಕನ ದಂ
ಷ್ಟ್ರಾಳಿಯಲಿ ನವಿಲುಯ್ಯಲೆಯ ನೀವಾಡಲಾಪಿರಲ
ಕಾಲರುದ್ರನ ವಿಲಯನಾಟ್ಯದ
ಕೇಳಿಕೆಗೆ ನೀವರ್ತಿಕಾಱಱೆ
ಹೋಲದೈ ಶಿವ ಯೆನುತ ಕಂಬನಿದುಂಬಿದನು ವಿದುರ

ಇವನವರ ಬಹಿರಂಗಜೀವ
ವ್ಯವಹರಣೆಯಾತನು ವೃಥಾ ನಾ
ನಿವನ ಕೆಣಕಿದೆನಕಟ ಬೋಧಭ್ರಾಂತಬಾಹಿರನ|
ಇವನಿರಲಿ ಬಾ ಪ್ರಾತಿಕಾಮಿಕ
ಯುವತಿಯನು ಕರೆ ಹೋಗು ನೀನೆನ
ಲವ ಹಸಾದವ ಹಾಯ್ಕಿ ಬಂದನು ದೇವಿಯರ ಮನೆಗೆ ||

ತಾಯೆ ಬಿನ್ನಹವಿಂದು ನಿಮ್ಮಯ
ರಾಯ ಸೋತನು ಜೂಜಿನಲಿ ಕುರು
ರಾಯ ಗೆಲಿದನು ಕೋಶವನು ಕರಿತುರಗರಥಸಹಿತ
ನೋಯಲಾಗದು ಹಲವು ಮಾತೇ
ನಾ ಯುಧಿಷ್ಠಿರನೃಪತಿ ಸೋತನು
ತಾಯೆ ಭೀಮಾರ್ಜುನನಕುಲಸಹದೇವ ನೀವ್‌ಸಹಿತ

ಅರಳಿದಂಬುಜವನಕೆ ಮಂಜಿನ
ಸರಿಯು ಸುರಿವಂದದಲಿ ಸುಗ್ಗಿಯ
ಸಿರಿಯ ಹೊಸಬೆಳುದಿಂಗಳನು ಬಲುಮುಗಿಲು ಕವಿವಂತೆ
ಚರನ ಬಿನ್ನಹಕರಸಿ ಮೊದಲಾ
ಗಿರೆ ಸಮಸ್ತಸಖೀಜನದ ಮುಖ
ಸರಸಿರುಹ ಬಾಡಿದುದು ಮುಸುಕಿತು ಮೌನಮಯಜಲದ

ದೂತ ಹೇಳ್ಳೈ ತಂದೆ ಜೂಜನ-
ಜಾತರಿಪುವಾಡಿದನೆ ಸೋತನೆ
ಕೈತವದ ಬಲೆಗಾಱರವದಿರು ಶಕುನಿಕೌರವರು
ದ್ಯೂತದಲಿ ಮುನ್ನೇನನೊಡ್ಡಿಯೆ
ಸೋತನೆನ್ನನು ಶಿವ ಶಿವಾ ನಿ
ರ್ಧೂತಕಿಲ್ಬಿಷನರಸನೆಂದಳು ದ್ರೌಪದೀದೇವಿ

ಅಹುದು ತನ್ನನೆ ಮುನ್ನ ಸೋತನು
ಮಹಿಳೆಗೊಡ್ಡಿದೆನೆಂದು ನಿಮ್ಮನು
ಮಹಿಪ ಸೋತನು ತಾಯೆ ಬಿಜಯಂಗೈಯ್ಯಬೇಹುದೆನೆ
ವಿಹಿತವಿದು ಮಾನುಷವೆ ದೈವದ
ಕುಹಕವೈ ಸಲೆ ಮಗನೆ ತಾನೇ
ಬಹೆನು ನೀ ಹೋಗೊಮ್ಮೆ ಹೇೞು ಮಾತನಾ ಸಭೆಗೆ

ಜೀಯ ದೇವಿಯರೆಂದಮಾತಿದು
ರಾಯ ಮುನ್ನವೆ ತನ್ನ ಸೋತಬಳಿ
ಜಾಯತಾಕ್ಷಿಯ ಬಟಿಕ ಸೋತೊಡೆ ಧರ್ಮಸೂಕ್ಷ್ಮದಲಿ
ರಾಯಸಭೆಯಲಿ ಹಿರಿಯರಱಿದಿದ
ಱಾಯತವ ಹೇಟಿದರೆ ಬಹೆನೆಂ
ದಾ ಯುವತಿ ಬಿನ್ನಹವ ಮಾಡಿದಳೆಂದು ಕೈಮುಗಿದು

ತಮ್ಮ ಬಾರೈ ಹೋಗು ನೀ ದಿಟ
ನಮ್ಮವರೆ ಹಿಡಿದೆಳೆದು ತಾ ನೃಪ
ರೆಮ್ಮ ಕಿಂಕರರೈವರಿವರಿದ್ದೇನ ಮಾಡುವರು
ತಮ್ಮ ಕರ್ಮವಿಪಾಕಗತಿ ತಮ
ತಮ್ಮನೆ ಕಾಡುವುದು ಧರ್ಮದೊ
ಳೆಮ್ಮ ಕಾರಣವಲ್ಲ ನೀ ಹೋಗೆಂದು ನೇಮಿಸಿದ

ಗಾಳಿಯಳ್ಳಿಯ ನಿಱಿಯಲಗ್ನಿ
ಜ್ವಾಲೆಯಲಿ ತಡೆಯುವೆ ಕಡುಹಿನ
ಕಾಳಕೂಟದ ನದಿಗೆ ನಂಜಿನ ಹೊನಲು ಬೆಱಸಿತಲೆ
ವಾಳೆಯುವೆ ದುಶ್ಶಾಸನನು ಜಗ
ದೂಟಿಗದ ದುಱುದುಂಬಿ ಕುರುಪತಿ
ಮೇಲೆ ನೇಮಿಸಲುಚಿತಗೈವನೆ ಭೂಪ ಕೇಳೆಂದ

ಹರಿದನವ ಬೀದಿಯಲಿ ಬಿಡುದಲೆ
ವೆರಸಿ ಸತಿಯರಮನೆಗೆ ಬಾಗಿಲ
ಚರರು ತಡೆದರೆ ಮೆಟ್ಟಿದನು ತಿವಿದನು ಕಠಾರಿಯಲಿ
ತರುಣಿಯರು ಕಂಡಂಜಿ ವೊಕ್ಕರು
ಸರಸಿಜಾಕ್ಷಿಯ ಮಱೆಯನಾ ಖಳ
ನುರುವಣಿಸಿದನು ರಾಹು ತಾರಾಧಿಪನ ತಗುಱ್ವಂತೆ

ಬಂದನವನಬುಜಾಕ್ಷಿಯಿದಿರಲಿ
ನಿಂದನೆಲೆಗೇ ಗರುವತನವಿದು
ಹಿಂದೆ ಸಲುವುದು ಸಲ್ಲದಿದು ಕುರುರಾಜಭವನದಲಿ
ಇಂದು ಮೆಱೆವರೆ ನಮ್ಮ ತೊತ್ತಿರ
ಮುಂದೆ ಮೆಱೆ ನಡೆ ಮಂಚದಿಂದಿಳಿ
ಯೆಂದು ಜಱಿದನು ಕೌರವಾನುಜನಾ ಮಹಾಸತಿಯ

ಜನಪನನುಜನು ನೀನೆನಗೆ ಮೈ
ದುನನಲಾ ತಪ್ಪೇನು ಯಮನಂ
ದನನು ಸೋಲಲಿ ತನ್ನ ಪ್ರಶ್ನೆಗೆ ಕೊಡಲಿ ಮಱುಮಾತ
ಅನುಜ ಕೇಳೈ ಪುಷ್ಪವತಿಯಾ
ನೆನಗೆ ರಾಜಸಭಾ ಪ್ರವೇಶನ
ವನುಚಿತವಲೇ ಹೇಳೆನಲು ಖಳರಾಯ ಖತಿಗೊಂಡ

ಎಲ್ಲಿಯದು ದುಷ್ಪ್ರಶ್ನೆ ಮಱುವಾ
ತೆಲ್ಲಿಯದು ನೀ ಪುಷ್ಪವತಿಯಾ
ಗಲ್ಲಿ ಫಲವತಿಯಾಗು ನಡೆ ಕುರುರಾಜಭವನದಲಿ
ಖುಲ್ಲರೈವರು ತಮ್ಮ ಸೋತರು
ಬಲ್ಲವಿಕೆಯುಚಿತವನು ಮೌಳಿಯ
ನಲ್ಲಿ ತೋಱಾ ಯೆನುತ ತಪ್ಪಿದನಹಹ ಸಿರಿಮುಡಿಗೆ

ಆ ಮಹೀಶಕ್ರತುವರದೊಳು
ದ್ದಾಮ ಮುನಿಜನರಚಿತಮಂತ್ರ
ಸ್ತೋಮ ಪುಷ್ಕರ ಪೂತ ಪುಣ್ಯಜಲಾಭಿಷೇಚನದ
ಶ್ರೀಮುಡಿಗೆ ಕೈಯಿಕ್ಕಿದನು ವರ
ಕಾಮಿನೀನಿಕುರುಂಬವಕಟಕ
ಟಾ ಮಹಾಸತಿ ಶಿವ ಶಿವಾ ಯೆಂದಂದೊದಱಿತಲ್ಲಲ್ಲಿ

ಕೆದಱಿದುವು ಸೊಸಕದ ಮುತ್ತುಗ-
ಳುದುರಿದುದು ಸೀಮಂತಮಣಿಗಳ
ಹೊದಱು ಮುಱಿದುದು ಕರ್ಣಪೂರದ ಮೌಕ್ತಿಕಾವಳಿಯು
ಸುದತಿಯರು ಗೋಟಿಡುತ ಬರೆ ಮೆ
ಟ್ಟಿದನು ಪಾತಕಿ ಕಾಲೊಳಡ್ಡಬಿ
ದ್ದುದು ಸಖೀಜನವೆಳೆದು ಝಾಡಿಸಿ ಜಱಿದು ಜೋಂಪಿಸಿದ

ಮಣಿದ ತನುವಿನ ವೇಗಗತಿಯುಲಿ
ಝಣಝಣಿತನೂಪುರದ ರವ ಕಂ
ಕಣದ ಧ್ವನಿ ಕೇವಣದ ಹೊಂಗಿಱುಗೆಜ್ಜೆಗಳ ರಭಸ
ಗಣಿಕೆಯರ ಕೆಳದಿಯರ ಹಾಹಾ
ರಣಿತಕಿವು ನೆರವಾದುವಾ ಪ
ಟ್ಟಣವ ತುಂಬಿತು ಶೋಕರಸವೇನೆಂಬೆನದ್ಭುತವ

ಹಡಪದವರಾ ಸೀಗುರಿಯ ಕ
ನ್ನಡಿಯುವರು ಮೇಳದ ವಿನೋದದ
ನುಡಿ ನಗೆಯ ಸಖಿಯರು ಪಸಾಯಿತೆಯರಾಪ್ತದಾಸಿಯರು
ಒಡನೆ ಬಂದರು ಕಂಬನಿಯ ಬಿಡು
ಮುಡಿಯ ಹಾಹಾರವದ ರಭಸದ
ನಡೆಯುಲಖಿಳವಿಳಾಸಿನಿಯರು ಸಹಸ್ರಸಂಖ್ಯೆಯಲಿ

ನಗೆಮೊಗವನೊಮ್ಮೆಯುಂ ಪಯೋಧರ
ಯುಗವ ನೋಡುವ ಸಖ್ಯದಲಿ ದೃ
ಗ್ಯುಗಳಜಲಬಿಂದುಗಳಿಗಾ ಜಳಬಿಂದು ಸುರಿವಂತೆ
ಒಗುವ ಖಂಡಿತ ಹಾರ ಮುಕ್ತಾ
ಳಿಗಳು ಮೆಱೆದುವು ಮಾನಿನಿಯರು
ಬ್ಬೆಗದ ರೋದನರೌರವದೊಳೈತಂದಳಿಂದುಮುಖಿ

ಬೆದಱುಗಂಗಳ ಬಿಟ್ಟಮಂಡೆಯ
ಹುದಿದ ಹಾಹಾರವದ ತೊಡಕಿದ
ಪದಯುಗದ ಮೇಲುದಿನ ಬೀದಿಯ ಧೂಳಿಧೂಸರವ
ವದನಕಮಲದ ಖಳನ ವಾಮಾಂ
ಗದಲಿ ಬಾಗಿದ ತನುಲತೆಯ ವರ
ಸುದತಿ ಬಂದಳು ರಾಜಸಭೆಗೆ ನೃಪಾಲ ಕೇಳೆಂದ

ವನಜಮುಖಿಯಕ್ಕೆಯನು ದುಶ್ಶಾ
ಸನನ ದುರ್ನೀತಿಯನು ದುರ್ಯೋ
ಧನನ ದುಶ್ಚೇಷ್ಟೆಯನು ಕಂಡೀ ಭೀಮಫಲುಗುಣರು
ಮನದೊಳಗೆ ಕೌರವನ ಕರುಳನು
ತನಿರಕುತದಲಿ ಕುದಿಸಿದರು ನಿಜ
ಜನಿತಕರ್ಮಕ್ರಮವ ನೆನೆವುದನಱಿದನಾ ಭೂಪ

ಹುಬ್ಬಿನಲಿ ನಿಲಿಸಿದನು ಪವನಜ
ನುಬ್ಬಟೆಯನರ್ಜುನನ ವಿಕೃತಿಯ
ನಿಬ್ಬರಾಳಾಪವನು ಧರ್ಮರಹಸ್ಯನಿಷ್ಠೆಯಲಿ
ಹಬ್ಬಿದುದು ಭೀಷ್ಮಂಗೆ ಶೋಕದ
ಮಬ್ಬು ಗುರುಗೌತಮರು ವಿದುರನ
ಖರ್ಬಖೇದಾಂಬುಧಿಯೊಳದ್ದರು ಭೂಪ ಕೇಳೆಂದ

ಇತ್ತಲಬಲೆಯ ವಿಧಿಯ ಕೇಳತಿ
ಮತ್ತನೈ ಧೃತರಾಷ್ಟ್ರಸುತನಾ
ಮತ್ತಗಜಗಾಮಿನಿಯ ಬಿಡಿಸಿದನವನ ಕೈಯಿಂದ
ನೆತ್ತ ಸೋತುದು ನಿನ್ನನೊಡ್ಡಿ ನೃ
ಪೋತ್ತಮನು ಸಲೆ ಮಾರಮಾರಿದ
ನತ್ತೊಡೇನಹುದೆಲೆಗೆ ನಡೆ ತೊತ್ತಿರ ಹಿಂಡ ಹೊಗುಯೆಂದ

ಲಲಿತಬುದ್ಧಿಗಳೀಗ ನೋಡಿರಿ
ಲಲನೆಯನು ಸತಿ ದಿಟ್ಟೆಯನ್ನದಿ
ರೆಲೆ ಸುಯೋಧನ ಕೇಳು ಸಭೆಯಿದು ದೋಷರಹಿತವಲೆ
ಗೆಲುವುದೆಂತುಟೊ ತನ್ನ ಸೋಲಿನ
ಬಟಿಕ ಸೋತರೆ ಧರ್ಮಗತಿಯನು
ತಿಳಿದು ಹೇಟಲಿ ಸತ್ಸಭಾಸದರೆಂದಳಿಂದುಮುಖಿ

ಹಿರಿಯರಿಲ್ಲದ ಸಭೆ ಮನುಷ್ಯರ
ನೆರವಿಯದು ಸಭೆಯಲ್ಲ ಮೂರ್ಖರು
ಹಿರಿಯರಲ್ಲ ಯಥಾರ್ಥಭಾಷಣಭೀತಚೇತಸರು
ಹಿರಿಯರಿದೆ ಸಾಮಾಜಿಕರು ಸ
ಚ್ಚರಿತರಿದೆಲಾ ಸ್ತ್ರೀಮತವನು
ತ್ತರಿಸಬಾರದೆ ಧರ್ಮಮಾರ್ಗದೊಳೆಂದಳಿಂದುಮುಖಿ

ಹಿಂಗಿ ಹೋಗಲಿ ತನುವನಸು ಸ
ಪ್ರಾಂಗ ಬೇಯಲಿ ಖೋಡಿ ಮನದಲಿ
ಹಿಂಗುವುದೆ ಹರ ಹರ ಧನಂಜಯ ಕಾಕನಾಡಿದೆಲ
ಅಂಗನೆಯ ಮೇಲೊಡ್ಡವೇ ಲಲಿ
ತಾಂಗಿಗೀ ವಿಧಿಯೇಕೆ ನಮಗೀ
ಭಂಗ ಸಾಲದೆ ಸುಡುವೆನಾದೊಡೆ ತನ್ನ ತೋಳುಗಳ

ಈಯವಸ್ಥೆಗೆ ತಂದ ಕೌರವ
ನಾಯಿಗಳ ನಿಟ್ಟೆಲುವ ಮುಱಿದು ನ
ವಾಯಿಯಲಿ ಘಟ್ಟಿಸದೆ ಕೊಬ್ಬಿದ ತನ್ನ ತೋಳುಗಳ
ವಾಯುಸಖನಲಿ ಸುಡುವೆನೀಗಳೆ
ಬೀಯವಾಗಲಿ ದೇಹವಾಹಂ—
ದ್ರಾಯುತವೆ ಯೆಂದೊಡಸೊಡನೆ ಮಿಡುಕಿದನು ಕಲಿಭೀಮ

ತೆಗೆದು ಬಿಸುಟರು ಹಾರಪದಕಾ
ದಿಗಳನಿವರೈವರು ದುಕೂಲವ
ನುಗಿದು ಹಾಯ್ಕಿದರಿದ್ದರಾಗೊಂದೊಂದು ವಸ್ತ್ರದಲಿ
ಹೊಗೆಮೊಗದ ಕಿಱುಗಣ್ಣ ಕೆಮ್ಮಾ
ಸೆಗಳ ಗುಜುರಿನ ಜುಂಜುಕೇಶದ
ವಿಗಡನೆದ್ದನು ಬಂದು ಹಿಡಿದನು ದ್ರೌಪದಿಯ ಸೆಱಗ

ಅಳುಕಿದನೆ ಸುಡಲವನ ಮೇಲುದ
ಸೆಳೆದೊಡುನ್ನತಕುಚವ ನಳಿತೋ
ಳ್ಗಳಲಿ ಮುಚ್ಚಿದಳಬಲೆ ಬೆಚ್ಚಿದಳವನ ನಿಷ್ಠುರಕೆ
ಕಳವಳಿಸಿದಳು ಬೆರಳಿನಲಿ ದೃಗ್
ಜಲವ ಮಿಡಿಯುತ ನೋಡಿದಳು ನೃಪ
ತಿಲಕನನು ಭೀಮಾರ್ಜುನರ ಮಾದ್ರೀ ಕುಮಾರಕರ

ಮುಱಿದುದಸಿಬರ ಮೋಱೆ ಮಹಿಪನ
ಕೊರಳ ಕೊಂಕಿನಲಿರ್ದರಾ ಸೋ
ದರರು ಸಾರವನಲ್ಲಿ ಕಾಣದೆ ಭೀಷ್ಮಗುರುಕೃಪರ
ತರಳೆ ನೋಡಿದಳಕಟ ಗಂಗಾ
ವರಕುಮಾರದ್ರೋಣಕೃಪರಿರ
ಸೆಱಗ ಬಿಡಿಸಿರೆ ತಂದೆಗಳಿರೆಂದೊಱಲಿದಳು ತರಳೆ

ಪತಿಗಳೆನ್ನನು ಮಾರಿ ಧರ್ಮ್ಮ
ಸ್ಥಿತಿಯ ಕೊಂಡರು ಭೀಷ್ಮ ಮೊದಲಾ
ದತಿರಥರು ಪರಹಿತವ ಬಿಸುಟಿಹರರ್ಥಭೀತಿಯಲಿ
ಸುತನ ಕಡು ಸಿರಿ ಸೊಗಸಲಾ ಭೂ
ಪತಿಗೆ ಗಾಂಧಾರಿಗೆ ಯನಾಥೆಗೆ
ಗತಿಯ ಕಾಣೆನು ಶಿವ ಶಿವಾ ಯೆಂದೊಱಲಿದಳು ತರಳೆ

ವೈದೆಗೆದುವೀ ಪ್ರಾಣವಾಯುಗ
ಳೈದು ಬಱಿಕಿದಕಾರು ಮಱುಗುವ
ರೈದೆ ತನುವೊಂದುಱಿಯಲುಱಿವುವು ಮಿಕ್ಕಮಹಿಮೆಗಳು
ಬೈದು ಫಲವೇನಿನ್ನು ನಿನ್ನಯ
ಮೈದುನರ ಮರುಳಾಟಕೆನ್ನನು
ಕಾಯ್ದುಕೊಳ್ಳೈ ಕೃಷ್ಣಯೆಂದೊಱಲಿದಳು ತರಳಾಕ್ಷಿ

ಸುಲಿವರೂರೊಳಗುಟ್ಟ ಸೀರೆಯು
ನೆಲೆ ಮುರಾಂತಕ ರಕ್ಷಿಸೈ ಶಶಿ
ಕಳೆಗೆ ಸದರವೆ ರಾಹು ರಚಿಸಿದ ತುಟಿಯ ತೋಟಿಯದು
ಸೆಳೆವರಸುವನು ಖಳರು ಸೀರೆಯ
ಸೆಳೆಯಲುಱಿವೆನೆ ಕೃಷ್ಣ ಕರುಣಾ
ಜಲಧಿಯೇ ಕೈಗಾಯಬೇಕೆಂದೊಱಲಿದಳು ತರಳೆ

ಹೊಲಬುದಪ್ಪಿದ ಹುಲ್ಲೆ ಬೇಡನ
ಬಲೆಗೆ ಬಿದ್ದಂತಾದೆನೈ ಬಲು
ಹಱುವದಲಿ ತಾಯೆ ಬಿಸುಟ ಶಿಶು ತಾನಾದೆನೈ ಹರಿಯೆ
ಕೊಲುವುವೈ ಕಾಗೆಗಳಕಟ ಕೋ
ಗಿಲೆಯ ಮಱಿಯನು ಕೃಷ್ಣ ಕರುಣಾ
ಜಲಧಿಯೇ ಕೈಗಾಯಬೇಕೆಂದೊಱಲಿದಳು ತರಳೆ

ಏಕಹಸ್ತದಲಂಬರವ ಹಿಡಿ
ದೇಕ ಹಸ್ತವ ನೆಗಹಿ ಮೊಱೆಯಿಡೆ
ಲೋಕನಾಥ ಮುಕುಂದ ತಾನದ ಕೇಳದಂತಿರಲು
ಆಕೆ ಮನದೊಳಗಱಿದು ತನಗಿ
ನ್ನೇಕೆ ಮನದಭಿಮಾನವೆನುತಲೆ
ಲೋಕಸುಂದರಿ ಕರವೆರಡ ಮುಗಿದೆತ್ತಿಯೊಱಲಿದಳು

ವಿರಾಟ ಪರ್ವ

ಉತ್ತರ ಕುಮಾರ

ಕೇಳು ಜನಮೇಜಯ ಸುಯೋಧನ
ನಾಳು ಮುತ್ತಿತು ತುಱುಗಳನು ಮೇ
ಲಾಳು ಕವಿದುದು ಭೀಷ್ಮ ಕರ್ಣದ್ರೋಣಮೊದಲಾಗಿ
ಕೋಲ ಸೂಟಿಯ ಸರಿವಡೆಗೆ ಗೋ
ಪಾಲಪಡೆ ಮುಗ್ಗಿದುದು ಗೋವರ
ಸಾಲ ಹೊಯ್ದರು ಕರ್ಣದುಶ್ಯಾಸನ ಜಯದ್ರಥರು

ಬೆಗಡು ಮುಸುಕಿದ ಭೀತಿಹೆಚ್ಚಿದ
ಢಗೆಯಹೊಯ್ಲುಳ್ಳೆಗಳ ತುದಿನಾ
ಲಗೆಯ ತೊದಲಿನ ನುಡಿಯ ಬೆರಗಿನ ಬರತ ತಾಳಿಗೆಯ
ಅಗಿವ ಹುಯ್ಯಲುಗಾಱನೊಡ್ಡೋ
ಲಗಕೆ ಬಂದನು ನೃಪವಿರಾಟನ
ಮಗನ ಕಾಲಿಂಗೆಱಗಿದನು ದೂಱಿದನು ಕಳಕಳವ

ಏನೆಲವೊ ತುದಿಮೂಗಿನಲಿ ಬೆಳು
ಪೇನು ಥಗೆ ಹೊಯ್ದೇಕೆ ಬಂದೆ ಯಿ
ದೇನು ನಿನ್ನಿಸ ರಣವನೈಯಸು ಗೆಲಿದುದೇನಾಯ್ತು
ಏಸು ಭಯ ಬೇಡೆನ್ನ ಕಲಶನಿ
ಧಾನ ವಾರ್ತೆಯದೇನೆನಲು ಕುರು
ಸೇನೆ ಬಂದುದು ತುರುವ ಹಿಡಿದರು ಬಡಗದಿಕ್ಕಿನಲಿ

ಒಳಗೆ ನೀ ಕಾದುವೊಡೆ ದುರ್ಗವ
ಬಲಿಸು ಬವರವ ಹಿಂದುಗಳೆಯುದೆ
ಕಲಿತನದ ಮನವುಳ್ಳೊಡೀಗಳೆ ನಡೆಯಬೇಹುದೆನೆ
ಕೆಲಬಲನ ನೋಡಿದನು ಮಿಾಸೆಯ
ನಲುಗಿದನು ತನ್ನಿದಿರಮೇಳದ
ಲಲನೆಯರ ವೊಗ ನೋಡುತುತ್ತರ ನಗುತಲಿಂತೆಂದ

ನೂಕು ಕುನ್ನಿಯನಾಹವದ ಭೀ
ತಾಕುಲನ ತಾನೀಗ ಹೆಂಡಿರ
ಸಾಕಿ ಬದುಕುವ ಲವಲವಿಕೆಯಲಿ ಜಾಱಿ ಬಂದೀಗ
ಕಾಕ ಬಳಸುವನಿವನು ನಾನು
ದ್ರೇಕಿಸಲು ಸಮರದಲಿ ನಿಲುವರು
ನಾಕದವರಿಗೆ ನೂಕದೆಂದನು ಸತಿಯರಿದಿರಿನಲಿ

ಎನಿತು ಬಲ ಘನವಾದೊಡೇನದು
ನಿನಗೆ ಗಹನವೆ ಜೇಯ ಜಗದಲಿ
ದಿನಪನಿದಿರಲಿ ದಿಟ್ಟತನವೇ ತಮದ ಗಾವಳಿಗೆ
ಬಿನಗುರಾಯರ ಬಿಂಕ ಗೋವರ
ಮೊನೆಗೆ ಮೆಱೆದೊಡೆ ಸಾಕು ನಿಂದಿರು
ಜನಪ ತೋಱಿಸು ಕೈಗುಣವ ಕೌರವನ ಥಟ್ಟಿನಲಿ

ಎಂದೊಡುಬ್ಬರಿಸಿದನು ತಾ ಕಲಿ
ಯೆಂದು ಬಗೆದನು ಮಿಾಸೆಯನು ಬೆರ
ಳಿಂದ ತಿರುಹುತ ಮುಗುಳುನಗೆಹರುಷದಲಿ ಮೈಮಱೆದ
ಸಂದಣಿಸೆ ರೋಮಾಂಚ ಕೆಲಬಲ
ದಿಂದುಮುಖಿಯರ ನೋಡಿದನು ನಲ
ವಿಂದ ನುಡಿದನು ತನ್ನ ಪೂರುಷತನದ ಪರಿಣತಿಯ

ಜವನ ಮಿಾಸೆಯ ಮುಱಿದನೋ ಭೈ
ರವನ ದಾಡೆಯನಲುಗಿದನೊ ಮೃ
ತ್ಯುವಿನ ಮೇಲುದ ಸೆಳೆದನೊ ಕೇಸರಿಯ ಕೆಣಕಿದನೊ
ಬವರವನು ತೊಡೆಗಿದನಲಾ ಕೌ
ರವನಕಟ ಮರುಳಾದನೆಂದಾ
ಯುವತಿಯರ ಮೊಗ ನೋಡುತುತ್ತರ ಜಱಿದೆ ಕೆದಱಿದನು

ಆರೊಡನೆ ಕಾದುವೆನು ಕೆಲಬರು
ಹಾರುವರು ಕೆಲರಂತಕನ ಸೆರೆ
ಯೂರವರು ಕೆಲರಧಮಕುಲದಲಿ ಜನಿಸಿ ಬಂದವರು
ವೀರರೆಂಬವರಿವರು ಮೇಲಿ
ನ್ನಾರ ಹೆಸರುಂಟವರೊಳೆಂದು ಕು
ಮಾರ ನೆಣಗೊಬ್ಬಿನಲಿ ನುಡಿದನು ಹೆಂಗಳೆದಿರಿನಲಿ

ಬಲವ ಮುಱಿವೆನು ಹಸ್ತಿನಾಪುರ
ದೊಳಗೆ ಠಾಣಾಂತರವನಿಕ್ಕುವೆ
ತೊಲಗಿಸುವೆ ಕೌರವನ ಸೇನೆಯ ಧೂಳಿಪಟಮಾಡಿ
ಗೆಲವ ತಹೆನೆಂದುತ್ತರನು ಕೋ
ಮಲೆಯರಿದಿರಲಿ ಬಾಯ್ಗೆ ಬಂದುದ
ಗಳಹುತಿರ್ದನು ಬೇಕು ಬೇಡೆಂಬವರ ನಾಕಾಣೆ

ಪರರು ನಿಜಸಾಹಸವ ಹೊಗಟಿದೊ
ಡಿರದೆ ಲಜ್ಜಿಸಬೇಕು ತನ್ನಯ
ಹಿರಿದು ಪೂರುಷತನವ ತಾನಾಡಿದರೆ ಫಲವೇನು
ಇರವಿದನೆ ಗಹಗಹಿಸಿ ಮನದಲಿ
ತರಳೆಯರು ನಗಲಾ ವಿರಾಟನ
ವರಕುಮಾರಕನಿರದೆ ನುಡಿದನು ಹೆಂಗಳೆದಿರಿನಲಿ

ನುಡಿದು ಫಲವೇನಿನ್ನು ಸಾರಥಿ
ಮುಡಿದ ಪಿನ್ನಿನ ಬವರದಲಿ ನಾ
ನುಡುಹನಾದೆನು ಶಿವ ಶಿವಾ ಯಿಂದೆನ್ನ ಕೈಮನಕೆ
ಗಡಣಿಸುವ ಸಾರಥಿಯನೊಬ್ಬನ
ಪಡೆದೆನಾದರೆ ಕೌರವೇಂದ್ರನ
ಪಡೆಗೆ ಹಬ್ಬವ ಮಾಡುವೆನು ತೋಱುವೆನು ಕೈಗುಣವ

ಸಾರಥಿಯು ಶಿವ ಕೊಟ್ಟನಾದರೆ
ಮಾರಿಗುಬ್ಬಸವಾಗದಂತಕ
ನೂರು ತುಂಬದೆ ಹಬ್ಬವಾಗದೆ ರಣಪಿಶಾಚರಿಗೆ
ದೋರೆಗರುಳಲಿ ಶಾಕಿನಿಯರೊಡ
ಲೇರು ತುಂಬದೆ ಡೊಳ್ಳು ನೂಕದೆ
ಭೂತಭೇತಾಳರಿಗೆ ಹೋಹುದೆ ಬಱದೆ ರಣವೆಂದ

ಕೇಳುತಿರ್ದನು ಪಾರ್ಥನೀತನ
ಬಾಲಭಾಷೆಗಳೆಲ್ಲವನು ಪಾಂ
ಚಾಲೆಗೆಕ್ಕಟಿ ನುಡಿದನಾವಿನ್ನಿಹುದು ಮತವಲ್ಲ
ಕಾಲ ತುಂಬಿತು ನಮ್ಮ ರಾಜ್ಯದ
ಮೇಲೆ ನಿಲುಕಲು ಬೇಕು ಕೌರವ
ರಾಳು ನಮಗೋಸುಗವೆ ಬಂದುದು ಕಾಂತೆ ಕೇಳೆಂದ

ಎಲೆ ಬೃಹನ್ನಳೆ ತೆತ್ತುದೆನಗ
ಗ್ಗಳೆಯರೊಳು ವಿಗ್ರಹವು ಸಾರಥಿ
ಯಟದಿನೆನ್ನುವ ನೀನು ಸಾರಥಿಯಾಗಿ ಸಮರದಲಿ
ಉಱುಹಬೇಹುದು ನೀ ಸಮರ್ಥನು
ಫಲಗುಣನ ಸಾರಥಿಯಲೈ ನೀ
ನೊಲಿದು ಮೆಚ್ಚಲು ಕಾದಿ ತೋಱುವೆನಹಿತಸೇನೆಯಲಿ

ಎಲೆ ಕುಮಾರಕ ನಿನ್ನ ತಂಗಿಗೆ
ಕಲಿಸುವಗ್ಗದ ನಾಟ್ಯವಿದ್ಯೆಗ
ಳೊಳಗೆ ಪರಿಣತಿ ತನಗಿದಲ್ಲದೆ ರಾಯರಿದಿರಿನಲಿ
ನಿಲಲು ತಾನಂಜುವೆನು ಕೊಳುಗುಳ
ದೊಳಗೆ ಸಾರಥಿತನವ ಬಲ್ಲೆನೆ
ಎಲೆ ಕುಮಾರನೆ ಯೆನಲು ತಾನಿರೆ ಭೀತಿಬೇಡೆಂದ

ಎಲೆ ಮರುಳೆ ತಾನೆತ್ತ ಚಾತು
ರ್ಬಲದ ಮೋಹರವೆತ್ತ ಗರುಡಿಯ
ನಿಳಯದೊಳಗುತ್ತರೆಗೆ ತಾಸೀ ಭರತವಿದ್ಯೆಯನು
ಕಲಿಸಿ ಜೀವಿಸುವರ್ಗೆ ಕೌರವ
ಬಲವ ಕಂಡರೆ ಭೀತಿ ಘನವೆನೆ
ಕಳಕಳಿಸಿ ನಗುತಾಬೃಹನ್ನಳೆಗುತ್ತರನು ನುಡಿದ

ಅಂಜದಿರು ಸಾರಥಿಯೆ ತನ್ನದು
ರಂಜಕದ ನುಡಿಯಲ್ಲ ಕಾವಳ
ವಂಜಿಸುವುದೇ ಇನನ ತನ್ನ ಪರಾಕ್ರಮುವನಱಿಯೆ |
ಭಂಜಿಸುವೆನಹಿತರನು ನಾಶದ
ಕಂಜವದನೆಯರಪ್ಪುವೊಲು ನಿನ
ಗಂಜಿಕೆಯದೇಕೆನಲು ನಗುತಿಂತೆಂದನಾಪಾರ್ಥ

ವೀರಕುವರವಿಭಾಡ ರಾಯಕು
ಮಾರಮಸ್ತಕಶೂಲ ವೈರಿಕು
ಮಾರ ಕೇಸರಿ ರಾಯರೆದೆದಲ್ಲಣದ ನಿಶ್ಯಂಕ
ಧೀರಕುವರಕುಠಾರ ಮಲ್ಲಕು
ಮಾರ ಗಿರಿವಜ್ರಾ ಯೆಸಲು ತಾ
ನಾರಿಯರ ಬಿರುದಿನ ನುಡಿಯ ಕೇಳಿಯಲಿ ಪೊಱವಂಟ

ಮೀಸೆಗಳ ತಿರುಹುವನು ಭುಜದ ವಿ
ಲಾಸವನು ನೋಡುವನು ಬಿರುದಿನ
ಭಾಷೆಗಳನಡಿಗಡಿಗೆ ಕೇಳುತೆ ತುಱುವ ಸೆಱೆಹೊಯ್ದು
ಆ ಸುಯೋಧನಬಲವ ಕಾಲನ
ಮೀಸಲಿಗೆ ಮಾಡುವೆನೆನುತೆ ಪರಿ
ತೋಷಸಂರಂಭದಲಿ ಮಾತಿನ ವೀರ ಬರುತಿರ್ದ

ಮಂಗಳಾರತಿಯೆತ್ತಿದರು ನಿಖಿ
ಳಾಂಗನೆಯರುತ್ತರಗೆ ನಿಜಸ
ರ್ವಾಂಗ ಶೃಂಗಾರದಲಿ ಹೊಳೆಯುತೆ ಬಂದು ರಥವೇಱಿ
ಹೊಂಗೆಲಸದಾ ಕವಚವನು ಪಾ
ರ್ಥಂಗೆ ಕೊಟ್ಟನು ಜೋಡುಸೀಸಕ
ವಂಗದೊಳಗಳವಡಲು ರಾಜಕುಮಾರನನುವಾದ

ನರನು ತಲೆಕೆಳಗಾಗೆ ಕವಚವ
ಸೆರಿಯುತಿರೆ ಘೊಳ್ಳೆಂದು ಕೈ ಹೊ
ಯ್ಯರಸಿಯರು ನಗೆ ನಾಚಿದಂತಿರೆ ಪಾರ್ಥ ತಲೆವಾಗಿ
ತಿರುಗಿ ಮೇಲ್ಮೊಗವಾಗೆ ತೊಡಲು
ತ್ತರೆ ಬಟಿ ನಸುನಗಲು ಸಾರಥಿ
ಯಱಿಯ ತಪ್ಪೇನೆನುತಲುತ್ತರ ತಾನೆ ತೊಡಿಸಿದನು

ಕವಚವನು ತೊಡಲಱಿಯದವನಾ
ಹವಕೆ ಸಾರಥಿತನವ ಮಾಡುವ
ಹವಣು ತಾನೆಂತೆನುತ ನಕ್ಕರು ನಿಖಿಳನಾರಿಯರು
ಬವರವನು ನಮ್ಮಣ್ಣ ಗೆಲಿದಪ
ನವರವರ ಪರಿಧಾನವಾಭರ
ಣವನು ಸಾರಥಿ ಕೊಂಡು ಬಾ ಯೆಂದಳು ಸರೋಜಮುಖಿ

ಗತಿಗೆ ಕುಣಿದುವು ನಾಸಿಕದ ಹುಂ
ಕೃತಿಯು ಪವನನ ಹಳಿವ ಲುಳಿಯಲಿ
ಗತಿಯ ಸಂಚಿತಪಂಚಧಾರಾಪ್ರೌಢವಾಜಿಗಳು।
ವಿತತರಥಪದದಳಿತವಸುಧೋ
ತ್ಪತಿತಧೂಳೀಪಟಳಪರಿಚುಂ-
ಬಿತದಿಶಾಮುಖನೈದಿದನು ಕುರುರಾಯ ಮೋಹರವ

ಜಡಿವ ಖಡ್ಗದ ಕಿಡಿಯ ಸೇನೆಯ
ತೊಡರುಗಳ ಕೇಸುರಿಯ ಬಲದು
ಗ್ಗಡದ ರಭಸದ ರೌದ್ರರವಘಟಘಟಿತನಿಸ್ವನದ
ಇಡಿದಧೂಳಿಯ ಧೂಮರಾಶಿಯ
ಪಡೆ ವಿರಾಟನ ಸುತನ ಕಂಗಳಿ
ಗೊಡನೊಡನೆ ದಾವಾಗ್ನಿಯಂತಿರೆ ತೋಱಿತಿದಿರಿನಲಿ

ಪ್ರಳಯಮೇಘದ ಮಾಲೆಯೋ ಕರಿ
ಕುಲವೊ ಸಿಡಿಲಿನ ಗರುಡಿಯೋ ಕಳ
ಕಳವೊ ಕಲ್ಪಾನಳನ ಧೂಮಾವಳಿಯೊ ಕೈದುಗಳೊ
ನೆಲನ ದಡ್ಡಿಯ ಬೆಟ್ಟದಡವಿಯೊ
ತಳಿತ ಕೆಕ್ಕೆಯವೋ ಜಗಂಗಳ-
ನಳಿವ ಜಲಧಿಯೊ ಸೇನೆಯೋ ನಾನಱಿಯೆನಿದನೆಂದ

ಕಡೆಗೆ ಹಾಯ್ದುವು ಕಂಗಳೀಬಲ
ಗಡಲ ಮನವೀಸಾಡಲಾರದು
ವೊಡಲುವಿಡಿದಿರಲೇನ ಕಾಣಲು ಬಾರದದ್ಭುತವ।
ಪೊಡವಿಯಿದಾದುದೊ ಮೋಹರವನಿದ
ರೊಡನೆ ಕಾದುವನಾವನಾತನೆ
ಮೃಡನು ಶಿವ ಶಿವ ಕಾದಿ ಗೆಲಿದೆವು ಬಲಕೆ ನಮೊ ಯೆಂದ॥

ಕಾಳಕೂಟದ ತೊಱೆಯೊ ಮಾರಿಯು
ಗೂಳೆಯವೊ ಮೃತ್ಯುವಿನ ಗಂಟಲ
ತಾಳಿಗೆಯೋ ಭೈರವನ ಥಟ್ಟೊ ಜವನ ಜಂಗುಳಿಯೊ
ಕಾಲರುದ್ರನ ನೊಸಲ ವಹ್ನಿ
ಜ್ವಾಲೆಯೋ ಕೌರವನ ಸೇನಾ
ಜಾಲವೊ ಶಿವ ಶಿವಾ ಯೆನುತೆ ಹೆದಱಿದನು ಸುಕುಮಾರ

ಸಾರೆ ಬರಬರಲಿವನ ಮನವು
ಬ್ಬಾರಿಸಿತು ಮೈಮುಱಿದು ರೋಮಾವಿ
ಕಾರ ಮಿಗೆ ಕಾಹೇರಿತವಯವವಡಿಗಡಿಗೆ ನಡುಗಿ
ಭೂರಿಭಯತಾಪದಲಿ ತಾಳಿಗೆವ
ನೀರು ತೆಗೆದುದು ತುಟಿಯೊಣಗಿ ಸುಕು
ಮಾರ ಕಣ್ಣಿವೆ ಸೀಯೆ ಕೈಯಲಿ ಮುಚ್ಚಿದನು ಮುಖವ

ಹಸಿದ ಮಾರಿಯು ಕಟಕದಲಿ ಕುಱಿ
ಸುಸುಳಿ ಬದುಕುವುದೆ ಬೃಹನ್ನಳೆ
ಯೆಸಗದಿರು ತೇಜಿಗಳ ತಡೆ ಚಮ್ಮಟಿಗೆಯನು ಬಿಸುಡು
ಮಿಸುಕಬಹುದೇ ಪ್ರಳಯಕಾಲನ
ಮುಸುಕನುಗಿವವರಾರು ಕೌರವ
ನಸಮಬಲನೈ ರಥವ ಮರಳಿಚು ಪುರಕೆ ಬೇಗೆಂದ

ಎಲೆ ಕುಮಾರಕ ಮೊದಲ ಚುಂಬನ
ದೊಳಗೆ ಹಲು ಹೋದಂತೆ ಕಾಳಗ
ದೊಳಗೆ ಬೆರಸದ ಮುನ್ನ ಹಿಡಿದೈ ಸಮರಭೀತಿಯನು
ಅಳುಕಲಾಗದು ನಿಮ್ಮ ತಂದೆಯ
ಕುಲಕೆ ಕುಂದನು ತಾರದಿರು ಮನ
ಗೆಲವಿನಲಿ ಕಾದೆನುತೆ ರಥವನು ಹರಿಸಿದನು ಪಾರ್ಥ

ಏಕೆ ಸಾರಥಿ ರಥವ ಮುಂದಕೆ
ನೂಕಿ ಗಂಟಲ ಕೊಯ್ವೆ ಸುಡುಸುಡು
ಕಾಕಲಾ ಕಣ್ಗೊಡೆಯುತಿದೆ ಕಾಣಾ ಮಹಾಬಲವ
ನಾಕನಿಳಯರಿಗರಿದು ನಿನಗೆ ವಿ
ವೇಕವೆಳ್ಳನಿತಿಲ್ಲಲಾ ತೆಗೆ
ಸಾಕು ವಾಘೆಯ ಮರಳಿ ಸೆಳೆ ತೇಜಿಗಳ ತಿರುಹೆಂದ

ನುಡಿಯ ಕೇಳದೆ ಮುಂದೆ ನಾಲ್ಕೆಂ
ಟಡಿಯನರ್ಜುನ ರಥವ ನಡಸಲು
ಹಿಡಿದ ಬಿಲ್ಲಂಬುಗಳು ಬಿದ್ದುವು ಕೈಯ ನರತೆಗೆದು
ಹಿಡಿ ಹಯವನಿಱುಗಾಱ ಸಾರಥಿ
ನುಡಿವವರು ನಾವು ಹಗೆಗಳೆ ನಿ
ನ್ನೊಡೆಯರಲ್ಲಾ ಸ್ವಾಮಿದ್ರೋಹಿತೆ ಲೇಸು ಲೇಸೆಂದ

ಎಂದೊಡರ್ಜುನ ನಗುತೆ ರಥವನು
ಮುಂದೆ ನಾಲ್ಕೆಂಟಡಿಯ ನೂಕಲು
ಕೊಂದನೈ ಸಾರಥಿ ಯೆನುತೆ ಸಂವರಿಸಿ ಮುಂಜೆಱಗ
ನಿಂದು ಮೆಲ್ಲನೆ ರಥದ ಮೊದಲಿಗೆ
ಬಂದು ಧುಮ್ಮಿಕ್ಕಿದನು ಬದುಕಿದೆ
ನೆಂದು ನಿಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ

ನೋಡಿದನು ಕಲಿಪಾರ್ಥನೀ ಕೇ
ಡಾಡಿ ಕೆದಱಿದ ಕೇಶದಲಿ ಕೆ-
ಟ್ಟೋಡುತಿರಲೆಲೆ ಪಾಪಿ ಹಾಯ್ದನು ಹಿಡಿಯಬೇಕೆನುತೆ
ಕೂಡೆ ಸೂಟಿಯೊಳಟ್ಟಲಿಳೆಯು
ಲ್ಲಾಡಿತಹಿಪತಿ ಕುಸಿದನತ್ತಲು
ನೋಡಿ ಕೌರವಸೇನೆ ಕೆಡೆದುದು ನಗೆಯ ಕಡಲೊಳಗೆ

ಎಲೆಲೆ ಕಾದಲು ಬಂದ ವೀರನ
ಬಲುಹ ನೋಡಾ ಶಿವ ಶಿವಾ ಬೆಂ
ಬಳಿಯಲಟ್ಟುವ ವೀರನಾರೋ ದಿಟ್ಟನವನಹನು
ತಿಳಿಯಲರಿದಿವನಾವನೋ ವೆ
ಗ್ಗಳೆಯನಹನಾಕಾರದಲಿ ನೆಱೆ
ಫಲಗುಣನ ಹೋಲುವನೆನುತೆ ಗಜಬಜಿಸಿತರಿಸೇನೆ

ಇಟ್ಟಣಿಸಿ ನರ ನೂಱುಹೆಜ್ಜೆಯೊ
ಳಟ್ಟಿ ಹಿಡಿದನಿದೇನ ಮಾಡಿದೆ
ಹುಟ್ಟಿದೆಯೊ ಹಾದರಕೆ ಬಾಹುಜಬೀಜವೋ ಮೇಣು
ದಿಟ್ಟತನ ಮಿಗೆ ಹೆಂಗಳಿದಿರಲಿ
ಹೊಟ್ಟುಗುಟ್ಟಿದೆ ಹಗೆಗಳಿದಿರಲಿ
ಬಿಟ್ಟುಕೊಂಡೆ ದುರಾತ್ಮ ಮುಱಿದೆ ವಿರಾಟನನ್ವಯವ

ಹಲುಗಿರಿದು ಬಾಯೊಳಗೆ ಬೆರಲ್ಗಳ
ನಿಳುಹಿ ತಲೆವಾಗಿದನು ಸಾರಥಿ
ಕಳುಹಿ ಕಳೆಯೈ ನಿನ್ನ ಬಸಿರಲಿ ಮರಳಿಬಂದವನು
ಕೊಳುಗುಳದೊಳೀಯೊಡ್ಡಮುಱಿವ
ಗ್ಗಳಿಕೆಯುಂಟೇ ಲೋಗರಿಂದವೆ
ಕೊಲಿಸದಿರು ನೀಂ ಕುತ್ತಿ ಕೆಡಹು ಕಠಾರಿಯಿದೆಯೆಂದ

ಮನದೊಳೊಡಲೊಡೆವಂತೆ ನಗುತ
ರ್ಜುನನು ಗಜಱಿದನೆಲವೊ ಸಭೆಯಲಿ
ವನಜಮುಖಿಯರ ಮುಂಡೆ ಸೊರಹಿದೆ ಬಾಯ್ಗೆ ಬಂದಂತು
ಅನುವರದೊಳೇನಾಯ್ತು ರಿಪುವಾ
ಹಿನಿಯನಿಱಿಯದೆ ನಾಡನರಿಯವೊ
ಲೆನಗೆ ನೀ ಹಲುಗಿರಿಯೆ ಬಿಡುವೆನೆ ಕಾದು ನಡೆ ಯೆಂದ

ಹೇವ ಬೇಡಾ ವೀರರೀ ಪರಿ
ಜೀವಗಳ್ಳರ ಪಥವ ಹಿಡಿವರೆ
ಸಾವಿಗಂಜುವೆವೇ ನಪುಂಸಕರೆಮ್ಮ ನೋಡೆನಲು
ನೀವು ವೀರರು ನೆಱೆ ನಪುಂಸಕ
ರಾವು ಸಾವವರಲ್ಲ ಲೋಕದ
ಜೀವಗಳ್ಳರಿಗಾವು ಗುರುಗಳು ಬಿಟ್ಟು ಕಳುಹೆಂದ

ಹಱುಕನೇ ನೀನೆಲವೊ ರಾಯರೊ
ಳುಱುವ ದೊರೆ ನಿಮ್ಮಯ್ಯ ನಿನಗಿಂ
ದಿಱಿವ ಮೆಱೆವವಸರವಲಾ ಜವ್ವನದ ಧುರಭರವ
ಸೆರಿಗಳೆಯದಪಕೀರ್ತಿ ರವಿಶಶಿ
ಮುಱಿದು ಬೀಳ್ವನ್ನಬರವೆಲೆ ನರ
ಗುಱಿಯೆ ನಡೆ ಕಾಳಗಕೆನುತೆ ಹಿಡಿದೆಳೆದನುತ್ತರನ

ಕೊಳುಗುಳದೊಳೋಡಿದೊಡೆ ಹಜ್ಜೆಗೆ
ಫಲ ಮಹಾಪಾತಕವು ಮುಂದ
ಣ್ಣೊಗ್ಗಲಿದು ಹಜ್ಜೆಯನಿಡಲು ಹಜ್ಜೆಗೆಯಶ್ವಮೇಧಫಲ
ಅಳಿದನಾದೊಡೆ ದೇವಲೋಕದ
ಲಲನೆಯರು ತೊತ್ತಿರು ಸುರೇಂದ್ರನು
ನೆಲನನುಘ್ಘಡಿಸುವನು ವೀರಸ್ವರ್ಗವಹುದೆಂದ

ಧುರದೊಳೋಡಿದ ಪಾತಕವ ಭೂ
ಸುರರು ಕಳೆದಪರಶ್ವಮೇಧವ
ಧರಣಿಯಲಿ ಪ್ರತ್ಯಕ್ಷವಾಗಿಯೆ ಮಾಡಲಹುದೆನಲು
ಸುರರ ಸತಿಯರನೊಲ್ಲೆವೆಮಗೆ
ಮ್ಮರಮನೆಯ ನಾರಿಯರೆ ಸಾಕೆ
ಮ್ಮರಸುತನವೆಮಗಿಂದ್ರಪದ ನೀ ಬಿಟ್ಟು ಕಳುಹೆಂದ

ಆಳೊಳೊಡ್ಡುಳ್ಳವಸು ತೋರಿಯು
ತೋಳುಗಳ ಹೊತ್ತುವನು ಮನೆಯಲಿ
ಸೂಳೆಯರ ಮುಂದುಲಿದು ಬಾಷ್ಕಳಗೆಡೆದು ಬಂದೀಗ
ಕೋಲನಿಕ್ಕದೆ ಗಾಯವಡೆಯದೆ
ಕಾಲುವೇಗವ ತೋಱದೊಡೆ ನಿಂ
ನೋಲಗದೊಳೆಂತಕಟ ನಾಚದೆ ಕುಳಿತಿಹೆಯೊ ಎಂದ

ಕಿತ್ತುಕೊಂಡಾ ನಾಚಿಕೆಗೆ ನೆಱೆ
ಕುತ್ತಿಕೊಳಬೇಕೆಂಬ ಗಾದೆಯ
ನಿತ್ತ ಹೊದ್ದಿಸಬೇಡ ನಾವಂಜುವೆವು ಕಾಳಗಕೆ
ತೆತ್ತಿಗನು ನೀಸಹಿತನಂತಿರೆ
ಮಿತ್ತುವಹರೇ ನಿನಗೆ ಬೇಡಿದು
ದಿತ್ತು ಸಲಹುವೆನೆನ್ನ ಕೊಲಿಸದೆ ಬಿಟ್ಟು ಕಳುಹೆಂದ

ವಳಿತವನು ವಾರುವವ ಮುಕ್ತಾ
ವಳಿಯಲಂಕಾರವನು ಗಜವನು
ಲಲನೆಯರ ನಾನೀಸಿ ಕೊಡುವೆನು ರಾಜಭವನದಲಿ
ಎಲೆ ಬೃಹನ್ನಳೆ ಯೆಮ್ಮ ಬೊಪ್ಪನು
ಸಲಹಿದೊಡೆ ಕೈಯೊಡನೆ ತೋಱದೆ
ಕಲುಮನವಲಾ ನಿನ್ನದೆಂದರೆ ಪಾರ್ಥನಿಂತೆಂದ

ಒಡಲು ಕಿಡುವುದು ನಾಳೆ ನಾಡಿದು
ಪೊಡವಿಯುಳ್ಳನ್ನಬರ ಲೋಕದೊ
ಳಡಗದಿಹುವಪಕೀರ್ತಿ ಕೀರ್ತಿಗಳೆಂಬುವಿದು ನಿರುತ
ಸುಡಲಿ ಜೀವನದಾಸೆಯನು ಕಿಡು
ವೊಡಲ ಭುಕ್ತಿಯ ಭೋಗಕೋಸುಗ
ಕಿಡಿಸಬೇಡಿಹಪರದ ಗತಿಗಳನೆಂದನಾ ಪಾರ್ಥ

ಎಲವೊ ಸಾರಥಿಯಾಗು ಬಾ ಬಿಡೆ
ಗಳಹಿದರೆ ಕಟವಾಯ ಕೊಯ್ವೆನು
ಗೆಲುವೆನೀ ಪ್ರತಿಭಟನಿಕಾಯವ ನಿನ್ನ ಸಾಕ್ಷಿಯಲಿ
ಬಟಿಕ ನೀ ನಗು ನಡೆ ಯೆನುತೆ ಪರ
ಬಲಭಯಂಕರನುತ್ತರನ ಹೆಡ
ತಲೆಯ ಹಗರಿನೊಳೌಕಿ ತಂದನು ರಥವನೇರಿಸಿದ

ನಡೆಗೊಳಿಸಿದನು ರಥವ ಮುಂದಕೆ
ನಡಸಲುತ್ತರ ನುಡಿದ ಸಾರಥಿ
ಕಿಡಿಸದಿರು ವಂಶವನು ರಾಯನ ಹಿಂದೆ ಹೆಸರಿಲ್ಲ
ಬಿಡು ಮಹಾಹವವೆನಗೆ ನೂಕದು
ತೊಡೆಯದಿರು ನೊಸಲಕ್ಕರವ ನೀ
ನೊಡೆಯ ಕಿಂಕರರಾಗಿಹೆವು ನಾವಿಂದು ಮೊದಲಾಗಿ

ಖೇಡತನ ಬೇಡೆಲವೊ ರಣದೊಳ
ಗೋಡಿಸುವೆನಹಿತರನು ಹರಣವ
ಹೂಡಿಸುವೆನಂತಕನ ನಗರಿಗೆ ಥಟ್ಟನೊಡೆಹಾಯ್ದು
ಕೋಡದಿರು ಕೊಂಕದಿರು ಧೈರ್ಯವ
ಮಾಡಿ ಸಾರಥಿಯಾಗೆನುತೆ ಕಲಿ
ಮಾಡಿಕೊಂಡುಯ್ದನು ಸಮೀಪದ ಶಮಿಯ ಹೊರೆಗಾಗಿ

ಕರ್ಣಪರ್ವ

ಕರ್ಣಚಾರಿತ್ರ್ಯ

ಧರೆ ನೆನೆದ ದುಷ್ಕೃತವದೇನೆಂ
ದರಸ ಬೆಸಗೊಂಬೈ ನಿರಂತರ
ಸುರಿವ ರುಧಿರಾಸಾರದಲಿ ಕೆಸಱೆದ್ದು ಕಳನೊಳಗೆ
ಹರಿವ ಬಿಂಕದ ರಥದ ಗಾಲಿಯ
ಗರುವತನ ಗಾಳಾಯ್ತುಲೇ ಖೊ
ಪ್ಪರಿಸಿ ತಗ್ಗಿತು ತೇರು ತಡೆದುದು ಭಟನ ಸಾಹಸವ

ಮೂಗಿನಲಿ ಬೆರಳಿಟ್ಟು ಮಕುಟವ
ತೂಗಿ ತೊನೆದನು ಪೂತು ಮಝು ನಿ
ರ್ಭಾಗಧೇಯನು ರಾಯನಕಟಾ ಶಿವ ಮಹಾದೇವ
ಈಗಳಿದು ತಾನೇನು ವಿಧಿ ಬರೆ
ದೋಗಟೆಯೊ ಕುರುವಂಶ ವಜ್ರದ
ಬೇಗಡೆಯೊ ಮಾಮಾ ಎನುತ ಮಱುಗಿದನು ಕಲಿ ಕರ್ಣ

ಇಳುಹಿದನು ರಥದೊಳಗೆ ಚಾಪವ
ನಳವಡಿಸಿದನು ಸೆಱಗನಲ್ಲಿಂ
ದಿಳಿದು ಗಾಳಿಯನಲುಗಿ ಪಾರ್ಥನ ನೋಡಿ ನಸುನಗುತ
ಎಲೆ ಧನಂಜಯ ಸೈರಿಸುವುದರೆ
ಗಳಿಗೆಯನು ರಥವೆತ್ತಿ ನಿನಗಾ
ನಳವಿಗೊಡುವೆನು ತನ್ನ ಪರಿಯನು ಬಳಿಕ ನೋಡೆಂದ

ಎನುತ ಗಾಲಿಯನಲುಗಿ ಕೀಲ
ಚ್ಚಿನಲಿ ಮುಂಗೈಗೊಟ್ಟು ಮೊಳಕಾ
ಲಿನಲಿ ಧರಿಣಿಯನೌಕಿ ತಗ್ಗಿದ ರಥವ ನೆಗಹುತಿರೆ
ದನುಜರಿಪು ಚಮ್ಮಟಿಗೆಯಲಿ ಫಲು
ಗುಣನ ತಿವಿದನು ನೋಡು ರಾಧಾ
ತನುಜನಿರವನು ಬೇಗಮಾಡೆಂದರ್ಜುನನ ಜಱೆದ

ಎನು ಮರುಳೆ ಗಾಂಡೀವಿಯಾಪ
ತ್ತೈಸಗಿದಾಗಳೆ ಹಗೆಯು ಗೆಲುವುದು
ವಸುಮತೀಶರ ನೀತಿ ತೊಡು ತೊಡು ದಿವ್ಯಮಾರ್ಗಣವ
ವಿಷಮವೀರನು ರಥವ ಮೇಳಾ
ಪಿಸದ ಮುನ್ನವೆ ಹಱಿವ ನೆನೆ ಸೈ
ರಿಸಿದ ಬಳಿಕೀ ಕರ್ಣ ಕೈಕೊಂಬನೆ ತ್ರಿಯಂಬಕನ

ಏನನೆಂಬೆನು ಜೀಯ ಕರ್ಣಂ
ಗೇನಹನೊ ಫಲುಗುಣನು ಬಳಿಕಾ
ದಾನವಾರಿಯ ನುಡಿಯು ಕೇಳಿದು ಕೇಳಿದಾಕ್ಷಣಕೆ
ಗ್ಲಾನಿಯಲಿ ಮುಳುಗಿದನು ಮನದಭಿ
ಮಾನಸರ್ಪನ ಕೆಡಹಿ ಧೈರ‍್ಯನಿ
ಧಾನವನು ಕೈ ಸೂರೆಗೊಂಡುದು ಶೋಕವರ್ಜುನನ

ಮುಕ್ಕಿದನು ಮಹಿಮೆಯನು ಕಂಗಳು
ಮುಕ್ಕುಳಿಸಿದವು ನೀರನಹಿತನೊ
ಳುಕ್ಕುವನುರಾಗದಲಿ ಕೊಂಡನು ಬಳಿಕ ವೀಳೆಯವ
ಸಿಕ್ಕಿದನು ಕರುಣಾಲತಾಂಗಿಯು
ತೆಕ್ಕೆಯಲಿ ನಾನೇನ ಹೇಳುವೆ
ನೊಕ್ಕಲಿಕ್ಕಿತು ಶೋಕವರ್ಜುನನಂತರಂಗದಲಿ

ತೇರಿನಲಿ ಚಾಚಿದನು ಮೆಲ್ಲನೆ
ಭಾರಿ ಧನುವನು ಕಯ್ಯ ಕಣೆಗಳ
ನೋರೆಯಲಿ ಸೈತಿರಿಸೆ ಕಂಡನು ಮತ್ತೆ ಮುರವೈರಿ
ಹಾರವೇಕೈ ಕಂಗಳಲಿ ಕ
ಸ್ತೂರಿಯೇಕೈ ಕದಪಿನಲಿ ಶೃಂ
ಗಾರವಿದು ವಿಪರೀತವೇಸೈ ಪಾರ್ಥ ಹೇಳೆಂದ

ದೇವ ಹಗೆಯಾಗಿರನು ಕರ್ಣನಿ
ದಾವ ಹದನೆಂದಱಿಯೆ ಮನದಲಿ
ನೋವು ಮಿಗುವುದು ಕೈಗಳೇಳವು ತುಡುಕುವಡೆ ಧನುವ
ಜೀವವೀತನ ಮೇಲೆ ಕರಗುವು
ದಾವ ಸಖನೋ ಶತ್ರುವೆಂಬೀ
ಭಾವನೆಯು ಬಗೆ ಬೀಳುಕೊಂಡುದು ಕರ್ಣನಾರೆಂದ

ಆಸುರದ ವ್ಯಾಮೋಹವಿದು ಡೊ
ಳ್ಳಾಸವೋ ಕೌರವರ ಥಟ್ಟಿನ
ವೈಸಿಕವೊ ನಿಮ್ಮಡಿಯ ಮಾಯಾಮಯದ ಮಾಲೆಗಳೊ
ವಾಸಿ ಬೀತುದು ಛಲಗಿಲದ ಕಾ
ಳಾಸ ಸೋತುದು ಕರ್ಣನಲಿ ಹಿರಿ
ದಾಸೆಯಾಯಿತು ಕೃಷ್ಣ ಕರುಣಿಸು ಕರ್ಣನಾರೆಂದ

ಋಷಿಗಳನುಮತದಿಂದ ಕುಂತಿಯು
ಬಸುಱಲೇನುದಯಿಸನಲೇ ನೀ
ನಸುರರಿಪು ಬಹುಕಪಟನಾಟಕಸೂತ್ರಧಾರನಲೆ
ವಸುಮತಿಯ ಭಾರವನು ಸಲೆ ಹಿಂ
ಗಿಸುವ ಕೃತ್ಯವು ನಿನ್ನದೆನಗು
ಬ್ಬಸವಿದೇನೆಂದಱಿಯೆನಕಟಾ ಕರ್ಣನಾರೆಂದ

ಧರೆಯ ಬಿಡುವೆವು ಕುರುಪತಿಗೆ ನಾ
ವಱುವರೊಡವುಟ್ಟಿದರು ವಿಪಿನಾಂ
ತರದೊಳಗೆ ಭಜಿಸುವೆವು ನಿನ್ನನು ಭಾವಶುದ್ಧಿಯಲಿ
ತೆರಳುವೀ ಸಿರಿಗೋಸುಗರ ಸೋ
ದರನ ಕೊಲುವೆನೆ ಕೃಷ್ಣ ಕರುಣಿಸು
ಕರುಣಿಸಕಟಾ ಕೃಷ್ಣ ಕರುಣಿಸು ಕರ್ಣನಾರೆಂದ

ದೂಱುವವರಾವಲ್ಲ ಕರುಣವ
ತೋಱಿ ಬಿನ್ನಹಮಾಡಿದೆನು ಹಗೆ
ಯೇಱಿದಿವನಲಿ ಸೇರುವುದು ಸೋದರದ ಸಂಬಂಧ
ಆಱೆನೀತನ ಕೊಲೆಗೆ ಹೃದಯುವ
ಸೂಱೆಗೊಂಡನು ಕರ್ಣನಕಟಾ
ತೋಱಿ ನುಡಿಯಾ ಕೃಷ್ಣ ಕರುಣಿಸು ಕರ್ಣನಾರೆಂದ

ಅರಸ ಕೇಳ್ಳೆ ಬಳಿಕ ಪಾರ್ಥನ
ಕರುಣರಸದಾಳಾಪ ವಾಗ್ವಿ—
ಸ್ತರಕೆ ಮನದಲಿ ಮಱುಗಿದನು ಮುರವೈರಿ ನಸುನಗುತ
ಕೆರಳಿದನು ಮಾತಿನಲಿ ಸುಡು ಬಾ
ಹಿರನಲಾ ನೀ ನಿನ್ನ ವಂಶಕೆ
ಸರಿಯೆ ಸೂತನ ಮಗನಿದೇನೆಂದಸುರರಿಪು ಜಱೆದ

ಈಗಲೀ ಧರ್ಮಶ್ರವಣ ನೀ—
ನಾಗಳೇಱಿಸಿ ನುಡಿದ ಭಾಷೆಗೆ
ಮೂಗುಹೋದುದೆ ಮಱೆದಲಾ ಮಾತುಗಳು ಹಳಸುವವೆ
ಹೋಗಲೆಲೆ ಮರುಳೇ ವಿಭಾಡಿಸು
ಬೇಗದಲಿ ಬಹುರಾಜಕಾರ್ಯ್ಯವ
ನೀಗಳೇ ತಿದ್ದುವೆನು ತೊಲಗಿಸು ಸೂತಜನ ಶಿರವ

ಅಕಟ ನಿಷ್ಕರುಣಿಯೆ ವೃಥಾ ಪಾ
ತಕವಿದೇಕೈ ಹೇಳು ಜಯಕಾ—
ಮುಕರು ನಾವೊಲ್ಲದಡೆ ನಿಮಗೇಕೀಸು ನಿರ್ಬಂಧ
ಪ್ರಕಟ ಕುರುವಂಶದಲಿ ಯದುರಾ
ಜಕರೊಡನೆ ಹಗೆಯಿಲ್ಲಲೇ ಮತಿ
ವಿಕಳನಾದೆಸು ಕೃಷ್ಣ ಕರ್ಣನ ಕೊಲುವನಲ್ಲೆಂದ

ಬಿಸುಟು ಹೋದನು ರಥವ ಸಾರಥಿ
ವಸುಧೆಯಲಿ ರಥವದ್ದು ಕೆಡೆದುದು
ನಿಶಿತಮಾರ್ಗಣವಿಲ್ಲ ಕಯ್ಯಲಿ ದಿವ್ಯಧನುವಿಲ್ಲ
ಎಸುವಡೆಂತೇಳುವುವು ಕಯ್ ನೀ
ಬೆಸಸುವಡೆ ಮನವೆಂತು ಬಂದುದು
ಬಸುಱ ಶಿಖಿ ಬಲುಹಾಯ್ತು ಕರ್ಣನ ಕೊಲುವನಲ್ಲೆಂದ

ಗುರುವನೆಸುವಡೆ ಮೇಣು ಭೀಷ್ಮನ
ಸರಳ ತಡಿಕೆಗೆ ಚಾಚುವಡೆ ಧಿ
ಕ್ಕರಿಸುವಡೆ ಕೃಪ ಶಲ್ಯ ಸೈಂಧವ ಮುಖ್ಯ ಬಾಂಧವರ
ತೆರಳಿದೆನೆ ತೇರೈಸಿದೆನೆ ಹೇ
ವರಿಸಿದೆನೆ ಹೋರಿದೆನೆ ಕಲಿತನ
ಕರಗಿತೇನೆಂದಱಿಯೆ ಕರ್ಣನ ಕೊಲುವನಲ್ಲೆಂದ

ಎಲೆ ಧನಂಜಯ ನೀನು ಹಿಮಕರ
ಕುಲದ ಸುಕುಮಾರಕನು ಲೋಕದ
ಕುಲವಿಹೀನನು ಕರ್ಣನಿವ ನಿನಗೆಂತು ಸರಿಯಹನು
ತಲೆಯ ಮಾಱ ಶರೀರವನು ಸಲೆ
ಸಲಹಲೋಸುಗ ಕೌರವನ ತಂ
ಬುಲಕೆ ಕಯ್ಯಾಂತವನು ಬಂಧುವೆ ಪಾರ್ಥ ಹೇಳೆಂದ

ಕೇಡ ಹೊತ್ತಿಸಿ ನಿಮ್ಮ ಬೇಂಟೆಯ
ನಾಡಿಸಿದನಿವ ಜೂಜನಾಡಿಸಿ
ನಾಡ ಕೊಳಿಸಿದ ಹಿಸುಣನಿವ ನಿಮ್ಮೆಲ್ಲರನು ಕೆಡಿಸಿ
ನಾಡ ಸಂಧಾನವನು ನಾವ್ ಮಾ
ತಾಡಲೆಮ್ಮನು ಬಿಗಿಯಲನುವನು
ಮಾಡಿಸಿದನೀ ಕರ್ಣ ನಿಮಗತಿಹಿತವನಹನೆಂದ

ಕೊಲ್ಲನೇ ಅಭಿಮನ್ಯುವನು ಹಗೆ
ಯಲ್ಲವೇ ಮಾರುತಿಯ ಕೊರಳನು
ಬಿಲ್ಲ ಕೊಪ್ಪಿನೊಳೆಳೆಯನೇ ಕೆಡೆಯೆಸನೆ ಧರ್ಮಜನ
ಖುಲ್ಲ ನೀತಿಯ ನೆನೆಯದಿರು ನೀ
ನೆಲ್ಲಿಯವನೀ ವೈರಿ ಕರ್ಣನ
ದೆಲ್ಲಿಯವನೆಸು ಮರುಳೆ ಎಂದನು ನಿಜವ ತೋಱಸದೆ

ಬೀಸಿದನು ನಿಜ ಮಾಯೆಯನು ಡೊ
ಳ್ಳಾಸದಲಿ ಹರಹಿದನು ತಮವನು
ರೋಷವನು ಬಿತ್ತಿದನು ಮನದಲಿ ನರನ ಕಲಿ ಮಾಡಿ
ಐಸೆ ಬಳಿಕೇನೆನ್ನ ಖಿಳ ಗುಣ
ದೋಷ ನಿನ್ನದು ಪುಣ್ಯ ಪಾಪದ
ವಾಸಿ ನಮಗೇಕೆನುತ ಕೊಂಡನು ಧನುವನಾ ಪಾರ್ಥ

ಹಿಡಿ ಧನುವನನುವಾಗು ಸಾಕಿ
ನ್ನೆಡಬಲನ ಹಾರದಿರೆನುತ ಕಯ್
ಗಡಿಯನೆಚ್ಚನು ನೂಱು ಶರದಲಿ ಸೂತನಂದನನ
ತೊಡಗಿತೇ ಕಕ್ಕುಲಿತೆ ಮನದಲಿ
ಫಡ ಎನುತ ಸೂಱಂಬನೆಡೆಯಲಿ
ಕಡಿದು ಬಿಸುಟನು ಸೆಳೆದು ಕಿಗ್ಗಟ್ಟಿನ ಕಠಾರಿಯಲಿ

ರಥವ ಸಂತೈಸಿದನು ಬಳಿಕತಿ
ರಥ ಭಯಂಕರನೇಱಿದನು ನಿಜ
ರಥವನತಿಹರುಷದಲಿ ತೊಳೆದನು ಚರಣ ಕರತಳವ
ಪೃಥಿವಿ ನೆನೆದಪಕಾರ ಲೋಕ
ಪ್ರಥಿತವಾಯಿತು ಸಾಕು ಬದುಕಲಿ
ಪೃಥೆಯ ಮಕ್ಕಳೆನುತ್ತ ಕೊಂಡನು ನಗುತ ವೀಳೆಯವ

ಧನುವ ಕೊಂಡನು ಹಯವ ಜಱಿದ
ರ್ಜುನನ ತಱುಬಿದನಖಿಳ ಕುರುಬಲ
ವನಧಿಗಭಯವನಿತ್ತು ಮುಸುಕಿದನಂಬಿನಲಿ ನರನ
ಕನಲಿದವು ನಿಸ್ಸಾಳ ರಿಪುನೃಪ
ಜನವ ಬಯ್ದವು ಕಹಳೆ ಬಹುವಿಧ
ನಿನದದಲಿ ಗರ್ಜಿಸಿದವೆರಡೊಡ್ಡಿನಲಿ ಘನವಾದ್ಯ

ಅಳುಕಿದನೆ ರಥ ಮುಗ್ಗಿದರೆ ಕಳ
ವಳಿಸಿದನೆ ಶಲ್ಯಾಪಸರಣಕೆ
ಕೆಲಬಲನ ಹಾರಿದನೆ ಸರಸವಗಡಿಸಿ ಕಾದಿದಡೆ
ಬಲಿಮಥನ ಮಝು ಭಾಪು ಪಾಂಡವ
ಬಲ ದಿಶಾಪಟ ರಾಯಮದನ
ಪ್ರಳಯಹರ ಭಾಪೆಂದು ಹೊಗಳಿತು ವಂದಿ ಸಂದೋಹ

ದ್ರೋಣ ಭೀಷ್ಮರ ನಚ್ಚಿದರೆ ಮುಂ
ಗಾಣಿಕೆಯಲೇ ಮಡಿದರೆನ್ನಯ
ಗೋಣ ಕೊಯ್ದನು ಕೃಷ್ಣ ಮುನ್ನಿನ ಕುಲವನೆಚ್ಚರಿಸಿ
ಪ್ರಾಣ ಪಾಂಡವರೆಂಬ ನುಡಿಯನು
ಜಾಣಿನಲಿ ಹರಿ ಬಲಿದನೊಡೆಯಗೆ
ಕಾಣೆನಾಪ್ತರನೆಂದು ಮನದಲಿ ಮಱುಗಿದನು ಕರ್ಣ

ಕುಲಕೆ ಕೀಳಿವನೆಂದು ಟಿಕ್ಕರಿ
ಗಳೆದಡಾ ಬಹುಬಂಧುವರ್ಗವ
ನುಳಿದು ಸಿಂಹಾಸನದಲೆನಗಭಿಷೇಕವನು ಮಾಡಿ
ಕುಲದ ಮಲಿನವ ತೊಳೆದು ಕೌರವ
ಕುಲದೊಳೊಡಬೆಚ್ಚವನಿಪಾಲಕ
ತಿಲಕ ಕುರುಪತಿಗಾಪ್ತರಿಲ್ಲೆಂದಳಲಿದನು ಕರ್ಣ

ನೋಡಿ ದಣಿಯನು ನಿಚ್ಚಲುಚಿತವ
ಮಾಡಿ ದಣಿಯನು ಖೇಳ ಮೇಳದ
ಲಾಡಿ ದಣಿಯನು ಶಿವಶಿವಾ ತನ್ನೊಡನೆ ಕುರುರಾಯ
ಓಡಲಱಿಯದೆ ದ್ರೋಣ ಭೀಷ್ಮರು
ಗೂಡ ತಲೆಗೊಟ್ಟೈಸಱಲಿ ತಾ
ಮಾಡಿತೇನರಸಂಗೆನುತ ಮಱುಗಿದನು ಕಲಿ ಕರ್ಣ

ಸಲಹಿದೊಡೆಯನ ಜೋಳವಾಳಿಗೆ
ತಲೆಯ ಮಾಱುವುದೊಂದು ಪುಣ್ಯದ
ಫಲವು ಮರಣದ ಹೊತ್ತು ಕೃಷ್ಣನ ಕಾಬ ಸುಕೃತಫಲ
ಇಳೆಯುಮೇಲೆನಗಲ್ಲದಾರಿಗೆ
ಫಲಿಸುವುದು ತಾ ಧನ್ಯನೆನುತಿವೆ
ಹಳಚದಸುರಾಂತಕನನೀಕ್ಷಿಸುತಿರ್ದನಾ ಕರ್ಣ

ಒಳಗೆ ಹೃದಯಾಂಬುಜದ ಮಧ್ಯ
ಸ್ಥಳದೊಳಗೆ ಮುರವೈರಿಯನು ಹೊಱ
ವಳಯದಲಿ ಫಲುಗುಣನ ಮಣಿರಥದಗ್ರಭಾಗದಲಿ
ಹೊಳೆವ ಹರಿಯನು ಕಂಡನಿದು ಹೊಱ
ಗೊಳಗೆ ಹರಿ ತಾನೆಂಬ ಭೇದವ
ತಿಳಿದು ನಿಜದೆಚ್ಚಱ ಸಮಾಧಿಯೊಳಿರ್ದನಾ ಕರ್ಣ

ಉರಿಯನುಗುಳುವ ಬಾಣದಲಿ ಕ
ತ್ತರಿಸಿ ಕರ್ಣನನೆಸಲು ಸಮರದ
ಉರವ ಕೀಲಿಸಿತಂಬು ಗಱಿಗಡಿಯಾಗಿ ಗಾಢದಲಿ
ಹರಣ ತೊಲಗದ ಮರ್ಮವನು ಮುರ
ಹರನು ಕಂಡನು ರಥದ ವಾಘೆಯ
ನಿರಿಸಿ ಕರ್ಣನ ಹೊರೆಗೆ ಬಂದನು ವಿಪ್ರವೇಷದಲಿ

ತ್ಯಾಗಿ ಜಗದೊಳಗೆಂಬ ಕೀರ್ತಿಯ
ಲೋಗರಿಂದವೆ ಕೇಳ್ದು ಬಂದೆನು
ಮೇಗಳತಿಶಯ ಪದವನೊಲುವಡೆ ಮನದ ಬಯಕೆಗಳ
ಈಗಳೀವುದು ನಮ್ಮಭೀಷ್ಟ
ಶ್ರೀಗೆ ಮಂಗಳವೆಂದು ಹರಸಿದ
ಡಾಗಳಱಿದಾ ಕರ್ಣ ನಸುನಗುತಿರ್ದ ಮನದೊಳಗೆ

ತ್ಯಾಗಿ ಸಿಂಹಾಸನದ ಮೇಲಿ
ದ್ದಾಗ ಬೇಡಿತನೀಯಬೇಹುದು
ಈಗಳೀವುದ ಬೆಸಸಿಯೆನೆ ನಗುತೆಂದನಾ ವಿಪ್ರ
ತೂಗುವೀ ಕುಂಡಲವನೀವುದು
ಬೇಗ ಧಾರೆಯನೆಱೆದು ಕೊಡಿಯೆನ
ಲಾಗಳುದಕವನಱಸಿ ಕಾಣದೆ ನೋಡಿದನು ಕೆಲನ

ಉದಕವನು ಹೊಱಗಱಸುತಿರಲಾ
ಪದುಮನಾಭನು ನಗುತ ನಿನ್ನಯ
ಹೃದಯದೊಳಗಿರ್ದಮಲಗಂಗಾಜಲವ ತೆಗೆದೆನಗೆ
ಹದುಳದಿಂದೆಱೆ ಧಾರೆಯನು ಸಂ
ಪದದ ಮುಕುತಿಯ ಪದವನೊಲುವಡೆ
ಇದು ಶುಭೋದಯವೆಂದು ಮಾಯಾವಿಪ್ರನಱುಹಿದನು

ಸರಳ ತೆಗೆದನು ಸರಸಿಜಪ್ರಿಯ
ವರ ಸುತನು ತನ್ನುರವ ಬಗಿದನು
ಘರಿಘರಿಲು ಘರಿಲೆಸಲು ತೆಗೆದನು ನಿರ್ಮಲೋದಕವ
ಪರಮ ಸಂತೋಷದಲಿ ಧಾರೆಯ
ನೆಱೆದು ಕುಂಡಲವೀಯೆ ಮಿಗೆ ಪು
ಷ್ಕರದ ಜನ ಜಯಯೆನಲು ಮುರರಿಪುವೊಲಿದು ಕೈಕೊಂಡ

ಪ್ರಭುಲಿಂಗ ಲೀಲೆ

ಬಿಸಿಲ ಬೇಱುಟ್ಟೆಳಗಿಳಿದು ಶೋ
ಭಿಸುವ ಸೂರ್ಯನೊ ಹಿಮುವನತಿಗಳೆ
ದೆಸೆವ ಚಂದ್ರನೊ ನೆಟ್ಟನಾಶ್ರಿತ ಭಕ್ಷ್ಯಗುಣವಳಿದು
ಮಿಸುಪ ವಹ್ನಿಯೊ ಪೇಳೆನಲು ರಂ
ಜಿಸುವ ತೇಜೋಮಯದ ಬಾಲಕ
ನೆಸೆದನಾ ಸುಜ್ಞಾನಿ ನಿರಹಂಕಾರರಿದಿರಿಸಲಿ

ಹೊಗಳಿ ಹೋರುವ ವೇದ ಶಾಸ್ತ್ರದ
ಬಗೆಗೆ ಬಾರದ ಹರಿ ವಿರಿಂಚ್ಯಾ
ದಿಗಳು ಸಾಧಿಸಿ ಕಾಣಲಱಿಯದ ಪರಮ ಮುನಿನಿಕರ
ಮೊಗಸಿ ಮಾಡುವ ತಪಕೆ ನಿಲುಕದ
ಸಗುಣ ನಿರ್ಗುಣ ಮೂರ್ತಿಯಲ್ಲದ
ವಿಗಡ ಶಿಶುವನು ಕಂಡರಾ ದಂಪತಿಗಳರ್ತಿಯಲಿ

ಬಲ್ಲಡೀ ಶಿಶುವೇತಱೊಳಗಿಹ
ನಲ್ಲ ಹೊಱಗಿಹನಲ್ಲ ಭಾವಿಸ
ಲಿಲ್ಲದಿರುತಿಹನಲ್ಲವೆನುತಾ ತಂದೆತಾಯಿಗಳು
ಎಲ್ಲ ಜಾಡ್ಯದ ಜಂಜಡಂಗಳ
ನಲ್ಲವೆನಿಸುವ ಬಾಲಕಗೆ ಬಳಿ
ಕಲ್ಲಮಪ್ರಭುವೆಂದು ಹೆಸರನು ಕೊಟ್ಟರರ್ತಿಯಲಿ

ಆತನೋದದೆ ವೇದಶಾಸ್ತ್ರಸ
ಮೇತವಾತನ ನಾಲಗೆಯ ತುದಿ
ಗಾತು ಬೆಸನನು ಬೇಡುತಿಹವಾತನ ಪದಾಬ್ಜದಲಿ
ಓತು ಸತ್ಕ್ರಿಯೆನಿಕರಗಳು ಕ
ಯ್ಯಾತು ನೇಮವ ಹಾರುತಿರ್ಪವು
ಭೂತಳದೊಳಲ್ಲಮನ ಬೆಳವಿಗೆ ಬೆಳಸಿತಚ್ಚರಿಯ

ಹರುಷದಿಂದಲಿ ಜನನಿ ಜನಕರು
ಕರೆವುತಿರಲಾ ಬಾಲ ಭಾವದ
ಪರಿಯುನಾಗಳೆ ಬಿಸುಟು ಸಾಕಿನ್ನೆನುತ ನಡೆತಂದು
ವರ ಗುರು ಶ್ರೀ ಮೂರ್ತಿಯಾಗಿಯೆ
ಪರಮ ತತ್ವ ನಿರೂಪಣೆಯ ವಿ
ಸ್ತರಿಸಲುದ್ಯೋಗಿಸಿದನಲ್ಲಮ ತನ್ನ ಲೀಲೆಯಲಿ

ಕಾಮಿತಾರ್ಥವನೀಯಬೇಹುದು
ಕಾಮಿನಿಗೆ ತಾನವಳು ಕಾಮ
ಪ್ರೇಮ ಭಕ್ತಿಯ ಮಾಡಿದದು ಕಾರಣದಲೆಂದೆನುತ
ಆ ಮಹಾ ಮಹಿಮ ಸ್ವರೂಪ ಸ
ನಾಮವನು ಮಱೆಮಾಡಿ ಅಭಿನವ
ಕಾಮ ರೂಪಿನ ಪರಿಯನಲ್ಲಮಲಿಂಗ ಧರಿಸಿದನು

ಕಂಗಳಲಿ ನೆಱೆ ನೋಡಿದಡೆ ಹೆಱ
ಹಿಂಗ ಬಾರದ ಚೆಲುವ ಮುಖದ ಸು
ರಂಗು ಸೂಸುವ ದಂತಪಂಕ್ತಿಯ ತೊಳಪ ಕಣ್ಣುಗಳ
ಅಂಗವಟ್ಟದ ಸರಳಿಕೆಯ ಹ
ಸ್ತಂಗಳಂಘ್ರಿಯ ಕೋಮಳದ ಸ
ರ್ವಾಂಗ ಭಂಗಿಯ ಸೌಮ್ಯತೆಯ ಧರಿಸಿದನು ಪ್ರಭುರಾಯ

ತುಱುಬು ಚಿಮ್ಮುಱಿ ಚೆಂದಿ ಕಾಸೆಯ
ಸೆಱಗು ನಸು ಹೊದೆದಲ್ಲಿ ಮಿಂಚುವ
ಮಿಱುಪ ಸುಲಿ ಪಲ್ಲಸಿಯ ಸೆಳ್ಳುಗುರುಲಿವ ಹೊಂದೊಡರು
ಉಱುವ ಗಂಧದ ಲೇಪ ಬೆನ್ನೊಳು
ಮೆಱೆವ ಮದ್ದಳೆ ಸಹಿತ ಬಂದೀ
ತೆಱನನಲ್ಲಮ ನಟಿಸಿ ನಿಂದನು ವಿಕೃತ ವೇಷದಲಿ

ನಿಂದು ನಾನಾ ಪರಿಯ ವಹಣಿಗ
ಳಿಂದ ತಾಳ ಸಮೇಳ ಪದ್ಧತಿ
ಯಿಂದಲುಗ್ಘಡಣೆಯ ಘಡಾವಣೆಯಿಂದಲಲ್ಲಮನು
ಅಂದು ಮಧುಕೇಶ್ವರನ ಬಾಗಿಲ
ಮುಂದೆ ಬಾರಿಸುತಿರ್ದನೈ ಹಲ
ವಂದದಲಿ ಮದ್ದಳೆಯ ಕೇಳುವರೆಲ್ಲ ಬೆಱಗಾಗೆ

ಕಾರ ಮುಗಿಲಿನ ಗರ್ಜನೆಯ ಕಿವಿ
ಯಾರೆ ಕೇಳಿದ ಸೋಗೆಯಂತಿರೆ
ಹಾರ್ದವಿಸುತಲಿ ಅಲ್ಲಮನ ಮದ್ದಳೆಯ ಧ್ವನಿ ಗೇಳ್ದು
ನಾರಿ ಮಾಯಾ ದೇವಿ ನಲಿವುತಿ
ದಾರು ಹೊಱಕಡೆಯಲ್ಲಿ ತೂರ್ಯೋ
ದ್ಧಾರವನು ಮಾಡುವರೆನುತ ಕೇಳಿದಳು ಕೆಳದಿಯರ

ಕೆಳದಿಯರು ತಾವಱಿದು ಬಂದಾ
ಗಳೆ ವಿಚಾರಿಸಿ ಹೇಳಿದಡೆ ಕೋ
ಮಳೆ ಮನೋಮುದದಿಂದ ಕರಸಿಯೆ ಕಂಡಳಲ್ಲಮನ
ಮೊಳೆತುವಾಕ್ಷಣ ಕಾಮು ಬಾಣದ
ಹಿಳುಕುಗಳು ಹಿರಿದಾಗಿ ಚಿತ್ತಜ
ನಳವಿಯಲಿ ಬೆಂಬಿದ್ದು ಮೌನದೊಳಿರ್ದಳಾಮಾಯೆ

ಆವ ದೇಶದ ಪುರುಷನೈ ನಿನ
ಗಾವ ಹೆಸರೈ ನೀನು ನೆಲೆಗೊಂ
ಡಾವ ಠಾವಿನಲಿಪ್ಪೆಯೈ ಎಂದೆನುತ ವಿನಯದಲಿ
ಭಾವೆಯರು ಬಳಿಕಾತನನು ಸಂ
ಭಾವಿಸುತ ಕೇಳಿದಡೆ ಅಲ್ಲಮ
ದೇವನೊಲಿದಾಸತಿಯರಿಗೆ ನಸು ನಗುತಲಿಂತೆಂದ

ದೇಶವೆಮ್ಮದು ಹೇಳುವಡೆ ಪರ
ದೇಶ ಬಿರುದಿನ ಬಿಂಕಕಾಱರ
ವಾಸಿಗರನಲ್ಲೆನಿಸುವಲ್ಲಮನೆಂಬ ಪೆಸರೆನಗೆ
ಲೇಸು ಮಾಡುವ ಠಾವುಗಳಲಭಿ
ಲಾಷೆಯಿಲ್ಲದೆ ಹೊದ್ದುವೆವು ಸುಖ
ವಾಸಿಗಳು ನಾವೆಂದನಲ್ಲಮನೊಲಿದು ಸಖಿಯರಿಗೆ

ಒಳ್ಳಿತಾಯಿತು ಕಾರ್ಯ ನೀನಿ
ನ್ನಲ್ಲಿಗಲ್ಲಿಗೆ ಹೋಹ ಬುದ್ಧಿಯ
ನಲ್ಲವಿಡು ಸುಖದಿಂದಲೆಮ್ಮೊಡತಿಯ ಸಮೀಪದಲಿ
ಬಲ್ಲ ವಿದ್ಯಾವಸ್ತುಗಳೊಳೆ
ಮ್ಮೆಲ್ಲರೋಪಾದಿಯಲಿ ಮನಬಂ
ದಲ್ಲಿ ನೀನಿಹುದೆಂದರಾ ಕಾಮಿನಿಯರಲ್ಲಮಗೆ

ಶರಣೆನುತಲಾ ಮಾಯೆ ಮಧುಕೇ
ಶ್ವರನ ಬೀಳ್ಕೊಂಡಾಗಳಾತನ
ಕರೆದು ಕೊಂಡೆಯ್ತಂದು ತಂದೆಯು ಸಮ್ಮುಖವ ಮಾಡಿ
ಅರಸನಱಿಕೆಯ ಮಾಡಿ ಮಿಗೆ ಬಳಿ
ಕಿರಿಸಿಕೊಂಡಳು ನಾಗವಾಸದ
ನೆರವಿಗೊಪ್ಪವ ಬೋವಗಾಱಿಕೆತನದಲಲ್ಲಮನ

ಹರುಷದಿಂದಲಿ ಕನ್ನೆ ಮಾಡದ
ಪಿರಿಯ ಚೌಪಾಳಿಗೆಯಲತಿ ವಿ
ಸ್ತರದಲೋಲಗಗೊಟ್ಟು ಕುಳ್ಳಿತು ಸಕಲ ವಿಭವದಲಿ
ಭರತ ವಿದ್ಯಾದ್ಯಖಿಳ ಕಳೆಗಳ
ಪರಿಚರಿಯ ಸೇವದಿಂದ ಮಾಯಾ
ತರುಣಿ ಮನದೊಳು ಸೊಗಸಿ ಮಾತಾಡಿಸುವಳಲ್ಲಮನ

ಮಡದಿ ಮದನನ ಬಲೆಯ ಬಾಯುಲಿ
ತೊಡರಿ ಬಿದ್ದುದನಱಿದರಾಗಳೆ
ಒಡತಿ ನಿನ್ನಯ ಬಗೆಯ ಬಯಕೆಯ ನಾಚದೆಮ್ಮೊಡನೆ
ನುಡಿದೆಯಾದಡೆ ಬಳಿಕಲಲ್ಲಮ
ಗೆಡೆಗುಡುವ ಒಂದೆಡೆಯ ಬೀಡಿನ
ಗುಡಿಯನೆನುತಾ ಮಾಯೆಗಿಂತೆಂದರು ವಿದಗ್ಧೆಯರು

ಎನಲು ಕನ್ಯಾ ಭಾವ ಭಂಗಿಯ
ಮನದ ನಾಚಿಕೆಯೊಂದು ನೆಟ್ಟನೆ
ಜನ ಪತಿಯ ಮಗಳೆಂಬ ಹೆಕ್ಕಳ ಹೆಮ್ಮೆ ತಾನೆರಡು
ತನಗೆ ಸಮ ಸಂಪ್ರಾಪ್ತನಲ್ಲದ
ಮನುಜಗಳುಪಿದೆನೆಂಬ ಮಱವೆಯು
ಘನತೆ ಮೂಱುವಕಳುಕಿ ನಾಚುತಲಿರ್ದಳಾ ಮಾಯೆ

ಈ ಕುಮಾರಿಯ ತಿಳಿವೆವೆಂಬುದ
ದೇಕೆ ಕಾಣಲಿ ಬಂದ ಕಾರ್ಯವ
ನಾ ಕಳಾವಿದನನು ವಿಚಾರಿಸಬೇಕು ನಾವೆನುತ
ಆಕೆಯರು ಮದಮಾನಿಯೆಂಬ ವಿ
ವೇಕಿಯನು ಕಳುಹಿದಡೆ ಬಂದಳ
ನೇಕ ಚದುರಿನ ಚಪಳತನದಲಿ ಅಲ್ಲಮನ ಬಳಿಗೆ

ನಿನಗೆ ಸಾಕಿನ್ನೇಕೆ ಬೀಡಿನ
ಮನೆ ವೃಥಾ ಬೇಚೊಂದು ಸಂಕ
ಲ್ಪನೆಯ ಬಿಡು ನಮ್ಮೊಡತಿಯಾದಡೆ ಮುಟ್ಟಿ ಮೋಹದಲಿ
ನಿನಗೆ ಕೃಪೆಯಾಗಿರ್ದಳೆಮ್ಮರ
ಮನೆಯೊಳಿರು ಸುಖಿಯಾಗಿ ನೀನೆಂ
ದೆನುತ ನಯದಲಿ ನುಡಿದಳಾ ಮದಮಾನಿಯಲ್ಲಮಗೆ

ನಾವು ಪರದೇಶಿಗಳು ಬಡವರು
ನೀವು ದೊರೆಗಳು ಮೇಲೆ ನಿಮ್ಮಯ
ದೇವಿ ರಾಜಕುಮಾರಿ ನಾವೇ ಪುರುಷವೇಷಿಗಳು
ನೀವು ಸತಿಯರು ನಿಮ್ಮೊಳಿಹುದೆಮ
ಗಾವ ಮರಿಯಾದೆಗಳು ದೂರದ
ಸೇವೆ ತಾನೆಮಗುಚಿತವೆಂದನು ನಗುತಲಲ್ಲಮನು

ನಗೆಯ ಮಾತಲ್ಲಣ್ಣ ಮಾಯೆಯ
ಬಗೆಗೆ ನಿನ್ನನು ಸೇವಕಾವ್ವ
ತ್ತಿಗಳೊಳೆಣಿಸುವ ಪರಿಯ ಕಾಣೆನು ನಿನ್ನ ತನ್ನಿಂದ
ಮಿಗಿಲು ಮಾಡುವ ಪರಿಯಲಿರ್ದಳು
ಹಗಲಿರುಳು ಹಂಬಲಿಸಿ ಕೇಳ್ಳೆ
ಬೆಗಡುಗೊಳ್ಳದಿರೆನುತ ಬೋಳೈಸಿದಳು ಮದಮಾನಿ

ಆವ ಶಕುನವ ತಿದ್ದಿಕೊಂಡೆಲೆ
ಭಾವ ಬಂದೆಯೊ ಅಲ್ಲದಿರ್ದಡ-
ದಾವ ಮೋಹನವಶ್ಯವಿದ್ಯವ ಕಲಿತೆಯೋ ದಿಟಕೆ
ದೇವಿಯನು ನೀ ಮರುಳು ಮಾಡಿದೆ
ಜಾವಳಿಗನಲ್ಲೆನುತ ಬಂದಳು
ಭಾವೆ ಬಳಿಕಲ್ಲಮನ ಬಳಿಯಿಂದೊಡತಿಯಿದ್ದೆಡೆಗೆ

ಅಂದಿನಿರುಳಿನಲಾರುವಜಿಯದ
ಚಂದದಿಂದಲಿ ಬಳಿಕ ಸೆಜ್ಜೆಯ
ಮಂದಿರಕೆ ಸಡಗರಿಸಿ ಮಾಯೆಯನಲ್ಲಮನನೊಲಿದು
ತಂದು ಬಿಜಯಂಗೆಯ್ಸಿದರು ಬಳಿ
ಕಿಂದುಮುಖಿಯರು ತಮವ ತರಣಿಯ
ನೊಂದುಗೂಡುವೆವೆಂಬ ಭಾವಭ್ರಮಿತ ಬುದ್ಧಿಯಲಿ

ಮಳೆಗೆ ನೆನೆವುದೆ ಗಾಳಿ ಬೀಸಿದ
ಡೊಲೆವುದೇ ಬಲುಗಿಚ್ಚಿನುರಿಯಿಂ
ದಳಿವುದೇ ನಭವಾ ಪರಿಯ ಬಯಲಿಗನು ತಾನಾಗಿ
ಕಳವಳದ ವಿಷಯುಗಳ ವೆಸನಗ
ಳೊಳಗೆ ಸಿಕ್ಕುವನಲ್ಲವಾತನ
ಹೊಲಬು ತಾ ಬೇಱೊಂದು ಪರಿ ಏನೆಂಬೆನಲ್ಲಮನ

ಅಣ್ಣ ಕೇಳುದಕದಲಿ ಮುಳುಗಿದ
ಸುಣ್ಣಕಲ್ಲಂತಾಗಿ ಕುದಿವುತ
ಬನ್ನ ಬಟ್ಟಳು ಮಾಯೆ ಕಾಣುತ ನಿನ್ನ ಬೇಟದಲಿ
ಕಣ್ಣು ಕಾಣದೆ ಕಾಮನೇಱುನ
ಹುಣ್ಣಿನಲಿ ಹೊರಳಿದಡೆ ಆಸ್ಥಿತಿ
ಹಣ್ಣಿ ಹಬ್ಬಿತು ಪುರದೊಳೆಂದಳು ಸಕಳೆಯಲ್ಲಮಗೆ

ಹೂಡಿ ಹಣ್ಣಿದ ಜಗದ ಜಂತ್ರವ
ನಾಡಿಸುವ ಮಾಯಾಂಗನೆಯು ತಾ
ನಾಡಿಸುವೆನೆಂಬುದನು ಪ್ರತ್ಯಕ್ಷದಲಿ ತೋರ್ಪಂತೆ
ಆಡಿಸುವ ಮದ್ದಳೆಯ ಜೋಕೆಯ
ಜೋಡಿಸುತಲಲ್ಲಮನು ಪಾತ್ರವ
ನಾಡುವವಳಾ ಮಾಯೆ ಲೋಕವ ಮರುಳು ಮಾಡುತಲಿ

ಲಲಿತ ನಿರ್ಮಳ ಚಂದ್ರಕಾಂತದ
ಶಿಲೆಯ ಹತ್ತಿರೆ ಲತೆಯ ದಾವಾ
ನಳನು ಕೊಳಲಾ ಜ್ವಾಲೆಯಾ ಶಿಲೆಯೊಳಗೆ ತೋರ್ಪಂತೆ
ತಿಳಿಯದಱಿಯದ ಜನಕೆ ಮಾಯೆಯ
ತಳಿತ ಕಾಮಜ್ವಾಲೆಯಲ್ಲಮ
ನೊಳಗೆ ಪ್ರತಿಬಿಂಬಿಸಿದುದಾತನೆ ಕಾಮಿಯೆಂಬಂತೆ

ಈಕೆಯಂದವನಱಿದು ನಾವಿ
ನ್ನೇಕೆ ಸದಮಲ ಸ್ವಸ್ವರೂಪವ
ಕಾಕರಿಗೆ ಕಾಣಿಸುವುದನುಚಿತವೆನುತ ತನ್ನೊಳಗೆ
ಸಾಕೆನುತ ನಟ್ಟುವಿಗತನವನು
ನೂಕುತಲಿ ಮದ್ದಳೆಯ ತಾಸೊಡೆ
ಹಾಯ್ಕಿ ನಗುತಲಿ ಹೋದನಲ್ಲಮನಖಿಳಜಗವಱಿಯೆ

ಬಾಲೆ ಹಂಬಲಿಸಿದಡೆ ಫಲವೇ
ನೇಳು ತಡೆದಿರದಲ್ಲಮನನೀ
ರೇಳು ಲೋಕದಲಱಸಿ ನೋಡುವೆವೆನುತಲಾ ವಿಮಳೆ
ಹೇಳಿದಡೆ ಅಹುದೆನುತ ಚಿತ್ತವ
ತಾಳಿ ತರಹರಗೊಂಡು ಬಳಿಕಲಿ
ಕಾಲುನಡೆಯಲಿ ಮಾಯೆ ನಡೆದಳು ಕೆಳದಿಯರು ಸಹಿತ

ಬಿಸಿಲು ಸುಂಟುರು ಗಾಳಿ ದೆಸೆಗಳ
ಮುಸುಕುತಿಹ ಕೆಂದೂಳು ಕಾಳ್ಕಿ
ಚ್ಚೆಸೆವ ನಟ್ಟಡವಿಯಲಿ ನಡೆದೆಯ್ತರುತ ಕಾಲೊಡೆದು
ಬಸವಳಿದು ಬೀಳುತ್ತಲೇಳುತ
ಹಸಿವು ತೃಷೆ ಬಳಲಿಕೆಗಳಲಿ ದೂ
ಪಿಸುತ ಬಂದಳು ಮಾಯೆ ತಾನಲ್ಲಮನನಱಸುತಲಿ

ಸೂಡುತಲಿ ಬಿಡುಜಡೆಗಳನು ಕೈ
ಗೂಡುತಲಿ ಕಡವಸವ ಭೂತಿಯು
ಗೂಡ ಸಂವರಿಸುತ್ತ ಲಾಕುಳ ಯೋಗವಟ್ಟಿಗೆಯು
ಜೋಡಿಸುತ ಜಪ ತಪ ಸಮಾಧಿಯು
ಮಾಡುವವರಾ ಮಾಯೆ ಬರಲೆ
ದ್ದೋಡಿದರು ಹುಲಿಗಂಡ ಹುಲ್ಲೆಗಳಂತೆ ದೆಸೆ ದೆಸೆಗೆ

ಕರುಣಿಗಳ ಬಲ್ಲಹನು ಬೋಳೆಯು
ರರಸ ಭಜಕರ ಬಂಧುವೆನಿಸುವ
ಪರಮ ಪಾವನನಲ್ಲಮ ಪ್ರಭು ತಾನೆ ತನ್ನೊಳಗೆ
ವರ ತಪೋಧನರಂಜಿಕೆಯನಾ
ತರುಣಿಯರ ಬಳಲಿಕೆಯು ನಾನೇ
ಪರಿಹರಿಸಬೇಕೆನುತಲಾಕ್ಷಣ ಸುಳುಹುದೋಱಿದನು

ನಿಲಿಸಿ ಭಯ ಬೇಡೆಂದು ತಾಪಸ
ಕುಳವನಭಯವ ಕೊಟ್ಟು ಕರುಣದ
ಬಳಕೆಯಲಿ ತಾನವರಿಗೊಬ್ಬ ತಪಸ್ವಿಯಂದದಲಿ
ನಲಿದು ಹರಿತಹ ಮಾಯೆಯನು ಮೂ
ದಲಿಸಿ ಮುಱಿದೋಡಿಸುವೆನೆನುತಲಿ
ಸುಳುಹುದೋಱಿದನಾಕೆಗಲ್ಲಮ ಮುನ್ನಿನಂದದಲಿ

ಲೇಸು ಮಾಡಿದೆಯಯ್ಯ ಮಾಯೆಯು
ನೀಸು ದಿನ ಮನವೊಲಿಸಿ ಕಡೆಯಲಿ
ಘಾಸಿ ಮಾಡುವುದುಚಿತವೇ ನಿನಗೆನುತ ಕೆಳದಿಯರು
ಆ ಸದಾನಂದೈಕ್ಯ ಮೂರ್ತಿ ವಿ
ಳಾಸಿಯಲ್ಲಮಲಿಂಗನಿದಿರಲಿ
ಸೂಸಿದರು ತಮ್ಮೊಡತಿಯಾಸಱು ಬೇಸಱುಲ್ಲವನು

ಆರು ಮೊದಲಲಿ ಬಯಸಹೇಳಿದ
ರಾರು ಕಾಣುತ ಕರೆಸ ಹೇಳಿದ
ರಾರು ತನ್ನನು ಬಳಿಕುದಾಸಿನ ಮಾಡಹೇಳಿದರು
ನಾರಿಯರಿಗಿದು ಸಹಜ ಸಂಚಲ
ಕಾರಣಿಕತನ ತನ್ನ ತಾನೇ
ದೂರಿಸಿದಡಾನೇನ ಮಾಡುವೆನೆಂದನಲ್ಲಮನು

ಶರಣ ಜನ ರಕ್ಷಾಮಣಿಯೆ ಕಿಂ
ಕರ ಚಕೋರ ಸುಧಾಕರನೆ ಭಾ
ಸುರ ದಯಾಂಭೋನಿಧಿಯೆ ನೀನೀ ಸ್ತ್ರೀಯ ತನುಮನವ |
ಒರೆದು ನೋಡಿದಡಲ್ಲಿ ಭಾವಿಸೆ
ಹುರುಳು ಬಳಿಕೇನುಂಟು ನಿನ್ನಯ
ಕರುಣವಾಕೆಯು ಹರಣವೆಂದಳು ವಿಮಳೆ ವಿನಯದಲಿ ||

ಬಾಲೆ ನೀರಿಗೆ ಹೆಪ್ಪನೆಱೆದಡೆ
ಹಾಲಿನಂತಿರೆ ಹೆತ್ತು ಭುಂಜಿಸಿ
ಬಾಳಿದವರಾರುಂಟು ಭಾವಿಸಲಾ ಪ್ರಕಾರದಲಿ |
ಕಾಳುಮತಿಗಳಿಗೆನಿತು ಬುದ್ಧಿಯ
ಹೇಳಿದಡೆ ಫಲವೇನು ಸಾಕೀ
ಖೂಳೆಗಾನಿನ್ನೇನ ಮಾಡುವೆ ವಿಮಳೆ ಕೇಳೆಂದ ||

ಕಡಲ ನೀರುಗಳೆಲ್ಲವಮೃತದ
ಮಡುಗಳಾದಡೆಯುಹವು ಸುರಗಿರಿ
ಕುಡಿವರಿದು ಹಬ್ಬಿದಡೆ ಹಬ್ಬುವುದವನಿ ಮಂಡಲವ
ಗಿಡುಗಳೆಲ್ಲವು ಕಲ್ಪ ತರುವಾ
ದಡೆಯಹವು ಎತ್ತಾನುಕಾಲಕೆ
ಮಡದಿ ಮಾಯೆಗೆ ಪರಮ ತತ್ವಜ್ಞಾನವಿಲ್ಲೆಂದ

ಜಾಱಿದನು ಬಳಿಕಾತನೀಕೆಗೆ
ಹೇಱಿದುದು ಕಡು ದುಗುಡ ಸಖಿಯರು
ನೀಱೆಯನು ಸಂತೈಸಿದರು ನಾನಾ ಪ್ರಕಾರದಲಿ
ಗಾಱುದೂಱಿನ ಮಾಯೆ ಗೀಯೆಗೆ
ತೋಱಿಸುವನೇ ತನ್ನ ನಿಜವನು
ಮೀಱಿ ಮೀಸಲನಲ್ಲಮ ಪ್ರಭುಗುರು ಗುಹೇಶ್ವರನು

ಅಲ್ಲಮ-ಸಿದ್ಧರಾಮ ಸಂಮಿಲನ

ಹಲವು ಪರಿಯಲಿ ಚಿತ್ರ ಪತ್ರದ
ಚೆಲುವನಾಗಿರೆ ಪಶು ಪತಿಯ ದೇ
ಗುಲವ ಮಾಡಿಸುತಿಪ್ಪ ಗುಡ್ಡಗಳೆಕ್ಕವಿಂಡುಗಳು
ನೆಲನೆ ಬೆಸಲಾದಂತೆ ಮಿಗೆ ಮ
ಗ್ಗೆಲಸದೊಡ್ಡರು ಬಂಡಿಕಾಱರು
ಕಲುಕುಟಗರಿರ್ದೆಡೆಯ ಸೊನ್ನಲ ಪುರಕೆ ಪ್ರಭು ಬಂದ

ನೂಲ ಸಂಕಲೆಗಡಿದು ಕನಕದ
ಕೋಳವನು ಕಾಲಿಂಗೆ ಕೀಲಿಪ
ಕಾಳು ಮತಿಯುವನಂತೆ ಸತಿ ಸುತ ಕೂಟ ಭಯವೆಂದು
ಬಾಳಿಕೆಯಸತಿಗಳೆದು ಮರಳಿಯು
ಬೋಳುಮಂಡೆಯ ಕೀರ್ತಿಗೋಸುಗ
ಕೋಳುಹೋದನೆ ರಾಮನೆನುತಲ್ಲಮನು ಬೆಱಗಾದ

ಚಿಕ್ಕ ಸಂಸಾರವನು ಸಡಿಲಿಸಿ
ಹೊಕ್ಕನಲ್ಲಾ ಹಿರಿಯ ಸಂಸಾ
ರಕ್ಕಕಟ ವಿಖ್ಯಾತಿ ಪೂಜಾ ಲಾಭದಿಚ್ಛೆಯಲಿ
ಸಿಕ್ಕಿಬಿದ್ದನು ಸಿದ್ಧರಾಮನು
ಮಿಕ್ಕ ಭವಭಾರಿಗಳನಾದಡೆ
ಮುಕ್ಕದೇ ವಿಧಿಯೆನುತಲಲ್ಲಮ ನೋಡಿ ಬೆರಗಾದ

ಒಡ್ಡ ರಾಮನಿದೇನು ಗೊಡವೆಯ
ನೊಡ್ಡಿ ಕೊಂಡು ವೃಥಾ ಮನಸ್ಸನು
ಗೊಡ್ಡುಮಾಡಿಯೆ ಕೆಟ್ಟನೆನುತಲ್ಲಮನು ಕೇಳಿದಡೆ
ಗುಡ್ಡರೆಲ್ಲರು ಗುರುವನಾವನು
ಖಡ್ಡತನದಲಿ ಜಱೆವನೆನುತವ
ರಡ್ಡಹಾಯ್ದರು ತೊಡಗಿದರು ತೋಟಿಯನು ತಮತಮಗೆ

ಅಕಟ ನಿಮ್ಮಯ ಗುರುವಿನಾಗಮ
ಯುಕುತಿ ಪಾಷಾಣಕ್ಕೆ ಬಂದುದೆ
ವಿಕಳ ಸಿದ್ಧನ ನಂಬಿ ಪಡೆದಿರಿ ಗುಡ್ಡ ಪದವಿಯನು
ಸಕಲ ಕಲ್ಲನು ಕಡಿದು ಕಲ್ಲಿಗೆ
ಶಿಖರ ದೇಗುಲವೆಂದು ಮಾಡಿಸಿ
ಮಕರಿಸುವರಿವರೊಡ್ಡರಲ್ಲದೆ ಸಿದ್ಧರಲ್ಲೆಂದ

ನೋಡು ನೋಡಾ ಮತ್ತೆ ಮಾಣದೆ
ನಾಡ ಮಾತನು ಕಲಿತು ನಮ್ಮೊಡ
ನಾಡುತಿಹನೆ ದೊಠಾರತನದಲಿ ಮರುಳು ಗೊಂಡಂತೆ
ಬೇಡ ಬೇಡಿನ್ನೆಮ್ಮ ಗುರುವನು
ಖೋಡಿಗಳೆದಡೆ ಕೆಡುವೆ ನೀನೆನು
ತಾಡುತಿರ್ದರು ಬಱಿಯ ಬಿಂಕದ ಗುಡ್ಡರಲ್ಲಮಗೆ

ಗುಡ್ಡಗಳು ನೀವಕಟ ನಮ್ಮಯ
ಖಡ್ಡತನಕಾನುವಿರೆ ನಿಮ್ಮಯ
ದೊಡ್ಡನನು ಕರೆ ತನ್ನಿ ನೋಡುವವಾತನಳಬಳವ
ಒಡ್ಡ ರಾಮನ ರೀತಿಯನುಭವ
ದೊಡ್ಡವಣೆಯನು ಕಾಬೆವೆನುತಲಿ
ಗುಡ್ಡರೆಲ್ಲರು ಕೆರಳುವಂತಿರೆ ನುಡಿದನಲ್ಲಮನು

ಕೆಡಹಿಕೊಳ್ಳಿನ್ನೀತನಾಳ್ದನ
ಜಡಿದು ನುಡಿದುಕ್ಕಲಿಸಿ ಹೋಹನೆ
ಹಿಡಿದುಕೋ ಕೋಯೆನುತ ಗುಡ್ಡಗಳೆಕ್ಕೆವಿಂಡುಗಳು |
ಬಿಡದೆ ತೆಕ್ಕೆಯೊಳಲ್ಲಮನ ಬಯ
ಲೊಡಲ ಬಂಧಿಸಲೆಂದು ಬಿಗಿಯಲು
ಹಿಡಿಹಿಗಿಲ್ಲದೊಡವರು ಬೆಱಗಾಗಿರ್ದರದ ಕಂಡು ||

ಆಳು ನೆರೆದುದು ಲಕ್ಕ ಸಂಖ್ಯೆಗೆ
ಮೇಳವಿಸಿ ಕವಿದಿಡುತಲಲ್ಲಮ
ಹೊಳಿಹೋದನು ಕವಣೆಗಲ್ಲಲಿ ಕೈದುಗಳನೆಸಲು
ಹೇಳಲೇನದ ಕಲ್ಲ ರಾಶಿಯ
ಮೇಲೆ ನಿಂದನು ಮತ್ತೆ ತನ್ನಯ
ಲೀಲೆಯಲಿ ನಿರ್ಲೇಪನಿರ್ದನು ನಗುತ ಪ್ರಭುರಾಯ

ಛಾಯೆಯೊಳು ಕಾಳಗವ ಮಾಡುವ
ಮಾಯೆವಶರುಗಳಂತೆ ಕಡೆತನ
ಕಾಯಸವೆ ಕೈ ತಟ್ಟಿ ಹೋಯಿತು ಕದನ ಮುಖದೊಳಗೆ
ತಾಯ ವಿರಹಿತನಲ್ಲಮ ಪ್ರಭು
ರಾಯನಾರೆಂದಱಿಯಲಱಿಯದೆ
ಸಾಯಸವ ಮಾಡಿದರು ಗುಡ್ಡಗಳಿಕ್ಕೆವಿಂಡುಗಳು

ನಮ್ಮ ಸಿದ್ಧನನೇಳಿಸಿದವಂ
ಗೊಮ್ಮೆ ಶಿಕ್ಷೆಯ ಮಾಡದನ್ನಕ
ನಮ್ಮ ಕೋಪಾಟೋಪ ನಿಲ್ಲದೆನುತ್ತ ಹರಿತಂದು
ಸುಮ್ಮನೆಯ್ತಂದೊಬ್ಬ ಜಂಗಮ
ಹೆಮ್ಮೆಗೆಡಿಸಿಯೆ ಹಳಿದು ನುಡಿದನು
ನಿಮ್ಮನೆಂದಱುಹಿದರು ಹದನನು ಸಿದ್ಧರಾಮಂಗೆ

ಆರು ನಮ್ಮನು ಜಱೆದವನು ಜಂ
ಭಾರಿಯೋ ದನುಜಾರಿಯೋ ಕಾ
ಮಾರಿಯೋ ತೋಱವನ ಹೆಡತಲೆಗುಗಿವೆ ನಾಲಗೆಯ
ಬೇರುಸಹಿತವೆ ಕೀಳುವೆನು ಕೈ
ವಾರವೇಕೆನುತೆದ್ದು ಬಂದನು
ಧೀರತನದಲಿ ಸಿದ್ಧರಾಮನು ಗಜಱಿ ಗರ್ಜಿಸುತ

ಲೇಸು ಲೇಸೈ ಸಿದ್ಧರಾಮನ
ವಾಸಿ ಸಂಸಾರಿಗಳಿಗಿಂದಲಿ
ಸಾಸಿರಕೆ ವೆಗ್ಗಳಿಸಿತಲ ಸುಡು ಸುಡು ಯತಿತ್ವವನು
ಈಸು ಕೋಪಾಟೋಪ ರೋಷಾ
ವೇಶವೇತಕೆ ಯೋಗಿಯಾದ ನಿ
ರಾಸೆವಂತಂಗೆನುತಲಿರ್ದನು ನಗುತ ಪ್ರಭುರಾಯ

ಸಾಕು ಸಾಕು ಮಹೇಂದ್ರಜಾಲವ
ನೀ ಕಲಿತು ಬಂದೆಮ್ಮ ಮುಂದಿಯ
ಕಾಕುತನದಲಿ ಕಾಡಿದಾ ಮೊಗ್ಗಿನ್ನು ನಮ್ಮೊಡನೆ
ನೂಕಲಱಿಯದು ನಿನಗೆನುತಲು
ದ್ರೇಕದಿಂದಲಿ ಸಿದ್ಧರಾಮನ-
ನೇಕ ವಹಣಿಯಲಣಕವಾಡುತಲಿರ್ದನಲ್ಲಮನ

ಭಾಪುರೇ ಮಝು ಪೂತು ನೀನಹು
ದೀ ಪರಿಯಲಿರಬೇಕು ಮನದಾ
ಳಾಪದಂಗವಣೆಗಳು ಮಿಗೆ ಮಾಯಾ ಪ್ರಪಂಚಿನಲಿ
ಕೋಪ ನಿಮ್ಮಯ ಸಂಪ್ರದಾಯ ಕ
ಳಾಪದಲಿ ಶಾಶ್ವತವಲಾ ನಿ
ರ್ಲೇಪಗೀ ಪರಿಯುಚಿತವೇ ರಾಮಯ್ಯ ಕೇಳೆಂದ

ಕೆಣಕದಿರು ನೀ ಸಂಪ್ರದಾಯಗ
ಳೆಣಿಕೆ ನಿನಗೇಕಕಟ ಲೋಕವ
ನಣಕವಾಡಿಯೆ ಹೋಹೆಯಲ್ಲದೆ ಯೋಗ ಮಾರ್ಗದಲಿ
ಸೆಣಸದಿರು ನೀನಾಜೆಯಿಾಜೆಯ
ಬಣಗರಂದದಲೆನ್ನ ಜಝೆದಡೆ
ಹಣೆಯ ಕಣ್ಣಿನ ಕಿಡಿಯ ಕೆದಱುವೆನೆಂದ ರಾಮಯ್ಯ

ಚಾಗು ಚಾಗುರೆ ನೊಸಲ ಕಣ್ಣಿನ
ಬೇಗೆಯಲಿ ಮುನ್ನೆನಿತ ಕೊಂದೆಯೊ
ಯೋಗಿಯಹುದೈ ನೀನು ಹಿಂಸಾ ಧರ್ಮ ಕರ್ಮದಲಿ
ರಾಗದಿಂದುರಿದೇಳುತಿಹ ಭವ
ರೋಗಿ ನಿನ್ನೊಳು ಮಾತನಾಡಲಿ
ಕಾಗದೆಮಗೆನುತಿರ್ದನಲ್ಲಮ ಸಿದ್ಧರಾಮಂಗೆ

ಜಡಿದು ನುಡಿವುದನೀತನಾದಡೆ
ಬಿಡನೆನುತ್ತಲಿ ಸಿದ್ಧರಾಮನು
ಘುಡಘುಡಿಸಿ ಘೂರ್ಮಿಸುತ ಕೋಪಿಸಿ ನೊಸಲ ಕಣ್ದೆಱೆಯೆ
ಸಿಡಿಲುಗಿಡಿಗಳು ಸೂಸುತಲ್ಲಮ
ನಡಿಗಳೆಡೆಯನು ಹೊದ್ದಲಮ್ಮದೆ
ಸಿಡಿದು ಸೀಕರಿಗೊಳಿಸುತಿರ್ದುವು ಸಕಲ ಜೀವರನು

ಮಾಡಿಕೊಂಡನು ಪರಮ ಪುರುಷನ
ಕೂಡೆ ತೋಟಿಯ ಸಿದ್ಧರಾಮನು
ಮೂಢತನದಲಿ ಹವಣಸಱಿಯದೆ ಶಿವ ಮಹಾದೇವ
ನೋಡೆ ಬಡವನ ಕೋಪ ದವಡೆಗೆ
ಕೇಡ ತಹವೊಲು ತನ್ನ ಪುರವನೆ
ಕೂಡೆ ಸುಡುತಿದೆ ಕಿಚ್ಚುಗಣ್ಣಿಂದೊದಱಿತಖಿಳ ಜನ

ಕಡಲನತಿ ಮಥಸವನು ಮಾಡಲು
ಸುಡುತ ಬಹ ಹಾಳಾಹಳಾಗ್ನಿಯು
ಕಡುಹ ನಿಲಿಸಿ ಜಗಂಗಳನು ರಕ್ಷಿಸಿದ ಶಿವನಂತೆ
ತೊಡೆದನಾಗಳೆ ನೊಸಲ ಕಣ್ಣಿನ
ಕಿಡಿಯನೆಲ್ಲರನುಳುಹಿದನು ತ
ನ್ನಡಿಯ ಕೃಪೆಯಿಂದಲ್ಲಮ ಪ್ರಭು ರಾಯ ನಿಮಿಷದಲಿ

ತ್ರಾಹಿ ಕರುಣಾಕರನೆ ಸರ್ವ
ದ್ರೋಹವೆನ್ನದು ನಿಮ್ಮ ಸಱಿಯದೆ
ಮೋಹಮಾಯಾಡಂಬರಕೆ ಮರುಳಾದೆನಿನ್ನೆಬರ
ಊಹೆಗೇಡಿಗನವಗುಣದ ಸಂ
ದೋಹವನು ನೀ ಮಱೆದು ಕರುಣಿಸ
ಬೇಹುದೆನುತಾ ರಾಮನಲ್ಲಮನಂಘ್ರಿಗೆಱಗಿದನು

ಮನದೊಳಗೆ ನಸುನಗುತಲೀ ಮೂ
ರ್ಖನ ಗುಣಂಗಳನೇನ ಮಾಡುವೆ
ನೆನುತಲಲ್ಲಮ ಸರ್ವಜೀವ ದಯಾ ಪ್ರದಾಯಕನು
ತನುಜ ಸಾಕೇಳೇಳು ಖಾತಿಯು
ನೆನಹು ನಮ್ಮೊಳಗಿಲ್ಲವೆನುತಲಿ
ವಿನಯದಿಂದೆತ್ತಿದನು ರಾಮನ ವಿಮಲ ಮಸ್ತಕವ

ದೇವ ನೀನೀ ಪರಿಯ ಜಂಗಮ
ಭಾವ ಭಣಿತೆಯ ಧರಿಸಿ ಬಂದಡೆ
ಗಾವಿಲರು ನಾವೆತ್ತ ಬಲ್ಲೆವು ನಿನ್ನ ಮಹಿಮೆಯನು
ಜಾವಳಿಗ ನೀನೆಂದು ಬಗೆದಕ
ಟಾವು ಬಳಲಿದೆವಿನ್ನು ಕರುಣಿಸಿ
ಕಾವುದೆನುತಲಿ ಸಿದ್ಧರಾಮನು ನುಡಿದನಲ್ಲಮಗೆ

ಎನಗೆ ನಿಮ್ಮಯ ದರ್ಶನ ಸ್ಪ
ರ್ಶನವೆ ಸರ್ವಸಮಾಧಿಯೆನಗಾ
ಮನು ಮುನಿ ತ್ರಿದಶರುಗಳಿದಿರೇ ದೇವ ಕೇಳಿನ್ನು
ಮನವೊಲಿದು ನೀನಿನ್ನು ಮಲಿಕಾ
ರ್ಜುನನ ನೋಡಲು ಬಿಜಯ ಮಾಡುವು
ದೆನುತ ತನ್ನಯ ಮಠಕೆ ಕರೆದನು ರಾಮನಲ್ಲಮನ

ಬಿಡು ಮರುಳೆ ಮನೆಯೇನು ಮಠವೇ
ನಡವಿಯೇನೂರೇನು ಬೇಱೊಂ
ದೆಡೆಗಳುಂಟೇ ಸರ್ವಗತನಾದಾ ಮಹಾತ್ಮಂಗೆ
ನುಡಿದುದೇ ಶಿವ ತತ್ವದಾಗಮ
ನಡೆದುದೇ ಶಿವ ಮಾರ್ಗ ಶರಣರ
ತೊಡಕು ತಾನೀ ಪರಿ ಕಣಾ ರಾಮಯ್ಯ ಕೇಳೆಂದ

ಆದಡಿನ್ನಾ ಸಾವು ತಪ್ಪುವ
ಭೇದವಾವುದು ಮುಕ್ತಿ ಮಾರ್ಗದ
ಹಾದಿಯಾವುದು ನಿತ್ಯಸಹ ಪರಿಯಾವುದೌ ಗುರುವೆ
ವಾದವೇತಕೆ ನಮಗೆ ನಿಮ್ಮಯ
ಪಾದ ಶರಣೆನಬಲ್ಲೆನಲ್ಲದೆ
ಬೋಧಿಸುವುದೆನಗೆನುತಲಿರ್ದನು ಸಿದ್ಧರಾಮಯ್ಯ

ಹಸನ ಮಾಡಿಯೆ ಹರಗಿ ಹೊಲನಲಿ
ಕಸವ ಬಿತ್ತುವ ಮರುಳನಂತಿರೆ
ಮಿಸುಗುವಂತರ್ಮಾರ್ಗದೋಜೆಗೆ ಬಂದ ತನು ಮನವ
ಕಿಸುಕುಳದ ಬಹಿರಂಗದಿಚ್ಛೆಯ
ಬೆಸನದಲಿ ಬೇಯಿಸದೆ ನಿನ್ನಯ
ವಸವ ಮಾಡಲು ನೀನೆ ನಿತ್ಯನು ರಾಮ ಕೇಳೆಂದ

ಕರಣಗಳು ಕೈಗೂಡಿದಾಗಳೆ
ಮರಣವನು ಗೆಲ ಕಲಿತು ಸಂತತ
ಶರಣ ಪದದಲಿ ನಿಂದು ಪರಮಾನಂದ ಸುಖದಿಂದ
ಪರಿಣಮಿಸಿ ನಿರ್ಲೇಪನಾಗಿರು
ತಿರಲು ಬಲ್ಲಡೆ ಬಳಿಕ ನೀನೇ
ಪರಮನಪ್ಪುದು ತಪ್ಪದೈ ರಾಮಯ್ಯ ಕೇಳೆಂದ

ನಂಜುಂಡನ ರಾಮನಾಥ ಚರಿತ್ರ

ಕರ್ನಾಟಕ ವರ್ಣನೆ

ಆ ಮೇರುಗಿರಿಯ ದಕ್ಷಿಣಭಾಗದೊಳಭಿ
ರಾಮತೆವಡೆದೆಸೆದಿರ್ಪ
ಭೂಮಿಗಳೆಡೆಯೊಳಿರ್ಪುದು ಕರ್ನಾಟಮ
ಹೀಮಂಡಲ ಗಾಡಿವೆತ್ತು

ಕಾವೇರಿಯಿಂದ ಗೋದಾವರಿವರೆಗಮಿ
ರ್ದಾ ವಸುಧಾತಳವಳಯ
ಭಾವಿಸೆ ಕರ್ನಾಟಕಜನಪದವದ
ನಾವನೊಲಿದು ಬಣ್ಣಿಸುವನು

ಭೂರಮೆಯುಟ್ಟೊಲ್ಲದಿಟ್ಟ ದುಕೂಲದ
ಸೀರೆಗಳಂತೆ ಕಂಗೊಳಿಪ
ಭೂರಿನದಿಗಳಾ ಕರ್ನಾಟ ಭೂವಿುಯೊ
ಳೋರಂತೆ ಪರಿದೆಸೆದಿಹವು

ಶರಧಿಯನೊಲಿದಮರ್ದಪ್ಪಲಾ ತೋಳುವೆಣ್ಗ
ಳಿರದೆ ನೀಡಿದ ಕೈಗಳಂತೆ
ಕರಮೆಸೆದಿಪ್ಪವು ಪರಿಕಾಲ್ಗಳಾ ನಾಡ
ಸಿರಿಯನದೇನ ಬಣ್ಣಿಪೆನು

ಸುರಗಿ ಸಂಪಗೆ ಸುರಹೊನ್ನೆಗಳಲರ್ವುಡಿ
ವೆರಸಿ ನಲವಿನಿಂದ ಪರಿವ
ಪರಿಕಾಲ್ಗಳ ಪೊನಲಲ್ಲಿ ಕುಂಕುಮರಸ
ದಿರವಿನಂತಿಹುದು ನೋಳ್ಪರಿಗೆ

ನಂದನದಂತೆ ನೋಳ್ಪರ ಕಣ್ಗಳಿಗಾ
ನಂದವನಿರದೆ ಪುಟ್ಟಿಸುತ
ಕುಂದದ ಫಲತತಿಯಿಂದ ಮೆಱೆವ ವನ
ವೃಂದದಿಂದೆಸೆವುದಾ ಭೂಮಿ

ನಾರಿಕೇಳಾಮ್ರ ಪನಸ ಕದಳಿ ಖ
ರ್ಜೂರ ಚಂದನ ಚಂಪಕಗಳ
ಆರಾಮದಿಂದ ರಂಜಿಸುತಿಹುದದು ಕಣ್ಗೆ
ಪಾರಣೆಯನು ಪಾಂಥಜನದ

ದೇವನದೀ ಮಾತೃಕೋರ್ವರೆಯಿಂದದು
ದೇವಲೋಕವನೇಳಿಸುತ
ಭೂವನಿತೆಯ ಧಾನ್ಯದಕ್ಷಯನಿಧಿಯಂ
ತಾವಾಗವೆಸೆದಿರುತಿಹುದು

ಅಳಿಯಿಲ್ಲದಂಬುಜ ಅಂಬುಜವಿಲ್ಲದ
ಕೊಳ ಕೊಳನಿಲ್ಲದಾರಾಮ
ವಿಲಸಿತಾರಾಮವಿಲ್ಲದ ಕಾಲೂರ್ಗಳಾ
ಇಳೆಯೊಳಿಲ್ಲೆಲ್ಲಿ ನೋಡಿದರು

ಪಲ್ಲವವಿಲ್ಲದ ಮಾವು ಮಾವಿಲ್ಲದ
ಮಲ್ಲಿಗೆ ಮಲ್ಲಿಕಾಲತಿಕೆ
ಯಿಲ್ಲದ ವನ ವನವಿಲ್ಲದ ಭೋಗಿಗ
ಳಿಲ್ಲಾ ದೇಶದೆಡೆಯೊಳು

ಕಡಲುಗಳಾ ನಾಡಸಿರಿಯ ಮೊಗವ ನೋಡೆ
ಬಿಡದೆಯ್ತಂದುವೆಂಬಂತೆ
ಕಡೆಗೋಡಿಗಳಿಂದ ಮೆಱೆವ ಬಳ್ಗೆಱೆಗಳಾ
ಪೊಡವಿಯೊಳೆಸೆದಿರುತಿಹವು

ಬೆಳೆಗೆಱಗುವ ಗಿಳಿಗಳ ಬೆದಱಿಸಲೆಂದು
ತಳುವದೆ ನೋಳ್ಪ ಗೋಪಿಯರ
ತೊಳಪ ಕಣ್ಗದಿರ ಬೆಳ್ಪಲೆಗಳೆಂದವು ಮಡಿ-
ಗಿಳಿಯಲಮ್ಮದೆ ಬಾನೊಳಿಹವು

ಗಿಳಿಯು ಸೋಹುವ ಗೊಲ್ಲಾಂಗನೆಯರ ಸಲೆ
ಮೊಲೆವೆಟ್ಟಿನಿಟ್ಟಡೆಯೊಳಗೆ
ತಳುವದಂಗಜ ಚೋರನಾಗಿ ಪಾಂಥರ ತಲೆ
ಕೆಳಗಾಗಿಸುತ್ತಿಹನಲ್ಲಿ

ಆರವೆ ಪರಿಕಾಲ್ಗಳಱವಟ್ಟಿಗೆಗಳತಿ
ಚಾರುಕುಸುಮ ಶಾಕಟಗಳ
ಭೂರಿವಾಟಿಗಳೆಸೆದಿಹವಾ ಜನಪದ
ದೂರೂರ ದಾರಿದಾರಿಯೊಳು

ಅಱವಟ್ಟಿಗೆಯೊಳು ನೀರೆಱೆವ ನೀಱೆಯರ ಕ
ಣ್ಪಾಱಮೆಗಳ್ಪಥಿಕರೆರ್ದೆಗಳ
ಕೊಱೆದಲರ್ಗಣೆಗಳಿಗವರಂತರಂಗವ
ಗುಱಿಮಾಡುತಿಹರಲ್ಲಿ ಬಿಡದೆ

ತೊಲಗೆ ನೀರಾಸೆ ತೊಲಗದೆ ನೀರೆಱೆವಾ
ಲಲನೆಯರಾಸೆ ಬಟ್ಟೆಗರು
ಸಲೆ ನೋಡುತವರ ನೀರೀಂಟುತಿಹರು ಘಟ
ಜಲ ಮುಗಿವನ್ನೆವರಲ್ಲಿ

ನುಡಿಯಿಂದ ಕಿವಿಗಮೃತವನಿರದೆಱೆವುತ
ಕೊಡನೆತ್ತಿ ಕೋಮಲಾಂಗಿಯರು
ಒಡನೆ ನೀರೆಱೆವುತಿಹರು ಬಟ್ಟೆಗರಿಗಲ್ಲಿ
ಬಿಡದೆ ಬೀಱುತ ಬೇಟಗಳನು

ಅಂಗಜನೃಪಗೆ ಪಟ್ಟಾಭಿಷೇಕವ ಮಾಳ್ಪ
ಭಂಗಿಯನಂಗೀಕರಿಸಿ
ಅಂಗನೆಯರು ಪೂರ್ಣಕಳಸಗಳೆತ್ತಿ ಬೆ
ಡಂಗಿನಿಂ ನಿಂದಿಹರಲ್ಲಿ

ಬಗೆಯೊಳೊಗೆದ ಬೇಟದಗೆಗೆ ನೀರ್ದಳಿವಂತೆ
ಮೃಗನೇತ್ರೆಯರು ಪಥಿಕರ್ಗೆ
ನಗುತ ನೀರೆಱೆವುತಿಹರು ವಿರಹಾಗ್ನಿಯಿಂ
ದಗೆ ಪೆರ್ಚ್ಚಲೆದೆಯೊಳವರಿಗೆ

ಕಟ್ಟೆಂಬ ನುಡಿ ಮುಡಿಯೊಳಗಾಚಾರದ
ಬಟ್ಟೆಯೊಳಾಜ್ಞೆಯೆಡೆಯೊಳು
ಪುಟ್ಟಿಹುದಲ್ಲದಾ ನಾಡೊಳದನು ಬಾಯ
ಬಿಟ್ಟು ನುಡಿವರಲ್ಲಿಲ್ಲ

ಮಡಿಯೆಂಬ ಮಾತು ಸಂಖ್ಯಾವಾಚಿಗಳ ಕಟ್ಟ
ಕಡೆಯೊಳು ಶಾಕವಾಟಿಯೊಳು
ತಡೆಯದೆ ರಜಕರೊಳಲ್ಲದಾ ಜನಪದ
ದೆಡೆಯೊಳಿಲ್ಲೆಲ್ಲಿ ನೋಡಿದರು

ಪೊಡೆಯೆಂಬ ನುಡಿ ಶಾಲಿವನದೊಳುದರದೊಳು
ತಡೆಯದೆಯ್ದಿಪ ಗೋಕುಲದೊಳು
ಬಿಡದೆ ವರ್ತಿಸುತಿಹುದಲ್ಲದಾ ಮಾತನು
ನುಡಿವರಿಲ್ಲಾ ದೇಶದೊಳಗೆ

ಪಿಡಿಯೆಂಬ ನುಡಿ ಕರಿಣಿಯೊಳು ಖಡ್ಗದ ಮೊದ
ಲೆಡೆಯೊಳಲ್ಲದೆ ವಸ್ತುವನು
ಕೊಡುವೆಡೆಯೊಳಗಲ್ಲದಾ ಜನಪದವನ
ದಡರಲಮ್ಮದು ಪೇಳ್ವೆನೇನ

ಎಳೆಯೆಂಬ ವಾಚಕ ನೂಲೊಳವನಿಯೊಳು
ಹೊಳೆಯೆಂಬ ಮಾತು ನದಿಯೊಳು
ತಳುವದೆ ಬೇಟೆಯ ಭೇದದೊಳಲ್ಲದಾ
ಇಳೆಯೊಳಿಲ್ಲೆಲ್ಲಿ ಭಾವಿಸಲು

ಬೇಡೆಂಬ ನುಡಿ ಬಿಯದರೊಳು ವಿತರಣದೊ
ಳ್ಕೋಡೆಂಬ ಮಾತರಣ್ಯದೊಳು
ಕಾಡೆಂಬ ವಾಚಕವಲ್ಲದಾ ನಾಡೊಳ
ಗಾಡುವರಿಲ್ಲದನೊಲಿದು

ಗೆಡೆಯೆಂಬ ನುಡಿ ಜೂದುಗಾಱರೊಳ್ಕಡೆಯೆಂಬ
ಬಿಡುನುಡಿ ದಧಿ ಮಥನದೊಳು
ಕೊಡನೆಂಬ ನುಡಿ ನೀರ ತೊಳ್ತಿನೊಳಲ್ಲದಾ
ಪೊಡವಿಯ ಮನುಜರೊಳಿಲ್ಲ

ಸರಸಸಾಹಿತ್ಯ ಸಂಗೀತ ಕಲಾಪ್ರೌಢಿ
ಹರೆಯ ರೂಪುಳ್ಳ ಜಾಣರಿಗೆ
ಹರಣವನೀವ ನೀಱೆಯರಲ್ಲದಱಿಯದ
ತರುಣಿಯರಾ ನಾಡೊಳಿಲ್ಲ

ವೀರರಲ್ಲದೆ ಹಂದೆಗಳು ವಿತರಣಗುಣ
ಶೂರರಲ್ಲದೆ ಲೋಭಿಗಳು
ಸಾರಗುಣಗ್ರಾಹಿ ರಸಿಕರಲ್ಲದೆ ದುರ್ವಿ
ಕಾರಿಗಳಿಲ್ಲಾ ನೆಲದೊಳು

ಆಡುವರಿಲ್ಲನೃತವನಾಜಿರಂಗದೊ
ಳೋಡುವರಿಲ್ಲೆ ರೆದುದನು
ಕೂಡೆ ಕೊಡದರಿಲ್ಲಾ ನಾಡ ಮನುಜರ
ಗಾಡಿಯನೇನ ಬಣ್ಣಿಪೆನು

ಪುರಂದರದಾಸ : ಕೀರ್ತನೆಗಳು

ನಾ ನಿನ್ನ ಧ್ಯಾನದೊಳಿರಲು ಮಿಕ್ಕ
ಮಾನವರೇನು ಮಾಡುವರು ಗೋಪಾಲಾ ಪಲ್ಲವಿ

ಮತ್ಸರಿಸಿದರೇನು ಮಾಡಲಾಪರು ಎನ್ನ
ಅಚ್ಯುತಾನಂತನ ಕೃಪೆಯಿರಲು
ನಿಚ್ಚದೊಳಗೆ ನಿನ್ನನಾಮವ ಜಪಿಸಲು
ಕಿಚ್ಚಿಗೆ ಇರುವೆ ಮುತ್ತುವುದೆ ಹೇಳೆಲೊ ರಂಗ ೧

ಧಾಳಿಲಿ ಕುದುರೆ ವೈಯಾರದಿ ತಿರುಗಲು
ಧೂಳು ರವಿಗೆ ತಾ ಮುಸುಕುವುದೆ
ತಾಳಿದವರಿಗೆ ವಿರುದ್ಧ ಲೋಕದೊಳುಂಟೆ
ಘಾಳಿಗೆ ಗಿರಿ ನಡುಗುವುದೆ ಪೇಳೆಲೊ ರಂಗ ೨

ಕನ್ನಡಿಯೊಳಗಣ ಗಂಟ ಕಂಡು ಕಳ್ಳ
ಕನ್ನವಿಕ್ಕಲವನ ವಶವಹುದೆ
ನಿನ್ನ ನಂಬಿದೆ ನೀ ಎನ್ನ ಸಲಹಬೇಕೊ
ಪನ್ನಗಶಯನ ಶ್ರೀ ಪುರಂದರ ವಿಠಲಾ ೩

ಉದರ ವೈರಾಗ್ಯವಿದು ನಮ್ಮ
ಪದುಮನಾಭನಲ್ಲಿ ಲೇಶ ಭಕುತಿ ಇಲ್ಲ ಪಲ್ಲವಿ

ಉದಯಕಾಲದಲೆದ್ದು ಗಡಗಡ ನಡುಗುತ್ತ
ನದಿಯೊಳು ಮಿಂದವೆಂಥೇಳುತಲಿ
ಮದಮತ್ಸರ ಕ್ರೋಧ ಒಳಗೆ ತುಂಬಿಟ್ಟುಕೊಂಡು
ಬದಿಯಲಿದ್ದವರಿಗಾಶ್ಚರ್ಯ ತೋರುವಂತೆ ೧

ಕಂಚುಗಾರರ ಬಿಡಾರದಂದದಲಿ
ಕಂಚು ಹಿತ್ತಾಳಿ ಪ್ರತಿಮೆ ನೆರಹಿ
ಮಿಂಚಲೆನುತ ಬಹು ಜ್ಯೋತಿಗಳನೆ ಹಚ್ಚಿ
ವಂಚನೆಯುಲಿ ಘನಪೂಜೆ ಮಾಡುವುದು ೨

ಕರದಲ್ಲಿ ಜಪಮಣಿ ಬಾಯಲಿ ಮಂತ್ರವು
ಅರಿವೆಯ ಮುಸುಕು ಮೋರೆಗೆ ಹಾಕಿ
ಪರಸತಿಯಳ ಗುಣ ಸ್ಮರಿಸುತ ಅನುದಿನ
ಪರಮ ವೈರಾಗ್ಯಶಾಲಿ ಎಂದೆನಿಸುವಂಥಾ ೩

ಬೂಟಕತನದಲ್ಲಿ ಬಹಳ ಭಕುತಿಮಾಡಿ
ದಿಟಸೀತ ಸರಿ ಯಾರಿಲ್ಲೆನಿಸಿ
ನಾಟಕಸ್ತ್ರೀಯಂತೆ ಬಯಲ ಡಂಬವ ತೋರಿ
ಊಟದ ಮಾರ್ಗದ ಜ್ಞಾನವಿದಲ್ಲದೆ ೪

ನಾನು ಎಂಬದು ಬಿಟ್ಟು ಜ್ಞಾನಿಗಳೊಡಗೂಡಿ
ಏನಾದರೂ ಹರಿ ಪ್ರೇರಣೆಯೆಂದು
ಧೇನಿಸಿ ಮೌನದಿ ಪುರಂದರ ವಿಠಲನ
ಕಾಣದೆ ಮಾಡಿದ ಕಾರ್ಯಗಳೆಲ್ಲ ೫

ಹೋಗದಿರೆಲೊ ರಂಗ ಬಾಗಿಲಿಂದಾಚೆಗೆ
ಭಾಗವತರು ಕಂಡರೆತ್ತಿ ಕೊಂಡೊಯ್ವರು ಪಲ್ಲವಿ

ಸುರಮುನಿಗಳು ತಮ್ಮ ಹೃದಯಗಹ್ವರದಲ್ಲಿ
ಪರಮಾತ್ಮನ ಕಾಣದರಸುವರೊ
ದೊರಕದ ವಸ್ತುವು ದೊರಕಿತು ನಮಗೆಂದು
ಹರುಷದಿಂದಲಿ ಬಂದು ಕರೆದೆತ್ತಿಕೊಂಬರೊ ೧

ಅಗಣಿತಗುಣ ನಿನ್ನ ಜಗದ ನಾರಿಯರೆಲ್ಲ
ಹಗರಣ ಮಾಡ್ವರು ಗೋಪಾಲನೆ
ಮಗುಗಳ ಮಾಣಿಕ್ಯ ತಗಲಿತು ಕರಕೆಂದು
ಮಿಗಿಲು ವೇಗದಿ ಬಂದು ಬಿಗಿದಪ್ಪಿಕೊಂಬರು ೨

ದುಷ್ಟನಾರಿಯರು ತಮ್ಮಿಷ್ಟವ ಸಲಿಸೆಂದು
ಅಟ್ಟಟ್ಟಿ ಬೆನ್ನಟ್ಟಿ ತಿರುಗುವರೋ
ಸೃಷ್ಟೀಶ ಪುರಂದರ ವಿಠಲರಾಯನೆ
ಇಷ್ಟಿಷ್ಟು ಬೆಣ್ಣೆಯ ಕೊಟ್ಟೆನೊ ಗೋಪಾಲಾ ೩

ಈಸಬೇಕು ಇದ್ದು ಜೈಸಬೇಕು ಪಲ್ಲವಿ
ಹೇಸಿಕೆ ಸಂಸಾರದಲ್ಲಿ ಆಶೆ ಲೇಸ ಇಡಧಾಂಗೆ ಅನುಪಲ್ಲವಿ

ತಾಮರಸಜಲದಂತೆ
ಪ್ರೇಮವಿಟ್ಟು ಭವದೊಳು
ಸ್ವಾಮಿ ರಾಮನೆನುತ ಪಾಡಿ
ಕಾಮಿತ ಕೈಕೊಂಬರೆಲ್ಲ ೧

ಗೇರುಹಣ್ಣಿನಲ್ಲಿ ಬೀಜ
ಸೇರಿದಂತೆ ಸಂಸಾರದಿ
ಮೀರಿ ಆಶೆ ಮಾಡದಲೆ
ಧೀರ ಕೃಷ್ಣನ ಭಕುತರೆಲ್ಲ ೨

ಮಾಂಸದಾಸೆಗೆ ಮತ್ಸ್ಯಸಿಲುಕಿ
ಹಿಂಸೆಪಟ್ಟ ಪರಿಯಂತೆ
ಮೋಸಹೋಗಧಾಂಗೆ ಜಗ
ದೀಶ ಪುರಂದರ ವಿಠಲನ ನೆನೆದೂ ೩

ಧರ್ಮವೇ ಜಯವೆಂಬ ದಿವ್ಯ ಮಂತ್ರ
ಮರ್ಮವನು ತಿಳಿದು ಆಚರಿಸುವದು ಕೇಳಿ ಪಲ್ಲವಿ

ವಿಷವನುಣಿಸಿದಗೆ ಷಡ್ರಸವನುಣಿಸಲುಬೇಕು
ಅಸೂಯಪಡುವನ ಪೋಷಿಸಲು ಬೇಕು
ಹುಸಿದು ಮನೆ ಕೊಂಬುವನ ಹಾಡಿ ಹರಸಲು ಬೇಕು
ಆಸಿಯಲಿರಿದವನ ಮಗನ್ನೆ ಸರಿಡಲು ಬೇಕು ೧

ಎಂದಿಗೂ ಸೇರದವನ ಹಾಡಿ ಹರಸಲು ಬೇಕು
ಕೊಂದವನ ಗೆಳೆತನವ ಮಾಡಬೇಕು
ಹಿಂದೆ ನಿಂದಿಸುವವನ ವಂದಿಸುತ್ತಿರಬೇಕು
ಬಂಧನದೊಳಿಟ್ಟವನ ಬಿಡಿಸಬೇಕು ೨

ಕೊಂಡೊಯ್ದು ಕೊಲಿಸುವರ ಕೊಂಡಾಡುತಿರಬೇಕು
ಕಂಡರಾಗದವನ ಹೊಗಳಬೇಕು
ಕಂಡು ಭಜಿಸಿರೋ ನಮ್ಮ ಪುರಂದರವಿಠಲನ್ನ ಅ
ಖಂಡಮಹಿಮೆಯುನರಿತು ಅರಿಯದಿರಬೇಕು ೩

ಮಾನವ ಜನ್ಮದೊಡ್ಡದು ಇದ
ಹಾನಿಮಾಡಲುಬೇಡಿ ಹುಚ್ಚಪ್ಪಗಳಿರಾ ಪಲ್ಲವಿ

ಕಣ್ಣು ಕೈಕಾಲ್ಕಿವಿ ನಾಲಿಗೆ ಇರಲಿಕ್ಕೆ
ಮಣ್ಣುಮುಕ್ಕಿ ಹುಚ್ಚರಾಗುವರೇ
ಹೆಣ್ಣುಮಣ್ಣಿಗಾಗಿ ಹರಿಯ ನಾಮಾಮೃತ
ಉಣ್ಣದೆ ಉಪವಾಸ ಇರುವರೆ ಖೋಡಿ ೧

ಕಾಲನ ದೂತರು ಕಾಲ್ಪಿಡಿದೆಳೆವಾಗ
ತಾಳು ತಾಳೆಂದರೆ ತಾಳುವರೇ
ಧಾಳಿ ಬಾರದ ಮುನ್ನ ಧರ್ಮವ ಗಳಿಸಿರೋ
ಹಾಳು ಸಂಸಾರ ಸುಳಿಗೆ ಸಿಕ್ಕಲುಬೇಡಿ ೨

ಏನು ಕಾರಣ ಯದುಪತಿಯನು ಮರೆತಿರಿ
ಧನಧಾನ್ಯಪುತ್ರರು ಕಾಯುವರೇ
ಇನ್ನಾದರು ಏಕೋಭಾವದಿ ಭಜಿಸಿರೋ
ಚೆನ್ನ ಶ್ರೀ ಪುರಂದರವಿಠಲರಾಯನ ೩

ಆದದ್ದೆಲ್ಲ ಒಳಿತೇ ಆಯಿತು ಪಲ್ಲವಿ
ನಮ್ಮ ಶ್ರೀಧರನ ಸೇವೆಗೆ
ಸಾಧನ ಸಂಪತ್ತಾಯಿತು ಅನುಪಲ್ಲವಿ

ದಂಡಿಗೆ ಬೆತ್ತ ಹಿಡಿಯುವದಕ್ಕೆ
ಮಂಡೆ ಮಾಚಿ ನಾಚುತಿದ್ದೆ
ಹೆಂಡತಿ ಸಂತತಿ ಸಾವಿರವಾಗಲಿ
ದಂಡಿಗೆ ಬೆತ್ತ ಹಿಡಿಸಿದಳಯ್ಯ ೧

ಗೋಪಾಲಬುಟ್ಟಿ ಹಿಡಿಯುವುದಕ್ಕೆ
ಭೂಪತಿಯಂತೆ ಗರ್ವಿಸುತಿದ್ದೆ
ಆ ಪತ್ನೀಕುಲ ಸಾವಿರವಾಗಲಿ
ಗೋಪಾಲಬುಟ್ಟಿ ಹಿಡಿಸಿದಳಯ್ಯಾ ೨

ತುಳಸಿಮಾಲೆಯ ಹಾಕುವುದಕ್ಕೆ
ಅರಸನಾಗಿ ನಾಚುತಿದ್ದೆ
ಸರಸಿಜಾಕ್ಷ ಪುರಂದರವಿಠಲನು
ತುಳಸಿಮಾಲೆ ಹಾಕಿಸಿದನು ೩

ಹುವ್ವ ತರುವರ ಮನೆಗೆ ಹುಲ್ಲು ತರುವ ಪಲ್ಲವಿ
ಅವ್ವ ಲಕುಮೀರಮಣ ಇವಗಿಲ್ಲ ಗರುವ ಅನುಪಲ್ಲವಿ

ಒಂದು ದಳ ಶ್ರೀ ತುಳಸಿ ಬಿಂದು ಗಂಗೋದಕವ
ಇಂದಿರಾರಮಣಗರ್ಪಿತವೆನ್ನಲು
ಒಂದೇ ಮನದಲಿ ಸಿಂಧುಶಯನ ಮುಕುಂದ ಎನೆ
ಎಂದೆಂದು ವಾಸಿಪನಾ ಮಂದಿರದೊಳಗೆ ೧

ಪರಿಪರಿಯ ಪುಷ್ಪಗಳ ಪರಮಾತ್ಮಗರ್ಪಿಸಿ
ಪರಿಪೂರ್ಣನೆಂದು ಪೂಜೆಯನು ಮಾಡೆ
ಪರಮ ಆಸಕ್ತಿಯಲಿ ಸೇವೆಯನು ಮಾಡಿದರೆ
ಸರಿಭಾಗ ಕೊಡುವ ತನ್ನರಮನೆಯೊಳಗೆ ೨

ಪಾಂಡವರ ಮನೆಯೊಳಗೆ ಕುದುರೆಗಳ ತಾ ತೊಳೆದು
ಪುಂಡರೀಕಾಕ್ಷ ಹುಲ್ಲನು ತಿನಿಸಿದಾ
ಅಂಡಜವಾಹನ ಶ್ರೀ ಪುರಂದರ ವಿಠಲನು
ತೊಂಡರಿಗೆ ತೊಂಡನಾಗಿ ಸಂಚರಿಸುತಿಹನೂ
ಹುವ್ವ ತರುವರ ಮನೆಗೆ ಹುಲ್ಲ ತರುವ ೩

ಹರಿ ನಿನ್ನೊಲುಮೆಯು ಆಗುವ ತನಕ
ಅರಿತು ಸುಮ್ಮನಿರುವುದು ಲೇಸು ಪಲ್ಲವಿ

ಮರಳಿ ಮರಳಿ ತಾ ಪಡೆಯದ ಭಾಗ್ಯಕೆ ಹೊರಹೊರಳುತ ಕನಲಲು
ಬಂದೀತೇ ಅನುಪಲ್ಲವಿ

ದೂರುಬರುವ ತೆರ ನಂಬಿಗೆ ಕೊಟ್ಟರೆ ದುರ್ಜನ ಬರುವುದು ತಪ್ಪೀತೇ
ದೂರದಿ ನಿಂತು ಮೊರೆಯಿಟ್ಟು ಕೂಗಲು ಚೋರಗೆ ದಯವು ಪುಟ್ಟೀತೇ
ಬಾರಿಬಾರಿಗೆ ಪಾತಿವ್ರತ್ಯವ ಬೋಧಿಸೆ ಜಾರೆಗದರ ನಿಜ ಸೊಗಸೀತೇ
ಊರುಬಿಟ್ಟು ಬೇರೂರಿಗೆ ಹೋದರೆ ಪ್ರಾರಬ್ಧವು ಬೇರಾದೀತೇ ೧

ಪಟ್ಟೆಮಂಚ ತಿರುವಿಟ್ಟರೆ ಫಣಿಯೊಳು ಮೆಟ್ಟಿದ ಭ್ರಮಣೆಯು ಬಿಟ್ಟೀತೇ
ಹೊಟ್ಟೆಲಿ ಸುತರಿಲ್ಲೆಂದೊದರಲು ಹುಟ್ಟುಬಂಜೆಗೆ ಫಲವಾದೀತೇ
ಬೆಟ್ಟದ ನವಿಲಿಗೆ ಕಣ್ಣೀರು ಬಂದರೆ ಬೇಟೆಗಾರಗೆ ದಯವು ಪುಟ್ಟೀತೇ
ಕೆಟ್ಟಹಾವು ಕಚ್ಚಿದ ಘಾಯಕೆ ಹಳೆಬಟ್ಟೆಯೊಳೊರಸೆ ವಿಷ ಹೋದೀತೇ ೨

ಧನಿಕರ ಕಂಡು ದೈನ್ಯವ ಪಟ್ಟರೆ ದಾರಿದ್ರ್ಯವು ಹಿಂಗೀತೇ
ದಿನದಿನ ನೊಸಲೊಳು ತಿರುಮಣಿಯಿಟ್ಟರೆ ದೇವರ ದಯವು ಪುಟ್ಟೀತೇ
ಎಣಿಸಿಕೊಂಡೇಳ್ಹಂಜಿಯು ನೂತರೆ ಮಣಿಯದ ಸಾಲವು ತೀರೀತೇ
ಅನುದಿನ ನಮ್ಮ ಪುರಂದರ ವಿಠಲನ ನೆನೆದಲ್ಲದೆ ಭವ ಹಿಂಗೀತೇ

ಪುರಂದರದಾಸರ ಉಗಾಭೋಗಗಳು :

ಉದಯ ಅಸ್ತಮಾನವೆಂಬೊ ಎರಡು ಕೊಳಗವಿಟ್ಟು
ಆಯುಸ್ಸುಯೆಂಬೊ ರಾಶಿ ಅಳದು ಹೋಗುವ ಮುನ್ನೆ
ಹರಿಯ ಭಜಿಸಬೇಕು ಮನಮುಟ್ಟಿ ಭಜಿಸಿದರೆ
ತನ ಕಾರ್ಯವು ಘಟ್ಟಿ
ಹಾಂಗಲ್ಲದಿದ್ದರೆ ತಾಪತ್ರಯ ಬೆನ್ನಟ್ಟಿ
ವಿಧಿಯೊಳು ಗೈವಾಗ ಹೋಗದಯ್ಯ ಕಟ್ಟಿ
ಪುರಂದರ ವಿಠಲನ ಕರುಣಾದ ದೃಷ್ಟಿ
ಅವನ ಮೇಲಿದ್ದರೆ ಆ ಜಗಜಟ್ಟಿ

ಬೆಲ್ಲದ ಕಟ್ಟೆಯ ಕಟ್ಟಿ ಬೇವಿನ ಬೀಜವ ಬಿತ್ತಿ
ಜೇನು ಮಳೆಗರದರೆ ವಿಷ ಹೋಗುವುದೇನಯ್ಯಾ
ಏನು ನೋಡಿದರೇನು ಏನು ಕೇಳಿದರೇನು
ಮನದೊಳಗಿನ ತಾಮಸ ಮಾಣದನ್ನಕ
ಕೊಳಲ ಧ್ವನಿಗೆ ಸರ್ಪ ತಲೆ ತೂಗುವಂದದಿ
ಇದಕೇನು ಮದ್ದು ಶ್ರೀ ಪುರಂದರ ವಿಠಲಾ

ಎನ್ನ ಕಡೆಹಾಯಿಸುವುದು ನಿನ್ನ ನೆನೆಯುತ್ತಲಿಹುದು ಎನ್ನಯ
ವ್ಯಾಪಾರಾ
ಎನ್ನ ಸತಿಸುತರಿಗೆ ನೀನೇ ಗತಿ
ನಿನ್ನನೊಪ್ಪಿಸುವುದು ಎನ್ನ ನೀತಿ
ಎನ್ನ ಪಡಿಯಿಕ್ಕಿ ಸಲಹುವದು ನಿನ್ನ ಧರ್ಮ
ನಿನ್ನ ಅಡಿಗೆರಗುವುದು ಎನ್ನಕರ್ಮ
ಎನ್ನ ತಪ್ಪುಗಳನೆಣಿಸುವುದು ನಿನ್ನದಲ್ಲ
ನಿನ್ನ ಮರೆದು ಬದುಕುವುದು ಎನ್ನದಲ್ಲ
ನೀನಲ್ಲದೆ ಇನ್ಯಾರಿಗೆ ಮೊರೆಯಿಡುವೆ ಪುರಂದರ ವಿಠಲಾ

ಹರಿ ನೀ ಒಲಿವಂತೆ ಮಾಡು
ಒಲಿದರೆ ತಿರಿದಂತೆ ಮಾಡು
ತಿರಿದರೆ ದಾರು ನೀಡದಂತೆ ಮಾಡು
ದಾರು ನೀಡಿದರೆ ಪೊಟ್ಟೆ ತುಂಬದಂತೆ ಮಾಡು
ಪೊಟ್ಟೆ ತುಂಬಿದರೆ ಬಟ್ಟೆದೊರೆಯದಂತೆ ಮಾಡು
ಬಟ್ಟೆದೊರೆತರೆ ಇಂಬು ದೊರೆಯದಂತೆ ಮಾಡು
ಇಂಬು ದೊರೆಯದಿದ್ದರೆ ರಂಗ ನಿನ್ನ ಪಾದಾರವಿಂದದಲ್ಲಿ
ಇಂಬಿಟ್ಟು ಸಲಹೊ ಪುರಂದರ ವಿಠಲಾ

ಕನಕದಾಸ: ಕೀರ್ತನೆಗಳು

ತನು ನಿನ್ನದು ಜೀವನ ನಿನ್ನದು ರಂಗ
ಅನುದಿನದಲಿ ಬಾಹ ಸುಖ ದುಃಖ ನಿನ್ನದಯ್ಯಾ ಪಲ್ಲವಿ

ಸವಿನುಡಿ ವೇದ ಪುರಾಣ ಶಾಸ್ತ್ರಂಗಳ
ಕಿವಿಗೊಟ್ಟು ಕೇಳುವ ಸ್ಥಿತಿ ನಿನ್ನದು
ನವಯೌವನ ಮೋಹನಾಂಗೇರ ರೂಪವ
ಎವೆಯಿಕ್ಕದೆ ನೋಡುವ ನೋಟ ನಿನ್ನದಯ್ಯಾ ೧

ಒಡಗೂಡಿ ಗಂಧ ಕಸ್ತೂರಿ ಪರಿಮಳವೆಲ್ಲ
ಬಿಡದೆ ಲೇಪಿಸಿಕೊಂಬುವದು ನಿನ್ನದು
ಷಡುರಸದನ್ನಕ್ಕೆ ನಲಿದಾಡುವ ಜಿಹ್ವೆ
ಕಡು ರುಚಿಗೊಂಡರೆ ಆ ರುಚಿ ನಿನ್ನದಯ್ಯಾ ೨

ಮಾಯಾಪಾಶದ ಬಲೆಯೊಳು ಸಿಕ್ಕಿ ತೊಳಲುವ
ಕಾಯ ಪಂಚೇಂದ್ರಿಯಗತಿ ನಿನ್ನದು
ಕಾಯಜಪಿತ ಕಾಗಿ ನೆಲೆಯಾದಿಕೇಶವ
ರಾಯ ನೀನಲ್ಲದೆ ನರರು ಸ್ವತಂತ್ರರೆ ೩

ಡಿಂಬದಲ್ಲಿರುವ ಜೀವ ಕಂಭಸೂತ್ರಗೊಂಬೆಯಂತೆ
ಎಂದಿಗಿದ್ದರೊಂದು ದಿನ ಸಾವು ತಪ್ಪದು ಪಲ್ಲವಿ

ಹುಟ್ಟುತೇನು ತರಲಿಲ್ಲ ಸಾಯುತೇನು ಒಯ್ಯಲಿಲ್ಲ
ಸುಟ್ಟುಸುಟ್ಟು ಸುಣ್ಣಾದ್ಧರಳು ಆಯಿತೀ ದೇಹಾ
ಹೊಟ್ಟೆ ಬಲು ಕೆಟ್ಟದೆಂದು ಎಷ್ಟು ಕಷ್ಟ ಮಾಡಿದರು
ಬಿಟ್ಟು ಹೋಗುವಾಗ ಗೇಣು ಬಟ್ಟೆ ಕಾಣದು ೧

ಹತ್ತು ಎಂಟು ಲಕ್ಷ ಘಳಿಸಿ ಮತ್ತೆ ಸಾಲದೆಂದು ಪರ
ರರ್ಥಕಾಗಿ ಆಸೆ ಬಟ್ಟನ್ಯಾಯ ಮಾಡುವರು
ಬಿತ್ತಿ ಬೆಳಸು ತನ್ನದೆಂಬೊ ವ್ಯರ್ಥ ಚಿಂತೆಯನ್ನು ಮಾಡೆ
ಸತ್ತುಹೋದ ಮೇಲೆ ಅರ್ಥ ಯಾರಿಗಾಗೋದೋ ೨

ಹೊನ್ನು ಹೆಣ್ಣು ಮಣ್ಣು ಮೂರು ತನ್ನಲಿದ್ದು ಉಣ್ಣಲಿಲ್ಲ
ಅಣ್ಣ ತಮ್ಮ ತಾಯಿ ತಂದೆ ಬಯಸಲಾಗದೋ
ಅನ್ನ ವಸ್ತ್ರ ಭೋಗಕ್ಕಾಗಿ ತನ್ನ ಸುಖವ ಕಾಣಲಿಲ್ಲ
ಮಣ್ಣುಪಾಲು ಆದಮೇಲೆ ಯಾರಿಗಾಗೋದೋ ೩

ಬೆಳ್ಳಿ ಭಂಗಾರಿಟ್ಟುಕೊಂಡು ಒಳ್ಳೆ ವಸ್ತ್ರ ಹೊದ್ದುಕೊಂಡು
ಚಳ್ಳಪಿಳ್ಳಿ ಗೊಂಬೆಯಂತೆ ಆಡಿಹೋಯಿತು
ಹಳ್ಳಹರಿದು ಹೋಗುವಾಗ ಗುಳ್ಳೆ ಬಂದು ಒಡಿಯುವಂತೆ
ಉಳ್ಳೇಪೊರೆಯಂತೆ ಕಾಣೊ ಸಂಸಾರದಾಟವೂ ೪

ವಾರ್ತೆಕೀರ್ತಿ ಎಂಬೊದೆರಡು ಸತ್ತಮ್ಯಾಲೆ ಬಂದವಯ್ಯಾ
ವಸ್ತು ಪ್ರಾಣ ನಾಯಕನು ಹ್ಯಾಂಗೆ ದೊರಕುವನು
ಕರ್ತುಕಾಗಿನೆಲೆಯಾದಿಕೇಶವನ್ನ ಚರಣಕಮಲ
ನಿತ್ಯದಲ್ಲಿ ಭಜಿಸಿ ಸುಖಿಯಾಗಿ ಬಾಳೆಲೋ ೫

ತಲ್ಲಣಿಸದಿರು ಕಂಡ್ಯ ತಾಳು ಮನವೆ
ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ ಪಲ್ಲವಿ

ಬೆಟ್ಟದ ತುದಿಯಲ್ಲಿ ಹುಟ್ಟಿದ ವೃಕ್ಷಕ್ಕೆ
ಕಟ್ಟೆಯನು ಕಟ್ಟಿ ನೀರೆರೆದವರು ಯಾರೊ
ಹುಟ್ಟಿಸಿದ ಸ್ವಾಮಿ ತಾ ಹೊಣೆಗಾರನಾದ ಮೇಲೆ
ಘಟ್ಯಾಗಿ ರಕ್ಷಿಪನು ಇದಕೆ ಸಂಶಯ ಬೇಡ ೧

ನವಿಲಿಗೆ ಚಿತ್ರಬಣ್ಣವನು ರಚಿಸಿದವರ್ಯಾರು
ಪವಳದ ಲತೆಗೆ ಕೆಂಪಿಟ್ಟವರ್ಯಾರು
ಸವಿಮಾತಿನಾ ಗಿಳಿಗೆ ಹಸುರು ಬರದವರ್ಯಾರು
ಅವ ಮಾಡಿದಾ ಹರಿಯು ಮರೆಯುವನೆ ಯೆಮ್ಮಾ ೨

ಕಲ್ಲಿನಲಿ ಹುಟ್ಟಿತಾ ಕೂಗುವ ಕಪ್ಪೆಗೆ
ಅಲ್ಲೆ ಆಹಾರವ ನಿರ್ಮಿಸಿತ್ತವರ್ಯಾರು
ಬಲ್ಲಿದನು ಕಾಗಿನೆಲೆಯಾದಿಕೇಶವರಾಯ
ಎಲ್ಲರನು ಸಲಹುವ ಇದಕೆ ಸಂಶಯ ಬೇಡಾ ೩

ಕುಲಕುಲ ಕುಲವೆನ್ನುತಿಹರು ಪಲ್ಲವಿ
ಕುಲವ್ಯಾವುದು ಸತ್ಯ ಸುಖವುಳ್ಳ ಜನರಿಗೆ ಅನುಪಲ್ಲವಿ

ಕೆಸರೊಳು ತಾವರೆ ಪುಟ್ಟಲು ಅದು ತಂದು
ಬಿಸಜನಾಭನಿಗರ್ಪಿಸಲಿಲ್ಲವೆ
ಹಸುವಿನ ಮಾಂಸದೊಳುತ್ಪತ್ತಿ ಕ್ಷೀರವು
ವಸುಧೆಯೊಳಗೆ ಭೂಸುರರುಣ್ಣಲಿಲ್ಲವೆ ೧

ಮೃಗಗಳ ಮೈಯಲ್ಲಿ ಪುಟ್ಟಿದ ಕಸ್ತೂರಿ
ತೆಗೆದು ಪೂಸುವರು ಭೂಸುರರೆಲ್ಲರೂ
ಬಗೆಯಿಂದ ನಾರಾಯಣನ್ಯಾವ ಕುಲದವಾ
ಅಗಜವಲ್ಲಭನ್ಯಾತರ ಕುಲದವನು ೨

ಆತ್ಮ ಯಾವ ಕುಲ ಜೀವ ಯಾವ ಕುಲ
ತತ್ತ್ವೇಂದ್ರಿಯಗಳ ಕುಲ ಪೇಳಿರಯ್ಯ
ಆತ್ಮಾಂತರಾತ್ಮ ನೆಲೆಯಾದಿಕೇಶವ
ಆತನೊಲಿದ ಮ್ಯಾಲೆ ಯಾತರ ಕುಲವಯ್ಯ ೩

ನಿನ್ನಿಂದ ನಾನೆ ಜನಿಸಿ ಬಂದೆನೆ ದೇವಾ ಪಲ್ಲವಿ
ನಿನ್ನ ಪ್ರೇರಣೆಯಿಂದ ನುಡಿದು ನೋಡಿದ ಮೇಲೆ
ನಿನ್ನದೆ ತಪ್ಪೋ ಎನ್ನದೆ ತಪ್ಪೋ ಪರಮಾತ್ಮಾ ಅನುಪಲ್ಲವಿ

ಜನನಿಯ ಜಠರದಿ ನವಮಾಸವು
ಘನತೆ ನೀ ಪೋಷಿಸುತಿರಲೆನ್ನ
ಜನಿಸಲಾರೆನೆ ಜನಿಸೆಂದಿಕ್ಕಳದಿಂದ
ವನಜಾಕ್ಷ ನೂಕಿದವನು ನೀನಲ್ಲವೆ ಕೃಷ್ಣ ೧

ಎಲುಗಳೆಲ್ಲವು ಜತೆಗೂಡಿ ನರಗಳು
ಬಲಿದು ಚರ್ಮವು ಪೊದಿಸಿ ದೇಹದೊಳ್
ಮಲಮೂತ್ರದೊಳ್ ನೆಲೆಗೊಳಿಸಿ ಹೃದಯ
ಸ್ಥಳದೊಳು ನಿಂದು ಚೈತನ್ಯ ಪೊರೆವರೂ ಮತ್ಯಾರೋ ೨

ಅಂಧನ ಕೈಯ ಕೋಲಿತ್ತು ಕರದೊಯ್ದು
ಹಿಂದುಮುಂದಾಡಿಯ ಕೆಡಹಿ ಬೀಳಲು
ಅಂಧಕನದೆ ತಪ್ಪೊ ಮುಂದಾಡಿಯ ತಪ್ಪೊ
ಹಿಂದಾಡಬೇಡ ಎನ್ನೊಳು ತಪ್ಪಿಲ್ಲವೋ ರಂಗ ೩

ಕಂದನ ತಾಯಿ ಆಡಿಸುತಿರೆ ಪೋಗಿ
ಕಂದ ಬಾವಿಯ ಅಂದಿ ನೋಡಲು
ಬಂದು ಬೇಗನೆ ತೆಗದಪ್ಪದಿರಲು ಆ
ಕಂದನದೆ ತಪ್ಪೊ ಮಾತೆಯ ತಪ್ಪೊ ಪರಮಾತ್ಮಾ ೪

ಭಾರ ನಿನ್ನದೋ ದೂರು ನಿನ್ನದೋ ಕೃಷ್ಣ
ನಾರಿ ಮಕ್ಕಳು ಮನೆ ನಿನ್ನದಯ್ಯ
ಕ್ಷೀರದೊಳದ್ದು ನೀರೊಳಗದ್ದು
ಹೇರಸೊಪ್ಪಿಸಿದ ಮೇಲೆ ಸುಂಕ ಯಾವದೋ ದೇವಾ ೫

ನ್ಯಾಯವಾದರು ದುಡುಕು ನಿನ್ನದೊ
ಅನ್ಯಾಯವಾದರು ಪೇಳುವರ್ಯಾರೋ
ಕಾಯಜಪಿತ ಕನಕಾದಿಕೇಶವರಾಯ ನೀ
ಕಾಯಯ್ಯ ತಪ್ಪುಗಳೆಣಿಸದೆ ದೇವಾ ೬

ತೀರ್ಥವನು ಪಿಡಿದವರೆಲ್ಲ ತಿರುನಾಮಧಾರಿಗಳೇ
ಜನ್ಮಸಾರ್ಥಕವಿಲ್ಲದವರೆಲ್ಲ ಭಾಗವತರೇ ಪಲ್ಲವಿ

ಮೂಗ್ಹಿಡಿದು ನೀರೊಳಗೆ ಮುಳುಗಿ ಜಪತಪವ ಮಾಡಿ
ವೇದ ಶಾಸ್ತ್ರಪುರಾಣಗಳನೋದಿ ತಿಳಿದು
ಬಾಗಿ ಪರಸ್ತ್ರೀಯರಿಗೆ ಭ್ರಮಿಸಿ ಕಣ್ಣಿಡುವಂಥ
ನೀತಿ ತಪ್ಪಿದವರೆಲ್ಲ ದೇವ ಬ್ರಾಹ್ಮಣರೇ ಕೃಷ್ಣ ೧

ಪಟ್ಟೆನಾಮವ ಬಳಿದು ಪಾತ್ರೆ ಕೈಯಲಿ ಪಿಡಿದು
ಗುಟ್ಟಿನಲಿ ರಹಸ್ಯವ ಗುರುತರಿಯದೇ
ಕೆಟ್ಟ ಕೂಗನು ಕೂಗಿ ಬಗುಳಿ ಬಾಯಾರುವಂಥ
ಹೊಟ್ಟೆಗುಡ ಮೃಗಗಳೆಲ್ಲ ಶ್ರೀವೈಷ್ಣವರೆ ಕೃಷ್ಣ ೨

ಅಂಗಲಿಂಗದೊಳಗಿರುವ ಚಿನ್ಮಯವ ತಿಳಿಯದೆ
ಲಿಂಗಾಂಗದಾ ನೆಲೆಯ ಗುರುತರಿಯದೆ
ಜಂಗಮಸ್ಥಾವರದ ಭಾವವನು ತಿಳಿಯದೆ
ಭಂಗಿಮುಕ್ಕಗಳೆಲ್ಲ ಲಿಂಗವಂತರಹರೆ ೩

ಅಲ್ಲಾ ಖುದಾ ಎಂದು ಆತ್ಮದಲ್ಲಿ ತಿಳಿಯದೆ
ಮುಲ್ಲಶಾಸ್ತ್ರದ ನೆಲೆಯ ಗುರುತರಿಯದೆ
ಜಳ್ಳುಕೂಗನು ಕೂಗಿ ಬಗುಳಿ ಬಾಯಾರುವಂಥ
ಕಳ್ಳ ತುರುಕರಿಗೆಲ್ಲ ವೀರಸ್ವರ್ಗವುಂಟೆ ಕೃಷ್ಣ ೪

ಹಾಸ್ಯಗಳನು ಕಲಿತು ಘೋಷವಸ್ತ್ರಗಳಾಕಿ
ಆಸೆಗಳ ತೊರೆದೆವೆಂದು ತಪಸುಕುಳಿತು
ವಾಸುವೆಯ ಗುರು ಕೃಪಾ ಗುರುತರಿಯದಂಥಾ
ವೇಷಧಾರಿಗಳೆಲ್ಲ ಸನ್ಯಾಸಿಗಳಾಗಬಲ್ಲರೆ ಕೃಷ್ಣ ೫

ಆರುಚಕ್ರದ ನೆಲೆಯ ಅಷ್ಟಾಂಗ ಯೋಗದಲಿ
ಮೂರು ಮೂರ್ತಿಯ ಮೂರು ಕಡೆಯೊಳಿರಿಸಿ
ಮೂರನಯ್ಯ ನೆಲೆಯಾದಿಕೇಶವನ
ಸಾರಿ ಭಜಿಸಿದವರಿಗೆ ಮನದ ಕೊರತೆಯುಂಟೆ ೬

ನಿಜಗುಣಶಿವಯೋಗಿಗಳ ಕೀರ್ತನೆಗಳು :

ಜ್ಯೋತಿ ಬೆಳಗುತಿದೆ ವಿಮಲ ಪರಂಜ್ಯೋತಿ ಬೆಳಗುತಿದೆ
ಮಾತು ಮನಂಗಳಿಂದತ್ತತ್ತ ಮೀರಿದ
ಸಾತಿಶಯದ ನಿರುಪಾಧಿಕ ನಿರ್ಮಲ ಪಲ್ಲವಿ

ಶಿವಧರ್ಮನಾಳವೆಂತೆಂಬ ಕಂಬದ ಮೇಲೆ
ಸುವಿವೇಕ ಹೃದಯಾಬ್ಜ ಪಣತೆಯೊಳು
ಸವೆಯದ ಸದ್ಭಕ್ತಿ ರಸತೈಲ ತೀವಿದ
ಪ್ರವಿಮಳ ಕಳೆಯೆಂಬ ವತ್ತಿವಿಡಿದು ದಿವ್ಯ ೧

ಮುಸುಕಿದ ವಿಷಯ ಪತಂಗ ಬಿದ್ದುರುಳೆ ತಾ-
ಮಸ ಬುದ್ಧಿಯೆಂಬ ಕತ್ತಲೆಯುಳಿಯೆ
ಮಸಗಿ ಸುಜ್ಞಾನವೆಂತೆಂಬ ಮಹಾಪ್ರಭೆ
ಪಸರಿಸಿ ಮಾಯಾಕಾಳಿಕೆ ಪೊರ್ದದನುಪಮ ೨

ಪ್ರಣವಾಕಾರದ ಗುಣ ಮೂರು ಮುಟ್ಟದ
ಗಣನೆಗತೀತಾರ್ಥವನೆ ತೋರುವ
ಅಣುಮಾತ್ರ ಚಲನೆಯಿಲ್ಲದ ಮೋಕ್ಷ ಚಿಂತಾ-
ಮಣಿಯೆನಿಸುವ ಶಂಭುಲಿಂಗವೆ ತಾನಾದ.

ಕೋಗಿಲೆ ಚೆಲ್ವಕೋಗಿಲೆ ಮುದ್ದು
ಕೋಗಿಲೆ ಜಾಣ ಕೋಗಿಲೆ ಪಲ್ಲವಿ

ಹಿಂದೆ ತಪದೊಳೀಶನೊಂದಿರುತಿರಲೆಚ್ಚು
ಬೆಂದ ಕಾಮನ ಬಿಟ್ಟು ಕೋಗಿಲೆ
ಬಂದು ಬೇಗದಿ ಬಾಲೇಂದುಧರನ ಕೂಡಿ
ಕುಂದದೆ ನೀ ಬಾಳು ಕೋಗಿಲೆ ೧

ಮನು ಮುನಿಗಳ ನೀತಿಯನು ಕೆಡಿಸುವ ದುಷ್ಟ
ಮನಸಿಜನನು ಮೀರಿ ಕೋಗಿಲೆ
ಘನಪದವನು ತನ್ನ ನೆನೆವರಿಗೊಲಿದೀವ
ಧನದ ಮಿತ್ರನ ಸಾರು ಕೋಗಿಲೆ ೨

ಸಲ್ಲರಸಗಲಿದ ಮೆಲ್ಲೆದೆಯರ ಕೊಲ್ವ
ಫುಲ್ಲಶರನ ಪಿಂಗಿ ಕೋಗಿಲೆ
ಎಲ್ಲ ಜೀವರಿಗೆರವಿಲ್ಲದೊಲವನೀವ
ಬಲ್ಲ ಭವನೊಳಿರು ಕೋಗಿಲೆ ೩

ಮಂಗಳರವದೊಳನಂಗನ ಬಣ್ಣಿಸೆ
ಭಂಗವಲ್ಲವೆ ನೋಡು ಕೋಗಿಲೆ
ಕಂಗೊಳಿಸುವ ಸರ್ವಮಂಗಳೆಯರಸನ
ಪಿಂಗದೆ ನೀ ಪಾಡು ಕೋಗಿಲೆ ೪

ದುರುಳು ಕಂತುವಿನೊಡನಿರೆ ಲೋಕದೊಳು ನಿನ್ನ
ಪರಪುಟ್ಟನೆಂಬರು ಕೋಗಿಲೆ
ಧರೆಗೆ ಜನಕನಾದ ಗುರುಶಂಭುಲಿಂಗದ
ಚರಣಪಲ್ಲವ ಪಿಡಿ ಕೋಗಿಲೆ. ೫

ಸನ್ನುತಿ ತನಗೆ ಸಂಪನ್ನವಾದರಿವಿದು
ನನ್ನಿಯೆಂದು ನಂಬು ಯೋಗಿ ನಿನ್ನ
ಮುನ್ನಿನ ಜಡಭಾವಮಂ ನೀಗು ನಲಿದಿದು
ನನ್ನಿಯೆಂದು ನಂಬು ಯೋಗಿ ನಿನ್ನ ಪಲ್ಲವಿ

ದುರಿತಕಾನನವಹ್ನಿ ಪರಿಭವ ಘನಚಂಡ
ಮರುತನಜ್ಞಾನತಿಮಿರ
ತರಣಿ ಮಾನಸಕುಲಗಿರಿವಜ್ರವನುತಾಪ
ಸರಸಿಜಹಿಮವಿದೆಂಬ ಆಹಾ ಸರಸಿಜಹಿಮವಿದೆಂಬ ೧

ಸಾರಸುಖದ ಸುಧಾವಾರಿಧಿ ಸುಕೃತದ
ಮೇರು ಮುಕ್ತಿಯ ಜನ್ಮಭೂಮಿ
ಚಾರುಸಿದ್ಧಿಗಳ ಮಂದಾರ ವಿಪಿನದ ಮೂಲ
ಕಾರಣದಿರವಿದೆಂಬ ಆಹಾ ಕಾರಣದಿರವಿದೆಂಬ ೨

ನಿಗಮವರಸುವ ಮುನಿಗಳು ಜಾನಿಪ ಸುರೋ
ರಗ ನರರ ಜಾಣುವೆ ಗಾಣದ
ಜಗದಾಗುಹೋಗಿನೊಳ್ಪುಗದಿಹ ಶಂಭುಲಿಂಗ
ದಗಣಿತ ನಿಜವಿದೆಂಬ ಆಹಾ ಅಗಣಿತ ನಿಜವಿದೆಂಬ ೩

ಶ್ರೀಗುರುವೆ ನೀನೆ ಶರಣಾಗೆನಗೆ ನಿಜಸುಖದ
ಸಾಗರವೆ ಸಕಲವಿದ್ಯಾಗುಣನಿವಾಸಾ ಪಲ್ಲವಿ

ಮಲದ ಮರವಿಯನು ಮಾಯಾಮೋಹವನು ಕರ್ಮ
ಕುಲದ ಸುಖದುಃಖವನು ವಚನಬಂಧವನು
ಸಲೆತಿರೋಹತಿಯ ಸಾಹಸವೆಂಬುದನು ಬಿಡಿಸಿ
ಪೊಲಿದೆನ್ನ ಬೋಧರೂಪವನೆ ಬೋಧಿಸಿದಾ ೧

ಸುರನರೋರಗದನುಜ ಮನುಮುನೀಶ್ವರತರ್ಕ
ವರಮಂತ್ರಶಾಸ್ತ್ರ ನಿಗಮಾಗಮ ಪುರಾಣ
ದರುಶನ ಮತಾದಿಗಳು ಕಾಣದರಸುವ ತತ್ವ
ದಿರವಿದೆಂದೆನಗೆ ಕಂಣಾರ ಕಾಣಿಸಿದಾ ೨

ತಿಳಿಯಲ್ಕೈದಧ್ವವನು ಮೀರಿದ ಕಲೆಯ ಮೇಲೆ
ಬೆಳಗುವಾಗ ಸದಗ್ರದಮಳಶಕ್ತಿಯನು
ಕಳೆದೆಸೆವ ಶಂಭುಲಿಂಗದ ಯೋಗವಿತ್ತೆನ್ನ
ನುಳುಹಿದ ನಿರಾಭಾರಿದೇಶಿಕವರೇಣ್ಯಾ ೩

ಯೋಗಿಗೆ ಸಕಲ ಸಂಸಾರ ಸಂಗವದಿಲ್ಲ
ವಾಗಿ ತಿಳಿವರದು ಪುಸಿ ನೋಡು ರಮಣೀ ಪಲ್ಲವಿ

ವರವಿದ್ಯೆಯೆಂಬ ಕುಲವನಿತೆಯುಂಟಗಲದ
ಪರಿತೋಷವೆಂಬ ಮೋಹದಣುಗನುಂಟು
ವಿರತಿಯೆಂಬನುಕೂಲ ಜನಮುಂಟು ಕ್ಷಮೆಯೆಂಬ
ಚರನುಂಟು ಶಾಂತಿಯೆಂಬ ಸಖನ ಸರಸಮುಂಟು ೧

ನುತಭಕ್ತಿಯೆಂಬ ಮಾತೆಯುಂಟು ಸುಚರಿತ್ರವೆಂಬ
ಪಿತನುಂಟು ಸತ್ಯವೆಂಬ ಕುವರಿಯುಂಟು
ಹಿತವಾದ ನಂಬುಗೆಯೆಂಬಾಪ್ತ ಜನರ ಸೇವೆಯುಂಟು
ಮತಿಯೆಂಬ ಗೇಹಮುಂಟಾಚಾರವೆಂಬ ಕ್ಷೇತ್ರಮುಂಟು ೧

ದಾಸಿಯುಂಟಹಿಂಸೆಯೆಂಬ ದಾಸನುಂಟಸ್ತೇಯವೆಂಬ
ಲೇಸನೀವಧರ್ಮವೆಂಬ ವಾಹನಮುಂಟು
ಭಾಸುರವೃತ್ತ್ಯಾದಿಯೆಂಬ ಪೌತ್ರರುಂಟು ಮುಕ್ತಿಯೆಂಬ
ದೇಶಮುಂಟು ಶಂಭುಲಿಂಗವೆಂಬ ಗುರುತನವುಂಟು ೨

ಲಕ್ಷ್ಮೀಶನ ಜೈಮಿನಿ ಭಾರತ

ಚಂಡಿಯ ಕತೆ

ಆಲಿಸರ್ಜುನ ಮುನ್ನ ವಿಪ್ರನುಂಟೊರ್ವನು
ದ್ದಾಲಕಾಖ್ಯಂ ತಿಳಿದನಖಿಳ ಶಾಸ್ತ್ರಂಗಳಂ
ಮೇಲೆ ವೈವಾಹದೊಳ್ವಧುವಾದಳಾತಂಗೆ ಚಂಡಿಯೆಂಬಾಕೆ ಬಳಿಕ
ಕಾಲಕಾಲದ ಜಪಾನುಷ್ಠಾನಪೂಜೆಗಳಿ
ಗಾಲಸ್ಯಮಂ ಮಾಡದೆನ್ನ ಪರಿಚರ್ಯೆಗನು
ಕೂಲೆಯಾಗಿರ್ದು ಮನೆವಾಳ್ತೆಯಂ ಸಾಗಿಪುದು ನೀನೆಂದೊಡಿಂತೆಂದಳು

ಎಳ್ಳನಿತು ನಿನ್ನ ಮಾತಂ ಕೇಳ್ವಳೆಂದೆಣಿಕೆ
ಗೊಳ್ಳದಿರ್ಪರಿಚರ್ಯೆ ಮನೆವಾಳ್ತೆಯೆಂದೆಂಬ
ತಳ್ಳಿಯವಳಲ್ಲ ನೀನೆಂದುದಂ ಮಾಡೆನೆಂದಾ ಚಂಡಿ ಚಂಡಿಪೋರೆ
ಮುಳ್ಳಿಡಿದ ಮರನೇರಿದಂತಾದುದಿಹಪರಕಿ
ದೊಳ್ಳಿತಾದಪುದೆ ಬಂದುದು ತಪೋಹಾನಿಯೆಂ
ದಳ್ಳಿಯೊಳ್ಕೊಲ್ಗೊಂಡ ತೆರದೊಳುದ್ದಾಲಕಂ ಚಿಂತಿಪಂ ಪ್ರತಿದಿನದೊಳು

ಇಂತಿರುತಿರಲ್ಕೆ ಕೌಂಡಿನ್ಯನೆಂಬೊರ್ವ ಮುನಿ
ಪಂ ತನ್ನ ಮನೆಗೆ ಬರಲಾತನಂ ಸತ್ಕರಿಸಿ
ಚಿಂತೆವೆತ್ತಿರಲವನಿದೇನೆಂದು ಬೆಸಗೊಂಡೊಡವಳ ಪ್ರತಿಕೂಲತೆಯನು
ಅಂತರಿಸದೆಲ್ಲಮಂ ಪೇಳ್ದೊಡವನಿದಕೆ ನೀಂ
ಮುಂತೆ ವಿಪರೀತಮಂ ಮಾಡಲಾದಪುದೆಂದು
ಸಂತಾಪಮಂ ಬಿಡಿಸಿ ಬೀಳ್ಕೊಂಡವಂ ತೀರ್ಥಯಾತ್ರೆಗೈದಿದನಿತ್ತಲು

ಉದ್ದಾಲಕಂ ಬಳಿಕ ತನ್ನ ಮಂದಿರದೊಳಿರು
ತಿದ್ದ ಸಮಯಕೆ ಪಿತೃಶ್ರಾದ್ಧದಿವಸಂ ಬಂದೊ
ಡೆದ್ದು ಚಂಡಿಯೊಳೆಲಗೆ ನಾಳೆ ಪೈತೃಕಮದಂ ನಾಡಿದಲ್ಲದೆ ಮಾಡೆನು
ಕದ್ದು ತಹೆನಧಮಧಾನ್ಯವ್ರೀಹಿಶಾಕಮಂ
ಪೊದ್ದಲೀಯೆಂ ಶುದ್ಧವಸ್ತುಗಳನೊಂದುಮಂ
ತದ್ದಿನಕೆ ಮರುದಿವಸದೊಳ್ಪೇಳ್ದು ಬಹೆನಪಾತ್ರಂಗೆಂದೊಡಿಂತೆಂದಳು

ನಾಳೆ ಮಾಡಿಸುವೆನಾಂ ಪೈತೃಕವನುತ್ತಮದ
ಶಾಲಿಧಾನ್ಯವ್ರೀಹಿಶಾಕಮಂ ಕೊಂಡು ಬಹೆ
ನಾಲಯುವನತಿಶುದ್ಧವಾದ ವಸ್ತುಗಳಿನಲ್ಲದೆ ಕೂಡೆನಳ್ತಿಯಿಂದೆ
ಪೇಳಿಸುವೆನಂದಿನ ದಿನದ ಮೊದಲ ರಾತ್ರಿಯೆ ವಿ
ಶಾಲಗುಣ ಸಂಪನ್ನ ವೇದಪಾರಂಗತಸು
ಶೀಲರಹ ಸತ್ಪಾತ್ರದವನಿಯಮರ್ಗೆನಲ್ಚಂಡಿಗವನಿಂತೆಂದನು

ಆದೊಡೆ ಕುತುಪಕಾಲಮಂ ಬಿಡುವೆನರ್ಚನೆಯೊ
ಳಾದರಿಸೆನಾಂ ಬಂದ ವಿಪ್ರರಂ ಪಾಕದ ನ
ವೋದನ ಸುಪಾಯಸ ಗುಡಾಜ್ಯ ಮಧುತೈಲಮೃದುಭಕ್ಷ್ಯಭೋಜ್ಯಾದಿಗಳನು
ಸ್ವಾದುಫಲ ಶರ್ಕರೆ ವಿನುತಶಾಪ ನಿರ್ಮಲಪ
ಯೋದಧಿಗಳಂ ಸಕುತ್ಸಿತಮಾಗದಂತೆ ಸಂ
ಪಾದಿಸಿ ಪಿತೃಶ್ರಾದ್ಧಮಂ ಮಾಡಿ ವಸ್ತ್ರದಕ್ಷಿಣೆಗಳಂ ಕೊಡೆನೆಂದನು

ಎಂದೊಡೆ ಕುತುಪಕಾಲಮಂ ಮೀರಲೀಯೆನಾಂ
ಬಂದ ವಿಪ್ರರನಾದರಿಸಿ ಪೂಜೆಗೈಸದಿರೆ
ನಿಂದೊಲ್ಲೆನೆಂದೊಕ್ಕಣಿಸಿದಿನಿತನೆಲ್ಲಮಂ ಸಂಪಾದಿಸದೆ ಮಾಣೆನು
ತಂದಮಲವಸ್ತ್ರ ತಾಂಬೂಲ ವರದಕ್ಷಿಣೆಗ
ಳಿಂದೆ ಸತ್ಕರಿಸಿ ಕಳುಹಿಸದೆ ಬಿಡೆನೆಸುತೆ ನಲ
ವಿಂದೊದವಿಸಿದಳಖಿಲಸದ್ದ್ರವ್ಯಮಂ ಬಳಿಕ ಚಂಡಿ ಪಾಕಂಗೈದಳು

ಕಂಡಸೀ ತೆರನನುದ್ದಾಲಕಂ ಸಂತಸಂ
ಗೊಂಡು ಮನದೊಳ್ಪ್ವರಗೆ ತಾನೊಪ್ಪದವನಾಗಿ
ಚಂಡಿ ಪೇಳಿದವೊಲಾ ಶ್ರಾದ್ಧಮಂ ಮಾಡಿ ಸಂಪ್ರೀತಿಯಿಂ ವಿಪರೀತದ
ತೊಂಡುತೊಳಸಂ ಮರೆದು ಕರ್ಮಾಂಗಮಾಗಿರ್ದ
ಪಿಂಡಮಂ ತೆಗೆದು ಮಡುವಿಸೊಳೆ ಹಾಯ್ಕೆಂದೊಡು
ದ್ದಂಡದಿಂದೆತ್ತಿ ಬೀದಿಗೆ ಬಿಸುಡಲಾ ದ್ವಿಜಂ ರೋಷಭೀಷಣನಾದನು

ಎಲೆಗೆ ನಿನ್ನೊಡನೆ ನಾನೇಂ ಹರಿಯಹೋರುವೆಂ
ಛಲತನಕಲಸಿದೆ ನಾನರೆಯಾಗಿ ಹೋಗೆಂದು
ಸಲೆ ಮುಳಿದು ಶಾಪಮಂ ಕೊಟ್ಟು ಕಾರುಣ್ಯದಿಂದಾ ದ್ವಿಜಂ ಕೂಡೆ ತಿಳಿದು
ಕೆಲವುಕಾಲಕೆ ನಿನ್ನೊಳಧ್ವರಹಯಂ ಬಂದು
ನಿಲಲರ್ಜುನಂ ಬಿಡಿಸಿದೊಡೆ ಮೋಕ್ಷಮಹುದೆಂದು
ತೊಲಗಿದಂ ಸನ್ಯಾಸಕವನತ್ತಲವನಿಯೊಳ್ಕಲ್ಲಾದಳಿವಳಿತ್ತಲು

ಸೀತಾ ಪರಿತ್ಯಾಗ

ಚಂದ್ರಮುಖಿಯಾದ ವೈದೇಹಿಯ ಜಠರವೆಂಬ
ಚಂದ್ರಕಾಂತದ ಮಣಿಯ ಮಧ್ಯದೊಳ್ತವೆ ರಾಮ
ಚಂದ್ರನೆಂಬಖಿಳಲೋಕಾನಂದಕರಮಾದ ಸಂಪೂರ್ಣಕಲೆಗಳುಳ್ಳ
ಚಂದ್ರನ ವಿರಾಜಿಪ ಪ್ರತಿಬಿಂಬಮಾಗಿರ್ದ
ಚಂದ್ರನೆನೆ ಶಿಶು ಗರ್ಭದೊಳ್ತೊಳಗೆ ಕೂಡಿರ್ದ
ಚಂದ್ರಿಕೆವೊಲಂಗರುಚಿ ಬೆಳ್ಪಡರಲೊಳ್ಪಿನಿಂದೊಪ್ಪಿರ್ದಳುತ್ಪಲಾಕ್ಷಿ

ಕಾಂಚನಲತಾಕೋಮಲಾಂಗಿ ಗರ್ಭಿಣಿಯಾದ
ಲಾಂಛನವನಿನಕುಲಾಧೀಶ್ವರಂ ಕಂಡು ರೋ
ಮಾಂಚನದ ಹರ್ಷದಿಂ ನಾಲ್ಕನೆಯ ತಿಂಗಳೊಳ್ವಿಭವದಿಂ ಭೂಸುರರ್ಗೆ
ವಾಂಛಿತವನಿತ್ತು ಪುಂಸವನ ಸೀಮಂತಮಂ
ತಾಂ ಚಾರುಲೋಚನೆಗೆ ವಿಸ್ತರಿಸಿದಂ ಚಿತ್ತ
ಚಾಂಚಲ್ಯಮಿಲ್ಲದೆ ವಶಿಷ್ಠವಿಶ್ವಾಮಿತ್ರರುಕ್ತದಿಂ ಮಾಡಿಸಲ್ಕೆ

ಯೋಜನತ್ರಯದಗಲದುತ್ಸವದ ಶಾಲೆಯಂ
ರಾಜಿಸಲ್ಕೈಗೈಸಿ ಬಳಿಕಲ್ಲಿ ನೆರೆದ ನಾ
ನಾ ಜನಕೆ ದಿವಿಜರ್ಗೆ ಸುಗ್ರೀವ ಮೊದಲಾದ ಕಪಿಗಳ್ಗೆ ಭೂಸುರರ್ಗೆ
ರಾಜವರ್ಗಕೆ ವಿಭೀಷಣ ಮುಖ್ಯದೈತ್ಯರ್ಗೆ
ಭೋಜನ ಸುಗಂಧ ತಾಂಬೂಲ ಪುಷ್ಪಾಕ್ಷತೆಯ
ಪೂಜೆ ವಸ್ತ್ರಾಭರಣದುಡುಗೊರೆಗಳಂ ಕೊಟ್ಟು ರಾಘವಂ ಮನ್ನಿಸಿದನು

ಉತ್ಸವಕೆ ಬಂದನಿಬರೆಲ್ಲರಂ ಶರಣಜನ
ವತ್ಸಲಂ ಸತ್ಕರಿಸಿ ಬೀಳ್ಕೊಟ್ಟು ರಾಜಸಂ
ಪತ್ಸುಖದೊಳಿರ್ಪನಿತರೊಳ್ಬಳಿಕ ಸೀತೆ ನಿಜಕಾಂತನೇಕಾಂತಕೈದಿ
ಕುತ್ಸಿತಂ ಪೊದ್ದದಾಶ್ರಮದ ಋಷಿಪತ್ನಿಯರ
ಸತ್ಸಂಗದೊಳ್ತನ್ನ ಬೇಸರಂ ತವಿಸುವೆನಿ
ದುತ್ಸುಕಂ ತನಗದರಿನಿನ್ನೊಮ್ಮೆ ಬನಕೆ ತನ್ನಂ ಕಳುಹಬೇಕೆಂದಳು

ಆ ಕ್ಷಿತಿಜೆ ಬಯಕೆಯಂ ಬಿನ್ನೈಸೆ ಕೇಳ್ದು ನಗು
ತಾಕ್ಷೇಪದಿಂದೆ ಕಳುಹುವನಾಗಿ ಸಂತೈಸಿ
ರಾಕ್ಷಸಾಂತಕನಿರಲ್ಕೊಂದಿರುಳ್ಕನಸುಗಂಡೇಳುತೆ ವಶಿಷ್ಠನೊಡನೆ
ಈ ಕ್ಷೋಣಿಸುತೆ ಗಂಗೆಯಂ ಕಳೆದು ಕಾಡೊಳ್ಮ
ಹಾ ಕ್ಷೀಣೆಯಾಗಿ ದೇಸಿಗರಂತೆ ದೆಸೆದೆಸೆಯ
ನೀಕ್ಷಿಸುತೆ ಮರುಗುತಳುತಿರ್ದುದಂ ಕಂಡೆನಿದು ಲೇಸಹುದೆ ಪೇಳೆಂದನು

ಎನೆ ಕನಸಿದೊಳ್ಳಿತಲ್ಲೆಂದದಕೆ ಶಾಂತಿಯಂ
ಮುನಿವರ ವಶಿಷ್ಠಂ ನೆಗಳ್ಚಿದಂ ಬಳಿಕ ಮನ
ದನುತಾಪದಿಂ ಪ್ರಜೆಯನಾರೈವುದಂ ಮರೆದೆರಡುಮೂರುದಿವಸವಿರ್ದು
ಜನಮುಲಸಿದಪುದೆಂದು ರಾತ್ರಿಯೊಳ್ಪೊರಮಟ್ಟು
ದಿನಪಕುಲತಿಲಕನೇಕಾಂತದೊಳ್ನಗರಶೋ
ಧನೆಯ ಚಾರರೊಳೊರ್ವನಂ ಕರೆಸಿ ಕೇಳ್ದನಿಂತೆಂದು ವಿನಯೋಕ್ತಿಯಿಂದೆ

ನಿಂದಿಸರಲೇ ಪ್ರಜೆಗಳಿನ್ನೆಗಂ ತನ್ನ ಗುಣ
ಕೊಂದಿಸರಲೇ ಪಳಿವನಮಲತರ ಕೀರ್ತಿಯಂ
ಕಂದಿಸರಲೇ ದೂಸರಿಂದೆ ಭುಜವಿಜಯ ಪ್ರತಾಪತೇಜವನಿಳೆಯೊಳು
ಸಂದಿಸರಲೇ ಜರೆದು ನಿಜವಂಶದೇಳ್ಗೆಯಂ
ಕುಂದಿಸರಲೇ ಖೋಡಿಗಳೆದು ವಹಮಾನದೊ
ಳ್ಸಂಧಿಸರಲೇ ಕೊಂಕುಕೊರತೆಗಳನೆಂದವನನಸುರಾರಿ ಬೆಸಗೊಂಡನು

ದೇವ ನಿನ್ನಂ ಪೆಸರಿಸಿದನೀಶನಾದಪಂ
ಸೇವಿಸಿದವಂ ಚತುರ್ಮುಖನಾಗಲುಳ್ಳವಂ
ಕಾವುದೆಂದೈದೆ ಮರೆವೊಕ್ಕವಂ ಜಗದೊಳಾಚಂದ್ರಾರ್ಕವಾಗಿ ಬಾಳ್ವ
ಶ್ರೀವಿಭವದಿಂ ಶಕ್ರಪದಪಿಯಂ ಜರೆದಪಂ
ಭೂವಲಯದೊಳ್ನಿಂದಿಸುವರುಂಟೆ ತರಣಿಯಂ
ಕಾವಳಂ ಮುಸುಕಿರ್ದೊಡೇನಪ್ಪುದೆಂದವಂ ಬಿನ್ನೈಸಿ ಕೈಮುಗಿದನು

ಏನಾದೊಡಂ ಕಟಕಿಯಾಗಿರ್ಪುದೀ ಮಾತು
ಭಾನುವಂ ಕಾವಳಂ ಮುಸುಕಲೇನೆನಲೆನ್ನ
ಧೀನವಾದರಸುತನಕಾವುದೂಣೆಯುಮೆಂಬರೆಂದು ರಘುಪತಿ ಕೇಳಲು
ನೀನೆ ಪಾವನರೂಪನೆಂಬುದಂ ಮುನಿಯ ವಧು
ತಾನೆ ತೋರಿಸಳೆ ಲೋಕದ ಜನಕೆ ಜಗದೊಳ
ಜ್ಞಾನಿಗಳ್ನುಡಿದ ನಿಂದೆಯನುಸಿರಲಮ್ಮೆನೆಂದವನೆರಗಿದಂ ಪದದೊಳು

ಏಳಂಜಬೇಡಿನ್ನು ಮಾಜದಿರ್ತನ್ನಾಣೆ
ಹೇಳೆಂದು ರಘುಕುಲ ಲಲಾಮನೊತ್ತಾಯದಿಂ
ಕೇಳಲವನೆಂದನವಧರಿಸೊರ್ವ ರಜಕಂ ಮಲೀನಮುಂ ತೊಳೆವನಾಗಿ
ಕಾಳುಗೆಡೆದಂ ಜೀಯ ಸದ್ಗುಣಚರಿತ್ರನಾ
ಮಾಳಿಯಿಂ ಜಗಮಂ ಪುನೀತಮಂ ಮಾಳ್ಪ ನಿ
ನ್ನೇಳಿಗೆಯನವನೆತ್ತ ಬಲ್ಲನೆನಲೇನೆಂದನೆನಲಾತನಿಂತೆಂದನು

ಪೆಂಡತಿ ತವರ್ಮನೆಗೆ ಮುಳಿದು ಪೇಳದೆ ಪೋದ
ಚಂಡಿತನಕವಳ ತಾಯ್ತಂದೆಗಳ್ಕಳುಹಬಂ
ದಂಡಲೆದೊಡಿನ್ನೊಲ್ಲೆನಗಲಿರ್ದ ಮಡದಿಯಂ ಮತ್ತೆ ರಘುನಾಥನಂತೆ
ಕೊಂಡಾಳುವವನಲ್ಲ ತಾನೆಂದು ರಜಕನು
ದ್ದಂಡದೊಳ್ನುಡಿಯೆ ಕಿವಿಮುಚ್ಚಿ ಕೊಳುತೆಯ್ದಿದೆನ
ಖಂಡಿತದ ಮಂತ್ರಪೂತದ ಹವಿಯನರಿದೆಂಜಲಿಪುದೆ ವಾಯಸವೆಂದನು

ಎಂದು ಬಿನ್ನೈಸೆ ಕೇಳ್ದಾತನಂ ಕಳುಹಿ ರಘು
ನಂದನಂ ಬಂಧನಕ್ಕೊಳಗಾದ ಮತ್ತಗಜ
ದಂದದಿಂ ನಿಜಶಿರವನೊಲೆದು ಮೂಗಿನ ಮೇಲೆ ಬೆರಳಿಟ್ಟು ಮೌನದಿಂದೆ
ನಿಂದು ಸೈವೆರಗಾಗಿ ನೆನೆನೆನೆದು ಚಿತ್ತದೊ
ಳ್ನೊಂದು ಬಿಸುಸುಯ್ದು ಕಡುಪಳಿದು ಕಾತರಿಸಿ ಕಳೆ
ಗುಂದಿ ದುಮ್ಮಾನದಿಂ ಪೊಕ್ಕನಂತಃಪುರಕೆ ಪುತ್ತವುಗುವಹಿಪನಂತೆ

ಓಲಗಂಗುಡದೆ ಬಾಗಿಲ್ಗೆ ಬಂದಖಿಳಭೂ
ಪಾಲರಂ ಕರೆಸಿ ಕಾಣಿಸಿಕೊಳ್ಳದೊಳಗೆ ಚಿಂ
ತಾ ಲತಾಂಗಿಯ ಕೇಳಿಗೆಡೆಗೊಟ್ಟು ರಾಜೇಂದ್ರನಿರೆ ಕೇಳ್ದು ಭೀತಿಯಿಂದೆ
ಆ ಲಕ್ಷ್ಮಣಾದಿಗಳ್ಪೊಕ್ಕರಂತಃಪುರವ
ನಾಲಿಂಗಿಸಿದ ಜಾಡ್ಯದಿಂದೆ ಜಡಿವವಯವದ
ನೀಲಾಂಗನಂ ಕಂಡು ಕಾಲ್ಗೆರಗಿ ನುಡಿಸಲಮ್ಮದೆ ಸುಮ್ಮನಿರುತಿರ್ದರು

ಎದ್ದು ಕುಳ್ಳಿರ್ದು ಕರುಣಾಳುಗಳ ಬಲ್ಲಹಂ
ಮುದ್ದುಗೈದನುಜರಂ ಕರೆದಿಳೆಯೊಳಿಂದೆನಗೆ
ಪೊದ್ದಿದಪವಾದಮಂ ನೀವರಿದುದಿಲ್ಲಕಟ ಸಾಕಿನ್ನು ನೆರವಿಗಳೊಳು
ಕದ್ದ ಕಳ್ಳನವೊಲಾಡಿಸಿಕೊಳಲ್ಕಾರೆನೊಡ
ಲಿದ್ದಲ್ಲಿ ನಿಂದೆಗೊಳಗಾಗಿ ಬದುಕುವನಲ್ಲ
ತಿದ್ದಿ ತೀರದ ವಿಲಗಕಂಜುವೆಂ ಸೀತೆಯಂ ಬಿಟ್ಟಲ್ಲದಿರೆನೆಂದನು

ಇವಳಯೋನಿಜೆ ರೂಪ ಗುಣಶೀಲ ಸಂಪನ್ನೆ
ಭುವನ ಪಾವನೆ ಪುಣ್ಯಚರಿತೆ ಮಂಗಳ ಮಹೋ
ತ್ಸವೆ ಪತಿವ್ರತೆಯೆಂಬುದಂ ಬಲ್ಲೆನಾದೊಡಂ ನಿಂದೆಗೊಳಗಾದ ಬಳಿಕ
ಅವನಿಸುತೆಯಂ ತನಗೆ ಬಿಡುವುದೇ ನಿಶ್ಚಯಂ
ರವಿಕುಲದ ರಾಯರಪಕೀರ್ತಿಯಂ ತಾಳ್ದಪರೆ
ಕುವರನಾಗಿರ್ದ ತನ್ನಂ ತಾತನುಳಿದುದಿಲ್ಲವೆ ಸತ್ಯಭಾಷೆಗಾಗಿ

ಅರಸಕೇಳ್ಸೌಮಿತ್ರಿ ವೈದೇಹಿಯನೆ ಕೊಂಡು
ತೆರಳುವ ರಥಾಗ್ರದೊಳ್ಚಲಿಸುವ ಪತಾಕೆ ರಘು
ವರನಂಗನೆಯನುಳಿದನಹಹಯೆಂದಡಿಗಡಿಗೆ ತಲೆಗೊಡಹುವಂತಿರಲ್ಕೆ
ಪರಮದಾರುಣಮಾಯ್ತಿದೆಂದಯೋಧ್ಯಾಪುರದ
ನೆರವಿಯ ಜನಂ ಗುಜಗುಜಿಸಿ ಮನದೆ ಕರಗಿ ಕಾ
ತರಿಸುತಿರೆ ಪರಿಸಿದಂ ಕಾಳ್ಬಟ್ಟೆಗೊಂಡನಿಲವೇಗದಿಂದಾ ರಥವನು

ಧುರದೊಳಾಂತರನಿರಿದು ಮೆರೆಯಲೇರುವ ರಥಂ
ತರಳೆಯಂ ಕಾನನಕೆ ಕಳುಹಲಡರ್ವಂತಾಯ್ತು
ಧರೆಯೊಳಾರ್ತರನೈದೆ ರಕ್ಷಿಸುವ ಬುದ್ಧಿ ಕೋಮಲೆಯ ಕೊಲೆಗೆಲಸಕಾಯ್ತು
ಕರುಣಮಿಲ್ಲದೆ ಹೊರೆವ ಹರಣಮಂ ಸುಡಲಿ ನಿ
ಷ್ಠುರದೊಳೆಂತೀಕೃತ್ಯಮೆಸಗುವನೊ ರಾಘವೇ
ಶ್ವರನೆಂತಿದಕ್ಕೆ ಬೆಸಸಿದನೊ ತನಗೆನುತೆ ಸೌಮಿತ್ರಿ ಮರುಗುತೆ ನಡೆದನು

ಪಾವನಕೆ ಪಾವನಂ ಮಂಗಳಕೆ ಮಂಗಳಮ
ದಾವನ ಚರಿತ್ರನಾಮಂಗಳಾ ರಾಘವನೆ
ಜೀವೇಶನಾಗಿರಲ್ಕಾತನಂಘ್ರಿಯನಗಲ್ದೀಗ ನಾಂ ಬಂದಬಳಿಕ
ಈ ವನದೊಳಿನ್ನು ಪುಣ್ಯಾಶ್ರಮಂ ಗೋಚರಿಪು
ದೇ ವನಜದರಳನುಳಿದಾರಡಿಗೆ ಬೊಬ್ಬುಳಿಯ
ಪೂವಿನೊಳ್ಮಧುವುಂಟೆ ಸೌಮಿತ್ರಿ ಹೇಳೆಂದು ಸೀತೆ ಪೊದಕುಳಿಗೊಂಡಳು

ನರನಾಥ ಕೇಳವನಿಸುತೆ ನುಡಿದ ಮಾತಿಗು
ತ್ತರವನಾಡದೆ ಮನದೊಳುರೆ ನೊಂದು ರಾಘವೇ
ಶ್ವರನೆಂದ ಕಷ್ಟಮಂ ಪೇಳ್ದಪೆನೊ ಮೇಣುಸಿರದಿರ್ದಪೆನೊ ನಿಷ್ಠುರದೊಳು
ತರಣಿಕುಲಸಾರ್ವಭೌಮನ ರಾಣಿಯಂ ಬನದೊ
ಳಿರಿಸಿ ಪೋದಪೆನೆಂತೊ ಪೋಗದಿರ್ದೊಡೆ ಸಹೋ
ದರನದೇನೆಂದಪನೊ ಹಾಯೆಂದು ಲಕ್ಷ್ಮಣಂ ಬೆಂದು ಬೇಗುದಿಗೊಂಡನು

ಉಕ್ಕಿದುವು ಕಂಬನಿಗಳಧರೋಷ್ಠಮದಿರಿತಲ
ಗಿಕ್ಕಿ ತಿರುಪಿದವೊಲಾಯ್ತೊಡಲೊಳೆಡೆವರಿಯದುಸಿ
ರೊಕ್ಕುದುರೆ ಕಂಪಿಸಿದುದವಯವಂ ಕರಗಿತೆರ್ದೆ ಸೈರಣೆ ಸಮತೆಗೆಟ್ಟುದು
ಸಿಕ್ಕಿದುವು ಕಂಠದೊಳ್ಮಾತುಗಳ್ಸೆರೆ ಬಿಗಿದು
ಮಿಕ್ಕು ಮಿಾರುವ ಶೋಕದಿಂದೆ ಬೆಂಡಾಗಿ ಕಡು
ಗಕ್ಕಸದ ಕೆಲಸಮನುಸಿರಲರಿಯದವನೊಯ್ಯನವನಿಸುತೆಗಿಂತೆಂದನು

ದೇವಿ ನಿನಗಿನ್ನೆಗಂ ಪೇಳ್ದುದಿಲ್ಲಪವಾದ
ಮಾವರಿಸೆ ನಿನ್ನನೊಲ್ಲದೆ ರಘುಕುಲೋದ್ವಹಂ
ಸೀವರಿಸಿ ಬಿಟ್ಟು ಕಾಂತಾರಕ್ಕೆ ಕಳುಹಿ ಬಾಯೆಂದೆನಗೆ ನೇಮಿಸಿದೊಡೆ
ಆವಿಭುವಿನಾಜ್ಞೆಯಂ ಮೀರಲರಿಯದೆ ನಿಮ್ಮ
ನೀ ವಿಪಿನಕೊಡಗೊಂಡು ಬಂದೆನಿನ್ನೊಯ್ಯೊಯ್ಯ
ನಾವಲ್ಲಿಗಾದೊಡಂ ಪೋಗೆಂದು ಲಕ್ಷ್ಮಣಂ ಬಾಷ್ಪಲೋಚನನಾದನು

ಬಿರುಗಾಳಿ ಪೊಡೆಯಲ್ಕೆ ಕಂಪಿಸಿ ಫಲಿತಕದಳಿ
ಮುರಿದಿಳೆಗೊರಗುವಂತೆ ಲಕ್ಷ್ಮಣನ ಮಾತು ಕಿವಿ
ದೆರೆಗೆ ಬೀಳದ ಮುನ್ನ ಹಮ್ಮೈಸಿ ಬಿದ್ದಳಂಗನೆ ಧರೆಗೆ ನಡನಡುಗುತೆ
ಮರೆದಳಂಗೋಪಾಂಗಮಂ ಬಳಿಕ ಸೌಮಿತ್ರಿ
ಮರುಗಿ ತಣ್ಣೀರ್ದಳಿದು ಪತ್ರದೊಳ್ಕೊಡೆವಿಡಿದು
ಸೆರಗಿಂದೆ ಬೀಸಿ ರಾಮನ ಸೇವೆ ಸಂದುದೇ ತನಗೆಂದು ರೋದಿಸಿದನು

ಒಯ್ಯನರೆಗಳಿಗೆಯೊಳ್ಕಣ್ದೆರೆದು ದೈನ್ಯದಿಂ
ಸುಯ್ಯೆಲರನುರೆ ಸೂಸಿ ಸೌಮಿತ್ರಿಯಂ ನೋಡಿ
ಕೊಯ್ಯಲೊಲ್ಲದೆ ಕೊರಳನಿಂತು ತನ್ನಂ ಬಿಡಲ್ ಮಾಡಿದಪರಾಧಮುಂಟೆ
ಕಯ್ಯಾರೆ ಖಡ್ಗಮಂ ಕೊಟ್ಟು ತನ್ನರಸಿಯಂ
ಹೊಯ್ಯೆಂದು ಪೇಳದಡವಿಗೆ ಕಳುಹಿ ಬಾಯೆಂದ
ನಯ್ಯಯ್ಯೊ ರಾಘವಂ ಕಾರುಣ್ಯನಿಧಿಯೆಂದಳಲ್ದಳಂಭೋಜನೇತ್ರೆ

ಬಿಟ್ಟನೆ ರಘುಶ್ರೇಷ್ಠನೆನ್ನನಕಟಕಟ ತಾ
ಮುಟ್ಟನೆ ನೆಗಳ್ದ ಬಾಳ್ಕೆಗೆ ಸಂಚಕಾರಮಂ
ಕೊಟ್ಟನೆ ಸುಮಿತ್ರಾತನುಜ ಕಟ್ಟರಣ್ಯದೊಳ್ಕಳುಹಿ ಬಾಯೆಂದು ನಿನಗೆ
ಕೊಟ್ಟನೆ ನಿರೂಪಮಂ ತಾನೆನ್ನ ಕಣ್ಬಟ್ಟೆ
ಗೆಟ್ಟನೆ ಮನೋವಲ್ಲಭನನಗಲ್ದಡವಿಯೊ
ಳ್ಕೆಟ್ಟನೆ ಪಿಶಾಚದವೊಲೆಂತಿಹೆನೊ ಕೆಟ್ಟೆನಲ್ಲಾ ಯೆಂದೊರಲ್ದಳಬಲೆ

ಕಡೆಗೆ ಕರುಣಾಳು ರಾಘವನಲ್ಲಿ ತಪ್ಪಿಲ್ಲ
ಕಡುಪಾತಕಂಗೈದು ಪೆಣ್ಣಾಗಿ ಸಂಭವಿಸಿ
ದೊಡಲಂ ಪೊರೆವುದೆನ್ನೊಳಪರಾಧಮುಂಟು ಸಾಕಿಲ್ಲಿರಲ್ಬೇಡ ನೀನು
ನಡೆ ಪೋಗು ನಿಲ್ಲದಿರ್ನಿನಗೆ ಮಾರ್ಗದೊಳಾಗ
ಲಡಿಗಡಿಗೆ ಸುಖಮೆಂದು ಸೀತೆ ಕಂಬನಿಗಳಂ
ಮಿಡಿದಾರ್ತೆಯಾಗಿರಲ್ಸೌಮಿತ್ರಿ ನುಡಿದನಾ ವಿಪಿನದಭಿಮಾನಿಗಳ್ಗೆ

ಎಲೆ ವನಸ್ಥಳಗಳಿರ ವೃಕ್ಷಂಗಳಿರ ವೃಗಂ
ಗಳಿರ ಕ್ರಿಮಿಕೀಟಂಗಳಿರ ಪಕ್ಷಿಗಳಿರ ಲತೆ
ಗಳಿರ ತೃಣಗುಲ್ಮಂಗಳಿರ ಪಂಚಭೂತಂಗಳಿರ ದೆಸೆಗಳಿರ ಕಾವುದು
ಎಲೆ ಧರ್ಮದೇವತೆ ಜಗಜ್ಜನನಿ ಜಾಹ್ನವಿಯೆ
ಸಲಹಿಕೊಳ್ವುದು ತನ್ನ ಮಾತೆಯಂ ಜಾನಕಿಯ-
ನೆಲೆ ತಾಯೆ ಭೂದೇವಿ ನಿನ್ನ ಮಗಳಿಹಳೆಂದು ಸೌಮಿತ್ರಿ ಕೈಮುಗಿದನು

ಮಾಳ್ಕೆಯಿನ್ನಾವುದಿಬ್ಬಗಿಯಾಗಿ ತನ್ನೊಡಲ
ಸೀಳ್ಕಿಡಹಬೇಡವೆ ಧರಿತ್ರಿಯೊಳ್ನಿಷ್ಠುರದ
ಬಾಳ್ಕೆಯಂ ಸುಡಲೆನುತೆ ದೇವಿಯಂ ಬಲವಂದು ಲಕ್ಷ್ಮಣಂ ನಮಿಸಿ ಬಳಿಕ
ಬೀಳ್ಕೊಂಡು ನಡೆಯಲ್ಕೆ ಹಿಂದುಹಿಂದಕೆ ಮನಂ
ನೀಳ್ಕುಳಿಗೊಳಲ್ಕೆಂದುಮಗಲದಣ್ಣನ ಕಡೆಗೆ
ದೂಳ್ಕಾಯದೊಳ್ಪತ್ತಿ ಪೊರಳ್ವ ಸೀತೆಯ ಕಡೆಗೆ ತೂಗುಯ್ಯಲೆವೊಲಾದನು

ನಡೆಗೊಳಲ್ಕಂಡು ಬಾಯಾರ್ವಳಂ ಚೀರ್ವಳಂ
ಕಡಲಿಡುವ ಕಂಬನಿಯೊಳಾಳ್ವಳಂ ಬೀಳ್ವಳಂ
ಪುಡಿಯೊಳ್ಪೊರಳ್ದು ಬಸವಳಿವಳಂ ಸುಳಿವಳಂ ಭರತಾವರಜನಗಲ್ದು
ಅಡಿಗಡಿಗೆ ತಿರುತಿರುಗಿ ನೋಡುವಂ ಬಾಡುವಂ
ಬಿಡದೆ ಬಿಸುಸುಯ್ದು ಬೆಂಡಾದಪಂ ಪೋದಪಂ
ಪೊಡೆಮರಳ್ವಂ ನಿಲ್ವನಳಲುವಂ ಬಳಲುವಂ ಬಟ್ಟೆಯೊಳ್ದಿಟ್ಟಿಗೆಟ್ಟು

ತಾಯನೆಳಗರು ಬಿಚ್ಚುವಂತೊಯ್ಯನೊಯ್ಯನ
ತ್ಯಾಯಾಸದಿಂದಗಲ್ದುಮರನದಿಯಂ ದಾಂಟಿ
ರಾಯಕೇಳ್ದುಃಖಾರ್ತನಾಗಿ ಸೌಮಿತ್ರಿ ಸಾಗಿದನತ್ತಲಿವಳಿತ್ತಲು
ಬಾಯಾರಿ ಕಂಗೆಟ್ಟು ಲಕ್ಷ್ಮಣನ ತಲೆ ಮಸುಳ
ಲಾಯೆಂದೊರಲ್ದು ಭಯಶೋಕದಿಂದಸವಳಿದು
ಕಾಯುಮಂ ಮರೆದವನಿಗೊರಗಿದಳ್ಬೇರ್ಗೊಯ್ದು ಬಿಸುಟೆಳೆಯ ಬಳ್ಳಿಯಂತೆ

ಅರಸ ಕೇಳಲ್ಲಿರ್ದ ಪಕ್ಷಿ ಮೃಗ ಜಂತುಗ
ಳ್ಧರಣಿಸುತೆಯಂ ಬಳಸಿ ನಿಂದು ಮೈಯುಡುಗಿ ಜೋ
ಲ್ದಿರದೆ ಕಂಬನಿಗರೆದು ನಿಜವೈರವಮಂ ಮರೆದು ಪುಲ್ಮೇವುಗಳನೆ ತೊರೆದು
ಕೊರಗುತಿರ್ದುವು ಕೂಡೆ ವೃಕ್ಷಲತೆಗಳ್ಬಾಡಿ
ಸೊರಗುತಿರ್ದುವು ಶೋಕಭಾರದಿಂ ಕಲ್ಗಳುಂ
ಕರಗುತಿರ್ದುವು ಜಗದೊಳುತ್ತಮರ ಹಾನಿಯಂ ಕಂಡು ಸೈರಿಸುವರುಂಟೆ

ಮೊರೆಯಲೊಲ್ಲವು ತುಂಬಿ ಕುಣಿಯಲೊಲ್ಲವು ನವಿ
ಲ್ಚೆರೆಯಲೊಲ್ಲವು ಕೋಕಿ ನಡೆಯಲೊಲ್ಲವು ಹಂಸೆ
ಕರೆಯಲೊಲ್ಲವು ಪಿಕಂ ನುಡಿಯಲೊಲ್ಲವು ಶುಕಂ ನಲಿಯಲೊಲ್ಲವು ಚಕೋರಿ
ನೆರೆಯಲೊಲ್ಲವು ಹರಿಣಿ ಯೊಲೆಯಲೊಲ್ಲವು ಕರಿಣಿ
ಪೊರೆಯಲೊಲ್ಲವು ಚಮರಿ ಮೆರೆಯಲೊಲ್ಲವು ಸಿಂಗ
ಮರರೆ ಜಾನಕಿಯ ಶೋಕಂ ತಮ್ಮದೆಂದಾಕೆಯಂಗಮಂ ನೋಡಿನೋಡಿ

ಬೀಸಿದುವು ಬಾಲದೊಳ್ಚಮರಿಗಳ್ಚಮರಮಂ
ಪಾಸಿದುವು ಕರಿಗಳೆಳೆದಳಿರ ಮೃದುತಲ್ಪಮಂ
ಸೂಸಿದುವು ಸಾರಸಂಗಳ್ತಮ್ಮ ಗರಿಗಳಂ ತೋದು ತಂದಂಬುಗಳನು
ಆ ಸಿರಿಮೊಗಕ್ಕೆ ಬಿಸಿಲಾಗದಂತಾಗಸದೊ
ಳೋಸರಿಸದಂಚೆಗಳೆರಂಕೆಯನಗಲ್ಚಿ ನೆಳ
ಲಾಸೆಗೈದುವು ರಾಘವನ ರಾಣಿ ದುಃಖಸಂತಪ್ತೆಯಾಗಿರುತಿರಲ್ಕೆ

ಸುರನದಿಯ ತೆರೆತೆರೆಯ ನಡುನಡುವೆ ಬಿದ್ದೆದ್ದು
ಬರಲಾರದಿರ್ದೊಡಂ ಗಂಗೆಯೊಳಲರ್ದಲ
ರ್ದರವಿಂದಗಂಧದತಿ ಭಾರವಂ ಪೊರಲಾರದಿರ್ದೊಡಂ ಧರಣಿಸುತೆಯ
ಪರಿತಾಪಮಂ ತವಿಸದಿರಬಾರದೆಂದು ತರ
ಹರದೊಳೊಯ್ಯೊಯ್ಯನೈತಂದು ಬೀಸಿತು ಸುಖ
ಸ್ಪರುಶವಾತಂ ಜಗದೊಳುಪಕಾರಿಯಾದವಂ ತನ್ನ ನೋವಂ ನೋಳ್ಪನೆ

ಚಂದ್ರಹಾಸ

ಇನ್ನೊರೆವೆನಾಲಿಸಾದೊಡೆ ಪಾರ್ಥ ಧಾರ್ಮಿಕಂ
ಮುನ್ನೊರ್ವನುಂಟು ಕೇರಳ ದೇಶದವನಿಪಂ
ಸನ್ನುತ ಗುಣೋದಯಂ ಮೇಧಾವಿಯೆಂಬವಂ ಬಲಯುತಂ ಬಳಿಕವಂಗೆ
ತನ್ನ ಪಟ್ಟದ ರಾಣಿಯೊಳ್ಬಹಳ ಭಾಗ್ಯ ಸಂ
ಪನ್ನನೆಡದಂಘ್ರಿಗರುವೆರಳಾಗಿ ದಿವದೊಳು
ತ್ಪನ್ನನಾದಂ ಮೂಲನಕ್ಷತ್ರದಿಂದರಿಷ್ಟಾಂಶದೊಳ್ಸುಕುಮಾರನು

ಪುತ್ರೋತ್ಸವಂ ಮಾಡಿ ಕೆಲವು ದಿನಮಿರೆ ನೃಪಂ
ಶತ್ರುಗಳ್ಬಂದು ನಿಜ ನಗರಮಂ ಮುತ್ತಿದೊಡೆ
ಕ್ಷತ್ರಧರ್ಮದೊಳವರೊಡನೆ ಯುದ್ಧರಂಗದೊಳ್ಪೋಯ್ದಾಡಿ ಮಡಿಯೆ ಕೇಳ್ದು
ಚಿತ್ರಭಾನು ಪ್ರವೇಶಂಗೈದಳಂದು ಶತ
ಪತ್ರಲೋಚನೆ ಪತಿವ್ರತೆಯಾಗಿ ಬಳಿಕಲೆ ಧ
ರಿತ್ರೀಶ್ವರನ ರಾಜ್ಯಮಂ ತೆಗೆದುಕೊಂಡಹಿತರಾಳ್ದರದನೇವೇಳ್ವೆಸು

ಬಳಿಕೊರ್ವ ದಾದಿ ಶಿಶುವಂ ಕೊಂಡು ಪೊರಮಟ್ಟು
ತೊಳಲಿ ಬಳಲುತೆ ಮೆಲ್ಲಮೆಲ್ಲನೇ ತಂದು ಕುಂ
ತಳನಗರಮಂ ಪೊಕ್ಕಳಲ್ಲಿ ಸಾಕಿದಳರ್ಭಕನನತಿ ಪ್ರೇಮದಿಂದೆ
ಎಳೆಯಂಗೆ ಬೇಕಾದುದಿಲ್ಲದಿರೆ ಮರುಗುವ
ಳ್ಪೊಳಲೊಳಗೆ ತಿರಿದು ಹೊರೆದಳಲುವಳ್ಮದ್ದಿಸಿ ಪ
ಸುಳೆಯ ಬಿನದಂಗಳ್ಗೆ ಹಿಗ್ಗಿ ಬಿಸುಸುಯ್ವಳವಳನುದಿನದೊಳಾರ್ತೆಯಾಗಿ

ಇಡೆ ತೊಟ್ಟಿಲಿಲ್ಲಾಡಿಸುವರಿಲ್ಲ ನಿನಗೆ ಪೊಂ
ದೊಡಿಗೆಯಿಲ್ಲಿರೆ ನಿಳಯಮಿಲ್ಲ ಬಿಡದೆರೆವ ನೀ
ರ್ಕುಡಿವಾಲ್ಗಳೆಣ್ಣೆ ಬೆಣ್ಣೆಗಳಿಲ್ಲ ಲಾಲಿಸಿ ನಲಿವ ತಂದೆತಾಯ್ಗಳಿಲ್ಲ
ಪೊಡವಿ ಪತಿ ಕೇರಳಾಧೀಶ್ವರಂ ಪರಕೆಯೊಳ್
ಪಡೆದನಿದಕೀಗ ನಿನ್ನಂ ನೋಡುವೆನ್ನ ಕ
ಣ್ಣೊಡೆಯದಕಟಕಟೆಂದು ಬಿಸುಸುಯ್ದಳಲ್ದು ಮರಗುವಳಾಕೆ ದಿನದಿನದೊಳು

ಮೊಳೆವಲ್ಲುಗುವಜೊಲ್ಲು ದಟ್ಟೈಸಡಿ ತೊದಲ ನುಡಿ
ತೊಳತೊಳಗುತಿಹ ಸೊಬಗು ಮೆರೆವ ನಗೆ ಮೊಗದ ಬಗೆ
ಪೊಳೆವ ಕಣ್ಮೆಸುಪ ನುಣ್ಗದಪಿಸೆಣೆ ಚೆಲ್ವಪಣೆ ಕುರುಳ ಜೋಲಂಬೆಗಾಲು
ಸುಳಿ ನಾಭಿ ಮಿಗೆ ಶೋಭಿಪಧರದೆಡೆ ಬಟ್ಟದೊಡೆ
ನಳಿತೋಳಿಡಿದ ಧೂಳಿ ಸೊಗಯಿಸುವ ವರಶಿಶುವ
ನಲಿದಾಡಿಸುವ ರೂಢಿಯಿಲ್ಲೆಂದು ನೆರೆ ನೊಂದು ಮರುಗುವಳಜಸ್ರಮವಳು

ಬಾಲಕನ ಲೀಲೆಯಂ ಕಂಡು ಹಿಗ್ಗುವಳೊಮ್ಮೆ
ಲಾಲನೆಗಳಿಲ್ಲೆಂದಳಲ್ದು ಮರುಗುವಳೊಮ್ಮೆ
ಪಾಲಿಸಿದಳಿಂತು ನಡೆ ನುಡಿಗಳಂ ಕಲಿವಲ್ಲಿ ಪರಿಯಂತಮಾಶಿಶುವನು
ಮೇಲೆ ರುಜೆ ಬಂದಡಸಿ ವಿಧಿವಶದೊಳಾಧಾತ್ರಿ
ಕಾಲನರಮನೆಗೈದಿದಳ್ಬಳಿಕ ಪಸುಳೆಗೆ ನಿ
ರಾಲಂಬವಾಗಲಾ ಪಟ್ಟಣದೊಳೆಲ್ಲರ್ಗೆ ಕಾರುಣ್ಯಕೀಡಾದನು

ಚೆಲ್ವಶಿಶು ಬೀದಿಯೊಳ್ಬಂದು ದೇಸಿಗನಾಗಿ
ನಿಲ್ವಿಸಂ ಕಂಡ ಕಂಡಬಲೆಯರ್ಕರೆಕರೆದು
ಮೆಲ್ವ ತನಿವಣ್ಗಳಂ ಕಜ್ಜಾಯ ಸಕ್ಕರೆಗಳಂ ಕುಡುವರೆತ್ತಿಕೊಂಡು
ಸೊಲ್ವ ಮಾತುಗಳನಾಲಿಸಿ ಮುದ್ದಿಸುವರೀವ
ರೊಲ್ವದಂ ಮಜ್ಜನಂಗೈಸಿ ಮುಡಿಯಂ ಪೊದಿಸಿ
ಮೇಲ್ವಾಸಿಸೊಳ್ಮಲಗಿಸುವರಳ್ತಿಯಿಂದೊಸೆದು ತಂತಮ್ಮ ಮಕ್ಕಳೊಡನೆ

ಪರಪುಟ್ಟನಾಗಿ ಪಟ್ಟಣದ ಬೀದಿಗಳೊಳಗೆ
ತಿರುಗುತಿಹ ಬಾಲಕನ ರೂಪವಂ ಕಂಡು ಕರೆ
ಕರೆದು ಭವನಂಗಳ್ಗೆ ಕೊಂಡೊಯ್ದು ಗಣಿಕೆಯರ್ತಮತಮಗಮೋಹದಿಂದೆ
ಸರಸ ಪರಿಮಳ ಸುಗಂಧಂಗಳಂ ತಿಗುರಿ ಕ
ಸ್ತೂರಿಯ ತಿಲಕವನಿಟ್ಟು ಕಂಮುಲಮುರ್ಡಿಸಿ ಕ
ಪ್ಪುರ ವೀಳೆಯಂಗೊಟ್ಟು ಮಡಿತೊಡಂಗಳೊಳೈದೆ ಸಿಂಗರಿಸಿ ಕಳುಹುತಿಹರು

ಆಡುವೆಳೆಮಕ್ಕಳೊಡನಾಡುವಂ ಲೀಲೆ ಮಿಗೆ
ನೋಡುವಚ್ಚರಿಗಳಂ ನೋಡುವಂ ಬಾಲಕರ
ಕೂಡೆ ಮನೆಮನೆಗಳೊಳಗೂಡುತಿಹನೆಲ್ಲರ್ಗೆ ಮುದ್ದಾಗಿ ಮೋಹಿಸುವನು
ನೋಡುವರ ಕಣ್ಗಳೊಡನಾಡೆ ತಮ್ಮಳ್ತಿಯಿಂ
ದಾಡುವರ ಸೆರವಿಯೊಳ್ ಕ್ರೀಡಿಸುವನಾಪುರದ
ರೂಡಿಸಿದ ಬೀದಿಯೊಳ್ಕ್ರೀಡದೆಲ್ಲೆಡೆಯೊಳಂ ಪಸುಳೆ ಪರಪುಟ್ಟನಾಗಿ

ಬಟ್ಟೆಯೊಳ್ಪುಣ್ಯವಶದಿಂದರ್ಭಕನ ಕಣ್ಗೆ
ಪುಟ್ಟ ಸಾಲಗ್ರಾಮದೊಂದು ರಮಣೀಯ ಶಿಲೆ
ಕಟ್ಟೆಸಕದಿಂದೆ ಕಾಣಿಸಲದಂ ತಾನೆತ್ತಿಕೊಂಡು ಕೆಳೆಯರ್ಗೆ ತೋರಿ
ಬಟ್ಟಗಲ್ಲಿಂತು ವರ್ತುಳದಿಂದೆ ಚೆಲ್ವಾಗಿ
ಪುಟ್ಟುವುದೆ ಪೊಸತೆಂದು ಪಿಡಿದಾಡುತೊಡನೆ ಜೈ
ತಿಟ್ಟು ಕೊಂಬಂ ಬಾಯೊಳನವರತಮಿರಿಸಲ್ಕೆ ತನಗೆ ಮನೆಯಿಲ್ಲವಾಗೆ

ತೊಳಪ ಸಾಲಗ್ರಮ ಫಲದಿಂದೆ ಬಾಲಕಂ
ಕೆಳೆವಕ್ಕಳೊಡನಾಟದಶ್ಮಗೋಳಕವೆಂದು
ತಿಳಿದಣ್ಣೆಕಲ್ಲೊಡ್ಡುಗಳನಾಡುತದರಿಂದೆ ಗೆಲ್ದೆಲ್ಲರಂ ಜರೆಯುತೆ
ಕಳಕಳಿಸಿ ನಗುತತಿಸ್ನೇಹದಿಂ ಕ್ರೀಡೆಯಂ
ತಳೆದಾಗಳುಣಿಸುಗಳ ಸುಂಬಲ್ಲಿ ತನ್ನ ಕೈ
ದಳಕೆ ತಂದುಳಿದ ಪೊಳ್ತಿನೊಳಾವಗಂ ಬಾಯೊಳಿರಿಸಿಕೊಂಡಿರುತಿರ್ಪನು

ಕುಂತೀ ಕುಮಾರ ಕೇಳಾಮಹಾಪತ್ತನದೊ
ಳಿಂತರ್ಭಕರೊಳಾಡುತಿಹ ಪಸುಳೆಗೈದು ಬರಿ
ಸಂ ತುಂಬಿತಾ ಸಮಯದೊಳ್ಪ್ರಬಲದಿಂ ಪ್ರವರ್ತಿಪ ದುಷ್ಟಬುದ್ಧಿಯೆಂಬ
ಕುಂತಳೇಂದ್ರನ ಮಂತ್ರಿ ತನ್ನ ಮನೆಯೊಳ್ವಿಪ್ರ
ಸಂತರ್ಪಣಂಗೈಯಲಾ ದ್ವಿಜರ್ಭೋಜನಾ
ನಂತರದೊಳೈದೆ ಸತ್ಕೃತರಾಗಿ ಕುಳ್ಳಿರ್ದು ಪರಸುತಲ್ಲಿರುತಿರ್ದರು

ಅಲ್ಲಿ ಕೆಳೆಯರೊಳಾಡುತಿರ್ದ ಶಿಶುವಂ ಕಂಡ
ರುಲ್ಲಾಸದಿಂದೆಸೆವ ಭೂಸುರರ್ಬಾಲಕನ
ಸಲ್ಲಲಿತ ರಾಜಲಕ್ಷಣಕೆ ಬೆರಗಾದರವನಂಗಮಂ ನೋಡಿನೋಡಿ
ನಿಲ್ಲದನುರಾಗದಿಂದಾರ ಸುತನೀ ತರುಣ
ನೆಲ್ಲಿಂದ ಬಂದನೆಂದಾ ದುಷ್ಟಬುದ್ಧಿಯಂ
ಮೆಲ್ಲನೆ ವಿಚಾರದಿಂ ಕೇಳ್ದೊಡಾ ವಿಪ್ರರ್ಗೆ ನಗುತಾತನಿಂತೆಂದನು

ಈ ಪರಿಯೊಳೆಸಿತಿಲ್ಲನಾಥರಾಗಿಹ ಬಾಲ
ರೀ ಪುರದೊಳೆತ್ತಣವನಾರ ಸುತನೆಂದರಿಯೆ
ವೀ ಪಸುಳೆಯಂ ರಾಜಕಾರ್ಯದೊಳಗಿಹೆವಿದರ ಚಿಂತೆ ನಮಗೇತಕೆನಲು
ಆಪಾರ್ವರೆಂದಿರ್ದೊಡಂ ಚಾರುಲಕ್ಷಣದೊ
ಳೀ ಪೊಳಲ್ಗೀ ಕುಂತಳಾಧೀಶನಾಳ್ವ ನ
ವಿಮ್ಮಾ ಪೊಡವಿಗೊಡೆಯನಹನೀತನಂ ನೀನಿರಿಸಿಕೊಂಡು ರಕ್ಷಿಪುದೆಂದರು

ಕ್ರೂರ ನಕ್ರಾಕುಲದೊಳಿಡಿದಿರ್ದ ಪೆರ್ಮಡು ಗ
ಭೀರ ನಿರ್ಮಲ ಜಲದೊಳೆಸೆವಂತೆ ಮನದೊಳ್ಕ
ಠೋರತರ ಭಾವವಂ ತಳೆದು ಬಹಿರಂಗದೊಳ್ವಿನಯಮುಳ್ಳಾತನಾಗಿ
ಚಾರು ಲಕ್ಷಣದ ಶಿಶುವಂ ನೋಡಿ ಧರೆಯ ಭೃಂ
ದಾರಕರ ನುಡಿಗೊಪ್ಪಿದವೊಲಿರ್ದು ಬಳಿಕ ಸ
ತ್ಕಾರದಿಂದಾ ವಿಪ್ರರಂ ಕಳುಹಿದಂ ದುಷ್ಟಬುದ್ಧಿ ನಿಜ ಭವನದಿಂದೆ

ಈ ಕುಂತಳೇಂದ್ರಂಗೆ ಸುತರಿಲ್ಲ ರಾಜ್ಯಮೆನ
ಗೇಕಾಧಿಪತ್ಯಮಾಗಿರ್ದಪುದು ಮುಂದಿವಂ
ಭೂಕಾಂತನಾದಪಂ ಗಡ ವಿಪ್ರರೆಂದ ನುಡಿ ತಪ್ಪದೆನ್ನಾತ್ಮಜರ್ಗೆ
ಬೇಕಾದ ಸಂಪದಂ ಬಯಲಾಗಿ ಪೋಪುದೆಂ
ದಾ ಕುಮತಿ ಬೇರೊಂದುಪಾಯಮಂ ಚಿಂತಿಸಿ ಭ
ಯಾಕಾರದೊಡಲ ಚಂಡಾಲರಂ ಕರೆಸಿ ಬೆಸಸಿದನಾರುಮರಿಯದಂತೆ

ಕಾನನಾಂತರದೊಳೀ ತರಳನಂ ಕೊಂದು ನೀ
ವೇನಾದೊಡಂ ಕುರುಪುದಂದೆನಗೆ ತೋರ್ಪುದೆಂ
ದಾ ನರೇಂದ್ರನ ಮಂತ್ರಿ ಬೆಸಸಿದೊಡೆ ಪಶುಘಾತಕಿಗಳಾಡುತಿಹ ಶಿಶುವನು
ಹೀನ ದಯದಿಂದೆ ಪಿಡಿದೆತ್ತಿಕೊಂಡೊಯ್ದರ್ಭ
ಯಾನಕದೊಳಂದು ಕೊಲೆಗೆಳಸಿ ಪ್ರಹ್ಲಾದನಂ
ದಾನವೇಶ್ವರನಾಜ್ಞೆಯಿಂ ಕಾಳ ರಕ್ಕಸರ್ಬಂದು ಕೈದುಡುಕಿದಂತೆ

ಪಾತಕಿಗಳೊಡಲೊಳಿಹ ಪರಮಾತ್ಮನಂತೆ ಯಮ
ದೂತರೆಳತಟದಜಾಮಿಳನಂತೆ ಕಾಕ ಸಂ
ಘಾತದೊಳ್ ಸಿಕ್ಕಿರ್ದ ಕೋಗಿಲೆಯ ಮರಿಯಂತೆ ನಲುಗಿ ಕತ್ತಲೆಯೊಳಿರ್ದ
ಶೀತಳ ಮರೀಚಿ ಲಾಂಛನದಂತೆ ಬಹಳ ಕೋ
ಪಾತಿಶಯದೊಳಗಿಹ ವಿವೇಕದಂತಾಗ ಪಶು
ಘಾತಕಿಗಳೆತ್ತಿಕೊಂಡೊಯ್ವ ಬಾಲಕನಿರ್ದನವರೆಡೆಯೊಳಂಜುತಳುತೆ

ಪೆಗಲೊಳೇರಿಸಿ ಬಸಕೆ ಚಂಡಾಲರುಯ್ಯುತಿರೆ
ಮಿಗೆ ಬೆದರಿ ಭಯದಿಂದೆ ಬಾಲಕಂ ಬಾಯೊಳಾ
ವಗಮಿರಿಸಿಕೊಂಡಿರ್ಪ ದಿವ್ಯಸಾಲಗ್ರಾಮದುಪಲದತಿಮಹಿಮೆಯಿಂದೆ
ಬಗೆದೋರಲಾಗ ಮುರಹರ ಕೃಷ್ಣ ಕಮಲಾಕ್ಷ
ಖಗರಾಜಗಮನ ಸಲಹೆಂದು ಚೀರಿದೊಡವನ
ಮೊಗನೋಡಿ ಕರುಣದಿಂ ಕಡಿಗರೆದೆ ಕರಗಿದುದದೆಂತೊ ಹರಿನಾಮದೇಳ್ಗೆ

ಉಯ್ದು ಪಸುಳೆಯನರಣ್ಯದೊಳಿರಿಸಿ ಮರುಗಿ ಬಿಸು
ಸುಯ್ದು ಪಶುಘಾತಕಿಗಳಾದುಷ್ಟಬುದ್ಧಿಯಂ
ಬಯ್ದು ಶಿಶುವಧೆಗಳ್ಕಿನಿಂದು ನೋಡುತೆ ಕಂಡರರ್ಭಕನೆಡದ ಕಾಲೊಳು
ಅಯ್ದಲ್ಲದೊಂದು ಬೆರಲಿರ್ಪುದಂ ಬಳಿಕದಂ
ಕೊಯ್ದು ಕುರುಪಂ ಕೊಂಡು ತಮ್ಮ ದಾತಾರನೆಡೆ
ಗೆಯ್ದಿ ತೋರಿದೊಡವನವರ್ಗಳಂ ಮನ್ನಿಸಿ ಮಹೋತ್ಸವದೊಳಿರುತಿರ್ದನು

ಇತ್ತಲಾ ವಿಪಿನದೊಳ್ತನ್ನ ವದನದೊಳಿರ್ದ
ವೃತ್ತ ಸಾಲಗ್ರಾಮ ಶಿಲೆಯ ಪ್ರಭಾವದಿಂ
ದುತ್ತಮ ಶ್ಲೋಕನಂ ಭಜಿಸೆ ದಯೆಗೈದೆಡದ ಕಾಲ ಷಷ್ಠಾಂಗುಳಿಯನು
ಕತ್ತರಿಸಿಕೊಂಡುಳುಹಿ ಪೋದರಂತ್ಯರ್ಬಳಿಕ
ತುತ್ತಿಸಿದ ರಾಹು ತೊಲಗಿದ ಶಶಿವೊಲಿರ್ದ ನವ
ನೆತ್ತಣದು ಬಾಧೆಗಳ್ನರ ನಿನ್ನ ಮಿತ್ರನಂ ಮರೆವೊಕ್ಕ ಜೀವಿಗಳ್ಗೆ

ಬಸಿವ ನೆತ್ತರ ಗಾಯದೆಡೆದಡಿಯು ವೇದನೆಗೆ
ಪಸುಳೆ ಹರಿಹರಿಯೆಂದೊರಲ್ದಳುತಿರಲ್ಕಗ್ಗೊ
ಳೊಸರ್ವ ಬಾಷ್ಪಂಗಳಂ ಕಂಡು ಮಿಗವಕ್ಕಿಗಳ್ಕೊಂದು ಕಡು ಶೋಕದಿಂದೆ
ಪಸಿವು, ನೀರಡಿಕೆಯುಂ ತೊರೆದಲ್ಲಿ ನಿಂದುಪಚ
ರಿಸುತಿರ್ದುವಾ ಶಿಶುವನೆಂದೊಡೆಲೆ ಪಾರ್ಥ ಕೇ
ಳ್ವಸುಮತಿಯೊಳಾರ್ತರಂ ನೋಡಿ ಮಿಗೆ ಮರುಗದಿಹ ಮಾನವಂ ಪಾಪಿಯಲ್ಲೆ

ಗರಿಗೆದರಿ ಕೊಡೆವಿಡಿದು ನಿಂದುವು ಬಿಸಿಲ್ಗೆ ನವಿ
ಲೆರಕೆಯಂ ಬೀಸಿ ಬಿಜ್ಜಣವಿಕ್ಕಿತಂಚೆ ತುಂ
ತುರನುದಿರ್ಚಿತು ಸಾರಸಂ ಸಲಿಲದೊಳ್ನೆನೆದ ಪಕ್ಕಂಗಳಂ ಬಿದಿರ್ಚಿ
ಮರುಗಿ ಮೆಲ್ನುಡಿಯೊಳುಪಚರಿಸಿದುವು ಗಿಳಿಗಳ
ಕ್ಕರೊಳಳಿಗಳರ್ಭಕನ ರೋದನದ ಕೂಡಳುವ
ತೆರದೊಳ್ಮೊರೆದುವಲ್ಲಿ ಕರುಬರಿದ್ದೂರಿಂದೆ ಕಾಡೊಳ್ಳಿತೆನಿಸುವಂತೆ

ನಿಲ್ಲದೆ ಸರಳ್ವ ಪಸುಳೆಯ ನಿರ್ಮಲಾಸ್ಯಮಂ
ಪುಲ್ಲೆಗಳ್ಕಂಡು ಕಾನನಕೆ ಕಾವಿಸಿ ತಮ್ಮ
ನಲ್ಲನೈತರಲುಮ್ಮಳಿಸಿ ವಾಹಸವಸರಸಬಂದ ಪೂರ್ಣೇಂದುವೆಂದು
ವಲ್ಲಭಸ್ವಾಮಿಯುಂ ಬೇಡಿಕೊಳುತಿರ್ಪುವೆನೆ
ಮೆಲ್ಲಮೆಲ್ಲನೆ ಪೊರೆಗೆ ಪೊದ್ದಿ ಬಾಲಕನಂಘ್ರಿ
ಪಲ್ಲವದ ರುಧಿರಮಂ ಕುಡಿನಾಲಗೆಗಳಿಂದೆ ಮಿಗೆ ಲೇಹನಂಗೈದುವು

ಕೋಗಿಲೆಯ ನಿಡುಸರಂ ಪಾರಿವದ ಕಲ್ಲುಣಿಸು
ಗೂಗೆಗಳ ಕಣ್ದೊಳಸು ಬಕನ ಮೌನದ ಬೆರಗು
ನಾಗದ ನಿರಾಹಾರಮಳಿಗಳ ಪರಿಭ್ರಮಣವಿಭದ ಸೀತ್ಕಾರಂಗಳು
ಪೋಗಲಡಿಯಿಡಲರಿಯದಾರೈವ ಜನಮಿಲ್ಲ
ದಾ ಗಹನ ಗಹ್ವರದೊಳಳುವ ಶಿಶುವಂ ನೋಡ
ಲಾಗಿ ಬಂದೆಡೆಗೊಂಡ ದುಃಖಾತಿರೇಕಮೆಂಬಂತೆ ಕಾಣಿಸುತಿರ್ದುದು

ಬಾಲಕನ ರೋದನವ ಕೂಡೆ ಬನದೇವಿಯ
ಗಾಳಿ ತೀಡಿದೊಡೆ ಭೋರೆಂಬ ತರುಲತೆಗಳಿಂ
ಗೋಳಿಟ್ಟರಗ್ನಿ ಜಲ ಭೂ ಗಗನ ವಾಯು ರವಿ ಶಶಿಗಳೆಣ್ದೆಸೆವೆಣ್ಗಳು
ಹೇಳಲೇನಡವಿಯ ಚರಾಚರಂಗಳ ಜೀವ
ಜಾಲಂಗಳುರೆ ಮರುಗುತಿರ್ದುವನಿತರೊಳೊಂದು
ಕೋಲಾಹಲದ ಘೋಷಮೆಲ್ಲಿಯುಂ ಕಿವಿಗಿಡಿದುದಾ ಮಹಾ ಕಾನನದೊಳು

ದಿನಪನುಪಟಳದಿಂದೆ ನೆಲೆಗೆಟ್ಟು ಪಲವು ರೂ
ಪನೆ ತಾಳ್ದು ವನವಾಸದುರುತಪದ ಸಿದ್ಧಿಯಿಂ
ಘನತೆಯಂ ಪಡೆದು ಮಿಗೆ ಪಗೆಯಾದ ಪಗಲು ತೊಲಗಿಪಂಧಕಾರವೆನಲು
ಅನುಪಮದ ಕಾರೊಡಲ ಬೇಡವಡೆ ಬೇಟೆಗೆ ಐ
ಪಿನದೊಳೈತರುತಿರ್ದುದಬ್ಬರದ ಬೊಬ್ಬೆಗಳ
ನಿನದದಿಂ ಜೀವಿಗಳ ಕೊಲೆಗೆಳಸಿದಂತಕನ ದೂತ ಸಂಘಾತದಂತೆ

ರತ್ನಾಕರವರ್ಣಿಯ ಭರತೇಶವೈಭವ

ಪೂರ್ಣ ಜೀವನ ದರ್ಶನ

ಭೋಗವಿಚಾರವು ಬೇಕು ನೃಪತಿಗಾತ್ಮಯೋಗವಿಚಾರವು ಬೇಕು
ರಾಗರಸಿಕನಾಗಬೇಕು ಭಾವಿಸೆ ವೀತ ರಾಗರಸಿಕನಾಗಬೇಕು

ಇಹಲೋಕ ಸುಖವ ಭೋಗಿಸಬೇಕು ನೃಪತಿಯುತ್ಸಹನಾಗಬೇಕು ಧರ್ಮದೊಳು
ಬಹು ಕಾಂಕ್ಷೆಯೊಳು ಸಿಕ್ಕಿದಂತಿರಬೇಕು ನಿಃಸ್ಪೃಹನಾಗಬೇಕೆದೆಯೊಳಗೆ

ಕೊಡಬೇಕು ಕೊಡುವಲ್ಲಿ ಪಾತ್ರವರಿಯಬೇಕು ನುಡಿಬೇಕು ಮೌನವೂ ಬೇಕು
ಬಡವರಂತಿರಬೇಕು ಪ್ರಭುವಿನಂತಿರಬೇಕು ನಡೆಯಿದು ಜಾತಿ ಕ್ಷತ್ರಿಯರ

ಜ್ಞಾನಶೂನ್ಯನ ಪಂಚೇಂದ್ರಿಯ ಪಂಚಾಗ್ನಿ ಜ್ಞಾನಿಯಿಂದ್ರಿಯ ಪಂಚರತ್ನ
ಜ್ಞಾನವಿಲ್ಲದೆ ಭೋಗಿಸುವ ಭೋಗಿ ಭವರೋಗಿ ಜ್ಞಾನವಿಡಿದ ಭೋಗಿ ಯೋಗಿ

ಜ್ಞಾನಿಯ ಮುಟ್ಟಲಮ್ಮದು ಕರ್ಮವೆನ್ನಲಾ ಜ್ಞಾನ ತಾನಾವುದೆಂದೆನಲು
ಜ್ಞಾನವೆ ನಾನು ಶರೀರ ನಾನಲ್ಲೆಂಬ ಮಾನಸದನುಭವವಲ್ತೆ

ದೊರೆಗಂತರಂಗ ವಿಜ್ಞಾನ ನಿಶ್ಚಲವಾಗಿ ದೊರೆಕೊಂಡರಾ ದೊರೆಗಿನ್ನು
ದೊರೆಯುಂಟೆ ಧರೆಗಿಂದಿನರಸು ಸ್ವರ್ಗಕೆ ನಾಳಿನರಸು ಮುಕ್ತಿಗೆ ಮುಂದಣರಸು

ಭೂಮಿಯೊಳಗೆ ಹೂಳ್ದ ಲೋಹ ಮಣ್ಬಿಡಿವುದು ಹೇಮ ಮಣ್ಬಿಡಿವುದೇ ನೃಪತಿ
ಕಾಮಿಸಿ ಭೋಗಿಸುವಗೆ ಕರ್ಮಬಂಧ ನಿಷ್ಪ್ರೇಮಭೋಗಿಗೆ ಬಂಧವುಂಟೆ

ಹುರಿದು ಬಿತ್ತಿದ ಬೀಜ ಮೊಳೆವುದೆ ರಾಗಾಂಕುರವ ಕೆಡಿಸಿದಾತ್ಮವೇದಿ
ವರಭೋಗದೊಳಿದ್ದರೇನಲ್ಲಿ ಮುಂದೆ ನಿಷ್ಠುರಕರ್ಮದುತ್ಪತ್ತಿಯುಂಟೆ

ಗಾನಮದ್ದಳೆ ತಾಳಲಯಕೆ ನರ್ತಿಪ ಮಂದಯಾನೆಗೆ ಶಿರದ ಕುಂಭದೊಳು
ಧ್ಯಾನವಿಪ್ಪಂತೆ ರಾಜ್ಯದೊಳಿರ್ದು ಮುಕ್ತಿಸಂಧಾನದೊಳಗೆ ನಿನ್ನ ನೆನಹು

ಪಟಗಾರನುರೆ ಸೂತ್ರವಿಡಿದಿದ್ದರಾ ಗಾಳಿಪಟ ಗಗನದೊಳಾಡುವಂತೆ
ಕುಟಿಲವಲ್ಲಾತ್ಮ ನಿನ್ನಂಗದೊಳಿರ್ದು ಸಂಘಟಿಸಿ ಮುಕ್ತಿಯೊಳದೆ ಬುದ್ಧಿ

ಘಳಿಗೆವಟ್ಟಲನಿಕ್ಕಿದವನೊಂದು ಕಥೆಯ ಹುಂಕೊಳಲನ್ಯರಿಗೆ ಹೇಳುತಿರ್ದು
ಘಳಿಗೆ ವಟ್ಟಲ ನೋಟ ಕೆಡದಂತೆ ನಿನ್ನಾತ್ಮನೊಳು ತಾಗುತಿದೆ ನಿನ್ನ ನೆನಹು

ಒಳಗಿದ್ದ ದೇವನ ಕಾಣದೆ ಹೊರಗೆ ದೇಗುಲವ ಪೂಜಿಸುವೆಗ್ಗನಂತೆ
ಒಳಗಣಾತ್ಮನ ಬಿಟ್ಟು ಮೈಯನೇ ತಾನೆಂದು ಸಲೆ ಹೊಗಳಿಸಿಕೊಳುತಿಹರು

ಭೋಗವಿಲ್ಲದೆ ಭೋಗಿಯಹುದು ನಿನ್ನೊಳಗಾತ್ಮಯೋಗವಿಲ್ಲದೆ ಯೋಗಿಯಹುದು
ಭೋಗದೊಳಿದ್ದು ಯೋಗವ ಮಾಡಿ ಭವಮುಕ್ತರಾಗುವರಾರು ನಿನ್ನಂತೆ

ವಿಷಯವಿಷವನುಂಡು ದಕ್ಕಿಸಬಲ್ಲ ನಿರ್ವಿಷಸಿದ್ಧ ನೀನವನೀಶಾ
ವಿಷಮಚಿತ್ತವನಾತ್ಮನೊಳು ನಿಲಿಸಿದ ರಾಜಋಷಿಯಲ್ತೆ ರಾಜನೆ ನೀನು

ತನು ಜಿನಗೃಹವೆಂದು ಮನ ಸಿಂಹಪೀಠವೆಂದನುಪಮಾತ್ಮನೆ ಜಿನನೆಂದು
ನೆನಹವೆಲ್ಲವ ಬಿಟ್ಟು ಕಣ್ಮುಚ್ಚಿ ನೋಳ್ಪಾಗ ಜಿನನಾಥ ತೋರುವನೊಳಗೆ

ಕಲಿತು ಮರೆದುದೊಂದು ಪದ್ಯವ ನೆನೆದುದನೊಳಗೊಳಗಾಲೋಚಿಪಂತೆ
ತಿಳಿವು ಬೆಳಗು ನನ್ನ ರೂಪೆಂದು ನೆನಹು ಮೈಯೊಳಗಾಡಲಾತ್ಮ ತೋರುವನು

ಭೊಗ್ಗನೊಂದೇ ದಿನದೊಳು ತೋರನಾತ್ಮನು ಬಗ್ಗಿದಾಗಳೆ ಬಾಗಿಲಹುದೇ
ನುಗ್ಗಿಯ ಮರನಲ್ಲ ಕರ್ಮವೆಂಬುದು ಕರ್ಮ ಜಗ್ಗಲೊಯ್ಯನೆ ತೋರುತಿಹನು

ಎಳೆಮಿಂಚಿನಂದದ ಬೊಂಬೆಯೊ ತಿಂಗಳ ತಿಳಿವೆಳಗಿನೊಳಾದ ರೂಪೋ
ಪಳಿಕಿನ ಪುತ್ಥಳಿಯೋಯೆನೆ ಕ್ರಮದಿಂದ ಹೊಳೆವುದೊಳಗೆ ತನ್ನ ರೂಪು

ಜ್ಯೋತಿರ್ಲೋಕವ ಹೊಕ್ಕಂತೆ ತಂಪಿನ ಜ್ಯೋತಿಯ ನಡುವೆ ನಿಂದಂತೆ
ತಾ ತನ್ನ ನಿಜವ ನೋಳ್ಪಾಗಳೀವುದು ತನು ವಾತದೊಳಿಹ ಸಿದ್ಧರಂತೆ

ನುಡಿಯಿಲ್ಲ ನಡೆಯಿಲ್ಲ ತನುವಿಲ್ಲ ಮನವಿಲ್ಲ ಕಡೆಗೆ ಪಂಚೇಂದ್ರಿಯವಿಲ್ಲ
ಕಡುಸುಖ ಸುಜ್ಞಾನಕಾಂತಿಯೆ ರೂಪಾಗಿ ನೊಡಲು ತುಂಬಿಹುದಾತ್ಮರೂಪು

ದೇವ ನೀನಧ್ಯಾತ್ಮಸೂರ್ಯ ನಿನ್ನಿದಿರಲಿ ನಾವೆಲ್ಲರಧ್ಯಾತ್ಮರಸವಾ
ಈ ವಿಧವೆಂಬುದು ರವಿಗೆ ಪ್ರಕಾಶವ ದೀವಿಗೆಗಳು ತೋರ್ಪ ರೀತಿ

ಬಾಳವನ್ನ ವೃಕ್ಷದೊತ್ತಿನೊಳಿರ್ದ ಮರಗಳು ತಾವೆಲ್ಲ ಕಮ್ಮನಪ್ಪಂತೆ
ದೇವ ನಿನ್ನೊಡನಾಡಿ ನಾವೆಲ್ಲರರಿದೆವು ಜೀವಶುದ್ಧಿಯ ತುದಿಮೊದಲಾ

ಸಂಗೀತವರ್ಣನೆ

ರಾಯ ನೋಡಿದನು ಗಾಯಕಿಯರ ಮೊಗವನಾ ಗಾಯಕಿಯರು ನೋಟವರಿದು
ಠಾಯೆ ಬಜಾವಣೆ ಗಮಕವೆಸೆಯೆ ಪಾಡಲಾಯತವಾದರು ಕೂಡೆ

ನೋಟ ರಾಯನ ಮೇಲೆ ನೆನಹು ರಾಗದ ಮೇಲೆ ನೀಟತಂತಿಯಮೇಲೆ ಬೆರಳು
ಚಾಟುಕಾತಿಯರು ಚಾಂದಸಿಕೆಯ ಸೂಂಕಿ ಸಘಾಟಿಕೆಯಿಂದ ಪಾಡಿದರು

ಜಕ್ಕವಕ್ಕಿಗಳು ಸೂರ್ಯನ ಮುಂದೆ ದುಗುಡವನಿಕ್ಕಿ ಸುಣ್ಣನಿಮಾಡುವಂತೆ
ಚೊಕ್ಕರಾಯನ ಮುಂದೆ ಮನದ ಜಾಡ್ಯವನೊಕ್ಕಲಿಕ್ಕಿ ಹಾಡಿದರು ಗಾಡಿಯೊಳು

ನಲಿದು ಸಂಗೀತಸಮುದ್ರವ ಹೊಕ್ಕು ಮುಕ್ಕುಳಿಸಿ ಮುತ್ತುಗುಳುವಂದದೊಳು
ಗಳತುಂಬಿ ಗಾನವ ತೆಗೆದು ಬಾಯ್ದೆರೆಯೊಳು ಸುಳುಹುಗಾಣಿಸಿದರೋಜೆಯೊಳು

ಉಕ್ಕಂದವಾಗಿ ತುಂಬಿದ ಗಾನರಸವನು ದಿಕ್ಕುದಿಕ್ಕಿಗೆ ಚಿಮ್ಮುವಂತೆ
ಚೊಕ್ಕಚೊಕ್ಕನೆ ತಾನಗಳ ತಂದು ಕೊರಳಲ್ಲಿ ಜಕ್ಕುಲಿಸಿದರು ಜಾಣೆಯರು

ನೆರವಾಗು ಗಾನಕೇಳೇಳೆಂದು ಮಲಗಿದ್ದ ಸರಸತಿಯನು ಜಾಣೆ ತನ್ನ
ಬೆರಳಿಂದ ಮಿಡಿವಂತೆ ಭಾರಿದಂಡಿಗೆಗೊರ್ವ ತರಳಾಕ್ಷಿ ಮಿಡಿದಳಂಗುಲಿಯಾ

ನೆರೆದು ನಿದ್ರೆಯೊಳಿದ್ದ ನಲ್ಲನ ಮುದ್ದಿಸಿ ಕರೆವುತಂಗುಲಿಯಿಂದ ಮಿಡಿದು
ಸರಸಕೆ ನಲ್ಲಳೇಳಿಸುವಂತೆ ಪಾಡುತ ತರುಣಿ ಮಿಡಿದಳು ದಂಡಿಗೆಯಾ

ನಿರಸವೀ ಸಂಸಾರವೆಂದು ನೆನೆದು ಹೇಸಿ ಬೆರಳ ಮಿಡಿವಳೋಯೆಂಬಂತೆ
ನರನಾಥನೆದೆಗೆ ಕಾಣಿಸಿತಾಕೆ ತಂತಿಯ ಬೆರಳಿಂದ ಮಿಡಿದ ಬಿನ್ನಾಣ

ಪರಮಂಡಲವ ಗೆಲ್ದವ ಮೆಚ್ಚೆ ಕರ್ಮವೆಂಬರಿಮಂಡಲವ ಗೆಲ್ದವನಾ
ಸ್ವರಮಂಡಲದಿಂದ ಪಾಡಿದರಾಲಿಸಿ ಸುರಮಂಡಲ ಸೋಲ್ವುದೆನಿಸಿ

ತುಂಬಿದ ಸಂಗೀತರಸದ ಬಲ್ದೆರೆಯೊಂದು ತುಂಬನುಚ್ಚಿದರೋ ಎಂಬಂತೆ
ತಂಬುರು ವೀಣೆಯೊಳೊಲ್ದು ಪಾಡಿದರಂದು ತುಂಬುಜವ್ವನೆಯರು ಜಿನನಾ

ಹೊಂಗೊರಳದರೊಳು ಭರತರಾಜನ ಶಿಕ್ಷೆ ಹೆಂಗಳವರು ಚೆಲುವೆಯರು
ಸಂಗೀತ ಮೋಹಿಸುತಿದ್ದಿತು ಕೇಳ್ವರಿಗಿಂಗಡಲೊಳಗೆ ಹೊಕ್ಕಂತೆ

ಸದರವೆ ಸುಖವ ತಾನನುಭವಿಸುವೆನೆಂಬುದದಕಿಹಪರಚಿಂತೆ ಬೇಕು
ಇದಿರನರಿಯಬೇಕು ತನ್ನನರಿಯಬೇಕು ಚದುರು ಬೇಕೆಂದು ಪಾಡಿದರು

ಎರಡುಗಣ್ಣಿಂದ ಲೋಕವ ನೋಡಬೇಕು ತನ್ನಿರವ ಸುಜ್ಞಾನದೃಷ್ಟಿಯೊಳು
ತಿರುಗಿ ನಿಟ್ಟಿಸಬೇಕು ಮುಕ್ಕಣ್ಣಗಲ್ಲದೆಲ್ಲರಿಗೆ ಬಹುದೆ ಸುಖಸಿದ್ಧಿ

ಬಾಲೆಯರೊಡನಿರಬೇಕಾತ್ಮರತಿಯೆಂಬ ಪಾಲುಗಡಲೊಳಿರಬೇಕು
ಲಾಲಿತಸುಖಸಿದ್ಧಿ ಪುರುಷೋತ್ತಮಗಲ್ಲದಾಲಸ್ಯಪುರುಷಗೇಕಹುದು

ವರಸತಿಯರ ಕೂಡೆ ನುಡಿದಾಡಬೇಕೊಮ್ಮೆ ಸರಸತಿಯೊಳು ನುಡಿ ಬೇಕು
ಪರಸತಿಯೊಳು ಮೌನ ಮುಕ್ತಿಸತಿಧ್ಯಾನವಿರಬೇಕು ನಾಲ್ಕೊಮ್ಮೆಗ ಬೇಕು

ಮೈಯ ಸುಖಕೆ ಮರುಳಾಗಿ ತಮ್ಮಾತ್ಮನ ಸಯ್ಯನರಿಯದೆ ಭೋಗಿಪುದು
ಉಯ್ಯ ಕೈವಿಡಿದು ತಂಡುಲವ ಬಿಸುಟ ಮರುಳಯ್ಯರ ಮಾರ್ಗವೇನಲ್ತೆ

ಪರುಷದ ಮಣಿಯೊಂದು ಕೈಯೊಳುಳ್ಳವಗೆಲ್ಲ ಸಿರಿಗಳು ತಾವೇ ಬಂದಿರವೇ
ಪರಬೊಮ್ಮದನುಭವವೊಂದುಳ್ಳರವನಿಗೆ ದೊರಕದ ದೊಡ್ಡಿತೊಂದುಂಟೆ

ಭವಭವತಪ್ಪದೆ ಭೋಗವಹುದು ಮೂರು ಭವ ನಾಲ್ಕು ಭವ ಹತ್ತು ಭವಕೆ
ಭವಕೆಟ್ಟು ಕೈವಲ್ಯಸುಖವಹುದಾತ್ಮಾನುಭವಕೆಣೆಯಹ ಭಾಗ್ಯವುಂಟೆ

ತಾನೊಂದು ಬಯಸನು ತನ್ನ ಬಯಸಿ ತನ್ನ ತಾನೇ ಬರುವುದು ಸೌಭಾಗ್ಯ
ಏನೊಂದ ನೆನೆಯನು ತನ್ನ ನೆನೆದು ಲೋಕ ಜಾನಿಸುತಿಹುದಾತ್ಮರತನಾ

ನಸುನಗೆಯಿಂದ ಹೆಂಗಳ ನೋಡಿ ಜುಮ್ಮೆನಲೊಸರಿಸುವನು ಕರಣಗಳಾ
ಬೆಸುಗೆಯಾದಂತಿದ್ದು ಬೇರುಪಟ್ಟಿಹನಾತ್ಮರಸಿಕನೊಳಗ ಬಲ್ಲರಾರು

ಸಿಕ್ಕಿದಂತಿಹನು ಸಿಕ್ಕನು ರತಿಸುಖದಲ್ಲಿ ಸೊಕ್ಕಿದಂತಿಹನಲ್ಲಿ ಸೊಕ್ಕಾ
ಠಕ್ಕರಂತಿಹನದು ಠಕ್ಕಲ್ಲ ನಿಜವ ಕಣ್ಣಿಕ್ಕಿ ಕಂಡವನ ಲೀಲೆಯದು

ದುರ್ಗದಂತೊಮ್ಮೆ ಗ್ರಾಮಗಳಂತೆ ಹೂವಿನ ಕೂರ್ಗಣೆಯಂತಿಹನೊಮ್ಮೆ
ಸ್ವರ್ಗವೆ ಪುರುಷನಾದಂತೆ ಹೆಂಗಳಿಗೆ ಸಂಸರ್ಗಸುಖವ ತೋರುತಿಹನು

ಗೂಳಿ ಸಡೆವ ಹಜ್ಜೆ ತೋರುವುದಲ್ಲದೆ ಗಾಳಿಯ ಹಜ್ಜೆ ತೋರುವುದೆ
ಜಾಳುಗಳೊಳಗುಗಾಣಿಸುವುದಲ್ಲದೆ ತತ್ವಶೀಲನೊಳಗ ಕಾಣ್ಬರಾರು

ಶರಣಾಗತವಜ್ರಪಂಜರ ಸಹಜಾಭರಣಾ ಸುಖೋಜ್ವಲಕಿರಣಾ
ಶರಣಾಗು ನನ್ನಂತರಂಗದೊಳಿರು ಭವಹರಣಾ ಚಿದಂಬರಪುರುಷಾ

ಆತ್ಮಧ್ಯಾನ

ಊಳಿಗವೆಂಗಳು ಕಡೆಸಾರ್ದರರಸನಾ ಜೋಲಿಯೆಲ್ಲವು ನಿಂದ ಮೇಲೆ
ಕಾಲೋಚಿತದಾತ್ಮಯೋಗವನೆಸಗಿದನಾ ಲೇಸನೇನ ಬಣ್ಣಿಪೆನು

ಪಲ್ಯಂಕಾಸನದೊಳಗೆ ಗದ್ದುಗೆಯೊಳು ಶಲ್ಯವರ್ಜಿತನು ಕುಳ್ಳಿರ್ದು
ಕಲ್ಯಾಣಮೂರ್ತಿ ಕಣ್ಮುಚ್ಚಿ ತನ್ನೊಳಗೆ ಧಾವಲ್ಯಯೋಗವ ಕಂಡನೊಡನೆ

ಎತ್ತಹೋದುದೊ ಹೆಂಗಳೊಡನುಬ್ಬಿನಿಂದಿಪ್ಪ ಹೊತ್ತು ತಾನಾಡಿದ ಲೀಲೆ
ಹತ್ತುಸಾವಿರ ಕಾಲ ತಪಸುಮಾಡಿದ ಮುನಿಪೋತ್ತಮನಂತಿರ್ದನಾಗ

ದೊರೆಯಿದ್ದು ಹೋಗೆನೆ ಹೋಗಿ ಬಾರೆಂದರೆ ಬರುತಿಹ ಸೇವಕರಂತೆ
ಕರಣ ನಾಲ್ಕಿಂದ್ರಿಯವೈದವನುಸುರಿದಂತಿರುತಿಹವೇನ ಬಣ್ಣಿಪೆನು

ಬೇಕಾದರಾಡಿಸಿ ಗಾಳಿಪಟವನರ್ತಿ ಸಾಕಾಗೆ ಸುರುಳುವನಂತೆ
ನೂಕಿ ಚಿತ್ತವ ಹೊರಗಾಡಿಸುವನು ತನ್ನೊಳೇಕವಾಗಿರಿಸುವನೊಮ್ಮೆ

ಹೊಳೆದೊಮ್ಮೆ ಹೊರಗೆ ಕಣ್ಣಿಕ್ಕಿ ಸೇವಕರಿಂದ ಕೆಲಸವ ಕೊಂಬನು ಮೈಗೆ
ಒಳಗೆ ಕಣ್ಣಿಕ್ಕಿ ಹಂಸಗೆ ಕರಣೇಂದ್ರಿಯಗಳ ಕೈಯ ಸೇವೆಯ ಕೊಂಬಾ

ಇಂದ್ರಿಯಭೋಗವ ಹೊರಗೆ ಭೋಗಿಸುವನತೀಂದ್ರಿಯಸುಖವ ತನ್ನೊಳಗೆ
ಚಂದ್ರಿಕಾಸುಖವ ಚಕೋರಂಬೊಲುಂಡು ಜಿತೇಂದ್ರಿಯನಂತಿರುತಿಹನು

ಮುಂಡೆಪರಿದು ಮೈಯನೊಣಗಿಸಿ ಬಾಹ್ಯವ ಕಂಡು ಮಾಡುವ ಬಾಹ್ಯತಪಸಿ
ದಂಡಿಸಿ ಮನವ ಕರ್ಮವನೊಣಗಿಸಿ ತನ್ನ ಕಂಡು ಮಾಡುವ ತಪಸವಗೆ

ಉಂಡುಪವಾಸಿ ಬಳಸಿ ಬ್ರಹ್ಮಚಾರಿ ಭೂಮಂಡಲವಿದ್ದು ನಿಸ್ಸಂಗ
ಮುಂಡೆಬೆಳೆದು ಮನಬೋಳಾದ ತಪಸಿಯ ಕೊಂಡಾಡಲಳವೆ ಚಕ್ರಿಯನು

ಜಿನಜಿನ ಕಣ್ಮುಚ್ಚಿ ತನ್ನ ಮೈಯೊಳಗೆ ತನ್ನನೆ ತಾನೆ ಕಂಡನಾ ಕ್ಷಣವೆ
ಜಿನಜಿನ ಕಂಡನು ಸಿದ್ಧನಸಲ್ಲಿಯೆ ಅನುಭವಿಸಿದನಾತ್ಮಸುಖವಾ

ಸರ್ವಾಂಗದೊಳು ತಳತಳಿಸುತ ತನ್ನಾತ್ಮ ತೋರ್ವನಾತ್ಮಗೆ ತೋರಲೊಡನೆ
ಜಾರ್ವುದು ಕರ್ಮವೇರ್ವುದು ಸುಪ್ರಕಾಶವ ಪೂರ್ವದ ಸುಖಹುಟ್ಟುತಿಹುದು

ಪುರುಷಾಕಾರದೊಳಗೆ ತೋರ್ಪುದೊಡನೊಮ್ಮೆ ಹರಿದೊಮ್ಮೆ ಪ್ರಭೆಯ ರೂಪಾಗಿ
ಇರುತಿಹುದೊಡನಳಿಪ್ಪದು ಕೂಡೆ ತೋರ್ಪುದು ಭರತೇಶಗಂತರಂಗದೊಳು

ಕತ್ತಲೆಯಹುದೊಮ್ಮೆ ಬೆಳಗಹುದದು ಮಾಸಿ ಮತ್ತೊಂದು ತಂಪಿನ ಸೊಡರಾ
ಹೊತ್ತಿಸಿದಂತಿಹುದಾ ಭರತೇಶನ ಚಿತ್ತದೊಳಾತ್ಮಯೋಗವದು

ಜುಮ್ಮೆನುತಿಹುದು ಸರ್ವಾಂಗದೊಳೆಲ್ಲಿಯು ಉಮ್ಮುತಿಹುದು ಸುಖವೊಳಗೆ
ಮಂಮಾಯಿದೊಂದು ವಿಸ್ಮಯವೆಂದೆನುತ ಪರಬೊಮ್ಮದೊಳೋಲಾಡುತಿಹನು

ಒಳಗೆ ತನ್ನಾತ್ಮನ ತಾ ನೋಡೆ ಹೊಸತೊಂದು ಬೆಳಗು ತೋರ್ಪುದು ತೋರಲೊಡನೆ
ಮಳಲಂತೆ ಜರಿವುತಿಹುದು ಕರ್ಮ ನಿಜಸುಖ ಹೊಳೆಯಂತೆ ಹೊಳೆದೇಳುತಿಹುದು

ವೀಣಾಲಾಪ

ಏನ ಬಣ್ಣಿಸುವೆನಾ ಕುಸುಮಾಜಿ ಪಾಡುವ ಗಾನವನಾ ವೀಣೆಗಿವಳು
ತಾನೊಬ್ಬ ಸಖಿಯೊಯೆಂಬಂತೆ ಶಾರೀರ ಸಮಾನವಾಗಿರಲು ಪಾಡಿದಳು

ಎಡಗೈಯೊಳಮರಿಸಿ ವೀಣೆಯನಾಂತು ಮೇಗಡೆ ಮೆಟ್ಟಿನೊಳು ಬೆರಳಾಡೆ
ಒಡನೆ ಕೀಳ್ಗಡೆ ತಂತಿಯೊಳು ಬಲಗೈವೆರಳೊಡರಿಸೆ ಪಾಡಿದಳೊಲಿದು

ತೊಡೆಯ ಮೇಲಿಟ್ಟು ನಲ್ಲಳನು ನುಂಗೊರಳ ತನ್ನೆಡಗೈಯೊಳಾಂತು ತೆಳ್ವಸಿರಾ
ತಡಹುವ ನಲ್ಲನ ಮುದ್ದುಲಾಲನೆಯ ಕನ್ನಡಿಸೆ ತಾ ವೀಣೆಯಾಂತೊಲವು

ಕೆಂಬಾಯ ನಸುದೆರೆದಾಯೆಂದು ರಾಗವನಂಬುಜಾನನೆ ತುಡುಕಿದಳು
ತುಂಬಿಗಳೊಡನೆ ಘುಂಮೆಂದೆಡಬಲಕೆ ತೆರಂಬೊಳೆದುವು ಶ್ರುತಿಗೊಡುತ

ವೀಣೆಯೊಳೊಮ್ಮೆ ತೋರುವಳು ರಾಗವ ತನ್ನ ಗೋಣೊಳಗೊಮ್ಮೆ ತೋರುವಳು
ವೀಣೆಯನೊಂದ ಬಿಟ್ಟೊಂದ ನುಡಿಸುವಳೀ ಜಾಣೆಯೆಂಬಂತಿಹುದಾಗ

ವೀಣೆಯ ನುಡಿಸುತ ಪಾಡಿದರಿವಳೀಗ ವೀಣೆಗಳೆರಡನೊಂದಾಗಿ
ಹೂಣಿ ನುಡಿಸುತಿದ್ದಳೆಂಬೊಲಿಹುದು ಮಝು ರಾಣಿಯ ದನಿಯ ಚೆಲ್ವಿಕೆಯೆ

ಒಳಗುಮ್ಮಿದಾನಂದರಸ ತನ್ನ ತನು ತುಂಬಿ ತುಳುಕಿ ಹೊರಗೆ ಸೂಸುವಂತೆ
ತೆಳುವಸಿರಿಂದ ಬಾಯ್ದೆರೆಯೊಳು ಸುಸ್ವರ ಹೊಳೆದು ಮೋಹಿಸುತಿದ್ದುದಾಗ

ಸುಳಿನಾಭಿಯೊಳು ಪುಟ್ಟಿ ಮೆಲ್ಲೆದೆಯೊಳು ಬೆಳೆದೊಳುಗೊರಳೊಳು ಪ್ರಾಯವಡೆದು
ಎಳೆಯಳ ಬ್ರಹ್ಮರಂಧ್ರವನೇರಿ ಬಾಯ್ದೆರೆಗಿಳಿದು ಮೋಹಿಸಿದುದಾಳಾಪಾ

ಏನಕಲ್ತಳೊ ಎಲ್ಲಿ ಕಂಡಳೊ ಮಝು ಪುಂಖಾನುಪುಂಖದೊಳು ಮೇಲ್ಮೇಲೆ
ತಾನವ ಹೊಸಹೊಸತಾಗಿ ತಂದಳು ಜೇನ ಸೋನೆಯ ಕರೆವಳೆಂಬಂತೆ

ಕುಂಟಣಿಗೋಲೆಯು ಬರೆವ ಕಾವನ ಕೈಯು ಕಂಠದೊಂದುಲುಹೊಯೆಂಬಂತೆ
ಕಂಠವನಲುಗಿಸಿ ಹೊಸತಾನಗಳ ಕಳ ಕಂಠೆ ನಿನಾದ ತೋರಿದಳು

ಉಂಚದಿಂದೆತ್ತುವಳಡಕದಿಂದಡಗಿಸಿ ಮಿಂಚಿನಂತೊಡನೇಳಿಸುವಳು
ಅಂಚೆಯ ನಡೆದಾಡಿಸುವಂತೆ ರಾಗದ ಸಂಚು ಗಾಣಿಸಿ ತೋರುತಿಹಳು

ಬಂದ ತಾನವ ಬರಲೀಸದೆ ಹೊಸಹೊಸತೊಂದೊಂದು ಪರಿಯ ತಾನಗಳಾ
ತಂದು ತಂದೆದೆಗೊಳಿಸಿದಳು ಗಾನವ ಕರೆತಂದು ತೋರಿಸುವಂತೆ ನೃಪಗೆ

ತಾನ ತಾನಕೆ ರಾಯ ಹಿಗ್ಗುತಿಹನು ಗಂಡನಾನಂದಕವಳುಬ್ಬುತಿಹಳು
ಗಾನವೊಪ್ಪಿದುದಾಗ ಗಂಧಗಿರಿಯ ಪವಮಾನ ಕಂಮನೆ ತೀಡಿದಂತೆ

ಕಂಮಕಂಮನೆ ತಾನಗಳ ತಂದು ಕೊರಳೊಳಗುಮ್ಮಿಸಿ ಹಾಡುವಳದಕೆ
ಜುಂಮುಜುಂಮನೆ ಮೈಗೆ ಪುಳಕವೇರಲು ರಾಯ ಸುಮ್ಮಾನಮಿಗೆ ಕೇಳುತಿಹನು

ಪಾರಣೆ

ತಂಗಾಳಿ ತೀಡಿತು ತಾರಗೆ ಮಸುಳ್ದುವು ಹಿಂಗಿತು ಜಗದಂಧಕಾರಾ
ಮುಂಗಾರ ಮೊಳಗಿನಂದದಿ ಮೊಳಗಿದುವು ವಾದ್ಯಂಗಳು ಜಿನಗೃಹದೊಳಗೆ

ನೋಡುವೆನಾತ್ಮಯೋಗಿಯನು ಪಾರಣೆಯನು ಮಾಡಿಪೆನೆಂದು ರಥವನು
ಓಡಿಸಿಕೊಂಡು ಬಂದನೊಯೆನೆ ರವಿ ಬಂದು ಮೂಡಣಗಿರಿಯನೇರಿದನು

ಶಾಂತಿಭಕ್ತಿಯನಂತರಂಗದೊಳೆಸಗಿ ನಿಶ್ಚಿಂತಾತ್ಮ ಗುರುವ ಬೀಳ್ಕೊಂಡು
ಶಾಂತದೃಷ್ಟಿಯೊಳು ಕಣ್ದೆರೆದನು ಲೋಕದ ಸಂತೋಷ ಕಣ್ದೆರೆವಂತೆ

ಸೊಸೆಯರೊಳಗ ನೋಳ್ಪೆನೆಂದು ಯಶಸ್ವತಿ ನಸುನಗೆಯಿಂದ ಬಾಯ್ದೆರೆದು
ಹೊಸಹರೆಯದೊಳೇಕೆ ನೀವಿಂತು ತನುವ ದಂಡಿಸುವಿರೌ ಹಾಯೆಂದಳೊಡನೆ

ನಿವಗೆ ಕೆಲಸವಿಲ್ಲ ನಿಮ್ಮಾಣ್ಮಗಾದರೆ ಸುವಿವೇಕಯೆಳ್ಳನಿತಿಲ್ಲ
ಅವನಿಯನಾಳುತ ಮುನಿಯಂತೆ ನಡೆವುದಿದವಿವೇಕಿಗಳ ನಡೆಯಲ್ತೆ

ತನಗೆ ಭೋಗದೊಳಿಚ್ಛೆಯಿಲ್ಲದಿರಿರಲಿ ಮಾನಿನಿಯರ ಹಸಿಯಿಸಿ ತಾನು
ಇನಿತು ಪ್ರಯಾಸವ ಮಾಡುವುದುಚಿತವೆ ಜಿನ ಜಿನಯೆಂದಳಾದೇವಿ

ನವಗೇನು ಪ್ರಯಾಸ ಅತ್ತ್ಯವೊಂದೊಂದು ದಿವಸ ನಿರ್ಭುಕ್ತಿ ತಿಂಗಳಿಗೆ
ನವಪ್ರಾಯಶಕ್ತಿಯೊಳಾತ್ಮಾರ್ಥವಾಗಿ ಮಾಡುವುದೊಳ್ಳಿತಲ್ತೆ ಸುವ್ರತವಾ

ಇಂದು ಭೂಪತಿ ನಿಮ್ಮ ಪಂತಿಯೊಳಗೆ ತನ್ನ ಮಂದಿರದಲ್ಲಿ ಪಾರಣೆಯಾ
ಚಂದದಿ ಮಾಳ್ಪೆನೆಂದನು ತಾನು ಬಹನಿಲ್ಲಿಗೆಂದು ಬಿನ್ನವಿಸಿದರಾಗ

ಆರ್ಯರಿಗನ್ನವನಿತ್ತು ತಾನೈತಹ ಪರ್ಯಂತ ನಿಲ್ಲಿರಿಯೆಂದು
ಮರ್ಯಾದೆಗೊಟ್ಟೆಮ್ಮ ಕಳುಹಿದನೆಂದು ತಾತ್ಪರ್ಯವ ತೋರಿ ನುಡಿದರು

ಎಂದರೆ ಮಗನುಪವಾಸದೊಳಿಲ್ಲಿಗೆ ಬಂದಪನೆಂದಿನ್ನು ನಡೆದು
ನೊಂದಪನೆಂದು ತಾಯಲ್ಲವೆ ಸುತಮೋಹದಿಂದ ತಾನೆದ್ದಳಾಕ್ಷಣವೆ

ಅಡಿಗಡಿಗೊಬ್ಬೊಬ್ಬ ಸೊಸೆಯರ ಕೈಲಾಗುವಿಡಿವುತ ಹಲವು ಸೊಸೆಯರ
ನಡುವೆ ಮೆಲ್ಲನೆ ನಡೆತಂದಳಾ ಷಟ್ಖಂಡದೊಡೆಯನ ತಾಯಿ ಜೋಕೆಯೊಳು

ಜನನಿಯೆಯ್ತುರುತಿರ್ದಳಿತ್ತಲಾ ನೃಪನತ್ತ ಮುನಿಭುಕ್ತಿಗೈಸಿ ಬೀಳ್ಕೊಟ್ಟು
ವನಿತೆಯರೊಡಗೂಡಿ ಬರುತಿದ್ದನಮ್ಮನ ಮನೆಗಾಗ ಕಂಡನಿದಿರೊಳು

ಜಿನ ಜಿನ ನೋಡು ನೋಡಮ್ಮಾಜಿ ತಾವಿಂದು ನನಗಿದಿರೈತಹ ಪರಿಯಾ
ಮನೆಮುಟ್ಟ ಬಂದೆನು ಬಿಜಯಂಗೈಸಿ ತಪ್ಪೆನು ಮೋಸವಾಯ್ತು ಹೋಯೆಂದಾ

ನಾಂ ತಡೆಯದೆ ಬಪ್ಪೆ ನೀಂ ಹೋಗಿರಿಯೆಂದು ನಿಂತು ಕಳುಹೆ ಹೋದರವರು
ಕಾಂತೆಯರೊ ಕಡು ಭ್ರಾಂತೆಯರೊಯೆಂದು ಕಂತುಸನ್ನಿಭ ನೊಂದು ನುಡಿದಾ

ಬಿನ್ನವಿಸಿದೆವವರ್ತಮ್ಮ ಪುತ್ರಗೆ ಬಿಸಿಲಿನ್ನಹುದೆಂದೆದ್ದರೊಡನೆ
ಮುನ್ನೀರು ಚಂದ್ರನತ್ತೇಳ್ವಾಗ ತಡೆವ ಸಂಪನ್ನರಾರೆಂದುಸುರಿದರು

ನೊಂದುಕೊಳ್ಳದಿರಣ್ಣ ನನ್ನ ಮನಸಿಗಿಚ್ಛೆ ಬಂದಾಗ ಬಂದೆ ನಾನಿದಕೆ
ಕುಂದೇನು ನಿನ್ನ ನಾರಿಯರು ಬಂದಾಗ ನೀ ಬಂದುದಲ್ಲವೆಯೆಂದಳಾಕೆ

ಕಡೆಯೊಳು ನೃಪನೆರಗಿದನು ತನ್ನಮ್ಮಾಜಿಯೆಡದ ಭಾಗವ ಸಾರ್ದು ಕುಳಿತಾ
ನಿಡುಗುಪ್ಪೆಯಾದ ಪೂಜಾದ್ರವ್ಯ ಬಯಲಾದುದೆಡೆಮಾಡಲನುವಾದರೊಡನೆ

ಕರೆದು ಯಶಸ್ವತಿದೇವಿ ಸೊಸೆಯರ ಕುಳ್ಳಿರಿಸಿಕೊಂಡಳು ಮನೆತುಂಬಿ
ಹಿರಿಯ ಹಬ್ಬವನೇನ ಪೇಳ್ವೆನೆಲ್ಲರು ಸಲ್ಮೆವೆರಸಿ ಪಾರಣೆಯ ಮಾಡಿದರು

ಭರತೇಶ ತಾಯ ಪಂತಿಯೊಳು ಸೌಂದರಿಯರು ವೆರಸಿ ಪಾರಣೆಯ ಮಾಳ್ಪಾಗ
ಸುರಪನ ಭೋಗ ತಾನಾವ ಪಾಸಟಿಯೆಂಬ ಪರಿಯೊಳಿರ್ದುದು ಜಿನ ಬಲ್ಲಾ

ಆ ರಾಯಸರಮನೆಯೊಳಗಣಾರೋಗಣೆ ಯಿಾರೀತಿಯಾಯ್ತೆನಲರಿಯೆ
ಕ್ಷೀರಸಮುದ್ರದೊಳೋಕುಳಿಯಾದಂತೆ ಪಾರಣೆಯಾಯ್ತೆಂದು ಬಿಡುವೆ

ಪಾರಣಾಶ್ರಮವೆಂದು ನೃಪತಿ ಮಾತೆಯ ತನ್ನ ತೋರಗೈಲಾಗಿಸಿಂ ನಡಿಸಿ
ಸಾರತಲ್ಪದೊಳಿಷ್ಟು ಪವಡಿಸಬೇಕೆಂದನಾ ರಾಜಮಾತೆಯೊಪ್ಪಿದಳು

ತೂಗುಮಂಚದೊಳೊರಗಿದ ತಾಯ ಭರತೇಶ ತೂಗಿದನಂದು ತೊಟ್ಟಿಲೊಳು
ರಾಗದೊಳಿಟ್ಟಾಕೆ ತೂಗಿದ ಸಾಲವ ತೂಗಿ ತಿದ್ದುವನೊಯೆಂಬಂತೆ

ಎಲೆಯ ಫಳಿಗೆಯ ಕೆಂಬಾಯ್ದೆರೆಗೂಡುವ ತಳಿವನು ಮೈಗೆ ಪನ್ನೀರಾ
ಚಿಲುಪಾಲನೂಡಿ ನೀರೆರೆದಾಕೆ ಸಲಹಿದ ಒಲುಋಣವನು ತಿದ್ದುವಂತೆ

ಪಚ್ಚೆಗಪ್ಪುರವನೆಚ್ಚುವನು ಗಂಧವ ಮೈಗೆ ಬಚ್ಚಿಸುವನು ಚಕ್ರನಾಥಾ
ಮೆಚ್ಚಿ ಬೀಸಣಿಗೆಯ ಬೀಸುವರಡಿಗಳನೊಚ್ಚಸೊತ್ತುವರು ರಾಣಿಯರು

ಚಲಿಸಿದ ನರೆಗುರುಳುಗಳಸೋಸರಿಸುವನೆಳಸಿ ಗಲ್ಲವ ತಡಹುವನು
ಬಳಲಿದಿರಮ್ಮಾಜಿ ಮುಪ್ಪಿನೊಳುಪವಾಸ ಸಲುವುದೆ ನಿವಗೆಂದು ಸೋವಾ

ಜಿನಸಿದ್ಧಭಾವನೆವಿಡಿದಿಷ್ಟು ಪವಡಿಸಿ ತನಯ ವಿಶ್ರಮಿಸುತಿಲ್ಲೆಂದು
ನೆನೆದುಕೊಂಡಳು ಕೂಡೆ ಜಿನ ಶರಣೆಂದೆದ್ದು ಜನಪನ ಜನನಿ ಕುಳಿತಳು

ಅಣ್ಣ ನನಗೆ ನನ್ನ ಮನೆಗೆಯಿದ್ದಲ್ಲದೆ ಕಣ್ಣಿಗೆ ನಿದ್ರೆ ಮುದ್ರಿಸದು
ತಣ್ಣನೆ ನೀನಿಲ್ಲಿರೆಂದೆದ್ದಳೊಡನೆ ಹೊಂಬಣ್ಣ ಮೈಯಣುಗ ಕೈಗೊಡಲು

ಭರತ ಬಾಹುಬಲಿ ಸಂದರ್ಭ

ಭೂರಿವಾದ್ಯದ ನಾದ ನಿಂದುದು ಕದನದ ಭೇರಿಯ ಸನ್ನೆ ಮತ್ತಿರಲಿ
ಆರಯ್ದು ನಾಲ್ಕೆಂಟು ನುಡಿವೇಳ್ವೆ ಮೊದಲೆಂದನಾರಾಯ ಪಲರು ಕೇಳ್ವಂತೆ

ಓರೆವೋರೆಯೊಳೆ ಮನ್ಮಥ ಕೇಳುತಿರಲಿ ಗಂಭೀರಾರ್ಥವನೆ ಪೇಳ್ವೆನೆಂದಾ
ಸಾರಿದ್ದ ಸಭಮಂತ್ರಿನೃಪರದು ಲೇಸೆನೆ ಧೀರಚಕ್ರೇಶನಿಂತೆಂದಾ

ಮನಸಿಜ ಕೇಳಣ್ಣ ನಿನಗೆನಗಿಂದು ದುರ್ವ್ಯಸನದಿಂದ ಜಗಳವಪ್ಪುದಕೆ
ಘನವೇನು ಹೇಳು ನಿಷ್ಕಾರಣ ಕದನವ ಜನಪರೆಸಗುವರೆಯೆಂದಾ

ನಿನ್ನೊಡವೆಯ ನಾನು ಕೊಂಡುದಿಲ್ಲಣ್ಣ ನೀನೆನ್ನೊಡವೆಯ ಕೊಂಡುದಿಲ್ಲ
ಮುನ್ನಯ್ಯನಿರಿಸಿದಂದದಿ ರಾಜಯುವರಾಜ ಸನ್ನಾಹದೊಳಗಿರ್ದೆವಲ್ತೆ

ಆಗಲಾಗಲಿ ದೋಷವಿಲ್ಲಣ್ಣ ತಮ್ಮಂದಿರಾಗಿಯು ನೋವಹುದದಕೆ
ಹಾಗದ ತೆರಿಗೆ ಬೇಕೆಂದು ನಾ ನಿನ್ನೂರ ಬಾಗಿಲ್ಗೆ ಭಟರನಟ್ಟಿದೆನೆ

ನಿನ್ನೂರ್ಗೆ ನನ್ನವರೆಯ್ದಿದ್ದರೆ ಮಾಣಲೆನ್ನೂರ್ಗೆ ನಿನ್ನವರೆಯ್ದಿ
ಅನ್ನಿಗರೆಂದು ಕಂಡುದೆ ಪ್ರಜೆ ಪರಿವಾರ ಭಿನ್ನಾರ್ಥವೇಕಾಯ್ತು ನಿನಗೆ

ನುಡಿಯಲ್ಲಿ ನಾ ನಿನ್ನ ಬಿಟ್ಟಾಡಿದೆನೆ ನನ್ನ ಪಡೆಯೊಳಗೊಬ್ಬರಾಡಿದರೆ
ಒಡಹುಟ್ಟಿದವನ ನೋಡುವೆನೆಂದು ಬರಹೇಳೆ ಘಡ ಹುಸಿಯೆಂಬರೆ ಅಪ್ಪಾ

ನಿನಗಾನು ಪಗೆಯೆ ನೀನೆನಗೆ ಪಗೆಯೆ ಹೇಳು ಜಿನಪುತ್ರರಿದನು ನಾವಿಂದು
ನೆನೆದಾಗ ಮುಂದೆ ಸಮಸ್ತರ್ಗೆ ದ್ರೋಹಶಾಸನವ ಬರೆದುಕೊಟ್ಟೆವಲ್ತೆ

ಮಾತಿಗೆ ತೊಡಗಿದ ಕದನಕಿಂದಿವನಿಗೆ ಭೀತಿಯಾದುದೆಯೆನಬೇಡ
ಪೂತು ಮಝುರೆಯೆನೆ ಕದನದೋರ್ಪೆನು ಕೇಳು ಪಾತಕಕಳೆವೆನು ಮೊದಲು

ಪರನೊಬ್ಬನೆನ್ನೊಡನಿದಿರಾದರಾಗಳೆ ಬರಲೊಡನಟ್ಟಿ ಮೆಟ್ಟುವೆನು
ಧರೆ ಮೆಚ್ಚದಣ್ಣ ಸೋದರರ ಕಾಳಗಕೆ ಮುಂ ದೊರೆಯಬೇಕಂಕಪದ್ಧತಿಯಾ

ನಾನಿಷ್ಟು ನಿನ್ನಿಂದ ಹಿರಿಯನಾದುದರಿಂದ ಸೇನೆಗೆ ಬರವೇಳ್ದೆನೈಸೆ
ನೀನೆನಗಗ್ರಜನಾದರೆ ನೀನಿರ್ದ ಸ್ಥಾನಕೆಯ್ದದೆ ತಡೆದಿಹೆನೆ

ಹಿರಿಯನಲ್ಲಿಗೆ ಕಿರಿಯನು ಬಂದು ಕಾಣ್ಬುದು ಧರಣಿಯೊಳುಳ್ಳುದೇನಲ್ತೆ
ಪರಿಭವವೇನಣ್ಣ ನಿನಗಯ್ಯನಂದಿಂತು ನಿರವಿಸಿದೋಜೆಯೇನುಂಟೆ

ಜಗದ ಭೂಭುಜರನಾಡಿಸಿ ನಾವು ನೋಡಿ ಪೆಂ ಪೊಗೆದಿರೆ ಪೊತ್ತುಗಳೆಯದೆ
ನಗೆಗೆಡೆಯಾಗಿಂತು ನೆಗಳ್ವರೆ ದೊರೆಯೆದ್ದು ಹಗರಣವಾಡಿದಂದದೊಳು

ನನ್ನ ಗೆದ್ದುದರಿಂದ ನಿನಗೆ ಕೀರ್ತಿಯೆ ಹೇಳು ನಿನ್ನಗೆಲ್ದೆನಗೊಂದು ಜಸವೆ
ಪನ್ನಗನರಸುರಲೋಕದುತ್ತಮರು ಛಿಯೆನ್ನರೆ ಯೋಚಿಸಿ ನೋಡು

ಅದಕೇನು ನೀನಿಂತು ಕದನಕೆಯ್ದಿದೆಯೈಸೆ ಕದನದೊಳ್ಗೆಲವೈಸೆ ಕಡೆಗೆ
ಬದೆಗರಂದದಿ ಹೋರಲೇತಕೆ ಗೆಲವು ನಿನ್ನದು ಸೋಲವೆನಗೆ ಹೋಗೆಂದಾ

ದೊರೆಗಳು ಮಂತ್ರಿಸಖರು ಕಿವಿಮುಚ್ಚಿ ದೇವರಿಗುಂಟೆ ಸೋಲವೆಂದೆನಲು
ಸ್ಮರಗಾರು ಸೋಲರ‍್ಯ ಹೆಣ್ಣ ಬಿಟ್ಟೆವೆ ನಾವು ತರಹರಗೊಳ್ಳಿರೈಯೆಂದಾ

ನನ್ನ ತಮ್ಮನಿಗಾದ ಗೆಲವೆನ್ನ ಗೆಲವದು ಬನ್ನವಿಲ್ಲೆನಗಿಲ್ಲ ಸೋಲ
ಇನ್ನೊಬ್ಬರಿದಿರಾದರೆಡಗಾಲೊಳೊದೆವೆ ನೀವೆನ್ನೊಳಗರಿಯಿರೈಯೆಂದಾ

ಕೇಳಣ್ಣ ಚಕ್ರವ ಬಯಸಿತಿಲ್ಲಾನು ಶಸ್ತ್ರಾಲಯದೊಳು ತಾನೆ ಹುಟ್ಟಿ
ಏಳಿಸಿ ನಾಡ ಸುತ್ತಿಸಿತು ನಿಮ್ಮೆಲ್ಲರ ಆಲಿಗೆ ಸೋವಾಗುವಂತೆ

ಈ ಸಿರಿಯನು ನಾನು ಪುಣ್ಯದ ಫಲವೆಂದುದಾಸೀನದೊಳು ನೋಡುತಿಹೆನು
ಆಸೆಯಿಲ್ಲೆನಗೆ ನೀನೊಪ್ಪುಗೊಳ್ಳುಂದಣ ಭೂಸುದತೀಶ ನೀನಲ್ತೆ

ಅರಸಾಗಿ ನೀನೂರೊಳಿರ್ದೆ ನೀನಟ್ಟಿದ ದೊರೆಯಾಗಿ ನಾನೆಯ್ದಿ ನಿನ್ನ
ಧರೆಯ ಸಾಧಿಸಿ ತಂದೆನೊಪ್ಪುಗೊಳಿನ್ನು ಭೂವರವೃಂದವಿದೆ ಕಟಕವಿದೆ

ನಿನಗೆ ನಾನಣ್ಣನೆಂಬಕ್ಕರವಿಲ್ಲ ನೀನನುಜನೆಂಬಕ್ಕರುಂಟಪ್ಪಾ
ನನೆವಿಲ್ಲ ನಿನ್ನ ಭಾಗ್ಯವ ಕಣ್ಣುತುಂಬ ನೋಳ್ಪೆನು ರಾಜಪದವಿಗಿಂತೊಪ್ಪು

ಕೌಶಲಿಯೊಳು ನೀನು ಸುಖಬಾಳು ನನಗೊಂದು ದೇಶವ ಕೊಟ್ಟು ಬೇರಿರಿಸು
ಕ್ಲೇಶದ ಮಾತಲ್ಲ ಸಂತೋಷ ಪುರುಪರಮೇಶನ ಕೆಂಬಜ್ಜೆಯಾಣೆ

ಲೆಕ್ಕವಿಲ್ಲದ ಮಂದಿ ಬೇಡ ಸೇವಕರಿಗೆನ್ನೊಕ್ಕಲು ಮಕ್ಕಳಿಗೆನಗೆ
ತಕ್ಕನಿತುಂಬಳಿಗೊಟ್ಟಿರಿಸೈ ನಾಡ ಕಕ್ಕುಲಿತೆಗಳೆನಗಿಲ್ಲ

ರಂಜನೆಗಾಡಿದ ಮಾತಲ್ಲ ನಂಬು ನಿರಂಜನಸಿದ್ಧನೆ ಸಾಕ್ಷಿ
ಕಂಜಾಸ್ತ್ರ ನನಗಿದರಿಂದ ಹೆಚ್ಚಿನ ಭಾಷೆ ಜಂಜಡದಿಚ್ಛೆಗಳಿಲ್ಲ

ವಿರಸವ ಬಿಡು ಬಿಡೆಂದಾ ಚಕ್ರಿನುಡಿಯೆ ಪೂಸರನು ತಗ್ಗುತ ಮನಸಿನೊಳು
ಮುರಿದ ಮೋರೆಯೊಳಿರೆ ಚಕ್ರರತ್ನವನಾಗ ಕರೆದಿಂತು ನುಡಿದನಾ ಚಕ್ರಿ

ಹೋಗು ಚಕ್ರವೆ ಭುಜಬಲಿಯನೋಲೈಸೆನೆ ಹೋಗದೀತಗೆ ಪುಣ್ಯವುಂಟು
ಪೂಗಣೆಯಗೆ ಚಕ್ರ ಬೆಸಗೆಯ್ವ ಪುಣ್ಯವಿಲ್ಲಾಗಿ ನಿಂದಿತು ಮುಂದೆ ಬಂದು

ಎಲೆಲೆ ಪಿಶಾಚ ಹೋಗೆಂದರೇತಕೆ ಹೋಗೆ ಕಲಹ ನಿನ್ನಿಂದಾದುದೆನಗೆ
ಜಲಜಾಸ್ತ್ರನತ್ತ ಸಾರೆಂದು ನೂಕಿದರದು ಬಳೆ ಜಾರುವಂತೆ ಜಾರಿದುದು

ಗರುಡಮಂತ್ರಕೆ ವಿಷವಿಳಿವಂತೆ ಭರತಭೂವರನ ವಾಕ್ಯವ ಕೇಳಲಾಗಿ
ಜರಿಜರಿದಂಗಜಗೆತ್ತಿದ ಕೋಪ ಪೈಸರಿಸಿತು ಹೃದಯ ತಂಪಾಯ್ತು

ಏರಿದ ಹೆಡೆಯಿಳಿವಂತೆ ಮುನ್ನಿನ ಗರ್ವ ಜಾರಿತು ಮೃದುವಾಯ್ತು ಚಿತ್ತಾ
ಗಾರಾಯ್ತು ಕಾರ್ಯ ನನ್ನಣ್ಣನಿಗಿದಿರಾಗಿ ದೂರ ಹೊತ್ತೆನಲಾ ಹಾಯೆಂದಾ

ಒಲೆದ ಮೋರೆಯ ತಿರುಹಿದನು ಸಮ್ಮುಖವಾಗಿ ಕಳೆದನೊಯ್ಯನೆ ತೋಳತೊಡಕಾ
ಅಳುಕಾದುದಣ್ಣನ ಮೊಗವ ನೋಡದೆ ನಾಚಿ ತಲೆಗುಸಿದಿರ್ದನಾ ಮದನಾ

ಬಲಗೈಯನಿಳುಹಿ ನಾಸಿಕದಗ್ರದಲ್ಲಿ ಸಂಗೊಳಿಸಿ ತನ್ನೆಡಗೈಯ ಬೆರಳಾ
ಬಲುಹಾಸ್ಯಗೈದೆನಲ್ಲಾ ನನ್ನ ಜ್ಯೇಷ್ಠಗೆಂದೊಳಗೊಳಗವ ನೋವುತಿರ್ದಾ.

ಚೆನ್ನಬಸವ ಪುರಾಣ

ನಾಡವರ್ಣನೆ

ಅತ್ತಲಾ ಪ್ರಭು ಸಿದ್ಧರಾಮಂಗೆ ಲಿಂಗದ ಮು
ಹತ್ತನರುಹಿಸಿ ಕೊಡುವೆಸೆಂದು ಕಲ್ಯಾಣದೊಳ
ಗುತ್ತಮಶಿವಾಚಾರಿ ಚೆನ್ನಬಸವಂ ಬಸವನಿರಲವರ ಬಳಿಗಾತನ
ಚಿತ್ತಹರುಷದೊಳೆ ಕರೆತರುತಿರಲ್ ಮುಂದೆ ತೋ
ರಿತ್ತು ಸುಕೃತದ ಬೀಡು ಸಿಂಗರದ ಜೋಡು ಸ
ದ್ಭಕ್ತಿಯಿಹ ಗೂಡು ಸೊಗಸುವ ನಾಡು ಸೋಡುತವರಡಿಯಿಟ್ಟು
ಬರುತಿರ್ದರು

ಎತ್ತ ನೋಡಿದೊಡೆ ನಿಗಮಂಗಳಿಂ ಪೊಂಗಳಿಂ
ದೆತ್ತ ನೋಡಿದೊಡೆ ಗ್ರಾಮಂಗಳಿಂ ಪೊಂಗಳಿಂ
ದೆತ್ತ ನೋಡಿದೊಡೆ ನಗರಾಳಿಯಿಂ ಕಾಳಿಯಿಂ ದ್ರೋಣಾಮುಖಾಳಿಯಿಂದೆ
ಎತ್ತಲುಂ ಪತ್ತನಸಮಾಜದಿಂ ಭೂಜದಿಂ
ದೆತ್ತಲುಂ ಖರ್ವಡನಿಕಾಯದಿಂ ಗೇಯದಿಂ
ದೆತ್ತಲ್ ಕಡಂಬದ ಸಘಾಡದಿಂ ಖೇಡದಿಂದಾ ನಾಡ ಸಿರಿ ಮೆರೆದುದು

ಅಲ್ಲಿಗಲ್ಲಿಗೆ ಬೆಳೆದ ಬೆಳೆಗಳಿಂ ಮೆಳೆಗಳಿಂ
ದಲ್ಲಿಗಲ್ಲಿಗೆ ವನಸ್ಥಳಗಳಿಂ ಕೊಳಗಳಿಂ
ದಲ್ಲಿಗಲ್ಲಿಗೆ ರನ್ನದರೆಗಳಿಂ ಕೆರೆಗಳಿಂ ಪರಿವ ಪರಿಕಾಲ್ಗಳಿಂದೆ
ಅಲ್ಲಿಗಲ್ಲಿಗೆ ತೋರ್ಪ ಗಿರಿಗಳಿಂ ಕರಿಗಳಿಂ
ದಲ್ಲಿಗಲ್ಲಿಗೆ ನೆರೆದ ಶುಕಗಳಿಂ ಪಿಕಗಳಿಂ
ದಲ್ಲಿಗಲ್ಲಿಗೆ ಗವಾಸ್ಪದಗಳಿಂ ನದಗಳಿಂದಾದೇಶವೊಪ್ಪಿರ್ದುದು

ಕಂಜಕುಮುದಂಗಳಿಲ್ಲದ ಸರಂ ಸರದಿಂದೆ
ರಂಜಿಸದ ಶುಕಪಿಕಂ ಶುಕಪಿಕಂಗಳ್ಗೆ ಫಲ
ಮಂಜರಿಯನೀಯದಿಹ ಮಾವು ಮಾವುಗಳನಪ್ಪದ ಬಳ್ಳಿ ಬಳ್ಳಿಗಳೊಳು

ಮಂಜುಳಧ್ವನಿಗುಡದ ಪರಮೆ ಪರಮೆಗೆ ಸಂತ
ಸಂ ಜನಿಸದರಲರಲ ನವಪರಿಮಳಂಗಳಿಂ
ದಂ ಜಡಿಯದೆಳಗಾಳಿಯೆಳಗಾಳಿಯಿಲ್ಲದಿಹ ಬನಮಿಲ್ಲವಾ ನಾಡೊಳು

ಪೊರೆಯದ ಸರಂಗಳಂ ಚಂದ್ರಕಾಂತಂಗಳಿಂ
ಮೆರೆಯದ ಧರಂಗಳಂ ಕಿವಿಗಮೃತಸಾರಮಂ
ಕರೆಯದ ಸ್ವರಂಗಳಂ ದುರ್ನೀತಿ ದುರ್ಮಾರ್ಗ ದುಷ್ಕೀರ್ತಿಸಂತತಿಯನು
ತೊರೆಯದ ಜನಂಗಳಂ ಸುರಪುರೋದ್ಯಾನಮಂ
ಜರೆಯದ ಬನಂಗಳಂ ಜಾತಿವೈರಂಗಳಂ
ಮರೆಯದ ಮೃಗಂಗಳಂ ಕಾಣೆನಾ ದೇಶದೊಳಗೇನೆಂಬೆನಚ್ಚರಿಯನು

ಸುರಸಭೆಯವೊಲ್ ಸುಧರ್ಮಾಧಿಷ್ಠಿತಂ ನಾಡೆ
ತರಣಿಮಂಡಲದಂತೆ ಗೋಮಂಡಲಾನ್ವಿತಂ
ತರುಣೀಸ್ತನದ್ವಂದ್ವದಂತಗ್ರಹಾರಮೂಲಾಲಂಕೃತಂ ನೋಳ್ಪೊಡೆ
ಸರಸಿವೊಲ್ ಪದ್ಮಾಲಯಂ ವತ್ಸರಂಗಳಂ
ತಿರೆ ಯುಕ್ತಬಹುಧಾನ್ಯಮೆಸೆವ ಗಂಧರ್ವರಂ
ತುರುತರೋದ್ಯಾನಶೋಭಾವೋಹದಿಂದಮಾ ನಾಡಸಿರಿ ಕರಮೆಸೆದುದು

ದೇವಮಾತೃಕ ನದೀಮಾತೃಕದೊಳಂ ಬೆಳೆವು
ದಾವ ಚೋದ್ಯಂ ಗಿಳಿ ಕರ್ದುಂಕಿದೊಡೆ ಬೀಳ್ವಿಸಿದು
ಮಾವಣ್ಣ ತನಿರಸದ ಕಾಲ್ಗಳಿಂ ಬೆಳೆವುವಾ ಗಾಳಿಗಲೆದೋಸರಿಸುವ
ತೀವಿದೆಳನೀರ ಕಬ್ಬಿನ ಸಾರದಿಂ ಬೆಳೆವು
ವಾವಗಂ ಪಾಮರೀಮುಖಶಶಿಗೊಸರ್ವಿಂದು
ಗ್ರಾವನಿರ್ಮಳಜಲದ ಪೂರದಿಂ ಬೆಳವುತಿಹ ಶಾಳಿಗಳ್ ಕಣ್ಗೆಸೆದುವು

ಶಾಳಿಗೆರಗಿದ ಗಿಳಿಗಳಂ ಸೋವ ಪಾಮರೀ
ಜಾಳದೊಂದುಲಿಪುಮಂ ಕೋಕಿಲನಿನಾದಮಂ
ದೇಳಿದಂಗೆಯ್ದು ತೊಲಗದೆ ನಿಂದ ಕೀರಾಳಿ ಸಲೆ ಕಂಗೊಳಿಸಿತೆಂದೆನೆ
ಭೂಲಲನೆಗಾ ಕಳವೆ ಪ್ರಸವೋತ್ಸವಕ್ಕೆ ಸ
ಮ್ಮೇಳಿಸಿದ ಕೆಂಪುಗೂಡಿದ ಹಸುರುಪಟ್ಟೆಯ ವಿ
ಶಾಲವಸನದ ಮುಸುಕಿದೆಂಬಿನಂ ಕಣ್ಗೆಸುದುದೇನೆಂಬೆನಚ್ಚರಿಯನು

ಪಲವುಕಾಲಂ ಬೆಳೆದಿದೇಂ ಫಲಂ ಕಡೆಯಲ್ಲಿ
ತಲೆಗೊಯ್ಸಿಕೊಂಬುದೆಂದು ಬಿಡದೆನುತೆ ಸಾಣ್ಬೆ
ತಲೆವಾಗಿದುವೊ ಪುತ್ರಮೋಹದಿಂ ಪ್ರತಿದಿನಂ ತನ್ನನೋವಂ ನೋಡಡೆ

ಸಲಹಿದೀ ಭೂದೇವಿಗಂ ನಮಿಸಿ ಭಕ್ತಿಯಿಂ
ನಲಿದು ಬಾಗಿದುವೊ ಪೇಳೆಂಬಿನಂ ಕಿಕ್ಕಿರಿದ
ಫಲಭಾರದಿಂ ಕೊರಲ್ವಾಗಿ ಕಣ್ಗೊಳಿಸಿರ್ದ ಶಾಲಿಗಳ್ ಕರಮೆಸೆದುವು

ತುಂಡುತುಂಡಾಗಿ ಕತ್ತರಿಸಿ ಗಾಣದೊಳರೆದು
ಹಿಂಡಿ ರಸಮಂ ತೆಗೆದು ಕಾಸಿ ಕಾಲ್ದುಳಿಯಲುಂ
ಖಂಡಕರ್ಕರೆಯಾದೆವೇಗೈದೊಡಂ ಸುಗುಣಮಂ ಬಿಡದ ಸುಜನರಂತೆ
ದಿಂಡುರುಳ್ಚಿದೆವಾಳ್ದಗಿದಿರಾದರಂ ಸುಕೋ
ದಂಡರೂಪಿಂ ಸ್ವಾಮಿಹಿತಕಿನ್ನು ತಮ್ಮೊಳು
ದ್ದಂಡತೆಯ ಬಿರುದೆತ್ತಿತೆನೆ ಸೋಗೆವಸುರ ಕಬ್ಬಿನ ಕರ್ಬು ಕಣ್ಗೆಸೆದುದು

ಬೆಳೆದ ನಾನಾಶಾಳಿ ಗದ್ದೆಗಳ ಪಾಳಿಗಳೊ
ಳುಲಿವ ಕೀರಾಳಿ ಸುಳಿಗಾಳಿಯಿಂ ಕೆದರ್ದ ಪೂ
ಗಳ ಧೂಳಿ ಪಾಡುವ ಮದಾಳಿ ಸತತಂ ಪಾಮರಿಯರೋಳಿ ಸತಿ ಬಳಸಿದ
ತೊಳಗುವ ವನಾಳಿಯೊಳ್ ವಿಟಕೇಳಿ ಮತ್ತಕೋ
ಕಿಳಕೇಳಿ ಹಂಸಾಳಿಯುಂ ಕಾಣುತಿದು ಸ್ಮರನ
ಬಲುದಾಳಿಯೆಂದು ಪಾಂಥರ್ ಕಾಲುಗೆಟ್ಟು ನಿಂದಿರೆ ನೋಡುತೆಯ್ತಂದರು

ಸುರಿದ ಶಾಲ್ಯನ್ನರಾಸಿಗಳ ಘೃತಪೂರಿತದ
ಹರವಿಗಳ ಸೂಪಾದಿಶಾಖಸಂತತಿಯ ಪರಿ
ಪರಿಯ ಪಚ್ಚಡಿಯುಪ್ಪುಗಾಯ್ ಭಕ್ಷ್ಯಪರಮಾನ್ನ ಬಹುವಿಧದ ಶೀಕರಣೆಯ
ತರತರದ ದಧಿದುಗ್ಧತಕ್ರದಿಂ ಪುದಿದ ಕೊ—
ಪ್ಪರಿಗೆಗಳನುಂಡುಂಡು ಪೋಪ ನಡೆತರ್ಪ ಪಥಿ
ಕರ ನೆರವಿಗಳ ಸತ್ರದಾಲಯಂ ರಂಜಿಸಿದುದಾ ಪಥದೊಳೇನೆಂಬೆನು

ಕಲಶಂಗಳೆತ್ತಿ ನೀರೆರೆವ ಕಾಂತೆಯರ ಪೊಂ
ಗಳಸಸ್ತನಂಗಳಂ ಮಂಗಳಮುಖಂಗಳಂ
ತಳಿರ್ದುಟಿಗಳಂ ಮುದ್ದುನಗೆಗಳಂ ಕಂಡು ನಡೆಯಲ್ ಮುಂದೆ ಕಾಲೇಳದೆ
ಬಳಲಿಕೆಯನಾರಿಸುವ ನೆವದೊಳಲ್ಲಲ್ಲಿ ಸವೆ
ದಿಳಿಪಿರ್ದ ಗಂಡುಬೊಂಬೆಗಳಂತೆ ಪಥಿಕಸಂ
ಕುಳಮಿರ್ದುದರವಟ್ಟಿಗೆಯ ನೆಳಲಸಾರಿ ಸುಖಸಂತಸದೊಳೇನೆಂಬೆನು

ನೀರನೀಂಟುವ ನೆವದೊಳಬಲೆಯರ ಲಲಿತಶೃಂ
ಗಾರರಸಸುಧೆಯನಾ ಕಣ್ಗಳಿಂದೀಂಟಿ ಸವಿ
ಸೋರುತಿಹ ವಾಗಮೃತಮಂ ಕರ್ಣದಿಂದೀಟಿ ತಣಿಯದುರೆ ಕಣ್ಣಮುಚ್ಚಿ

ಓರಂತೆ ಭಾವರತಿ ಸೌಖ್ಯಪೀಯೂಷರಸ
ಧಾರೆಯಂ ಚಿತ್ತದಿಂದೀಟಿ ಸೆರೆ ತಣಿದು ಬಾ
ಯಾರೆ ಸಾಕೆನದೆ ತಲೆದೊಸೆದು ನೀರಂ ನಿಲಿಸುತಿರ್ಪರಾ ಪಥಿಕರ್ಕಳು

ಕರಕಮಳಶಶಿಕಾಂತಕಳಶಮಾಸ್ಯೇಂದುವಿಂ
ಕರಗದಿಪ್ಪುದೆ ಚೋದ್ಯಮೆಂದು ದುಶ್ಚಿಂತೆಯಿಂ
ಕರಗುತಿದೆ ಸಿಂಹಮಧ್ಯಂಗಳಬುಜಾಕ್ಷಿಯರ ನೋಟದೊಳ್ ಪರೆದೆವೆಂದು
ಹರಿಕುಂಭಕುಚಯುಗಂ ಪೆಚ್ಚಿ ತಾವಿದ ಕಂಡು
ಪರಿಹಾಸಮಂ ಮಾಳ್ಪ ತೆರೆದೊಳರವಟ್ಟಿಗೆಯು
ತರುಣೀಜನಂಗಳಿರುತಿರೆ ಮುಂದೆ ಗೋಕುಲಂ ಕಣ್ಗೆ ಕಡು ಚೆಲ್ವಾದುದು

ತೋರಹೋರಿಗಳ ಡುರುಕಾರವಂ ಗಳದ ಘಂ
ಟಾರವಂ ಪಶುಗಳಂಬಾರವಂ ಕರುಗಳಂ
ಭೇರವಂ ಕರೆವ ಭೋರ್ಭೋರ್ರವಂ ಮಂಥನದಾ ರವಂ ಗೊಲ್ಲತಿಯರ
ಭೂರಿಭೂಪಾರವಂ ಕರುಗಳಂ ಕರೆವ ಗೋ
ಪಾರವಂ ಮಾರ್ಮಲೆತು ಪೋರ್ವ ಘನವೃಷಭಶೃಂ
ಗಾರವಂ ಗೂಡಿ ನಾನಾರವಂ ಕಿವಿಗಳಂ ಪೂರೈಸಿತೇವೇಳ್ವೆನು

ಮುನಿಯಂತೆ ಕರಿಯಂತೆ ಶಶಿಯಂತೆ ಭಟನಂತೆ
ವನಕುಸುಮದಂತೆ ಯಿಾಶಾನ್ಯವೈಭವದಂತೆ
ಘನತರವ್ರತವಶಾರೋಹಿಣೀಧೇನು ಸುಸುರಭಿ ವೃಷಯುಕ್ತಮಾಗಿ
ಅನಿಮಿಷಾಲಯದಂತೆ ರವಿಯಂತೆ ಬಾಣಸದ
ಮನೆಯಂತೆ ಮಾಂಸಂಗಳಂತುಳಪೀಯೂಷ
ಘನತೆ ಗೋಮಯಪಲ್ಲವಾಸ್ಪದಂ ವೈಶಾಖಕಬ್ಧದೊಳ್ ವ್ರಜಮೆಸೆದುದು

ಮುಂತೆಸೆದುದಾಗಳಾ ಘನವಿಭವದಿಂ ಮುಕ್ತಿ
ಕಾಂತೆಯರಮನೆಯಂತೆ ಪುಣ್ಯಾದಾಲಯದಂತೆ
ಸಂತತಂ ಶೈವನೇಮದ ಕೋಶಗೃಹದಂತೆ ಧರೆಯ ಮುಖಕಮಲದಂತೆ
ತಿಂತಿಣಿಯೊಳೆಸೆವ ಸೌಧಂಗಳ ಮರೀಚಿ ಗಗ
ನಾಂತಮಂ ಚುಂಬಿಸಲ್ ಸಕಲಸೌಭಾಗ್ಯಮಂ
ತಾಂ ತಳೆದ ಪಟ್ಟಣಂ ಕಲ್ಯಾಣಮೆಸೆವ ಜಾಣರ ತಾಣಮೊಪ್ಪಿರ್ದುದು

ವಸಂತ ವರ್ಣನೆ

ಚಳಿಯೊಡ್ಡು ಜಾರೆ ತಂಗಾಳಿ ತಲೆದೋರೆ ಪೂ
ಗಳ ಕಂಪು ಮೀರೆ ಭೃಂಗಂ ನಲಿದು ಪಾರೆ ಕೋ
ಕಿಲೆಯ ದನಿ ಸಾರೆ ಮದಸಂಗೆ ಬಲವೇರೆ ನದಿಗಳ್ ತಾರೆ ಮಾಮರಗಳು
ತಳಿರ್ಗಳಂ ಪೇರೆ ವಿರಹಿಗಳ ಬಾಯಾರೆ ಸುಖಿ
ಗಳ ತಾಪಮಾರೆ ಮುನಿಗಳ ಮನಂ ಮೀರೆ ಭೂ
ವಳಯಕೆ ವಸಂತಾಗಮಂ ಮನೋರಾಗಮಂ ಮಾಡುತ್ತೈತರುತಿರ್ದುದು

ಬೀತುವಾ ಜಾತಿ ಸೈದಿಲ್ ಮೊಲ್ಲೆಗಳ್ ಕರಂ
ಪೂತುದವನೀಲತಾವಿತತಿ ಮಾಮರಗಳುರೆ
ಕಾತುವಿನಿವಣ್ಣುಂಡು ಗಿಳಿವಿಂಡು ತೊಂಡುಗೆಯಲೆಳಸಿತಂಬುಜಮರಳ್ದುವು
ಓತುದು ವಿಯೋಗಿಜಾಲಂ ಮುನಿದರೊಳ್ ಕರಂ
ಸೋತುದಂಗನೆಯರ್ಗೆ ಮುನಿಕುಲಂ ಫಲವಿತತಿ
ಜೋತೊರಗಿದುದು ಬನಬನಂಗಳೊಳ್ ಪೊಸಬಸಂತಂ ಬರಲದೇವೊಗಳ್ವೆನು

ಧಾರುಣಿಯ ಹೃತ್ಕುಮುದಮಳಿಯೆ ತನ್ನೇತ್ರಪಂ
ಕೇರುಹಂ ಪೊಳೆಯೆ ಮುನಿದಿನಿಯರೆಂದೆಂಬಾ ಚ
ಕೋರಕೆರ್ದೆ ಬಿರಿಯೆ ಕೂರಿದರೆನಿಪ್ಪೆಣೆವಕ್ಕಿ ನೆರೆಯೆ ಜಾತೀಕುಸುಮದ
ತಾರಗೆಗಳಡಗೆ ತಚ್ಛಿಶಿರೇಂದುವಸ್ತಮಿಸ
ಲಾ ರಮ್ಯಮಧುವೆಂಬ ಸೂರನುದಯದೊಳೆ ಪರಿ
ವಾರವಂ ನೆರಪಿ ಮನಸಿಜನೃಪಂ ದಿಗ್ವಿಜಯಕೆತ್ತಿ ನಡೆದಂ ಮುದದೊಳು

ಅಳಿಕುಳಕ್ಕಾರೋಗಣೆಯ ಪೇಳ್ದು ಕೋಕಿಲಂ
ಗಳ ಬಾಯ ಬೀಗಮಂ ತೆಗೆದು ಪಸಿದೊಡಲ ಗಿಳಿ
ಗಳ ಕಳವಳಂಗಳಂ ಬಿಡಿಸಿ ಕಳಹಂಸೆಗಳ ಕಾಲ್ಗೆ ನಟಣೆಯನೊದವಿಸಿ
ಕೊಳರ್ವಕ್ಕಿಗಳ ಚಿತ್ತಮಂ ಬಲಿಸಿ ವಿರಹಿಗಳ
ನಳಲಿಸುತ್ತೆತ್ತೆತ್ತಲುಂ ಕಾಮದೂತನಂ
ತೆಳೆಗಾಳಿ ತೆಂಕಣಿಂ ಸುಳಿದುದು ವಸಂತಾಗಮದ ಮೊದಲೊಳೇನೆಂಜೆನು

ಮೌನವ್ರತಾಚಾರಿಯಾದ ಕೋಕಿಲೆಯಿಂದು
ಮೌನಮಂ ಬಿಟ್ಟುಲಿಯತೊಡಗಿದುದು ಮಲ್ಲಿಕಾ
ಮಾನಿನಿಗೆ ಚಂಡಾಳಿಯೊಳ್ ಸಂಗಮಾದುದಿನಸರಸಿ ಸಿರಿವನೆಯೆನಿಸುವ
ಆ ನಳಿನಿ ಬಂಡಿನೊಳಗಾದಳುತ್ತಮಜಾತಿ
ಹೀನಮಾಯ್ತಿಳೆಯೊಳೀ ಮಧುಸಂಗದಿಂದಲೇ
ನೇನಾಗದಿರದೆಂದು ತೋರ್ಪಂತೆ ಬಂದುದು ಬಸಂತಮದನೇನೆಂಬೆನು

ಸಲೆ ಸುಜಾತಿಯ ಸಿರಿಯಡಂಗಿತು ವಿಜಾತಿಗತಿ
ನಲಿವಾದುದುನ್ಮಧುಪಕುಲಕೆ ಸುಮನಃಕುಲದ
ಕೆಳೆಯಾದುದಂಗಭವನೇ ತನ್ನ ತಾಯ್ವನೆಗೆ ಕೇಡನೆಣಿಸುವನೆರ್ದೆಯೊಳು
ನೆಲೆಗೆ ಸಂದುದು ಪಾದರೀ ವಿಭವಮಾದುದಾ
ಗಳೆ.ತಪೋಹೀನತೆಯದೆಲ್ಲಿಯುಂ ಚಿತ್ರವಿದು
ಕಲಿಕಾಲವೋ ಜೈತ್ರಕಾಲವೋ ಪೇಳೆನಲ್ ಸುರಭಿಸಮಯಂ ಬಂದುದು

ಎಳದಳಿರ ಕೆಂಪು ಪೂಗಳ ಕಂಪು ಕೋಕಿಲಂ
ಗಳ ಸರದ ಸುಂಪು ತಂಗಾಳಿಯ ಪದಂಪು ಗಿಳಿ
ಗಳ ರವದ ಸೊಂಪು ತುಂಬಿಯ ಗಾನದಿಂಪು ನಾನಾಫಲಾವಳಿಯ ಬಿಣ್ಪು
ತಿಳಿಗೊಳದ ತಂಪು ವಿರಹಿಯ ಕೈಕದಂಪು ಸುಖಿ
ಗಳ ಮನದ ಪೆಂಪು ಬಸಗಳ ಗುಂಪು ಗುಂಪು ಸಂ
ಗಳಿಸಿತೆಲ್ಲೆಲ್ಲಿಯುಂ ಜೈತ್ರಾಗಮಂ ಬರಲ್ ಪೇಳ್ವುದೇನಚ್ಚರಿಯನು

ತಂಬೆಲರ ಕೊಬ್ಬು ಬನಬನದ ಸೌಭಾಗ್ಯಮೆಳೆ
ದುಂಬಿಗಳ ಸಂಗೀತಶಾಲೆ ಜೈತ್ರನ ರಥದ
ಮುಂಬೆಳಸು ಮೆಚ್ಚಿದರ ಮನಮೆಚ್ಚು ಗೆಲ್ವರೆರ್ದೆಗಿಚ್ಚು ರತಿದೇವಿಯೊಲವು
ಶಂಬರಾರಿಯ ಸರಳ ಸಂತಾನಮರಳ ಕುಲ
ಕಂ ಬೈತಲೆಯ ಜೊಕ್ಕ ಮುತ್ತೆನಿಪ ಮಲ್ಲಿಗೆಗ
ಳೇಂ ಬಿರಿದುವೋ ಬಿರಯಿಯೆರ್ದೆ ಬಿರಿವ ಮಾಳ್ಕೆಯಿಂದಾ ಬಸಂತದ
ಮೊದಲೊಳು

ಕಾವರಾಯನ ತೇಜದಂಕುರಮಿವೆನಲು ರತಿ
ದೇವಿ ತಾಂ ತೊಡುವ ಚಿನ್ನದ ಪೂಗಳೆನೆ ವಸಂ
ತಾವನೀಶಂ ಬರಲ್ ವನವಧು ನಿವಾಳಿಸುವ ನೀರಾಜನಂಗಳೆನಲು
ಆವಾವ ಪೂಗಂಪನೊತ್ತರಿಸಿ ತನ್ನ ತಂ
ಪಾವರಿಸೆ ದೆಸೆದೆಸೆಗಳಂ ಮೊಗ್ಗೆ ಬಿರಿ ಮುಗುಳ್
ಪೂವಾಂತ ಸಂಪಗೆಗಳೊಪ್ಪಿದುವು ಸ್ಮರನುರಿಯ ಬಾಣಂಗಳೆಂಬಂತಿರೆ

ಮನಸಿಜನ ಶಸ್ತ್ರಾಸ್ತ್ರಶಾಲೆಯಿದು ಕಾವರಾ
ಯನ ಚತುರ್ಬಲದ ಪಾಳೆಯವಿದಂಗಜನೃಪನ
ಬಿನದದರಮನೆಯೆಂದು ಮಧುವನಕೆ ಕಕ್ಕುದರಿಯಂ ನೆಟ್ಟನೋ ಮದನನ
ನನೆಯಂಬು ಮುನಿಹೃದಯಮಂ ನಡವೆನುತ್ತೆ ಚಿಲು
ಕಿನ ದೊಡ್ಡ ಮೊನೆಯಂಬನಾಗಿಸಿದನೋಯೆನಲ್
ವನಮನುರೆ ಬಳಸೆ ಕಂಗೊಳಿಪ ಪೊಂಗೇದಗೆಗಳೊಪ್ಪಿದುವು ತರತರದೊಳು

ಭಾವಿಸಲ್ ಸ್ಮರನ ಪಯಣಕೆ ಪೊಯ್ದ ನವಚಂದ್ರ
ಗಾವಿಯೊಳ್ಗೂಡಾರದರಳೆಲೆಗಳೆನೆ ವಿಯೋ
ಗಾವಳಿಮೃಗಂಗಳಂ ಮಧುವೆಂಬ ಬೇಂಟೆಗಂ ಸುಡಲೆಂದು ಬನದೊಳಿಟ್ಟ
ದಾವಾಗ್ನಿ ನಿಡುವುರಿಯ ನಾಲಗೆಗಳೆನೆ ಕೆಂಪು
ದೀವಿ ದಟ್ಟೈಯಿಸಿರ್ದ ತಳವೊರ್ದಗ್ರಳ ಕೆಳಗ
ನಾವರಿಸುತೆಳಲ್ವ ತಳಿರಿಂದಶೋಕದ್ರುಮಂಗಳ್ ಕರಂ ಮೆರೆದುವಂದು

ಎಳೆದಳಿರ ಮಾಣಿಕದ ಗೊಂಚಲ್ಗಳಿಂದೆ ಪೂ
ಗಳ ಮಿಸುನಿಗುಸುರಿಗಳ ಕುಚ್ಚುಗಳಿನೆಸೆವ ಮಿಡಿ
ಗಳ ಪಚ್ಚೆವರಲಸೂಸಕಗಳಿಂದಪ್ಪಿ ಬೆಳೆವಳ್ಳಿಗಳ ಬಿರಿಮುಗುಳ್ಗಳ
ತೊಳಪ ಮುತ್ತಿನ ಗುಡಿಗಳಿಂ ಚರಿಪ ಮರಿದುಂಬಿ
ಗಳ ನೀಲಮಣಿ ಮಾಲೆಯಿಂದೆಸೆವ ಮಾಮರಂ
ಗಳೆ ವಸಂತ ಸ್ಮರನ ಬರವಿಂಗೆ ಕೈಗೈದ ಗೂಡಾರಮೆನಲೆಸೆದುವು

ಕೋಮಳರಸಾಲ ಪ್ರಸೂನಗುಚ್ಛಂಗಳೊಳ್
ಕಾಮವಾರಣಬೃಂಹಿತಸ್ವನಮಿವೆನೆ ಹೇಮ
ತಾಮರಸದೊಳ್ ಜಲಾಂಗನೆಯ ಮುಖಸಂಗೀತಸಪ್ತಸ್ವರಂಗಳೆನಲು
ಮಲ್ಲಿಕಾಮುಕುಳದೊಳ್ ಮನೋಜಾಸ್ತ್ರಾಭಿ
ಕಾಮಭೀಂಕೃತನಿನಾದಂಗಳೆನೆ ಬನಬನದೊ
ಳಾ ಮಧುವ್ರತನಿಸ್ವನಂ ವಿರಹಿಕಂಪನಂ ಪೊಣ್ಮಿದುದದೇನೆಂಬೆನು

ತೇರೈಸಿ ಬರ್ಪ ತುಂಬಿಗಳ ವ್ಯೆಗಪ್ಪು ಮುಂ
ಗಾರ ಮುಗಿಲವರ ಝುಂಕಾರವೆ ಮೊಳಗು ಚರಿಪ
ನಾರಿಯರ ತೊಳಪ ಗಣ್ ಮಿಂಚು ಮಾರುತಹತಿಗೊಗುವ ಮಲ್ಲಿಗೆಯರಳ್ಗಳೆ
ತೋರಮಳೆವನಿಗಳೊಂದೊಂದುದಿರ್ವ ಬಂದುಗೆಯ
ಪೂ ರಯ್ಯಮಾದಿಂದ್ರಗೋಪಂಗಳಾಗೆ ಶೃಂ
ಗಾರಮಾಯ್ತುದು ವರ್ಷಮೋ ವಸಂತಮೊ ತಿಳಿಯಲರಿದೆನಲ್ ಬನ ಬನದೊಳು

ಸರಸಿಯೊಳಗಾಡುವರಸಂಚೆಯಿಂ ಕೊಂಚೆಯಿಂ
ಬಿರಿ ಮುಗುಳ್ಗೆರಗುವ ಮದಾಳಿಯಿಂ ಗಾಳಿಯಿಂ
ವರಫಲವನುಂಬ ಪೊಕ್ಕುಳಿಗಳಿಂ ಗಿಳಿಗಳಿಂ ಲತೆವನೆಗಳೋವರಿಯೊಳು
ಹರುಷದಿಂದೊಪ್ಪುವ ವಿಟಾಳಿಯಿಂ ಕೇಳಿಯಿಂ
ಮೊರೆವ ನಾನಾಪಕ್ಷಿಜಾಳದಿಂ ಮೇಳದಿಂ
ದರಳ್ವ ಪೂಗಳ ಸೊಗಸುಗಂಪಿನಿಂ ಪೆಂಪಿನಿಂ ವನವನಂಗಳ್ ಮೆರೆದುವು

ಪೊಡವಿಯೆಲ್ಲಂ ಕುಸುಮಪರಿಮಳಮಯಂ ಕಾಣ್ಬ
ಕಡೆಗಳೆಲ್ಲಂ ಸಕಲಫಲಮಯಂ ಬನಬನಗ
ಳೆಡೆಗಳೆಲ್ಲಂ ಮದನಬಲಮಯಂ ಲೋಕವೆಲ್ಲಂ ಭೋಗಿಸಂಕುಲಮಯಂ
ನುಡಿವುದೆಲ್ಲಂ ಮನೋಭವಮಯಂ ಮುನಿಮನದ
ನಡುವೆಲ್ಲಮತನುಶರಮಯಮೆಸೆವ ತಣ್ಗೊಳದ
ತಡೆಯೆಲ್ಲಮುಂ ವಿರಹಿಮಯಮಾದುದಾ ವಸಂತಾಗಮದೊಳೇನೆಂಬೆನು

ಮಹಲಿಂಗರಂಗನ ಅನುಭವಾಮೃತ

ತ್ವಂಪದಾರ್ಥ ಶೋಧನೆ

ತನ್ನ ತನ್ನೊಳು ತಿಳಿವುದಿದು ಸಾ
ಮಾನ್ಯವೇ ? ಪೂರ್ವದಲಿ ಮಾಡಿದ
ಪುಣ್ಯಫಲವೊದಗದೊಡದಾರಿಗು ಸುಲಭವಲ್ಲಾಗಿ
ಮುನ್ನಲೆಂಬರು ಬ್ರಹ್ಮವಿದ್ಯೆಯ
ನಿರ್ಣಯಿಸಲರಿದೆಂದು ; ಲೌಕಿಕ
ವನ್ನು ಕಳೆದದನರಿವುದೇ ತನಗುನ್ನತದ ಪದವಿ

ಬಾಯ ಬ್ರಹ್ಮವ ನುಡಿದ ಮಾತ್ರದಿ
ಮಾಯೆಯಳಿದುದೆ ? ನಿಜಸುಖವು ತನ
ಗಾಯಿತೇ ? ಕತ್ತಲೆಯ ಮನೆಯೊಳು ದೀಪವಾರ್ತೆಯನು
ಬಾಯಲಾಡಲು ಬಹಳ ಕತ್ತಲೆ
ಹೋಯಿತೇ ? ಅದರಂತೆಯನುಭವ
ದಾಯತಿಕೆ ತನ್ನೊಳಗೆ ಜನಿಸದೆ ಬಾಯರಿವು ವ್ಯರ್ಥ

ಎಲೆ ಧನಂಜಯ, ಸರ್ವಧರ್ಮವ
ನುಳಿದು ನನ್ನನೆ ಭಜಿಸು ; ಪಾಪವ
ತೊಲಗಿಸುವೆ ; ನಿನಗೀಗ ಮೋಕ್ಷವನಿತ್ತು ಸಲಹುವೆನು ;
ಹಲವು ಕೊಂಬೆಗೆ ಹಾರದೊಂದನೆ
ಬಲುವಿಡಿದು ಗತಿವಡೆವುದೆಂದದ
ತಿಳುಹಿದನು ಶ್ರೀಕೃಷ್ಣ ಗೀತಾಪರಿಸಮಾಪ್ತಿಯಲಿ

ಮಗನೆ ತಿಲದೊಳು ತೈಲವನು, ಕಾ
ಷ್ಠಗಳೊಳಗ್ನಿಯ, ಕ್ಷೀರದೊಳು ಮಿಗೆ
ಸೊಗಸುವಾಜ್ಯವ, ಸಾಧಿಸುವ ತೆರದಂತೆ ತತ್ತ್ವಗಳ
ತೆಗೆತೆಗೆದು ಬೇರ್ಪಡಿಸಿ ನೋಡಲು,
ಮಿಗಿಲೆನಿಸಿ ತೋರ್ಪಡುತಲಿಹ ಚಿ
ದ್ಗಗನವೇ ನೀನೆಂದು ನಿನ್ನೊಳು ತಿಳಿದು ನಿಶ್ಚಯಿಸು

ಸರಕು ತುಂಬಿದ ಮನೆಯನೆಲ್ಲವ
ತೆರವು ಮಾಡುತ ತೆಗೆಯೆ ಬರಿಯಂ
ಬರವೆ ತುಂಬಿಹ ತೆರದಿ, ತನುವಿನೊಳಿರ್ದ ತತ್ತ್ವಗಳ
ಹೊರಗಳೆಯಲೊಂದೊಂದನವ ಮಿ
ಕ್ಕಿರೆ ನಿರಾಕರಿಸಲ್ಕೆ ಬಾರದ
ಪರತರಚಿದಾಕಾಶವೇ ನೀನೆಂದು ನಿಶ್ಚಯಿಸು

ದೇಹವೇ ದೀವಿಗೆಯ ಕಂಬವ
ದಾ ಹಣತೆಯೇ ಬಾಹ್ಯಕರಣಗ
ಳೂಹಿಸಲು ಪ್ರಾಣಾದಿವಾಯುವೆ ತೈಲದಂತದಕೆ ;
ಗಾಹುಗತಕದ ಸೂಕ್ಷ್ಮತನುವೇ
ಮೂಹುರಿಯದಹ ವರ್ತಿಯಲ್ಲಿಯ
ದೇಹಿಯೇ ಚಿದ್ದೀಪವದು ನೀನೆಂದು ನಿಶ್ಚಯಿಸು

ರತ್ನಮಯವಹ ಕೊಡದೊಳಗೆ ತೋ
ರುತ್ತಲಿಹ ದೀಪಪ್ರಕಾಶವು
ಸುತ್ತಲೆಲ್ಲಾ ಒಳಹೊರಗೆ ಬೆಳಗುತ್ತಲಿರ್ಪಂತೆ
ತತ್ತ್ವಮಯವಹ ದೇಹದೊಳು ಹೊರ
ಗೆತ್ತ ನೋಡಲು ಥಳಥಳಿಸಿ ಬೆಳ
ಗುತ್ತಲಿಹ ಚಿಜ್ಜ್ಯೋತಿಯೇ ನೀನೆಂದು ನಿಶ್ಚಯಿಸು

ಅರಿವಿನುಳುಮೆಯೆ ತಾನು ; ತನ್ನೊಳು
ಬರಿಯರಿವೆ ತೀವಿರ್ಪುದದರೊಳು
ಕರಣಗಳು ಸುಳಿದಾಡುತಿರ್ಪುವು ಗಗನಲತೆಯೊಳಗೆ
ಬೆರಸಿ ತಿರುಗುವ ಪಕ್ಷಿಗಳವೋ
ಲ್ನಿರುಪಮಚಿದಾಕಾಶವೆನಿಸಿದ
ಪರಮಸಂವಿದ್ರೂಪವೇ ನೀನೆಂದು ನಿಶ್ಚಯಿಸು

ತನ್ನನರಿಯದವಿದ್ಯೆಗಿಂತಲು
ಮುನ್ನಲಿಹ ಸುಜ್ಞಾನಸವಸು ಸಂ
ಕೀರ್ಣವಾದಜ್ಞಾನ ಮುಸುಕೆ ಸಮರ್ಥವಲ್ಲಾಗಿ
ಪೂರ್ಣಚಂದ್ರನ ಮುಸುಕಲರಿಯದ
ಚಿಹ್ನದಂತೆ ನಿರಾವರಣ ಪರಿ
ಪೂರ್ಣ ಪರಮಾನಂದವೇ ನೀನೆಂದು ನಿಶ್ಚಯಿಸು

ತನು, ಕರಣ ಮೊದಲಾದ ತತ್ತ್ವಗ
ಳನಿತರೊಳು ಪ್ರತಿಫಲಿಸಿ ಚೇತನ
ವೆನಿಸಿ ಸಕಲಾಧಾರವಾಗಿಹ ಚಿತ್ಸ್ವರೂಪವನು
ತನಗೆ ಕಾಣಿಸದೆಂಬುವನು ರಜ
ಕನವೊಲುದಕದೊಳಿರ್ದು ತೃಷೆಯಲಿ
ತನುವ ಬಿಟ್ಟಂತಕಟ ತಾನೇ ತನಗೆ ಮರೆಯಹನು

ನಳಿನಸಖನೆಂತೇಕಕಾಲದಿ
ಬೆಳಗುತಿಹನಕ್ಷಿಗಳನೆಲ್ಲರ
ತಿಳಿಯಲಾ ಪರಿಯಾತ್ಮ ತನುಕರಣಾದಿತತ್ತ್ವಗಳ
ಬೆಳಗುತಿಹನೊಂದೇ ಪರಿಯಲಿದ
ನೆಲೆ ಮಗನೆ, ತಿಳಿ ; ಕತ್ತುರಿಯ ಪರಿ
ಮಳಕೆ ಕರಗಳನೆತ್ತಿ ತೋರಿಸಲೇಕೆ ? ಹೇಳೆಂದ

ಅರಿವು ಮನದಲಿ ಪೊಳೆಯಲಾ ಮನ
ದರಿವು ತಾನಾಗಿಂದ್ರಿಯಂಗಳೊ
ಳಿರಕವಾಗಿರಲಿಂದ್ರಿಯಗಳರ್ಥಗಳ ಗ್ರಹಿಸುವವು ;
ಪರಮಚೈತನ್ಯಾತ್ಮ ಸಿವರೊಳು
ಬೆರಸಿಕೊಂಡಿರಲರಿಯಬಾರದೆ ?
ಕೊರಳ ಹಾರಕೆ ಪರರ ಕೇಳಲದೇಕೆ ? ಶುಕಯೋಗಿ

ಇರುಳು ಮನೆಯಲಿ ಮಲಗಿ ನಿದ್ರೆ್ಮ
ಭರದಲೆದ್ದವ ಮೆಲ್ಲ ಮೆಲ್ಲನೆ
ಕರದಿ ಕಂಬವ ಹುಡುಕಿ ತಡವರಿಸುತ್ತ ಭೀತಿಯಲಿ
ಹೊರಡುವನು ಪೂರ್ವಾನುಭವಸಂ
ಸ್ಮರಣಸಾಧನಬುದ್ಧಿಯಿಂದೀ
ಪರಿಯು ಬುದ್ಧಿಯನರಿವರಿವೆ ನೀನೆಂದು ನಿಶ್ಚಯಿಸು.

ಸರ್ವಜ್ಞ

ಗುರುಸ್ತುತಿ

ಹರ ತನ್ನೊಳಿರ್ದು ಗುರು ತೋರದೇ ತಿಳಿವುದೇ ?
ಮರದೊಳಗೆ ಅಗ್ನಿ ಇರುತಿರ್ದು ತನ್ನತಾ
ನರಿಯದೇಕೆಂದ ? ಸರ್ವಜ್ಞ

ಜ್ಯೋತಿಯಿಂದಲಿ ನೇತ್ರ ರಾತ್ರಿಯೊಳು ಕಾಂಬಂತೆ
ಸೂತ್ರದಿಂ ಧಾತನರಿವಂತೆ ಶಿವನ ಗುರು-
ನಾಥನಿಂದರಿಗು ಸರ್ವಜ್ಞ

ಊರಿಂಗೆ ದಾರಿಯನು ಆರು ತೋರಿದಡೇನು ?
ಸಾರಾಯದಾ ನಿಜವ ತೋರುವಾ ಗುರುವು ತಾ-
ನಾರಾದಡೇನು ? ಸರ್ವಜ್ಞ

ಜೀಯ ! ಸದ್ಗುರುನಾಥ ! ಕಾಯಪುಸಿಯನೆ ತೋರಿ
ಮಾಯಪಾಶವನು ಹರಿಸುತ್ತ ಶಿಷ್ಯಂಗೆ
ತಾಯಿಯಂತಾದ ಸರ್ವಜ್ಞ

ಸುರತರುವು ಮರನಲ್ಲ ಸುರಭಿಯೊಂದಾವಲ್ಲ
ಪರುಷ ಪಾಷಾಣದೊಳಗಲ್ಲ ಗುರುರಾಯ
ನರರೊಳಗೆ ಅಲ್ಲ ಸರ್ವಜ್ಞ

ಕೊರಡು ಸುರುತರುವಾಯ್ತು ಬರಡು ನೆರೆ ಹಯನಾಯ್ತು
ಮರುಳು ತಂಡಗಳು ಪ್ರಣವೋಚ್ಚರಿಸುವವು
ಗುರುವಾಜ್ಞೆಗಂಜಿ ! ಸರ್ವಜ್ಞ

ಎತ್ತಾಗಿ ತೊತ್ತಾಗಿ ಹಿತ್ತಲದ ಗಿಡವಾಗಿ
ಮತ್ತೆ ಪಾದದಾ ಕೆರವಾಗಿ ಗುರುವಿನಾ
ಹತ್ತಲಿರು ಎಂದ ಸರ್ವಜ್ಞ

ಬಳ್ಳಿಗುರುಡರು ಕೂಡಿ ಹಳ್ಳವನು ಬಿದ್ದಂತೆ
ಒಳ್ಳೆಯಾ ಗುರುವಿನುಪದೇಶವಿಲ್ಲದಿರೆ
ಎಲ್ಲಿಯದು ಮುಕ್ತಿ ? ಸರ್ವಜ್ಞ

ಬೆಳ್ಳುಳ್ಳಿ ಪೊಡೆದಿಹರೆ ಹೋಳಪ್ಪ ತೆರನಂತೆ
ಒಳ್ಳೆಯಾಗುರುವಿನುಪದೇಶದಿಂ ಪಾಪ
ಹೊಳ್ಳಿ ಬೀಳುವದು ! ಸರ್ವಜ್ಞ

ಕಟ್ಟಿಗೆಗಳೆರಡನ್ನು ಕಟ್ಟಿಟ್ಟರೇನಹುದು ?
ಗಟ್ಟ್ಯಾಗಿ ಎರಡ ಮಥಿಸಲ್ಕೆ ಬೇಗೆಯದು
ಬಿಟ್ಟಕೊಂಡಂತೆ ! ಸರ್ವಜ್ಞ

ಹೊಲಬನರಿಯದ ಗುರುವು ತಿಳಿಯಲರಿಯದ ಶಿಷ್ಯ
ನೆಲೆಯನಾರಯ್ಯುದುಪದೇಶನಂಧಕನು
ಕೊಳನ ಹೊಕ್ಕಂತೆ ಸರ್ವಜ್ಞ

ಸೆರವೆ ಸುರಲತೆಯುಕ್ಕು ಗೊರವ ಸುರಪತಿಯುಕ್ಕು
ಹರಕೊಟ್ಟ ಗರಿಯು ಗಿರಿಯುಕ್ಕು ಗುರುವಿನಾ
ಕರುಣವಿರುವನಕ ಸರ್ವಜ್ಞ

ಗುರುವೆ ನಿಮ್ಮನು ನೆನೆದು ಉರಿವ ಕಿಚ್ಚನು ಹೊಗಲು
ಉರಿತಗ್ಗಿ ಉದಕ ಕಂಡಂತೆ ನಿಮ್ಮಯಾ
ಕರುಣವುಳ್ಳರಿಗೆ ಸರ್ವಜ್ಞ

ಬೆಳಗ ನುಂಗಿದ ಗುರುವಿನೊಳಗ ನುಂಗಿದ ಶಿಷ್ಯ
ಬೆಳಗಿನಿಂದೊಳಗನರಿದೊಡೆ ಕರ್ಮದಾ
ಕಳೆಯು ಕಳೆಯುವನು ಸರ್ವಜ್ಞ

ಉರಿಯುಂಡ ಕರ್ಪುರವು ಸರಕುಮಾರುವದುಂಟೆ ?
ಗುರುಕರುಣದಿಂದ ನಿಜದೊಳಗೆ ಬೆರೆದಾತ
ನರಕ ಕೂಡುವನೆ ? ಸರ್ವಜ್ಞ

ದೈವಸ್ತುತಿ

ಒಬ್ಬನಲ್ಲದೆ ಜಗಕೆ ಇಬ್ಬರುಂಟೇ ಮತ್ತೆ ?
ಒಬ್ಬ ಸರ್ವಜ್ಞಕರ್ತನೀ ಜಗಕೆಲ್ಲ
ಒಬ್ಬನೇ ದೈವ! ಸರ್ವಜ್ಞ

ಚಿತ್ರವನು ನವಿಲೊಳು ವಿಚಿತ್ರವನು ಗಗನದೊಳು
ಪತ್ರಪುಷ್ಪಗಳ ವಿವಿಧ ವರ್ಣಗಳಿಂದ
ಚಿತ್ರಿಸಿದರಾರು ? ಸರ್ವಜ್ಞ

ಹಿಡಿಹಣ್ಣು ಕುಂಬಳಕೆ ಮಿಡಿಹಣ್ಣು ಆಲಕ್ಕೆ
ಅಡಿನೆಳಲೊಳಿಪ್ಪ ಪಾಂಥ ತಾ ಕೆಡದಂತೆ
ಮೃಡನು ಮಾಡಿಹನು! ಸರ್ವಜ್ಞ

ಇಂಗಿನೊಳು ನಾತವನು ತೆಂಗಿನೊಳಗೆಳೆನೀರ
ಭೃಂಗ ಕೋಕಿಲೆಯ ಕಂಠದೊಳು ಗಾಯನವ
ತುಂಬಿದವರಾರು ? ಸರ್ವಜ್ಞ

ಕಳ್ಳಿಯೊಳು ಹಾಲು ಮುಳುಗಳ್ಳಿಯೊಳು ಹೆಜ್ಜೇನು
ಎಳ್ಳಿನೊಳಗೆಣ್ಣೆ ಹನಿದಿರಲು, ಶಿವಲೀಲೆ
ಸುಳ್ಳೆನ್ನಬಹುದೆ ? ಸರ್ವಜ್ಞ

ನರನ ಬೇಡುವ ದೈವ ವರವೀಯಬಲ್ಲುದೇ ?
ತಿರಿವವರನಡರಿ ತಿರಿವರೇಸಿದನರಿದು
ಹರನ ಬೇಡುವದು! ಸರ್ವಜ್ಞ

ಉಣಬಂದ ಜಂಗಮಕೆ ಉಣಬಡಿಸಲೊಲ್ಲದಲೆ
ಉಣದಿಪ್ಪ ಲಿಂಗಕುಣಬಡಿಸ ಕೈಮುಗಿವ
ಬಣಗುಗಳ ನೋಡ! ಸರ್ವಜ್ಞ

ಕಲ್ಲುಕಲ್ಲನೆ ಒಟ್ಟಿ ಕಲ್ಲಿನಲಿ ಮನೆಕಟ್ಟಿ
ಕಲ್ಲಮೇಲ್ಕಲ್ಲ ಕೊಳುವ ಮಾನವರೆಲ್ಲ
ಕಲ್ಲಿನಂತಹರು! ಸರ್ವಜ್ಞ

ಕಲ್ಲುಗುಂಡಿನ ಮೇಲೆ ಮಲ್ಲಿಗೆಯ ಅರಳಿಕ್ಕಿ
ನಿಲ್ಲದಲೆ ಹಣೆಯ ಬಡಿವರ್ಗೆ ಬುಗುಟಿಲ್ಲ-
ದಿಲ್ಲ ಕಾಣಯ್ಯ! ಸರ್ವಜ್ಞ

ಭಕ್ತ—ಜ್ಞಾನಿ

ಭಕ್ತಿಯಿಂದಲೆ ಯುಕ್ತಿ ಭಕ್ತಿಯಿಂದಲೆ ಶಕ್ತಿ
ಭಕ್ತಿ ವಿರಕ್ತಿಯುಳಿವರೀ ಜಗದಲ್ಲಿ
ಮುಕ್ತಿಯಿಲ್ಲೆಂದ ಸರ್ವಜ್ಞ

ಗುರಿಯು ತಾಗದ ಕೋಲ ನೂರಾರನೆಸೆದೇನು ?
ಬರಡಿಂಗೆ ಭಕ್ತಿ ಭಜಿಸಿದೊಡೆ ಅದು ತಾನು
ಇರಲರಿಯುದಯ್ಯ ! ಸರ್ವಜ್ಞ

ಚಿತ್ತವಿಲ್ಲದೆ ಗುಡಿಯ ಸುತ್ತಿದಡೆ ಫಲವೇನು ?
ಎತ್ತು ಗಾಣವನು ಹೊತ್ತು ತಾ ನಿತ್ಯದಲಿ
ಸುತ್ತಿ ಬಂದಂತೆ ! ಸರ್ವಜ್ಞ

ಮನದಲ್ಲಿ ನೆನೆವಂಗೆ ಮನೆಯೇನು ಮಠವೇನು ?
ಮನದಲ್ಲಿ ನೆನೆಯದಿರುವವನು ದೇಗುಲದ
ಕೊನೆಯಲ್ಲಿದ್ದೇನು ? ಸರ್ವಜ್ಞ

ಮನದಲ್ಲಿ ನೆನವಿರಲು ತನುವೊಂದು ಮಠವಕ್ಕು
ಮನಹೋಗಿ ಹಲವ ನೆನೆದಿಹರೆ ಅದು ಹಾಳು
ಮನೆಯೆಂದು ತಿಳಿಯೊ ! ಸರ್ವಜ್ಞ

ದೇಹ ದೇವಾಲಯವು ಜೀವವೇ ಶಿವಲಿಂಗ
ಬಾಹ್ಯಂಗಳಳಿದು ಭಜಿಪಂಗೆ ಮುಕ್ತಿ ಸಂ-
ದೇಹವಿಲ್ಲೆಂದ ಸರ್ವಜ್ಞ

ಸತಿಯರಿರ್ದಡದೇನು ಸುತರಾಗಿ ಫಲವೇನು ?
ಶತಕೋಟಿಧನವ ಘಳಿಸೇನು ? ಭಕ್ತಿಯಾ
ಸ್ಥಿತಿಯಿಲ್ಲದನಕ ! ಸರ್ವಜ್ಞ

ಎಲ್ಲವೂ ಶಿವನೆಂದರೆಲ್ಲಿಹುದು ಭಯವಯ್ಯ ?
ಎಲ್ಲರೂ ಶಿವನ ನೆನೆಯುವರೆ ಕೈಲಾಸ
ವಿಲ್ಲಿಯೇ ಇಹುದು ! ಸರ್ವಜ್ಞ

ಭಕ್ತಿಗೆರಡಕ್ಕರವು ಮುಕ್ತಿಗೆರಡಕ್ಕರವು
ಭಕ್ತಿಯಿಂ ಮುಕ್ತಿ ಪಡೆಯುವರೆ ಬಿಡದೆ ಆ-
ರಕ್ಕರವೆ ಹೇಳು ! ಸರ್ವಜ್ಞ

ತನ್ನ ತಾನರಿದಾತ ತನ್ನ ಜ್ಞಾನದೊಳಡಗಿ
ತನ್ನ ಬಂಧುಗಳ ನೆರೆದೊರೆದು ಪರಬೊಮ್ಮ!
ದುನ್ನತಿಯೊಳಿಹನು! ಸರ್ವಜ್ಞ

ತನ್ನ ತಾನರಿದಂಗೆ ಭಿನ್ನ ಭಾವನೆಯಿಲ್ಲ
ತನ್ನವರು ಇಲ್ಲ ಪರರಿಲ್ಲ, ತ್ರೈಭುವನ
ತನ್ನೊಳಗೆ ಇಹುದು! ಸರ್ವಜ್ಞ

ತನ್ನ ತಾನರಿದಿಹನು ಸನ್ನುತನು ಆಗಿಹನು
ತನ್ನ ತಾನರಿಯದಿರುವವನು ಹಾಳೂರ
ಕುನ್ನಿಯಂತಕ್ಕು ಸರ್ವಜ್ಞ

ಅರಿವಿನಾ ಇರವ ತಾನರಿಯಲದು ಅರಿದಿಹುದು
ಅರಿವಿನಾ ಅರಿವನರಿಯುವಡೆ ತಾ ತನ್ನ-
ನರಿಯದದನರಿಯು! ಸರ್ವಜ್ಞ

ನಿನ್ನ ನೀನರಿಯುವರೆ ನಿನ್ನಿಂದಲರಿಯುವದು!
ನಿನ್ನ ನೀನರಿಯದಿರುವನಕ ನಿನ್ನನೇ
ಅನ್ಯನೆಂದರಿಗು! ಸರ್ವಜ್ಞ

ದಾನಿ

ಈವಂಗೆ ದೇವಂಗೆ ಆವುದಂತರವಯ್ಯ?
ದೇವನು ಜಗಕೆ ಕೊಡುತಿಹನು, ಕೈಯಾರೆ
ಈವನೇ ದೇವ ಸರ್ವಜ್ಞ

ಅನ್ನವನು ಇಕ್ಕುವದು! ಸನ್ನಿಯನು ನುಡಿಯುವದು!
ತನ್ನಂತೆ ಪರರ ಬಗೆದಡೇ ಕೈಲಾಸ
ಬಿನ್ನಾಣವಕ್ಕು! ಸರ್ವಜ್ಞ

ಕೊಟ್ಟದ್ದು ತನಗೆ ಬಚ್ಚಿಟ್ಟದ್ದು ಪರರಿಂಗೆ
ಕೊಟ್ಟದ್ದು ಕೆಟ್ಟಿತೆನಬೇಡ! ಮುಂದಕ್ಕೆ
ಕಟ್ಟಿಹುದು ಬುತ್ತಿ! ಸರ್ವಜ್ಞ

ಕೊಟ್ಟು ಕುದಿಯಲಿಬೇಡ ಕೊಟ್ಟಾಡಿಕೊಳಬೇಡ
ಕೊಟ್ಟು ನಾ ಕೆಟ್ಟೆನೆನಬೇಡ! ಶಿವನಲ್ಲಿ
ಕಟ್ಟಿಹುದು ಬುತ್ತಿ! ಸರ್ವಜ್ಞ

ಆಗ ಬಾ! ಈಗ ಬಾ! ಹೋಗಿ ಬಾ! ಎನ್ನದಲೆ
ಆಗಲೇ ಕರೆದು ಕೊಡುವವನ ಧರ್ಮ ಹೊ-
ನ್ನಾಗದೇ ಬಿಡದು! ಸರ್ವಜ್ಞ

ಮೇಲು ಕೀಳೆನಬೇಡ ಶೀಲವನು ಬಿಡಬೇಡ
ಕಾಲವಿದಕಾಲವೆನಬೇಡ ಧರ್ಮದಾ
ಕೀಲು ಬೇರೆಂದ! ಸರ್ವಜ್ಞ

ಕೊಡುವವನ ಧರ್ಮಕ್ಕೆ ಕಡೆಯೇನು ಮೊದಲೇನು?
ಎಡತಾಕಿಸುತ್ತ ಕೊಡುವವನ ಧರ್ಮವದು
ಹುಡಿಯ ಮಣ್ಣೆಂದ ಸರ್ವಜ್ಞ

ಆಡದಲೆ ಕೊಡುವವನು ರೂಢಿಯೊಳಗುತ್ತಮನು
ಆಡಿ ಕೊಡುವವನು ಮಧ್ಯಮನು ಅಧಮ ತಾ-
ನಾಡಿ ಕೊಡದವನು ಸರ್ವಜ್ಞ

ಸೊಡರೆಣ್ಣೆ ತೀರಿದರೆ ಕೊಡನೆತ್ತಿ ಹೊಯ್ಯುವರೆ?
ಕೊಡಬೇಡ ಕೊಡದೆ ಇರಬೇಡ! ಧರ್ಮವನು
ಬಿಡಬೇಡವೆಂದ ಸರ್ವಜ್ಞ

ಉಣ್ಣದೊಡವೆಯ ಗಳಿಸಿ ಮಣ್ಣಿನೊಳು ತಾನಿರಿಸಿ
ಸಣ್ಣಿಸಿಯೆ ನೆಲನ ಸಾರಿದನ ಬಾಯೊಳಗೆ
ಮಣ್ಣು ಕಾಣಯ್ಯ! ಸರ್ವಜ್ಞ

ಇದ್ದುದನು ಬಿಟ್ಟು ಹೊರಗಿದ್ದುದನು ಬಯಸುತಲೆ
ಇದ್ದು ಉಣದಿಪ್ಪ ಬಾಯೊಳಗೆ ಕತ್ತೆಯಾ
ಲದ್ದಿಯೇ ಬೀಳ್ಗು! ಸರ್ವಜ್ಞ

ಉಣ್ಣೆ ಕೆಚ್ಚಲೊಳಿರ್ದು ಉಣ್ಣದದು ನೊರೆವಾಲ
ಪುಣ್ಯವನು ಮಾಡಿ ಉಣಲೊಲ್ಲದವನಿರವು
ಉಣ್ಣೆಯಿಂ ಕಷ್ಟ ಸರ್ವಜ್ಞ

ಕುಲ—ಜಾತಿ ಖಂಡನ

ಕುಲವಿಲ್ಲ ಯೋಗಿಗಂ ಛಲವಿಲ್ಲ ಜ್ಞಾನಿಗಂ
ತೊಲೆಕಂಭವಿಲ್ಲ ಗಗನಕ್ಕೆ, ಸ್ವರ್ಗದಲಿ
ಹೊಲೆಗೇರಿಯಿಲ್ಲ! ಸರ್ವಜ್ಞ

ಎಲುವಿಲ್ಲ ನಾಲಿಗೆಗೆ ಬಲವಿಲ್ಲ ಬಡವಂಗೆ
ತೊಲೆ ಕಂಭವಿಲ್ಲ ಗಗನಕ್ಕೆ, ದೇವರಲಿ
ಕುಲಭೇದವಿಲ್ಲ! ಸರ್ವಜ್ಞ

ಮುಟ್ಟಾದ ಹೊಲೆಯೊಳಗೆ ಹುಟ್ಟಿಹುದು ಜಗವೆಲ್ಲ!
ಮುಟ್ಟಬೇಡೆಂದು ತೊಲಗುವಾ ಹಾರುವನು
ಹುಟ್ಟಿರುವದೆಲ್ಲಿ? ಸರ್ವಜ್ಞ

ಉತ್ತಮರು ಪಾಲ್ಗಡಲೊಳೆತ್ತಿದರೆ ಜನ್ಮವನು?
ಉತ್ತಮರು ಅಧಮರೆನಬೇಡ, ಹೊಲೆಯಿಲ್ಲ-
ದುತ್ತಮರು ಎಲ್ಲಿ? ಸರ್ವಜ್ಞ

ನಡೆವುದೊಂದೇ ಭೂಮಿ ಕುಡಿವುದೊಂದೇ ನೀರು
ಸುಡುವಗ್ನಿಯೊಂದೆ ಇರುತಿರಲು ಕುಲಗೋತ್ರ
ನಡುವೆ ಎತ್ತಣದು? ಸರ್ವಜ್ಞ

ಕುಡಿವ ನೀರನು ತಂದು ಅಡಿಗೆ ಮಾಡಿದ ಮೇಲೆ
ಒಡನುಣ್ಣಲಾಗದಿಂತೆಂಬ ಮನುಜರಾ
ಒಡನಾಟವೇಕೆ? ಸರ್ವಜ್ಞ

ಜಾತಿಹೀನರ ಮನೆಯ ಜ್ಯೋತಿತಾ ಹೀನವೇ?
ಜಾತಿ ವಿಜಾತಿ ಎನಬೇಡ, ದೇವನೊಲಿ-
ದಾತನೇ ಜಾತ! ಸರ್ವಜ್ಞ

ಯಾತರದು ಹೂವೇನು ನಾತರದು ಸಾಲದೇ?
ಜಾತಿವಿಜಾತಿ ಎನಬೇಡ, ದೇವನೊಲಿ-
ದಾತನೇ ಜಾತ! ಸರ್ವಜ್ಞ

ಉತ್ತಮರು ಎಂಬುವರು ಸತ್ಯದಲಿ ನಡೆಯುವರು
ಉತ್ತಮರು ಅಧಮರೆನಬೇಡ, ಅವರೊಂದು
ಮುತ್ತಿನಂತಿಹರು! ಸರ್ವಜ್ಞ

ಮಾತನರಿದಾ ಸುತನು ರೀತಿಯರಿದಾ ಸತಿಯು
ನೀತಿಯನು ಅರಿದ ವಿಪ್ರ ತಾ ಜಗದೊಳಗೆ
ಜ್ಯೋತಿಯಿದ್ದಂತೆ ಸರ್ವಜ್ಞ

ಲೇಸು ಪದ್ಧತಿ—ನಿಂದಾ ಪದ್ಧತಿ

ಹಂಗಿನಾ ಹಾಲಿನಿಂದಂಬಲಿಯು ತಿಳಿಲೇಸು
ಭಂಗಬಟ್ಟುಂಬ ಬಿಸಿಯಿಂದ ತಿರಿವವರ
ಸಂಗವೇ ಲೇಸು ! ಸರ್ವಜ್ಞ

ಹರಕು ಹೋಳಿಗೆ ಲೇಸು ಮುರುಕ ಹಪ್ಪಳ ಲೇಸು
ಕುರುಕುರೂ ಕಡಲೆ ಬಲುಲೇಸು, ಪಾಯಸದ
ಸುರುಕು ಲೇಸೆಂದ ! ಸರ್ವಜ್ಞ

ಕಣಿಕ ನೆನೆದರೆ ಹೊಲ್ಲ; ಕುಣಿಕೆ ಹರಿದರೆ ಹೊಲ್ಲ
ಕಣುಕಟ್ಟು ಹೊಲ್ಲ ಅರಿದರಲಿ, ಚುಕ್ಕೆಗಳ
ಎಣಿಸುವದೆ ಹೊಲ್ಲ ಸರ್ವಜ್ಞ

ಉಪ್ಪಿಲ್ಲದುಣ ಹೊಲ್ಲ ಮುಪ್ಪು, ಬಡತನ ಹೊಲ್ಲ
ತಪ್ಪನೇ ನುಡಿವ ಸತಿಹೊಲ್ಲ, ತಾನೊಪ್ಪಿ
ತಪ್ಪುವುದೆ ಹೊಲ್ಲ ಸರ್ವಜ್ಞ

ಹಂದೆ ಭಟರೊಳು ಹೊಲ್ಲ ನಿಂದೆಯಾ ನುಡಿಹೊಲ್ಲ
ಕುಂದುಗುಲದವಳ ತರಹೊಲ್ಲ, ಉರಿಯೊಳಗೆ
ನಿಂದಿರಲು ಹೊಲ್ಲ ಸರ್ವಜ್ಞ

ನೀತಿ ಪದ್ಧತಿ

ಹರೆಯಲ್ಲಿನಾ ಪಾಪ ಕೆರೆಯಲ್ಲಿ ಪೋಪುದೇ ?
ಒರೆಗಲ್ಲಿನಂತೆ, ವಿಧಿಯಿರಲು ನೀತಿಯಾ
ಇರವು ಬೇರೆಂದ ! ಸರ್ವಜ್ಞ

ಅರಿಯದೆಸಗಿದ ಪಾಪ ಅರಿತರದು ತನಗೊಳಿತು
ಅರಿತರಿತು ಮಾಡಿ ಮರೆತವನು ತನ್ನ ತಾ-
ನಿರಿದು ಕೊಂಡಂತೆ ! ಸರ್ವಜ್ಞ

ಸತ್ಯರಿಗೆ ಧರೆಯೆಲ್ಲ ಮಸ್ತಕವನೆರಗುವದು
ಹೆತ್ತ ತಾಯ್ಮಗನ ಕರೆವಂತೆ ಶಿವನವರ-
ನೆತ್ತಿಕೊಂಬುವನು ! ಸರ್ವಜ್ಞ

ಹುಸಿವಾತ ದೇಗುಲದ ದೆಸೆಯತ್ತ ಮುಂತಾಗಿ
ನೊಸಲೆತ್ತಿ ಕರವ ಮುಗಿದಿಹರೆ ಅಷ್ಟುದ್ದ
ಹುಸಿವನೆಂದರಿಗು ! ಸರ್ವಜ್ಞ

ಕಷ್ಟಗಳು ಓಡಿಬರಲಿಷ್ಟಕ್ಕೆ ಭಯವೇಕೆ ?
ಶಿಷ್ಟಂಗೆ ತೊದಲುನುಡಿಯೇಕೆ ? ಕಳ್ಳಂಗೆ
ದಟ್ಟಡಿಯದೇಕೆ ? ಸರ್ವಜ್ಞ

ಒಳ್ಳೆಯಸು ಇರದೂರು ಕಳ್ಳನೊಡನಾಟವೂ
ಸುಳ್ಳನಾಮಾತು ಇವು ಮೂರು, ಕೆಸರೊಳಗೆ
ಮುಳ್ಳು ತುಳಿದಂತೆ ! ಸರ್ವಜ್ಞ

ಅಂದು ಕಾಮನ ಹರನು ಕೊಂದನೆಂಬುದು ಪುಸಿಯು
ಇಂದು ವದನೆಯರ ಕಡೆಗಣ್ಣ ನೋಟದಲಿ
ನಿಂದಿಹನು ಸ್ಮರನು ! ಸರ್ವಜ್ಞ

ಮುಟ್ಟಿದಂತಿರಬೇಕು ಮುಟ್ಟದಲೆ ಇರಬೇಕು
ಮುಟ್ಟಿಯೂ ಮುಟ್ಟದಿರಬೇಕು, ಪರಸ್ತ್ರೀಯ
ಮುಟ್ಟಿದವ ಕೆಟ್ಟ ! ಸರ್ವಜ್ಞ

ಉದ್ದುರುಟು ಮಾತಾಡಿ ಇದ್ದುದನು ಹೋಗಾಡಿ
ಉದ್ದನಾ ಮರದ ತುದಿಗೇರಿ ತಲೆಯೂರಿ
ಬಿದ್ದು ಸತ್ತಂತೆ ! ಸರ್ವಜ್ಞ

ಧನಕನಕವುಳ್ಳನಕ ದಿನಕರನವೋಲಕ್ಕು
ಧನಕನಕ ಹೋದ ಮರುದಿನವೆ ಹಾಳೂರ
ಶುನಕನಂತಕ್ಕು ! ಸರ್ವಜ್ಞ

ಸಿರಿಯಣ್ಣ ಸುಳ್ಳನಕ ಹಿರಿಯಣ್ಣನೆನಸಿಪ್ಪ
ಸಿರಿಯಣ್ಣ ಹೋದ ಮರುದಿನವೆ ಹಿರಿಯಣ್ಣ
ನರಿಯಣ್ಣನೆಂದ! ಸರ್ವಜ್ಞ

ಮುನಿವಂಗೆ ಮುನಿಯದಿರು ಕಿನಿವಂಗೆ ಕಿನಿಯದಿರು
ಮನಸಿಜಾರಿಯನು ಮರೆಯದಿರು, ಶಿವಕೃಪೆಯು
ಘನತೆ ಘನವಕ್ಕು! ಸರ್ವಜ್ಞ

ಕೇಡನೊಬ್ಬಗೆ ಬಗೆದು ಕೇಡು ತಪ್ಪದು ತನಗೆ
ನೋಡಿ ಕೆಂಡವನು ಹಿಡಿದೊಗೆದು ನೋವ ತಾ
ಬೇಡಿ ಬಗೆದಂತೆ! ಸರ್ವಜ್ಞ

ಕಂಡುದನು ಆಡೆ ಭೂಮಂಡಲವು ಮುನಿಯುವದು
ಕೊಂಡಾಡುತಿಜ್ಜೆ ನುಡಿದಿಹರೆ ಜಗವೆಲ್ಲ
ಮುಂಡಾಡುತಿಹುದು! ಸರ್ವಜ್ಞ

ಉಳ್ಳವನು ನುಡಿದಿಹರೆ ಒಳ್ಳಿತೆಂದೆನ್ನುವರು
ಇಲ್ಲದಾ ಬಡವ ನುಡಿದಿಹರೆ ಬಾಯೊಳಗೆ
ಹಳ್ಳುಕಡಿದಂತೆ ಸರ್ವಜ್ಞ

ಇಲ್ಲದವನಹುದಾಡೆ ಬಲ್ಲಂತೆ ಬೊಗಳುವರು
ಬಲ್ಲಿದನು ಅಲ್ಲದಾಡಿದರೆ ಎಲ್ಲವರು
ಬೆಲ್ಲವೆಂಬುವರು! ಸರ್ವಜ್ಞ

ಬಡವನಿದ್ದುದನಾಡೆ ಕಡೆಗೆ ಪೋಗೆಂಬುವರು
ಒಡವೆಯುಳ್ಳವರು ಸುಡುಗಾಡ ನುಡಿದರೂ
ಪೊಡವಿಯೊಳಗಧಿಕ! ಸರ್ವಜ್ಞ

ಬಲ್ಲಿದನು ನುಡಿದಿಹರೆ ಬೆಲ್ಲವನು ಮೆದ್ದಂತೆ
ಇಲ್ಲದಾ ಬಡವ ನುಡಿದಿಹರೇ ಬಾಯಿಂದ
ಜೊಲ್ಲು ಬಿದ್ದಂತೆ! ಸರ್ವಜ್ಞ

ಮುಪ್ಪಿನ ಷಡಕ್ಷರಿ—ಸುಬೋಧಸಾರ

ನೀನೆ ಅಕಳಂಕ ಗುರು

ಸಕಲಕೆಲ್ಲಕೆ ನೀನೆ
ಅಕಳಂಕ ಗುರುವೆಂದು
ನಿಖಿಳ ಶಾಸ್ತ್ರವು ಪೇಳುತಿರಲರಿದೆನು ಪಲ್ಲವಿ

ಎರಗಂಬಳಿಯ ಸಿದ್ಧ
ವರಲಿಂಗ ನಾಮದಿಂ
ಹರನೆ! ನೀನೆನಗೆ ದೀಕ್ಷೆಯ ಮಾಡಿದೆ
ವರ ಷಡಕ್ಷರಿಯ ದೇ
ವರ ನಾಮದಿಂದೆನಗೆ
ಅರುಹಿದಿರಿ ಶಿವಶಾಸ್ತ್ರದನುಭವವನು ೧

ಅವರವರ ದರುಶನಕೆ
ಅವರವರ ವೇಷದಲಿ
ಅವರವರಿಗೆಲ್ಲ ಗುರು ನೀನೊಬ್ಬನೆ
ಅವರವರ ಭಾವಕ್ಕೆ
ಅವರವರ ಪೂಜೆಗಂ
ಅವರವರಿಗೆಲ್ಲ ದೇವ ನೀನೊಬ್ಬನೆ ೨

ಹೋರಾಟವಿಕ್ಕಿಸಲು
ಬೇರಾದೆಯಲ್ಲದೆ
ಬೇರುಂಟೆ ಜಗದೊಳಗೆ ಎಲೆ ದೇವನೆ
ಆರು ಅರಿಯರು ನೀನು
ಬೇರಾದ ಪರಿಗಳನು
ಮಾರಾರಿ ಶಿವ ಷಡಕ್ಷರಿ ಲಿಂಗವೆ ೩

ಎನ್ನ ಕರೆಯ ಬನ್ನಿ

ಹೆಮ್ಮಗಳು ನಾ ನಿಮ್ಮ
ನೆಮ್ಮಿಕೊಂಡಿರುವೆನೈ
ಗಮ್ಮನೇ ಎನ್ನುವನು ಕರೆಯ ಬನ್ನಿ ಪಲ್ಲವಿ

ಸುವ್ವಿ ಚೆನ್ನಣ್ಣನಿಗೆ
ಸುವ್ವಿ ಮಡಿವಾಳನಿಗೆ
ಸುವ್ವಿ ನಮ್ಮಪ್ಪ ಬಸವಯ್ಯನಡಿಗೆ
ಸುವ್ವಿ ಅಜಗಣ್ಣನಿಗೆ
ಸುವ್ವಿ ಸತ್ಯಣ್ಣನಿಗೆ
ಸುವ್ವಿ ನಮ್ಮಯ್ಯ ಪ್ರಭುರಾಯನಡಿಗೆ ೧

ಸುವ್ವಿ ಹರಳಯ್ಯನಿಗೆ
ಸುವ್ವಿ ಧೂಳಯ್ಯನಿಗೆ
ಸುವ್ವಿ ನಮ್ಮಯ್ಯ ಶ್ವಪಚಯ್ಯನಡಿಗೆ
ಸುವ್ವಿ ಭೀಮಯ್ಯನಿಗೆ
ಸುವ್ವಿ ಕಕ್ಕಯ್ಯನಿಗೆ
ಸುವ್ವಿ ನಮ್ಮಯ್ಯ ಚೆನ್ನಯ್ಯನಡಿಗೆ ೨

ನಮ್ಮವರ ಪಾಡುವೆನು
ನಮ್ಮವರ ಪೊಗಳುವೆನು
ನಮ್ಮವರನಾವಗಂ ಹರಸುತಿಹೆನು
ನಮ್ಮವರು ಬರುವುದನು
ಉಮ್ಮಳಿಸಿ ನೋಡುವೆನು
ಹಮ್ಮಿಸುವೆ ಮನದೊಳಗೆ ಬಾರದಿರಲು ೩

ಕುಟ್ಟುತ್ತ ಬೀಸುತ್ತ
ನೆಟ್ಟನೇ ನಮ್ಮ ಒಡ
ಹುಟ್ಟಿದ ಪುರಾತನರ ಹಾಡುತಿಹೆನು
ಕಷ್ಟಘನ ಮರ್ತ್ಯದ
ಬಟ್ಟೆಯನು ಒಲ್ಲೆ, ಕೃಪೆ
ಹುಟ್ಟದೇ ನಮ್ಮವರು ಕರೆಯಿರಯ್ಯ ೪

ನೀರ ಹೊಳೆಯಲಿ ನಿಂದು
ದಾರಿಯನು ನೋಡುವೆನು
ಬಾರದಿರೆ ಮನದೊಳಗೆ ಕರಗಿ ಕೊರಗಿ
ಆರೈದು ಮತ್ತೊಮ್ಮೆ
ದೂರ ದೃಷ್ಟಿಯನಿತ್ತು
ಸಾರಿ ನೋಡುವೆ ನಿಲುಕಿ ಅಳಲಿ ಬಳಲಿ ೫

ಬಂದವರ ಬರುವವರ
ನಿಂದವರ ನೆರೆದವರ
ಕುಂದದಲೆ ಕೇಳುವೆನು ನಮ್ಮವರನು
ಹಿಂದಾದ ದುಃಖದಲಿ
ನೊಂದೆನ್ನೈ ನಮ್ಮವರು
ಎಂದಿಗೇ ಎನ್ನವನು ಕರೆಯಬಹರೊ ೬

"ಪದುಳವೆ ನಮ್ಮವರ
ಪದಪದ್ಮ ?" ಎನ್ನುವೆನು
ಪದಪಿಂದ ಕರೆದೊಯ್ಯಲೊಲ್ಲರೇಕೆ ?
ಉದಯಾಸ್ತಮಾನದಲಿ
ಕುದಿದು ಕೋಟಲೆಗೊಂಬೆ
ಹೃದಯ ತಾ ಕರಗದೇ ನಮ್ಮವರಿಗೆ ೭

ಅಳಲುವೆನು ಮನದೊಳಗೆ
ಬಳಲುವೆನು ಬಾರದಿರೆ
ಕಳೆಯೇರುವೆನು ಒಮ್ಮೆ ನೆನೆದು ನೆನೆದು
ಮಲಹರಣ ಶರಣರಾ
ಬಲವ ನೋಡುವೆನೊಮ್ಮೆ
ಸೆಲೆಯೆನ್ನ ಕನಸಿಂಗೆ ಬಾರರೆನುತ ೮

ಹಿಂದುಳಿಯಿತಮವಾಸ್ಯೆ
ಮುಂದೆ ಹುಣ್ಣಿಮೆ ಬಂತು
ಎಂದಿಗೇ ಎನ್ನನು ಕರೆಯಬಹರೋ ?
ನೊಂದು ಸುಯ್ಗರೆವೆನು
ಬೆಂದು ಬೆಂಡಾಗುವೆನು
ಚಂದವೇ ತಮಗೆನ್ನ ನೋಡದಿಹುದು ? ೯

ತರಗಲೆಯು ಗಿರುಕೆನಲು
ಹೊರಗೆ ನಾನಾಲಿಸುವೆ
ಬರವಿಲ್ಲದಿರೆ ಮನದಿ ಸುಯ್ಗುರಿವೆನು
ಪರರ ಶಿಶುವೆಂದೆನುತ
ಶರಣರು ಎನ್ನುವನು
ಮರೆದರೋ ಎಂದೆನುತ ಹೆದರುತಿಹೆನು ೧೦

ಶರಣರೊಳು ಸುಖ ದುಃಖ
ದಿರವ ಹೇಳುವೆ ನಾನು
ಪರರೆನ್ನ ಚಿಂತೆಯನ್ನರಿಯರಾಗಿ
ಅರಸು ಷಡಕ್ಷರಿಯ
ವರನೆನ್ನ ಕಾಡದಿರೆ
ಶರಣರಿಗೆ ಪೇಳಿ ನಾ ಕೇಳ್ವೆಸಯ್ಯ ೧೧

ಹೊನ್ನಮ್ಮ

ಹದಿಬದೆಯ ಧರ್ಮ

ಪತಿಯೆ ಪರಮಗುರು ಪತಿಯೇ ದೇವತೆ ಪತಿಯೇ ಸದ್ಗತಿಯೆಂದು
ಪತಿಯ ಪಾದಾಂಬುಜದೊಳು ಭಕ್ತಿಗೆಯ್ವುದು ಸತಿಯರ ಧರ್ಮದ ಸಾರ

ಪತಿಯೊಲವರಿತು ಪತಿಯ ಸೇವೆಯೊಳಿದ್ದು ಪತಿಯಊಳಿಗಗಳನೆಸಗಿ
ಪತಿಯಾಣತಿಯ ಬಂದಿಯೊಳಡಗಿರ್ಪುದು ಸತಿಯ ಧರ್ಮದ ಸರ್ವಸ್ವ

ವ್ರತಹೋಮನಿಯಮೋಪವಾಸದಾನಂಗಳೆಂದತಿಶಯವಡೆದ ಧರ್ಮಗಳು
ಪತಿಶುಶ್ರೂಷೆಗೆ ಪಡಿಯಲ್ಲೆಂದಿದರತಿಶಯವರಿತಾಚರಿಪುದು

ಪ್ರತಿಮೆಯ ರೂಪದ ಪಂಕಜನಾಭಗೆ ನತಿಗೆಯ್ದು ನಲವೇರುವಂತೆ
ಪತಿಯ ರೂಪದೆ ತನ್ನ ಪಾಲಿಗೆ ಬಂದ ಶ್ರೀಪತಿಯ ಪಾದವ ಭಜಿಸುವುದು

ಪಗಲಿರುಳೆನ್ನದೆ ಪತಿಯಾಣತಿಯೊಳು ಮೊಗದಿರುಹದೆ ಮೊನೆಗೊಳದೆ
ಬಗೆದೆಗೆಯದೆ ತನ್ನ ಭಾಗ್ಯದ ಫಲವೆಂದು ಬಗೆದು ಭಕ್ತಿಯೊಳೆಸಗುವುದು

ಇದೆ ನಿನ್ನ ಪತಿ ಬಂದನೆಂಬ ನಲ್ನುಡಿಗೇಳಿ ಮುದವೇರಿ ಮೊಗಸಿರಿ ವಡೆದು
ಕದುಬಿಯುವನ ಸೇವೆಗನುವಪ್ಪ ವಸ್ತುವನೊದವಿಪುದುರ್ವಗೊಂಡೊಡನೆ

ಇಂತು ನೋಡುವೆನಿಂತು ನುಡಿವೆನಿಂತೆಸಗುವೆನಿಂತು ಸೇರುವೆನಿಂತಿರ್ಪುವೆ
ಇಂತು ಮನ್ನಿಪೆನಿಂತು ಮನಗರಗಿಪೆನೆಂದು ಚಿಂತಿಪುದೇಕಚಿತ್ತದೊಳು

ಮನೆವಾಳ್ತೆ ಮೈಯುಲಸಿಕೆ ಮಕ್ಕಳ ಮುದ್ದು ಬಿನದಂಗಳನು ಬಿಟ್ಟಿದ್ದು
ದನಿಗೇಳದ ಮುನ್ನ ತಾನಿದಿರ್ಗೊಂಡವನಸ್ಸಂವರಿತನುಸರಿಸುವುದು

ಸೋಗೆ ಮುಗಿಲ ಕಂಡು ಸೊರ್ಕುವಂದದೊಳನುರಾಗರಸದ ಲಹರಿಯೊಳು
ಬಾಗಿಲನೊಳವೊಕ್ಕುಬಂದನೆಂಬುದುಮತಿ ವೇಗದೊಳಿದಿರುಗೊಳುವುದು

ತಳುವದಚ್ಯುತನಿಗರ್ಘ್ಯನೆಗೈದಂತಡಿದೊಳೆದುತೊಡೆದು ದುಗುಲದೊಳು
ಬಳಿಕ ನಡೆದು ಬಂದ ಬಳಲಿಕೆಗಳೆವಂತೊಳುವಾತುಗಳನೊಡರಿಪುದು

ಪಸಿವಲಸಿಕೆಗಳ ಪರಿದು ಕೆಲದೆ ನಿಂದು ನಸುನಾಣ್ಚುತ ನಲವಿನೊಳು
ಒಸೆದೊಲವರಿತೊಯ್ಯುನುಚಿತೋಪಚಾರವನೆಸಗುವುದೇಕಚಿತ್ತದೊಳು

ಆವ ಪರಿಯು ದೇಸಿಯಾಣ್ಮಗೆ ಬಗೆವರ್ಪುದಾವಿಧಗಳನಾರೈದು
ಭಾವಿಸಿ ತಿಳಿದುಟ್ಟು ತೊಟ್ಟು ಬಣ್ಣಿಗೆಯಿಂದ ಭಾವವ ಬಂದಿಗೊಳುವುದು

ಇಷ್ಟದೇವತೆಯಿವನೆಂದು ಪತಿಯೊಳು ವಿಶಿಷ್ಟಭಾವವ ಬಗೆಗೊಳಿಸಿ
ಕಷ್ಟ ಕಾರ್ಪಣ್ಯವ ಕಾಣಿಸಿ ಕನಲದೆ ತುಷ್ಟಿವಡಿಪುದೊಲವರಿತು

ಪೆಣ್ಣ ಪೆತ್ತವರ ಬಳಗ ಬಳೆವುದು ಬೇಗ ಪೆಣ್ಣ ಪೆತ್ತವರು ಪೆರ್ಚುವರು
ಪೆಣ್ಣ ಪೆತ್ತುದರಿಂದೆ ಪೆಸರೆನಿಸಿತು ಮಿಗೆ ಬಣ್ಣವೇರಿತು ಪಾಲ್ಗಡಲು

ಪೆಣ್ಣಿಂದೆ ಪೆರ್ಮೆಗೊಂಡನು ಹಿಮವಂತನು ಪೆಣ್ಣಿಂದೆ ಭೃಗು ಪೆರ್ಚಿದನು
ಪೆಣ್ಣಿಂದೆ ಜನಕರಾಯನು ಜಸವಡೆದನು ಪೆಣ್ಣ ನಿಂದಿಸಲೇಕೆ ಪೆರರು

ಸಿರಿರಾಣಿಯು ಸೀತೆಯು ರುಕ್ಮಿಣಿಯ ಶ್ರೀಹರಿಯೊಡನೊಂದೆ ಹಂತಿಯೊಳು
ಇರಿಸಿ ಪೂಜೆಯನೊಡರಿಸುವರು ಪಿರಿಯರು ಪರಿಕಿಪೊಡಿವರು ಪೆಣ್ಣಲಸೆ

ಪೆಣ್ಣಲ್ಲವೆ ತಮ್ಮನೆಲ್ಲ ಪಡೆದ ತಾಯಿ ಪೆಣ್ಣಲ್ಲವೆ ಪೊರೆದವಳು
ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು ಕಣ್ಣು ಕಾಣದ ಗಾವಿಲರು ?

ಕುವರನಾದೊಡೆ ಬಂದ ಗುಣವೇನದರಿಂದೆ ಕುವರಿಯಾದೊಡೆ ಕುಂದೇನು
ಇವರಿರ್ವರೊಳೇಳಿಗೆವಡೆದವರಿಂದ ಸವನಿಪುದಿಹಪರ ಸೌಖ್ಯ

ಕುಲಪುತ್ರನೋದಿ ತಿಳಿದು ನಡೆದಲ್ಲದೆ ಕುಲವನುದ್ಧರಿಸಲರಿಯನು
ಕುಲಪುತ್ರಿಯೊಳಗುವರನಿಗಿತ್ತ ಮಾತ್ರಕೆ ಕುಲಕೋಟಿಯನುದ್ಧರಿಪಳು

ಬಸಿರೊಳೊಗೆದು ಬಳೆದೇಕರೀತಿಯೊಳೆಲ್ಲ ಸಿಸುಗಳಿರ್ದೊಡಮೇನು ಬಳಿಕ
ಒಸೆದಿತ್ತುದನೊಡಬಡುವಳು ಪೆಣ್ ಗಂಡು ಪಸುಗೆಗೊಂಬನು ಬಲ್ಮೆಯೊಳು

ಪುಟ್ಟಿದ ಮನೆಯೊಳು ಪೋರಿ ಪುರುಳುಗೊಂಬ ದಿಟ್ಟ ಗಂಡುಗಳಂತಿರಲಿ
ಕೊಟ್ಟುದರಿಂದೆ ತಣಿವ ಕುವರಿಗೆ ಮನಮುಟ್ಟಿ ಕೊಡುವುದು ಕೋವಿದರು

ಎನ್ನ ಪೆತ್ತವರಿವರೀ ಮನೆಯೊಡವೆಗಳೆನ್ನವೆಂದೆರವಿಲ್ಲದಿರ್ಪ
ಕನ್ನೆಯನನ್ಯರಿಗೀವನ್ನೆವರಮುರೆ ಮನ್ನಿಸೀವುದು ಮಮತೆಯೊಳು

ಅರಿತು ನಿಟ್ಟಿಸೆ ಗಂಡುಮಕ್ಕಳಿಂದತಿಶಯದೆರಕದೊಳೆಸೆವ ಪೆಣ್ಗಳನು
ಪೊರನೋಟದಿಂದೆ ನೋಡದೆ ಪೋಲೆಸಿಸದೆ ಮರುಕವೆರಸಿ ಮನ್ನಿಪುದು

ಪದುಳಗೊಳಿಸಿ ಪಲವಗೆ ಪಸದನಗಳ ಪುದುಗಿಸಿ ಪೊಸ್ದೊಡಿಗೆಗಳ
ಮದುವೆಗೆ ನೆರೆದ ಪೆಣ್ಮಕ್ಕಳ ನಿಟ್ಟಿಪರೆದೆಗೊಳುವಂತೆಸಗುವುದು

ಸುಗುಣನಾವನು ಸುಚರಿತ್ರನಾವನು ಕಣ್ಗೆ ಸೊಗಸುವ ಸೊಬಗನಾರೆಂದು
ಬಗೆದು ಭಾವಿಸಿ ಪೆಣ್ಣನೀವುದು ವಂಶದೊಳೊಗೆದೊಳುಗುವರನಿಗೊಲಿದು

ಅಲೆಗೆಯ್ಯದವಮತಿಯೆಸಗದ ವೈರವ ಬಲಿಸದ ಬರಿದೆ ಪಳಿಯದ
ಕೊಲೆಬೈಗಳಿಂದೆ ಕೋಟಲೆಗೊಳಿಸದ ಸತ್ಕುಲಕೀವುದು ಕುವರಿಯನು

ಪಣದಾಸೆ ಸಂಟುತನದ ಪತ್ತುಗೆ ನೇಹದೆಣಿಕೆಗಳಿಂದೆದೆಗರಗಿ
ಗುಣಜೌವನಕುಲರೂಪುಗುಂದಿದ ನಡೆವೆಣಕೀಯಲಾಗದು ಪೆಣ್ಣ

ಜಡನಿಗೆ ಜಾತಿಹೀನನಿಗೆ ಚಂಚಲನಿಗೆ ಕಡುಮೂರ್ಖನಿಗೆ ಗಾವ್ಪನಿಗೆ
ಬಡತನದೊಳು ಬಲುಬವಣೆಗೊಂಬವನಿಗೆ ಕೊಡಲಾಗದು ಕುವರಿಯನು

ಬಾಳಿ ಬದುಕಿ ತಣಿವಿಲ್ಲದ ತಮ್ಮಂತೆ ಬಾಳಲೆಳಸುವ ಬಾಲಕಿಯ
ಬೀಳುಗುವರನಿಗೆ ಬೆಲೆಗೆಯ್ದರೆಂಬುದ ಕೇಳಿ ಕಿವಿಯು ಮುಚ್ಚುವುದು

ತನ್ನ ಮನೆಯೊಳುಂಡು ತವರುಮನೆಯೆ ಸಂಪನ್ನವಕ್ಕೆಂಬ ಪೆಣ್ಗಳಿಗೆ
ಪೊನ್ನ ತೊಡಿಗೆ ಪೊಸದುಗುಲಂಗಳನಿತ್ತು ಮನ್ನಿಸುವುದು ಮನವರಿತು

ಪತಿಧರ್ಮ

ಎಳಜೌವನದೊಳಿಡೆಜವ್ವನದೊಳು ಮತ್ತಿಳಿವ ಜವ್ವನದೊಳಿಸಿಯಳ
ಒಳಗರಿತುಪಚರಿಸುವ ನಲ್ಲನಿಗವಳೊಳಗಪ್ಪ ಬಗೆಯು ಬಣ್ಣಿಪೆನು

ಎರವೆಳ್ಳನಿತಿಲ್ಲದೊರ್ವರೊರ್ವರೊಳೊಡವೆರದಿರ್ಪ ಸತಿಪತಿಗಳಿಗೆ
ದೊರಕೊಂಬುದು ಸಂಸಾರಸುಖದ ಸುಗ್ಗಿ ಪರದೊಳಾನಂದ ಪರ್ಬುವುದು

ಬಲುಮೆಯನೊಳಕೊಂಡು ನಾಣ್ಚಿಯೊಲಿಯದಂತೆ ಚಲಪೋರುವೆಳ ಜೌವನದ
ಕುಲಸತಿಯೊಳು ಕೋಪಿಸದೆ ಕೋಟಲೆಗೊಳದಲಸದೆಯನುಸರಿಸುವುದು

ಏನೆಂದರಿಯದೆಳಮೈಯೊಳಿನಿಯಳಭಿಮಾನಗೊಂಡಿರೆ ಮಚ್ಚರಿಸದೆ
ಮೋನದೊಳಿರದೆ ಮೋಡಿಯ ಕಾಣಿಸದೆ ಸನ್ಮಾನದಿ ಮನಗರಗಿಪುದು

ನಲ್ಲನಿಗೊಲಿದು ನಾಣ್ಚುವ ಮುದ್ದುವೆಣ್ಣಿನ ಮೆಲ್ಲೆದೆ ಕಲ್ಲೆದೆಯೆನಿಸೆ
ಬಲ್ಲವನವಳ ಬಲುಮೆಗೆಯ್ದು ಬಳಲದೆ ಚಲ್ಲವಾಡುವುದು ಜಾಣ್ಮೆಯೊಳು

ಗಲಗೆಸಗದೆ ಗಾಬರಿಗೊಳಿಸದೆ ಮಿಗೆ ಕಲಹವ ಗಂಟುವಡಿಸದೆ
ಬಲುಮೆಗೆಯ್ಯದೆ ಬಾಲೆಯ ಬಣ್ಣವಾತಿನಿಂದೊಲಿಸಿಯೊತ್ತಿಗೆ ಬರಿಸುವುದು

ಬೆದರುವ ಮುದ್ದುವೆಣ್ಣಿಗೆ ಭೀತಿಗಳೆವಂತೆ ಪದುಳಗೆಯ್ಯದೆ ಬಲ್ಮೆದೋರೆ
ಸೊದೆಯುಂಡು ಸೊರ್ಕುವ ಜೊನ್ನವಕ್ಕಿಗೆ ಬಿಸುಗದಿರನೂಡುವ ಗೈಮೆಯಂತೆ

ಅರಿಯದ ಪೆಣ್ಣನಾದರಿಸಿಯಂಜಿಕೆಗಳ ಪರಿವುಗೈಯದೆ ಬಲ್ಮೆದೋರೆ
ತರಿಸೆಂದು ಮಳೆಗೆ ಬಾಯ್ದೆರೆವ ಚಾದಗೆಯೊಳು ಬರಸಿಡಿಲೆರಗಿತೆಂಬಂತೆ

ಮುಗುದೆ ನಾಚಿಕೆಗೊಳೆ ಮುದ್ದಿಸಿ ತಿಳುಪದೆ ಪಗೆಸಾಧಿಸಿ ಬಲ್ಮೆದೋರೆ
ಉಗುರೊಳು ಬಾಜಿಪ ಬೀಣೆಗೊನಕೆಗೊಂಬ ಬಗೆಯೆನಿಪುದು ಭಾವಿಪೊಡೆ

ಎರಗಿಯೆರಗದೆಳವೆಣ್ಣನೆರಗಿಸದೆ ಬರಿದೆ ಮುನಿದು ಬಲ್ಮೆದೋರೆ
ಎರೆವ ತಣ್ಣೀರನೆಳಸುವೆಳವಳ್ಳಿಗೆ ತರಿಳಗೆಂಡವ ತಳಿವಂತೆ

ಎರವಿನಿತಿಲ್ಲದಂತೆಳವರೆಯದ ಪೆಣ್ಣ ಸರಿಗೊಂಡು ಸರಸವಾಡುವುದು
ಸರಿಯಲ್ಲೆಂದುಳಿದಿರೆ ಮರವಡುವಳು ಮರದ ಬೊಂಬೆಯ ಮಾಟದೊಳು

ಕನಲಿ ಕಲ್ಲೆರ್ದೆಯವಳೆಂದಲ್ಲಗಳೆಯದೆ ಮನಮುರಿಯದೆ ಮಚ್ಚರಿಸದೆ
ಅನುನಯವಚನದಿಂದನುಗೊಳಿಸುವನಿಗೆ ಮನವೀವರೆಳಮಡದಿಯರು

ನೆರೆಜೌವನದ ನೀರೆಯೊಳೆರವೆಣಿಸದೆ ಮರೆಮಾಜಿ ಮನಮುರಿಯಿಸದೆ
ಎರಕವೆರಸಿ ಮನೆವಾಳ್ತೆಯ ಭಾರವ ಪೊರಿಸಿ ಪುದುಗುವಡಿಸುವುದು

ಆಯಿತಾಯಿತುಯೆಂದಲ್ಲಗಳೆಯದೆ ತನ್ನಾಯವನವಳಿಗರುಹದೆ
ಆಯವೀಯವನವಳೊಡನಾಳೋಚಿಸಿ ಕೈಯೆಡಕದೊಳಿರಿಸುವುದು

ಎನ್ನವಳೆಂದೆರಕದೊಳೀವುದು ಪೊನ್ನ ರನ್ನವ ಪೊಸದುಗುಲಗಳ
ತನ್ನ ಶಕ್ತಿಯ ವಂಚಿಸದೆ ಮನದನ್ನಳನುನ್ನತಿವಡಿಸುವುದೊಲಿದು

ತನ್ನ ಪೆರ್ಚುಗೆಯೊಳು ಪೆರ್ಚುಗೆಗೊಂಡರೆ ತನ್ನ ಕುಂದಿನೊಳು ಕುಂದುವಳ
ತನ್ನ ಮೆಯ್ಯೊಳಗರೆಮೆಯ್ಯೆನಿಸುವ ಮನದನ್ನಳ ಮನ್ನಿಪುದೊಲಿದು

ಉಡದಿರೆ ಮಡಿಯುಡದುಣದಿರೆ ಸವಿಯುಣದೊಡವೆಯ ತೊಡದಿರೆ ತೊಡದೆ
ಎಡೆವಿಡಿದಿನಿಯನಡಿಯ ನೆಳಲಸು ಪಡಿವಿಡಿವ ಮಡದಿಯ ಮನ್ನಿಪುದು

ನಿನ್ನದೆನ್ನದು ನೀನಾನು ನಿನ್ನವರಿವರೆನ್ನವರಿವರುಗಳೆಂದು
ತನ್ನಿನಿಯಳ ತನ್ನೊಡವೆ ಮೈಬಳಗವ ಭಿನ್ನಗೆಯ್ಯದೆ ಬೆರಸುವುದು

ಮನದೊಳು ಮನ ನೆನಹಿನೊಳು ನೆನಹು ಮತ್ತೆ ತನುತನುವಿನೊಳೊಡವೆರಸಿ
ಅನುಗೊಳೆ ಪಾಲುನೀರುಗಳಂತಿನಿಯನುಮಿನಿಯಳುಮೇಕವೆನಿಪುದು

ಎಳಜೌವನ ಮೊದಲಿಂದುವರೆಗಮೆನ್ನ ಬಳಿಸಂದು ಬಾಳಿದಳೆಂದು
ಇಳಿಜೌವನದೊಳಗೆರವುದೋರದೆಯೆಂದಿನೊಳು ನೇಹವನೊಡರಿಪುದು

ಎಣಿಕೆಗೈವೊಡೆ ರೂಪು ಜೌವನಮಿರ್ದೇನು ಗುಣಮಿಲ್ಲದ ಕುಲಸತಿಗೆ
ಗುಣಕರುಗೊಂಡಿರೆ ಕೂರ್ತೆಂದೆಂದಿಗುಮೆಣೆಬಿಚ್ಚದೇಕಮೆನಿಪುದು

ಎರವಿಲ್ಲದೇಕವೆನಿಸಿ ಧರ್ಮದೊಳು ಸಂಸರಿಸುವ ಸತಿಪತಿಗಳಿಗೆ
ಪುರುಷೋತ್ತಮನಡಿಗಳ ಪೂಜೆಯಿಂದಿಹ ಪರಸುಖ ಪದುಳಗೊಳುವುದು

ಸತಿಧರ್ಮ (ವಿರಹದಲ್ಲಿ)

ನೆರೆಯೂರಿಗೆ ಪೋಗಿ ನಲ್ಲನೈತರದಿರೆ ಬರವ ಒಯಸಿ ಬಸವಳಿವ
ವಿರಹಿಣಿಯರ ನಡತೆಯ ಬಿತ್ತರಗಳನೊರೆವೆನುಚಿತವೆಂಬಂತೆ

ದೇವರಿಲ್ಲದ ದೇಗುಲದ ಬಿತ್ತರದಂತೆ ಭೂವರನಿಲ್ಲದೂರಂತೆ
ಜೀವಿತೇಶ್ವರನ ವಿರಹದೊಳು ಸೆಜ್ಜೆಯ ಭಾವಿಸಿ ಬಣ್ಣಗುಂದುವಳು

ಕೆಲದೊಳು ಕೆಳದಿಯರಿರೆ ನೈರಿಸದೊಂದು ಕೆಲಸದ ನೆವದಿಂದೆ ಕಳುಪಿ
ಒಲಿದೋಪನೊಳು ಗೈತದೊಪ್ಪವ ನೆನೆನೆನೆದಲಸಿ ಮೈಮುರಿದೊರಲುವಳು

ತಲೆವಾಗಿಲೊಳು ದಾರಿಗರ ನೋಡಲೆಳಸದೆ ನೆಲೆವಾಡವೇರಿ ನಿಟ್ಟಿಸದೆ
ಒಲಿದಿನಿಯನ ನಲ್ವಗೆಯ ನೆನಹಿನೊಳು ನೆಲೆನಿಂದು ನೇಮಗೊಳುವಳು

ಪರಿಪರಿಯುಡೆತೊಡವುಗಳ ಪೂಸರಗಳ ಪರಿಮಳದಣ್ಪ ಬಯಸದೆ
ಗರತಿಯರಿದನುಳಿದಿರಲಾಗದೆಂಬಲಂಕರಣಮಾತ್ರವ ಧರಿಸಿಹಳು

ಮಂಗಳಕರಮಾತ್ರವನಲ್ಲದೆ ಮಿಕ್ಕ ಸಿಂಗರಗಳನು ಚಿಂತಿಸದೆ
ಸಂಗಾತಿವೆಂಗಳ ಸರಸಭಾಷಣವ ಮನಂಗೊಳಿಸದೆ ಮರುಗುವಳು

ಪಾಯಸ ಪರಮಾನ್ನದ ಪಲಬಗೆಯ ಕಜ್ಜಾಯದ ಕಾಯಿ ಪಣ್ಣುಗಳ
ಬಾಯ ಸವಿಗೆ ಬಯಸದೆಯನ್ನಪಾನದಿ ಕಾಯಧಾರಣೆಯೆಸಗುವಳು

ಅತ್ತಣದೆಸೆಯಿಂದೆ ಬೀಸುವೆಲರನೆಲರೊತ್ತಿನೊಳಿಸೆವ ಸೌಸವವ
ಸುತ್ತಿ ಸೌಸವವ ತುತ್ತುವ ತುಂಬಿಯ ಬೆಂಬತ್ತಿ ಕೇಳುವಳವನಿರವ

ಬೆಸಗೊಂಬಳಿನಿಯನಾವೆಡೆಯೊಳಿರುವನಾ ದೆಸೆಯಿಂದೆ ಬಂದ ಬಂದವರ
ಬೆಸಗೊಂಬಳು ಜೋಯಿಸರ ಜೋಗಿ ಪುರುಷರ ಬೆಸಗೊಂಬಳು ಬಿಜ್ಜೆವಳರ

ಬೆಸಗೊಂಬಳೆನ್ನ ವಲ್ಲಭನೆಲ್ಲಿದನೆಂದು ಬೆಸಗೊಂಬಳೆಂತಿರ್ಪನೆಂದು
ಬೆಸಗೊಂಬಳೆಂದಿಗೆ ಬಂದಪನೆಂದಿಂತು ಬೆಸಗೊಂಬಳು ಬೇಸರದೆ

ಇಂದಿಗೀ ಪಗಲಿಗೀ ಜಾವಕೀ ಗಳಿಗೆಗೆ ಬಂದಪನೆಂದವರುಸಿರೆ
ಮಂದಹಸಿತ ಮುಖದಿಂದೆ ಮನದೊಳಾನಂದದಿ ನಲವೇರುವಳು

ಉಕ್ಕಿ ಸುರಿವ ಸೊಗದಾಲಿನೀರ್ವೊನಲಿಂದೆ ಮಿಕ್ಕುಮೀರುವ ಸರದಿಂದೆ
ಸೊಕ್ಕುವ ಮನದಿಂದೆ ಸುತ್ತುಗೆಳದಿಯರ ಬೆಕ್ಕಸಬೆರಗುವಡಿಪಳು

ಈಗಲೆ ಬರ್ಪನೆಂಬುದನಾಲಿಸಿ ತಲೆವಾಗಿಲ ತೆರೆಯಲೆಳಸುತೆ
ಬೇಗದೊಳವನ ಸೇವೆಗೆ ಬೇಕಾದುದನಾಗಳೆಯಸುಗೊಳಿಸುವಳು

ಮೊದಲೊಳು ಮುಂದುವರಿವ ನೋಟದಿಂದೊಡನೊದಗುವ ಹರ್ಷಾಶ್ರುವಿಂದೆ
ಮುದದೊಳು ಮುರಿದೇಳುವ ನವಿರಿಂದೊಡನಿದಿರುಗೊಳುವಳಿನಿಯನನು

ಬಾಗಿಲ ಬಳಿಗೆ ಬಂದಪನೆಂಬುದುಮದುರಾಗರಸದ ಲಹರಿಯೊಳು
ಏಗೈವೆನೆಂಬುದನರಿಯದವನಿಗಿದಿರಾಗಿ ನಿಟ್ಟಿಸಿ ನಿಂದಿಹಳು

ಪುಟ್ಟಿದಂದಿಂದೆ ಪುರುಳುಗಾಣದವರು ನಟ್ಟನೆ ನಿಧಿಯ ಕಂಡಂತೆ
ಕಟ್ಟಿರಕದೊಳಿನಿಯನ ಕಾಣುತೆ ಮರವಟ್ಟು ಮೈಮರೆತು ನಿಟ್ಟಿಪಳು

ಯೋಗದಶಾಪರಿಣತಿಯೊಳು ತನಗಿದಿರಾಗಿ ನಿಂದಿರ್ಪ ದೇವತೆಯ
ಯೋಗಿಗಳೆರ್ದೆಗೊಳಿಪಂತಿನಿಯನೊಳನುರಾಗವೆರಸಿ ನಿಟ್ಟಿಪಳು

ಕಾಣದೆ ಪಲವಗಲಿಂದೆ ಕಣ್ಮರೆಯಾದ ಮಾಣಿಕ ಮೈದೋರಿದಂತೆ
ಪ್ರಾಣವಲ್ಲಭನ ಪಾದಾರವಿಂದಂಗಳ ಕಾಣುತೆ ಕವಿದು ನಿಟ್ಟಿಪಳು

ಪುಳಕದ ಸೆವದಿಂದೆ ಪೊಣ್ಮುವ ಹರ್ಷದ ಬೆಳಗೈಗೆ ಸೀರೆರೆವಂತೆ
ತುಳುಕುವ ಸೊಗದಾಲಿ ನೀರ್ದೊರೆಯಸು ತಂದಿಳುಪುತವನ ನಿಟ್ಟಿಪಳು

ಬಳಿಕ ಮನವೆ ಬಲಿವಿಡಿದಿನಿಯನ ಪಾದ ನಳಿಸಂಗಳಿಗೆ ಸತಿಗೈದು
ಘಳಿಲನುಗುವ ಹರ್ಷಾಶ್ರುವಿಂದುಂಗುಟಗಳನು ತೊಳೆದು ಪೂಜಿಪಳು

ಕೆಲದೊಳಿರ್ಪಳು ಗೆಲ್ಲಗೊಂಬಳು ನೇಹವ ಬಲಿವಳು ಬಣ್ಣವೇರುವಳು
ಒಲಿದು ನಿಟ್ಟಿಪಳೊಡನೊಡಲ ಮರೆತು ನಲಿನಲಿವಳು ನಲವೇರುವಳು

ಪೊರಮಟ್ಟು ಪೋದಂದುವೊದಲಿಂದುವರೆಗೆ ತನ್ನೆರೆಯನಿರ್ದಿರವೆಲ್ಲವನು
ಎರಕವೆರಸಿ ಕೇಳುವಳೆಡೆಯೆಡೆಯೊಳು ಮರುಗುತೆ ಮನಗೊಳಿಸುವಳು

ಎರವಿನಿತಿಲ್ಲದೆಂದಿನ ನೇಹದೊಳೊಡವರಿಸುವಳೆದೆಗರಗುವಳು
ಪರಿಪರಿಯೂಳಿಗವನು ಪಣ್ಣಿ ತಣಿವಳು ಪರಮಾನಂದವಡುವಳು

ಹರಿಕಥಾಮೃತಸಾರವು

ಕರುಣಾಸಂಧಿ

ಮನವಚನಕತಿದೂರ ನೆನೆವರ
ನನುಸರಿಸಿ ತಿರುಗುವನು ಜಾಹ್ನವಿ
ಜನಕ ಜನರೊಳಗಿದ್ದು ಜನಿಸುವ ಜಗದುದರ ತಾನು
ಘನಮಹಿಮ ಗಾಂಗೇಯನುತ ಗಾ
ಯನವ ಕೇಳುತ ಗಗನಚರವಾ
ಹನ ದಿವೌಕಸರೊಡನೆ ಚರಿಸುವ ಮನೆಮನೆಗಳಲ್ಲೀ

ಮಲಗಿ ಪರಮಾದರದಿ ಪಾಡಲು
ಕುಳಿತು ಕೇಳುವ ಕುಳಿತು ಪಾಡಲು
ನಿಲುವ ನಿಂತರೆ ನಲಿವ ನಲಿದರೆ ವಲಿವೆ ನಿಮಗೆಂಬಾ
ಸುಲಭನೋ ಹರಿ ತನ್ನವರಸರೆ
ಘಳಿಗೆ ಬಿಟ್ಟಗಲನು ರಮಾಧವ
ನೊಲಿಸಲರಿಯದೆ ಪಾಮರರು ಬಳಲುವರು ಭವದೊಳಗೆ

ಒಬ್ಬನಲಿ ನಿಂದಾಡುವನು ಮ
ತ್ತೊಬ್ಬನಲಿ ನೋಡುವನು ಬೇಡುವ
ನೊಬ್ಬನಲಿ ನೀಡುವನು ಮಾತಾಡುವನು ಬೆರಗಾಗೀ
ಅಬ್ಬರದ ಹೆದ್ದೈವನಿವ ಮ
ತ್ತೊಬ್ಬರನ ಲೆಕ್ಕಿಸನು ಲೋಕದೊ
ಳೊಬ್ಬನೇ ತಾ ಬಾಧ್ಯಬಾಧಕನಾಗಿ ನಿರ್ಭೀತ

ಶರಣ ಜನ ಮಂದಾರ ಶಾಶ್ವತ
ಕರುಣಿ ಕಮಲಾಕಾಂತ ಕಾಮದ
ಪರನು ಪಾವನತರ ಸುಮಂಗಳಚರಿತ ಪಾರ್ಥಸಖಾ

ನಿರುಪಮಾನಂದಾತ್ಮ ನಿರ್ಗತ
ದುರಿತ ದೇವವರೇಣ್ಯನೆಂದಾ
ದರದಿ ಕರೆಯಲು ಬಂದೊದಗುವನು ತನ್ನವರ ಬಳಿಗೆ

ಜನನಿಯನು ಕಾಣದಿಹ ಬಾಲಕ
ನೆನೆದು ಹಂಬಲಿಸುತಿರೆ ಕತ್ತಲೆ
ಮನೆಯೊಳಡಗಿದ್ದವನ ನೋಡುತ ನಗುತ ಹರುಷದಲಿ
ತನಯನಂ ಬಿಗಿದಪ್ಪಿ ರಂಬಿಸಿ
ಕನಲಿಕೆಯ ಕಳೆವಂತೆ ಮಧುಸೂ
ದನನು ತನ್ನವರಿದ್ದೆಡೆಗೆ ಬಂದೊದಗಿ ಸಲಹುವನು

ಸ್ಮರಿಸುವವರಪರಾಧಗಳ ತಾ
ಸ್ಮರಿಸ ಸಕಲೇಷ್ಟಪ್ರದಾಯಕ
ಮರಳಿ ತನಗರ್ಪಿಸಲು ಕೊಟ್ಟುದನಂತಮಡಿ ಮಾಡಿ
ಪರಿಪರಿಯಲಿಂದುಣಿಸಿ ಸುಖಸಾ
ಗರದಿ ಲೋಲಾಡಿಸುವ ಮಂಗಳ
ಚರಿತ ಚಿನ್ಮಯಗಾತ್ರ ಲೋಕಪವಿತ್ರ ಸುಚರಿತ್ರ

ಏನು ಕರುಣಾನಿಧಿಯೊ ! ಹರಿ ಮ
ತ್ತೇನು ಭಕ್ತಾಧೀನನೋ ! ಯಿ
ನ್ನೇನು ಈತನ ಲೀಲೆ ! ಇಚ್ಛಾಮಾತ್ರದಲಿ ಜಗವ
ತಾನೆ ಸೃಜಿಸುವ ಪಾಲಿಸುವ ನಿ
ರ್ವಾಣ ಮೊದಲಾದಖಿಳ ಲೋಕ
ಸ್ಥಾನದಲಿ ಮತ್ತವರನಿಟ್ಟಾನಂದಬಡಿಸುವನು

ಚೇತನಾಚೇತನವಿಲಕ್ಷಣ
ನೂತನ ಪದಾರ್ಥಗಳೊಳಗೆ ಬಲು
ನೂತನತಿಸುಂದರಕೆ ಸುಂದರ ರಸಕೆ ರಸರೂಪಾ
ಜಾತರೂಪೋದರ ಭವಾದ್ಯರೊ
ಳಾತತಪ್ರತಿಮ ಪ್ರಭಾವ ಧ
ರಾತಳದೊಳೆಮ್ಮೊಡನೆ ಯಾಡುತಲಿಪ್ಪ ನಮ್ಮಪ್ಪ

ತಂದೆ ತಾಯ್ಗಳು ತಮ್ಮ ಶಿಶುವಿಗೆ
ಬಂದ ಭಯಗಳ ಪರಿಹರಿಸಿ ನಿಜ
ಮಂದಿರದಿ ಬೇಡಿದುದನಿತ್ತಾದರಿಸುವಂದದಲೀ

ಹಿಂದೆ ಮುಂದೆಡಬಲದಿ ಒಳಹೊರ
ಗಿಂದಿರೇಶನು ತನ್ನವರನೆಂ
ದೆಂದು ಸಲಹುವನಾಗಸದವೋಲೆತ್ತ ನೋಡಿದರು

ಒಡಲ ನೆಳಲಂದದಲಿ ಹರಿ ನ
ಮ್ಮೊಡನೆ ತಿರುಗುವ ಒಂದರೆಕ್ಷಣ
ಬಿಡದೆ ಬೆಂಬಲವಾಗಿ ಭಕ್ತಾಧೀನನೆಂದೆನಿಸಿ
ತಡೆವ ದುರಿತೌಘಗಳ ಕಾಮದ
ಕೊಡುವ ಸಕಲೇಷ್ಟಗಳ ಸಂತತ
ನಡೆವ ನಮ್ಮಂದದಲಿ ನವನುವಿಶೇಷಸನ್ಮಹಿಮ

ಬಿಟ್ಟವರ ಭವಪಾಶದಿಂದಲಿ
ಕಟ್ಟುವನು ಬಹುಕರ್ಮಿಣನಿವ ಶಿ
ಷ್ಟೇಷ್ಟನೆಂದರಿದನವರತ ಸದ್ಭಕ್ತಿ ಪಾಶದಲಿ
ಕಟ್ಟುವರ ಭವಕಟ್ಟು ಬಿಡಿಸುವ
ಸಿಟ್ಟಿನವನಿವನಲ್ಲ ಕಾಮದ
ಕೊಟ್ಟು ಕಾವನು ಸಕಲ ಸೌಖ್ಯವನಿಹಪರಂಗಳಲಿ

ಕಣ್ಣಿಗೆವೆಯಂದದಲಿ ಕೈ ಮೈ
ತಿಣ್ಣಿಗೊದಗುವ ತೆರದಿ ಪಲ್ಗಳು
ಪಣ್ಣುಪಲಗಳನಗಿದು ಜಿಹ್ವೆಗೆ ರಸವನೀವಂತೆ
ಪುಣ್ಯಫಲಗಳನೀವುದಕೆ ನುಡಿ
ವೆಣ್ಣಿನಾಣ್ಮಾಂಡದೊಳು ಲಕ್ಷ್ಮಣ
ನಣ್ಣನೊದಗುವ ಭಕ್ತರವಸರಕಮರಗಣಸಹಿತ

ಕೊಟ್ಟದನು ಕೈಕೊಂಬರೆ ಕ್ಷಣ
ಬಿಟ್ಟಗಲ ತನ್ನವರ ದುರಿತಗ
ಳಟ್ಟುವನು ದೂರದಲಿ ದುರಿತಾರಣ್ಯ ಪಾವಕನು
ಬಿಟ್ಟ ಬೆನ್ನಿಲಿ ಹೊರಿಸಿದವರೊಳು
ಸಿಟ್ಟು ಮಾಡಿದನೇನೊ ! ಹರಿ ಕಂ
ಗೆಟ್ಟಸುರರಿಗೆ ಸುಧೆಯನುಣಿಸಿದ ಮುರಿದನಹಿತರನು

ಸರ್ವಪ್ರತೀಕಸಂಧಿ

ಮೇದಿನಿಯು ಮೇಲುಳ್ಳ ಗೋಷ್ಪಾ
ದೋದಕಗಳೆಲ್ಲಮಲತೀರ್ಥವು
ಪಾದಪಾದ್ರಿಧರಾತಳವು ಸುಕ್ಷೇತ್ರ ಜೀವಗಣಾ
ಶ್ರೀಧರನ ಪ್ರತಿಮೆಗಳು ಇವರುಂ
ಬೋದನವೆ ನೈವೇದ್ಯ ನಿತ್ಯದಿ
ಹಾದಿ ನಡೆವುದೆ ನರ್ತನಗಳೆಂದರಿತವನೆ ಯೋಗಿ

ಸರ್ವದೇಶವು ಪುಣ್ಯದೇಶವು
ಸರ್ವಕಾಲವು ಪುಣ್ಯಕಾಲವು
ಸರ್ವಜೀವರು ದಾನಪಾತ್ರರು ಮೂರುಲೋಕದೊಳು
ಸರ್ವಮಾತುಗಳೆಲ್ಲ ಮಂತ್ರವು
ಸರ್ವಕೆಲಸಗಳೆಲ್ಲ ಪೂಜೆಯು
ಶರ್ವವಂದ್ಯನ ವಿಮಲ ಮೂರ್ತಿ ಧ್ಯಾನವುಳ್ಳವಗೆ

ಶ್ರೀವರನಿಗಭಿಷೇಕವೆಂದರಿ
ದೀ ವಸುಂಧರೆಯೊಳಗೆ ಬಲ್ಲವ
ರಾವ ಜಲದಲಿ ಮಿಂದರೆಯು ಗಂಗಾದಿ ತೀರ್ಥಗಳು
ತಾವೊಲಿದು ಬಂದಲ್ಲಿ ನೆಲೆಗೊಂ
ಡೀವವಖಿಳಾರ್ಥಗಳನರಿಯದ
ಜೀವರಮರತರಂಗಿಣಿಯನೈದಿದರು ಫಲವೇನು

ನದನದಿಗಳಿಳೆಯೊಳಗೆ ಪರಿವವು
ಉದಧಿಪರಿಯಂತರದಿ ತರುವಾ
ಯದಲಿ ರಮಿಸುವವಲ್ಲಿ ತನ್ಮಯವಾಗಿ ತೋರದಲೆ
ವಿಧಿನಿಷೇಧಗಳಾಚರಿಸುವರು
ಬುಧರು ಭಗವದ್ರೂಪ ಸರ್ವ
ತ್ರದಲಿ ಚಿಂತನೆ ಬರಲು ತ್ಯಜಿಸುವರಖಿಳ ಕರ್ಮಗಳ

ಆವಜೀವರೊಳಿದ್ದರಿನ್ನೇ
ನಾವ ಕರ್ಮವ ಮಾಡಲಿನ್ನೇ
ನಾವಗುಣರೂಪಗಳುಪಾಸನೆ ಮಾಡಲೇನವರೂ
ಕಾವನಯ್ಯನ ಪರಮಸತ್ಕರು
ಣಾವಲೋಕನಬಲದಿ ಚರಿಸುವ
ದೇವತೆಗಳನು ಮುಟ್ಟಲಾಪವೆ ಪಾಪಕರ್ಮಗಳು

ನಾಮಸ್ಮರಣ ಸಂಧಿ

ಮಕ್ಕಳಾಡಿಸುವಾಗ ಮಡದಿಯೊ
ಳಕ್ಕರದಿ ನಗುವಾಗ ಹಯ ಪ
ಲ್ಲಕ್ಕಿ ಗಜ ಮೊದಲಾದ ವಾಹನವೇರಿ ಮೆರೆವಾಗ
ಬಿಕ್ಕುವಾಗಾಕಳಿಸುತಲಿ ದೇ
ವಕ್ಕಿತನಯನ ಸ್ಮರಿಸುತಿಹ ನರ
ಸಿಕ್ಕನೆಮದೂತರಿಗೆ ಆವಾವಲ್ಲಿ ನೋಡಿದರು

ಸರಿತು ಪ್ರವಹಗಳಲ್ಲಿ ದಿವ್ಯಾಂ
ಬರದಿ ಪುತ್ರಾದಿಯಲಿ ಹರ್ಷಾ
ಮರ್ಷ ವಿಸ್ಮೃತಿಯಿಂದಲಾಗಲಿ ವೊಮ್ಮೆ ಬಾಯ್ದೆರೆದು
ಹರಿ ಹರೀ ಹರಿಯೆಂಬ ಯೆರಡ
ಕ್ಷರ ನುಡಿದ ಮಾತ್ರದಲಿ ದುರಿತಗ
ಳಿರದೆ ಪೋಪವು ತೂಲರಾಶಿಯೊಳನಲ ಪೊಕ್ಕಂತೆ

ಮಲಗುವಾಗಲು ಯೇಳುವಾಗಲು
ಕುಳಿತು ಮಾತಾಡುತಲಿ ಮನೆಯೊಳು
ಕೆಲಸಗಳ ಮಾಡುತ್ತಲಿ ವ್ಯೆದೊಳೆವಾಗ ಮೆಲುವಾಗ
ಕಲುಷದೂರನ ಸಕಲ ಠಾವಿಲಿ
ತಿಳಿಯೆ ತತ್ತನ್ನಾಮರೂಪವ
ಬಳಿಯಲಿಪ್ಪನು ಒಂದರೆಕ್ಷಣ ಬಿಟ್ಟಗಲಸವರ

ಆವ ಕುಲದವನಾದಡೇನಿ
ನ್ನಾವ ದೇಶದೊಳಿದ್ದಡೇನಿ
ನ್ನಾವಕರ್ಮವ ಮಾಡಲೇನಿನ್ನಾವ ಕಾಲದಲೀ
ಶ್ರೀವರನ ಸರ್ವತ್ರದಲಿ ಸಂ
ಭಾವಿಸುತ ಪೂಜಿಸುತ ಮೋದಿಪ
ಕೋವಿದರಿಗುಂಟೇನೊ ಭಯದುಃಖಾದಿ ದೋಷಗಳು

ವಾಸುದೇವನ ಗುಣಸಮುದ್ರದೊ
ಳೀಸಬಲ್ಲವ ಭವಸಮುದ್ರಾ
ಯಾಸವಿಲ್ಲದೆ ದಾಂಟುವನು ಶೀಘ್ರದಲಿ ಜಗದೊಳಗೆ
ಬೇಸರದೆ ದುರ್ವಿಷಯುಗಳನಭಿ
ಲಾಷೆಯಲಿ ಬಳಲುವವ ನಾನಾ
ಕ್ಲೇಶಗಳನನುಭವಿಪ ಭಕ್ತಿಸುಮಾರ್ಗ ಕಾಣದಲೆ

ಸ್ನಾನ ಜಪದೇವಾರ್ಚನೆಯು ವ್ಯಾ
ಖ್ಯಾನ ಭಾರತ ಮುಖಮಹೋಪಪು
ರಾಣ ಕಥೆಗಳ ಪೇಳಿ ಕೇಳಿದರೇನು ದಿನದಿನದಿ
ಜ್ಞಾನಕರ್ಮೇಂದ್ರಿಯಗಳಿಂದೇ
ನೇನು ಮಾಡುವ ಕರ್ಮಗಳು ಲ
ಕ್ಷ್ಮೀವಾಸನ ಪೂಜೆಯೆಂದರ್ಪಿಸದ ಮಾನವನು

ದೇವಗಂಗೆಯೊಳುಳ್ಳವಗೆ ದುರಿ
ತಾವಳಿಗಳುಂಟೇ ವಿಚಾರಿಸೆ
ಪಾವುಗಳ ಭಯವುಂಟೆ ವಿಹಗಾಧಿಪನ ಮಂದಿರದಿ
ಜೀವಕರ್ತೃತ್ವವನು ಮರೆದು ಪ
ರಾವರೇಶನೆ ಕರ್ತುಯೆಂದರಿ
ದಾವ ಕರ್ಮವ ಮಾಡಿದರು ಲೇಪಿಸವು ಕರ್ಮಗಳು

ಏನು ಮಾಡುವ ಪಾಪಪುಣ್ಯಾಗ
ಳಾನೆ ಮಾಡುವೆನೆಂಬವಧಮನು
ಹೀನಕರ್ಮಕೆ ಪಾತ್ರ ನಾ ಪುಣ್ಯಕ್ಕೆ ಹರಿಯೆಂಬಾ
ಮಾನವನು ಮಧ್ಯಮನು ದ್ವಂದ್ವಕೆ
ಶ್ರೀನಿವಾಸನೆ ಕರ್ತನೆಂದು ಸ
ದಾನುರಾಗದಿ ನೆನೆದು ಸುಖಿಸುವನೇ ಸರೋತ್ತಮನೂ

ಈ ವುಪಾಸನೆಗೈವರಿಯೊಳು
ದೇವತೆಗಳಲ್ಲದಲೆ ನರರ
ಲ್ಲಾದ ಬಗೆಯಿಂದಾದರಿವರರ್ಚನೆಯು ಹರಿಪೂಜೆ
ಕೇವಲ ಪ್ರತಿಮೆಗಳೆನಿಪರು ರ
ಮಾವಿನೋದಿಗೆ ಇವರನುಗ್ರಹ
ದೇವರನುಗ್ರಹವೆನಿಸುವದು ಸಸ್ಮುಕ್ತಿಯೋಗ್ಯರಿಗೇ

ತನುವೆ ನಾನೆಂಬುವನು ಸತಿಸುತ
ಮನೆ ಧನಾದಿಗಳೆನ್ನದೆಂಬುವ
ದ್ಯುನದಿ ಮೊದಲಾದುದಕಗಳೆ ಸತ್ತೀರ್ಥವೆಂಬುವನು
ಅನಲಲೋಹಾದಿ ಪ್ರತೀಕಾ
ರ್ಚನವೆ ದೇವರ ಪೂಜೆ ಸುಜನರೆ
ಮನುಜರಹುದೆಂಬುವನು ಗೋಖರನೆನಿಪ ಬುಧರಿಂದ

ಗೀತ ಗೋಪಾಲ

ತನ್ನ ನೆನೆವುದು ಜೀವ ತಲ್ಲಣಿಪುದು ಕೂಡೆ ನಿನ್ನ ನೆನೆವುದೊಯ್ಯನೆ
ನೆಲೆಗೆ ನಿಲ್ಲುವುದು ಪಲ್ಲವಿ

ಚ || ಪುದಿದ ತೊವಲು ಕಂಡ ಮಿದುಳೆಲುನರಗಳಿಂ
ದೊದವಿದೊಡಲ ನೆನೆದೊಱಲುವುದು
ಹೃದಯ ಮಧ್ಯದಿ ನಿಂತು ಹಿತವನೆಸಗುವ ನಿನ್ನ
ನೆರ್ದೆಗೊಳಿಸುತೊಯ್ಯನೆ ಹೆಕ್ಕಳಿಸುವುದು

ಉಲಿ ಸೋಂಕು ಸವಿ ರೂಪೊಳುಗಂಪಿಗೆಱಗುವ
ಪಲವು ಕರಣಗಳಲೆಗಲಸುವುದು
ಸಲುವ ವಿಷಯ ನಿನ್ನ ಚರಣಕರ್ಪಿತವೆಂಬ
ಸೆಲೆಯ ತಿಳಿದೊಡನೆ ನಲವೇೞುವುದು

ಮರಳಿ ಮರಳಿ ತಾನು ಮಾಡುವ ಪಾಪಂಗಳ
ಬಿಱುಬ ನೆನೆದು ಮಿಗೆ ಬೆದಱುವುದು
ನರಪತಿ ಯದುಕುಲನಾಥ ತೇರೇಱಿ ನೀ
ನೊಱೆದೊಂದು ನುಡಿಯಱಿತುರ್ಬಿ ಕೊರ್ಬುವುದು

ಚೆಲ್ಲವಾಡದಿರೆನ್ನ ಸಲಹೊ ಪಕ್ಷಿವರಂಗ ವಲ್ಲಭವಾಸುದೇವಾ
ಬಲ್ಲರ ಮಾತಿನ ಬರವಸದೊಳು ಬಂದೆ ಒಲ್ಲೆನೆಂದೊಡೆದೊಡಮುಱಿದು
ಪೋಪವನಲ್ಲ ಪಲ್ಲವಿ

ಚ || ಕಡಲೊಳು ನಡೆವ ಪಡಗಿನ ಕಂಭವ
ನಡರಿ ಸೇರಿದ ಪಕ್ಕಿಯಂದದಿಂದಾನು
ಎಡಬಲದೊಳು ಬೇಱೊಂದಿರವುಗಾಣೆನು ನಿ
ನ್ನಡಿಗಳ ಸೇರಿದೆನನ್ಯವನಱಿಯೆನು

ಮೊೞಗುಸಿಡಿಲುಗಳ ಮೋಹರದೊಳು ನೊಂದು
ಬೞಲಿ ಬಾನೊಳು ಪರಿಪರಿದು ಮುಗಿಲುಗಳಿಂ
ದಿೞಿವ ಏಾಸ್ಲ ನೀರನೆಳಸುತ ಬಾಯ್ದಿಡು
ವೆಳೆಯ ಚಾದಗಗೆ ನಾನೆಣೆಯೆನಿಸಿರ್ಪೆನು

ನೀತಿಯಾದೊಡಮಪನೀತಿಯಾದೊಡಮದ
ನೀ ತೆಱನೆಂದು ಬಂದಿದಿರಾಡಲಱಿಯದೆ
ಭೂತಳಾಧಿಪನೆಂತು ಪೊರೆದೊಡಮವನಡಿ
ಗೋತು ಸೇರಿದ ಕುಳವೊಕ್ಕಲಂತಿರ್ಪೆನು

ಕಾರವೊಗರುಹುಳಿಕಹಿಗಳನಿತ್ತೊಡ
ವೋರಂತೆ ಸವಿದದಱೊಳು ಭೇದವೆಣಿಸದೆ
ಹಾರೈಸಿ ವೈದ್ಯನ ಹವಣನಾರಯ್ವ ಮ
ಹಾರೋಗಿಯಂತಾನು ಹದವೞಿದಿರ್ಪೆನು

ಒಲಿದು ಲಾಲಿಸಿದೊಡವೊಲ್ಲದಿರ್ದೊಡಮೊಂದೆ
ನೆಲೆಯೊಳು ಸಲ್ಲನ ನೆರೆನಂಬಿ ಬಾೞುವ
ಕುಲದೊಳು ಪುಟ್ಟಿದ ಕುವರಿಯಂದದೊಳು ನಿ
ನ್ನೊಲವ ಕೂರ್ತಿರುವೆ ನಾಸುೞಿದುದನಱಿಯೆನು

ತಡೆಯಲಾಱದ ಕೋಪದಟ್ಟುಳಿಯಿಂದೊವ್ಮೆ
ಬಡಿದು ನೂಕಿದ ತಾಯ ಬೞಿಯಿಂದ ತೊಲಗದೆ
ಎಡೆವಿಡದೞುತವಳೆಱಕವನೆಳಸುವ
ಕಡುಗೂಸಿನಂದವ ಕೈವಿಡಿದಿರ್ಪೆನು

ಪರಿ ಪರಿ ಫಲಗಳ ಬಗೆಗೊಳಿಸದೆ ನಿನ್ನ
ಚರಣವ ಬಯಸುವ ಚದುರರಂತಾನು
ತಿರುಮಲೆಯಾರ್ವರ ದಿವ್ಯಕೃತಿಯನಿದ
ನಿರದೆ ಪಾಡುವೆನು ಕೇಳಿತರವನಱಿಯೆನು

ಕೈವಲ್ಯ ಕಲ್ಪವಲ್ಲರಿ

ಆ ದೇವನ ಪದಪದ್ಮವನಾವಗಮಭಿವಂದಿಸುವೆನು
ಮೂದೇವರ ನಾಮಕ್ರಿಯೆರೂಪುಗಳಳಿದುಳಿದ ಪಲ್ಲವಿ

ಆವನ ಲೇಶಗಳಿಂದ್ರಾಚ್ಯುತ ಹರ ವಿಧಿ ಮುಖನಿರ್ಜರ
ರಾವನ ಭಾಸಾಂಶಗಳಿನ ಶಶಿಮುಖತೇಜಗಳು
ಆವನು ಮಹದಹಮಾದಿಯ ಬುದ್ಬುದಗಳಿಗಂಬುಧಿಯಹ
ನಾವನ ಸತ್ತಾದ್ಯಂತದ ಕೋಟಿಯ ದಾಟಿಹುದು

ಆವನ ಜಠರದೊಳಬ್ಜಭವಾಂಡಾಯತಕೋಟಿಗಳಿಹ
ವಾವನನುಪಧಾವಿಸುವುವು ಶ್ರುತಿತತಿಸೂಕ್ತಿಗಳು
ಆವನಜಾದಿತೃಣಾಂತಾಖಿಲ ಜಡವಿಶ್ವನಿಯಾಮಕ
ನಾವನ ಸನ್ನಿಧಿವಿಡಿದೀ ಸೃಷ್ಟ್ಯಾದಿಗಳಿಹವು

ಆವನ ತೃಟಿಗೊರೆಯಾಗವು ಸಲಿಲಜಭವಶತಕಲ್ಪಗ
ಳಾವನ ಮನುಕೋಟಿಗಳೇಳೊಲಿದರ್ಥೈಸುವುವು
ಆವನಖಿಲಯಮಿತಾರಾಸಪ್ತಕದಗ್ರದೆ ಘೋಷಿಪ
ನಾವನು ಗುರುಸಿದ್ಧನೆಯೂಗೆನ್ನನು ಬೋಧಿಸಿದಂ.

ನೋಡಿ ಪರಂಜ್ಯೋತಿಯು ಬೆಳಗುತ್ತಿದೆ
ರೂಢಿಯೊಳಂತರ್ಮುಖಿಗಳು ಮುಚ್ಚಿದ
ಮೂಢತೆಯೆಂಬುವಯೆವೆದೆರೆದೂರ್ಧ್ವಜ್ಞಾನಾಂಬಕದಿಂದೆ ಪಲ್ಲವಿ

ಸತ್ತೆನಿಸುತೆ ಜಗದಗಲಕೆ ಪರ್ಬಿದ
ಬತ್ತಿಯ ಕೊನೆಯನೆ ಹಿಡಿದುಜ್ವಲಿಸುತೆ
ಚಿತ್ತೆಂದೆನಿಪಥಿತೋಮುಖಶಾಂತಜ್ವಾಲಾಮಯವಾಗಿ
ಮತ್ತಾನಂದವೆ ತೈಲವದಾಗಿರೆ
ನಿತ್ಯವೆನಿಪ ಕರಣಂಗಳ ವೇಷ್ಟಿಸಿ
ಸುತ್ತಲು ಪರಿಪೂರ್ಣತೆಯೆಂದೆಂಬುವ ಪ್ರಭೆಯನೆ ಪಸರಿಸುತೆ

ಪರೆದಿಹ ಮಾಯಾತಿಮಿರವನೋಡಿಸಿ
ನೆರೆ ಸಂಸೃತಿಯೆಂಬುವ ಧೂಮಾಂಕುರ
ವೆರಸದೆ ಕಾಲ್ಪ ಶ್ರಮವೆಂಬನಿಲನ ಹತಿಯಿಂದಲಿ ಕೆಡದೆ
ಎರಗುವ ತೃಷ್ಣಾ ಶಲಭನ ದಹಿಸುತೆ
ಕರಣೇಂದ್ರಿಯದಣುಗತಿಗಲ್ಲಾಡದೆ
ಮೆರೆವ ಧರಾದಿ ಶಿವಾಂತ ಜಡಾಜಡದೃಶ್ಯವ ತೋರಿಸುತೆ

ಮರುತಸಖಂ ತಾರಾಪತಿ ತಾರಕಿ
ತರಣಿ ತಟಿತ್ತುಗಳೆಂಬುವ ತೇಜ
ಸ್ಫುರಣೆಗಳೆಲ್ಲವು ನಿಜಭಾಸಾಂಶದ ಲವದೊಳು ಲವವೆನಿಸಿ
ನಿರುಪಮ ನಿರ್ಗುಣ ನಿತ್ಯ ನಿರಂಜನ
ನಿರಘ ನಿರಾಮಯ ಗುರುಸಿದ್ಧೇಶ್ವರ
ನಿರವಾದುದರಿಂ ತಾನಾರಿಂದಲು ಮೊದಲುದಯಿಸಿಕೊಳದೆ

ಜಗನ್ನಾಥ ದಾಸರ ಕೀರ್ತನೆಗಳು

ಅರಿತವರಿಗತಿ ಸುಲಭ ಹರಿಯ ಪೂಜೆ
ಅರಿಯದವ ನಿರ್ಭಾಗ್ಯತರ ಲೋಕದೊಳಗೆ ಪಲ್ಲವಿ

ಹೈಮಾಂಡ ಮಂಟಪವು ಭೂಮಂಡಲವೆ ಪೀಠ
ಸೋಮ ಸೂರ್ಯರೆ ದೀಪ ಭೂರುಹಗಳು
ಚಾಮರಗಳತಿವಿಮಲವ್ಯೋಮಮಂಡಲ ಛತ್ರ
ಯಾಮಾಷ್ಟಕಗಳಷ್ಟದಳದ ಪದ್ಮವುಯೆಂದು

ಮಳೆಯೆ ಮಜ್ಜನವು ದಿಗ್ವಲಯಂಗಳೇ ವಸನ
ಮಲಯಜಾನಲವೇ ಶ್ರೀಗಂಧ ಧೂಪಾ
ಇಳೆಯೊಳಗೆ ಬೆಳೆದ ಧಾನ್ಯಗಳೆಲ್ಲ ನೈವೇದ್ಯ
ಥಳಥಳಿಪ ಮಿಂಚು ಕರ್ಪೂರದಾರತಿಗಳೆಂದು

ನಕ್ಷತ್ರ ಮಂಡಲವೆ ಲಕ್ಷ ದೀಪಾವಳಿಯು
ದಕ್ಷಿಣೋತ್ತರ ಅಯನಗಳೆ ಬನವು
ವೃಕ್ಷವಲ್ಲಿಜ ಸುಫಲಪುಷ್ಪಗಳೊಳಗೆ ಲಕ್ಷ್ಮೀ
ವಕ್ಷವ್ಯಾಪಕನಾಗಿ ತಾನೇ ಭೋಗಿಪನೆಂದು

ಗುಡುಗು ಸಪ್ತಸಮುದ್ರ ಸಿಡಿಲು ಘೋಷವೇ ವಾದ್ಯ
ಪೊಡವಿಪರಿಗೀವ ಕಪ್ಪವೆ ಕಾಣಿಕೆಗಳು
ಉಡುಪ ಭಾಸ್ಕರರ ಮಂಡಲಗಳಾದರ್ಶಗಳು
ನಡೆವ ನಡೆಗಳು ಹರಿಗೆ ಬಿಡದೆ ನರ್ತನವೆಂದು

ಯುಗಚತುಷ್ಟಯವೆ ಪರಿಯಂತ ಪಾದಗಳಬ್ದ
ಬಿಗಿವ ಪಟ್ಟಿಗಳು ಕಂದಾಯ ಕಸಿಪು
ಗಗನ ಮೇಲ್ಗಟ್ಟು ಸಂಕ್ರಮಣಗಳೆ ಬಡವುಗಳು
ಭಗವಂತಗುಪಬರ್ಹಣಗಳು ಷಡೃತುಗಳೆಂದು

ನಾಗವಲ್ಲಿಗಳೆ ದಿವಸಗಳು ಕರಣವೇ ಕ್ರಮುಕೆ
ಯೋಗಗಳೆ ಚೂರ್ಣ ರಾತ್ರೆ ಕಾಂಶೂಕ
ಭೋಗವತಿಜ್ಜಲವೆ ಗಂಡೂಷೋದಕ ಶುದ್ಧ
ಸಾಗರವೆ ಪಾದೋದಕ ವಿರಾಡ್ರೂಪಗೆಂದು

ಶಾತ ಕುಂಭೋಧರಾಂಡಾಂತಸ್ಥರೂಪ ಸಂ
ಪ್ರೀತಿಯಿಂದಲಿ ಯಜಿಸಿ ಮೋದಿಪವರಾ
ವೀತಶೋಕರ ಮಾಡಿ ಸಂತೈಸುತಿಹ ಜಗ
ನ್ನಾಥವಿಠ್ಠಲ ಒಲಿದು ಸರ್ವಕಾಲಗಳಲ್ಲೀ

ಕನ್ನಡ ಕಾವ್ಯ ಸಂಚಯ

ಹೊಸಗನ್ನಡ ಕಾವ್ಯ

ಬೆಳೆದ ಭಾರತ ದೇಶವು

ಇಳಿಯುತಿದೆ ಪಾತಾಳಖಾತಕೆ ಬೆಳೆದ ಭಾರತ ದೇಶವು
ಕಳಚುತಿವೆ ಧರ್ಮಾಲಯದ ಹೊಂಗಳಸ, ಕನ್ನಡಿ, ಧ್ವಜಗಳು

ಉದ್ಧರಿಸುವ ಮಹಾತ್ಮರಿಲ್ಲವೆ ಇದ್ದರೇಕೆ ವಿಲಂಬವೈ
ಎದ್ದು ಬನ್ನಿರಿ, ಭೂತದಯೆ ಬದುಕಿದ್ದರದನೇ ತೋರಿಗೈ

ಏಳು ಸಾಯಣ ಕಟ್ಟು ಗ್ರಂಥವನೇಳು ಪಂಪಾಕ್ಷೇತ್ರಕೆ
ಗಾಳಿಗಂಟುಗಳೋದಿದೇತಕೆ ಏಳು ಈ ಕ್ಷಣಮಾತ್ರಕೆ

ಬರಲಿ ಹರಿಹರ ರಾಜನೂ ನಮ್ಮರಸನಾಗುವನೀತನೆ
ಹರಿವುದಿವನಿಂದೆಮ್ಮ ದೇಶದ ಪರಮದಾರುಣ ಯಾತನೆ

ಲಕ್ಷ ಶಾಸ್ತ್ರಗಳೇಕೆ ಸಾಯನ ಲಕ್ಷ ಸೂತ್ರಗಳೇತಕೆ
ಮೋಕ್ಷಸಂಪಾದನಕೆ ನಿಶ್ಚಯ ಮೋಕ್ಷಕೇಳು ಸ್ವತಂತ್ರತೆ

ಸ್ವತ್ವದರ್ಥವ ತಿಳಿಯದಲೆ ಬರಿ ತತ್ವದರ್ಥಗಳೇತಕೆ
ಸ್ವತ್ವಮಂ ತಿಳಿಸದಲೆ ಲೋಕಕೆ ತತ್ವಮಥನಗಳೇತಕೈ

ಕಾಲವೇ ಹಾಲಾಹಲವು ಪ್ರತಿಕೂಲವಾಗಿರುವಾಗಳೈ
ಕಾಲವೇ ಪೀಯೂಷವೆಮಗನುಕೂಲವಾಗಿರುವಾಗಳೈ

—ಬಾಳಾಚಾರ್ಯ ಸಕ್ರಿ (ಶಾಂತಕವಿ)

ಕನ್ನಡ ತಾಯನೋಟ

ವಿಜಯನಗರ ಸಾಮ್ರಾಜ್ಯದ ಆರುನೂರು ವರ್ಷದ ಹಬ್ಬದಲ್ಲಿ

೧

ಹಿರಿಯರಿರ, ಕೆಳೆಯರಿರ, ಅಕ್ಕತಂಗಿಯರಾ, ಅಣ್ಣತಮ್ಮದಿರಾ,
ಒಸಗೆನುಡಿ ತಂದಿಹೆನು ನಾನೊಂದ, ತಾಯಿಂದ, ಸಿರಿಯ ತಾಯಿಂದ—
ಕೇಳುವಿರ ಕಿವಿಗೊಟ್ಟು, ತಾಳುವಿರ ಎದೆನೆಟ್ಟು ತಾಳಿ ಬಾಳುವಿರಾ?
  ಕಣ್ಣಾರ ಕಂಡೆನವಳನು—ಕಂಡು, ತಂದಿಹೆನು, ಕೇಳಿ.
  ಅವಳೆನ್ನೊಳಾಡಿದುದನಾಡುವೆನು ನಿಮ್ಮಲ್ಲಿ, ಕೇಳಿ.

೨

ಬಳಸಿ ಬಂದೆನು ಸುತ್ತ ಕನ್ನಡದ ನಾಡುಗಳ ಸಿರಿಯ ನೋಡುತ್ತ,
ತಾಯಡಿಯ ಹುಡಿಯ ತಲೆಗಾನುತ್ತ, ಹರಕೆಯ ಪವಿತ್ರ ಯಾತ್ರೆಯಲಿ.
ಏನು ಚೆಲುವಿನ ನಾಡು! ಚೆಲುವು ಚೆಲ್ಲುವ ನಾಡು! ಕನ್ನಡದ ನಾಡು!
ಏನು ಚಿನ್ನದ ನಾಡು! ನಮ್ಮೊಲುಮೆಯಾ ನಾಡು! ನಮ್ಮಿನಿಯ ನಾಡು!
ಕಾವೇರಿಯಿಂದಮಾ ಗೋದಾವರಿಯ ವರೆಗೆ ಚಾಚಿರುವ ನಾಡು!
ಬಳಸಿದೆನು, ಸುತ್ತಿದೆನು, ಕಣ್ದಣಿಯ ನೋಡಿದೆನು, ಕುಣಿದು ಹಾಡಿದೆನು:
ಕೆಳಗೆ ಬೆಳೆಹೊಲ ಕಪ್ಪು, ಮೇಲೆ ಬಾಂಬೊಲ ಕಪ್ಪು, ಬೆಟ್ಟಗಳು ಕಪ್ಪು,
ಕಾರ್ಮೋಡಗಳು ಕಪ್ಪು, ಹೊಳೆಕೆರೆಯ ಮಡು ಕಪ್ಪು, ತಾಯ ಕಾಲ್ ತೊಳೆವ
ಉಪ್ಪು ಕಡಲದು ಕಪ್ಪು, ಜನ ಕಪ್ಪು—ಏನೆಂದೆ? ತಪ್ಪು, ತಪ್ಪು!—
ಮೂಡ ಪಡುವಲು ತಿರುಗು, ಬಡಗ ತೆಂಕಲು ತಿರುಗು, ಕರ್ನಾಟದಲ್ಲಿ,
ನಿಮ್ಮೂರ ಹೆಣ್ಣುಗಳ ಕಣ್ನೋಟ, ತಣ್ನೋಟ ಕರ್ಪು, ಬಲು ಕರ್ಪು!
ಕರ್ಪೊ, ಬೆಳ್ಪೋ ಕಾಣೆ, ಕನ್ನಡದ ಕಣ್ನೋಟ—ಕೂರ್ಪು, ಆರ್ಪು!
ಓ ತಾಯೆ, ಕನ್ನಡದ ಪೆರ್ ತಾಯೆ, ನಮ್ಮಮ್ಮ, ದೇವಿ, ಸಮ್ರಾಜ್ಞಿ
ಸುಳಿಗುರುಳು, ನಗೆಗಣ್ಣು ಏನು ಕಪ್ಪೇ ನಿನಗೆ—ಮುತ್ತಿಡುವ ಕಪ್ಪು!
ನಿನ್ನ ಕಲಿಗಳ ಕೂರ್ಪು, ಕೆಚ್ಚೆದೆಯ ಕಟ್ಟಾಳ ಕೂರ್ಪು, ನೆಚ್ಚಾರ್ಪು,
ಆರು ತಡೆಯಲುಬಹುದು—ಪುಲಕೇಶಿ ಹರ್ಷರೇ ಹೊಯ್ದು ಸಾರುವರು.
ಕರ್ಪಿರಲಿ, ಕೂರ್ಪಿರಲಿ, ನಿನ್ನ ಬೆಳ್ಪನು ಹೇಳು—ಕೂರಸಿಯ ಮಿಂಚು,

ಕಾರ್ ಮಿಂಚು, ಪೆಣ್ಮಣಿಗಳಾ ಕಣ್ಣ ಸುಣ್ಮಿಂಚು, ಅರಿದರಾ ಕೂರ್‌ನೋಟಮಿಂಚು!
ಮೆಲ್ಲ ಮೆಲ್ಲನೆ ತೇಲಿ, ಆಳದಲಿ ಮಲೆಯೆಡೆಯೊಳಲುಗದೆಯೆ ಅಲುಗಿ,
ಕಡಿದು ಬಂಡೆಗೆ ಬಂದು, ನೆಗೆದು ಬೆಳ್ಳಂಗೆಡೆವ ನೀರ್‌ಬೀಳು ಬೆಳ್ಪು!
ಆ ಬೆಳ್ಪು, ಆ ತೆಳ್ಪು, ಆ ಮೆಲ್ಪು—ನಿನ್ನ ಮಕ್ಕಳ ಬಾಳಿನೊಳ್ಪು;
ನೀರ್‌ಬೀಳ ಬೆಳ್ನೊರೆಯ ಬಿಸಿಲ ಬೆಳ್ದಿಂಗಳಾ ಮಳೆಬಿಲ್ಲ ತಳ್ಪು!
ಬೆಳ್ಗೊಳವೊ, ತೀರ್ಥಗಳೊ, ಧರ್ಮಧರ್ಮದ ತಿರುಳೊ, ಪಾಡುವರ ಪುರುಳೋ
ಒಳ್ಗನ್ನಡದ ಕಲೆಯೊ, ಕುಸುರಿಗೆಲಸದ ಸಿಲೆಯೊ, ಆ ನಯವೊ, ಮೆರುಗೋ!
ನಿನ್ನ ಚಿಣ್ಣರ ಸೊಬಗೊ, ಬೆಡಗೊ, ಮೆಲ್ಲೆದೆ ತಣ್ಪೊ, ಕೊಡುಗೈಯ ಬಿಣ್ಪೋ!
ಓ ಎನ್ನ ತಾಯಿ, ಕನ್ನಡ ತಾಯಿ, ನಮ್ಮವ್ವ, ದೇವಿ, ಸಮ್ರಾಜ್ಞಿ,
ನಿನ್ನನರಸುತ ಸುಳಿವ, ನೋಂಪಿಯೆನೆ ನಿನ್ನೊಲುಮೆನಾಡನೊಳಕೊಳುವ,
ನಿನ್ನ ಚೆಲುವನು ಸವಿವ ಮಗುವಾರು ತಣಿಯದನು, ಹಾಡಿ ಕುಣಿಯದನು,

ಭಕ್ತಿಯಲಿ ತಲೆದೂಗಿ ಬಾಗಿ ಮಣಿಯದನು!

೩

ಚೆಲುವು ಕಣಿ ಕಾರ್ವಾರವೆದೆ ತುಂಬಿ, ಗೋಕರ್ಣದಲಿ ಮಿಂದು, ಸಂದು,
ಉಡುಪಿಯಲಿ ಕೃಷ್ಣಂಗೆ ಕೈಮುಗಿದು, ಮಂಗಳೂರಿನ ಹಿರಿಯ ಸಂಟರಲಿ ನಿಂದು,
ಚಾರ್ಮಾಡಿ ಘಾಟಿಯನು ಬಳಬಳಸಿ ಮೇಲೇರಿ ಬಂದವನು ಕಂಡೆ, ಕಂಡೆ!
ಮೇಲೆ ತಿಳಿಯಾಕಾಶ, ಸುತ್ತಲೂ ಬೆಟ್ಟಸಾಲ್ ತೋಳ ತೆಕ್ಕೆಯಲಿ
ಕಣಿವೆಯೇರುವ ಕಾಡು, ದಟ್ಟಡವಿ, ಒಮ್ಮೊಮ್ಮೆ ಹಕ್ಕಿಗಳ ಹಾಡು,
ಮರದ ಮರೆಯಲಿ ದುಮುಕುವಬ್ಬಿಗಳ ಹಬ್ಬಿ ಹರಡಿದ ಕೂಗು ಕೊರಲು!
ಕಂಡೆನಾಕೆಯನಲ್ಲಿ, ದೂರದಲಿ, ಕಣ್‌ಪುಣ್ಯ ಮಿಂಚಿ ಮರೆಯಾಯ್ತು!
ಕನ್ನಡದ ಆ ನೋಟ, ದೇವಿಯಾ ದರ್ಶನಂ ಪೊಳೆದು ಬಯಲಾಯ್ತು!
ಎವೆ ಹೊತ್ತಿನಾ ನೋಟ, ಸವಿನೋಟ, ನವೆಯದೆದೆಚಿಮ್ಮುತಿಹುದಿನ್ನೂ!
ಅಮೃತಲೋಕದ ಮಾತೆ, ಅಳಿಯದಳ್, ಬಾನ್‌ಬಾಳ ಪೆರ್ಮೆಗಳ ತಾಯಿ,
ತಲೆಯಲ್ಲಿ ಪೊನ್ನಮುಡಿ, ಪದಿದರಿಲ ಪೆಂಪು, ಬೆಳ್ದಾವರೆಯ ಪೊಂಗಯ್!
ಸುತ್ತಲುಂ ಪೊನ್ನಾಡ ಕನ್ನಡದ ಪೆರ್ಮನಡಿಗಳ್, ಸಾವನೊದೆದು ಬೆಳಗಿ,
ಕನ್ನಡ ಮಕ್ಕಳ್ಗೆ ಕನ್ನಡದ ಪಾಲೆರೆದು, ಬಾಳ್ಗೆ ಬಾಳ್ ಪೊಯ್ದು,
ಬಾಳ್ವವರು ಮೆರೆವವರು,—ಪೆರ್ ನೋಟ! ಪಿರಿಯ ತಾಯ್ ಪಿರಿಯ ಮಕ್ಕಳ್!
ಕಪ್ಪು ಹೆಪ್ಪಿನ ಕುರುಳ ಕರ್ಮುಗಿಲ ಬಸಿರಿಂದ ತೊಟ್ಟನೊಡೆಹೊಮ್ಮಿ,
ಬಾನ ಈ ಕರೆಯಿಂದ ಆ ಕರೆಗೆ ಚಿಮ್ಮಿ ಒಡನಡಗುವುದೆ ತೇಜಂ,
ಆ ತೇಜದುರಿಯಂತೆ ಕಣ್ಣುಳ್ಕಿ, ಹೊರಗಡಗಿ, ಒಳಗಿರ್ಪುದಿನ್ನುಂ.
ಇದೊ ಬಂದೆನೀ ಹಾಳು ಹಂಪೆಗಿಂದರಸುತ್ತ,—ಒಳಗಿರ್ಪುದಿನ್ನುಂ—
ಒಳಗಿದ್ದು ಹೊರಗಣ್ಗೆ ಕಾಣಿಪುದು ಮತ್ತೊಮ್ಮೆ ಆ ತಾಯ ನೋಟಂ.
ತುಂಗಭದ್ರೆಯ ತಡಿಯ ಚೆದರಿರುವ ಮೊರಡಿಗಳ ಕೊರಕಲಿನ ಬಿಸಿಲ

ಬೇಗುದಿಯ ಬಿರುಕಿನಲಿ ಮುಳ್ಳೆಡೆಯು ಕಲ್ಲುಹೂವಿಡಿದರೆಯ ಮೇಲೆ,
ಕುಳಿತಿದ್ದಳಾ ತಾಯಿ, ಕೈಮೇಲೆ ತಲೆಯೂರಿ, ಅಳಲಿನಾಳದಲಿ!—
"ಯಾರವ್ವ, ನೀ ತಾಯಿ? ಏತಕಿಂತೊಬ್ಬಳೇ ಕುಳಿತೆ ಕಾಡಿನಲಿ?
ಏಕೆ ಮೊಗ ಬಾಡಿಹುದು, ಕಂದಿಹುದು, ನೊಂದಿಹುದು, ಕಾಂತಿಗುಂದಿಹುದು?"
ಕಂಬನಿಗಳೂರುತಿಹ, ಕಳವಳದ, ಕೂರ್ಮೆ ನಡುಗಿಪ ನುಡಿಯ ಕೇಳಿ,
ಕತ್ತೆತ್ತಿ, ಪಳಮೆಯಾಳದ ಕಣ್ಣನೆನ್ನ ಕಣ್ಣಲಿ ನೆಟ್ಟು, ಕಯ್ಯ
ಕುಳ್ಳಿರಲು ನನ್ನೆಗೈದೀ ಪರಿಯೊಳಾಡಿದಳು, ತೋಡಿದಳು ತೊಳಲ—
ಕಣ್ಣಾರ ಕಂಡುದನು, ತಾಯೆನ್ನೊಳಾಡಿದುದನಾಡುವೆನು, ಕೇಳಿ.

ಕಿವಿಗೊಟ್ಟು ಕೇಳಿ:
ಎದೆಗೊಟ್ಟು ಕೇಳಿ:
ಏಳಿ, ಎಚ್ಚರವಾಗಿ, ಅರಳಿ ಬಾಳಿ!

೪

"ಕೇಳಣ್ಣ, ನಾನೊಬ್ಬ ಹಳೆಯ ಮುತ್ತೈದೆ—ಹಿರಿದಾಗಿ ಬಾಳಿದವಳೊಮ್ಮೆ:
ಈಗ ಬಡತನ, ಬಡವೆ, ಬಡವಾದೆ; ಬಡವಾದ ಮಕ್ಕಳನು ನೋಡಿ,
ಬತ್ತಿ, ಮತ್ತಿಮ್ಮಡಿಯ ನೊರಗಿನಲಿ ಬಡವಾದೆ—ಸಾವಿಲ್ಲ ನನಗೆ!
ಸಾವಿಲ್ಲ—ಸಾಯುತಿಹೆ: ಹೊಸ ಮಳೆಗಳಾಗಿ, ನೆಲ ಹೊಸ ಹೊನಲು ಹರಿದು,
ಹೊಸ ಹಮ್ಮು ಹಮ್ಮುತ್ತ, ಎಲ್ಲರೂ ನನ್ನಕ್ಕತಂಗಿಯರು ಚಿಗುರಿ
ಎಲ್ಲರೂ ಚೆಲುವಾದರೆಲ್ಲರೂ ಚಿನ್ನವಾದರು—ನೋಡು, ನೋಡು—
ಆ ಕಡೆಗೆ, ಈ ಕಡೆಗೆ ತೂಗುವರು ತೊನೆಯುವರು, ಆ ಪೊಂಕ, ಬಿಂಕ!
ಪೇರೊಕ್ಕಲಾಗಿ ಪಾಡುವರು:
ಅವರ ಮಕ್ಕಳು ಬೆಳೆದು ಕಳೆಗೂಡಿ ಮನೆ ಬೆಳಗಿ ಹಬ್ಬ ಮಾಡುವರು—
ತಾವ್ ಮೊದಲು ಬದುಕಿ,
ತಾಯ್ ಮೊದಲು ಬದುಕಿ,
ಹೆರರ ಹೊರೆಗಳನಿಳಿಸೆ, ಹೆರರ ಸೆರೆಗಳ ಬಿಡಿಸೆ, ಕಯ್ಯ ನೀಡುವರು.
ಆ ಸಯ್ಪು, ಆ ಪುಣ್ಯ, ನನಗಿಲ್ಲ: ನನ್ನ ಮಕ್ಕಳಿಗಿಲ್ಲ ಹಬ್ಬ—
ನನ್ನ ಮಕ್ಕಳಿಗಿಲ್ಲ ಹಬ್ಬ:
ಮಳೆ, ಸುಗ್ಗಿ; ಬೆಳೆ ಬೆಳಕು; ಹಾಡು, ಹಸೆ; ಕೂಗಾಟ, ಕುಣಿದಾಟ, ಪಾಟ;
ಒಲೆದಾಟ, ನಲಿದಾಟ, ಒಲುಮೆ ಬೀರಾಟ,
ನನ್ನ ಮಕ್ಕಳಿಗಿಲ್ಲ—ನನಗಿಲ್ಲ—ಬಾಳ್ಗೆ ಆ ಅಕ್ಕ ತಂಗಿಯರು!
ನಮಗಿಲ್ಲ ಬಾಳು.
ಎಲ್ಲರೂ ಬಾಳುವೆಡೆ ನಮಗೆ ಸಾವೆ?
ಎಲ್ಲರೂ ನಲಿವ ಕಡೆ ನಮಗೆ ನೋವೆ?
ಏನು ಕವಿಯಿತೊ ಮಂಕು, ಮಕ್ಕಳಿಗೆ! ಯಾರೆರಚಿದರೊ ಬೂದಿ, ಕಾಣೆ,

ನನ್ನನೊಲ್ಲರು ನನ್ನ ಮಕ್ಕಳೇ! ತಾವ್ ಬಾಳಿ, ತಾಯ ಬಾಳಿಸರು.
ಹೆರರ ನುಡಿ, ಹೆರರ ನಡೆ,—ಹೆರರ ಕೂಗೇ ಕೂಗು; ಹೆರರದೇ ಹೆಮ್ಮೆ!

ನನ್ನ ಮನೆಹಾಳು!
ನನ್ನ ನುಡಿ ಬೀಳು!

ನನ್ನ ನಾಡಿನಲಿರುಳು: ನನ್ನ ತೋಟವನಗೆವ, ತೆಂಗಡಕೆಯಿಡುವ,
ತಾವರೆಯ ಕಾಪಿಡುವ, ಮೊಲ್ಲೆ ಮಲ್ಲಿಗೆ ನೆಡುವ, ಆನಂದ ಕೊಡುವ
ಮಕ್ಕಳೆಲ್ಲಿಹರೆನಗೆ—ಹೆರರೊತ್ತೆ ಗಡಿ ಬಿಡುತ ಹದುಗುತ್ತ, ನುಗ್ಗಿ ಕುಗ್ಗುತ್ತ,
ಹೆರರ ಕೈ ಕಾಯುತ್ತ, ಸಾಯದೆಯೆ ಬದುಕದೆಯೆ ಬಾಳ ನೂಕುವೆನು.

※

ಅರಿದೆನರಿದೆನು ಮಾತನಾಡುವಳದಾರೆಂದು: ಕನ್ನಡದ ತಾಯಿ!
ನಮ್ಮ ಕನ್ನಡ ತಾಯಿ, ತನ್ನ ಹೊಂಬಸಿರಿಂದ ನಮ್ಮನ್ನು ತಂದು,
ನಾವು ಬಿಟ್ಟೊಡೆ ಬಿಡದೆ, ಹಂಬಲಿಸಿ, ಮರುಹುಟ್ಟ ಹಾರೈಸುತಿಹಳು—
ನಾನೆಂದೆ, ಅಳಲನಾರಿಸಬಯಸಿ_" ಏಕಮ್ಮ, ಇನಿಸೊಂದು ಕೊರಗು?
ಬೇಡಮ್ಮ ಮಕ್ಕಳಲಿ ಇನಿಸೊಂದು ಕಡುಮುನಿಸು—ಬಾರಮ್ಮ ಹರಸು.
ನಿನ್ನ ನಾಡಿನೊಳದೇಕೊ ಬೆಳಕು ಮೂಡಿಹುದು—ಜೀವ ಕೂಡಿಹುದು,
ನಿನ್ನ ಮಕ್ಕಳು ನಿದ್ದೆಗಳೆದೆದ್ದ ಸಿಂಹದಂತೇಳುತ್ತ, ಮೊಳಗಿ,
ಕಣಕಿಳಿದು ಪಂಪ-ನೃಪತುಂಗರಾ ಮಾತುಗಳು ದಿಟವೆನಿಸುತಿಹರು.
ಸೆರೆಯನೊಕ್ಕಡೆಗೊಗೆದು, ಬಿಡುಗಡೆಯ ಕೈಕೊಂಡು, ಹಳ ನೆನಪು ನೆನೆದು,
ಹೊಸ ಕಾಣ್ಕೆಗಳ ಕಂಡು, ಸಾಮ್ರಾಜ್ಯಗಳ ಮತ್ತೆ ಕಟ್ಟುತಿಹರು.
ನಿನ್ನ ನಾಡೊಂದಾಗಿ, ನಿನ್ನ ನುಡಿ ಮೇಲಾಗಿ, ಮನೆ ಮಕ್ಕಳೆಲ್ಲ
ಪೇರೊಕ್ಕಲಾಗಿ ಪಾಡುವರು!
ತಾಯ್ ಬದುಕಿ, ತಾವ್ ಬದುಕಿ, ಹೆರರ ಬದುಕಿಪರು!
ಹಾಳು ಹಂಪೆಯ ನಡುವೆ, ನಡುಕಟ್ಟಿ ಮತ್ತೊಮ್ಮೆ ಮುಡಿಪಾಗಿ ತಾಯ್ಗೆ
ಭಕ್ತಿಯಲಿ ಜೀವವನು ಸಲಿಸುವರು—ಏಳು!
ಸಡಗರದ ಆ ಕೂಗ ಕೇಳು:
ನಾಡು ಸಿಂಗರವಾಯ್ತು, ಬೀಡು ಹೆಬ್ಬಳಕಾಯ್ತು, ಅದೊ ಹಬ್ಬ ಮೆರೆತ!
ಹೆಣ್ಣ ಚೆಲುವನು ನೋಡು—ಗಂಡುಗಲಿಗಳ ನೋಡು—ಕಟ್ಟಾಳುಗಳನು,
ರಾಜರನು, ಋಷಿಗಳನು, ಕವಿಗಳನು, ಧೀರರನು, ಕರ್ಮವೀರರನು
ಹೊಸತ ಹಳದನು ಮಾಡಿ, ಹಳದ ಹೊಸತನು ಮಾಡಿ, ನಾಡೊಂದು ಮೂಡಿ,
ಧರ್ಮ ಸತ್ಯಗಳಿಂದ, ಪ್ರೇಮ ಶಾಂತಿಗಳಿಂದ, ಸ್ವಾತಂತ್ರ್ಯದಿಂದ,
ಸುಖದಿಂದ, ಸೌಂದರ್ಯದಾನಂದದಿಂದೆಲ್ಲ ಸಮದೃಷ್ಟಿಯಿಂದ
ಬಾಳರೇ ನೀ ಬಂದು ನಲಿಸಿದೊಡೆ, ಹರಸಿದೊಡೆ—ಬಾ ತಾಯಿ, ಹರಸು.
ತೇರೇರು ಬಾ ತಾಯಿ, ನಿನ್ನ ಸಿಂಹಾಸನವನೇರು ಮತ್ತೊಮ್ಮೆ

ಪಳಮೆಯುಲಿ ಪೇರಾಲವನು ಸೀನು ಬಿತ್ತಲದು ಮೊಳೆತು, ಮರವಾಗಿ,
ಪಡುವ ಮೂಡಲು ತೆಂಕ ಬಡಗಲೆಡೆ ಕೊಂಬೆಗಳನೆಸೆದೆಸೆದು ಬೀಗಿ,
ಈ ಕೊಂಬೆ ಕರಗಿದೊಡೆ ಆ ಕೊಂಬೆ ಬಿಳಿಲಿಳಿದು ಬೇರೂರಿ ತಾಗಿ
ಒಂದೆ ಮರವಮರವಾಗಿರ್ಪಂತೆ, ಅಮರವಾಗಿನ್ನುಮದೆ ಇಹುದು
ನಿನ್ನೊಂದು ಕರ್ನಾಟ ರತ್ನಸಿಂಹಾಸನಂ—ಬಾಳ್ಗೆ, ಅದು ಬೆಳೆಗೆ
ಕನ್ನಡದ ಮುಡಿಯಾಗಿ, ಕನ್ನಡದ ನುಡಿಯಾಗಿ, ಕನ್ನಡದ ಬಾಳ ಕುಡಿಯಾಗಿ!
—ಬಾರಮ್ಮ, ಹರಸು."

೭

ನಕ್ಕಳಾ ತಾಯಿ
ಮುದುಕಿ ಎಳೆಯುವಳಾಗಿ, ಮಾಸು ಮಿಂಚೆಳೆಯಾಗಿ, ಸವೆದ ಮೈ ತುಂಬಿ,
ಕಡಲ ತೆರೆಗಳನುಟ್ಟು, ಬೆಟ್ಟ ಬಯಲನು ತೊಟ್ಟು, ಅರಿಲ ಮುಡಿಗಿಟ್ಟು.
ಮುಗುಳ್ ನಗೆಯ ನಸುನಕ್ಕಳಾ ತಾಯಿ, ನನ್ನ ತಲೆಯಲಿ ಕಯ್ಯ
ತಾವರೆಯನ್ನಿಟ್ಟು;
ಸುತ್ತಲುಂ ಕಾಣಿಸಿದರೊಡನೆ—
ಕನ್ನಡದ ಪೊನ್ನಾಡ ಪೆರ್ಮನಡಿಗಳ್!
ಕಾವನೊದೆವಾ ಪಾಲ ಸೂಸು ಕಿಡಿಗಳ್!
ಹಿಂದೆ ನೀಡಿದ ಸಾಲು, ಮುಂದೆ ನೀಡಿದ ಸಾಲು, ಕನ್ನಡದ ಕರುಳುಗಳು
—ನಡುವೆ, ಸಿರಿತಾಯಿ,
ಭುವನೇಶ್ವರೀದೇವಿ ರಥವನೇರಿದಳು.
ಕೂಗಿದರು ಎಲ್ಲರೂ ಒಕ್ಕೊರಲ್!—
"ತಾಯ್ ಬಿಜಯಮಾಡುವಳು, ದಾರಿ ಬಿಡಿ, ದಾರಿಬಿಡಿ, ಅಡ್ಡಬಾರದಿರಿ.
ಭಾರತಾಂಬೆಯ ಹಿರಿಯ ಹೆಣ್ಮಗಳೆ, ದಾರಿ ತೋರುವ ಹಿರಿಯ ಸೊಡರೆ,
ಬಾಳಮ್ಮ, ಬಾಳು!
ನೀನ್ ಬಾಳೆ, ಎನ್ ಬಾಳು ನಿನ್ನ ಮಕ್ಕಳದು!—ಬಾನ್ ಬಾಳು, ತಾಯೆ—
ಬಾಳಮ್ಮ, ಬಾಳು!"
ಚಲುವೆಯರ, ಚನ್ನಿಗರ, ಹಿರಿಯ ತಾಯ್ ಮಕ್ಕಳಿರ, ಒಡಹುಟ್ಟಿದವರಾ,
ಒಸಗೆನುಡಿ ಕೇಳಿದಿರ, ತಾಳಿದಿರ ಎದೆಯಲ್ಲಿ, ತಾಳಿ ಬಾಳುವಿರಾ,
ನಾಡು ನುಡಿ ನಡೆಗಳನು ಮುನ್ನಡೆಗೆ ನಡಸುತ್ತ, ಮುಂದೆ ಸಾಗುವಿರಾ?
ಭಾರತದ, ಲೋಕದಾ ಮಕ್ಕಳಲಿ ಹಿರಿದಾಗಿ ತೂಕ ತೂಗುವಿರಾ?
ಒನ್ನಿ, ಓ ಮಕ್ಕಳಿರ,
ಒಕ್ಕೊರಲಲೆಲ್ಲರೂ ಕೂಗಿ ಈ ಒಕ್ಕೂಗ—ಈ ಹಿರಿಯ ಕೂಗ—
"ಸಿರಿಗನ್ನಡಂ ಗೆಲ್ಗೆ, ಹಿರಿಗನ್ನಡಂ ಗೆಲ್ಗೆ, ಬಾಳ್ಗೆ—
ಕನ್ನಡದ ತಾಯ್ ಗೆಲ್ಗೆ, ಬಾಳ್ಗೆ."

—ಬಿ. ಎಂ. ಶ್ರೀಕಂಠಯ್ಯ (ಶ್ರೀ)

ತೆಂಕಣ ಗಾಳಿಯಾಟ

(ರಗಳೆಯ ಪ್ರಭೇದ)

ಬರಲಿದೆ! ಅಹಹಾ! ದೂರದಿ ಬರಲಿದೆ—

ಬುಸುಗುಟ್ಟುವ ಪಾತಾಳದ ಹಾವೊ?
ಹಸಿವಿನ ಭೂತವು ಕೂಯುವ ಕೂವೊ?
ಹೊಸತಿದು ಕಾಲನ ಕೋಣನ—ಓವೊ!
ಉಸಿರಿನ ಸುಯ್ಯೋ?—ಸೂಸೂಕರಿಸುತ,

ಬರುವುದು! ಬರಬರ ಭರದಲಿ ಬರುವುದು—

ಬೊಬ್ಬೆಯ ಹಬ್ಬಿಸಿ, ಒಂದೇ ಬಾರಿಗೆ
ಉಬ್ಬರ ಎಬ್ಬಿಸಿ ಕಡಲಿನ ನೀರಿಗೆ,
ಬೊಬ್ಬುಳಿ ತೆರೆಯನು ದಡಕ್ಕೆ ಹೊಮ್ಮಿಸಿ,
ಅಬ್ಬರದಲಿ ಭೋರ್ ಭೋರೆನೆ ಗುಮ್ಮಿಸಿ;

ಬರುತದೆ! ಮೈತೋರದೆ ಬರುತದೆ! ಅದೆ—

ನಡ ಮುರಿಯುತ ನಗನಾವೆಗೆ, ಕೂವೆಗೆ
ಉಡಿಸಿದ ಹಾಯಿಯ ಹರಿಯುತ ಬಿರಿಯುತ,
ಹಡಗನು ಕೀಲಿಸಿ, ತುಮುರನು ತೇಲಿಸಿ,
ದಡದಲಿ ಝಾಡಿಸಿ, ದೋಣಿಯನಾಡಿಸಿ,

ಇದೆ! ಇದೆ! ಬರುತಿದೆ! ಇದೆ! ಇದೆ! ಬರುತಿದೆ—

ಹಕ್ಕಿಯ ಕಣ್ಣಿಗೆ ಧೂಳಿನ ಕಾಡಿಗೆ
ಇಕ್ಕುತ, ಹೊಲದೆತ್ತಿಗೆ ದನಕಾಡಿಗೆ
ಫಕ್ಕನೆ ಹಟ್ಟಿಗೆ ಅಟ್ಟಿಸಿ, ಕಾಡಿಗೆ
ಸಿಕ್ಕಿದ ಕಿಚ್ಚನು ಊದಲು ಹಾರುತ,

ಬರುತಿದೆ! ಇದೆ! ಇದೆ! ಇದೆ! ಇದೆ! ಬರುತಿದೆ—

ಸಡಲಿಸಿ ಮಡದಿಯರುಡಿಯನು ಮುಡಿಯನು,
ಬಡಮುದುಕರ ಕೊಡೆಗರಿ ಹರಿದಾಡಿಸಿ,
ಹುಡುಗರ ತಲೆ ತಲೆ ಟೊಪ್ಪಿಯ ಆಟವ
ದಡಬಡನಾಡಿಸಿ, ಮನೆಮನೆತೋಟವ
ಅಡಿಮೇಲಾಗಿಸಿ, ತೆಂಗನು ಲಾಗಿಸಿ,
ಅಡಕೆಯ ಬಾಗಿಸಿ, ಪನೆ ಇಬ್ಭಾಗಿಸಿ,
ಬುಡದೂಟಾಡಿಸಿ, ತಲೆ ತಾಟಾಡಿಸಿ,
ಗುಡಿಸಲ ಮಾಡನು ಹುಲುಹುಲುಮಾಡಿಸಿ,

ಬಂತೈ! ಬಂತೈ! ಇದೆ! ಇದೆ! ಬಂತೈ!—

ಗಿಡಗಿಡದಿಂ ಚೆಲು ಗೊಂಚಲು ಮಿಂಚಲು
ಮಿಡಿಯನು ಹಣ್ಣನು, ಉದುರಿಸಿ ಕೆದರಿಸಿ
ಎಡದಲಿ ಬಲದಲಿ ಕೆಲದಲಿ ನೆಲದಲಿ,
ಪಡುವಣ ಮೋಡವ ಬೆಟ್ಟಕೆ ಗಟ್ಟಕೆ
ಹೊಡೆದಟ್ಟುತ, ಕೋಲ್ಮಿಂಚನು ಮಿರುಗಿಸಿ,
ಗುಡುಗನು ಗುಡುಗಿಸಿ, ನೆಲವನು ನಡುಗಿಸಿ,
ಸಿಡಿಲನು ತಾಳೆಗೆ ಬಾಳೆಗೆ ಎರಗಿಸಿ,
ಜಡಿಮಳೆ ಸುರಿವೋಲ್, ಬಿರುಮಳೆ ಬರುವೋಲ್,
ಕುಡಿನೀರನು ಬಣಗಿದ ನೆಲಕೆರೆವೋಲ್
ಬಂತೈ ಬೀಸುತ! ಬೀಸುತ ಬಂತೈ!
ತೆಂಕಣ ಗಾಳಿಯು ಕೊಂಕಣ ಸೀಮೆಗೆ
ಬಂತೈ! ಬಂತೈ! ಬಂತೈ! ಬಂತೈ!

—ಪಂಜೆ ಮಂಗೇಶರಾಯರು
(ಕವಿಶಿಷ್ಯ)

ಕೊಳುಗುಳದ ಮನವಿ

ಕರೆವೆ ನಾ ನಿನ್ನನೊಡೆಯಾ !
ನಿನ್ನ ಹೆಸರಂ ಕೊಂಡು ನಿಂದೆನಿದೊ ಸಿಡಿಗುಂಡು
ನೂರ್ಮೆ ಮಾರ್ಮೊರಸೆ ಕಾರ್ಮೊಳಗನುರ್ವರೆಯಿಂ,
ಕಿಸುಬಾಯನಾಕಳಿಸಿ ದೆಸೆಗಳಂ ಬಾಗುಳಿಸಿ,
ಮಿಂಚೆರಂಚಿ ಪಳಂಚಿ ಮುಂಚೆ ದಳ್ಳುರಿಯಿಂ
ಪ್ರೋಜ್ಜ್ವಂಡ ತಾಂಡವಮೊ ನಿನ್ನದೊಡೆಯಾ ?
ನಿನಗೆ ಮಣಿಮಣಿವೆನೊಡೆಯಾ !

ನಿನಗೆ ಮಣಿಮಣಿವೆನೊಡೆಯಾ !
ಕಾಳೆಗಳ ಭೋಂಕಾರ ಢೋಲ್ಗಳ ಢಳಂಕಾರ—
ಹೊಂಗುತಿದೆ ಮಂಗಲಾಮಂಗಲವೊ ತೂರ್ಯಂ !
ಇದೊ ನಿಶಾಂತ ತುತೂರಿಯೂದಲಿಂತೆದೆ ತೂರಿ—
'ಪರಧುರ್ಯರಿತಿಕಾರ್ಯಮನಿವಾರ್ಯ ಶೌರ್ಯಂ !'
ಜೀವಂತ ಕೋವಿಯಾನೇವೆನೊಡೆಯಾ
ಕಾಣಿಸಾಣತಿಯನೊಡೆಯಾ !

ಕಾಣಿಸಾಣತಿಯನೊಡೆಯಾ !
ನಮ್ಮ ಬಾಯಿಯ ತುತ್ತ ಕಸಿವ ಹಸಿವೆಯ ಕುತ್ತ
ಮೆಂತಂತು ಸಂಗ್ರಾಮ ಸಂಭ್ರಮಾಹ್ವಾನಂ,
ಗೃಹಲಕ್ಷ್ಮಿ ಕೊರಳಾಂತು ಸುರಿದ ನೀರವಮೆಂತು
ಅಂತೀ ರಣಾಂಗಣ ಘನಾಘನ ಧ್ವಾನಂ—
ನಿನ್ನ ನಿಶ್ಶಂಕ ಸಂಕಲ್ಪವೊಡೆಯಾ!
ನೀಡ ರಣದೀಕ್ಷೆಯೊಡೆಯಾ

ನೀಡ ರಣದೀಕ್ಷೆಯೊಡೆಯಾ !
ವಶಗೆಯ್ಯಲಿಳೆಯೆಲ್ಲ ಮಸಗಿ ಕಾದುವೆನಲ್ಲ
ಸ್ವಾರಾಜ್ಯವರ್ಜ್ಯಮನ್ಯರ ರಾಜ್ಯಮೇಕೆ ?

ತಾಯ ಸೆರೆಯಂ ಸವರಲೆಂದೆವರವೀ ಬವರ
ದಬ್ಬಾಳಿಕೆಯ ಮೆಟ್ಟಡಿಯ ತಬ್ಬಬೇಕೆ?
ವಿಸ್ಫಾರಿಸೆನ್ನೆದೆಯ ಧಮನಿಯೊಡೆಯಾ!
ತಾರ ಸಮರಾಜ್ಞೆಯೊಡೆಯಾ!

ತಾರ ಸಮರಾಜ್ಞೆಯೊಡೆಯಾ!
ಅನ್ಯದೇಶಾಕ್ರಾಂತಿ ಸ್ವಪರನಾಶಭ್ರಾಂತಿ
ಯಿಂ ದ್ವಿಪಕ್ಷದ ರಕ್ಷೆಗೀಕ್ಷಿಸದೆ ಬಗೆಯಂ,
ರಣವೊಂದೆ ಶರಣೆಂದೆ ಬಂದೆ ಮುಂದೆದೆಯಿಂದೆ
ತೊಳೆದು ಕಂಬನಿಯೊಳೆದುರಾಳಿಗಳ ಪಗೆಯಂ—
ಸನ್ನದ್ಧ ನಾಂ ಧರ್ಮಯುದ್ಧಕೊಡೆಯಾ
ಬೆಂಬಲಿಸು ನನ್ನನೊಡೆಯಾ

ಬೆಂಬಲಿಸು ನನ್ನನೊಡೆಯಾ
ಎನ್ನೆವರೆಗೀ ಪ್ರಾಣಮೆನ್ನೆವರೆಗೆ ಕೃಪಾಣ
ಮನ್ನೆಗಂ ಕಾದೆಂದು ಬೀಳ್ಕೊಡಿಂದೆನ್ನ!
ನೀನೆ ವಿಜಯಧ್ವಜಂ! ನೀನೆ ಹೃದಯಸ್ರಜಂ!
ನೀನೆ ವಿಷ್ವಕ್ಸೇನ ಸೇನಾನಿ ನನ್ನ!
ಸೋಲುಗೆಲುವೆನ್ನದೇಂ? ನಿನ್ನದೊಡೆಯಾ!
ಕಾದುವುದೆ ನನ್ನದೊಡೆಯಾ!

ಕಾದುವುದೆ ನನ್ನದೊಡೆಯಾ!
ಸರ್ವಭಾರಮನಿಂದು ನಿನಗಿರಿಸಿ ತರಿಸಂದು
ನಿನ್ನ ಹೆಸರೆತ್ತುತೆತ್ತುವೆ ಕತ್ತಿಯನ್ನ!
ನಿನ್ನಿಚ್ಛೆ ಎಂತೆಂತು ನಡೆಸೆನ್ನನಂತಂತು—
ಜಯಕೆ ಮುನ್ನಡೆಯಿಸಥವಾ ಮರಣಕೆನ್ನ!
ಮರಣಮೆ ವರಂ ಪರಾಶ್ರಯದಿನೊಡೆಯಾ!
ಮುನ್ನಡೆಯಿಸೆನ್ನನೊಡೆಯಾ!

ಮುನ್ನಡೆಯಿಸೆನ್ನನೊಡೆಯಾ!
ಇಂದು ಜೀವಮನೆನ್ನ ತೆತ್ತೆ ಕೆಯ್ಗಿದೊ ನಿನ್ನ—
ನೀನಿದಂ ನನಗಿತ್ತೆ, ನೀನೆ ಕೊಳಬಲ್ಲೆ!
ಹರಸೆನ್ನನುಳಿಯೆಂದೊ, ಹರಸೆನ್ನನಳಿಯೆಂದೊ—
ಅಳುವ ತಾಯಿಳೆಯೊಳೆನ್ನಳಿವುಳಿವನೊಲ್ಲೆ!
ಇದೆ ಜಲಾಂಜಲಿ ಜೀವಿತಾಶೆಗೊಡೆಯಾ!
ನಿನಗೆನ್ನನಿತ್ತೆನೊಡೆಯಾ!

ನಿನಗೆನ್ನ ನಿತ್ತೆಸೊಡೆಯಾ !
ಸಿಡಿಲ ಸನ್ನೆಯಿನೆನ್ನನಂತಕಂ ಕರೆವನ್ನ,
ಕೆಯ್ಮುಗಿಯುವಲಿ ನಿನಗೆ ಕಣ್ಮುಗಿಯುವೆನ್ನ
ಜೀವನಂ ಬಸಿವನ್ನ ಭಾವನಂ ಕುಸಿವನ್ನ,
ಮೂರ್ಛೆಯಿಂ ನಿನ್ನ ಹೆಸರುಚ್ಚರಿಸದನ್ನ,
ಸ್ವಾಗತಮೆ ತವ ಪದಾಗತನಿಗೊಡೆಯಾ ?
ಇದೆ ಕೊನೆಯ ಮನವಿಯೊಡೆಯಾ !

ಇದೆ ಕೊನೆಯ ಮನವಿಯೊಡೆಯಾ !
ತಾಯ ಸಂಕಲೆ ಕಡಿಯೆ ಸಂಗಳಿಸದಾಂ ಮಡಿಯೆ,
ನೀನದಂ ತವಕದಿಂ ತರಿವೆಂದು ಬಲ್ಲೆ !
ಮಡಿಯೆ ಜನಿತ ವ್ಯಕ್ತಿ, ಮಡಿವುದೇನನುರಕ್ತಿ ?—
ತಾಯೊಸಗೆ ತರ್ಪಿನಂ ಸ್ವರ್ಗಸುಖವೊಲ್ಲೆ !
ಭವಭವಮನೆನಗಿಲ್ಲಿ ಸಲ್ಲಿಸೊಡೆಯಾ !
ಕರೆವೆ ನಾ ನಿನ್ನನೊಡೆಯಾ !

—ಗೋವಿಂದ ಪೈ

ಹೊಸತನವೆ ಬಾಳು

(‘ಮಂಕುತಿಮ್ಮನ ಕಗ್ಗ’ದಿಂದ ಆಯ್ದುದು)

ಹೊಸತನವೆ ಬಾಳು ; ಹಳಸಿಕೆಯೆಲ್ಲ ಸಾವು ಬಿಡು
ರಸವು ನವನವತೆಯಿಂದನುದಿನವು ಹೊಮ್ಮಿ
ಹಸನೊಂದು ನುಡಿಯಲ್ಲಿ ನಡೆಯಲ್ಲಿ ನೋಟದಲಿ
ಪಸರುತಿರೆ ಬಾಳ್ ಚೆಲುವು—ಮಂಕುತಿಮ್ಮ

ಮೆರೆಯುವುವು ನೂರಾರು ಮೈಮೆಗಳು ಸೃಷ್ಟಿಯಲಿ
ಧರಣಿಯವು, ಗಗನದವು, ಮನುಜಯತ್ನದವು
ಪಿರಿದೆಂಬೆನವುಗಳೊಳು ಧರುಮವರಿತನೊಲುಮೆ
ಅರಿವುಳ್ಳೊಲುಮೆ ಪಿರಿದು—ಮಂಕುತಿಮ್ಮ

ಚೆಲುವು ನಗುವುಗಳ ಕಂಡವನ ಕಣ್ಣರಳುವುದು
ಅಳುವು ನೋವುಗಳ ಕಂಡೊದ್ದೆಯಾಗುವುದು
ಇಳೆಯ ದನಿಗವನೆದೆಯೊಳೊಪ್ಪು ಮರುದನಿಯಹುದು
ಶಿಲೆಯಲ್ಲ ಯೋಗಿಯೆದೆ—ಮಂಕುತಿಮ್ಮ

ಸ್ವಸ್ಥತೆಯು ಕದಲಿಸದ ಜಗದಾಸ್ಥೆಯೊಂದು ಗುಣ
ಆಸ್ಥೆಯನು ಕುಂದಿಸದ ತಾಟಸ್ಥ್ಯವೊಂದು
ನಷ್ಟಲಾಭಂಗಳಲಿ ಲಘುಹಾಸ್ಯನಯವೊಂದು
ಸ್ವಸ್ತಿಗಾವಶ್ಯಕವೊ—ಮಂಕುತಿಮ್ಮ

ಓಲೆಕಾರನು ನೀನು

ಸ್ಮಿತವಿರಲಿ ವದನದಲಿ, ಕಿವಿಗೆ ಕೇಳಿಸದಿರಲಿ
ಹಿತವಿರಲಿ ವಚನದಲಿ, ಋತವ ಬಿಡದಿರಲಿ
ಮಿತವಿರಲಿ ಮನಸಿನುದ್ವೇಗದಲಿ, ಭೋಗದಲಿ
ಅತಿ ಬೇಡವೆಲ್ಲಿಯುಂ—ಮಂಕುತಿಮ್ಮ

ಕಡಲ್ಗಳೊಂದಾದೊಡಂ, ಪೊಡವಿ ಹಬೆಯಾದೊಡಂ
ಬಿಡದಿರೊಳನೆಮ್ಮದಿಯ, ಬಿಡು ಗಾಬರಿಕೆಯ
ಕಡಲ ನೆರೆ ತಗ್ಗುವುದು, ಪೊಡವಿ ಧೂಳಿಳಿಯುವುದು
ಗಡುವಿರುವುದೆಲ್ಲಕಂ—ಮಂಕುತಿಮ್ಮ

ನಲಿಸುವೊಲಿಸುವ, ಕೆಣಕಿ ಕಾಡಿಸುವ, ಮುಳಿಯಿಸುವ
ಕೆಳೆ ನಂಟು ಹಗೆ ಕಲಹ ಕುಹಕದೋಲೆಗಳಂ
ಹಲಬರಿಗೆ ಹಂಚಿ ಬಾರೆಂದು ವಿಧಿ ನೇಮಿಸಿಹ
ಇಳೆಯಂಚೆಯಾಳು ನೀಂ—ಮಂಕುತಿಮ್ಮ

ಓಲೆಕಾರನಿಗೇಕೆ ಬರೆದ ಸುದ್ದಿಯ ಚಿಂತೆ?
ಓಲೆಗಳನವರವರಿಗೈದಿಸಿರೆ ಸಾಕು
ಸಾಲಗಳೊ, ಶೂಲಗಳೊ, ನೋವುಗಳೊ, ನಗುವುಗಳೊ
ಕಾಲೋಟವವನೂಟ—ಮಂಕುತಿಮ್ಮ

ನಗು, ಮನದಿ ಲೋಗರ ವಿಕಾರಂಗಳನು ನೋಡಿ
ಬಿಗಿ, ತುಟಿಯ ದುಡಿವಂದು ನೋವ ಪಡುವಂದು
ಪೊಗು, ವಿಶ್ವಜೀವನದ ಜೀವಾಂತರಂಗದಲಿ
ನಗುನಗುತ ಬಾಳ್, ತೆರಳು—ಮಂಕುತಿಮ್ಮ

ಪಕ್ಷಿಮಾರ್ಗ

ಎಡರು ತೊಡರೆನಲೇಕೆ? ಬಿಡಿಸು ಮತಿಗಾದನಿತ
ದುಡಿ ಕೈಯಿನಾದನಿತು; ಪಡು ಬಂದ ಪಾಡು
ಬಿಡು ಮಿಕ್ಕುದನು ವಿಧಿಗೆ; ಬಿಡದಿರುಪಶಾಂತಿಯನು
ಬಿಡುಗಡೆಗೆ ದಾರಿಯದು—ಮಂಕುತಿಮ್ಮ

ಹಕ್ಕಿ ಮುನ್ನರಿಯುವುದೆ ತನ್ನ ಪಯಣದ ತೆರನ?
ಇಕ್ಕುವರದಾರದನು ಕರೆದು ತಿರುಪೆಯನು?
ರೆಕ್ಕೆ ಪೋದಂತಲೆದು, ಸಿಕ್ಕಿದುದನುಣ್ಣುವುದು
ತಕ್ಕುದಾ ವ್ರತ ನಿನಗೆ—ಮಂಕುತಿಮ್ಮ

ಏನೋ ಕಣ್ಣನು ಪಿಡಿವುದೇನೋ ದಿಗಿಲಾಗಿಪುದು
ಏನನೋ ನೆನೆದು ಸರ್ರೆಂದು ಹಾರುವುದು
ಬಾನೊಳಾಡುವ ಹಕ್ಕಿಗಿದುವೆ ನಿತ್ಯಾನುಭವ
ನೀನದನು ಮೀರಿದೆಯ?—ಮಂಕುತಿಮ್ಮ

ಆವ ಕಡೆ ಹಾರುವುದೊ! ಆವ ಕಡೆ ತಿರುಗುವುದೊ!
ಆವಾಗಳಾವಕಡೆಗೆರಗುವುದೊ ಹಕ್ಕಿ!
ನಾವುಮಂತೆಯೆ ಸೃಷ್ಟಿಕೃತ್ರಿಮದ ಕೈಗೊಂಬೆ
ಜೀವಮಾರ್ಗವನೂಹ್ಯ—ಮಂಕುತಿಮ್ಮ

ಮಾವುಸಸಿಯನು ನೆಟ್ಟು ಬೇವುಣಲು ಸಿದ್ಧನಿರು
ಭೂವಿಷಯದಿಂದ ರಸ ಮಾರ್ಪಡುವುದುಂಟು
ಆ ವಿವರ ನಿನಗೇಕೆ? ತೋಟದೊಡೆಯನಿಗಿರಲಿ
ಸೇವಕನು ನೀನಲ್ತೆ?—ಮಂಕುತಿಮ್ಮ

—ಡಿ. ವಿ. ಗುಂಡಪ್ಪ

ಹಂಬಲು

ಆವಿನದು ನೊರೆಹಾಲನೊಲ್ಲೆನು,
ದೇವಲೋಕದ ಸುಧೆಯನೊಲ್ಲೆನು,
ದೇವಿ, ನಿನ್ನಯ ನಾಮದನುಪಮ ರುಚಿಯನರಿತಿಹೆನು !
ಪಾವನೆಯೆ, ನಿನ್ನಂಘ್ರಿಕಮಲದ
ಸೇವೆ ದೊರೆತಿಹುದೆನಗೆ, ತಾಯೇ,
ಶ್ರೀವರನ ದಯೆಯಿಂದೆ! ಮತ್ತಿನ್ನೇನು ಬೇಡೆನಗೆ !

ಬರಲಿ ಬ್ರಾಹ್ಮಣರಲ್ಲಿ ಜನ್ಮವು,
ಬರಲಿ ಮಾದಿಗರಲ್ಲಿ ಇಲ್ಲವೆ,
ಇರದು ದುಗುಡವು ! ತಾಯೆ, ನಿನ್ನುದರದಲಿ ಜನಿಸುವುದೇ
ಪರಮಭಾಗ್ಯವದೆಂದು ತಿಳಿಯೆನೆ ?
ಮರೆಯದಲಿ ಪ್ರತಿಜನ್ಮದಲಿ ಶ್ರೀ-
ಧರನು ನಿನ್ನುದರದಲಿ ಹುಟ್ಟಿಸಲೆನ್ನನನುನಯದಿ !

ಇರಲೆನಗೆ ಕರಿಕನ್ನವುಣ್ಣಲು,
ಬರಿಯ ನೆಲವಿರಲೆನಗೆ ಮಲಗಲು,
ಹರುಕು ಬಟ್ಟೆಗಳೆನ್ನ ಮೈಯನು ಮುಚ್ಚಲಿರಲೆನಗೆ
ಮುರುಕು ಗುಡಿಸಲು ವಾಸಕಿರಲೈ !
ಸಿರಿಯರಸ, ಮತ್ತೇನನೊಲ್ಲೆನು !
ಭರತಭೂಮಿಯೊಳಿರುವುದೇ ಎನಗೊಂದು ಸುಖವಿಹುದು !

ಧನವ ಬೇಡೆನು, ನಾನು, ದೇವಾ,
ನಿನಗೆ ಸನ್ಮಾನವನು ವಿದ್ವ-
ಜ್ಜನರ ಸಭೆಯೊಳು ಬೇಡೆನ್ನೈ, ನಾ ಬೇಡೆ ಕೀರ್ತಿಯನು !
ಕನಸುನೆನಸಿನಲಿರಲಿ, ಕರುಣಾ-
ಘನನೆ, ಎನ್ನಯ ಜನ್ಮಭೂಮಿಯ
ನೆನಹು ! ಸತತವು ಸವೆಯಲೀ ತನುವವಳ ಸೇವೆಯಲಿ !

—ಸಾಲಿ ರಾಮಚಂದ್ರರಾಯರು

ಚೆಲುವ ದೇವಿ

ವಿಂಧ್ಯ ಪರ್ವತದ ಮಲೆಗಳ ಮಾಲೆ ಸುತ್ತ
ಸಾಗರದ ಅಲೆಯ ಮಾಲೆಯ ತೆರದೆ ಬಳೆದು,
ಚಂದದಲಿ ನೋಟವೋಡುವವರೆಗೆ ಹರಿದು,
ಆಗಸದ ಅಂಚನೆಲ್ಲೆಡೆಯು ಮುಟ್ಟಿಹುದು ;
ಬಣ್ಣ ಬಣ್ಣದ ಎಲೆಯ ಸೊಗಸಿನಲಿ ವನವು
ಕಣ್ಣ ತಣಿಸುತಲಿಹುದು ; ಸೋಲುತಿದೆ ಮನವು.

ನೇಸರಿಳಿದಿಹನು ಬಾಂದಳದ ಪಡುಗಡೆಗೆ,
ಪುಟವಿಡದ ಹೊಂದಟ್ಟಿಯೊಲು ತೊಳಗುತಿಹನು ;
ಮಿಾಸಲಾಯ್ತೆಲ್ಲ ಜಸವಿಲ್ಲೆಂದು ಕಣ್ಣ
ಮಿಟುಕಿಸದೆ ನಭವು ಅವನನೆ ನೋಡುತಿಹುದು ;
ಕಟ್ಟಕಡೆಯಾ ಗಿರಿಯ ಆತುಮದ ಕೂಗು
ಮುಟ್ಟಿತವನನು ; ಅದನು ಸೇರುವನು ಬೇಗ.

ಸೇರುವನು ; ಸೇರಿ ಮರೆಯುವನು ಇನಿತರೊಳೆ ;
ಆ ಮುನ್ನ ಜಗವ ಬೆಳಕಿಂದ ತುಂಬಿಹನು ;
ನೂರು ವರ್ಣದ ಎಲೆಯ ಸೊಬಗೆಸೆವ ವನಕೆ
ಪ್ರೇಮಪೂರಿತ ಹಾಸವನು ಸೂಸುತಿಹನು.
ಕಣ್ಣಿನಾಸೆಯು ತೀವಿ ಬಗೆಯು ಮಗಮಗಿಸಿ
ಎನ್ನೊಳಗ ಸೋಕಿಹುದು ಸಂಜೆಯಾ ಸೊಗಸು.

ಇಲ್ಲಿ ಮಲೆಗಳ ನಡುವೆ ಮಡುಗಳನು ಕೊರೆದು
ತಿಳಿಯ ನೀಲದ ನೀರ ಹಿರಿದು ಹೊಳೆಯೊಂದು,
ಕಲ್ಲು ಮಣ್ಣಿನ ಹಾಸಿನಗಲದಲಿ ಹರಹಿ,
ಚಲಿಸುವುದೆ ತಿಳಿಯದೊಲು ಮೆಲುಮೆಲನೆ ಉರುಳಿ
ಹಿಂದಾದುದನು ನೆನೆವ ಮನವಿಂದು ನೆನೆದು
ಮುಂದರಿವ ತೆರದೆ ಮುಂದರಿಯುತಿದೆ ಜನಿದು.

ಮೆಲುಗಾಳಿ, ಪೂರುವದ ಗಿರಿಗಳೆಡೆಯಿಂದ
   ಹರಿತಂದು, ಎದುರಿನಲಿ ಹರಿದು ಮುಂಬರಿವ
ತಿಳಿವೆಳಗ ಕಿರಣ ಸರಣಿಯ ಭರದೊಳಪ್ಪಿ,
   ಸರಸದಲಿ ಅದರೊಡನೆ ನಲಿದಾಡುತಿಹುದು.
ಒರ್ವ ದೇವಿಯು ಅವಳಿಮಕ್ಕಳಿವರೊಲವ
   ಸರ್ವವನು ನೋಡಿ ಮೆಚ್ಚಿತು ತಳೆದು ನಲಿವ

ನೀರು ನೆಲ ಮಲೆಸಾಲು ಹೊಂಬಿಸಿಲು ಗಾಳಿ
   ವನ ನಭಗಳನುಸರಣೆಯಲಿ ಸೇರಿ ಒಂದು
ಧೋರಣೆಯೊಳೀ ಸಂಜೆಗಿತ್ತ ಮೆರುಗಿದಕೆ
   ಧನದ ಕನಕದ ಹೊರೆಯು ಚೆಂದ ಎಣೆಯಹುದೆ?
ತಾಯಿ ಪ್ರಕೃತಿಯ ಮೊಗದವೀಕಾಂತಿ ಶಾಂತಿ;
ಈಯಂದ ಚಂದ; ಈ ಪ್ರೇಮವಿಭ್ರಾಂತಿ

ಕಣ್ಣೀಗ ಕಾಣುತಿಹ ಚೆಲುವ ನೋಟಕ್ಕೆ
   ಮಿಗಿಲಾದ ಚೆಲುವು ಇರಬಹುದೆ ಲೋಕದಲಿ?
ಇನ್ನಿದಕೆ ಮೆರುಗಿಡುವ ಕಲೆ ಒಂದು ಉಂಟೆ?
   ಸೊಗಸು ಇನ್ನಿನಿಸಾದರೂ ಮುಂಚಬಹುದೆ?
ಎಂದು ಮನ ಆನಂದದಲಿ ಕೇಳುತಿರಲು
ಮುಂದೆ ಕಂಡುದು ಎಲ್ಲ ಚೆಲುವಿಕೆಯ ಹುರುಳು.

ನಗೆಮೊಗದ ತಿಳಿಗಣ್ಣ ನಳಿದೋಳ ಚೆಲುವೆ—
   ಬಳಿಯೂರ ಬಾಳ ಬೆಳಕಾಗಿರ್ಪಳಹುದು—
ಚಿಗರಿಯಂದದ ಹಗುರವಾದ ನಡೆಯಿಂದ
   ಹೊಳೆಗೆ ಕೊಡ ಹಿಡಿದು ತಾನಿಳಿತಂದಳಾಗ;
ಮುಟ್ಟಿದುದು ಮುಗಿಲನಾಕ್ಷಣ ಚೆಲುವ ಶಿಖರ;
ಸೃಷ್ಟಿಯಂದಕೆ ಹೆಣ್ಣಿನಂದ ಮಣಿಮುಕುರ.

ಮಗುವಾಗಿ ತಾಯ್ತಂದೆವಿರ ಮನವ ನಲಿಸಿ,
   ಸತಿಯಾಗಿ ಪತಿಯ ಹೃದಯದ ಸುಖವ ಸಲಿಸಿ,
ಜಗದಂಬೆಯುವತಾರದಂತೆ ಕಳಕಳಿಸಿ
   ಸುತರ ಹಡೆದೆತ್ತಿ ಮುದ್ದಾಡಿ ಸಲೆ ಬೆಳೆಸಿ,
ಲಲನೆ ಅಂದುದ್ದೇಶಿಸದೆ ಕಣ್ಣ ತಣಿಸಿ
ಸುಳಿದಳೆದುರಿಗೆ ನನ್ನ ಆತುಮವ ಮಣಿಸಿ.

ಹೊರಗದಾವುದೊ ಚೆಲುವ ಮುಗುಳರಳುತಿಹುದು ;
ಒಳಗರಳುತಿಹುದಂತೆ ಅದನರಿವ ಶಕ್ತಿ ;
ನಿರುತವೂ ನಡೆವವೀ ಎರಡು ವಿನ್ಯಾಸ,
ಬೆಳೆವುದಿಂತನವರತ ಚೆಲುವಿನ ವಿಕಾಸ ;
ಅಂದಂದು ಕಾಂಬ ಚೆಲು ಹಿರಿದೆನಲು ಒಪ್ಪು ;
ಮುಂದುವರಿಯದು ಇನ್ನಿದೆನಲು ಅದು ತಪ್ಪು.

ಅದು ಮೊದಲು ಆಗಾಗ ಒಮ್ಮೊಮ್ಮೆ ನಾನು
ಅಂದಿನಂದವನು ನೆನೆವೆನು ಮನದಿ ಮರಳಿ ;
ಕದಲದಿಹುದಾ ಚೆಲುವೆ ಹೊಳೆಗಿಳಿದು ಬಂದ
ಒಂದು ನಿಮಿಷದ ಚಿತ್ರ ಎಲ್ಲವನು ಮರೆಸಿ
ಕೊಳೆ ಸೋಕದೊಂದು ಮೆಚ್ಚುಗೆ ಉಕ್ಕಿ ಹರಿದು
ಒಳಗ ಬೆಳಗುವುದು ಬಣ್ಣಿಪ ನುಡಿಯು ಜರೆದು.

ಮನದ ಬಾಂದಳಕಿಂಥ ನೆನವು ನಕ್ಷತ್ರ;
ತಾನೊಂದು ಬೆಳಗುವುದು ದೆಸೆಯೊಂದನಲ್ಲ.
ಮನುಜನನು ಗೆಲುವ ಚೆಲುವಿನ ತತ್ವ ಜಗದ
ಮಾನವತೆಯೆಂದೆನಗೆ ಕಲಿಸಿತಾ ಸಂಜೆ ;
ಮರೆಯ ಪರಮಾತುಮದ ಲೀಲೆಯೊಳಸಂಚು
ತೆರೆಯ ಮುಂದೆಸೆವೆಲ್ಲ ಚೆಲುವ ಸೆಳೆಮಿಂಚು.

—ಮಾಸ್ತಿ ವೆಂಕಟೇಶ ಅಯ್ಯಂಗಾರ್
(ಶ್ರೀನಿವಾಸ)

ಕುಣಿಯೋಣು ಬಾರs !

(ಒಂದು ಸಲ್ವಾಡು)

ಕುಣಿಯೋಣು ಬಾರs
ಕುಣಿಯೋಣು ಬಾ || ಪಲ್ಲ ||

೧

ಆ ಕಾಗಿ
ಯಾಕಾಗಿ
ಕುಣಿಯೋದು ಬೇಕಾಗಿ
ಇಲ್ದ ಬಣ್ಣದ ಸೋಗಿ ಕುಣಿ . . .
ಹಿಗ್ಗು ಹಾಕಿತು ಕ್ಯಾಕಿ
ಇರಲಾರೆನೇಕಾಕಿ
ಬಾ, ಬಾರs ನನ್ನಾಕಿ ಕುಣಿ . . .

೨

ಕೂಡೀಕಿ
ಹೂಡೀಕಿ
ಮುಪ್ಪತ್ತ ದೂಡೀಕಿ
ಹಣ ಬಾಕಿ ಹೆಣ ಬಾಕಿ ಕುಣಿ . . .
ಏಸೊಂದು ಎಣಿಸ್ಯಾಟ
ಕಾಸಿನ ಕುಣಿಸ್ಯಾಟ
ಸಾಕಾತು ಸೆಣಿಸ್ಯಾಟ ಕುಣಿ . . .

೩

ಕೀಸರು
ಬಾಸರು
ಇಟ್ಟರು ನಿಟ್ಟುಸುರು
ಕುಣಿತಾಸ್ಯ ಆಸರು ಕುಣಿ . . .
ಹರಿದರು ನೆತ್ತರು
ಉಳ್ಳವರು ಸತ್ತರು
ಒಳ್ಳೆವರು ಅತ್ತರು ಕುಣಿ . . .

೪

ತೀರದ
ತೋರದ
ಹಾಳು ಸಂಸಾರ್ ಅದ
ಮಿಾರಿದ ಭಾರ್ ಅದ ಕುಣಿ . . .
ಬಿಸಿ ದುಃಖದರಿವ್ಯಾಕ
ಹುಸಿ ಸುಖದ ಪರಿವ್ಯಾಕ
ನಕ್ಕ್ಯಾಸೂನೂ ಬೇಕ ಕುಣಿ . . .

೫

ತಿಣಿ ತಿಣಿಕಿ
ಇಣಕಿಣಿಕಿ
ಒಳ ಹೊರಗ ಹಣಿಹಣಿಕಿ
ಸಾಕಾತು ಸುಳ್ಳೆಣಿಕಿ ಕುಣಿ . . .
ಈ ಬದುಕು ಬರಿ ಭ್ರಮಿ
ತಿಕಿದಿಮಿ ಗಿಮಿಗಿಮಿ
ಹಾಂಗೊಮ್ಮೆ ಹೀಂಗೊಮ್ಮೆ ! ಕುಣಿ . . .

೬

ಅಂತಿರಲಿ
ಇಂತಿರಲಿ
ನಿಂತಲ್ಲಿ ನಿಂತಿರಲಿ
ಸಂತೆಯು ಚಿಂತಿರಲಿ ಕುಣಿ . . .
ಕಣ್ ಒಳಗ ಹೊರಳೀಸಿ
ಎದೆಮುಗುಳನರಳಿಸಿ
ಹೂನೀರನುರುಳಿಸಿ, ಕುಣಿ . . .

೭

ನಾನಲ್ಲ
   ನೀನಲ್ಲ
      ನನ್ನಲ್ಲಿ ನೀನಿಲ್ಲ
         ಸಾವಿನ ನೋವಿಲ್ಲ   ಕುಣಿ . . .
ಇದ್ದದ್ದು ಮರೆಯೋಣ
   ಇಲ್ಲದ್ದು ತೆರೆಯೋಣ
      ಹಾಲ್ಜೇನು ಸುರಿಯೋಣ   ಕುಣಿ . . .

೮

ಕೋಲ್ಯಾಕ
   ಸಾಲ್ಯಾಕ
      ಕಲಕಿಯ ಕಾಲ್ಯಾಕ
         ಹಿಗ್ಗಿಲೆ ನಡಿಸಾಕ   ಕುಣಿ . . .
ಘಾಳೀನು ತೀಡ್ಯಾವು
   ನಮ್ಹಂಗ ಆಡ್ಯಾವು
      ಈ ಕುಣಿತ ಬೇಡ್ಯಾವು   ಕುಣಿ . . .

೯

ತಾಳ್ಯಾಕ
   ತಂತ್ಯಾಕ
      ರಾಗದ ಚಿಂತ್ಯಾಕ
         ಹೆಜ್ಜ್ಯಾಕ ಗೆಜ್ಜ್ಯಾಕ   ಕುಣಿ . . .
ಕುಲುಕಿಸಿ ಕೈ ಕೈ
   ಮಲಕಿಸಿ ಮೈ ಮೈ
      ಥಕ ಥಕ ಥೈ ಥೈ   ಕುಣಿ . . .

೧೦

ಸೆರಗಿಲ್ದ
   ಬೆರಗಿಲ್ದ
      ಹೆದರೀಕಿ ಹೊರಗಿಲ್ದ
         ಮರಗಿಲ್ದ ಕೊರಗಿಲ್ದ   ಕುಣಿ . . .
ನಾಚೀಗಿ—ಗೀಚೀಗಿ
   ಕಳೆದೊಗೆ ದಾಚೀಗಿ
      ಬೀಸಾಗಿ ಈಚೀಗಿ   ಕುಣಿ . . .

೧೧

ಕಾಗುಣಿತ
ಬರಿಗಣಿತ
ಯಾಕ ಡೊಂಬರ ಮಣಿತ
ಸುಗ್ಗಿಯು ಸಿರಿಕುಣಿತ ಕುಣಿ . . .
ತರಗೆಲಿ ಜಿಗಿಧಾಂಗ
ಚಿಗುರೆಲಿ ಚಿಗಿಧಾಂಗ
ನನಿಕೊನೆ ಮುಗಿಧಾಂಗ ಕುಣಿ . . .

೧೨

ಚಕ ಚಕ
ಚಂಚಲ
ಮಿಂಚಿನ ಗೊಂಚಲ
ಚಕಮಕಿ ಚಲಮಲ ಕುಣಿ . . .
ಹೊಂಗ್ಯಾದಿಗಿ ಹೊಡಿ
ಮಿಡಿನಾಗರ ಹೆಡಿ
ಹಾಂಗೊಮ್ಮೆ ತೂಗಾಡಿ ಕುಣಿ . . .

೧೩

ಕುಡಿಗಣ್ಣು
ನಗೆಗಣ್ಣು
ಚುಚ್ಚೋಣು ಬಿಚ್ಚೋಣು
ತೇಲ್ಗಣ್ಣು ಮುಚ್ಚೋಣು ಕುಣಿ . . .
ಕಣ ಕಣ್ಣ ಹೆಣಿಯೋಣು
ಸೆಳೆದತ್ತ ಮಣಿಯೋಣು
ಮೈಮರಿಯ ದಣಿಯೋಣು ಕುಣಿ . . .

೧೪

ಚಿಗರ್‍ಯಾಗಿ
ತಿಗರ್‍ಯಾಗಿ
ನಿದ್ದಿಯು ಭಗರ್‍ಯಾಗಿ
ಗಾಳೀಗು ಹಗರಾಗಿ ಕುಣಿ . . .
ಕೈ ಮೈ ಬೀಸಾಡಿ
ಇಳಿಗೂದಲೀಸಾಡಿ
ಬೆವರ್ಹನಿ ಸೂಸಾಡಿ ಕುಣಿ . .

೧೫

ಗರಿಗರಿ
ಗಿರಿಗಿರಿ
ಹಿಗ್ಗಿಗ್ಗಿ ಹಿರಿಹಿರಿ
ಸೈಸೈ ಸರಿಸರಿ ಕುಣಿ . . .
ಗುಡ್ಡಾ ತಲೆದೂಗಲಿ
ಹೊಳೆ ಹಳ್ಳಾ ನೂಗಲಿ
ದರಿಕೊಳ್ಳಾ ಕೂಗಲಿ ಕುಣಿ . . .

೧೬

ನೆಲದೊಡಲು
ಕುಣಿಯಲು
ಕುಣಿಕುಣಿದಿತು ಕಡಲು
ಮಿಡಿದಿತು ಸಿಡಿ ಸಿಡಿಲು ಕುಣಿ . . .
ಹಗಲಿರಳ ತಾಳಕ್ಕ
ಮುಗಿಯದ ಕಾಳಕ್ಕ
ಜನುಮಗಳ ಮ್ಯಾಳಕ್ಕ ಕುಣಿ . . .

೧೭

ಹುಲ್ಲೆಲಾ
ಸ್ಥಿರಜಲಾ
ಚಿಕ್ಕೆಲ್ಲಾ ಮುಗಿಲೆಲ್ಲಾ
ಕುಣಿತಿಲ್ದ ಜಗ ಇಲ್ಲಾ ಕುಣಿ . . .
ಕುಣಿತಕ್ಕ ಇತಿ ಇಲ್ಲ
ಕುಣಿತಕ್ಕ ಮಿತಿ ಇಲ್ಲ
ಬೇರೊಂದು ಗತಿ ಇಲ್ಲ ಕುಣಿ . . .

೧೮

ಅಂಗಲು
ಅಂಗಲು
ಚಿಕಿಚಿಕ್ಕಿ ತಿಂಗಳು
ಉಸಿರಾಸೆ ಹಿಂಗಲು ಕುಣಿ . . .
ನೆಲ ಮುಗಿಲನಪ್ಪಿತು
ಚೆಲುವಾಗಿ ಒಪ್ಪಿತು
ಸಾವೊಮ್ಮೆ ತಪ್ಪಿತು ಕುಣಿ . . .

೧೯

ಆ ಕ್ಷೀರ
ಸಾಗರ-
ದಾನಂದದಾಗರ
ತೆರಿ ತೆರಿ ತೆರದರ ಕುಣಿ . . .
ಹದಿನಾಲ್ಕು ಲೋಕಕ್ಕ
ಚಿಮ್ಮಲಿ ಈ ಸುಖ
ಹಿಗ್ಗಲಿ ಸಿರಿಮುಖ ಕುಣಿ . . .

—ದ. ರಾ. ಬೇಂದ್ರೆ
(ಅಂಬಿಕಾತನಯದತ್ತ)

ಹೊಸ ದಿನ

೧

ನಿನ್ನೆಗಳನು ನೆಲಕೆ ಮೆಟ್ಟಿ
ನಾಳೆಗಳನು ತಲೆಗೆ ಕಟ್ಟಿ
ಕುಣಿದು ಹಾಡಿ ಕೈಯ ತಟ್ಟಿ
ಬಂದಿತಿಂದು ಹೊಸ ದಿನ
ತಂದಿದೆ ಸುಖಜೀವನ!

೨

ಅದೇ ಬಾನು, ಅದೇ ಭಾನು,
ಅದೇ ನಾನು, ಅದೇ ನೀನು,
ಅದೇ ನೆಲ—ಅದೇ ಕೆಲ-
ಆದರು ಇದು ಹೊಸ ದಿನ
ಇದರ ತಿರುಳೆ ಹೊಸತನ!

೩

ಋತುರಾಜನ ಕೆಳೆಯ ಮಾಡಿ
ಹಳತೆಲ್ಲವ ಹೋಳಿಯಾಡಿ
ಹೊಸ ನಿರ್ಮಿತಿಗೆಡೆಯ ನೀಡಿ-
ನಗುತಿದೆ ಈ ಹೊಸ ದಿನ
ನವಯುಗ ಸಂವಾಹನ!

೪

ಭಾವದ ಸಂದೃಷ್ಟಿಯಿರಿಸಿ
ಜೀವನದನುಭವದಿ ಗುಣಿಸಿ
ಕೇವಣಿಸಿದ ಪಂಚಾಂಗವ
ಹಿಡಿದಿದೆ ಈ ಹೊಸ ದಿನ
ಸತ್ಯಯುಗದ ಚಾರಣ

೫

ಸವಿಯೆಂದೇ ನಂಜನುಂಡು
ಸವೆದುವು ಹಳದಿನದ ಹಿಂಡು ;
ಕಹಿಯಲ್ಲಿಯುಃ ಸೊದೆಯ ಕಂಡು
ತಿರೆಗೆ ಸುಖದ ಬಾಗಿಣ
ತಂದಿದೆ ಈ ಹೊಸ ದಿನ !

೬

ನಿನ್ನೆಗಳನು ನೆಲಕೆ ಮೆಟ್ಟಿ
ನಾಳೆಗಳನು ತಲೆಗೆ ಕಟ್ಟಿ
ಕುಣಿದು ಹಾಡಿ ಕೈಯ ತಟ್ಟಿ
ಬಂದಿತಿಂದು ಹೊಸ ದಿನ,
ತಂದಿದೆ ಸುಖಜೀವನ !

—ಕೃಷ್ಣಶರ್ಮ ಬೆಟಗೇರಿ
(ಆನಂದಕಂದ)

ಸುಗ್ಗಿ ಬರುತಿದೆ

೧

ಅಡಿಯ ಗೆಜ್ಜೆ ನಡುಗೆ, ಹೆಜ್ಜೆಯಿಡುತ ಸುಗ್ಗಿ ಬರುತಿದೆ!
ಸುಗ್ಗಿ ಬರೆ ಹಿಗ್ಗಿ ತಿರೆ ಸಗ್ಗ ಸೊಗವ ತರುತಿದೆ!
ಕಣಿವೆಯಿಳಿದು ತೆಮರನೇರಿ,
ತರುಗಳಲ್ಲಿ ತಳಿರ ಹೇರಿ
ಹೊಸತು ಜೀವಕಳೆಯ ಬೀರಿ
ಸುಗ್ಗಿ ಮೂಡುತಿರುವುದು!
ಬನದ ಬಿಸದದಿನಿದು ನಿನದ ಮನದೊಳಾಡುತಿರುವುದು!

೨

ಬಂಡನುಂಡು ದುಂಬಿವಿಂಡು ಹಾಡುತಿಹವು ಹಾರುತ;
ಮತ್ತ ಮಧುಮಾಸವಿದು ಬನ್ನಿರೆಂದು ಸಾರುತ.
ಜಾರುತಿಹುದು ಮಾಗಿ ಚಳಿ,
ಕುಸುಮಿಸಿರುವ ಲತೆಗಳಲಿ
ಮೊರೆಯುತಿಹವು ಸೊಕ್ಕಿದಳಿ
ಮುಕ್ತಜೀವರಂದದಿ!
ಉಲಿಯೆ ಪಿಕ, ಗಳಪೆ ಶುಕ, ಸುಗ್ಗಿಬಂದಿತಂದದಿ!

೩

ಮಾಮರಂಗಳಲಿ ವಿಹಂಗ ತತಿಯ ನಿಸ್ವನಂಗಳಿಂ,
ತಳಿರ ಸೊಂಪಸಲರ ಜೊಂಪನಾಂತ ಬನ ಬನಂಗಳಿಂ,
ಸಲಿವ ಪಚ್ಚೆಯುಡೆಯನುಟ್ಟು,
ಅರಳಿದರಳುಗಳನು ತೊಟ್ಟು
ಹಿಮದ ಮಣಿಯ ಮಾಲೆಯಿಟ್ಟು
ತಣಿದು ಸೋಲೆ ಕಣ್ಮನಂ
ಕರೆವಳೋವಿ ಬನದ ದೇವಿ ತನ್ನ ಸುಗ್ಗಿಯಾಣ್ಮನಂ!

೪

ಹಾರಿ ಮೊರೆವ ಜಾರಿ ಹರಿವ ತೊರೆಯ ತಂಪು ದಡದೊಳು
ಮೇಲೆ ಭಾನು ತೇಲೆ, ನಾನು ಕುಳಿತು ಮರದ ಬುಡದೊಳು
ತಿರೆಯ ಸಿರಿಯ ನೋಡುತಿರುವೆ;
ಕುರಿತು ಹಾಡ ಹಾಡುತಿರುವೆ;
ಸೊಬಗಿನೊಡನೆ ಕೂಡುತಿರುವೆ
ಕರಗಿ ಮುಳುಗಿ ತೇಲುತ
ತೊರೆದ ಗಂಡನೆದುರುಗೊಂಡ ಕೋಮಲೆಯನು ಹೋಲುತ!

೫

ತುರುಗಳೆಲ್ಲ ಮೇಯೆ, ಗೊಲ್ಲ ಬಸಿರಿಮರದ ನೆಳಲಲಿ
ಮಲಗಿಸಿಹನು ಮಧುವನವನು ಮುದವನುಲಿವ ಕೊಳಲಲಿ!
ನಿಂತು, ಮೇವ ಮರೆತು ಬಿಟ್ಟು,
ಕಿವಿಯನೆರಡ ಸೆಟ್ಟಗಿಟ್ಟು,
ಗೊಲ್ಲನೆಡೆಗೆ ದಿಟ್ಟಿಯಿಟ್ಟು
ಬರೆದ ಚಿತ್ರದಂದದಿ
ಗವಿಗಳೆಲ್ಲ ಸವಿಯ ಸೊಲ್ಲನಾಲಿಸಿಹವು ಚಂದದಿ!

೬

ಗಿರಿಗಳಿರಾ, ತೊರೆಗಳಿರಾ, ಎಲೆ ವಿಹಂಗಮಗಳಿರಾ,
ತರುಗಳಿರಾ, ಬನಗಳಿರಾ, ಮಗಮಗಿಪ ಸುಮಗಳಿರಾ,
ಸೊಬಗೆ ನನ್ನಿ ಎಂದು ಸಾರಿ
ನನ್ನಿಯೆ ಸೊಬಗೆಂದು ತೋರಿ;
ಸೊಗದ ಸೊದೆಯ ತಿರೆಗೆ ಬೀರಿ,
ಒಲ್ಮೆ, ಸೊಬಗು, ಸೊಗದಲಿ
ಪರಮಪುರುಷನಮಲ ಹರುಷವಿಸುದ ಸಾರಿ ಜಗದಲಿ!

೭

ಮಧುವೆ ಬಾರ! ಮುದವ ತಾರ! ನೀನೆ ದೇವದೂತನು!
ಪರದ ಚಿಂತೆ ಮರೆಯದಂತೆ ಕಳುಹುವನು ವಿಧಾತನು!
ಬುವಿಯ ಸಿಂಗರಿಸುತ ಬಾರ!
ಪರದ ಬೆಳಕನಿಳೆಗೆ ತಾರ!
ಸೊಬಗೆ ಶಿವನು ಎಂದು ಸಾರ!
ಬಾರ ಶಕ್ತಿದಾಯಕ!
ಹಳೆತ ಕೂಡಿ ಹೊಸತು ಮಾಡಿ ಬಾರೆಲೆ ಋತುನಾಯಕ!

—ಕೆ. ವಿ. ಪುಟ್ಟಪ್ಪ (ಕುವೆಂಪು)

ಕಸ್ಮೈ ದೇವಾಯ ?

೧

ಅಂದಿನಾ ದೇವರುಗಳೆಲ್ಲ ಮಡಿದುರುಳಿಹರು
ಇಂದ್ರ ವರುಣರು ಧನದ ಮಿತ್ರ ಪೂಷಣರು—||
ಸಂದಿದ್ದ ದೈವತ್ವದಗ್ಗಳಿಕೆ ಹೋಗಿಹುದು
ಅಂದಿನವರುನ್ನತಿಯ ಕಳಶ ಕೂಲಿಹುದು

ಮಾನವರ ಸುಪ್ರಖರ ಮನದ ಮೊನೆಯುಲುಗಿನ
ಘಾತದಲಿ ಕಡುನೊಂದು ಸೋಲನೊಪ್ಪಿದರು
ಧ್ಯಾನಪೂಜೆಗಳಿನ್ನು ತಮಗೆ ಸಲ್ಲವು ಎಂದು
ಮಾತಿನೊಪ್ಪಿಗೆಯಿತ್ತು ಶರಣು ಬೇಡಿದರು.

ಅಚ್ಚರಿಯ ಮೋಹದಲಿ ಆಗಸವ ನೋಡುತ್ತೆ
ಉಚ್ಚ ಕಂಠದಿ ಹಾಡಿದಾ ಭಕ್ತರಳಿದಿಹರು
ನಯದಿಂದ ಭಯದಿಂದಲವರನೊಲಿಸುವ ಪಾಡು
ಭುವಿಯಿಂದ ಜನದಿಂದ ತೊಲಗಿ ಹೋಗಿಹುದು

ಸಾಗರನ ಸುರನೀಲ ನೀಲಿಮತೆಯನು ನೋಡಿ
ಭೋರ್ಗರೆಯುತುರ್ಕುವಾರ್ಭಟೆಯ ಕೇಳಿ
ನಾಲ್ದೆಸೆಯೊಳೊಡ್ಡಿರುವಪಾರ ಗಂಭೀರತೆಗೆ
ಬಾಗಿ ಗೈಯುವ ವರುಣ ಪೂಜೆ ಕಾಣಿಸದು

ನಭದೆಡೆಗೆ ಮೊಗವೆತ್ತಿ ಪೂಪತ್ರವೆರಚುತ್ತೆ
ಕರುಣಿಸೈ ಪರ್ಜನ್ಯ ಎಂಬುದಿಲ್ಲಾಯ್ತು
ಗುಡುಗು ಗರ್ಜನೆ ಕೇಳಿ ನಡುಗಿ ಬಲಿಯೊಪ್ಪಿಸುತೆ
ಒಡೆಯ ರುದ್ರನ ರೌದ್ರವಿಳಿಪ ಪರಿ ಪೋಯ್ತು.

ಗೋಧನವನುಳುಹೈಯ ಹೆಚ್ಚಿಸೈ ಹೇ ಪೂಷ!
ದವಸಧಾನ್ಯಗಳೀಯೊ ದೇವ ದೇವೇಶ!
ಧನ ಕನಕ ವಾಹನವ ಕರುಣಿಸೈ ಧನದ, ಭೋ
ಘನರನರ್ಘರೆ, ಎಂಬ ಮೊರೆಯು ಕೇಳಿಸದು.

೨

ಅನ್ಯದೇವರ್ಕಳು ದಾಳಿಟ್ಟರೇರಿದರು
ಸುಮನಸರು ಪರಬ್ರಹ್ಮ ಹರಿಹರಾದಿಗಳು
ಇನ್ನೈದು ಸಾವಿರ ವರುಷವಾಳಿದರಿವರು
ಇಂದಿವರ ಆಳಿಕೆಗು ಚ್ಯುತಿಯು ಬಂದಿಹುದು.

ಹಳೆಯ ಕಾಲದ! ತಂದೆತಾತದಿರ ದೇವರುಗ
ಳಳಿದು ಹೋಗುವ ಕಡಿದು ಕಾಲ ಬರುತಿಹುದು
ಇಳಿದಿಹುದು ಕಡುನಿಡಿದು ನೆಳಲೊಂದು ಮೇಲಿಂದ
ಅಳಸಿ ಹೋಗುತಲಿಹವು ಅವರ ಮೂರ್ತಿಗಳೂ.

ಪೋಪವರ ಪದವಿಗಳಿಗಿನ್ನಾರು ಬಂದಪರೊ
ಕೋಪಿಗಳೊ ಕರುಣಿಗಳೊ ತಿಳಿಪ ಕೋವಿದರೊ
ಆರನರಸುತೆ ಹೋಗಿ ಹವಿಸಸೀಯಲು ಬೇಕೊ
ಆವ ಶೀಲವನವರು ಜಗದಿ ಬಿತ್ತುವರೊ.

ಇಲ್ಲದಿರೆ ಬೇರಾವ ದೇವರೇ ಬಾರರೊ
ಇಲ್ಲದೊಂದಕೆ ಹೆಸರನಿತ್ತು ಕರೆಯುವೆವೊ
ಇಲ್ಲದಿರೆ ಮಾನವನ ಸುಗುಣವೇ ದೈವವೊ
ಎಲ್ಲಿಗೂ ಹರಿಯದಿಹ ಸಂಶಯವೆ ಕೊನೆಯೊ!

—ವಿ. ಸೀತಾರಾಮಯ್ಯ
(ವಿಸೀ)

ನನ್ನ ನಲ್ಲ:

೩ನೇ ಎಸಳು

ನಿಲ್ಲು ನಿಲ್ಲಲೆ ನವಿಲೆ ನಿನ್ನ ಕಂಣುಗಳೇಸು
   ಕಂಣ ಬಂಣಗಳೇಸು ಎಣಿಸಲಾರೆ
ಎಲ್ಲ ರೂಪಿಸಿದವನು ಎಲ್ಲಿ ತಾನಡಗಿದನೆ
   ತಾಳಲಾರದು ಜೀವ ಹೇಳಬಾರೇ

ಪಿಳುಕಿಸದ ಸಿರಿಗಂಣು ಸುತ್ತು ಚಿನ್ನದ ರೇಖೆ
   ಬೆಳ್ಳಿ ಮಿರುಗಿನ ಮೈಯ ಕಾಂತಿ ನಿನಗೆ
ತಿಳಿಗಂಗೆ ನಿಮ್ಮವ್ವ ಮೀನ ಮೂರುತಿ ತಿಳಿಸೊ
   ನನ್ನೊಡೆಯನಡಗಿರುವನಾವ ಕಡೆಗೆ

ಆರದಾರತಿ ಹಿಡಿದು ಹಾರುತಿರುವವಳಾರೆ
   ಹೊನ್ನಿ ಏ ಹೊನ್ನಿ ನೀನಾರೆ ಬಾರೇ
ಯಾರಿಗಾರತಿ ಒಯ್ವೆ ಹೇಳೆ ನಾನೂ ಬರುವೆ
   ನನ್ನರಸನಿದ್ದಾನು ಅಲ್ಲಿಯಾರೇ

ಸಂಣದನಿಯುವಳಾರೆ ನುಂಣದನಿಯುವಳಾರೆ
   ಹೆಂಣದನಿಗೈವ ಕೋಗಿಲೆಯೆ ಬಾರೇ
ಕಣ್ಣು ತಪ್ಪಿಸಿದವನ ಕುರುಹು ಹೇಳೇ ತಾಯಿ
   ಬನದಮ್ಮ ನೀನಾರೆ ಕರುಣ ತೋರೇ

ಮಾಣಿಕದ ಮೂಗಿನವ ಮೈ ಪಚ್ಚರತ್ನದವ
   ಹಂಣ ಕುಕ್ಕುತ ಹಾರುವಂಣ ಬಾರೋ
ಜಾಣ ರಂಗಯ್ಯ ತಾ ಕಾಣದಡಗಿದನೆಲ್ಲಿ
   ಗಿಣಿರಾಮ ನೀನಾರೆ ಸುದ್ದಿ ಬೀರೋ

ಬೆಳದಿಂಗಳಿರುಳಲ್ಲಿ ನಟ್ಟನಡುರಾತ್ರಿಯಲಿ
   ಸಪ್ಪುಳಿಲ್ಲದ ಗಪ್ಪುಗಾರಿನಲ್ಲಿ
ಕೊಳದ ಬಾಂದಳದಲ್ಲಿ ಟಿಂವ್ ಗುಡುವ ಟೀಂವಕ್ಕಿ
   ನೀನಾರೆ ಬಲ್ಲೆಯಾ ನಲ್ಲನೆಲ್ಲಿ

ಬಿರುಗಣ್ಣ ಮಲ್ಲಿಗೆಯೆ ಸರಿಯೆ ನಿನಗೀ ಮೌನ
   ಕಣ್ಣಿಲ್ಲದವರು ಕಂಡಿಲ್ಲದಿರಲಿ
ಸಿರಿವಂತರಾಮಗಳು ಸೊರಗಿ ಸಾಯುತಲಿರುವೆ
   ಪುರುಷನೆಡೆ ಹೇಳಮ್ಮ ಪುಣ್ಯಬರಲಿ

ಬಹುರಸದ ಮೊಲೆಯುಣಿಸಿ ಜೀವ ತಣಿಸುವ ತಾಯಿ
   ಸರ್ವರಾಧಾರೆ ಭೂದೇವಿ ತಾಯೀ
ಬಹಳ ಬೇಡುವಳಲ್ಲ ನನ್ನ ರಾಯನ ಸೊಲ್ಲ
   ನೀನಾರೆ ಹೇಳಿಕೊಡಬಾರೆ ತಾಯೀ

ಇಲ್ಲಿಯೂ ಮುಗಿಯದವ ಅಲ್ಲಿಯೂ ಮುಗಿಯದವ
   ಎಲ್ಲಿಯೂ ಮುಗಿಯದಾಕಾಶ ತಂದೇ
ಎಲ್ಲಿ ನನ್ನರಸನಿಹನೆಲ್ಲಿ ನನ್ನಾಶ್ರಯವು
   ಕೈಮುಗಿವೆ ಹೇಳೆನ್ನಂತ ತಂದೇ

ಹರಳು ಮುತ್ತಿನ ರಾಶಿ ಸೆರೆಸೂರೆ ಮುಗಿಲಲ್ಲಿ
   ಅಂತರದೊಳೆತ್ತಿ ತೇಲಿಸುವ ಶಕ್ತೀ
ಹೊರಳಿ ನೋಡೆನ್ನ ಸ್ಥಿತಿ ಸೂರ್ಯಚಂದ್ರರ ಕಂಣು
   ತೆರೆದು ನೋಡೆನ್ನ ಗತಿ ಹೇಳೆ ಯುಕ್ತಿ

ತೀರ ಸನಿಯೆಂದರೂ ದೂರ ದೂರದೊಳಿರುವಿ
   ಸಾವಿರಬ್ಜದ ಗಾವುದಂಗಳಾಚೆ
ತೋರಿ ನಗೆಬೀರಿ ನೀನೇನು ಹೇಳುವಿ ಚಿಕ್ಕೆ
   ಏನೆಂದು ಭಾವಿಸಲಿದೇನು ಸೂಜೇ ?

ತೋರಲಾರದ ಗಾಳಿ ತಟ್ಟಿ ತಿಳಿಸುವಿಯೇನು
   ಯಾವ ನಾಡಿನ ಸೀಮೆ ತುಳಿದು ಬಂದೆ ?
ಮೀರಿತೆನ್ನಯ ತಾಪ ಆರಿಸೆನ್ನಯ ತಂದೆ
   ನನ್ನ ರಾಯನ ಸುದ್ದಿ ಸಾರು ಇಂದೇ

ಹಗಲು ನೆರಳಿನ ನಾರಿ ಮುಗಿಲು ಮುಚ್ಚಿದ ನಾರಿ
ಇರುಳಲ್ಲಿ ಕಗ್ಗ ಕತ್ತಲೆಯು ನಾರಿ
ಮಿಗಿಲು ಮಾಟದ ನಾರಿ ತೋರೆ ನಲ್ಲನ ದಾರಿ
ಕಾಳಿ ಕಿಂಕಾಳಿ ನೀ ಮರುಕುದೋರಿ

ನಿದ್ರಿಸುವ ಕತ್ತಲೆಯೆ ಕನಸಿಡುವ ತಿಳಿಬೆಳಕೆ
ಜಾಗೃತದ ಕಿಚ್ಚೆ ನೀನಾರೆ ಹೇಳು
ನಿದ್ರೆ ಬಾರದೆ ನಿಂತು ಸೋತು ಸಣ್ಣಾಗಿಹೆನು
ರಾಜರಾಜನ ಠಾವ ತೋರಿಸೇಳು

ಕಣ್ಣು ಮುಚ್ಚಲು ಮಂಣು ಕಂಣು ಬಿಚ್ಚಲು ಬಂಣ
ಕಂಣಿನಾಚೆಯು ನಿನ್ನ ರೂಪವರಿಯೆ
ಹಂಣಾದೆ ಸುಂಣಾದೆ ಸಂಣಾದೆ ಕಳವಳಿಸಿ
ಮರೆತು ಮಲಗಿದ ದೊರೆಯು ತೋರೆ ಸಿರಿಯೇ

ಕಂಣ ಕಿಂಡಿಯು ಒಳಗೆ ಹಣಿಕೆ ಹಾಕುವ ಜಾಣೆ
ಒಳಗೆ ಜೀವದ ಬೆನ್ನು ಬಡಿವ ಜಾಣೇ
ಕಂಣುಗಾಣದೆ ನಾನು ಕೊರಗಿ ಸಂಕಟಬಡುವೆ
ಚಲುವ ಚೆನ್ನಿಗನೆಡೆಯು ತೋರೆ ರಾಣೀ

ತರುವೆ ನೀ ಹೇಳೆನಗೆ ಮರವೆ ನೀ ಹೇಳೆನಗೆ
ಕಲ್ಲೆ ಕೊರಡೇ ನೆಲೆಯು ಹೇಳಿರೆನಗೆ
ಮೊರೆವೆ "ಕಾಮಾರ್ತಾ ಹಿ ಪ್ರಕೃತಿ ಕೃಪಣಾಶ್ಚೇತ—
ನಾಚೇತನೇಷು" ವೆಂಬಂತೆ ನಿಮಗೆ

ನನ್ನ ಕಂಣೀರಿನಲಿ ಕಲ್ಲು ಕರಗುತಲಿಹುದು
ನನ್ನೊಡನೆ ದಿಕ್ಕು ದನಿಗುಡುತಲಿಹುದು
ನನ್ನ ನಿಟ್ಟುಸುರಿನಲಿ ಬನವು ಬಾಡುತಲಿಹುದು
ಕರುಳೆಂಬ ಕರುಳೇಕೆ ಕರಗದಿಹುದು

ಬರುವದೇನುಂಟೊಮ್ಮೆ ಬರುವ ಕಾಲಕೆ ಬಹುದು
ಬಯಕೆ ಬರುವದರ ಕಣ್ಸನ್ನೆ ಕಂಣೋ
ಅರಿಯದಾ ಹವಣಿಕೆಯು ಜೀವ ಜೀವನ ಲೀಲೆ
ದೇವದೇವನ ಗೂಢ ವಿಧಿಯು ಕಾಣೋ

—ಚೆನ್ನಮಲ್ಲ ಹಲಸಂಗಿ (ಮಧುರಚೆನ್ನ)

ಕಹಳೆ

ಕಹಳೆಯದೊ ಮೊಳಗಿತ್ತು ಜೀವಕಳೆ ಹೊಂಚಿತ್ತು
ಯುಗಯುಗಗಳಾ ಜಾಡ್ಯ ಹರಿದತ್ತ ಹೋಯ್ತು ;
ದುರ್ದೈವವದಿರಿದುದು ; ದುರ್ಭೂತ ಬೆದರಿದುದು ;
ಪೌರುಷದ ಧಾಟಿಯಲಿ ಧಾತ್ರಿ ಹಿಳುಗಿತ್ತು !

ಸತ್ತು ಹುಟ್ಟದ ಜನರೆ ! ಸುಮ್ಮನೇ ಬರಡಾಯ್ತು
ನಿಮ್ಮ ಜನ್ಮವು ; ಬನ್ನಿ ! ಹೊಸ ಜನ್ಮ ತಾಳಿ !
ಹಿಂದೆಂದು ಕೇಳದಿಹ ಮುಂದೆಂದು ಕಾಣದಿಹ
ವೀರವಿಲಸಿತವಿದನು ನೋಡಿ ಸೊಗಬಾಳಿ !

ಉಗ್ಗಡಿಸುತಿಹ ಜೀವ ನೆಗ್ಗಿ ಕೀರ್ತಿಧ್ವಜವ
ಭವಿತವ್ಯತೆಯನೆತ್ತಿ ಹತ್ತಿಪುದು ನೋಡಿ !
ಶತಮಾನಗಳ ಗತಿಯ ಒಂದೊಂದೆ ಪದಹತಿಯ
ರಭಸದಲಿ ದೂಡುವರು ನೋಡಿವರ ಮೋಡಿ !

ಇಂದಿನಾವೇಶವಿದು ! ಹಿಂದಿನಾ ಪರಿಯಲ್ಲ ;
ಒಡೆತನಕೆ ತಲೆಬಾಗಿ ಮುರುಟಲಿಹುದಲ್ಲ ;
ರಾಜಪದಪೀಠಕ್ಕೆ ಹಣೆಯ ಹಚ್ಚುವುದಲ್ಲ ;
ಒದೆತಕ್ಕೆ ಮೈಚಾಚಿ ಹುಡಿಯಪ್ಪುದಲ್ಲ.

ಒಂದುಕಾಲಕೆ ಸೊಬಗ ತಂದು ಸಂದುದು ನಮ್ಮ
ಹಳೆಯಕಾಲದ ಧರ್ಮ—ಅನೀತಿ ಗೀತಿ.
ದೇವರೀ ನೆಲಕೆ, ಈ ನೆಲದವರು ಆ ನೆಲಕೆ
ಹೋಗಿ, ಬರುತಿದ್ದರಂದಿಗೆ ಅದೇ ರೀತಿ.

ಇಂದೇನ ಕೇಳುವಿರಿ ? ಬ್ರಹ್ಮಾಂಡ ಭಾಂಡದಲಿ
ಸಕಲಕುಲ ಜಾತಿಧರ್ಮಗಳ ತೊಳಸುವನು
ಕಾಲನೆಂಬಡುವಳನು ; ಎಲ್ಲರಿಗು ಕುದಿಯೊಂದೆ
ತಮಗೆ ತಾವಾಗಲಿಹ ಉಬ್ಬೆಗದ ಹದನು.

ಸ್ವಾತಂತ್ರ್ಯದಮರ ಸೌಖ್ಯವ ಕಂಡರಿವರಲ್ಲ;
ಜನನದೊಳೆ ಬೇರ್ಬಿಟ್ಟು ಬೆಳೆದಿಹುದು ದಾಸ್ಯ;
ನೂರು ವರ್ಷದ ಬಾಳ ಹರಕೆ ಹೆತ್ತರ ಮೊಗದಿ
ಕಾಣದೆ ಅಕಾಲಮೃತ್ಯುವ ವಿಕಟಲಾಸ್ಯ?

ವೀರಪೂಜೆಯು ಕಹಳೆಯಿವರ ಹೊಡೆದೆಬ್ಬಿಸಿತು
ಆತ್ಮವಿಜಯಧ್ವಾನ ದೆಸೆಗೆ ಹಬ್ಬಿದುದು.
ಎಷ್ಟೊ ದಿನವೊರಗಿಸಿತು ಮೋಹನಿದ್ರಾಲಸ್ಯ
ಇವರಿಂದೆ ಎಚ್ಚರಿನ ಸೊಗವ ಕಂಡಿಹುದು.

ನಮಗೆಷ್ಟು ದಿನವಿಹುದೊ ಅಷ್ಟು ದಿನ ತಲೆಯೆತ್ತಿ
ಮನುಜರಂದದಿ ಬಾಳಿ ಸಾಯಲಿರಬೇಕು.
ಒಂದೆ ತೊಟ್ಟಿಲೊಳೊರಗಿ ಬಳೆದ ಮಕ್ಕಳು ನಮಗೆ
ಇನಿತೇಕೆ ಭೇದವೆಂಬುದ ನೋಡಬೇಕು.

ಎಂದು ಸಿಡಿಗುಂಡ ಮಲ್ಲಿಗೆಯಂತೆ ಧರಿಸುವರು;
ಹೊಡೆಯುವ ಶತಘ್ನಿಗಳಿಗೆದೆಯನೊಡ್ಡುವರು;
ಮೃತ್ಯುವಿನ ದಾಡೆಗಳ ಕೈತೊಂಕಿ ಕಳಚುವರು
ಅಯ್ಯಯ್ಯೊ! ಇವರನಾರಿಂದು ತಡೆಯುವರು?

ಹುಟ್ಟಿದಂದೇ ಚಂಡ ಪುರುಷಕಾರವ ತಳೆವ
ನವಘಟೋತ್ಕಚರಿವರೆ? ರುದ್ರವಿಕ್ರಮರೆ
ಸುರಿಯೆ ನೆತ್ತರ ಬಿಂದು ಸಾವಿರದೆ ಎದೆಗೊಡುವ
ರಕ್ತಬೀಜರೆ? ಏನು ಸಾಧಕರೆ?

ಮರುಳೊ ಹುರುಳೋ ಸೋಲೊ ಗೆಲವೊ ಬಲ್ಲವರಾರು?
ವೀರರಸ ರೋಮರಂಧ್ರದಲಿ ಹೊಮ್ಮುತಿರೆ;
ಅಶನಿಸಿರ್ಘೋಷವೆನೆ ಜಯಕಾರಗಳ ಮಾಡಿ
ಮುಂದೆ ಮುಂದೊತ್ತುವರು ಭಾಪು ಭಳಿರೆ!

ಬಾನ ತಳಿಗೆಯಲಿಟ್ಟು ನಕ್ಷತ್ರ ಕುಸುಮಗಳ
ಹಾರೈಸಿ ನೋಡುವಳದೋ ದಿಗ್ವಧೂಟಿ!
ಸೋಲಿಸಲಿ ಗೆಲವಿಸಲಿ ಪುಷ್ಪಾಂಜಲಿಗಳಿವೇ
ಕಹಳೆ ಕೆರಳಿಸಿತಿವರ ಜೀವಕ್ಕೆ ನಾಟಿ!

—ಕಡೆಂಗೋಡ್ಲು ಶಂಕರಭಟ್ಟ

ಮೂರ್ಛೆ ಬಂದಿತ್ತು

ಮೂರ್ಛೆ ಬಂದಿತ್ತು !
ಮೂರ್ಛೆ ಬಂದಿತ್ತು !
ಕಾಂಪೋಂಡು ಬಂಗ್ಲಿ
ಕಂಕಮ್ಮಂಗೆ
ಮೂರ್ಛೆ ಬಂದಿತ್ತು

ಮದಿವೊ ಏನೋ ಆಗುತಿತ್ತಂತೆ
ಚಪ್ಪರ ಕಂಬ ವರಗಿದ್ದರಂತೆ
ಮದವಣಗನ್ನೇ ನೋಡುತ್ತಿದ್ದರಂತೆ
ಯಾಕೋ ಏನೋ ಬಂದವರಂತೆ
ಯಾರೋ ಏನೋ ಉಸಿರಿದರಂತೆ
ಕೂತಿದ್ದ ಹಾಗೇ ಕನಕಂನೋರು
ಇದ್ದಿದ್ದ ಹಾಗೇ ನಿಟ್ಟುಸಿರಿಟ್ಟು
ಕಂಬ ಬಿಟ್ಟು ಜಾರಿದರಂತೆ
ಕಂಕಂಮ್ಮ
ಕಾಂಪೋಂಡು ಬಂಗ್ಲಿ ಕಂಕಂಮ್ಮ

ಏಕಾ ಏಕೀ ಉಸಿರೇ ನಿಂತು
ಉರುಡಿದರಂತೆ ಎಚ್ಚರ ತಪ್ಪಿ
ಯಾರಾರೆಲ್ಲ ಕೂಗಿದರಂತೆ
ಹೆಸರೇ ಹಿಡಿದು ಅರಚಿದರಂತೆ
ಏನೇನೆಲ್ಲ ಮಾಡಿದರಂತೆ
ಎಚ್ಚರ ತಪ್ಪಿ ಅರಿವೇ ಇಲ್ಲ
ಚಪ್ಪರವೆಲ್ಲಾ ಚಾಮರ ಬೀಸೆ
ಮೂರ್ಛೆ ಬಂದಿತ್ತು
ಕನಕಮ್ಮಂಗೆ
ಮೂರ್ಛೆ ಬಂದಿತ್ತು

ಆಕಾಶಪುರದ ಅಚ್ಚೋದ್ಯಪ್ಪ
ಎಲ್ಲಿಂದೇಲ್ಲೊ ಓಡೋಡಿ ಬಂದು
ಯಾಕೆ ? ಏನು ? ಯಾರು ? ಎತ್ತ ?
ಎಂದು ಬಂದು ಹಿಡಿದು ಎತ್ತಿ
ಮೆತ್ತನ್ನೇಯ ಕುರ್ಚಿಲಿಟ್ಟು
ಬೆಚ್ಚನ್ನೇಯ ಕಾಫಿ ಕುಡಿಸಿ
ಪನ್ನೀರೆರಚಿ ಗಾಳಿಹಾಕಿ
ಯಾಕೇ ಕನಕ
ಏನಾಯ್ತಮ್ಮ ?
ಎಂದು ನಿಂದು
ನುಡಿಸಿದರಾಗ !

ತೆಗೆದು ಉಸಿರ
ಹಚ್ಚಿದೃಷ್ಟಿ
ಕಂಗಳ ತುಂಬಿ
ಬಿಕ್ಕಳಿಸುತ್ತ
ಹೇಳಿದರಾಗ ಕನಕಮ್ಮ
ಎಚ್ಚರ ಬಂದು ಕನಕಮ್ಮ
ಮೂರ್ಛೆ ತಿಳಿದು ಕನಕಮ್ಮ
ಜ್ಞಾನ ನಿಂದು ಕನಕಮ್ಮ
ಕಾಂಪೊಂಡು ಬಂಗ್ಲಿ
ಕಂಕಂಮ್ಮ

ನಾನಂತೆ ಮುದುಕಿ
ಕೆಣಕತಾರೆ ಕೆದಕಿ
ಚಾಳೀಸೆಲ್ಲಾ ಷೋಕೀಗಂತೆ
ಗಲ್ಲಗಳೆರಡೂ ಸುಕ್ಕಿವೆಯಂತೆ
ಇದ್ದಹಲ್ಲೆಲ್ಲ ಬಿದ್ದಿವೆಯಂತೆ
ಇದ್ದದ್ದೆಲ್ಲ ಬದ್ಧಲ್ಲಂತೆ
ನಾನಂತೆ ಮುದುಕಿ
ಕೆಣಕತಾರೆ ಕೆದಕಿ
ಹೇಡೀ ಕೂಡೀ ಕಾಡೀ ಬೇಡೀ
ಮೋಡೀ ಆಡೀ ಭೋಡೀ ಮಾಡೀ
ಚಾಡೀ ಹಾಡಿದ ರೂಢೀ ಕೇಡೀ

  ನಾನಂತೇ
ಕೆಣಕತಾರೆ ಕೆದಕಿ
ನಾನಂತೆ ಮುದುಕೀ

ನಕ್ಕರು ಕೆಲವರು
ಅತ್ತರು ಕೆಲವರು
  ಎಲ್ಲವರೆಂದರು
ಅಯ್ಯೋ ಪಾಪ
ಅಯ್ಯೋ ಪಾಪ !

—ಆರ್ಗ೦ ಲಕ್ಷ್ಮಣರಾಯರು
(ಹೊಯ್ಸಳ)

ರಸ ಸರಸ್ವತಿ

೧

ಭವದ ಮೇಲಿಂದೆದ್ದು ಭಾವದೊಳು ಸಂಚರಿಸಿ
ನುಡಿನುಡಿಯ ಕೇಂದ್ರದೊಳು ರೂಪುಗೂಡಿ
ಅಕ್ಷಾಕ್ಷದಸ್ಪಷ್ಟಸೃಷ್ಟಿ ವಿಸ್ಫುಟವಾಗಿ
ಪ್ರತ್ಯಕ್ಷವಾಯಿತೆನೆ ಮಾಯೆ ಹೂಡಿ
ಈ ಲೋಕದಾಲೋಕ ಬೇರೆ ಲೋಕದದೆನ್ನೆ
ಸಕಲ ಸದ್ಯೋಜಾತವಾದುದೆನ್ನೆ
ಕಾಲದುಪಹತಿಶಮಿಸಿ ಸವ್ಯವೆನಿಸಿ
ಭೌತ ಋತದಿಂ ರಸದ ಋತಕೆ ಸಲಿಸಿ
ನಿಯತಿಕೃತಿಗೀ ತೆರದಿ ನರನಾತ್ಮರಸಮಧುರ-
ಪರಿಕರ್ಮವಸುಗೊಳಿಸಿ ಬಗೆಯ ಕೊಳುವ
ಕವಿಮರ್ಮವೇ ನಿನ್ನ ಏವೊಗಳುವ!

೨

ನಿರ್ಜೀವದಿಂ ಜೀವದಚ್ಚರಿಯಿದೊಗೆದಂತೆ
ಜೀವದಿಂದೊಗೆತರುವ ರಸದಚ್ಚರೀ,
ಕಾಲದೇಶವ ರಚಿಪ ಭೂತಾತ್ಮಯೋಗದಿಂ-
ದುದಿಸಿಯೂ ಹೊರತವಕೆ ನೀನಚ್ಚರಿ.
ನಡೆವೆಡೆಗೆ ನಡೆತರುವ ರವಿಯ ತೆರ ರಾಮಾದಿ
ಮರ್ತ್ಯರೆಮ್ಮನು ಜನ್ಮಜನ್ಮದೊಳಗೆ
ಆದ್ಯ ಬಂಧುಗಳಂತೆ ಸಮ್ಮುಖದೊಳಿರುವ ತೆರ
ಮರ್ತ್ಯತೆಯ ತೊಡೆವೆ ಹೃನ್ನಭದಿ ತೊಳಗೆ.
ಕರ್ಮಸಾಕ್ಷಿಯದೆಂದೊ ಜೀವನದಿಯಿಂದೆತ್ತಿ
ಸುರಿಸಿದನುಭವರಸದ ಹನಿಯ ಕೊಂಡು
ಜೀವನಾತ್ಮವ ತಳೆವ ನೋವಸುಂಡು
ಹದುಳವಸು ಗಳಿಸೆ ಕವಿಹೃದಯರಸಲೇಪದಿಂ

ಹದಗೊಳಿಪ ಹವಣಾದ ಕಾಂತಿಯಿಂದ
ಕಾಣೆ ಶಿವಶಿವಮೆಂಬ ಲೇಸಿನಿಂದ
ಕ್ಷಣದ ಚಿಚ್ಚಲಕಾಂತಿ ನಿತ್ಯಚಲವಾದುದೆನೆ
ಚಿತ್ರಚಿತ್ರವ ರಮಿಸಿ ಹೊಳೆವೆ ರಸದನ್ನೇ,
ಹೊಸ ಬೆಳಕನೇ ಲೋಕಕೆರೆದು ಕವಿಕನ್ನೇ.

೩

ಪರಿಗಣನ ಮೌಲ್ಯದೀ ವಿಜ್ಞಾನಲೋಕದಿಂ
ಗುಣಮೌಲ್ಯದೊಳಜಗವ ನಿರ್ಮಿಸುವ ತಾಯೆ,
ಮೃಣ್ಮಯ ಪ್ರಕೃತಿಯಿಂ ಮನೋವಿಕೃತಿಯ ರಚಿಸು-
ತಾತ್ಮವಿಸ್ತಾರವನು ಕಲ್ಪಿಸುವ ಮಾಯೆ,
ಮರವೆಂದು ಮಲೆಯೆಂದು ತೊರೆಯೆಂದು ದರಿಯೆಂದು
ಕಾನೆಂದು ಬಾನೆಂದು ಹೊರಗ ತೋರಿ
ಪದ ಸಹಜಶಕ್ತಿಯಿಂದಿಂದ್ರಿಯಾರ್ಥವ ಬೆಳಗೆ
ಬೆಳಗುವರ್ಥಗಳೆಲ್ಲ ಬಗೆಯ ತೋರಿ
ಮೂರ್ತದಿಂದಲಮೂರ್ತ ಛಂದದಿಂ ಸ್ವಾಚ್ಛಂದ್ಯ
ವೃತ್ತಿಯಿಂ ನಿರ್ವೃತಿಯು ದೊರೆಯುವಂತೆ
ಅರ್ಥದೊಳು ರಮಿಸಿಯೂ ವಿರಮಿಸದ ತೆರದೊಳಗೆ
ಭಾವಸಾರಥ್ಯದೊಳೆ ಚರಿಸುವಂತೆ
ನುಡಿಯ ಬಳಸುವ ನಿನ್ನ ಚದುರೆ ಚದುರು
ಜಗದೊಳಾವೆಡೆಯಿಲ್ಲ ನಿನ್ನ ಸದರು ?
ನೀ ಕೊಟ್ಟ ಪದವಿಯೆನೆ ನಿನ್ನ ಬಿರುದನು ಹೊತ್ತು
ನಿನ್ನ ಮಹಿಮೆಯ ಮೆರೆವ ವೈಮೆವೆತ್ತು
ಲೋಕ ನಿರ್ಲಕ್ಷಿಸುವ ಕ್ಷಣದ ಸಂಭೂತಿಗಳು
ಸಕಲ ಶೃಂಗಾರದೊಳು ಹದವನರಿತು
ಅಗ್ರದೊಳು ಗಮಿಸುತಿರೆ ಉಚಿತವರಿತು
ನಾಮರೂಪದ ಲೋಕ ವಿಭ್ರಮಿಸುವಂದ
ಶಬ್ದಾಶ್ವ ಸಂಚಲನೆಗನುವಾಗೆ ಛಂದ
ಕವಿಯಾತ್ಮರಥವೇರಿ ಸಹೃದಯಮನಃಪಥದಿ
ಉತ್ಸವಿಪೆ ಇಹದರಿವ ಸ್ತಬ್ಧಗೊಳಿಸಿ,
ಸ್ವಪ್ನವೆನೆ ಜಾಗರವ ಚಕಿತಗೊಳಿಸಿ.

೪

ರಸಸರಸ್ವತಿ, ದೇವಿ, ಕವಿಯಿಷ್ಟ ಸ್ವಪ್ನವೇ,
ಕವಿಯ ಹುತ್ಕುಹರದಿಂ ರಸಿಕಜನ ಹೊರತೆಗೆವ ಭವರತ್ನವೇ,

ಒಳಹೊರಗ ಬೆರೆಸಿ ದಿಗ್‌ಭ್ರಮೆಗೊಳಿಸುವಪ್ಸರೇ,
ಇಂದ್ರಿಯಮನೋಬುದ್ಧಿಧೃತಸತ್ಯಮತ್ಸರೇ,
ಈರೇಳು ಲೋಕಗಳ ಈ ಲೋಕದಿಂದೆತ್ತಿ ಪದಗೊಂಡ ವಿಕ್ರಮೇ,
ತುಳಿಯುವೆಡೆ ಚೆಲುಚೆಲುವ ಕೊನರಿಸುತ ಜಗದೊಲವ-
ಕೊಳುವ ಹೃದಯಂಗಮೇ,
ವಿಟ, ವೇಶ್ಯೆ, ಜೂಜಾಳಿ, ಕಳ್ಳ, ಲಂಪಟ, ಕುಡುಕ.
ಕುಲಟೆ, ಪಾದರಿ, ಸುಳ್ಳಿ, ಧೂರ್ತ, ವಂಚಕ, ಕಡುಕ.—
ಹೆಸರಿಸುವುದೇನೆಲ್ಲ ಧರ್ಮಜ್ಞ ಧಿಕ್ಕೃತರ ಪತಿಕರಿಪ ತೆರದೆ
ಸಹೃದಯಾನಂದದೊಳು ನಿಷ್ಕೃತಿಯ ವರವೀವ ವರದೆ,
ಇರವಿಗೀ ತೆರವೆಂಬ ನೈತಿಕರ ನಗುವ ಸರಸೇ,
ಭೂಮವೇ ಸುಖವೆಂಬ ಕ್ಷುದ್ರವಿರಸೇ,
ಅನುಭವಗಳಿಂಗಡಲಿನಡಿಗಡಿಗೆ ದೇದೀಪ್ಯ ಸೃಷ್ಟಿಸುವ ಚೆನ್ನೆ
ದೇವದಾನವದುಗ್ಧ ದುಗ್ಧಾಬ್ಧಿಯಿಂ ದಿವ್ಯವಸ್ತೂದಯಗಳಿನ್ನು ತೀರಿಲ್ಲವೆನ್ನೆ,
ಭೌತಧರ್ಮಕೆ ಭಾವಧರ್ಮಗಳ ಹೊಂದಿಸುತ ಸೌಂದರ್ಯಶಿವವನೀ ತಿರೆಗೆರೆವ ಭದ್ರೆ,
ಕವಿವತ್ಸವ್ಯಾಜದಿಂ ನಲವಿನಮೃತವ ಕರೆದು ಸಕಲರಾತ್ಮವ ಪೊರೆವ ಸರ್ವಾರ್ದ್ರೇ,
ಗಂಗೆಯೆನೆ ಯಮುನೆಯೆನೆ ಗೋದೆ ಕಾವೇರಿಯೆನೆ
ದಿವ್ಯ ಹಿಮಗಿರಿಯೆನ್ನೆ, ಕಾಶಿಯೆನೆ ಕಾಂಚಿಯೆನೆ
ಬಗೆಯಮಂಗಳ ಹಿಂಗೆ
ಕಮ್ಮಿದಲರಂತಿರವು ಹೊಂಗನಸಿನಿಂ ಹೊಂಗೆ
ಹೊಳೆಹೊಳೆಗು ಮಲೆಮಲೆಗು ಊರೂರಿಗೂ ಪ್ರೇಮ
ರುಚಿಯಿತ್ತು ನಾಡಸೌಭಾಗ್ಯವನು ಕಲ್ಪಿಸುವ ವಾಣಿ,
ನೆನೆದೊಡನೆ ಮನದೆಲ್ಲ ಕಾರ್ಪಣ್ಯಗಳ ಹಿಂಗಿಸುವ ಕಲ್ಯಾಣಿ,
ಇರವಿನಾಂತರವಿಶ್ವದಾದಿಮಧ್ಯಾಂತಗಳನಾಳುತಿಹ ಪ್ರಕೃತಿ,
ಇಹವನಾಡಿಸುತಿರುವ ವಿಶ್ವಾತ್ಮನೋಂಕೃತಿ,
ಭವಶರಧಿವೇಲೆ
ನಿನ್ನನಾನೆರೆವೆನೌ, ಆಗೆನ್ನ ನಿರ್‌ವೃತಿಗೆ, ದೇವಿ, ಅನುಕೂಲೆ

೫

ವ್ಯಕ್ತನೆನಿಸದೆ ನನ್ನ ನಿನ್ನಂಕಕೆತ್ತು,
ಯೋಗಿಯೆನಲೆನಗಾಗೆ ಮುದದ ಮತ್ತು
ಮರದೊಳೆಲೆಯಾಡುತಿರೆ ತೆರೆ ಕೆರೆಯೊಳೋಡುತಿರೆ
ಮುಸುಡನೆತ್ತಿಹ ಮಲೆಯ ಕೋಡಕರುವನು ತಣಿಸೆ
ಮೋಡ ಮೊಲೆಯೂಡುತಿರೆ

ಹಚ್ಚ ಹಸುರಿನ ಮೇಲೆ ಬಿಸಿಲೊರಗಿ ಪವಡಿಸಲು
ಒಳಕಿರಣದಿಂ ಮಂಜುಹನಿ ಮಣಿಯು ಹುರುಪಿಸಲು
ಎಲರಲೆಯ
ಹೊಳೆಹರಿಯೆ
ಖಗದಿಂಚರಂ ಜೀವದುಚ್ಛ್ರುತಿಯು ಸವಿಯೊರೆಯೆ
ಎಳೆಯರೆಳನಗೆಯಿಂದ ಮುದುನಗೆಯು ಚಿಗುರಿಡೆ
ತರುಣತರುಣಿಯರೊಲುಮೆಗಿಳೆಯೆಲ್ಲ ಹೊಗರಿಡೆ
ತಿರೆಯು ಹುಡಿ ರವಿಯೊಡನೆ ಕೆಳೆಬೆಳಸಿ ಸುತ್ತ—
ನಿರ್ವಿಷಯಕ್ಕೆ ನೀಡುತಿರೆ ಶ್ಯಾಮರಸ—ರಾಗದಾನ
ನಗರೋಪನಗರಗಳ ಯಂತ್ರಾಟ್ಟಹಾಸಗಳ ಗರವ ಕೊಳುತಿರೆ ನೀಲಮೌನ
ಹರಿಪದದ ಗಂಗೆಯೊಲು ಜಗದ್ಧಾತ್ರಿಯ ಕರುಣೆ
ಎದೆಯುಮೊಗಕೊರಲಕೈತೆಕ್ಕೆಯೊಳು ಮಲಗಿರುವ
ತಿರುಪೆಮಕ್ಕಳ ಸ್ವಾಪಸುಖದೊಳಗೆ ಹರಿಯುತಿರೆ
ಕೋಗಿಲೆಯ ನಿಡುಸರಕೆ ಬಾನು ಕದ ತೆರೆಯುತಿರೆ
ರವಿತೋರಿದೀ ಭವವ ಮರೆಸಿ ನಿಶೆಯೈತರೆ
ಅಪ್ಸರೋಂತಃಪುರದ ಕಿಟಕಿಯರೆತೆರೆದುದೆನೆ ತೋರಿಬರಲೆಳವೆರೆ
ತನ್ನ ನಲ್ಲನನೆನ್ನ ಹೃದಯದೊಳು ಹುಡುಕುವೊಲು
ತುಡಿವ ಹೊಳಪಿನ ನೋಟವೆರೆಯುತಿರೆ ಕಿರುತಾರೆ
ಜಗದರಿವ ಮಾಗಿಸುವ ಜಗದೀಶ್ವರನ ರತಿಯು
ಬಗೆಗೆ ತರುವಂದದೊಳು ಮುಗ್ಧರುಲಿವ ಸ್ತೋತ್ರ
ಬುದ್ಧಿ ತರ್ಕದ ಹೆಡೆಯು ಮುಚ್ಚುವೊಲು ಕಿವಿಸಾರೆ
ಕಾಣದುದ ಕಾಣಿಸುವ ಮಧುರಸ್ವರಲಹರಿಯೊಳು
ಪುರುಷೋತ್ತಮಂ ಮೂಡೆ
ಎದೆಯೊಪ್ಪಿತಕೆ ಮತಿಯು ಹಸ್ತಾವಲಂಬದೊಲು
ಮೊಳಗುವ ಮೃದಂಗದೊಳಗಗಜಾಥವಂ ಕೂಡೆ
ಕವಿಸೂಕ್ತಿಯೊಳು ನಿನ್ನ ದರ್ಶನಂ ಸಂಗಡಿಸೆ
ಸಚ್ಚಿತ್ತಮಧುಪಾನವೆದೆವಿಷಾದವ ಕೆಡಿಸೆ,
ಅಲ್ಲೆನಿಲ್ಲೆಂದಿಹದ ವ್ಯಾಪಾರವನು ನಿಲಿಸಿ
ಅರಿಷಟ್ಕ ಸವೆದ ಸೆರೆಯಿಂ ಮದವ ಬಿಡಿಸಿ
ಕರಣಕಾತ್ಮವೆ ವಿಷಯವಾದುದೆನೆ ಕಂಡಕಂಡೆಡೆಯಲ್ಲ—
ಚೆಲುವನಿರಿಸಿ
ಇಂದುವರೆಗೆನ್ನ ನೀನಮೃತಕರದಿಂದೆತ್ತಿ ಪೊರೆದ ತೆರದಿ
ಭವವನರಿತದ ಮೀರಿ ನಿಲುವ ರಸಪದಕೆನ್ನ ಸಲಿಸು ಜವದಿ

ನಿನ್ನ ದಯೆಯಿಂದೆನ್ನ ಮನಕಾಗಲೌ, ದೇವಿ
ಸತ್ಯಶಿವಸಂಜನಿತ ಸೌಂದರಮುದಾಗಮಂ
ನೀನೆಯುತ್ಸವಿಪಂತೆ ಪದಪದದಿ ನಡೆಯಲೌ
ವಸ್ತ್ವಾತ್ಮಮಧುರಸಮ್ಮಿಳನೋತ್ಸವಾಗಮಂ

ಜಗದಾತ್ಮ ಬಿತ್ತರಿಸಲೌ ನಮ್ಮ ಕವಿಜನದ ಸೂಕ್ತಿಯಿಂದ
ನಿನ್ನ ಮರ್ಮವನರಿತ ಮೌಲ್ಯಜ್ಞ ಸಹೃದಯಾಸಕ್ತಿಯಿಂದ

—ಪು. ತಿ. ನರಸಿಂಹಾಚಾರ್

ನೇತ್ರ ನಟಿಯರು

ಜೀವಸಮ್ಮೋಹನೆಯೆ, ನೇತ್ರನಟಿಯರನು ನೀ—
  ನೆನಿತು ಬಗೆ ನೃತ್ಯದಲಿ ಪಳಗಿಸಿರುವೆ!—
ಮುಗುಳು ನಸುಬಿರಿದಂತೆ, ಹಾವು ಹೆಡೆಕೆರೆದಂತೆ,
ತೊರೆಯೊಳಗೆ ಮರಿಮೀನು ಹೊಳಕಿ ಕೆಲಕೊಲೆದಂತೆ,
ಸಂಜೆ ವಿದ್ಯುದ್ದೀಪಕೋಶದಲಿ ಕುಡಿಮಿಂಚು
ಮೂಡಿ ಕಿರಣವನೆರಚಿ ಥಳಥಳಿಸಿ ಹೊಳೆದಂತೆ,
ಆವುದೊ ಪ್ರಮಾದದಿಂದದು ಥಟ್ಟನಳಿದಂತೆ,
ಕದದ ಮರೆಯಲಿ ಹಸುಳೆ ಇಣಿಕಿಣಿಕಿ ನಿಂತಂತೆ,
ಸನ್ನೆಯಲಿ ಕೆಣಕಿ ಬಳಿಕೋಡಿ ಅಣಕಿಸಿದಂತೆ,
ಜನದ ಸುಳಿವಿಗೆ ಬೆಚ್ಚಿ ಜಿಂಕೆ ಧೀಂಕಿಟ್ಟಂತೆ,
ಕೂರಂಬು ಹಾಯ್ದಂತೆ, ಖಡ್ಗ ಝುಳಪಿಸಿದಂತೆ,
ಬೆಳಕಳಿದ ಕಾರಿರುಳ ಶೂನ್ಯಮಂದಿರದಂತೆ—
  ಎನಿತು ಬಗೆ ಭಂಗಿಯಲಿ ನರ್ತಿಸುವರು,
  ಎನಿತು ಬಗೆ ಭಾವವನು ಚಿಮ್ಮಿಸುವರು!
ಇವರ ಲೀಲಾಲಾಸ್ಯದಲಿ ನೆಲೆಯ ಕಾಣದೆಯೆ
  ನನ್ನ ಮತಿ ಬೆಗಡಾಗಿ ತೊಳಲುತಿಹುದು.
ಸಾಕು ಸಾಕೀ ಚದುರು; ಮೊದಲೊನಪಿಗೇ ಸೋತು
  ಕಾಣಿಕೆಗೆ ಹೃದಯವನೆ ತೆತ್ತಿರುವೆನು!
ಹಿಮಗಿರಿಯ ನೀರ್ಗಲ್ಲು ದ್ರವಿಸಿ ಹೊಳೆಹರಿವಂತೆ
ನಿನ್ನ ಕಂಗಳು ಕರಗಿ ಒಲುಮೆಬೆಳಕೊಳು ಮಿನುಗಿ
  ನಿಲುವ ಚೆಲುವೊಂದನೇ ಬೇಡುತಿಹೆನು
  —ನಲ್ಲೆ, ಕರುಣಿಸು ನನಗೆ ನೋಟವಿದನು,
  ಒಲ್ಲೆ ಸದ್ಯಕೆ ಮಿಕ್ಕ ವಿಭ್ರಮವನು!

—ತೀ. ನಂ. ಶ್ರೀಕಂಠಯ್ಯ

ಪಡುವಣದ ಬಿರುಗಾಳಿ

ಹೋ ಬಂತು ಬಂತಕೋ ಭೂತಬೆಂತರದಂತೆ
ಪಡುವಣದ ಬಿರುಗಾಳಿ
ಚೈತ್ರ ಮಾಸದ ಕಾಳಿ
ಊದುವೊಲು ಭಂವ್ವೆಂದು ಬೀಸುಬೀಸುತ ಮುಂತೆ.

ಸುಡುಬಿಸಿಲ ಕೊಡೆಬಿಡಿಸಿ ಬೇಸಗೆಯು ರವಿ ಮೆರೆಯೆ
ಜಡವು ಜಂಜಡವಾಗೆ
ಚೇತನವು ಕೊರಡಾಗೆ
ಮಂತ್ರಹಾಕಿದ ಹಾಗೆ ಮರವೆಲ್ಲ ಮಿಡುಕದಿರೆ.

ಬಾನ ನಿಚ್ಚಣಿಯಿಂದ ನೇಸರನು ಇಳಿದಂತೆ
ಎಲ್ಲಿಂದಲೋ ನೆಗೆದು
ಧೀಂಕಿಡುತ ಧಿಗ್ಗೆಂದು
ಬಂತು ಝುಂಝೂವಾತ ನೆರೆಸಿ ತನ್ನಯ ಸಂತೆ.

ಕಣ್ಣೆವೆಯ ಪಿಳುಕಿಸುತ ನೋಡು ನೋಡುವ ಮುನ್ನ
ನೂರ್ಮಿಂಚುವೇಗದಲಿ
ನೆಲದಿ ಹರಿದಾಡುತಲಿ
ಬಯಲಾಟ ಥಕಥೈಯು ಕುಣಿತ ಹೂಡಿತು ತನ್ನ

ಏನದ್ಭುತದ ಶಕುತಿ ವಾಯುದೇವನ ಮಾಯೆ!
ಯುಗಯುಗದಿ ಬಂಧಿಸಿದ
ಹರೆಯ ಹೊಸ ಹುಮ್ಮಸದ
ಹೊಳೆಯು ಹರಿ ಕಟ್ಟೊಡೆದು ಸೂಸಿದೊಲು ನೆಲತೋಯೆ.

ಸೃಷ್ಟಿಮೊದಲಿಗೆ ಜಡದ ವಿವಿಧ ಚಿತ್ರವ ಬರೆದು
ಉಸಿರು ತುಂಬಿದ ಕ್ಷಣವೆ
ಚೇತನವು ಕಣಕಣವೆ
ಆದಂತೆ ಮರವಟ್ಟ ನೆಲದಿ ಚೇತನವರಿದು.

ಗಾಳಿಹೊಯ್ಲಿಗೆ ಮರದ ಕೊಂಬು ಕೊಂಬುಗಳೆಲ್ಲ
ನರ್ತಕಿಯ ದ್ರುತಗತಿಯ
ಶಿರದಂತೆ ದಳತತಿಯ
ಆಬೇಚೆ ತೂಗಾಡಿ ತೊನೆಯುತಿರೆ ದಣಿವಿಲ್ಲ.

ಭುವಿಯ ಸೇವಕನಂತೆ ಬಂದ ಮಾರುತನಿಂದು
ಬೀದಿಕಸವನು ಗುಡಿಸಿ
ಧೂಳಿಪಟವನು ಬಿಡಿಸಿ
ಹೊಲಹೊಲದ ಕಳೆಕಿತ್ತಿ ಮುಂಬರುವ ಕಳೆತಂದು

ಮಂಜು ಮಳೆತೆರೆಯಂತೆ ತೂರಿರುವ ಧೂಳಿಯಲಿ
ತರಗೆಲೆಯ ತರತರವು
ಬೆರೆತು ಹಾರುತಲಿಹವು
ತಿರು ತಿರುಗಿ ತೆಗ್ಗಿನಲಿ ಬೀಳುತಲಿ ಪಾಳಿಯಲಿ

ಬರಿರೆಂಬೆಯಲಿ ಮೈಯ ತೆರೆದು ನಿಂತಿಹ ಬಸರಿ
ಹಳತೆಲೆಯ ಕಳಚಿ ತಾ
ಗಾಳಿಯಾಟಕೆ ತೆರುತ
ಹೊಸ ಚಿಗುರುಗಳ ಚೆನ್ನ ಕನಸುಕಾಣುವ ಬಸುರಿ.

ಹಿರಿ ಬಿಸಿಲನುಂಡುಂಡು ಮೈಯುಂಡ ಆಲಮರ
ಹಚ್ಚ ಹಸುರೆಲೆ ರಾಶಿ
ತುರು ತುರುಗಿ ಹಂಬಲಿಸಿ
ಬಿರುಗಾಳಿ ಪೂರದಲಿ ತೂರುತಿದೆ ಕೆಲಹಸುರ.

ಪ್ರಳಯದುನ್ಮಾದದಲಿ ತಾಂಡವದ ನಾದದಲಿ
ನವಸೃಷ್ಟಿ ಲೀಲೆಯನು
ಮೆರೆಯುತಿಹ ಶೂಲಿಯನು
ತೋರದಲೆ ತೋರುತಿದೆ ಬಿರುಗಾಳಿ ಮೋದದಲಿ.

—ರಂ. ಶ್ರೀ ಮುಗಳಿ
(ರಸಿಕರಂಗ)

ಕಸ ಗುಡಿಸುವ ಪಂಚಮರು

೧

ಲಕ್ಷ ಲಕ್ಷ ಜನಸಂಖ್ಯೆಯ ಪಟ್ಟಣ ;
ಡಾಮ್ರು ಮಾರ್ಗಗಳು ಬಿಸಿಲಲಿ ರಣರಣ ;
ಜನರ ಸಂದಣಿಯು ಗೊಂದಲದಲ್ಲಿ
ಬಂಡಿ ಗಾಡಿಗಳ ಸಪ್ಪಳ ಝಣ ಝಣ ;
  ಯಾರು ಯಾರಿಗೂ ಕಾಣಿಸರು !
  ಹೊಲಸು ಓಣಿಯಲಿ ಹರಿಜನರು !

೨

ಬೀದಿ ಬೀದಿಯಲಿ ಬೀರಿದ ಕಸವು,
ಗುಡಿಸಿ ಗುಡಿಸಿ ತುಸು ತುಸು ತುಸು ತುಸುವು,
ತುಂಬ ತುಂಬಲದು ಪರ್ವತ ರಾಶಿ ;
ಕಾಯಕಷ್ಟವೇ ಜೀವದ ಕಸುವು !
  ಕರ್ಮಯೋಗಿಗಳು ಪಂಚಮರು,
  ಧರ್ಮಜೀವಿಗಳು ದುಡಿಯುವರು

೩

ತಲೆಯು ಮೇಲೆ ಕಸಗುಡಿಸಿದ ಗಂಟು ;
ಕಂಕುಳಲ್ಲಿ ಕಸಬರಿಗೆಯು ಉಂಟು ;
ಸಕಲ ಲೋಕವನು ಗುಡಿಸಿದ ಪುಣ್ಯ
ವೈಯ ಬೆವರಿನಲಿ ಸುರಿಯುವದುಂಟು !
  ತ್ಯಾಗಿಯೋಗಿಗಳು ಹರಿಜನರು,
  ಕಷ್ಟಭೋಗಿಗಳು ಬಡ ಜನರು

೪

ಮಸಣದೀಶ್ವರನು ಕೃತಯುಗದಲ್ಲಿ
ವಿಷ ಕುಡಿಯಲು ಜಗ ಬದುಕಿತು ಅಲ್ಲಿ ;
ಹಾಳು ಬಿದ್ದ ಈ ಕಲಿಯುಗದಲ್ಲಿ

ಕಸ ಗುಡಿಸದೆ ಶಿವ ಹೋದನು ಎಲ್ಲಿ?
ದುರಿತ ಭಕ್ಷಕರು ಯಾರಿವರು?
ಲೋಕ ರಕ್ಷಣೆಯು ಪಂಚಮರು

೫

ಹೊಲಸು ನಾರಿದರು ಹಿಡಿಯರು ಮೂಗ!
ಯಾವ ದೇವನಿಗು ನಿಲುಕದ ತ್ಯಾಗ!
ಕೊಳೆತ ಲೋಕವನು ತೊಳೆವ ಸಾಹಸವು
ಕರ್ಮ ಜೀವಿಗಳ ಸತತೋದ್ಯೋಗ,
ಶ್ರೇಷ್ಠ ಸೇವಕರು ಹರಿಜನರು
ಕಷ್ಟಕಾಯಕದ ವಾಸರರು

೬

ಕಸಗುಡಿಸುವ ಬಡ ಜೀವಿಗಳೊಮ್ಮೆ
ಸುಮ್ಮನೆ ಮಲಗಲು, ಸಾಯಲು ಎಮ್ಮೆ,
ಮುಟ್ಟುವರಿಲ್ಲದೆ ಕೆಟ್ಟಿತು ಜಗವು,
ಮೂಗು ಮೂಗಿನಲಿ ಬಿಟ್ಟ ವಾಸನೆ!
ಲೋಕಪಾಲಕರು ಯಾರಿವರು?
ಯಲ್ಲಮ್ಮನ ಪರಿ ಪೂಜಕರು

೭

ರೋಗಜಂತುಗಳು ಹುಟ್ಟುವ ಮುನ್ನ
ಚೊಕ್ಕ ಮಾಡುವರು ಪೃಥ್ವಿಯ ಬೆನ್ನ;
ನಿತ್ಯ ಕರ್ಮದಲಿ ನರಕವ ಗುಡಿಸಿ,
ಭೂಮಿಗೆ ಸ್ವರ್ಗವನಿಳಿಸುವರಣ್ಣಾ!
ಚೊಕ್ಕಟ ಮಕ್ಕಳು ಹರಿಜನರು,
ಉತ್ಕಟ ಸೇವಾತತ್ಪರರು

೮

"ಕಸ ಗುಡಿಸುವ ಚಾಂಡಾಲನು ಭ್ರಷ್ಟ!
ಮುಟ್ಟಲು, ಗಳಿಸಿದ ಪುಣ್ಯವು ನಷ್ಟ!"
ಅನ್ನುವ ಧರ್ಮಶಿರೋಮಣಿ, ಕೇಳೈ:—
ಮುಟ್ಟದೆ ಇರಲವ ಜಗವೇ ಭ್ರಷ್ಟ!
ಕಸಬರಿಕೆಯು ವರ ಪಂಚಮರು
ಪುಣ್ಯ ಪುರಾತನ ಪೂರ್ವಜರು

—ದಿನಕರ ದೇಸಾಯಿ

ರತ್ನನ್ ಪರ್ಪಂಚ

ಯೇಳ್ಕೊಳ್ಳಾಕ್ ಒಂದ್ ಊರು
ತಲೇಮೇಗ್ ಒಂದ್ ಸೂರು
ಮಲಗಾಕೆ ಬೂಮ್ತಾಯಿ ಮಂಚ.
ಕೈ ಇಡದೋಳ್ ಪುಟ್ನಂಜಿ
ನಗನಗತ ಉಪ್ಗಂಜಿ
ಕೊಟ್ರಾಯ್ತು ರತ್ನನ್ ಪರ್ಪಂಚ!

ಅಗಲೆಲ್ಲ ಬೆವರ್ ಅರ್ಸಿ
ತಂದದ್ರಲ್ಲ್ ಒಸಿ ಮುರ್ಸಿ
ಸಂಜೇಲಿ ವುಳಿ ಯೆಂಡ ಕೊಂಚ
ಯೀರ್‍ತ ಮೈ ಝುಂ ಅಂದ್ರೆ
ವಾಸ್ನೆ ಘಂ ಘಂ ಅಂದ್ರೆ
ತುಂಭೋಯ್ತು ರತ್ನನ್ ಪರ್ಪಂಚ

ಎನೋ ಕುಸಿಯಾದಾಗ
ಮತ್ತ್ ಎಚ್ಚಿ ಓದಾಗ
ಅಂಗೇನೆ ಪರಪಂಚದ್ ಅಂಚ
ದಾಟ್ಕಂಡಿ ಆರಾಡ್ತ
ಕನ್ನಡದಲ್ ಪದವಾಡ್ತ
ಇಗ್ಗೋದು ರತ್ನನ್ ಪರ್ಪಂಚ!

ದುಕ್ಕಿಲ್ಲ ದಾಲಿಲ್ಲ
ನಮಗ್ ಅದರಾಗ್ ಪಾಲಿಲ್ಲ
ನಾವ್ ಕಂಡಿಲ್ಲ್ ಆ ತಂಚ ವಂಚ;
ನಮ್ಮ್ ಸ್ಟಕ್ ನಾವಾಗಿ
ಇದ್ದಿದ್ರಲ್ಲ್ ಆಯಾಗಿ
ಬಾಳೋದು ರತ್ನನ್ ಪರ್ಪಂಚ!

'ಬಡತನ ಗಿಡತನ
ಏನಿದ್ರೇನ್ ? ನಡತೇನ
ಚೆಂದಾಗ್ ಇಟ್ಕೊಳ್ಳಾದೆ ಅಚ್ಚ!'-
ಅಂದ್ಕೊಂಡಿ ಸುಕವಾಗಿ
ಕಸ್ಟಕ್ ನೆಗಮೊಕವಾಗಿ
ನೆಗೆಯೋದೆ ರತ್ನನ್ ಪರ್ಪಂಚ!

ದೇವ್ರು ಏನ್ರ ಕೊಡಲಣ್ಣ
ಕೊಡದಿದ್ರೆ ಬುಡಲಣ್ಣ
ನಾವೆಲ್ಲ ಅವಸೀಗೆ ಬಚ್ಚ!
ಅವನ್ ಆಕಿದ್ ತಾಳ್ದಂಗೆ
ಕಣ್ಣ್ ಮುಚ್ಕೊಂಡ್ ಏಳ್ದಂಗೆ
ಕುಣಿಯಾದೆ ರತ್ನನ್ ಪರ್ಪಂಚ!

—ಜಿ. ಪಿ. ರಾಜರತ್ನಂ
(ಹೆಂಡ್ಗುಡುಕ ರತ್ನ)

ಊರ್ಣನಾಭಾವತಾರ

೧

ಅಲ್ಲಿ ಹೋದಲ್ಲಿ, ಇಲ್ಲಿ ನಿಂತಲ್ಲಿ
ಜೇಡ ತೂಗಹಾಕಿರುವ ಜಾಲ
ನೋಡಿದಲ್ಲೆಲ್ಲ ಮುಗಿಲ ಮುಸುಕಿಹುದು
ಧೂಮಕೇತು ಬೀಸಿರುವ ಬಾಲ.
ಅಂತಪಾರವಿಲ್ಲದಲೆ ಸೂತ ಜೇ-
ಡಾವತಾರವೆತ್ತಿರುವ ಕಾಲ!
ಇಳಾಭಾರವನು ಹೊರಲು ತಲೆಗೊಟ್ಟ
ಆದಿಶೇಷನಡೆ ಹವಣರಿದು,
ಹಾವಸೆಗಟ್ಟಿದ ಹಾಲ್ಗಡಲೊಳು ಗೋ-
ಲವನು ಸುತ್ತುವರಿದು,
ಮುಗಿಲಿನಾಚೆ ಅಮರ್ದುಣಿಸೆನುಣಿವ ಮು-
ತ್ತ್ಯಾತರತ್ತ ಮೆರೆದು
ಅಷ್ಟಪಾದದಿಂದಷ್ಟದಿಶೆಗಳನು
ಕಷ್ಟಕೀಡುಮಾಡಿ
ಉಷೆಯ ಮಂಗಳಕೆ ಅಮಂಗಳದ ತೋ-
ರಣವ ಕಟ್ಟಿನೋಡಿ
ರಜನಿಕಾಂತ ಜಾಲೇಂದ್ರಸಂಬುವೊಲು
ಸಾಂದ್ರವ್ಯೂಹಹೂಡಿ:
ಎಲ್ಲಿ ಹೋದಲ್ಲಿ, ಎಲ್ಲಿ ನಿಂತಲ್ಲಿ
ಮೂಡುವಲ್ಲಿ ದಿನ, ಮುಳುಗುವಲ್ಲಿ ಇನ,
ತೊಡಕುಬಲೆ ಬೀಸಿ, ಹಾಸುಬಲೆ ಹಾಸಿ,
ಬಿಗಿದು ಅಲುಗಾಡದಂತೆ ಒಂದು ತೃಣ,
ಆದಿಜೇಡ ತಕ್ಕೈಸಿ ನಿಂತಿತ್ತು
ವಿಶ್ವಮಾತೆಗಾದಂತೆ ಹಿರಿಯವ್ರಣ!
ಆಗ ಕೇಳಿತೊಳಗೊಳಗೆ ಒಳದನಿಯು

ಹೇಳು! ಯಾರು ದೊರೆಯು?
ಕಮಲನಾಭನೋ? ಊರ್ಣನಾಭನೋ?
ಏಕೆ ಮುಚ್ಚುಮರೆಯು?
ಎರಡು ಶಕ್ತಿಗಳ ನಡುವೆ ತಿರ‍್ರನೆ
ತಿರುಗುತಿಹುದು ತಿರೆಯು
ತಂತುವಾಯುದಿಂದೆಮ್ಮ ಲೋಕದೊಳ
ಗಿನ್ನದೇನು ಬಂತು?
ಅಲ್ಲಿ, ಇಲ್ಲಿ, ಎಲ್ಲೆಲ್ಲಿ ತೂಗಾಡಿ,
ತಂತು, ತಂತು, ತಂತು
ಗೋರಿಬಲೆಯೊಳೊದ್ದಾಡುತಿರುವವೋ
ಸಕಲಜೀವಜಂತು!
ಗರ್ಭಮಂದಿರದಿ ನಿಶೆಯೆ ನೂರಾಗಿ
ಹುಟ್ಟುಕಟ್ಟಿದಂತೆ,
ಸಂತತಾಭಿಷೇಕಕ್ಕೆ ಪಾತ್ರೆಗಳ
ತೂಗುಬಿಟ್ಟರಂತೆ
ಜೋತು ಬಿದ್ದಿಹವು ತೊಗಲಬಾವುಲಿ
ಅಮೃತ ಹೆಣಗಳಂತೆ!
ಲಿಂಗಯೋನಿಗಳ ತಂಡ, ತೊಗಲು ಹ-
ಕ್ಕಿಗಳ ಹಿಂಡದಿನ್ನು
ಸುತ್ತುಗಟ್ಟಿರಲು-ಓ ಅಭೇದ್ಯವಿದು,
ರವಿಗೆ ಕಾಣದೆನ್ನು!
ನಿಂತಲ್ಲಿಂದಲೆ ಕಾಣದ ಮೂರ್ತಿಗೆ
ನಿನ್ನ ನಮನವೆನ್ನು!
ಗೂಗೆಯ ಜೋಗುಳಕೇಳಿ ಜೋಗರಿಸಿ
ಹುಟ್ಟಿಬಂದ ಮಗುವು
ಸತ್ತುಬಿದ್ದಿತೋ! ಹೊಲೆ ಬಿಳುಪೇರಿತು
ಬಾಣಂತಿಯ ಮೊಗವು.
ಗರ್ಭಮಂದಿರದೊಳಾರ್ಭಟವಿಂತಿರೆ
ಶೂನ್ಯವಾಯ್ತು ಜಗವು.

೨

ಪುಣ್ಯಭೂಮಿಯಿದು ಭಾರತಭೂಮಿ
ಇಲ್ಲಿಯ ಶ್ರೀಕಾರ
ಆಗಿಹುದಿಂದು ಹೇಳುವೆ ನೊಂದು

ಜೇಡ ನೂತ ದಾರ;
ನಂಜಿನ ತಿನಸು, ಊರ್ಣದ ಉಣಿಸು
ಸರಿಯುದಂಧಕಾರ!
ಜೇಡನ ಬಲೆಯು, ಮರಿಜೇಡಗಳು
ಗಂಗಾಪಾನದಲಿ;
ದಿನದುಣಿಸಿನಲಿ, ಹಾಲ್ಗಸಿನಲಿ
ದಿನದಿನಧ್ಯಾನದಲಿ;
ಹೊಟ್ಟೆ-ಬಟ್ಟೆಯಲಿ, ನೀತಿ-ನೆತ್ತಿಯಲಿ
ಬೋಗುಣಿ-ಬೋನದಲಿ!
ಜರ್ಮನಿದೇಶದಿ ಸ್ವಸ್ತಿಕವಾಗಿ
ಹಿಟ್ಲರನಸು ಹಿಡಿದು
ಜೇಡವು ಜಗವನೆ ನಡುಗಿಸಿ ಬಂತು
ಸುತ್ತಿಗೆಯನು ಪಡೆದು;
ಕುಡುಗೋಲಿಂದವರಿಗೆ ನಡೆತಂದವರನು
ತನ್ನೆಡೆಗೇ ಸೆಳೆದು,
ಆದಿಶೇಷನಂತೆಯೆ ಅನಾದಿಯಾ-
ಗಿದ್ದ ಆದಿಜೇಡ
ಹಾಲ್ಗಡಲಿನ ಕೆಳಗಡೆ ಮಿಸುಗಾಡಿತು
ಸರಿದು ಬಂತು ನೋಡ!
ನೂಲೆಳೆಯಿಂದ ಕೊರಳನೆ ಕೊಯ್ಯುವ
ಜಾಲಗಾರ ಬೇಡ!
ರಕ್ತದಿ ಮಾನವ ತಪತಪತೊಯ್ಯಲು
ಭುಸುಗುಟ್ಟಿದ ಶೇಷ;
ಅವನುಸುರಿಗೆ ತಿರೆ ಕಂಪಿಸೆ, ಕರುಣೆಯು
ಇಲ್ಲವು ಲವಲೇಶ.
ಮಾನವ ಜೀವನ್ಮೃತನಿರೆ ಕಾಲಗೆ
ಜೇಡನ ಪರಿವೇಷ!

೩

ಜೀವನ್ಮೃತನೇ! ಎದ್ದೇಳು!
ವಾಯುದೇವ ಬಂದ.
ಜೇಡದ ಬಲೆಗಳು ಚಲ್ಲಾಪಿಲ್ಲಿ
ವಿಮೋಚನೆಯ ತಂದ.

೪

ಇನ್ನೀ ನೂಲೆಳೆ ಕರುಳ್ಗೊಲೆ ಸಾಕು:
ಬಾಳು ಬೆಳೆಯಲೆಂದ!
ಎಣ್ದೆಸೆಗಳ ಕಾಂತಿಯುದೆಸೆದಿಹುದು
ದೋಷರಹಿತವಾಗಿ;
ಕುರುಡುನಂಬುಗೆಯು ಕುರುಡು ವಿಚಾರದ
ಚಾಲಕಗಳ ನೀಗಿ;
ಪೂರ್ಣವಿಕಾಸದ ಅರುಣಾರುಣರಥ-
ವೇರಿ ಮುಂದೆ ಸಾಗಿ.
ಬಂದಿಹ ವಾಯು, ತಂದಿಹ, ಕಾಯು,
ಅಜೇಯವಿಹ ವೃದ್ಧಿ,
ಇಲ್ಲಿದೋ ವರುಣ, ಅವನವತರಣ
ಇಳಿಗಿದೆ ಸಮೃದ್ಧಿ.
ಅಗ್ನಿದೇವನಿವ ಪಾವನ ಪುರುಷ,
ಅವನಡಿಯಲಿ ಸಿದ್ಧಿ,
ಜೇಡದ ಬಲೆಗಳ ಜಂಜಡ ಕಳೆದು
ಅಚ್ಚ, ಗಗನವೇರಿ,
ಭವ್ಯಜೀವನದ ಪಥವ ತೋರುತಿದೆ
ದಿನಮಣಿಯುನು ಸಾರಿ;
ನೂತನ ಕಾಂತಿಯ ಅನುಪಮಸೊಗವನು
ಎಲ್ಲೆಡೆಗೂ ಬೀರಿ.
ಆದಿಜೇಡ ನಡೆದಿದೆ ಹಾಲ್ಗಡಲಿಗೆ
ಬಂದಹಾದಿ ಹಿಡಿದು;
ಕಡಲಿನ ಕೆಳಗಣ ಶಿಲೆಯ ಹೊದರಿನಲಿ
ಆಸರೆಯನು ಪಡೆದು.
ಮತ್ತದಕೌತಣವಿತ್ತಿರಬೇಡ
ತಪ್ಪುದಾರಿ ನಡೆದು.

—ವಿ. ಕೃ. ಗೋಕಾಕ
(ವಿನಾಯಕ)

ವೀಣೆ

ವೀಣೆ ನುಡಿಯುತಿಹುದು ವೀಣೆಗಾರನೆಲ್ಲಿ ಜಾಣೆ ?
ಕರುಳ ಮೇಲೆ ಬೆರಳ ಲೀಲೆ ನಡೆವುದೆಂತೊ ಕಾಣೆ
ಅವನ ತಲೆಯು ಅವನ ನೆಲೆಯು ತಿಳಿಯಬಲ್ಲೆವೇನೆ ?

ಎಂತು ಮೀಂಟಲಂತು ರಾಗ ಹೊಮ್ಮಿ ಹೊಸಲದಾಗಿ
'ಕಿಂ' ಕಿಮೆಂದು 'ತುಂ' ತುಮೆಂದು ನಿನದಗೈದು ಸಾಗಿ
ಯಾವನಾದ ಸಾಗರವನು ಸೇರಲಿದೆ ಸುಯೋಗಿ !

ಒಂದು ಮಿಡಿತಕೊಂದು ನುಡಿತ ; ಒಂದು ಜಾವ ಜಾರೆ
ಬೇರೆ ಭಾವ ತೂರಿ ಬಹುದು ಯಾವ ಮಾಯೆ ನೀರೆ ?
ಭಾವ ಭಾವಕೊಗೆವ ರಾಗರಸಧಿಗಿಹುದೆ ಮೇರೆ ?

ತಂತಿಯೆನಿತು ತಂತಿಯೊಳಗೆ ಮನೆಗಳೆನಿತು ?—ಹೇಳೆ
ಒಂದು ಚಣಕೆ ಒಂದು ನೂರು ಛಂದ ನಾದಲೀಲೆ !
ಸ್ಫುರಣಕೊಮ್ಮೆ ಜನನ ಮರಣ ! ತಾರಮಂದ್ರ ಮಾಲೆ.

ಕರುಳ ಬೆರಳ ಸೋಂಕು ತೇಂಕುವುಸುರಿಗಸುವ ಬೀರೆ
ಜೀವವಾಣಿ ತಾನತಾನಗೊಂಡು ಮೇರೆ ಮೀರೆ
ಏಕವಾಣಿಗಖಿಲ ಲೋಕ ಸಿಲುಕಿ ಪುಲಕವೇರೆ.

ನೆಲದ ಜಲದ ಗಗನದಖಿಲ ರೂಪವರ್ಣಜಾಲಾ
ಅಂತರಂಗದಲ್ಲಿ ಚಲಿಸೆ ಸ್ವರತರಂಗ ಮೇಳಾ
ಆದಿ ಅಂತವಿಲ್ಲದಂತೆ ನೆಗೆವುದಿದೋ ಲೀಲಾ.

ವೀಣೆ ನುಡಿದ ಶ್ರುತಿಗೆ ವಿಶ್ವ ತಳೆವುದೇನೆ ನ್ಯಾಸಾ ?
ವಿಶ್ವ ಮಿಡಿದ ಗತಿಗೆ ವೀಣೆ ಪಡೆವುದೇನೆ ಪ್ರಾಸಾ ?
ಯಾವ ತಾಳಮೇಳಕೊಲಿದುದೀ ಕಲಾ ವಿಲಾಸಾ ?

—ಡಿ. ಎಸ್. ಕರ್ಕಿ

ಕೋರಿಕೆ

೧

ಜಗವೆಲ್ಲ ನಗುತಿರಲಿ,
ಜಗದಳುವು ನನಗಿರಲಿ!
ನಾನಳಲು ಜಗವೆನ್ನನೆತ್ತಿಕೊಳದೇ ?
ನಾ ನಕ್ಕು, ಜಗವಳಲು, ನೋಡಬಹುದೇ ?

೨

ಕಿರವಾಗಿ ನನ್ನೆದೆಯು,
ಧರೆಯೆದೆಯು ಉಕ್ಕಿರಲಿ!
ಧರೆಯೊಳಗೆ ತೇಲಿಸುವೆನೆನ್ನೆದೆಯನು!
ಧರೆ ಬತ್ತಿ, ಎನ್ನೆದೆಯು ಉಕ್ಕಲೇನು ?

೩

ಪೊಡವಿಯೈಸಿರಿವಡೆದು,
ಬಡತನವು ನನಗಿರಲಿ!
ಕೈಯೊಡ್ಡೆ, ಪೊಡವಿಯೆನಗಿಕ್ಕದೇನು ?
ಪೊಡವಿಯೇ ಮೈಯಳಿಯೆ, ಮಾಡಲೇನು ?

೪

ವಿಶ್ವವನು ತುಂಬಿರುವ
ಈಶ್ವರನೆ ಅಳತೊಡಗೆ,
ಸೈತಿಡಲು, ಸೈಪಿಡಲು, ಬರುವನಾವಂ ?
ಹೇ, ತಂಡೆ, ಎನಲೆನ್ನನವನೆ ಕಾವಂ ?

— ಈಶ್ವರ ಸಣಕಲ್ಲ

ವಿಜಯ ನಗರದ ಗಿಣಿಗಳು

೧

ಈಗಲೆಲ್ಲಿಹಿರೆಲ್ಲಿ ಹಾರುವಿ
    ರೆಲ್ಲಿ ಹಾಡುವಿರುಲಿವಿರಿ ?
    ಆರು ಕೇಳುವರಾರು ನೋಡುವ
ರಾರು ಹೊಗಳುವರಿಂದು ನಿಮ್ಮಿಂಚರವನು ?
ಆವ ಗೀತೆಯೊಳಾವ ಮಾತನು
    ಕೋದು ಪಥಿಕರ ಸೆಳೆವಿರಿ !
ಕದನದುಲಿಗಳೊ ಕಲಹದುಲಿಗಳೊ
    ಶಾಂತಿ ಸುಖ ಸಂತೋಷವೊ ?
ಕಳೆದ ಕಾಲದ ಗತವಿನೋದದೊ-
    ಳೇನನಿಂದಿರದುಲಿವಿರಿ ?
ಬರುವ ಭಾಗ್ಯದ ಕಥನ ಕೌತುಕ
ವಾವುದನು ಅನುಗೊಳಿಸಿಕೊಂಡಿಹ-
    ರಾವುದಕೆ ಜನ ವೈಮರೆವರು ?

೨

ಮಾವು ಕಿತ್ತಳೆ ಬೇಲ ಹೇರಳೆ
    ಪೇರಲೆಯೊ ಅರಸೇರಿಲೊ ?
ವಿಜಸವಿಸ್ತೃತ ವಿಜಯನಗರದೊ-
ಳಾವ ಮರ ನಿಮಗಾಸರೆ ?
ಹಾಳು ಹಂಪೆಯೊ ಆನೆಗುಂದಿಯೊ ?
ಸೂಳೆಗೇರಿಯೊ ರಥದ ಬೀದಿಯೊ ?
ಪಾಳು ಬಿದ್ದಿಹ ಸಾಲು ದೇಗುಲ
    ದೆಡೆಯೊ ಅರಮನೆಯಾಚೆಯೊ !
ತೊರೆಯ ತುಂಗೆಯ ತಡಿನಿವೇಶವೊ
ಸಲೆಮೆರೆವ ಕಿಷ್ಕಿಂಧದೆಡೆಯೊ

ಮತಂಗಪರ್ವತ ಶಿಖರವೊ !
ಇಲ್ಲದಿರೆ ತುಸುದೂರ ಮೆರೆಯುವ
ಕಮಲಪುರದಲಿ ಬೆಳೆದ ಹೊಲಗಳೊ
ಶಾಲಿವನಗಳ ಪಙ್ಕ್ತಿಯೊ !
ನಿಮ್ಮ ನೆಚ್ಚಿನ ಬೀಡದಾವುದು
ಆವ ದೆಸೆ ನಿಮಗೊಗ್ಗಿ ಹೋಗಿದೆ
ಆವ ದಾರಿ ಸುಗಮ್ಯವು ?

೩

ವಿಜಯನಗರದ ವಿಜನಮಾರ್ಗದೊ-
ಳಂದು ನಿಮ್ಮನು ಕಂಡೆನು.
ಶೂನ್ಯ ಚಿತ್ರ ಚರಿತ್ರೆ ಮನವನು
ಬೆಂದು ಕುದಿಸಲು ಬಳಲಿದೆನ್ನನು
ನಿಮ್ಮ ನೋಟವು ನಲಿಸಿತು !
ಹಿರಿಯ ರಾಜನ ಹಳೆಯ ಗೀತವ
ಸಂದು ನೀವೆಮಗಾಗಿ ಹಾಡಲು
ನಿಮ್ಮ ಪರಿಚಯವಾಯಿತು.
ನಿಮ್ಮನದರಿಂದಿದುಕೊ ನಲಿನಲಿ-
ದೊಲಿದು ಹಿಗ್ಗುತೆ ಕೇಳುವೆ !
ನಿಮ್ಮನನುನಯದಿಂದೆ ಬೇಡುವೆ
ಒಮ್ಮೆ ಅಂದಿನ ತೆರದಿ ಸುಳಿಯುತೆ
ನನಗೆ ಸಂತಸವೀಯಿರಿ !
ನನ್ನ ಹೃದಯದ ಹಾಳುಹಂಪೆಗೆ
ಬನ್ನಿ ಹಾಡಲು ನಲಿಯಲು
ನಿಮ್ಮ ಬಳಗದ ಬಳ್ಳಿದೋರಣ
ತೂಗಲೆನ್ನದೆ ಬಾನಲಿ !
ನಿಮ್ಮ ಕಾಮನಬಿಲ್ಲು ಬಣ್ಣಗ-
ಳಂಚಲೆನ್ನೆದೆ ಮುಗಿಲಲಿ !
ನಿಮ್ಮ ಗೆಳೆತನದುಲಿಗಳೇಳಲಿ
ನನ್ನ ವೀಣೆಯ ಪಲುಕಲಿ !

೪

“ ಸಾಜ ಸಟೆಯಿನಿಸಿಲ್ಲವಿದರಲಿ
ರಾಜಕೀರಗಳಾವು ಕೇಳಿರಿ
ರಾಜಮನೆತನವೆಮ್ಮದು.

ಕೃಷ್ಣರಾಜನ ಕಾವುರಾಜ್ಯದ
ಪ್ರೇಮಮಂತ್ರಿಗಳಾವು ಗಿಳಿಗಳು
ಅಂದು ನಮ್ಮನ್ವಯದ ಗಿಳಿಗಳೆ
ರಾಣಿವಾಸದ ರಾಯಭಾರಿಗ
ಳಾಗಿ ಮೆರೆದರು ಹೆಸರನು!
ಕೃಷ್ಣರಾಯನ ಪಟ್ಟದರಸಿಯ
ನಾವೆ ಮುಂಗೈ ಗಿಳಿಗಳು!
ಪಚ್ಚೆಸರಳಿನ ರತ್ನ ಪಂಜರ-
ದಲ್ಲಿ ಹಾಸಿದ ತೋರಮುತ್ತಿನ
ಹಾಸಿನಲ್ಲಿಯೆ ಬೆಳೆದೆವು.
ಕೃಷ್ಣರಾಯನ ಮಡದಿ ನೀಡಿದ
ಹಾಲು ಸಕ್ಕರೆ ಹಣ್ಣು ಹಂಪಲು
ಇವುಗಳನೆ ತಿಂದುಂಡೆವು!
ನಾವೆ ತೀರ್ಮಾನಿಸುತಲಿದ್ದೆವು
ಅಂದು ರಾಣಿಯರಾಡಿಕೊಳ್ಳುವ
ಬಗೆಬಗೆಯ ಸಿಂಗರಗಳ!
ನಾವೆ 'ಸರಿ' 'ಸರಿಯಲ್ಲ' ವೆನ್ನುತ-
ಲಿದ್ದೆವವರಾಲಾಪದುಲಿಗಳ
ಪ್ರಣಯಮಂತ್ರದ ಪರಿಗಳ!
ನಾವೆ ಸಂಧಾನವನು ನಡೆಸುತೆ
ನಾವೆ ಮೇಳಿಸುತಿದ್ದೆವಂದಿನ
ರಾಜರಾಣಿಯರೊಲವನು!

೫

"ಎಂತು ಶಾಂತಿಯೊಳಂತೆ ಕ್ರಾಂತಿಯೊ-
ಳಾವೆ ಮೊದಲಿಗರಲ್ತೆ ಕಾದಲು
ರಣದ ರಕ್ಕಸ ತಗಡಿಯ.
ಧೀರ ಶೂರರ ಘೋರ ಕದನದೊ-
ಳಾವು ರಣಕಹಳೆಗಳನೂದಿದೆ-
ವಾವು ಮಿಂಚಿದೆವಾವು ಮೊಳಗಿದೆ
ವಾವು ಬಡಿಯುತೆ ಕೂಗುತೆ!
ರಾಜಕೀರಗಳಾವು ರಣದಲಿ
ಬಡಿದು ಬೀಳುವ ಡೇಗೆಯಾದೆವು
ಅರಿಯ ರಕ್ತವ ಹೀರಲು.

ಪಂಚವರ್ಣದ ಅರಸುಗಿಳಿಗಳು
ರೂಕ್ಷ ರಣಹದ್ದುಗಳ ತೆರದಲಿ
  ಅರಿಯ ನೆಣವನು ಕಡಿದೆವು!

೬

"ಅಂದಿನಿಂದಿದುವರೆಗು ಇಲ್ಲೆ
ಅವರ ಸ್ಮಾರಕದಂತೆ ಸುಳಿಸುಳಿ
  ದಲೆಯುತಿರುವೆವು ಬನದಲಿ!
ವಿಜಯ ನಗರವ ನೋಡೆ ಬರುತಿಹ
ಕವಿಗೆ ಹಾಡುವೆವಿಂತು ಅಂದಿನ
  ಕಥೆಯನೆಲ್ಲವನುಲಿಯುಲಿ!
ಏನ ಹೇಳಿದರೇನು ಫಲವಿದೆ
ಸಂದು ಹೋಯಿತು ಮಿಂಚಿ ಹೋಯಿತು
ವಿಜಯನಗರದ ರಾಜರಳಿದರು
  ಕೀರ್ತಿ ಮಾಸಿತು ಕಂದಿತು!
ದೊರಕಿತೆಮಗಿದೊ ವಾಸ ವನದಲಿ;
ಬೆಂದು ಬೇಯುವೆವಾವು ಮನದಲಿ
ನಮ್ಮನೀ ಗತಿಗೇತಕಿಕ್ಕಿತು
  ವಿಧಿಯು ಹೇಸದೆ ಹೆದರದೆ?"

೭

ಎಂದು ಗಿಳಿಗಳು ತಮ್ಮ ವಂಶಜ-
ರಂದು ವೈಭವದಿಂದ ಮೆರೆದಾ
ಕೃಷ್ಣರಾಜನ ರಾಜನಾಳಿಕೆ
  ಯನ್ನು ಹಾಡುತಲುಲಿದವು!
ಅವನ ಅಂತಃಪುರದ ವೈಭವ
ತಮ್ಮ ಹಿರಿಯರಿಗಿದ್ದ ಸಲುಗೆಯು—
ನಲ್ಲಿ ನಡೆಯುವ ಆಟಪಾಟವ
  ನೆಲ್ಲವನು ನಲಿದುಲಿದವು!
ಉಲಿದು ಹೋದವು ಹಾರಿ ಹೋದವು
  ಮೆತ್ತಿ ಕಣ್ಣಿಗೆ ಬಣ್ಣವ!
ವಿಜಯನಗರದ ವೀರ ಚಿತ್ರವ—
  ಸೊತ್ತಿಹೋದವು ಹಾರುತೆ.

ಸಂಜೆ ಸಮಯದ ಕೆಂಪು ಕದಿರನು
ತುಂಗೆ ತೊರೆಯಲಿ ತೊಳೆಯಲೋಸುಗ
ರವಿಯು ಹೊಳೆಯೊಳಗಿಳಿಯುವಂದಿನ
ಬಣ್ಣ ಬಣ್ಣದ ನೀರು ತೆರೆಯನು
ಹರಡಿ ಹಾಸುತೆ ಹಾರಿ ಹೋದವು
ಗಾಳಿವಟ್ಟೆಯ ಅಂಚಲಿ !
ಪಚ್ಚೆ ಹವಳಗಳಿಂದ ಕೂಡಿದ
ರನ್ನ ಮಾಣಿಕ್ಯಗಳ ಕೋದಿಹ
ಚಿನ್ನದೆಳೆಸರಿಗೆಯಲಿ ಕಟ್ಟಿಹ
ಕೆಂಪು ಹಸುರಿನ ನೀಲಿ ಹಳದಿಯ
ಮಕರ ತೋರಣದಂತೆ ರಂಜಿಸಿ
ಹಾರಿ ಹೋದವು ಕಣ್ಣಿನಾಚೆಗೆ
ಬಣ್ಣ ಮಿಂಚನು ಚಿಮುಕಿಸಿ !

೮

ವಿಜಯನಗರದ ವೀರಶುಕಗಳೆ
ನೀವೆ ರಸಿಕರು ನೀವೆ ಕಲಿಗಳು
ನೀವೆ ದೇವರ ದೂತರು
ಅಲ್ಲದಿರಲಿನ್ನಾವುದೋ ಸೌಂ-
ದರ್ಯಲೋಕದ ಋಷಿಗಳೊ !
ಮುಗ್ಧ ಮೋಹವ ಸೂಸುವಮರಾಂ-
ಗಣದ ಗಿಣಿಗಳೊ ರಾಗಿಣಿಯರೊ ?
ಕೃಷ್ಣರಾಯನ ಚಿತ್ರಗಾರರು
ಮಡಿದು ಮರಳಿದೊ ಪಂಚವರ್ಣದ
ಗಿಳಿಗಳಾಗಿಯೆ ಬಂದರೊ !
ಅವನ ಕಾಲದ ಕವಿಗಳೆಲ್ಲರು
ನಿಮ್ಮ ಅವತಾರದಲಿ ನನ್ನೆಡೆ-
ಗುಲಿಯ ಬಂದರೊ ಕಾಣೆನು !
ಅವನ ರಾಜ್ಯದ ಹಿರಿಯ ಗಣಿಕೆಯ
ರಿಂತು ಬಂದಿಹರೇನು ಗಿಣಿಗಳ
ರೂಹಿನಲಿ ಕುರುಹಳಿಸುತೆ !
ನಿಮ್ಮ ಮೇಲೆನಗಿರುವ ಮೋಹದ
ಮೇರೆ ಮೀರಿರಲಿಂತು ಕೇಳಿದೆ
ಮುನಿಸ ತಾಳಲು ಬೇಡಿರಿ.

ನನ್ನ ಅಪರಾಧವನು ಮನ್ನಿಸಿ-
ರೆನ್ನ ತೆಗಳಲು ಬೇಡಿರಿ.

೯

ನಿಮ್ಮ ಪರಿಚಯವಿಂತು ನುಡಿಸಿತು
ಹೃದಯ ಮಿಡಿಯಿತು ಸಡಗರದಿ
ರಸಶರಧಿಯುಕ್ಕಿತು ಹರಿಯಿತು
ಆಸೆ ತೀರಿ ದುರಾಸೆ ಬೆಳೆಯಿತು
ಅದರಿನಿದುಕೋ ಬೇಡುತಿರುವೆನು
ನಾನು ಒಬ್ಬಂಟಿಗನು ಮೌನದೊ
ಳುಲಿಯ ಮೋಹಕೆ ಸಿಲುಕಿರೆ
ಕವಿತೆ ಬಳಿಯಲಿ ಕುಳಿತು ಮುನಿಸಿನ
ಸೋಗುತೆಗೆಯುತೆ ಬಿಂಕದಿಂದಲಿ
ಅಟ್ಟಹಾಸವ ಮೆರೆದಿರೆ
ನೀವು ಬನ್ನಿರಿ ಹಾರಿ ಬನ್ನಿರಿ
ನನಗು ಕವಿತೆಗು ಸಂಧಿಮಾಡಿರಿ
ಮೇಳವಿಸಿರೆಮ್ಮಿನಿಬರ
ಅಲ್ಲದಿರೆ ಮನಕಹಿತವೆನಿಸಿದ
ಜನದ ಸಂಕಟವೆನ್ನ ನೋಯಿಸ-
ಲಂದು ಬನ್ನಿರಿ ಹಾರಿ ಬನ್ನಿರಿ
ಹರುಷವೆಲ್ಲವ ತನ್ನಿರಿ.
ಮರಳಿ ನನ್ನನು ವಿಜಯನಗರದ
ರಾಜ್ಯದಲಿ ಅಲೆದಾಡಿಸಿ!
ಅಲ್ಲಿ ಅಂದಿನ ಸೌಖ್ಯವೆಲ್ಲವ
ಉಲಿಯ ಹಾಡಲಿ ಹೇಳಿಸಿ!

೧೦

ವಿಜಯನಗರದ ವೀರಶುಕಗಳೆ
ನೀವೆ ಧನ್ಯರು ಮಾನ್ಯರು;
ಹಾಳು ಹಂಪೆಯ ಹೊಸದು ಮಾಡುವ
ನೀವೆ ಪುಣ್ಯಪುನೀತರು
ನಿಮ್ಮ ವೀರರ ಗಡಸ ಕೇಳಲಿ
ಎಲ್ಲ ನಾಡಿನ ಗಡಿಗಳೂ,
ನಿಮ್ಮ ರಸಿಕರ ಸರಸ ಕೇಳಲಿ

ಎಲ್ಲ ಕವಿಗಳ ಕಿವಿಗಳೂ.
ನಿಮ್ಮ ಸಂತತಿ ಬೆಳೆದು ಬಾಳಿ
ಚಿರಾಯುವಾಗಲಿ ಬಳಗವು !
ನಿಮ್ಮ ಮುಂದಿನ ಮರಿಗಳಾದರು
ಮತ್ತೆ ಭಾಗ್ಯೋದಯದಲಿ
ರಾಜಕೀರಗಳಾಗಿ ಮೆರೆಯಲಿ
ರಾಯಭಾರಗಳನ್ನು ತೆರೆಯಲಿ
ನಮ್ಮ ರಾಜ್ಯೋದಯದಲಿ.

—ಎಸ್. ವಿ. ಪರಮೇಶ್ವರ ಭಟ್ಟ

ವರುಣ

ಇಂದು ಸಂಧ್ಯೆ ಎನ್ನ ಕೊಠಡಿ
ಗುಪ್ತ ಸಂಕಟಗಳ ದುರ್ಗ!
ಮನೆಯ ಮೆಟ್ಟಲಿಳಿಯೆ ಮಹಾ
ನಗರವಿದರ ಮಾಯಮಾರ್ಗ!
ಆಕಾಶವು ಮುಸುಕಿದ್ದರು
ಬಿಸಿಲರಂಗು ಮಿರುಗುತಿಹುದು
ಕುಳಿರ್ಗಾಳಿ ಬೀಸಿದ್ದರು
ಬೆಪ್ಪಿನೊಪ್ಪ ಸಂಜೆಗಿಹುದು
ಬಾನ ಮೂಲೆಯಿಂದ ತಾರೆ-
ಯೊಂದು ಕಣ್ಣ ಮಿಟುಕುತಿಹುದು
ದಾರಿಯುದ್ದ ಸಾಲುದೀಪ
ಮಿಣುಕಿ ಕೆಣಕಿ ಕರೆಯುತಿಹುದು
ನಾಲ್ಕು ಕಡೆಗೆ ನೇಹನಗೆಗೆ
ಎನ್ನ ಹೃದಯವರಳಿ ಮನಸು
ಮಿಡುಕ ಮುಸುಕ ಹರಿದಿದೆ;
ಬೇಸರಿಕೆಯ ಕೋಟೆಯಿಂದ
ಯೋಚನೆಗಳ ಬಾಗಿಲೊಡೆದು
ನಸುಕಿನೊಡನೆ ಬೆರೆತಿದೆ
ಕುದಿವ ಜೀವ ಕೊಚ್ಚಿ ಹರಿವ
ಜನೋದಧಿಯ ಉರ್ಮಿಯೊಡನೆ
ಉಕ್ಕುತೊಂದು ವೀಚಿಯಾಗೆ
ನನ್ನ ಕರೆದಿದೆ!
ನೂರುಮಾರು ನಡೆಯಲಿಲ್ಲ
ಸ್ವಾನುಭವದಿ ಬಾನನರಿತೆ!
ದಿವಾನಿಶೆಯ ಸಂಗಮದಲಿ
ಕುಣಿವ ದಿಕ್ತಟಾಕದಲ್ಲಿ

ಅಪ್ಸರೆಯರ ಅಮರಗಾನ
ಕೇಳಿತೆಂದು ಭ್ರಮಿಸಿಕೊಂಡ
ಧ್ವನಿಯು ಬರಿ ಮರೀಚಿಕೆ!
ಬೀಸುತಿದ್ದ ಗಾಳಿಯಲ್ಲಿ
ಕೇಶಕಿಂತ ಸೂಕ್ಷ್ಮವಾದ
ನೀರ ಕಣವು ಸೇರಿಕೊಂಡ
ಸುವ್ವಿಸೇಸೆಯಲ್ಲಿ ಕಂಡೆ
ಸೀರು ಮಳೆಯ ಸಂಚಿಕೆ!
ಯಾವ ಮುಗಿಲ ಕೋವಿಯಲ್ಲೋ
ಸಿದ್ಧವಾದ ನೀರು ಬೆಳ್ಳಿ
ಸೂಜಿಯಂತೆ ಕೆಳಗೆ ಕರೆದು
ಗಾಳಿಹೊಯ್ದ ಕಡೆಗೆ ಹರಿದು
ಮೌಕ್ತಿಕಗಳ ತುಂತುರಂತೆ
ಥಳಥಳಿಸುವ ಮಣಿಗಳಾಗಿ
ನನ್ನ ಮುಖವ ಮುತ್ತಿಕೊಂಡು
ಉಸಿರಿನೊಡನೆ ಸೇರಿತು!
ಕಟ್ಟಬೇಸಗೆಯಲಿ ಬೆಂದ
ತಪ್ತವಾದ ಮೃತ್ತಿಗೆಯಲಿ
ಮೊದಲ ಹನಿಯ ಸಿಂಚನಕ್ಕೆ
ಉದ್ಭವಿಸಿದ ನೆಲದ ಗಂಧ
ಮಲರಿನಲ್ಲಿ ಮಲೆತುಕೊಂಡು
ಮಳೆಗಾಲವು ಇಳೆಗಿಳಿದಿಹ
ಮೊದಲ ಸುದ್ದಿ ಸಾರಿತು!
ಮಳೆಗಾಲದ ಮೊದಲ ಹನಿಯು!
ಎನ್ನ ಅಧರಕಮೃತ ಝರಿಯು!
ಆಸರಿಸಲಿ ಆಸೆಯಲ್ಲಿ
ಹೀರಿ ಹೀರಿ ನನ್ನ ನಾಡಿ
ನರಗಳೆಲ್ಲ ಉಬ್ಬಿಕೊಂಡು
ಮತ್ತನಾಗಿ ಸುತ್ತಲೆಲ್ಲ
ಹೊಸಬೆಳಕಿನ ಹೊಸ ಬಾಳಿನ
ಭೂಷಣಗಳ ಸೂಚನೆಗಳನು
ಕೊನರುತಿಹುದ ಕಂಡೆನು.
ಶಬರರಟ್ಟಹಾಸದಿದುರು
ಕರಿಯ ಗಜದ ಗುಂಪಿನಂತೆ

ಅಂಬರದಲಿ ಕಾಳಮೇಘ-
ವಳಿಯು ಚಲನವಲನ ಕಂಡು
ಇಂದು ರಾತ್ರಿ ಚೈತನ್ಯದ
ವೀರಕವಚ ಧರಿಸಿ ಧಾತ್ರಿ
ನಡೆದಿರುವಳು ಸಡಗರದಲಿ
ಘೋಷಯಾತ್ರೆಗೆಂದೆನು.
ನಸುಕು ನಿಶೆಯ ಮರೆಗೆ ಜಾರಿ
ಪುಡಿಹನಿಗಳು ಪುಷ್ಪವಾಗಿ
ತಿರಿತಿರಿತ್ತಿರಿತ್ತಿರೆಂದು
ನಲಿದು ನಗುತ ಇಳಿದು ಬಾರೆ,
ಸರಿಗೆಯಲಿ ತೂಗುತಿರುವ
ಸಾಲು ದೀಪ ಗಾಳಿಯಲ್ಲಿ
ರಬ್ಬರಂತೆ ಮಣಿವ ಕುಣಿವ
ಕಿರಣಕೋಟಿಗಳನು ನೀರ
ಧಾರೆಯಲ್ಲಿ ವೀಯಿಸುತಿರೆ
ಜೀವನದಿಯ ದಿನಚರಿಯಲಿ
ಜೀವನವನು ಚುಂಬಿಸುತಿಹ
ಯಾವ ಬಾನ ಬಿಂಬಿಸದಿಹ
ಮಾರ್ಗಗಳಸ್ವಾಳ್ಟಿನಲ್ಲಿ
ಅಲ್ಲಿ ಇಲ್ಲಿ ಸೂರು ಸಣ್ಣ
ನೀರ ದರ್ಪಣದಲಿ ಇಂದು
ಇಂದ್ರಚಾಪದೆಲ್ಲ ಬಣ್ಣ
ಕೂಡಿ ಮಿರುಗಿ ಕರಗುತಿದೆ,
ಅಜ್ಞಾತ ಶಕ್ತಿಯೊಂದು
ನಡಿಗೆಗೊಂದು ಅವಸರವನು
ಬಿತ್ತಿ ನನ್ನ ನಾವ ಕಡೆಗೊ
ಸೆಳೆದುಕೊಂಡು ಹೋಗುತಿತ್ತು.
ವಿದ್ಯುತ್ತಿನ ಹಗ್ಗವನ್ನು
ದಿಕ್ಕಿನಿಂದ ದಿಕ್ಕಿಗೆಳೆದು
ಮೃದು ಮೃದಂಗ ಸ್ವರಕೆ ಕಡಲ
ದೊಂಬರನ್ನು ಬಾಂಗೆ ಸೆಳೆದು
ಕಾಣದ ಕೈ ಅಂಬರದಲಿ
ಚುಕ್ಕೆಗಳನು ಹೆಕ್ಕುತ
ಕರಿಬೊಗಸೆಯಲಿಕ್ಕುತ

ಮುಗಿಲಿಸಂಗಳದಲಿ ಈಗ
ಯಾವ ಆಟ ಹೂಡಿದೆ?
ಮೇದಿನಿಯ ಒಯ್ಯಾರದೊನಪು
ಅರೆ ನಿಮಿಷದಲಿ ಮಾಯವಾಯ್ತು!
ಮುಖದ ಮೇಲೆ ರೌದ್ರ ಮುದ್ರೆ
ಮೂಡಿ ಭಾವ ಬದಲಿತು!
ಬರ್ಡಿಲದಲಿ ಜಲದ ಕೊಳಗ
ಸ್ಥಾನದಿಂದ ಕದಲಿತೊ!
ನೀರು ಕಟ್ಟಿ ನೀರು ಸುರಿಯೆ
ಮತ್ತೆ ಭಗೀರಥನ ಶಿರದ
ಮೇಲೆ ಮುಗಿಲಗಂಗೆ ಹರಿದು
ಬರುವಳೇನೊ ಎಂದುಕೊಂಡು
ಕುತೂಹಲದಿ ನೋಡಿದೆ!
ಇಳೆಯಲೊಂದು ನವಸೆಳೆ
ಪ್ರಳಯದಂತೆ ಕೋಲ್ಮಳೆ!
ದೇವಲೋಕ ದ್ವಾರದಲ್ಲಿ
ಮೇಘ ದುರ್ಗದರೆ ಮರೆಯಲಿ
ಇಂದ್ರ ಪದವಿಯೊಡೆತನಕ್ಕೆ
ಇಂದು ರಾತ್ರಿ ಮರಳಿ ಸಿಡಿದ
ಸುರಾಸುರರ ಸಮರದಲ್ಲಿ
ಇಂದ್ರಾಯುಧ ಚಂದ್ರಾಯುಧ
ಗಗನದಲ್ಲಿ ಹೊಂಚಿ ಮಿಂಚಿ
ಪ್ರಳಯ ವರ್ಷ ಧಾರೆಗೊಂದು
ಪ್ರಭೆಯ ಹಿನ್ನೆಲೆಯನು ಕಟ್ಟಿ
ಕರಿಯ ಬಾನ ಬೆಳಗಿತೊ!
ನರಕ ನದಿಯ ಕಡವಿನಲ್ಲಿ
ಕಾವಲಿದ್ದ ಮಹಾಶ್ವಾನ
ಚರ್ಬರನಿಗೆ ಯಾವ ಅನಿ-
ಚ್ಛಿತನ ನೆರಳ ಸುಳಿವು ಕಂಡೊ
ಕೋಪ ಕೆರಳಿ ಮೂರು ಕೊರಳ
ನರಗಳುಬ್ಬಿ ಶಬ್ದಕೊಬ್ಬಿ
ಸರರರಿಯದ ಬಂದು ಬೊಗಳು
ಪಾತಾಳದ ಜಠರದಿಂದ
ಭೂತಳಕ್ಕೆ ಸೀಳಿ ಬಂದು

ಎಂಟು ದಿಕ್ಕಸಲೆದು ಕೊನೆಗೆ
ನೀರಿನೊಡನೆ ಸಮರ ಹೂಡಿ
ಮಿಂಚಿನೊಡನೆ ಕಲೆತು ಕೂಡಿ
ಸಿಡಿಲಿನಂತೆ ಹೊಡೆಯಿತೊ !
ನಾಗಲೋಕದತ್ತಣಿಂದ
ನಾಗಿಣಿಯರ ಹುತ್ತದಿಂದ
ಬುಸ್ಸೆಂದು ಹಿಸ್ಸೆಂದು
ಕೋಟಿಯುಸಿರು ಏರಿ ಬಂದು
ಬಾನನಳೆವ ಸಾಹಸದಲಿ
ಮುಗಿಲಹತ್ತಿ ದಿಕ್ಕಸುತ್ತಿ
ಯೌವನದುನ್ಮಾದದಲ್ಲಿ
ಮಳೆಯು ಕೂಡಿ ಕ್ರೀಡಿಸುತ್ತ
ಸೃಷ್ಟಿಯನ್ನು ಪೀಡಿಸುತ್ತ
ಸುಳಿವ ಸುಂಟರಾಯಿತೊ !
ಚಪ್ಪರಿಸುವ ಚಬುಕಧ್ವನಿಯ-
ನೆದುರಿಪ ಸಾಹಸದಲೆರಡು
ಕಾಲಲೊಮ್ಮೆ ನಿಂತು ನಿಂತು ಕೊನೆಗೆ
ಚದುರುತಿರುವ ಹಯದ ಹಿಂಡು ;
ಮೇವ ಮೊಲದ ಹೊಲದ ಮೇಲೆ
ಕೋವಿಸದ್ದು ಸಿಡಿದು ಬೀಳೆ
ಮರೆಯು ನೂರು ಬಿಲಗಳಿಂದ
ಹೊರಗಿಣುಕುವ ಮೊಲದ ಪುಂಡು ;
ದಾರಿಯೆಲ್ಲ ನೀರಾದರು
ನಡೆವೆವೆಂಬ ನಿರ್ಧರದಲಿ
ಹೊರಟು ಬಾನಿನಿಂದ ನೀರಿ-
ನೊನಕೆ ಇಳಿಯುವದನು ಅರಿತು
ಇದರ ಜೋಗಿನಲ್ಲಿ ಎದೆಯು
ಕೆಚ್ಚು ಕರಗಿ ಕೊಚ್ಚಿ ಹೋಗಿ
ಕಂಡು ಮನೆಯ ಮಾಡಿಸಡಿಯ
ತಂಗಿನಲ್ಲಿ ಕಾಯ್ವುದೊಂದು
ಬೇಸರದಲಿ ಬಳಲಿಕೆಯಲಿ
ತಪ ತಪಿಸುವ ಜನದ ದಂಡು
ಯಾವ ಚಿತೆಯಲುರಿಯುವೆನ್ನ
ಆತ್ಮವನ್ನು ತಣಿಸಲೆಂದೊ,

ಬಾಳ ಭಾರ್ಗವಿಯಲಿ ಜಲವು
ಸತತ ಹೊಮ್ಮಿ ಹರಿಯಲೆಂದೊ,
ಯಾವ ಧ್ವನಿಯ ಗುಪ್ತಕರೆಗೆ
ವಿಧಿಯ ಸೂಚನೆಯಿದೊ ಎಂದೊ,
ನೇರವಾಗಿ ವಾರಿಯೊಡನೆ
ದಾರಿ ನಡೆದೆ, ನಡೆದು ನಡೆದು
ಕೊನೆಗೆಯೊಂದು ನಿಮಿಷದಲ್ಲಿ
ಮೇಲಿನಿಂದ ಕರೆದು ಕರೆದು
ನೀರು ಕೂಡ ಉಬ್ಬಸದಲಿ
ತೊದಲುತಿಹುದ ಕಂಡೆ ; ಬಳಿಕ
ಬೇಸರದಲೊ ಬೇನೆಯಲ್ಲೊ
ಸೂಕ್ಷ್ಮವಾದ ಹೊಗೆಯ ಹಾಗೆ
ಬುವಿಯ ಬಸಿರ ಬಗೆದುಕೊಂಡು
ಯಾವ ತಿದಿಯ ಬಲದಲೆದ್ದೊ
ಕೆಮ್ಮಿ ಕೆಮ್ಮಿ ಬುಗ್ಗೆಯಾಗಿ

ಚಿಮ್ಮುತಿಹುದ ಕಂಡುಕೊಂಡೆ
ಬಾಳ ಶರಧಿ ಮಥನದಲ್ಲಿ
ನಗರವೇರುವನ್ನು ಸುತ್ತಿ
ಬಾಳುವೆಗಳ ತಡೆದು ತಡೆದು
ದಿನದ ಕೊನೆಗೆ ರಜನಿಯಲ್ಲಿ
ಅಸುವ ತೊರೆದ ವಾಸುಕಿ ಈ
ಜನವಿಹೀನವಾದ ಕಾಳ
ವೀಥಿ! ಇದರ ಉದರದಲ್ಲಿ
ಅಲ್ಲಿ ಇಲ್ಲಿ ಸಿಡಿದು ಕಾರ್ವ
ಕೆಂಪು ಬಿಳಿದು ನೀರ ಸೊರೆಯು
ವಿಷದ ಮೊರೆಯು ಗುಗ್ಗುಳಿಪುದು.
ಒಂಟಿಯಾಗಿ ಒದ್ದೆಯಾಗಿ
ನೀರ ಹೊಯ್ಲ್ಲನೇಕನಾದ-
ನೀರವದಲಿ ನಡೆಯುವೆನ್ನ
ಹೆಜ್ಜೆಯಿದಕೊ ಮುಗ್ಗರಿಸುತ
ಕುಗ್ಗುತಿಹುದು. ಆದರೆನ್ನ
ಮನದ ಪಕ್ಷಿ ಗರುಡವೇಗ-
ದಿಂದ ವಿಶ್ವವನ್ನು ಅಲೆದು

ಮೋದದಿಂದ ಹಿಗ್ಗಿರುವುದು.
ಹೃದಯಗುಡಿಯ ಸೊಡರಿನಲ್ಲಿ
ಪ್ರಭಾಕಿರಣ ಪ್ರಜ್ವಲಿಪುದು.
ಉರ್ವಶಿಯರ ನಾಟ್ಯದಂತೆ
ಎನ್ನ ಜೀವ ನಲಿಯುತಿಹುದು.
ಕಿರುನೆನಪಿನ ಕೀಟ ಮಾತ್ರ
ನಲ್ಗನಸಿನೀ ಚೆಲ್ವನಳಿಸೆ
ಸೂಜಿಮುಖದ ಮುಳ್ಳಿನಿಂದ
ಮೆಲ್ಲನೆನ್ನ ಕೀರುತಿಹುದು :—
ಏಥೂರ್ಳಿಗೆ ಬೇಗಾರ್ಳಿಗೆ
ನಿನ್ನ ಕಿಟಕಿ ತೆರೆದಿಹುದೊ ?
ಕಾರ್ಮುಳಿಯುಲಿ ನೀಗರ್ುದ್ಧುತ
ಕಿಟಕಿಯೊಳಗೆ ಸುರಿದಿಹುದೊ ?

—ಹೇಜಾವರ ಸದಾಶಿವರಾಯರು

ಬರಿಗೊಡಗಳಿಗೆ ಸಮಾಧಾನ

ಬರಿಗೊಡಗಳಿಗೆ ಸಮಾಧಾನ ಹೇಳುತಿದೆ ನೀರಿಲ್ಲದ ನಲ್ಲಿ
ಮಟಮಟ ಮಧ್ಯಾಹ್ನದಲ್ಲಿ.
ಬೀದಿಯೊಳಗಾಗಿ ಒಂದು ತಲೆಯಿಲ್ಲ;
ಬಿಸಿಲೇ ಎಲ್ಲ!

ನಿರ್ಜೀವವಾಗಿದೆ ನಿರಂತರ ನಿರ್ಭಾಗ್ಯ ನೀಲಗಗನ
(ರಾತ್ರಿಯ ಮಾತು ರಾತ್ರಿಗಾಯಿತು; ಈಗ ಹೇಳಿ!)
ಒಂದಾದರೂ ಬಿಳಿಮುಗಿಲೇ, ಶಾಂತಿಯೇ, ರಾಮರಾಮ!
ಹತ್ತು ಲಕ್ಷ ಜನದುಸಿರಾಚೆಗೆ, ಊರಾಚೆಗೆ
ಯಾರದೋ ಪಾಳು ಹೊಲದೊಳಗೆ
ತಲೆಯ ತಗ್ಗಿಸಿ ಸುಟ್ಟ ಕೂಳೆಯನು ಮೇಯುತಿವೆ
ಊರ ದನ ಗುಂಪುಗುಂಪಾಗಿ; ನಿಮಿಷದ ಹಿಂದೆ
ಕೊರಳ ಗೆಜ್ಜೆಯ ಇಂಪು ಹರಿದಿತ್ತು ಬೇಲಿಗಳ ಮೇಲೆ
ಹೊಗೆಯ ಗೋಪುರವೇಳುತಿದೆ ಬಂಡೆಗಳ ಮುಂದೆ,
ತರಗೆಲೆ ರಾಸಿಗಾಗುತಿದೆ ನಿಷ್ಕಾಮದಹನ.
ಗುಡಿಯ ಬಾಗಿಲಲಿ ಬಿಸಿಲ್ಗುದುರೆಗಳ ನೀರವ ನಿರ್ಗಮನ;—
ಮುತ್ತಿನ ಹಾರವಿಲ್ಲ, ಹತ್ತುವ ದೇವರಿಲ್ಲ,
ಕಚ್ಚುವುದಿಲ್ಲ, ಒದೆಯುವುದಿಲ್ಲ—ಹೆಸರಿಗೆ ಕುದುರೆ!
ಯಾರಿಗೆ ಬೇಕೀ ಗತವೈಭವಗಳ ಪರಂಪರೆ?
ಬೋರೆಯಿಂದ ಬಳಲಿ ಬಂದ ಕುಂಟುಗಾಳಿಗೆ
ಪರ್ವತವಾಗಿದೆ ಮಣ್ಣುಮಾಳಿಗೆ.
ದೂರ ದಾರಿಯಲಿ ಎದ್ದ ದೂಳಿನಲಿ
ಉಸಿರೆಳೆಯುತ್ತಿದೆ ಲಾರಿ.
ಬಾಂದಳದ ವಿಮಾನ
ಅದೆಷ್ಟು ನಿಧಾನ?
ದಾರವಿಲ್ಲದ ಸೂಜಿ ನಾಟಿದೆ ನೀಲಿಬಟ್ಟೆಯಲ್ಲಿ.

ತಲೆಗೆದರಿದ ಗಿಡಬಳ್ಳಿ ಬೆಂಡಾಗಿವೆ ಬಿಸಿಲಲ್ಲಿ.
ಮಣ್ಣಿನ ಬಣ್ಣ ಬಂದಿದೆ ಚೆಲುವಿನ ಕಣ್ಣಿಗೆ;
ನೀರಡಿಕೆಯ ದೀಪವುರಿಯುತಿದೆ
ಕವಿತೆಯ ತುಟಿಯಲಿ ಸಣ್ಣಗೆ.
ಇದು ಹಸಿರಿಲ್ಲದ ಕೆಸರಿಲ್ಲದ ಉಸಿರಿಲ್ಲದ ನರಕ.
ಜಳ್ಳಾಗಿದೆ ಈ ಮುದಿಮರವನಕ;
ಹಕ್ಕಿ ತಂಗುವದಿಲ್ಲ;
ಕೋತಿ ಜಗ್ಗುವುದಿಲ್ಲ—
ಏನಿದರ ಅಮರ ಭಾವ?
ನೂರು ವಸಂತಗಳ ಹೀರಿ ಕಟ್ಟರೆಯಾಗಿದೆ ಇದರ ಜೀವ;
ಹಾವಿನ ಸಂಸಾರದ ಪೊಟ್ಟರೆಯಾಗಿದೆ ಇದರ ದೇಹ.
ಯಾರಿಗೆ ಬೇಕು ಇದರ ಸ್ನೇಹ
ಬಿರುಗಾಳಿಯಾದರೂ ಬೀಸಿ
ಇದು ಬಿದ್ದರೆ ವಾಸಿ!
ಯಾವ ಬಣ್ಣ ಬಂತಂತೆ ಚೆಲುವಿನ ಕಣ್ಣಿಗೆ?
ಕವಿತೆಯ ತುಟಿಯಲಿ ಉರಿವುದೇನು ಸಣ್ಣಗೆ?
ಹಳೆಯ ಪುಸ್ತಕದಲ್ಲಿ ಹಿಂದೆಯೇ ಬರೆದಿದೆ:
"ತುಂಬಿದ ಕೊಡ ತುಳುಕುವುದಿಲ್ಲ"
(ಭೇಷಾಗಿದೆ ಬರವಣಿಗೆ)
ಸಾವಿರ ಬೀದಿಗಳಲ್ಲಿ ನಾಳೆ ನಡೆಯಲಿದೆ
ಭಾಗಿರಥಿಯ ಮೆರವಣಿಗೆ.
ಬರಿಗೊಡಗಳಿಗೆ ಸಮಾಧಾನ ಹೇಳಿದ್ದೂ ಹೇಳಿದ್ದೇ
ನೀರಿಲ್ಲದ ನಲ್ಲಿ
ಮೃದು ಸ್ವರದಲ್ಲಿ
"ತುಂಬಿದ ಕೊಡ ತುಳುಕುವುದಿಲ್ಲ."
ಬರಿಗೊಡವೂ ತುಳುಕುವುದಿಲ್ಲ,
ತುಳುಕಿದರೂ ಚಿಂತೆಯಿಲ್ಲ,
ಎಂದಿಗೆ ಬರುವುದು ನೀರು?
ಉತ್ತರವೇ ಇಲ್ಲ.
ಬರಿಗೊಡಗಳಿಗೆ ಸಮಾಧಾನ ಹೇಳುತಿದೆ ನೀರಿಲ್ಲದ ನಲ್ಲಿ:
"ತುಂಬಿದ ಕೊಡ ತುಳುಕುವುದಿಲ್ಲ."

—ಕೆ. ಎಸ್. ನೃಸಿಂಹಸ್ವಾಮಿ

ಮಣ್ಣಿನ ಮೆರವಣಿಗೆ

೧

ತಿರುಗುತ್ತಿದೆ, ಎಂದೋ ಸಿಡಿದಾರಿದ
ಅಗ್ನಿಯ ಪಿಂಡ;
ಆರಿದೆಯೆಂದವರಾರೊ, ಇನ್ನೂ ನಿಗಿ ನಿಗಿ ಉರಿಯುತ್ತಿದೆ
ಅದರೆದೆಯಾಳದ ಕುಂಡ!
ಹರಿಯುತ್ತಿವೆ ಬೆಂಕಿಯ ಹೊಳೆ
ತಣ್ಣನೆ ಕಡಲೊಳಗೆ;
ಹೊಗೆಯಾಡುತ್ತಿದೆ ಸುಮ್ಮನೆ ನುಣ್ಣನೆ ಬಾನೊಳಗೆ.
ಬಿದ್ದಿವೆ-
ಒಡ ಮುರಿದೆದ್ದಿವೆ ಗಿರಿ ಗಹ್ವರ-
ಯುಗ ಯುಗಗಳ ನೋವೆ!
ದರಿಕಂದರದೊಳಗಿನ್ನೂ ಹರಿದಾಡಿದೆ ಸಂಶಯವೆ.

ಕುದಿಯುವ ಆ ಬಸಿರಿನ ಆವುದೊ ರಸ ಹೀರಿ,
ಚಿಮ್ಮಿವೆ
ದಿನದಿನವೂ ಹೊಮ್ಮಿವೆ ಹಸುರಾಗಿ
ಲಕ್ಷಾಂತರ ಆಶೆ!
ದಿಕ್ಕು ದಿಕ್ಕುಗಳ ಗೋಪುರವೇರಿ ದಿಟ್ಟಿಸಿವೆ:
ಕಣ್ಣು ಕ್ಷಿತಿಜದ ಆಚೆ ನೂರು ಗೋಲಗಳಾಡಿ
ಅದನಿದನು ಇದನದನು ಹಿಡಿದು ಎಳೆದಾಡಿ,
ಕೂಡಿ ಕುಣಿದಾಡಿ,
ಕೊನೆಯಿರದ ವರ್ತುಲಕೆ ಒಯ್ದು ಮುಟ್ಟಿಸಿವೆ!
ಸಂಜೆ ಮುಂಜಾವಗಳ ಸೂರ್ಯಬಿಂಬದ ಸುತ್ತು,—
ಸದ್ದು ಗದ್ದಲವಿಲ್ಲದೆದ್ದು ಬಾನಂಗಳಕೆ ಬರುವ ಚಂದ್ರನ ಹೆಗಲಮೇಲೆ ಹೊತ್ತು,
ಬಾನ ಕಣದಲಿ ಕೋಟಿ ಚಿಕ್ಕೆ ಹಂತಿಯ ಕಟ್ಟಿ
ದಿವದ ಬದುಕನು ಒಕ್ಕಿ ರಾಶಿಮಾಡಿ
ಬೆಳಕು ಚಕ್ರಾಕಾರ ತಿರುಗುತ್ತಿದೆ!

೨

ಮಣ್ಣುಮನೆಯೊಳು ಮಗುವು ಕಣ್ಣು ತೆರೆದಿತ್ತು!
ಬೆಳಕಿಂಡಿಯಿಂದ ಪಡಸಾಲೆಯಲಿ, ಮೂಲೆಯಲಿ
ಕೋಲಾಡಿಸಿತ್ತೆಳವಿಸಿಲು;
('ದೇವರ ಬಂಗಾರದ ಕುದುರೆ')
ಕಿಟಕಿಯಲಿ ಕೈ ಚಾಚಿ ಕರೆದ ಚಂದ್ರ
(ಚೆಂದಪ್ಪ ಚೆಂದಪ್ಪ ಚೆಲುವ, ಚುಂಗ ಬಿಟಕೊಂಡು ಬರುವ)
ಚಿಕ್ಕೆ ನಕ್ಕವು ಬಾನ ಕನ್ನಡಿಯ ತುಣುಕಿನಲಿ
ಬಾನ ಬೀದಿಗೆ ನೂರು ಬೆಳ್ಳಿಯ ರಥ!
ಅಕ್ಕ ಪಕ್ಕದ ಮರದ ಹೂ ತುರಾಯಿಯ ಮೇಲೆ
ಹಾಡಿನುಯ್ಯಾಲೆ
"ಅಕ್ಕ ಓ ಚಿಕ್ಕವ್ವಾ"
ಸಾಲೆ ಕೋಣೆಯಲಂದು ಮಗ್ಗಿ ಒಪ್ಪಿಸುವಾಗ
ಮೇಜ ಮೇಲೆಯೆ ಇತ್ತು ಪೃಥ್ವಿಗೋಳ.
ಗೂಡಿನಲಿ ಕುಳಿತು ಗುಟುಕರಿಸಿತ್ತು ಪಾರಿವಾಳ.
ಕಿಟಕಿಯಾಚೆಗೆ ದೂರ ಬೆಟ್ಟ ಬಯಲುಗಳಲ್ಲಿ
ಮುಂಗಾರು ಮಳೆ ಬೆಳೆದ ಭಾವ ಮೇಳ!
ಮಣ್ಣಿನೆದೆಯೊಳು ಸ್ನೇಹವಂಕುರಿಸಿ ಬೆಳೆದು
ಬೆಳುದಿಂಗಳಿನ ಹೊನಲೆ ಎಲ್ಲೆಲ್ಲು ಹರಿದು
ಕಣ್ಣೆದುರು ಸಾಗಿತ್ತು ಮಣ್ಣು ಮೆರವಣಿಗೆ
ಇಲ್ಲಿಂದ ಆ ಬಾನ ಗುಡಿಯವರೆಗೆ!

೩

ಕತ್ತಲೆಯ ಕೋಣೆಯಲಿ ಹುಣ್ಣಿವೆಯು ಹರಿದಾಡಿ
ಮಣ್ಣು ಗೋಡೆಯ ಮೇಲೆ ಬಣ್ಣ ಬರೆದಿತ್ತು.
ಆಷಾಢ ನಿಬ್ಬಣವು ಸೂಸ್ಯಾಡಿ ಬರುವಾಗ ಎಷ್ಟೊಂದು ಚೆಂದವಿತ್ತು!
ಚಿತ್ರವೆಲ್ಲಾ ಅದರ ಮೇಲೆ ಇತ್ತು.
ಬಂದು ಹೋದವು ಬಂಡು ಹೂಡಿ ಒಂದರಮೇಲೆ ಒಂದು ಮಳೆಗಾಲ-
ಗುಡುಗಿ, ಗದ್ದಲಿಸಿ, ಮದ್ದಳೆ ಬಡಿದು ಕುಣಿದಾಡಿ
ಹಿಡಿದು ಹೆಂಡದ ಬುಂಡಿ ಎತ್ತಿಕುಡಿದು!
ಹಾಗು ಹೀಗೂ ಗೋಡೆ ನಿಂತಿಹವು ಜೋಲಿ ಹೊಡೆದು;
ಕುಸಿಯತೊಡಗಿದೆ ಕೆಳಗೆ ನೆಲಗಟ್ಟು, ಮೇಲೆ ಬಿದ್ದಿದೆ ಭಾರ ನೀಗದಷ್ಟು
ಎಷ್ಟು ಮಣ್ಣಾಸು ಹಾಕಿ ಮೆತ್ತಿದರು ಪ್ರತಿ ವರುಷ ಇದರ ಹಾಡೆ ಇಷ್ಟು:
ಮಾಳಿಗೆಯ ಮೇಲೆ ಇರುವೆಗಳ ಸಾಲುದುರ್ಗ

ಜಂತಿಯಲಿ ಇಲಿಗಳೋಡಾಡಿ ದಿನವೂ ಬುಟ್ಟಿ ಬುಟ್ಟಿ ಮಣ್ಣುದುರಿ
ಎಲ್ಲಿ ನೋಡಿದರಲ್ಲಿ ಸುರಂಗ ಮಾರ್ಗ !
ಇರುಳಿನಲಿ ಕುರುಡು ಬೆಳಕಿನ ಸುತ್ತ ನೆರಳುಗಳ ಕುಣಿತ.
ಇತ್ತೊ, ಇಲ್ಲೋ ಎನಿಸಿ ಬಿಡುವ ಕತ್ತಲೆ ಒಳಗೆ;
ಹತ್ತು ಸಲ ಆರಿ ಹತ್ತುವ ದೀಪ ಬೀದಿಯಲಿ!
ಕೂಟು ಕೂಟುಗಳಲ್ಲಿ ಬೂಟು—ಸಪ್ಪಳ ಸೀಟಿ
ದಾಟಿ ಹೊಸತಿಲಿನಾಚೆ ಹೋದರೇನೊ ಎಂತೊ—
ಒಟ್ಟಿನ ಮೇಲೆ,
ಪರಿಸ್ಥಿತಿ ತುಂಬಾ ಶೋಚನೀಯ.
ಮೇಲೆ ಕಣ್ಣಿಟ್ಟ ಕಡೆಗೆಲ್ಲ ಜ್ಯೋತಿರ್ಮಾಲೆ
ನೀಲ ಬೆಳಕಿನಪೂರ್ವ ನೃತ್ಯಶಾಲೆ.
ಮಣ್ಣ ಮಡಿಲೊಳು ನಿತ್ಯ ಯಾತನೆಯ ಸೆಲಗುಮ್ಮ
   "ಎಚ್ಚತ್ತು ತಾಯಿ ಎಂವೆ ಬಿಚ್ಚ ಏಳಮ್ಮಾ
   ಮಲಗಿರುವ ತಾಯಿ ಪೃಥಿವೀ"
ಕತ್ತಲೆಯ ಹುತ್ತ ಬೆಳೆದಿದೆ ಎತ್ತ ಸರಿದರೂ
ಆದರೂ ಎಂಥ ಸೋಜಿಗವೆಂದಿ—
ಬೆಳಕಿನಿಂದಲೆ ಅದರ ಉಪಜೀವನ—
ಜನನದಲಿ ಮರಣದಲಿ ತುಂಬಿ ಜಯಗಾನ.

ಚಳಿಗಾಲದಲ್ಲಿ ಮೈ ಸೆಟೆದುಕೊಂಡಿದ್ದ ತರು
ಬಂದು ನಿಂತಿದೆ ಬೀದಿ ಮಧ್ಯದಲಿ ಸಿಂಗಾರಗೊಂಡ ತೇರು!
ಬೇಡವೆಂದವರಾರು?
ಹಲಗೆ ಬಾರಿಸಿ, ಕಹಳೆಯೂದಿ, ಸಾಗಲಿ ಮುಂದೆ
ದುಂದು ಮೆರವಣಿಗೆ—
ಓ ಜೀವನವೆ!
ಶುಭಮಸ್ತು ನಿನಗೆ.

—ಚೆನ್ನವೀರ ಕಣವಿ

ಜಡೆ

ಲಲನೆಯರ ಬೆನ್ನಿನೆಡೆ
ಹಾವಿನೊಲು ಜೋಲ್ವ ಜಡೆ.
ಕಾಳಿಂದಿಯಂತಿಳಿದು, ಕೊರಳೆಡೆಗೆ ಕವಲೊಡೆದು
ಅತ್ತಿತ್ತ ಹರಿದ ಜಡೆ!
ಚೇಳ್ ಕೊಂಡಿಯಂಥ ಜಡೆ,
ಮೋಟು ಜಡೆ, ಚೋಟು ಜಡೆ,
ಚಿಕ್ಕವರ ಚಿನ್ನ ಜಡೆ!
ಎಣ್ಣೆ ಕಾಣದೆ ಹಿಣಿಲು ಹಿಣಿಲಾಗಿ ಹೆಣೆದ ಜಡೆ
ಬೆವರಿನಲಿ ಧೂಳಿನಲಿ ನೆನೆದಂಟಿಕೊಂಡಿರುವ
ಗಂಟು ಜಡೆ!
ಅಕ್ಕ ತಂಗಿಯ ಮುಡಿಯ
ಹಿಡಿದು ನಾನೆಳೆದಂಥ
ಮಲ್ಲಿಗೆಯ ಕಂಪು ಜಡೆ
ಕೇದಗೆಯ ಹೆಣೆದ ಜಡೆ.
ಮಾತೃಮಮತಾವೃಕ್ಷ ಬಿಟ್ಟ ಬೀಳಲಿನಂತೆ
ಹರಡಿರುವ ತಾಯ ಜಡೆ!
"ಕುರುಕುಲ ಜೀವಾಕರ್ಷಣ ಪರಿಣತ" ಆ
ಪಾಂಚಾಲಿಯ ಜಡೆ!
ಸೀತೆಯ ಕಣ್ಣೀರೊಳು ಮಿಂದ ಜಡೆ
ಓ ಓ ಈ ಜಡೆಗೆಲ್ಲಿ ಕಡೆ!
ಸಂಜೆಯಲಿ ಹಗಲು ಕೆದರುವ ಕತ್ತಲೆಯ
ಕಾಳ ಜಡೆ
ಬೆಳಗಿನಲಿ ಇರುಳು ಬಿಚ್ಚುವ ಬೆಳ್ಳನೆಯ
ಬೆಳಕು ಜಡೆ
ಒಮ್ಮೊಮ್ಮೆ ಮುಗಿಲಲ್ಲಿ ತೇಲುತ್ತ ಬರುವಂಥ
ಬೆಳ್ಳಕ್ಕಿಗಳ ಜಡೆ

ಕೊಂಬೆಗಳ ಜಡೆ
ಮರಮರದಿ ಬಳುಕುತಿಹ ಹೂಬಿಟ್ಟ ಬಳ್ಳಿ ಜಡೆ!
ಕಾಡು ಬಯಲಿನ ಹಸುರು ಹಸರದಲಿ ಹರಿ ಹರಿದು
ಮುನ್ನಡೆವ ಹೊಳೆಯು ಜಡೆ!
ಶ್ರೇಣಿ ಶ್ರೇಣಿಗಳಾಗಿ ಹರಿದಿರುವ ಗಿರಿಯು ಜಡೆ!
ಗಿರಿ ಶಿವನ ಶಿರದಿಂದ ಹಬ್ಬಿ ಹಸರಿಸಿ ನಿಂದ
ಕಾನನದ ಹಸುರು ಜಡೆ
ನಕ್ಷತ್ರಗಳ ಮುಡಿದ ನಟ್ಟಿರುಳ ನಭದ ಜಡೆ!
ಮುಂಗಾರು ಮೋಡಗಳು ದಿಕ್ಕುದಿಕ್ಕಿಗೆ ಬಿಚ್ಚಿ
ಹರಡಿರುವ ಮಳೆಯು ಜಡೆ!
ಚಂದ್ರ ಚೂಡನ
ವ್ಯೋಮ ಕೇಶನ
ವಿಶ್ವವನೆ ವ್ಯಾಪಿಸುತ ತುಂಬಿರುವ ಜಡೆ!
ಗಾನಗಳ ಕಾವ್ಯಗಳ ಶಿಲ್ಪಗಳ ಕಲೆಯು ಜಡೆ
ಎಲ್ಲವೂ ರಮ್ಯವೆಲ್ಲ!
ಜಡೆಯಾಚೆ ತಿರುಗಿಸಿದ ತಾಯ ಮುಖ ಮಾತ್ರ ಇಂದಿಗೂ
ಕಾಣದಲ್ಲ!

—ಜಿ. ಎಸ್. ಶಿವರುದ್ರಪ್ಪ

ಗೊಂದಲ ಪುರ

ಮುಬ್ಬು,

ಕಾಮಾಲೆ ಕತ್ತಲು.
ಬಂದು ಮೈಮೇಲೆ ಅಬ್ಬರಿಸಿ ಎದ್ದೆದ್ದು ಬಿದ್ದು ಬೊಬ್ಬಿರಿದಲೆವ ಕಾರ್ಮೋಡ
(ಕುಡಿದು ಬಿಟ್ಟದೆ ಕಣೋ, ಕಡಲಪಡಖಾನೆಯಲಿ ನೊರೆಗರೆವ ವ್ಹಿಸ್ಕಿ ಸೋಡಾ)
ಚಾಚಿ ತನ್ನ ಕಬಂಧಕೈಯ ಘೇರಾಯಿಸಿದೆ—ಮಾಯಾಬಜಾರ ಘೋಡಾ.
ಕಬಳಿಸಿತು ದಂಡಕಾರಣ್ಯ ಕಬ್ಬೊಗೆ ಸುತ್ತಿ ಕಲ್ಕತ್ತೆ ಬೊಂಬಾಯಿಯನ್ನು,
ಮದ್ರಾಸನ್ನು, ಬೆಂಗಳೂರನು, ಧಾರವಾಡವನ್ನು.
ಶೀತದೇಶದ ತೊನ್ನುಮಂಜು ಚೀರಟೆ ಹಕ್ಕಿ—ಚೀರಚಿರೊ ಚಿರಚಿರೊ—
ಕಾಶ್ಮೀರದಿಂದ ರಾಮೇಶ್ವರದ ತನಕವೂ.
ಹಾಕಿದೆ ಸುರಂಗ ಪ್ರತಿ ಹೆಜ್ಜೆ, ಹೆಜ್ಜೆಗು ಕೆಳಗೆ; ಕ್ಯಾಕರಿಸಿ ಕೇಕೆ ಹಾಕುತ್ತ
ಸಿಂತರು ಸುತ್ತ ಚಂಡಿ, ರಣಚಂಡಿ, ಚಾಮುಂಡಿ.
ಸುಗ್ಗಿಯಲ್ಲೂ ಒಂದು ಥರದ ಥಂಡಿ.
ಇಳುಕಲಲಿ ಬಿರಿಕುಂಟೆಯೊತ್ತಿ ಮುಲುಕಿತು ಕುಲುಕಿ ರೈಕ್ವ ಬೆಳಕಾಡಿದ್ದ
ಮುರುಕುಬಂಡಿ

ಪೂರ್ವದಲ್ಲುದಿಸಿದ್ದ ಸೂರ್ಯ ಈಗ ಅಪೂರ್ವ ;
ಅಪರಮದ್ಯಕೆ ಮಾರಿಹೋದನಲ್ಲ ;
ಪರಕೆ ಪರದಾಡಿ ಕೆಸರಲ್ಲಿ ಕುಂಟುವ ಕಮಲ
ಇಹದ ಮಣ್ಣನು ಮುಕ್ಕಿ ಮುರುಟಿತಲ್ಲ.
ಲಕ್ಷೋಪಲಕ್ಷ ಅಳಿಗುಳಿಕಾರ ಪರಿವಾರ
ಹೊಟ್ಟೆಬೆಂಕಿಗೆ ರೆಕ್ಕೆ ಸುಟ್ಟಿತಲ್ಲ

ಮುಸುಕಿತು ಅಮಾಸೆ ಲೋಕಸ್ಟು ದಬದಭೆ ಗಲಭೆ
(ಜಗ್ಗಿ ಕಿತ್ತವರಾರು ತಮದ ತೂಬಿನ ಬೂಚು ?
ನುಗ್ಗಿ ಬಂದಿತ್ತೇನು ಯಮನ ಕೋಣನ ಕೋಚು ?)
ಕೆಲಸವಿಲ್ಲದ ಗಿರಣಿ ಹಾಕಿ ಸುಳ್ಳೇ ಸೀಟಿ ಹೂಸುತಿದೆ ಹುಡಿಗಲಾಟೆ.
ಇರುಳು ಚಕ್ರವ್ಯೂಹದಲ್ಲಿ ಬೀಸುತ್ತಲಿದೆ ಕರ್ಣಕೈ ಕುರುಡು ಸೋಟೆ.

ಶಿವ ಧ್ಯಾನ ಮಗ್ನ ; ಕೈಲಾಸದಲ್ಲಿ ಅವಿಘ್ನ
ಹಿಗ್ಗುತಿದೆ ಭೂತಗಣ ಬಂಟುನೃತ್ಯ ;
ಮೊರಗಿವಿಯು ಶಾಪಕ್ಕೆ ಸೊರಗಿ ವಿಘ್ನೇಶ್ವರ
ಕಡುಬಿನಟ್ಟಕ್ಕಿಳಿದು ಕುಳಿತು ಬಿಟ್ಟ.

ಮೂವತ್ತು ಕೋಟಿ ದೇಗುಲ ಶೂನ್ಯ ; ಶೂನ್ಯ ಗರ್ಭಗುಡಿ ;
ಭಗ್ನ ವಿಗ್ರಹ ಸ್ತಬ್ಧ ದೀಪನಾಡಿ ;
ಅಂಧಕಾಸುರ ಕೆದರಿ ಕೇಶ ಬಾರಿಸುತಿರುವ
ರುಗ್ಣಗಂಟೆಯು ನಗ್ನ ಘಂಟಾಮಣಿ.

ಗಾಳಿ ತುಂಬಾ ಸಿಡಿವ ಸುಡುವ ಗದ್ದಲ, ಕೊಟ್ಟಿಗೆಯು ನಾತ ;
ಕೊಟ್ಟಣದಲ್ಲಿ ಜಳ್ಳು ಕುಟ್ಟುವ ಸದ್ದು ;
ಎಣ್ಣೆಗಾಣದಿ ಮರಳನೆರೆವ ಕರಕರದ ಕರಕರೆ ; ಮನೆಯ
ತೋಟದಲಿ ಕಲ್ಲುಕುಟ್ಟಿಗನಟಾಟೋಪ ; ಥಾವಣಿಮೇಲೆ
ಬಂಡೆ ಹೆಬ್ಬಂಡೆ ಚಳುವಳಿ ; ಪಂಜುರ್ಲಿ, ಹಾಯ್ಗುಳಿ, ಬೊಬ್ಬರ್ಯ, ಜಟ್ಟಿಗ
—"ಎಲಲಲಲಲ ಕೇೞಹೂ"
ಎತ್ತಿ ಹೊರಟಿವೆ ಕರಿಪತಾಕೆ ಹಾಕುತ ಕೇಕೆ, ಊರೂರು ಕೇರಿ ಕೇರಿ.
ಅಂತರಿಕ್ಷದಲಿ ಅಂತರ್ಲಾಗ ಹಾಕುತಿವೆ, ಅರಚುನಾಲಗೆ, ಆಹಾ, ಕಿರುಚು
ನಾಲಗೆ, ಒಹೋ, ತುರಿಚೆನಾಲಗೆ ; ಕಳ್ಳ
ಕುಡಿದು ಬಡಿಯುತ್ತಲಿವೆ ಗಾಳಿ ಢೋಲ ;
ಕತ್ತಲಿನ ಕಡಲು ಅಲ್ಲೋಲ, ಕಲ್ಲೋಲ.
ರಾತ್ರಿಯೆಲ್ಲಾ ಬಾಣ, ಬಿರುಸು, ಗರನಾಲು.
ನನ್ನ ಕಿವಿಗೇ ಜಡಿದು ಕದ್ನಿ ತಾಗಿಸಿ ಅಗ್ನಿ ಒಡಿತ್ತು ಕುರುಡುಕಾಲು :
ಮಿದುಳು ಪುಡಿ ಪುಡಿ ; ಖಾಲಿಬುರುಡೆ ; ಪಿಳಿ ಪಿಳಿ ಕುರುಡು ಗಾಜುಕಣ್ಣು ;
ಕೀಲು ತಪ್ಪಿದ ಕಂಠಯಂತ್ರ ಆಗಿ ಅತಂತ್ರ ಕಂಬಿಬಿಟ್ಟೋಡಿತ್ತು ಕೊರಕಲೆಡೆಗೆ.
ಗಳಿಗಿಪ್ಪತ್ತು ಅಪಘಾತ ಆಕಾಶದಲ್ಲ, ನೆಲದಲ್ಲಿ, ಪಾತಾಳದಲ್ಲಿ.
ಸಿಡಿದ ಮಿದುಳಿನ ಚೂರು ಪಡೆದು ಭೂತಾಕಾರ ಕೊರಳ ರೋಡೆಂಜಿನ್ನ ಸೇರಿ
ಕುಳಿತು
ನೆಗೆದೆದ್ದು ಚಿಮ್ಮುತಿದೆ ಹಳ್ಳಿಪಟ್ಟಣದಲ್ಲಿ, ಗುಡಿ ಮಠ ಮಸೀದಿ ಈಗರ್ಜಿಯಲ್ಲಿ ;
ಶಾಲೆಕಾಲೇಜಿನಲ್ಲ ;
ಸಭೆ ಮೆರವಣಿಗೆಯಲ್ಲಿ ;
ಹೋಟಲಲ್ಲಿ, ಚಿತ್ರಮಂದಿರದಲಿ ;
ಪಾರ್ಲಿಮೆಂಟಿನ ವೇದಿಕೆಯ ಮೇಲೆ ಪ್ರತಿಯೊಂದು ಪೀಠದಲ್ಲೂ ಮತ್ತೆ
ಗೋಪುರದ ಮೇಲೆ

ಬಾಯ್ಬಡಿದುಕೊಂಡು ಲಬೊ ಲಬೊ ಚೆಲ್ಲಿ ಕೀವನ್ನು
ಕ್ಷಣ ಕ್ಷಣಕೆ ಮತ್ತಷ್ಟು ಊದುತ್ತಿವೆ;
ಕೊಂಬು ಬಗ್ಗಿಸಿ ಸುತ್ತ ಹಾಯುತ್ತಿವೆ:
"ದಾರಿ ಬಿಡಿ, ದಾರಿ ಬಿಡಿ, ತೊಲಗಿರಾಚೆ;
ಕೂತವರು, ನಿಂತವರು, ಮಲಗಿಕೊಂಡವರು
ಏಳಿರೋ ಏಳಿ ಎದ್ದೇಳಿ, ನುಗ್ಗಿರಿ ಮುಂದೆ; ಕೂಗಿರೋ ಕೊರಳ ನರ ಹರಿವತನಕ;
ಕುದುರೆಯೋ ಕತ್ತೆಯೋ ಮೋಟಾರೊ ಸೈಕಲ್ಲೊ ಇಲ್ಲ ಬರಿಗಾಲಿನಲ್ಲೋ
ಅಂತು ಓಡಿರಿ ಮುಂದೆ; ಕುಂತವರ ತುಳಿಯಿರೋ;
ಮೂಲೆಯಲಿ ಕೂತು ಯೋಚಿಸುತಿರುವ ಘಾತಕಾ, ಏಳು; ಇಲ್ಲವೊ ಮತ್ತೆ ಏಳಲಾರೆ!
ಎಲ್ಲಿಗೇತಕ್ಕೆ ಎಂದು ಕೇಳುವವ ಹೇಡಿ;
ತಾಳಿ ಎಂಬವನೊಬ್ಬ ದೊಡ್ಡ ಖೋಡಿ;
ಇದಿರು ಬರುವವಗಿಂತ ಇಲ್ಲ ಕೇಡಿ.
ಏನೆ ಬಂದರು ದಾರಿಗಡ್ಡ ಕತ್ತರಿಸಿ ಅದ, ಅವನ, ಕರಕರ ಎಂದು ತರಿದು ಕೊರಳಲಿ ಧರಿಸಿ ರುಂಡಮಾಲೆ;
ನಡುರಸ್ತೆಯಲ್ಲೆ, ಅಹ, ಪ್ರಳಯಲೀಲೆ.
ಮನೆಯೊಳಗೆ, ಗುಡಿಯೊಳಗೆ, ಶಾಲೆಯೊಳಗೇ ನೋಡಿ
ಹಾಯುತಿದೆ ನಮ್ಮ ರಸ್ತೆ;
('ಎಲೆಲೆಲೆ ರಸ್ತೆ, ಏನು ಅವ್ಯವಸ್ಥೆ!')
ಓಡುವವನೇ ಧೀರ, ಚೀರುವವನೇ ವೀರ, ಮನುಕುಲೋದ್ಧಾರಕ, ಮಹಾಗಭೀರ.
ಕಣ್ಣು ಪಟ್ಟಿಯ ಕುದುರೆ ನಮ್ಮ ದೇವರು (ಅಡ್ಡ ಬಿದ್ದೆ ಮಾಸ್ವಾಮಿ)
ಎರಡೆರಡ್ಲ ನಾಲ್ಕೆಂದು ಬೊಗಳುವ ರಿಯಾಕ್ಷನರಿಯ ತದಕು, ತರಿ, ಕಡಿ, ಕುಟ್ಟು,
ನಮ್ಮ ದೇವರ ಜಾಲಕವನ ಕಟ್ಟು;
ಚೂರು ಚೂರಾದನೋ? ಸರಿ, ಬಿಡಿ;
ಮಾನವ್ಯ ಚಿಗಿತುಕೊಂಡಿತು ಸತ್ತರೇನು ಹುಲುಮನುಜ!
ಏನು ಅವ ನಿನ್ನ ಅನುಜ?
ನೀನವನ ಅನುಜ?
ಇಂಥ ಬೂರ್ಜ್ವಾಬುದ್ಧಿಗೊಂದೆ ಮದ್ದು:
ಯಜ್ಞ ಪಶು ಅಜ; ಕಟ್ಟು ಬಾಯ; ಬಾರೋ ಯಾಜಿ, ಕೊಲ್ಲಿಸಿದ ಗುದ್ದಿಗುದ್ದಿ;
ಇದರ ವಪೆ ಬಹಳ ಶುಚಿ; ದೇವಗಣಕಿದಕಿಂತ ಬೇರೆ ಇಲ್ಲವೊ ರುಚಿ;
ಬೇಡವೋ ಬೇರೆಯ ಹವಿಸ್ಸು.

ಹೀಗೆಯೇ ಇಳಿದು ಬರಲಿದೆ ನಮ್ಮ ಸ್ವರ್ಗ, ಅಪವರ್ಗ, ಈ ಬೀದಿಯಾಚೆ
ಕಡೆ ಮೂಲೆಯಲ್ಲಿ,
ನಮ್ಮ ಮನೆ ಮುಂದಿರುವ ಲಾಯದಲ್ಲಿ.
ಈ ನಾಳೆಮಾತ ಸಂಬದ ಜನದ್ರೋಹಿಗಿಂಬಿಲ್ಲ ಈ ಕುಂಭಿನಿಯಲಿ;
ಮುಖ್ಯ ಬೇಕಾದದ್ದು ಓಟ, ಕೂಗಾಟ.
ಓಡಿರೋ ಓಡಿ, ಓಡಿ; ಕೂಗಿರೋ ಕೂಗಿ, ಕೂಗಿ."
ಬಿದ್ದವನು ಬಿದ್ದ, ಎದ್ದವನು ಎದ್ದ, ಪಂಥ ಕಟ್ಟಿ ಗೆದ್ದವನೊಬ್ಬ ಗೆದ್ದ;
ಕಾಲಬಲವಿಲ್ಲದ ಶಿಖಂಡಿ ನರಪೇತಲ ಗೊರಸು ತುಳಿತಕ್ಕೆ ಸಿಕ್ಕಿಬಿದ್ದ!
ಗೆದ್ದವಗು ಸಿದ್ಧವಿದೆ ಹೊಂಡ ಆಳುದ್ದ;
ಇದು ವಿಧಿಯ ವಹಿವಾಟಿಗಿಂತಲು ಅಬದ್ಧ
Call No Man Happy Till He Dies

೨

ಅಂಧೇನೈವ ನೀಯಮಾನೋ ಯಥಾಂಧಾಃ

ರಸ್ತೆಯಲ್ಲೋ ಮಸ್ತು ಜನ; ಇಲ್ಲ ಪುರಸೊತ್ತು;
ಮನೆಯಿಲ್ಲದಲೆವ ಪಾಪೋಲಿ ಗೂಳಿಯ ಮಸ್ತಿ;
ಬೀದಿ ದೀಪಗಳು ಕೊಟ್ಟವು ಗಸ್ತು; ಬಾನಲ್ಲಿ
ಮೋಡಪಟದಾಚೇನೊ ಮೇಜವಾನಿ;
ಕೆಳಗೋ ವೃಥಾ ಜೀವಭಾವ ಹಾನಿ.
ನೂಕು ನುಗ್ಗಲು ಪರಿಷೆ:
ನಿಮಿಷ ನಿಮಿಷಕ್ಕೊಂದು ವರಸೆ ಗುಟುರು ಗಲಾಟೆ ಮುಲುಕು ಥಳಕು.
ಏನು, 'ಬೇದಿಂಗ ಬ್ಲೂಟಿ' ಬೀದಿಯಲ್ಲೇ ತೆರಗೆ ಒಂಡಳೇನು?
ವಾಲಿ ಸುಗ್ರೀವ ಕಾಳಗವಯ್ಯ, ಕೋಡಂಗಿ ಅಗಲೇ ತೆರೆಯಿಾಚೆ ಬಂದನಯ್ಯ,
ಕಿಷ್ಕಿಂಧಕಾಂಡ ಬ್ರಹ್ಮಾಂಡ,
ದುಂದುಭಿ ಹೆಣದ ಸುತ್ತಲೂ ಮರ್ಕಟೋತ್ತಮರ ಎದೆದುಂದು ನೃತ್ಯ.
ಸಪ್ತಸಾಲದ ಸೆರಳಿನಲ್ಲಿ ನಡೆದಿವೆ ಬಾಲವೆತ್ತಿ ಮುಲುಕುತ ನೂರು
ಹೆಣ್ಣು ಕೋತಿ.
ಸುತ್ತಮುತ್ತಲ ರುಂಡಬುಂಡೆಯಲಿ ಸೊರೆಗಳ್ಳು ಕುಡಿದು ಕುಣಿದಿವೆ
ಕೆಂಪು ಕುಂಡೆ ಕೋತಿ
ಹೆಣ್ಣ ತೊಡೆಯುರಸುತಿದೆ ಅದರ ಮೂತಿ.
ವಾಲಿಯೂಟದ ತಟ್ಟೆತಾರೆ ಟಣಟಣ ಚಿಮ್ಮಿ ಜಾರಿದಳು ಸುಗ್ರೀವ ನಡಿಗೆಮನೆಗೆ.
ಕಿಷ್ಕಿಂಧದೆದೆಬಡಿತ ಮಂದ, ಮಂದ.
ಬರುವನೇ ರಾಮಚಂದ್ರ?
'ಬಂದಾನೊ ಬಾರನೊ ಓ'

ಮೋಟಾರುಕಾರು, ಸಿಟಿಬಸ್ಸು, ಲಟಕಾಪಟಕ ಜಟಕ, ಒಂಟೆತ್ತುಗಾಡಿ ;
ನಾಯಿನರಿ ಕತ್ತೆಹೈನಾ ಕುದುರೆ ಹುಲಿಚಿರತೆ ನರವಾನರರ ಮಂದೆಮಂದೆ.
ಕವಣೆ ತೂರಿದ ಹಾಗೆ ಹವಣರಿತು ಜಾರುತಿವೆ
ಒಂದಕೊಂದಕೆ ತಾಗಿ ತಾಗದಂತೇಗುತಿವೆ ;
ಯಾವ ದಾರವೊ ಹಿಡಿದು ಜಗ್ಗುತಿದೆ.

ಮುಖ ಮುಖಕ್ಕೊಂದು ಮುಖವಾಡ ; ಸೆಕ್ಕಿದೆ ನೋಡು
ಒಂದೊಂದು ಬಾಯಿಗೊಂದೊಂದು ಮೈಕ್ರೋಫೋನು
ಮುಖ ಮುಖದ ನಡುವೆ ಮಂಜಿನ ದಟ್ಟ ತೆರೆ ; ಥಿಕ್ಕಿ
ಹೊಡೆದು ಫಕ್ಕನೆ ಬಿಕ್ಕು, ಕಿರಚು ; ಅಯ್ಯೋ ಬಿದ್ದ, ಎದ್ದ, ನೆಗೆದೇ ಬಿದ್ದ.
ತುಳಿದು ಚೂರಾದವರ ಮೇಲೆ ಬಂತು ಸವಾರಿ ಕುದುರೆ, ಕುದುರೆಯ
ಹಿಂದೆ ಆನೆ, ಆನೆಯ ಹಿಂದೆ ರಥ, ರಥದ ಹಿಂದೆ ಮೋಟಾರು ಲಾರಿ.
(ಈಚೆಗೆ ಕ್ಷಣಕ್ಷಣಕ್ಕೊಂದು ಕುರಿ ಹೊಗ್ಗುತಿರೆ
ಆಚೆ ಅಪರಕ್ಷಣವೆ ಟಿನ್ನೊಳಪ್ಪಟ ಮಾಂಸ
ನೀಡಲೆಂದೇ ಇಡೀ ಹಗಲಿರುಳು ದುಡಿದೇದಿ ಹೂಂಕರಿಸಿ ಗದರುತಿದೆ
ಸುರ ಚಿಕಾಗೋವಿನಲಿ ಅಸುರಯಂತ್ರ)

ಅಹಾ ನೋಡು, ಎಂಥ ಆಟ !
ಎದುರುಬದುರೇರೇರಿ ಕಾರುಕಾರುಗಳ ಹೋರಾಟ ;
ಟಾಂಗಾದ ಮೇಲೆ ಮೋಟಾರಿನೇರಾಟ ;
ದಾರಿಗರ ಮೇಲೆ ಸೈಕಲ್ಲು ; ಸೈಕಲ್ಲ ಮೇಲೆ ಎತ್ತಿನಗಾಡಿ ;
ಗಾಡಿ ಮೇಲಕೆ ಬಿತ್ತು ಜೀಪು ;
ಹಾಕು ಮದ್ದಳೆಕರಣೆ ಮೇಲೆ ಛಾಪು !
ವ್ಹಾರೆವಾ, ಛಾಪು, ಛಾಪು !

ನನ್ನ ಕಿರುಮನೆ ಕಿಟಕಿ ಬಳಿ ಹಿಡಿದು ಕೈದೀಪ
ನಾನು ಸಾಕ್ಷಿಭೂತ ನಿಂತೆ ನಡುಗಡ್ಡೆಯಲ್ಲಿ ;
ಸುತ್ತ ಸೈರನ್ನು ಗೀತಕ್ಕೆ ಎದೆಬುಡ ನಡುಗಿ
ಕಿವಿಗೆ ಜಡಿದೆನು ಮೇಣದುಂಡೆ, ಭಡವಾ,
ಕುಳಿತೆ ಕುರ್ಚಿಯ ಮೇಲೆ ತೆರೆದು ಹಳೆ ಡೈರಿಯನು
ಮಗಚುತ್ತ ನಡೆದೆ ಒಂದೊಂದೆ ಪುಟವ.

೩

ಗಿಳಿಯುು ಪಂಜರದೊಳಿಲ್ಲ

ಅಕ್ಕ ನಿನ್ನ ಮಾತು ಕೇಳಿ
ಚಿಕ್ಕದೊಂದು ಗಿಣಿಯ ಸಾಕಿದೆ;
ಅಕ್ಕನಿಲ್ಲದ ವೇಳೆಯಲ್ಲಿ
ಬೆಕ್ಕು ಕೊಂಡು ಹೋಯಿತಯ್ಯೋ—ಗಿಳಿಯುು ಪಂಜರದೊಳಿಲ್ಲ.

ಹದಿನಾರು ವರ್ಷಗಳ ಹಿಂದೆ:
ಬಾ, ಬಾ, ಬಾ, ಎಂದು ಕರೆದಿತ್ತು ಹಸುರುಕೊಕ್ಕಿನ ಹಕ್ಕಿ ನನ್ನ ಕರುಳನು ಮೂರು ಬಾರಿ ಕುಕ್ಕಿ,
ಚಿಗುರುಗೊಂಬಿನ ಹುಂಬಮನ ಮೂಸಿ ಮಣ್ಣ ನೆಗೆದಿತ್ತು ನಾಗಾಲೋಟ ಗಾಳಿಗುಂಟ.
ಕೊಡೆ ವಿಮಾನದಿ ತೇಲಿ ತೇಲಿ ಹೇಗೋ ಬಿದ್ದೆ
ಹೂಬಳ್ಳಿ ಗಿಡಗಹನ ಪೊದರು ಮರ ಹುರಿ ಹೆಣೆದ ತಂಗೊಳದ ತಡಿಹುಲ್ಲ ಹಾಸಿನಲ್ಲಿ,
ವನದ ಜಘನಸ್ಥಳದ ವಿವೃತ ಸುಖಜಾಲದಲ್ಲಿ
ತುಟಿದಡಕ್ಕಂಟಿ ಮೊಲೆಬಳಿ ಲಂಗರಿಟ್ಟಾಡಿ ಹೊಕ್ಕುಳಿನ ಸುಳಿಯಲ್ಲಿ ಹೊಕ್ಕು ಜಾರಿ,
ಸೊಂಟ ಸುಂಟರಗಾಳಿಯಲ್ಲಿ ಗಿರಗಿರ ಬುಗುರಿ; ತೊಡೆ ಬಂಡೆಗಪ್ಪಳಿಸಿ ಭಗ್ನ ನೌಕೆ:
ಕನಸು ರಾಬಿನ್ಸನ್ ಕ್ರುಸೋ ದ್ವೀಪದಲ್ಲೆದ್ದು ಕರಗಿದೆ ಸ್ವಯಂಪ್ರಭೆಯ ಕುಹರದಲ್ಲಿ.
"ಒಡಲ ನೂಲಿನಿಂದ ನೇಯುುವಂತೆ ಜೇಡ ಜಾಲ."
ನಿದ್ದೆ, ಸುಖನಿದ್ದೆ. ಬೆಳಗಿನ ಝಾವ.
ಕಣ್ಣಿನೊಳಗಡೆ ತಾಳ ತಂಬೂರಿ ನೂಪುರ, ಪ್ರಾಂಡ್ಸ್‌ಕ್ರೀಮು, ಓಡೀಕೊ ಲೋನ್ ಕುಟಿಕುರಾ!

ಮರಿಗಿಳಿ ಮರಿಗಿಳಿ ಮಲಗಿಲ್ಲಿ
ಚಂದದ ತೊಟ್ಟಿಲ ಮರೆಯಲ್ಲಿ.

ಹಿಂಡಬಿಟ್ಟೋಡಿದ್ದ ಮರಿ ಹೊಕ್ಕ ಗುಹೆಯಲ್ಲಿ
ಹಾಡಿತ್ತು ದುಂಬಿ ಅಂತರಗಂಗೆ ಲಾಲಿ;
ತಿನ್ನಿಸಿತು ಪಿಕ ಜೋಗುಳದ ಅಫೀಮು.
ಖಾಲಿ ಬುರುಡೆಯ ಮೇಲೆ ಎದೆಯ ವಿಪರೀತ ರತಿ.
ಭಾವಾತಿಸಾರ ರೋಗಕ್ಕೆ ನುಂಗಿದೆ ಬಾಟ್ಲಿ ಬಾಟ್ಲಿ ಮದ್ದು;
ಚುಚ್ಚಿ ದಿಂಜಕ್ಷನ್ನಿಗಯ್ಯೊ ಕಿಸೆ ತೂತು ಬಿದ್ದು

ಮುಂಗೈಯ ಮೇಲೆ ಕಂಗಾಲ ಹೃದಯವನಿರಿಸಿ
ಬೆಂಗಾವಲೆಂದು ಜಂಭದ ಕೋಳಿಯನು ತರಿಸಿ
ಅಂಗಾಂಗದಲ್ಲಿ ಛಳಿಜ್ವರದ ಭಂಗಿಯ ಮೆರಸಿ
ಸಿಂಗಾರಕ್ಕೆಂದು ಕಣ್ಣಲ್ಲಿ ನಲ್ಲಿಯ ತೆರಸಿ
ನಡೆದಿದ್ದೆ ಬಾಜಾ ಬಜಂತ್ರಿ ಜೊತೆ ದಿಗ್ದೇಶ.
ಸುಸ್ತಾಗಿ ಕೊನೆಗು ಅಸ್ತವ್ಯಸ್ತ ಬಿದ್ದಿರಲು
ಸಿಕ್ಕಿದಾಮೆಯ ಚಿಪ್ಪಿನೊಳಗೆ ಹೊಕ್ಕೆ.
ಆಗಾಗ ಮೂತಿ ಹೊರಹಾಕಿ ಹೀರುತ ಗಾಳಿ
ನಾರ್ಸಿಸಸ್ಸಿನ ಡ್ರೆಸ್ಸು ಹಾಕಿ ಇದ್ದೆನು ಖಾಲಿ
ಕಳೆದಿತ್ತು ಹತ್ತು ವರ್ಷ.

ಆಗ ಬಿದ್ದಿತ್ತು ಭಾರೀ ಏಟು; ಚಿಪ್ಪೊಡೆದು ಆಗಿ ಚೆಲ್ಲಾಪಿಲ್ಲಿ
ತಲೆ ಜಜ್ಜಿ ಮೈ ಅಜ್ಜಿಬಜ್ಜಿ;
ಎಂಥ ಬಿರುಗಾಳಿ ಮಾರಾಯ. ಅದು ದೈತ್ಯ
ಝೂಡಮಾಲಿಯೆ ಥೇಟು. ತೊಟ್ಟ ಕರಿ ಲಾಂಕೋಟು
ನೆಲದ ಕೊಳೆಕಸವೆಲ್ಲ ಎತ್ತಿ ಆಕಾಶಕ್ಕೆ ಎಸೆದುದಷ್ಟೇ ಅಲ್ಲ
ಮರಗಿಡವ ಕಲ್ಲ ಬೆಟ್ಟವ ಕೂಡ ಗುಡಿಸಿತ್ತು
ಮೇಲಕೆಸೆದಿತ್ತು
(ಮತ್ತೆ ಕೆಳಬಿದ್ದಿತ್ತು, ಝೂಡಮಾಲಿಯೆ ಬಿದ್ದ ಬೇಸ್ತು)
ಕಡಕೊಂಡು ಬಿದ್ದು ಮಳೆಬಿಲ್ಲು ಮಂಡೆಯ ಮೇಲೆ
ಮಿದುಳು ನುಂಗಿತ್ತೊಂದೆ ಬಣ್ಣ—ಕೆಂಪು.
ಕಣ್ಣೆಲ್ಲ ಬರಿ ಕೆಂಪು; ಬಾಯಿಬಿಟ್ಟರೆ ರಕ್ತಕೇಡು;
ಕಾಲನಿಟ್ಟಲೆಲ್ಲ ಕೆಂಪು ಹೆಜ್ಜೆ.
ಮೂಗಿನ ಕಮಾನೇರಿ ಕೂತು ಘೂಕ್ಕೆಂದಿತ್ತು ಕೆಂಪುಗಾಜಿನ ಮೋಜು
ಕನ್ನಡಕ, ತಲೆಹಿಡುಕ.
ಬಂದು ಬಿದ್ದಿದೆ ನಡು ಬೀದಿಯಲ್ಲಿ
ಅಲ್ಲಿ ಬರಿ ರುಂಡಮುಂಡಗಳ ಖಾಡಾ ಖಾಡಿ,
ಕೋಟು ಬೂಟುಗಳ ಪ್ಯಾಂಟುಗಳ ಕುಕ್ಕುಟನೃತ್ಯ;
'ತೇಲಿ ಬರುವ ಜಾಸ್ ಗಾನ ನಮ್ಮ ಕುಣಿತಕಲ್ಲವೇನ?'

ಬೂಟಗಳ ಕೆಳಗೆ ಹಾಸಿತ್ತು ಹಪ್ಪಳ ಹೊಟ್ಟೆ ಸಾಲುಸಾಲು;
ತುಪ್ಪಟವ ಕತ್ತರಿಸಿ ತೆಗೆದ ಕುರಿ ಥಂಡಿಯಲಿ ತತ್ತರಿಸಿ ಕೊಕ್ಕೈಕಾಲು;
ಕಾರ್ಖಾನೆಕೂಲಿ ಮೈ ಜಿಗಣೆ ಭೋಜನ ಶಾಲೆ;
ತೊಟ್ಟೊ ಬಿಡದೆ ಹಿಂಡಿಬಿಟ್ಟ ಕೆಚ್ಚಲ ಕುಟ್ಟಿ ಗುಮ್ಮುತಿದೆ ಕರುಹೆಸರ
ತೊಟ್ಟ ಮೂಳೆ.

ಉಳುವವರ ಎದೆಗೆ ಹಾಕಿತ್ತು ರಬ್ಬರ್ ಟ್ಯೂಬು ಒಂದೆರಡು ಮೈಲಿ ಉದ್ದ,
ಅದರಾಚೆ ತುದಿಯಲ್ಲಿ ಕುಳಿತು ಹೀರುತ್ತಿದ್ದ ರಕ್ತಮದ್ಯವನೊಬ್ಬ, ಅಬ್ಬಬ್ಬ,
ಒಂಟಿಯ ಡುಬ್ಬ,
ಗುಂಡೋದರನ ಪಟ್ಟಶಿಷ್ಯ ಧಾಂಡಿಗ ಜುಬ್ಬ :

ಮೈಯೆಲ್ಲ ಜೇಬು ; ಜೇಬಲ್ಲೆ ಮಡಗಿತ್ತು ಮಿದುಳು ;
ಎದೆ ಸುರಂಗದಿ ಕಂಡೆ ರಿಂಗವರ್ಮ್, ಕೊಕ್ಕೆಹುಳು ;
ಹೊಟ್ಟೆಯಲಿ ಹೆಪ್ಪನೆತ್ತರ ತಿಜೋರಿ ;
ಒಟಗುಟ್ಟುತಿದ್ದ ಪ್ರತಿನಿಮಿಷಕಿಪ್ಪತ್ತು ಬಾರಿ ;
"ಸಹನಾವವತು, ಸಹ ನೌ ಭುನಕ್ತು"
ಪಿತ್ಥವೇರಿತ್ತು ನೆತ್ತಿಗೆ ನನಗೆ ; ಭಾರಿ ಸುತ್ತಿಗೆ ಬೀಸಿ
ಕುಟ್ಟಿ ಪುಡಿಯಾಗಿತ್ತು ತಲೆ ; ಮಸೆದ ಕುಡುಗೋಲು
ಕಿತ್ತು ಕರುಳನ್ನೆಲ್ಲ ಕುತ್ತಿಗೆಗೆ ಸುತ್ತಿತ್ತು ;
ಪ್ರಳಯರುದ್ರನ ರೋಷವೇಷ ಪೊಗದಸ್ತು.
(ಕಣ್ಣೆದುರು ಆಕಾಶದುದ್ದ ನಿಂತಿದ್ದ ಕನ್ನಡಿಯಲ್ಲಿ ನನ್ನ ಮುಖ ಕಾಣಲಿಲ್ಲ)
ರೋಷಾಗ್ನಿ ಕೆಂಗುಡಿಯುನೆತ್ತಿ, ಕಬ್ಬೊಗೆಯ ಮಸಿ ಹತ್ತಿ
ಗಬ್ಬವಾಗಿತ್ತು ಕಾಗದ ದಸ್ತು, ದಸ್ತು.
ದಿನದಿನಕ್ಕೊಂದಪತ್ಯ ಆಪತ್ತು, ಕುತ್ತು.
ಹೊರಗೆ ಚೆಲ್ಲಾಪಿಲ್ಲಿ ಬಿದ್ದು ಅರಚುತ್ತಿತ್ತು ಮುದ್ದೆ ಮಾಂಸದ ಚೂರು
ಚೂರು ಎಳಮೊಗರು.

ಲಕ್ಷೋಪಲಕ್ಷ ಹಸಿಮಿದುಳು ರಸ್ತೆಯ ತುಂಬ ;
ಕೋಟಿಗಟ್ಟಲೆ ಹಸಿದ ಹೊಟ್ಟೆ ಸೂತ್ರದ ಗೊಂಬೆ.
ಕತ್ತು ಕತ್ತನು ಸುತ್ತಿ ಬಿಗಿದು ಝುಣಝುಣಿಸಿತ್ತು ಹನುಮಂತಬಾಲದಂತುದ್ದ
ಸರಪಣಿ ಅದರ
ಕೊಂಡಿ ಹಿಡಿದಿದೆ ಚಾಚಿ ಕೈಬೀಸಿ ನಡೆದಿದ್ದ—
ಅವನೇ 'ಪಶೂನಾಂ ಪತಿ'
ಅವನು ನಿಂತರೆ ನಿಂತು, ಅವನೋಡಿದರೆ ಓಡಿ,
ಅವ ಮೂಲೆ ತಿರುಗಿದರೆ ತಾವೂ ತಿರುಗಿ
ನೆಗೆನೆಗೆದು ಹೂಂಕರಿಸಿ ಹಾರುತ್ತಿದ್ದವು ಗೊಂಬೆ
ನಾನು ಹತ್ತಿರ ನಿಂತು ಕಣ್ಣು ಬಿಟ್ಟೆ :

ಯಾರಿವನು ನಾಯಕ
ದೀನ ದುಃಖ ದರಿದ್ರಕೋಟಿ ದುಃಖತ್ರಾತ,
ಆರ್ತರಕ್ಷಕ ಈ ಅನಾಥಬಂಧು ?
ಏ, ಎಲಾ, ಇದು ಎಂಥದಯ್ಯ, ಈ ಹೊಸ ಜಂತು ?

(ಅವತಾರ ಲೋಕಕ್ಕ ಮಿಕ್ಕಿತಲ್ಲ !)
ರೋಬಟ್ಟು, ನರಯಂತ್ರ ?
ಸುಟ್ಟ ಬೀಜದಿ ಹುಟ್ಟಿಬಂದ ಜಾಲಿಯ ಮರ ?
ಕಣ್ಣೊ ? ಕಣ್ಣೂ ಹೌದು, ಕಣ್ಣಲ್ಲ—ಹೈ ವೋಲ್ಟೇಜು ಬಲ್ಬು !
ಕಾಲೊ, ಸ್ಟೀಮ್ ರೋಲರೋ ! ಹೃದಯವೋ ರುಬ್ಬುಗುಂಡೋ ?
ತಲೆಯೊಳತ್ಯಾಧುನಿಕ ಗೋಡೆಗಡಿಯಾರದೊಳ ಕರುಳಂತದೇನೋನೊ
ತಂತಿ ತಂತ್ರ;
ಹೊಟ್ಟೆಯೊಳಗಿದ್ದಿರಲು ಬೇಕು ಮಾರಣ ಗಿರಣಿ.
ಬಾಯಿ ಹೊಗೆ ಕೊಳವೆಯಿಂದೆದ್ದು ಕವಿಯುತ್ತಿತ್ತು ವಿಷವಾಯು ಕಣಜ
ಹೊಗೆ;
ಮೃಗಶಾಲೆ ನಾತವೋ ಸತತ ಹೊರಗೆ
(ರೇಶ್ಮೆ ಗಿರಣಿಯ ಸುತ್ತ ಬೆಂದ ಹುಳು ಪರಿಮಳ!)
ಮಾತು ಕೂಡಾ ಆಡುತಿತ್ತು ಯಂತ್ರ:
"ಡೌನ್ ವಿದ್ ಡೌನ್ ವಿದ್, ಯುನೈಟ್, ಯುನೈಟ್,
ಧಿಕ್ಕಾರ, ಧಿಕ್ಕಾರ;
ಹೊಡಿ, ಬಡಿ, ಕಡಿ, ಕೊಲ್ಲು ; ಹಾಕು ಲಾಗ, ಕಿರಿ ಹಲ್ಲ;
ರೈಟ್‌ಟರ್ನ್, ಲೆಫ್ಟ್‌ಟರ್ನ್, ಕ್ವಿಕ್‌ಮಾರ್ಚ್"
ಸುತ್ತಲೂ ಹತ್ತಾರು ಮಂದಿ ಬಾಲವ ಕಾಲಸಂದಿಗಿಕ್ಕಿ,
ತಲೆಬುರುಡೆ ತೆಗೆದು ಬಾಲಕ್ಕೆ ಸೆಕ್ಕಿ ;
ಕುಣಿಯುತ್ತಿದ್ದರು ನಾಯಿನೃತ್ಯ ;
ನಡು ನಡುವೆ ನಿಂತು ತಲೆಬಾಗಿ ಆರತಿ ಎತ್ತಿ
ಮಿದುಳ ತುಂಡನ್ನವನ ಬಾಯಿಗಿಟ್ಟರು, ಅಹಾ, ಎಂಥ ಸದ್ಭಕ್ತಿ!
ಗೋವಿಂದಾ, ಗೋವಿಂದಾಽಽ
ತಿರುಪತಿ ವೆಂಕಟರಮಣನ ಪಾದಕ್ಕೇ
ಗೋವಿಂದಾಽಽ ಗೋವಿಂದ.
"ಅಲ್ಲಿ ಕಾಣುವುದಲ್ಲ ಆ ಬೆಟ್ಟತುದಿ ನಾವು ಮುಟ್ಟಿದರೆ ಸಾಕು ; ಈ
ಮರಳುಗಾಡನ್ನಷ್ಟು ದಾಟಿದರೆ ಸಾಕು ;
ಅಲ್ಲಿ ಹೇಸರಕತ್ತೆ ಜೂಜಿನ ಕುದುರೆಯಾಗಿ
ಜಾಲಿಮರವೇ ಕಲ್ಪವೃಕ್ಷವಾಗಿ,
ಮರುಳು ಬಂಗಾರ ಕಣ ; ತೊರೆಯೆಲ್ಲ ಹಾಲು ಹೊಳೆ,
ನೆಲವೆಲ್ಲ ಬರಿ ಭತ್ತ ಗೋಧಿ ರಾಗಿ !"

ಎಂದ ನಾಲ್ಕನೆಯವನ (ಅವನೂ ಪುಢಾರಿ ಜನ)
ಕಣ್ಣು ಮೂರನೆಯವನ ಮೇಲೇ ಸದಾ ;

“ಜಾರಬಾರದೆ ಪಾಪಿ ಕೊಂಚ, ಪಾತಾಳಕ್ಕೆ ಮೆಟ್ಟಿ ಮಾಡುವೆನವನ ಚಟ್ನಿ
ಯಾವಾಗಲೂ ನನ್ನ ಮೇಲೇ ಇವನ ಕಣ್ಣು, ನಡೆವಾಗಲೂ, ಪೂಜೆ
ನಡೆವಾಗಲೂ ;
ಅವನು ಸಾಯದೆ ನಾನು ಬದುಕಲೆಂತು ;
ಸುಲಿಗೆ ನಿಲುವುದೆಂತು ?
ಸ್ವರ್ಗ ಮೊಳೆವುದೆಂತು ?
ಲೋಕ ಉಳಿವುದೆಂತು ?”

ಮನದ ಬೆಳವಣಿಗೆ ಹದಿನೆಂಟಕ್ಕೆ ಕಟ್ಟಾಗಿ
ಬೇಲಿ ಮೇಲಿನ ಕಳ್ಳಿ ಗುಜ್ಜು, ಗುಜ್ಜು ;
ಮುರಿದರೊಂದಷ್ಟು ಬಿಳಿಸೊನೆ, ರಕ್ತವೇ ಇಲ್ಲ ;
ಹೂವ, ಚಿಗುರಿನ, ಹಣ್ಣ ಮೆಲುಪ ಕಂಡಿಲ್ಲ.
ದುಂಬಿಯೊಲವಿನ ಗೀತ ಮಿಂಚಿನಪ್ಪುಗೆಯಲ್ಲಿ
ಹಮ್ಮಿನೆದೆ ಕರಗಿ ಹನಿಯಾಗಲಿಲ್ಲ.
ಮೊಗ್ಗೆ ಮಕ್ಕಳ ಅಳುವ ನಗುವ ಅಂತರ್ಗಂಗೆ
ಬಾಳ ಹೊಲದಲಿ ಹಸುರನುಸುರಲಿಲ್ಲ.
ಎದೆ ಮರುಳುಕಾಡಲ್ಲಿ ವಿಷದೂಟಿ ಚಿಮ್ಮುತಿರೆ
ಕಲ್ಪವೃಕ್ಷದ ಭಂಗಿ ತಳೆವ ಈ ಜಡೆಕಳ್ಳಿ
ಹಾಸ್ಯಕರುಣದ ಬೆರಕೆ ನರಕಯಂತ್ರ.

ಹಿಂಬಾಲಕರು ಬಹಳ ಹುಂಬ ಜನ, ದೇಗುಲದ
ಗರ್ಭಗುಡಿಯಲ್ಲಿರುವ ದೇವರಂತೆ :

ಅಭಿಷೇಕ ಮಾಡಿದರೆ ಸ್ನಾನ; ಏನೋ ಅಷ್ಟು ನೈವೇದ್ಯ ನೀಡಿದರೆ ಭೋಜನ;
ವರ್ಷಕ್ಕೊಮ್ಮೆ ಪಟ್ಟೆಯುಡಿಸಿದರಷ್ಟೆ ಬಟ್ಟೆ.
ಪ್ರಾರ್ಥನೆ, ಕೀರ್ತನೆ, ಪೂಜೆ—ಇಷ್ಟಕೆ ಸದಾ ಸಂತೃಪ್ತ.
ರೋಬಟ್ಟು ಹಿಡಿದ ಸರಪಣಿ ಗಟ್ಟಿ ಇದ್ದರಷ್ಟೇಸಾಕು ದೇವ ಕೈಬಿಡುವನಲ್ಲ!
ಕಲ್ಲು ದೇವರನಲ್ಲಿ ಕೂರಿಸಿದರೇನು ಮಹ ?
ಗುಡಿಸಲೆಷ್ಟೋ ಅಷ್ಟೆ ಅರಮನೆ ಸಹಾ ?
ಗುಡಿಸಲೇ ಸಾಕಲ್ಲ! ಭಕ್ತಪರಿವಾರಕ್ಕೆ ಯಾವ ಕಾಲಕು ಏನೂ ಕೊರತೆಯಿಲ್ಲ.
ಕಂಡು ಹಾಗೇ ನಾನು ಹೌಹಾರಿ ಮೈಮರೆತೆ ;
ಮೆರವಣಿಗೆ ಸಾಗಿತ್ತು ತಾಳ ಬದ್ಧ.
“ಸತ್ತರೇನು, ಮನುಜ ಅತ್ತರೇನು ?
ಮನುಕುಲದ ಮನೆಯ ಪಂಚಾಂಗವಿದ್ದರೆ ಸಾಕು ಭದ್ರ, ಸಾಯಲಿ ಈ
ದರಿದ್ರ !”

ಯಾರದೋ (ಗುಂಡೋದರನದೆ ಇರಬೇಕಲ್ಲ) ಕಾರಲ್ಲಿ ಮಲಗಿ
ಬಂದವನೀಗ ಆಸ್ಪತ್ರೆ ಮಂಚದಲಿ ಕಣ್ಣು ತೆರೆದೆ;
ಕಂಡಿದ್ದ ಮೆಲುಕಾಡಿ ತಲೆಯ ಕೆರೆದೆ:—
ಸರಪಣಿಯ ನಡೆ ದಾರಿ ಗುರಿ ದಂಡಕಾರಣ್ಯ,
ಖರದೂಷಣತ್ರಿಶಿರ ನೆರೆವ ಠಾಣ್ಯ;
ಮನದಿ ಕಗ್ಗಾಡು ನಳನಳಿಸುತಿರೆ, ನಾಲಗೆಯ
ಮೇಲೆ ನಂದನ ಚಿಗುರಿ ಬರುವುದುಂಟೆ?
ಎದೆಯಲಿ ಹಿರಣ್ಯಾಕ್ಷಪೀಠ ಸುಸ್ಥಿರವಿರಲು
ಬುರುಡೆಯಲಿ ಪ್ರಹ್ಲಾದ ಪುಟಿವುದುಂಟೆ?
ಬಸಿದ ನೆತ್ತರ ಮಡುವಿನಲ್ಲಿ ಕೊಬ್ಬಿದ ಮಿಾನ–ಹೀನಕೆರಗುತ್ತಿದೆ ದೊಡ್ಡ ಹದ್ದು;
ಕಪ್ಪೆಯನು ಕುಕ್ಕಿ ತಿನ್ನುವ ಕಾಗೆ ಪಕ್ಕಕ್ಕೆ ಫಕ್ಕನಿಳಿವುದು ಕತ್ತಲಿಂದ ಸರಳು;
ಡೊಳ್ಳು ಹೊಟ್ಟೆಯ ಥೈಲಿ ಕಿತ್ತು ಕೊಬ್ಬುವ ಅಸ್ಥಿಪಂಜರವ, ಅಗೋ
ನೋಡು ಹೇಗೆ ಬೆಳೆಯುತ್ತಲಿದೆ ದುಂಡು, ದುಂಡು:
ಮೂಳೆಯೆಲ್ಲಾ ಹೂತು ಮಾಂಸಪರ್ವತದಲ್ಲಿ ಗುಹೆಗಣ್ಣಿನಲಿ ಲೋಭ
ತೋಳ ತೆವಲು.
ಹೊಟ್ಟೆ ಚೆಂಡಿಗೆ ಪಪು ಹೊಡೆವಷ್ಟರಲ್ಲಿಯೇ ಮನಬುನಾದಿಗೆ ನೂರು
ಕನ್ನಕಿಂಡಿ.
ಕಪ್ಪೆತೂಕದ ವೃತ್ತಿ ಕಂಡು ನಕ್ಕೆನು. ಇಲ್ಲ,
ಯುಗಯುಗಕ್ಕೂ ತ್ರಾಸು ಸಮತೂಕವಾಗಲಿಲ್ಲ;
ಅದ ಕಂಡು ಅಳುವರಸಿ ನಕ್ಕೆ ಕೊಂಚ.
ನಾಯಿಬಾಲಕೆ ನಳಿಗೆ ಹಾಕಿ ಕೂತಾಸಾಮಿ ಕನಸಿನಲಿ ಖಂಡಿತಾ
ಕಂಡಿದ್ದೆ, ಕಂಡಿದ್ದ
ನಿಗುರುಬಾಲದ ಕಂತ್ರಿನಾಯಿ.

೪

"ರಕ್ಷಮಾಂ ಪುರುಷೋತ್ತಮ"

ಎಂಥ ಶಖೆ ಅಂತೀಯ! ಕೆಂಡದೊಳಗಡೆ ಕಂತ
ಹೂತ ಬದನೆಯಕಾಯಿಯಂತೆ ಮೈ; ಮೈತುಂಬ
ಜಿನುಗುತಿದೆ ತಿಗಣೆ ಬೆವರಿನ ಕಟಕಿ; ಹಣೆಪಾಚಿಗಲ್ಲಲ್ಲಿ
ಜಾರಿ ಬಾಚುತ್ತಲಿದೆ ಜೋಮುಗ್ಗೈ; ಜೇವೊಡೆದ ಬಿಲ್ಲನಾರಿಯ ಹಾಗೆ
ನರ ಏಕಂಪಿಸಿ ಸ್ಲೈಡು ಸ್ಲೈಡು ಜಾರುತ್ತಲಿದೆ ಅಂತಃಪಟದ ಮೇಲೆ.
'ಮನ ಹತ್ತಿ ಉರಿದರೆಲ್ಲೋಡಬಹುದೋ'?

ಎವೆಗೆ ಎವೆ ಶಗಲದಣ್ಣಾ, ಕಣ್ಣ ಕಣದಲ್ಲಿ
ಡೈನಾಸರಸ್ಸು, ಡ್ರೇಗನ್ನು, ಡೇಗೆ;

ಕಂಡು ಕೇಳದ ಪಕ್ಷಿ, ಮಗ; ಗಂಡಭೇರುಂಡ;
ಒಳಗೆ ಟ್ರೋಜನ್ ಕುದುರೆ ಚಿಂತೆ, ಯುವನವಿಕಾರ;
“ಕುತಸ್ತ್ವಾ ಕಶ್ಮಲಮಿದಂ ವಿಷಮೇ . . .”

ಒಂದು ವಕ್ಕರಿಸಿಯೇ ಬಿಟ್ಟ ಅಕ್ಕಟ ಸೊಳ್ಳೆ ಸಂಗೀತಗಾರ;
ಕೈ ಪಿಟೀಲ ಕಮಾನ ಮೇಲೆ ಮಿದುಳನು ಸಿಲುಬೆಗಿಕ್ಕಿಸುವ
ಪೈಲೇಟ ಪ್ರಶ್ನೆಯೊಲು ಅರ್ಥಾವರುದ್ಧ, ಕರ್ಣವಿರುದ್ಧ ಗುಂಗುಂನಾದ;
ಬೇಡ ದಮ್ಮಯ್ಯ ಎಂದರು ಬಿಡದೆ ಸಂಗೀತ ಗೀತಸಂದೇಶ ಗಂಧಕ
ಗಂಧಾನುಲೇಪನಕೆ ಸಿದ್ಧ ಈ ಬುದ್ಧ, ಅನಿರುದ್ಧ, ವಾಗ್ಯುದ್ಧ ಚತುರ.
ಮಾಳಿಗೆಯ ಮೇಲೆ ಏನೇನೋ ಮಹಾಕ್ರಾಂತಿ; ಇರುಳಿಡೀ
ಸರಸರ, ಭರಭರ, ದಢದಢ;
ಇಲಿಯೊ ಹೆಗ್ಗಣವೊ ಬಾವಲಿಯೊ ಜಿರಳೆಯೊ ಬೆಕ್ಕೊ,
ಇಲ್ಲವೋ ಸತ್ತ ಹತ್ತು ಸಮುಸ್ತರಪಲಾಪ ವಿಪ್ರಲಾಪವೊ ಬಿಕ್ಕೊ,
ಅಶರೀರವಾಣಿಗಳ ರೇಡಿಯೋ ನಿಲ್ದಾಣ
ನನ್ನ ಮನೆಮಾಳಿಗೆಯ ಮೇಲೆ ಉದ್ಘಾಟಿಸಿದ
ಆ ಧುರೀಣನು ಈಗ ಎತ್ತನಡೆದ?
ಯಾರವರು ಅಲ್ಲಿ ಕುಳಿತವರು ಮೇಗಡೆ; ಮಹಾನುಭಾವರು;
ನಿದ್ರಾ ಜಗತ್ತನ್ನು
ಲಯದ ಡಮರುಗ ಹಿಡಿದು ಬಾರಿಸುವರು?
ಟಾರ್ಚಿದ್ದರೆದ್ದು ಬರುತಿದ್ದೆ. ಎದ್ದರು ಹೇಗೊ? ಮಲಗಿದ್ದರೂ ಹೇಗೊ?
ಕತ್ತಲಲ್ಲೇ ಮತ್ತೆ ಮಾನಭಂಗ.
ಮರಳದಿಣ್ಣೆಯ ಸುತ್ತ ಬಡಿವುದುಗ್ರತರಂಗ
ಭಯಚಕಿತ ಹರಿಣವನು ಬೆಂಬತ್ತಿದನು ಭಿಲ್ಲ.
ಬಾರನೇತಕೆ ನನ್ನ ನಲ್ಲ?
ನೀವು ಯಾರು?
ದಮ್ಮಯ್ಯ ಹೇಳಿರೋ ನೀವು, ಈ ನೀವು, ಕಾಣಿಸದಂಥ, ಕಾಣಿಸದಂತೆ
ಬಂದು ಗೋಣ್ಮುರಿಗೊಂಬ ಈ ಪಂಥ ಹಿಡಿದವರು, ಈ ನೀವು?

ಯಾರು ನೀವು?
ಬನ್ನಿರಯ್ಯಾ, ಇರುವಂಥಸ್ಥಳ?
ಗೊಂದಲ ಪುರಕ್ಕೆ ಯಾರೆಂದು ಕೇಳಿ ಬಲ್ಲಿರಿ?
ಗೊಂದಲಾಸುರೇಶ್ವರ ಮಹಾರಾಜರೆಂದು ಕೇಳಿಬಲ್ಲೆವು.
ಹಾಗೆಂದುಕೊಳ್ಳಬಹುದು.
ಕೈಲಾಸದಡಿ ಕೈಯ ರಾವಣೇಶ್ವರ ಕುಲೋದ್ಧಾರ;
ಚಂಡೆ ಮದ್ದಳೆ ಭೇರಿ ದುಂದುಭಿ ತಮ್ಮಟೆ ಶತಗಾರ್ದಭ ಕಂಠತ್ರಾಣ;

ಸಂತೆ ಸಂತೆಯ ಅಧಿನಾಯಕ;
ಸದ್ದೆಂತೆಂಬರ ಗಂಡ;
ಮೌನಿ ಮುನಿ ಋಷಿ ಧ್ಯಾನಿ ವಿಜ್ಞಾನಿ ಎಂತೆಂಬ ಚಿಂತಕಹಂತಕ ಜನ ವಿಂಡ;
ಜನಜಾತ್ರೆಯ ಜೀವಾಧಾರ;
ಬೀದಿಕೂಗಿನ ಆವಾಹನೆಗೆ ಆರಯ್ದು ಬರುವ ಕಿರುಚುಗಾರರ ಆರಾಧ್ಯ ದೈವ,
ರೈಲು ಗಿರಣಿ ರೋಡೆಂಜಿನ್ನು ವಿಮಾನ ಬಾಂಬು ಭಾಷಣ ಭಷಣ ಶತಘ್ನಿ
ಸಮಸ್ತ ರಾಜೋಪಚಾರ ಸದಾಸಂಪನ್ನ;
ಗೊಂದಲಾಪುರ ಗೊಂದಲಾಸುರ ಮಹಾರಾಜ,
ಕೋಟಿ ವಿದ್ಯುದ್ದೀಪಸಮ ವೈಷಮ್ಯತೇಜ;
ಭೋ ಪರಾಕ್, ಭೋ ಪರಾಕ್!
ಬಂದಂಥ ಕಾರ್ಯ
ಬಹಳವುಂಟು
ಥೈ ಥೈ ಕಥಾ, ಥೈ ಥೈಯ ಥಾ
ಮುಗಿಸಿಯೇ ಬಿಟ್ಟೆನೆಂದಿದ್ದ ಭಾರ್ಗವರಾಮ,
ಹಾಗೆಯೇ ದಾಶರಥಿ ರಾಮ, ಕೃಷ್ಣ;
ಹತ್ತು ಅವತಾರ ರಂಗೋಲೆ ಕೆಳಗೇ ತೂರಿ ಸತ್ತು ಬದುಕಿದೆ ಅಸುರ ದರ್ಪ.
ಸಲ್ಕಿ ಗುದ್ದಲಿ ಕಲ್ಕಿ ನಮ್ಮ ಗೆಸ್ಟಾಪೋವಿನವನೆ ಬೆರಕಿ
ಅವತಾರಿ ಜನಕೆ ತಿಳಿವಳಿಕೆ ಬಹಳಾ ಕಡಿಮೆ, ಕ್ಷಣಭಂಗುರವು ಕೇಕೆ,
ಎತ್ತುವರು ಹುಸಿ ಜಯಪತಾಕೆ;
ಅಂತವಿಲ್ಲದ್ದಯ್ಯ ಭಾಗವತರೇ ನಮ್ಮ ಅಂಶ;
ಅಸುರ ಕುಲರೆಲ್ಲ ಎಂದೆಂದಿಗೂ ಧ್ವಂಸ.
ದಿನದಿನಕೆ ವರ್ಧಿಷ್ಣು ನಮ್ಮ ಆರಾಮು;
ಇನ್ನೇನು ಮುಂದೆ ಬರುವುದು ನಮ್ಮ ಶ್ರಮಕ್ಕೆಲ್ಲ ಪೂರ್ಣವಿರಾಮ.
ವಿಶ್ವವೆಲ್ಲ ಅಸುರ್ಯವಾಗುವುದೆ ನಮ್ಮ ಗುರಿ.
ನಾವು ಕುಡಿದಿದ್ದ ವಾಸುಕಿ ವಿಷಕ್ಕಿಲ್ಲ ಕೊನೆ;
ಅದಕಿಲ್ಲ ಕಟ್ಟುನಿಟ್ಟು.
ಅದಕೇಕೆ ಗುಟ್ಟು?
ಅಮೃತವೋ? ಅದ ಕೇಳಿ ಇನ್ನೆರಡು ವರ್ಷ ಬಿಟ್ಟು
ಅಷ್ಟರಲ್ಲಿ ಅದೂ ಅದನ್ನು ಕುಡಿದವರೂ ಛಟ್ಟು!
ಅಷ್ಟದಿಕ್ಪಾಲಕರು ನಾಷ್ಟಕಿಲ್ಲದೆ ಈಗ
ಕಟ್ಟುವರು ನಮ್ಮ ಕೈಕಾಲ;
ರಂಭೆ ಊರ್ವಶಿ ಇರಲಿ, ಬೀದಿಬಿಚ್ಚಿಗು ಕೂಡ
ರೊಕ್ಕವಿಲ್ಲದ ದ್ರಾಬೆ ಇಂದ್ರ.
ಹೊಟ್ಟೆಗಿಷ್ಟೂ ಹಿಟ್ಟು ಸಿಗದೇ ಬೃಹಸ್ಪತಿ

ಗೊಂದಲಪುರದ ವಿಶ್ವವಿದ್ಯಾ—ಲಯಕೆ ಕುಲಪತಿ;
ನಾವು ಆಟಂ ಸುಟ್ಟ ದಿನವೆ ಸಮತಾ ಹೊಡೆದು
ಈ ಜಗವನಜ ನಮ್ಮ ಕೈಗೆ ಕೊಟ್ಟ.

ವೈಕುಂಠದಿಂದ ಗೊಂದಲಪುರದ ಗಡಿವರೆಗೆ
ಫಿಶ್‌ಪ್ಲೇಟ ತೆಗೆದು, ಕಂಬಿಯ ಕಿತ್ತು, ಸ್ಟೇಶನ್ನ
ಸುಟ್ಟು ಬಂದಿದ್ದಾರೆ ನಮ್ಮ ಭಟರು;
ವೈಕುಂಠ ಸ್ಟೇಶನ್ನಿನಲ್ಲಿನ ಸೆಲೂನಲ್ಲಿ
ಗೊರಕೆ ಹೊಡೆವನು—ಕೇಳಲಿಲ್ಲವೆ, ಅಹಹ, ಭಾಗವತರೇ!
ಶಿವಭಕ್ತ ನಾನು; ಅವ ಕೊಂಚ ಭೋಳೇ ನೋಡಿ,
ಹೊತ್ತಾರೆ ನಾ ಕೊಟ್ಟ ಹಾಲಿನೊಡನೆ
ಏನನೊ ಬೆರಸಿದ್ದೆ. ಕುಡಿದ ತತ್‌ಕ್ಷಣ ಅನಾಮತ್ತು ಮಲಗಿದ ಧ್ಯಾನ
ಯೋಗದಲ್ಲಿ.

ಈಗ ಎಲ್ಲ ಸಲೀಸು,
ದೇವತೆಗಳೇನು ಬಡಿ; ಚಪ್ಪಾಳೆ ತಟ್ಟಿದರೆ
ಹುಳುಹುಪ್ಪಟೆಗಳಂತೆ ಬೀಳುವವರು
ಮುಖ್ಯ ಬಹಳ ಫಜೀತಿ ಕೊಡುವವರು—
ಈ ನರರು
ಅವರಲ್ಲು ಸೇಕಡಾ ತೊಂಭತ್ತು ಮೂರು ಜನ ನಮ್ಮ ಪಕ್ಷದ ಪತ್ರಿಕಾಗಳೇ
ಸಹಿಹಾಕಿ ಸೇರಿದವರು;
ಹಾಕಿದ ಗೆರೆಯ ಮೀರಲಾರದವರು;
ಮನ ಮುಚ್ಚಿ ನಮಗೆ ಕೈ ಎತ್ತುವವರು.
ಅವರ ಎದೆಯನು ಕಿತ್ತು ಖಾಲಿ ಬುರುಡೆಯೊಳಿಟ್ಟು ಹೊಲಿದರಷ್ಟೆ ರಿಪೇರಿ;
ಹೆಚ್ಚಿಗಿಲ್ಲ.
ಉಳಿದ ಈ ಸೇಕಡಾ ಏಳರ ಖಳರು ಮಾತ್ರ ಅಷ್ಟಕಿಷ್ಟಕೆ ಮಣಿವ ಕುಳಗಳಲ್ಲ.
ನಾಸಿಕಾಗ್ರದ ದೃಷ್ಟಿ ಬಿಡುವರಲ್ಲ;
ತರ್ಜನ, ಗರ್ಜನ, ಮಿದುಳ ಮಾರ್ಜನ ಶಿರಚ್ಛೇದನಕ್ಕೂ ತಗ್ಗಿ ನಡೆವರಲ್ಲ;
ಇಲ್ಲಿಂದ ವೈಕುಂಠಪುರಕೆ ಹೋಗುವ ಕಾಲುದಾರಿ ಗುಟ್ಟನು ಬಲ್ಲ
ಭ್ರಷ್ಟ ಜನರು.

ಬಯ್ದರೂ ಇಲ್ಲ, ಆಡಿದರಿಲ್ಲ,
ಕಿವಿಯ ಬಳಿ ಗರ್ನಾಲು ಹೊಡೆದರೂ ಇಲ್ಲವಯ್ಯ.
ಬೀದಿ ಮಕ್ಕಳಿಗೆಲ್ಲ ಚಾ ಕೊಟ್ಟು ಅವರ ಕಡೆ ಥೂ ಬಿಟ್ಟರೂ ಕೂಡ ಸಗ್ಗಲಿಲ್ಲ.
ಥರ್ಡ್‌ಡಿಗ್ರಿ, ಫೋರ್ಥ್‌ಡಿಗ್ರಿ—ಎಲ್ಲ ಮುಗಿಯಿತು, ಸ್ವಾಮಿ, ಭಾಗವತರೇ.
ವ್ಯಕ್ತಿ ಸ್ವಾತಂತ್ರ್ಯಕ್ಕೆ ನಮ್ಮಲ್ಲಿ ಬಹಳ ಬೆಲೆ; ಅದಕಾಗಿ ಇಷ್ಟು
ಪರದಾಟ, ಇನ್ನು

ಹೂಡಬೇಕಿದೆ ಮನಃಶಾಸ್ತ್ರ ಶಸ್ತ್ರ.
ಒಬ್ಬೊಬ್ಬರನೆ ಹಿಡಿದು ಕುಟ್ಟಿ ತಲೆಯೊಡೆದು,
ಮಿದುಳ ಕಿತ್ತೆಸೆದು ನಾಯಿಗೆ, ಬುರುಡೆ, ಹೊಲಿದು
ಕುಂಡೆಮೇಲೊಂದೊದೆತ ಬಿದ್ದರಷ್ಟೇ ಸಾಕು,
ಈ ರಾಜ್ಯ ನಿಷ್ಕಂಟಕ
ನಾಳೆ ನಮ್ಮೆಲ್ಲ ವಿಜ್ಞಾನಿವೈದ್ಯರಿಗೆ ಹೋಗುವುದಾಜ್ಞೆ :
ಈ ಜಗದಿ ಮೆದುಳೆಂಬುದಿರಲೆ ಕೂಡ;
ಗೊಂದಲಾಸುರ ವಾಕ್ಯ ವೇದವಾಕ್ಯ.
ಹೇಗಿದೆ ಭಾಗವತರೇ ?
ಹ್ಹ ಹ್ಹ ಹ್ಹಾ ಹಿ ಹ್ಹಿ ಹ್ಹಿ—ಸೊಗಸಾಗಿದೆ ಪರಾಕು !

ಎಂದವನೆ ಡಬಡಬೆಂದಿಳಿದ ಮೆಟ್ಟಲಿನಿಂದ
ನಗರಸಭೆ ಪೀಪಾಯಿ ಹೊಟ್ಟೆ ಘಡವಾ
ಝಗ್ಗನೊತ್ತಿದ್ದ ಸ್ವಿಚ್ಚು ; ಕ್ಷಣ ; ಕಂಡ ನನ್ನನ್ನು ;
ಬಂದು ಕುಳಿತೇ ಬಿಟ್ಟ ಎದೆಯ ಮೇಲೆ
ಸಿಕ್ಕಿಕೊಂಡಿತ್ತುಸಿರು ಕುಂಡಲಿನಿಯಲ್ಲಿ, ನುಡಿ
ಹೂತುಹೋಯಿತು ನಾಭಿಕುಹರದಲ್ಲಿ.
ತಲೆಮೇಲೆ ಗರಗಸವನಿಟ್ಟು ಕೊಯ್ಯುತ್ತಿದ್ದ,
ಗರಗರಾ, ಗರಗರಾ ;
ಹರಿಹರಿ, ಹರಹರಾ.

ಅನ್ಯಥಾ ಶರಣಂ ನಾಸ್ತಿ ತ್ವಮೇವ ಶರಣಂ ಮಮ
ತಸ್ಮಾತ್ ಕಾರುಣ್ಯಭಾವೇನ ರಕ್ಷ ಮಾಂ ಪುರುಷೋತ್ತಮ.

—ಗೋಪಾಲಕೃಷ್ಣ ಅಡಿಗ

ಫೈಲು

ಒಂದಿನಿಸು ಬಿಸಿಲು ಬಿದ್ದರೆ ಸಾಕು
ಹುಚ್ಚೆದ್ದು ನಡೆವವರು ನಾವು
ನಮಗೇತಕಯ್ಯ ಈ ಫೈಲು ಫೈಲಿನ ರಗಳೆ.
ಮನದ ಮಾತಿನ ಮಗಳೆ
ಕವಿತೆ
ಪಡುತಿಹಳು ವ್ಯಥೆ
ಹೊಸ್ತಿಲಾಚೆಗೆ ನಿಂತು ಕಾದು ಕಾದು
ಕರೆದೊಯ್ಯಲೆಳಸಿ
ಜೀವವನದುಮಿ ಬೆಳೆದ ಈ ಹತ್ತುಗೋಡೆಗಳಾಚೆ
ಈ ಒತ್ತುಗರಡು, ಮಸಿ, ಬರಡು ಕಾಗದ
ಸುತ್ತ ಕರಡು ಗೀಚುವ ನೂರು ಕೈಗಳಾಚೆ
ಕಡಲ ಮುದುಕನ ತೆರದಿ ಹೆಗಲಲ್ಲೆ ಕುಕ್ಕರಿಸಿ
ಆಚೆ ಕೋಣೆಯಲಿಂದೆ ಆಹಾ ಜೀವವನಿಕ್ಕುಳಲಿ ಹಿಡಿದು
ಕುಳಿತ ಸಾಹೇಬನಾಚೆ.

ಆ ಅಲ್ಲಿ ಹೊರಗೆ ಬಿತ್ತರ ತೆರೆದ ಬಾನಡಿಗೆ ಹರಡಿಹುದು ಬಿಡುಗಡೆ.
ಬೀಸಿಹುದು ಗಾಳಿ, ದಡಸೂಸಿ ಹರಿದಿಹುದಹಾ ಮನುಜೀವನದ ಜಲ—
ತಿಳಿ ಕದಡು ಗಂಭೀರ ಶಾಂತ ಕಾಂತ ನಿತಾಂತ ಚಲವಿಚಲ—
ಜಗದ ಐತಿಹ್ಯವನ್ನೆಲ್ಲ ಹೊತ್ತು.
ಕರೆಯುತಿದೆ ಮೀಯೆಂದು ಪ್ರಾಣಪೋಷಕ ಪಾತ್ರ.
ನಾವಿಲ್ಲಿ ಒಳಗೆ ಸಿಕ್ಕವರು ಮಾತ್ರ
ಕುರ್ಚಿಯಲಿ ಕುಳಿತಲ್ಲೆ ಗಲಿತಗಾತ್ರ.
ನಿಮಿಷ ನಿಮಿಷಕ್ಕೊಮ್ಮೆ ಬಡೆದು ಪೇದೆಯನಟ್ಟಿ ಅಲೆಯಿಸುವ ಕೈಗಂಟೆ
ಬಿಡದೆ ಬಾಗಿಲ ನೂಕಿ ದಿನದುದ್ದ ಫೈಲುಗಳು ತರುವ ತಕರಾರು ತಂಟೆ
ನೂರುತರದ ಸಮಸ್ಯೆ ನೂರು ತರ ಪರಿಹಾರ
ಸೂಚಿಸುತ ಶಂಕಿಸುತ ಯೋಜಿಸುತ ಅಂಕಿಸುತ

ಹಲವು ಮೆದುಳುಗಳು ಮೇಜಿಗೆ ಅಡಕಲೇರಿಸುವ ಗೌಜಿ ಗಜಿಬಿಜಿಯ ಸಂತೆ.
ನಿದ್ದೆ ಎಚ್ಚರಗಳಲು
ರೂಲು ಸ್ಕೇಲು ಕರಾರು
ಭತ್ತೆ ಭಡತಿ ಪಗಾರು
ಅರ್ಜಿ, ಮರ್ಜಿಯ ಹುಕುಮು, ಮೆಹರಬಾನಿ
ಮುರವತ್ತು ಮುತುವರ್ಜಿ ಹುಜರೆ ಮುಜರೆ ಸಲಾಮು—
ಉದರಭರಣಕೆ ಏಸು ಸತ್ತ್ವಹಾನಿ!
ಮನದ ಕೊನೆಗೆಲ್ಲ ಹಬ್ಬಿದೆ ಹಾಳು ಕಳ್ಳಿಯೊಲು
ಕಾನೂನ ಬಳ್ಳಿ ಹರಿಬಿಟ್ಟು ಕಲಮು.
ಟೀಪು ಟಿಪ್ಪಣಿ ಬರೆದು ಮೇಲಿನಪ್ಪಣೆ ಪಡೆಯೆ
ಜೀವಕ್ಕೆ ಹತ್ತೆಡೆಗೆ ಜಖಮು ಜುಲುಮು.
ಮೆದುಳ ಮೇಲ್ಭಾಗದಿಂದಲೆ ಎಲ್ಲ ವ್ಯವಹಾರ
ಸೋಂದು ದಾಖಲೆಯೆಂಬ ಖಾತೆಯೀ ಹಣೆಭಾರ
ಹೊತ್ತು ಓಡಾಡುತಿವೆ ಸುತ್ತ ಫೈಲು
ಆಡಿದ್ದನಾಡಾಡಿ ಮಾತು ಬೆಳೆಸಿ
ಏರಿಳಿದು ಮೈಲುದ್ದ ದಾರಿ ಬಳಸಿ.
ಈ ಕಾಗದದ ಸರಕ ಮೇಲೆ ಕಾವಲಸಟ್ಟು
ಇದರ ಆವಕ ಜಾವಕದ ಮೇಲೆ ಕಣ್ಣಿಟ್ಟು

ಕುಳಿತೆವಯ್ಯಾ ಇಲ್ಲಿ ತಲೆಯಮೇಲೆ ಕೈಯಿಟ್ಟು
ಶುಷ್ಕ ಆಯಾಸದಲಿ ಆಯು ವ್ಯಯಿಸಿ.
ಒಡಲಿಂದ ವ್ಯರ್ಥ ಉದ್ದಕು ಹೊರಟ ಸೂಲಿಸಲಿ
ಸುತ್ತಿಬಿದ್ದಿದೆ ಜೀವ
ಸತ್ತು ಬಿದ್ದಿದೆ ಮನಸು ಕನಸುಗಳ ಕಳಕೊಂಡು
ಬರಿದಾಗಿ ಅಸು ಯಂತ್ರದಂತೆ ಅತಂತ್ರ ದುಡಿಯುತಿದೆ
ಬಣಬೆಯೊಲು ಬೆಳೆದ ಈ ಫೈಲುಗಳ ನೆಳಲಲ್ಲಿ.
ಅಣಬೆ ತಲೆಯೆತ್ತುತಿವೆ ಅಹ ಬೀಳುನೆಲದಲ್ಲಿ.
ಬುದ್ಧ ಬಂದರು
ಏಸುವನು ಸಿಲುಬೆಗೇರಿಸುತ ಕೊಂದರೂ
ಅಲೆಯೊಂದು ಹಾಯದಿಹ ಸೊಟ್ಟು ತಾಣವಿದಯ್ಯ
ತಾನೆ ತನ್ನಷ್ಟಕ್ಕೆ ತಿರುಗಿ ಸಣ್ಣಗೆ ಅರೆವ ಹೊಟ್ಟು ಗಾಣವಿದಯ್ಯ
ನಮಗೇತಕಯ್ಯ ಈ ಇಂಥ ಸಾವು—
ಒಂದಿನಿಸು ಬಿಸಿಲು ಬಿದ್ದರೆ ಸಾಕು
ಹುಚ್ಚೆದ್ದು ನಡೆವವರು ನಾವು.

—ಗಂಗಾಧರ ಚಿತ್ತಾಳ

ಅವತಾರ

“ಹತ್ತುವತಾರದ ಹೇಡಿತನಕ್ಕೆ”
ಮನ ಗೊಣಗುಟ್ಟುತಿದೆ
ಪರಮಾತ್ಮನ ಕಿಡಿಗೇಡಿತನಕ್ಕೆ
ತಲೆ ರಣಗುಟ್ಟುತಿದೆ

ಯುಗ ಯುಗಕೂ ಹೊಸ-
ಹೊಸ ಅವತಾರ
ಕೀಳಲಿಕಾಗದೆ
ಕೀಳಿಸ ಬೇರ?
ಲೀಲೆಯು ಸೋಗೇ
ಜಗದುದ್ಧಾರ?
ಒಂದೊಂದವತಾರದ ತಲೆಮೇಲೂ
ಅಣಬೆಯು ಹುಟ್ಟುತಿದೆ

ವಿಶ್ವನಿಯಾಮಕಗೆಲ್ಲಿದೆ ಹೇತು?
  ಬರಿ ತಿರಿಕಿಟ ಧಿತ್ತ
ಆ ಹಗರಣಕೀ ಜೀವವು ಸೋತು
  ಮಿಡುಕುವದತ್ತಿತ್ತ
ಎಲ್ಲಿಹುದವನಿಗೆ ಎರಗುವ ಕೇತು?
  ಅವನದೆ ಘನಚಿತ್ರ!
ಯಾತಕೆ ದೇವನು ಮಾತೆಯು ಅವತಾ-
  ರವ ಮಾಡುವದಿಲ್ಲ?
ಕತ್ತಲೆಯನು ಬೆಳಕಾಗಿಸುವಾ ಜೋ
  ಗುಳ ಹಾಡುವದಿಲ್ಲ?
ಅವತಾರವೆ ಬೇಕಾಗದ ಬಗೆಯನು
  ಅವ ನೋಡುವದಿಲ್ಲ?

ಎಲ್ಲವ ಬಲ್ಲ
ಆಗುವದಿಲ್ಲ
ಯೆನ್ನುವದಿಲ್ಲ

ಆದರು ಹೀಗೇ ಬೀಳೇಳುತ ಬಾಳ್
ನಡೆಯುತಲಿರಬೇಕು
ಜೀವಜೀವಿಯೂ ಜೀ ಜೀ ಯೆಂದು
ತನ್ನೆಡೆ ಬರಬೇಕು
ಏನೊ ಮಹಾಮಾಡುವಹಾಗೆ ಯುಗ-
ಪುರುಷರ ಹೆರಬೇಕು!
ಎಂತಹ ಜಂಬ!
ಲೀಲೆಯು ಎಂಬ!
ಪರಮಾತ್ಮನ ಈ ಕಿಡಿಗೇಡಿತನಕೆ
ತಲೆ ರಣಗುಟ್ಟುತಿದೆ
ಒಂದೊಂದವತಾರದ ತಲೆಮೇಲೂ
ಅಣಬೆಯು ಹುಟ್ಟುತಿದೆ.

—ವಿ. ಜಿ. ಭಟ್ಟ

ಅವಧೂತ

ದೇವಕನ್ನೆಯರೇಳು ಮಂದಿ ಬಂದಾರ ಮೀಯಲೆಂದು
ವೇಷ ಭೂಷ ಕಳೆದಿಟ್ಟು ಬಿಟ್ಟರೋ ಮರದ ಮರೆಗೆ ನಿಂದು
ಹಕ್ಕಿಯಂತೆ ಕಿಲಕಿಲಿಸಿ ನಕ್ಕರೋ ದಂಡೆಗೂಡಿ ಬಂದು

ಹಾಲುಕಲ್ಲ ಸೋಪಾನವಿಳಿದು ಬಂದಾರ ಸೀರಿಗೋಡಿ
ಕೊಳದ ತಂಪು ತಿಳಿನೀರ ಸೇರಿದರೊ ನೂರು ತೆರೆಯ ಮಾಡಿ
ಹಕ್ಕಿಯಂತೆ ಕಿಲಕಿಲಿಸಿ ನಕ್ಕರೋ ಜಲಕ್ರೀಡೆಯಾಡಿ

ಕೊಳದ ಸುತ್ತಲೂ ಕಮಲ ನಿಂತವೋ ಬಳ್ಳಿಗೋಡೆ ಕಟ್ಟಿ
"ದೇಹಿ ನಿಮ್ಮ ಮಕರಂದ" ಎಂದವೋ ತುಂಬಿ ಸಾಲುಗಟ್ಟಿ
ಹಕ್ಕಿಯಂತೆ ಕಿಲಕಿಲಿಸಿ ನಕ್ಕರೋ ಕೈಗೆ ಕೈಯ ತಟ್ಟಿ

ನವಿಲು ಕಂಡ ಕನಸನ್ನು ಕಾಣಿಸುವೆನೆಂದು ಪಣವನಿಟ್ಟು
ನೀರ ಚಿಮ್ಮಿ ಚಲ್ಲೆಂದು ಕುಣಿಯಿತೋ ಇಂದ್ರಚಾಪ ತೊಟ್ಟು
ಹಕ್ಕಿಯಂತೆ ಕಿಲಕಿಲಿಸಿ ನಕ್ಕರೋ ತುಂಬ ಹರುಷಪಟ್ಟು

"ಯಾವ ತಪ್ಪಿಗೋ ಬಿಳಿಯ ಮೋಡ ಪಡೆದಂತೆ ಚಂದ್ರಶಾಪ
ಇಲ್ಲಿ ಕಾಣಿರೇ ಶ್ವೇತ ಮುಗ್ಧವೀ ರಾಜಹಂಸ ರೂಪ"
ಹಕ್ಕಿಯಂತೆ ಕಿಲಕಿಲಿಸಿ ನಕ್ಕು ನುಡಿದಾರ "ಅಯ್ಯೊ ಪಾಪ"

ಸರಸ್ತೀರದಲಿ ಸಾಲು ನಿಂತವೋ ಪಾರಿಜಾತ ಹೂತು
ಐದು ಬಣ್ಣದರಗಿಣಿಯು ಗಳುಹಿತೋ ತೊಂಗಲಲ್ಲಿ ಕೂತು
ಹಕ್ಕಿಯಂತೆ ಕಿಲಕಿಲಿಸಿ ನಕ್ಕು ಕೇಳಿದರು ಅದರ ಮಾತು

ಬನಕೆ ಬಂದನವಧೂತ ಬಾಲಮುನಿ ಶುಕಾಚಾರ್ಯ ಸಾರಿ
ಮಿಸುನಿಬಣ್ಣ ಮೈ ಹಸಿರುರೆಕ್ಕೆಗಳ ಬಾಲ ಬ್ರಹ್ಮಚಾರಿ
ಬ್ರಹ್ಮ ಸಚ್ಚಿದಾನಂದ ಮಗ್ನ ಮನ, ನಗ್ನ ದೇಹಧಾರಿ
ಬಾಲ್ಯದಮಿತ ಸ್ವಚ್ಛಂದ ಯೋಗದಲಿ ಬಂದ ಬನವಿಹಾರಿ
ಎಲ್ಲೊ ಏನೊ ನಡೆದಿದ್ದನವನು ನಡೆದದ್ದೆ ಕಾಲುದಾರಿ

"ಅಲ್ಲಿ ಹೋದನವಧೂತ ಕಾಣಿರೇ, ನಗ್ನ ದೇಹ ತಾಳಿ"
ದೇವಕನ್ನೆಯರವನ ನೋಡಿದರು ನಮೋ ಎಂದು ಹೇಳಿ
ಹಕ್ಕಿಯಂತೆ ಕಿಲಕಿಲಿಸಿ ನಕ್ಕು ನಲಿದಾರ ನೀರಕೇಳಿ

ಬನಕೆ ಬಂದು ಹಂಬಲಿಸಿ ಮಗನ ಬೆಂಬಲಿಸಿ ವ್ಯಾಸಯೋಗಿ
ಜಟಾಜೂಟ ಕರಪದ್ಮ ಕೃಷ್ಣಮೃಗ ಚರ್ಮಧಾರಿಯಾಗಿ
ಕರುಳ ವಿರಹ ಕಾತರಿಸಿ ಕರೆದನೋ 'ಮಗನೆ' ಎಂದು ಕೂಗಿ
ಬಾಲಮುನಿಯು ತನ್ಮಯತೆ ತುಂಬಿರಲು ಬನದ ಹೃದಯವಾಗಿ
ಕರೆಯ ಕೇಳಿ 'ಓ ತಂದೆ' ಎಂದವೋ ಪಾರಿಜಾತ ಬಾಗಿ

ವ್ಯಾಸಯೋಗಿ ನಡೆದಿರಲು ಕೂಗಿ ಕೇಳಿದರು ಲಕ್ಷ್ಯವಿಟ್ಟು
ದೇವಕನ್ನೆಯರೇಳು ಮಂದಿ ಮನದಲ್ಲಿ ಲಜ್ಜೆ ಪಟ್ಟು
ಹಕ್ಕಿಯಂತೆ ಕಿಲಕಿಲಿಸಿ ನಕ್ಕರೋ ಜಲಕ್ರೀಡೆ ಬಿಟ್ಟು

ಹಾಲು ರೆಕ್ಕೆಗಳ ಚಾಚಿ ನೀರನಿಕ್ಕಲದಿ ಬಾಚಿ ಹಾರಿ
ರಾಜಹಂಸ ಬಂದಿಳಿಯುವಂತೆ ಕನ್ನಿಕೆಯರೆಲ್ಲ ಸೇರಿ
ಹಕ್ಕಿಯಂತೆ ಕಿಲಕಿಲಿಸಿ ನಕ್ಕರೋ ಕೊಳದ ಮೆಟ್ಟಲೇರಿ

ದೇವಕನ್ನೆಯರೇಳು ಮಂದಿ ಬಂದಾರ ಕೊಳವ ಬಿಟ್ಟು
ಪಾರಿಜಾತಗಳ ಮರೆಗೆ ನಿಂತರೋ ಮನದಿ ಲಜ್ಜೆಪಟ್ಟು
ಹಕ್ಕಿಯಂತೆ ಕಿಲಕಿಲಿಸಿ ನಕ್ಕರೋ ವೇಷ ಭೂಷ ತೊಟ್ಟು

ತಾವು ಬಂದುದನು ನೋಡಿ ನಾಚಿದರೆ ಜಲಕ್ರೀಡೆ ನೀಗಿ
ವೇಷಭೂಷಗಳ ತೊಟ್ಟು ನಿಂತಿರಲು ದಂಡೆಗೋಡಿಹೋಗಿ
ದೇವಕನ್ನೆಯರೇಳುಮಂದಿ ಬಳಿಸಾರಿ ವ್ಯಾಸಯೋಗಿ
ಜಟಾ ಜೂಟ ಕರಪದ್ಮ ಕೃಷ್ಣಮೃಗ ಚರ್ಮಧಾರಿಯಾಗಿ
ಪಾರಿಜಾತ ವನದಲ್ಲಿ ನುಡಿದರಾಶ್ಚರ್ಯಚಕಿತರಾಗಿ

“ಇದು ವಿಚಿತ್ರವಲ, ಮುದ್ದು ಮಕ್ಕಳೇ, ನಾನು ಬಂದೆನೆಂದು
ಲಜ್ಜೆಪಟ್ಟು ನೀರಾಟ ಬಿಟ್ಟಿರೇ ದಂಡೆಗೋಡಿ ಬಂದು
ನಾಚಲಿಲ್ಲ ಮೈರೆಮಾಚಲಿಲ್ಲ ಶುಕ ನಗ್ನದೇಹಿಯೆಂದು
ವಯಸು ಆದವರು ವಸ್ತ್ರವುಟ್ಟರೂ ನಾನು ಬಂದುದೆಂದು
ನಾಚಿ ನೀರ ಬಿಟ್ಟೋಡಿ ಬಂದಿರೇ ದಂಡೆಯಲ್ಲಿ ನಿಂದು ?”

ದೇವಕನ್ನೆಯರಾಗ ನುಡಿದರೊಕ್ಕೊರಲಿನಲ್ಲಿ ಬಾಗಿ
“ಪವನದಂತೆಯೇ ನಿರ್ಲಿಪ್ತ ಶುಕನು ಬಯಲ ದೇಹಿಯಾಗಿ
ನಿಮ್ಮ ಚಿತ್ತ ತನುರಾಗಲಿಪ್ತ ದ್ರಷ್ಟಾರ ವ್ಯಾಸಯೋಗಿ”
ಹಕ್ಕಿಯಂತೆ ಕಿಲಕಿಲನೆ ನಕ್ಕು ಮರಳಿದರು ಮಾಯವಾಗಿ
ಅವರು ನಕ್ಕನಗೆ ಮುಗಿಲು ತುಂಬಿತೋ ಮೇಘಮಾಲೆಯಾಗಿ.

—ಸು. ರಂ. ಯೆಕ್ಕುಂಡಿ

ವಿಜ್ಞಾನ ಮಾನವ

ನಾನಜೇಯ ನಾನಭೇದ್ಯ ನಾ ಅಮಾನುಷ ಮಾನವ
ನಾ ಅಶಾಂತ ನಾ ಅಭುಕ್ತ ನಾ ತೃಷಾರ್ತ ದಾನವ
ವಡವಾನಲ ಗರ್ಭಜಾತ
ಜಾತವೇದ ನನ್ನ ಗೋತ್ರ
ಅಗ್ನಿಸೂಕ್ತ ನನ್ನ ಮಂತ್ರ
ನಾಮ ಹವ್ಯವಾಹನ
ಅಶ್ವಮೇಧ ರಾಜಸೂಯ ಒಂದೆ ಗುಟುಕಿನಾಪೋಷಣ
ಅಕ್ಷೋಹಿಣಿ ಬಲಿಯ ಕೊಂಡೆ ಹಿಂಗಲಿಲ್ಲ ವಾಸನಾ
ಬಿದ್ದರೇನು ಕುರುಕುಲ ತೀರಲಿಲ್ಲ ನನ್ನ ಛಲ
ಹಿರೋಶಿಮ, ನಾಗಾಸಕಿ ಆದರೇನು ಚಿತ್ರಾಹುತಿ ?
ಕರುಳು ಕೂಡ ನೆನೆಯಲಿಲ್ಲ
ನರಳುತಿರುವೆ ಹುತಾಶನ
ಸ್ವರ್ಗ ಮೃತ್ಯು ಪಾತಾಳ ಸಾಮ್ರಾಜ್ಯ ಸಾಮ್ರಾಟರ
ಮೂರಂಗುಲ ಪಾದಮೆಟ್ಟಿ ಬಲಿಯ ಕೊಂಡ ವಿರಾಟ ನಾ
ಅಂತರಿಕ್ಷ ಗಗನ ಭೇದಿ
ಪಾತಾಳ ಯಂತ್ರಿ ನಾನು
ಅಗ್ನಿಗೋಲ ಮಹತ್ತೇಜ
ನನ್ನ ವಿಸ್ಫುಲಿಂಗ ಭಾನು
ನಕ್ಷತ್ರ ಕೋಟಿಗಣ, ನನ್ನ ಅಡಿಯ ಹುಡಿಯ ಕಣ
ಬ್ರಹ್ಮ—ವಿಷ್ಣು—ಮಹೇಶ್ವರರ ತೇಜವೆನಗೆ ಮಿಣಮಿಣ
ವೈಜ್ಞಾನಿಕ ವೈಶ್ವಾನರ ಗರ್ಭಜಾತ ದಾನವ
ನಾನಜೇಯ ನಾನಭೇಧ್ಯ ನಾ ಅಮಾನುಷ ದಾನವ
ಹುಟ್ಟಿದೊಡನೆ ಕಂಣು ಬಿಟ್ಟು
ಕೊಂಡೆ ವಿಶ್ವದಾಪೋಷಣ
ಋಕ್ ಯಜುಸ್ಸಾಮವೆನಗೆ ಹಾಕಿದವೋ ಶೀರ್ಷಾಸನ
ಆದರೂನು ಘಟಿಸಲಿಲ್ಲ ಯಾರಿಗೇನು ದರ್ಶನ

ವೇದವಾಯ್ತು ನತಶಿರ
ವಜ್ರ ಮುದ್ರಿತಸ್ಯಂದನ
ವೇದ್ಯವಾಗಲಿಲ್ಲ ನನ್ನ
ವಿದ್ಯುಲ್ಲತಾ ಸ್ಪಂದನ
ಅಣೋರಣೀಯಾನ್ ಮಹತೋ ಮಹೀಯಾನ್
ತಟಿತ್‌ಕೋಟಿ ನಿಭಕಾಯ ವಿಶ್ವವ್ಯಾಪಿನ್
ನೀನಚಿಂತ್ಯ, ನೀನಗಮ್ಯ ನೀ ವಾರುಣಿ, ಇಂಧನ
ಭಯವ್ಯಾಕುಲ ಋಷಿಗಡಣದ ಭೀತಜೀವದಾಕ್ರಂದನ
ಯುಗಯುಗಾಂತದಾಚೆಯಿಂದ
ಕೇಳಿಬರುವದೊಂದೆ ಛಂದ
ಕೊರಡು ಕಡೆದು ಕಿಡಿಯ ಸಿಡಿಯೆ ಭ್ರಾಂತಚಿತ್ತ ಮಾನವ
ಆವಾಹನ ಮಂತ್ರ ನುಡಿಯೆ ಅವತರಿಸಿದೆ ನಾ ದಾನವ
ತನ್ನ ತಪನ ಫಲಿಸಿತೆಂದು
ಕುಣಿದ ಕಂಡು ದೀಪ್ತಿ ರಶ್ಮಿ
ಅರಿಯಲಿಲ್ಲ ವಿಶ್ವಮೃತ್ಯು
ಮಹಾರುದ್ರ ಸೋಹಮಸ್ಮಿ
ಭ್ರಮಿತಲೋಕ ಬಗೆಯಿತೆನ್ನ ಮಹತ್ತೇಜ ಸೂರ್ಯನೆಂದು
ಅಗ್ರಪೂಜೆ ಕಟ್ಟಿತೆನಗೆ ದೇವಗಣದ ಆರ್ಯನೆಂದು
ಮತಿವಿಭ್ರಮ ವಿಶ್ವಚಿತ್ತ ಭೂಮವಾಯ್ತು ನನ್ನ ಪೀಠ
ಯುಗಯುಗಾಂತ ಕಾಲದಿಂದ ನಡೆಯಿತೆನ್ನ ಘೋಷಪಾಠ
ನನ್ನ ಪಾದಹತಿಗೆ ಲೋಕ
ಮಿಡಿಸುತಿಹುದು ಮೂಕಶೋಕ
ನನ್ನ ಸೃಷ್ಟಿಲಯಕೆ ನಾನೆ ಬ್ರಹ್ಮ-ರುದ್ರ ಕಾರಣ
ಬಯಸಿದಾಗ ಬರುವದೆನ್ನ ಈಪ್ಸಿತಾರ್ಥ ಮಾರಣ
ಮೃತ್ಯು ನಾನೆ, ಮರ್ತ್ಯನಾನೆ
ವೈಜ್ಞಾನಿಕ ಮಾನವ
ಲೋಕಭಾವದಲ್ಲಿ ನಾನು
ಚಿರಂಜೀವಿ ದಾನವ
ವಿಶ್ವಪ್ರಳಯದಂತ್ಯ ಕ್ಷಣದಿ ಆಗಿ ಬಂಧಮುಕ್ತನು
ತುಡಿವೆನೆದ್ದು ಲೋಕಶಾಂತಿ ಕ್ಷಮದಯಾರಿಕ್ತನು
ಆಪೋಷಣೆ ಕೊಳ್ಳುವಂತೆ ಆಪೋಷಿತನಾಗುವೆ
ಸೃಷ್ಟಿಗಾಗಿ ಮೃತ್ಯುರಾಹು ನನ್ನ ಲಯಕೆ ತಾಗುವೆ
ಇಂದು ದಗ್ಧನಾದರೇನು ?
ನವ್ಯ ಜಗಕೆ ನಾನೆ ಮನು !

— ರಾಮಚಂದ್ರ ಕೊಟ್ಟಲಗಿ

ಮಾನಸಕೆ ಮೊರೆ

ವಿಷವಾಗಿ ಬಾಳೆ
ಕಸಿವಿಸಿಯು ತಾಳೆ
ರಸವಾಗಿ ಬಳಿಗೆ ಬಾರೆ
ರಸವಳಿದ ಮೇಲೆ
ಅಸುವಳಿದ ಹಾಗೆ–ಮಾ
ನಸ ತುಂಬಿ ಸೂಸಿ ಬಾರೆ!

ಗೋಗರೆವೆ ಕರೆವೆ
ಮಾನಸವೆ ಬಾರ
ತಾಮಸವ ಕಳೆಯೆ ಬಾರೆ
ಕಿಲ್ಮಿಷವ ಕಳೆದು
ರಾಜಸವ ತೊಳೆದು
ಸಂತಸದ ಸೆಲೆಯ ತಾರ!

ಇದೊ ಹಂಸ ಹಾರಿ
ಬರುತಿಹವು ಸಾರಿ
ಸುತ್ತೆಲ್ಲಸೊಗವ ತೂರಿ
ಚಳಿಯೊಡ್ಡು ಜಾರಿ
ಹೊಂಬಿಸಿಲ ಬೀರಿ
ರವಿ ಬರುವ ತೇರನೇರಿ

ಹಿಮವಾಗಿ ಮೆರೆದೆ
ಇದುವರೆಗೆ ಬರಿದೆ
ಲೋಕೋಪಕಾರ ಮರೆದೆ
ನಿನ್ನನ್ನೆ ಮರೆದೆ
ಇನ್ನಾದರೆರಕ ಬರದೆ?

ಮತ್ತೊಮ್ಮೆ ಕರಗು
ಜಲರಾಶಿಯಾಗು
ಜಡನಿದ್ರೆಯನ್ನು ನೀಗು
ಥಳಥಳಿಸಿ ಬೆಳಗು
ಕಲಕಲದಿ ಮೊಳಗು
ಅಲೆಯಲೆಯ ಕುಣಿಸಿ ತೊಳಗು

ಮತ್ತೊಮ್ಮೆ ಕಮಲ-
ವನವಲರಿ ಭ್ರಮರ-
ಸಂಗೀತ ಬರಲಿ ಮಧುರ
ಕೈಲಾಸ ಶಿಖರ
ತರುಗುಲ್ಮ ನಿಕರ-
ಗಳಿಗಾಗು ನೀನು ಮುಕುರ

ಇದೊ ಹಿಮವು ಸೀಳಿ
ಬಹುರೂಪ ತಾಳಿ
ನಡೆದಿಹುದು ಶಬ್ದ ಕೇಳಿ
ಅದೊ ಜಲದ ನೀಲಿ
ಬಂದಿಹುದು ತೇಲಿ
ಹೊಸ ಹುಟ್ಟನಿಂದು ಹೋಲಿ

ಇದೊ ಸಲಿಲಲೀಲೆ
ಕಲ್ಲೋಲ ಮಾಲೆ
ಅದೊ ಮತ್ಸ್ಯ ನೃತ್ಯಶಾಲೆ
ಓ ಹಿಮದುಕೂಲೆ
ಹರಿ ಇನ್ನು ಮೇಲೆ
ನೀನಲ್ತೆ ಚಲನ ಶೀಲೆ!

ಮುಗಿದಾಯ್ತು ನಿದ್ದೆ
ಮೈಕೊಡಹಿ ಎದ್ದೆ
ಜಡತೆಯನು ಮತ್ತೆ ಗೆದ್ದೆ
ಹರಿಯೆ ಸಮೃದ್ಧೆ
ಸರ್ವಾಂಗ ಶುದ್ಧೆ
ಕರೆಯುವುದು ಮೂಲ ಶ್ರದ್ಧೆ

ಹಿಮಹಿಮಕೆ ತಾಗಿ
ಮೃದು ಮಥನವಾಗಿ
ಮತ್ತೊಮ್ಮೆ ಉದಕವಾಗಿ
ಹಿಮಶ್ವೇತ ಕರಗಿ
ಜಲ ನೀಲಿಯಾಗಿ
ಕೆರೆ ನೀಲಪದಕವಾಗಿ

ಬಾ, ಪರುಷ ಬಾರ
ಓ ಹರುಷ ಬಾರ
ಪ್ರತಿ ನಿಮಿಷ ಜನಿಸಿ ಬಾರ!
ರಸವರ್ಷ, ಜೀವ-
ದುತ್ಕರ್ಷ ಬಾರ
ಸಂಘರ್ಷವಳಿಸು ಬಾರ!

ಹರಿ ಹಿಮದ ಸೆರೆಯು
ತೆರೆ ನಿನ್ನ ಸಿರಿಯ
ತ್ವರೆ ಕೇಳು ನನ್ನ ಮೊರೆಯ
ನೀ ಪುಣ್ಯ ತಿರೆಯು
ಲಾವಣ್ಯ ಧರೆಯ
ಮತ್ತೊಮ್ಮೆ ತಾಯಿ ಹರಿಯು!

—ಸಿದ್ದಯ್ಯ ಪುರಾಣಿಕ

ಕೈಲಾಸ-ಮಾನಸ ಸರೋವರಕ್ಕೆ ಹತ್ತಿರದಲ್ಲಿಯೇ ರಾಕ್ಷಸ-ತಾಳ ಎಂಬ ಸರಸಿಯೊಂದಿದೆ. ಒಂದು ಸಣ್ಣ ಕಾಲುವೆ ಮಾನಸಸರೋವರದಿಂದ ಹೊರಟು ರಾಕ್ಷಸತಾಳ ಸರಸಿಯನ್ನು ಸೇರುತ್ತದೆ. ಮೊದಲು ರಾಕ್ಷಸತಾಳದ ನೀರನ್ನು ಯಾರೂ ಕುಡಿಯುತ್ತಿರಲಿಲ್ಲವೆಂದೂ, ಮಾನಸದಿಂದ ರಾಕ್ಷಸಕ್ಕೆ ಸೇರಿದ ಮೇಲೆ ಅದೂ ಪವಿತ್ರವೆನಿಸಿ ಕುಡಿಯತೊಡಗಿದರೆಂದೂ ದಂತಕಥೆಯಿದೆ. ಇದು ರಾಕ್ಷಸವು ಮಾನಸಕ್ಕೆ ಮೊರೆಯಿಡುತ್ತಿರುವ ಹಾಡು.

ಗಾಳಿ ಮರ

೧

ಘರ‍್ರೆಂದು ಡುರುಕಿಯ ಹೊಡೆದು ಕಾಲು ಕೆದರಿ,
ಟಣ್ಣನೇ ಪುಟಿಸೆಗೆದು ಮೈಮೇಲೆ ಹಾರಿ,
ಸಿಕ್ಕುಸಿಕ್ಕುದನೆಲ್ಲ ಸಿಗಿದು ಹಾಕುವೆನೆಂದು
ಭರಭರಾಟಿಲಿ ಹೊರಟ ತುಂಟ ಗೂಳಿ,
ಈ ಕಡಲ ಗಾಳಿ!

ಅದ ಕಂಡು ಬಲು ಬೆದರಿ
ಮೈಯು ಮುದುರಿ,
ಬಿದ್ದುಕೊಂಡಿರಲಿತ್ತು ಬಡಪಾಯಿ ಭೂಮಿ
'ತನಗಿನ್ನು ಗತಿಯಾರು?' ಎಂದು ಹೌಹಾರಿ!
ಮೈದೋರಿದುದು ಮಧ್ಯೆ ಈ ವೃಕ್ಷವೀರ,
ಅಭಯಂಕರ!

೨

ನಗುವಿರದ ಬಿಗುವಿರದ
ಅಳುವಿರದ ಅಳುಕಿರದ
ಹೂವು ಹಣ್ಣುಗಳಿರದ
ಈ ಅಸಾಮಾನ್ಯ ಮರ
ಸ್ಥಿತಪ್ರಜ್ಞನ ತೆರ!
ನೆಲದಿ ಕಾಲೂರಿದರು
ಮುಗಿಲ ಮುದ್ದಿಡುವಂಥ ನಿಲವು-ನೇರ!
ರೋಮ-ರೋಮಾಂಚನದಿ ನಿಶಾನಿಯ ಹಸರ!
ಪುರುಷಾಮೃಗದ ಪಾಲಿನ ಕೋಟ್ಯಂತರ ಲಿಂಗದ ಏಸರ!

೩

ಬೀಸುಗಾಳಿಯ ಹೊಳೆಗೆ ಒಡ್ಡ ಕಟ್ಟಲು ಬಯಸಿ
ಸಹಸ್ರಬಾಹುವದೆನಿಸಿ ತೋಳ ಬೀಸಿ,
ಧೃತಿಗೆಡದೆ ನಿಂತಿಹುದು ಏಕಾಂಗವೀರ!
ಅದಕೆಂದೆ ಜನ ಕರೆದಿತೇನೋ ಇದನು
ಗಾಳಿ-ಮರ!
ಅಥವ ಬಗೆದಿತೊ ತಾನು
ಬಡಿದಿದೆಯೆಂದು ಗಾಳಿ-ಗರ?!

೪

ಅಂತು ಏನೇ ಇರಲಿ;
ಇದು ಖಚಿತ, ನೆನಪಿರಲಿ;
ಹತ್ತರೊಳಗೊಂದಾಣಿಮುತ್ತು ಈ ಕಡಲತೀರದ ಮರ!
ಮರವಲ್ಲ; ಅ-ಮರ!
ಅಮರ!

—ಎಂ. ಅಕಬರ ಅಲಿ

ಇಲ್ಲಿ—ಅಲ್ಲಿ

ಸಾಗರದ ತೆರೆಯಾಗಿ
ಹರಿಯುತಿದೆ ಸಿರಿ ಇಲ್ಲಿ ;
ಮೂಜಗದ ಬಡತನವೆ
ಬೀಡು ಬಿಟ್ಟಿಹುದಲ್ಲಿ. ೧

ಚೇತನಕೆ ಚಿಗುರೊಡೆದು
ಹೂತು ಕಾತಿಹುದಿಲ್ಲಿ ;
ಭೂತ ಬಡಿದಿಹ ಪ್ರೇತ
ವಾಗಿಹೆವು ನಾವಲ್ಲಿ ೨

ಸಿಡಿಲುಂ ಹೊಡೆದರು ಸೆಡೆದು
ನಿಲ್ಲುವುದು ಜನವಿಲ್ಲಿ ;
ನಡೆವ ಹೆಣ ನುಡಿವ ಹೆಣ-
ವಾಗಿಹೆವು ನಾವಲ್ಲಿ. ೩

ನಿಟ್ಟೊಂದು ಮೆಟ್ಟೊಂದು
ಕಟ್ಟೊಂದು ಈ ನಾಡು ;
ಹುಟ್ಟು ಇಲ್ಲದ ತೆಪ್ಪ,
ತುಂಡುತುಂಡಾ ನಾಡು. ೪

ಸದ್ದು ಇಲ್ಲದೆ ದುಡಿಮೆ
ದೊಡ್ಡದಾಗುವುದಿಲ್ಲಿ ;
ಹದ್ದುಕಾಗೆಗಳಂತೆ
ಹರಿದು ತಿನ್ನುವೆವಲ್ಲಿ ೫

ಅರ್ಥಕಾದರು ನಾಡಿ-
ಸರ್ಥವೇ ಮೇಲಿಲ್ಲಿ ;
ಸ್ವಾರ್ಥವೇ ಹುಯ್ಯೊಂದು
ಹೂಲಿಯಾಡುವುದಲ್ಲಿ ೬

ರೂಢಿಯಿಲ್ಲದಿರೇನು ?
ಕಾಡು ನಂದನವಾಯ್ತು
ಮೂಢನಂಬಿಕೆಯಲ್ಲಿ
ನಾಡು ಹರಿಹಂಚಾಯ್ತು ೭

ಹೊಸ ಮೌಲ್ಯ ಹೊಸ ತುಲ್ಯ
ರಸವೆ ಜೀವನವಾಯ್ತು ;
ರಸಿಕತೆಯ ಸುಳಿಯಡಗಿ
ಕಸಕಿಂತ ಕಡೆಯಾಯ್ತು. ೮

ಒಳಗೊಳಗೆ ನೆನೆನೆನೆದು
ನಮ್ಮ ಬಾಳನೆ ಹಳಿದು
ಕಳವಳಿಸಿ ಕಣ್ಣೀರು
ಕತಕತನೆ ಕುದಿಯುವುದು ೯

ನಿದ್ದಿಗಿಲ್ಲವೆ ಬುದ್ಧಿ ?
ಎದ್ದು ಮೆರೆಯುವೆವೆಂದು
ಸಿದ್ಧಿವಾಕ್ಯವನೊಮ್ಮೆ
ನುಡಿಯೋಣ ಸಾವಿಂದು ೧೦

—ಆರ್. ಸಿ. ಹಿರೇಮಠ

ಹಿಗ್ಗುತಿದೆ ವಿಶ್ವ

ತಿಂಗಳನ ಬೆಳಗಿನಲಿ
ಮಂಗಳದ ಗಳಿಗೆಯಲಿ
ಕುಳಿತೊಂದು ಚೆಲ್ವರಾತ್ರಿ
ಉರುಳುವದು ಉಲ್ಲಾಸ ಉನ್ಮಾದದೆಡೆಗೆ.

ಆವ ಅಂತರ ಮೇಲೆ
ಯಾವ ತಂತರದಿ ತಿರು-
ತಿರುಗಿ ನಿಂತಿರುವಿ ಓ !
ರಾತ್ರಿಭಾನು ನಿನ್ನ ಸೌಭಾಗ್ಯಸೊಬಗು ಏನು ?

ಎನ್ನೆದೆಯ ಕಿಚ್ಚುಂಡು
ಭಾವದಲಿ ಮೂಡುತಿಹ
ಮೇಘಮಂಡಲಕೆ ಶೀತಳವ
ಸಿಂಪಡಿಸಿ ; ಸುರಿಸುವಿ ನಿನ್ನ ಅಮರಧಾರೆ-

ನೋಡು ನೋಡುತ ನಿನ್ನ,
ಉರುಳುವದು ಇರುಳೆಲ್ಲ
ವಿಲಿನಗೊಳ್ವುದು ಮನವು
ಎಂದಿಗೂ ಹಿಗ್ಗುತಿಹ ಈ ವಿಶ್ವದಲ್ಲಿ—

—ಜಯದೇವಿತಾಯಿ ಲಿಗಾಡೆ

ಚಿಂತನ

೧

ಓ ಸನ್ಮಯ !
ನಿನ್ನಯ ದಯ
ಹೊನ್ನಿನ ಹೊಳಹಿನಲಿ ;
ಅಂಗಾಂಗದಿ
ಕಂಗೊಳಿಸಿತು,
ಮಂಗಳ ಲೇಪದಲಿ.
ಏಕಾಂತಕು
ಲೋಕಾಂತಕು
ನಾಕಾಂತಕು ತುಂಬಿ,
ಚೆಲು ಚೆಲ್ಲಿತು,
ಸಲವೇರಿತು,
ಗೆಲವಾಯಿತು ನಂಬಿ.

೨

ನಿಶೆಯಲಿ ಶಶಿ
ಶಿಲೆಯಲಿ ಪೊನ್
ಪಂಕದಿ ಪಂಕಜವು ;
ತೊಗಲೆಲುಬಿನ
ಮಾಂಸದ ಮೈ
ಅಂತರ ಚಿಂತನವು.
ಕತ್ತಲೆಯಲಿ
ಮಿಂಚಿದುಡೆನೆ
ಬತ್ತಿದ ಕೊಳ ತುಳುಕೆ ;
ಕರುಣಾಮಯ
ಕಿರಣದೊಳೀ
ಹರಣಕೆ ಹೆಗ್ಗಳಿಕೆ.

೩

ಮೂರ್ಖತೆಯಲಿ
ಮಾರ್ದವವನು
ವಿದ್ವೇಷದಿ ದಯೆಯಂ ;
ವಿಷಕುಂಭದಿ
ರಸ ತುಂಬಿಸಿ
ಅಮರತ್ವದ ನೆಲೆಯಂ ;
ಸಲ್ಲಲಿತದ
ಹುಲ್ಲ ಚಿಗುರ್
ಕಲ್ ಕೆಸರೊಳಗುದಿಸೆ
ಎಲ್ಲೆಲ್ಲಿಯು
ಸ್ಪರ್ಶಮಣಿಯು
ಬಲ್ಲವ ನೀ ಹರಸೆ !

೪

ಮಹಿಳಾಮಣಿ
ಮಾಂಗಲ್ಯದಿ
ಮಕ್ಕಳ ಮುದ್ದಿನಲಿ ;
ಪುರುಷೋತ್ತಮ
ಪೌರುಷದಲಿ
ಸಂತಸ ಸುದ್ದಿಯಲಿ ;
ಸತ್ಯದಿ ಸೌಂ-
ದರ್ಯದಿ ಶುಚಿ
ಚಿತ್ತದ ಶೋಭೆಯಲಿ ;
ನಿತ್ಯವು ಮಾ-
ಧುರ್ಯದಿ ರುಚಿ
ವಸ್ತುವೆ ! ನೀನಲ್ಲಿ

೫

ಇದು ಸನ್ನುತ
ಮಹಿಮೋನ್ನತ
ಪದವೆನ್ನುತ ಮಣಿವೆ ;
ಬದುಕಿನ ಬೆಲೆ
ನಿಲುವೆಯ ನೆಲೆ
ಕರುಣೆಯ ಕಲೆ ಕುಣಿವೆ !

ಇಂದಾದರು
ಮುಂದಾದರು
ಎಂದಾದರು ಸಾಕು;
ಒಂದಾಗುತ
ಬಂಧನದೀ
ಕ್ರಂದನ ಬಿಡಬೇಕು.

೬

ಓ ಚಿನ್ಮಯ
ನಿನ್ನಯ ದಯ
ಮೃಣ್ಮಯ ದೇಹದಲಿ,
ತುಂಬಿಸಿ, ಪ್ರತಿ
ಬಿಂಬಿಸಿದೆಯ?
ನಂಬಿದ ನೇಹದಲಿ.
ಎತ್ತಲು ಮನೆ
ಕತ್ತಲು, ಮನ
ಮುತ್ತಲು ಮೋಹದಲಿ;
ರನ್ನದ ಸೊಡ-
ರೆನ್ನೊಡಲಲಿ
ಬೆಳಗಿತು ಗೇಹದಲಿ.

೭

ಕೊರಡಾದರು
ಕೊನರಿಡದೆ?
ಮರುಧರೆ ಬೆಳೆಕೊಡದೆ?
ಪುಣ್ಯಾಮೃತ
ರಸಧಾರೆಗೆ
ಪಾಷಾಣವು ಪೂಬಿಡದೆ?
ಹೊಲೆ ಬಸಿರಲಿ
ಕೊಳೆ ಕೆಸರಲಿ
ಬಿದ್ದಿದ್ದಿಹ ಮೈಗೆ;
ನಿನ್ನೊಲವಿನ
ಚೆಲುಚೆಲ್ಲಿರೆ
ಬಗೆ ಹಿಗ್ಗಿತು-ಹೀಗೆ!

೮

ಮೋಡಗಳೆಡೆ
ಮದ್ದಳೆ ಬಡೆ-
ದಾಟದ ಬಿಗುವೇರೆ;
ಮಿಗವಕ್ಕಿಗು
ಸೊಗವುಕ್ಕಿತು
ಹಿಮ್ಮೇಳಕೆ ಸೇರೆ;
ಕಡಲುಕ್ಕಿತು ಬೇರೆ;
ಮಂಗಳ ಧರೆ-
ಯಂಗಣದಲಿ
ರಿಂಗಣ ಗತಿದೋರೆ.

೯

ಬಗೆ ನವಿಲಿದು
ಕುಣಿ ಕುಣಿಯಿತು,
ಕಣ್ಗರಿಗಳ ಬಿಚ್ಚಿ;
ಶತಲೋಚನ-
ದವಲೋಕನ
ಬ್ರಹ್ಮಾಂಡವ ಮುಚ್ಚಿ;
ಆದ್ಯಂತದ
ವೇದಾಂತದ
ಬೋಧಾಂತಕೆ ಮೆಚ್ಚಿ;
ಆತ್ಮಗೆ ಪರ-
ಮಾತ್ಮನ ಸಾ-
ಯುಜ್ಯದ ಸುಖ ಹಚ್ಚಿ!

೧೦

ಆನಂದ ಮಯ!
ನಿನ್ನಯ ದಯ
ಸಂಕಟ ಸುಖಗಳಲಿ;
ಹಗಲಿರುಳಲಿ
ಮುನ್ ಚೆನ್ನಲಿ
ಮಮ ಜೀವಕೆ ಸಲಲಿ!
ಚಿಂತಾವಿಷ

ಸಂತಾನದ
ಕಾಂತಾರದಿ ಸುಳಿಯೆ ;
ಹಾಲ್ಗಡಲಿನ
ನೊರೆಯುಕ್ಕಿತು,
ಕರುಣೆಯ ಹನಿ ಸುರಿಯೆ.

೧೧

ಅಗ್ಗದ ಸೊಗ
ವೆಗ್ಗಳಿಸಿತು
ಹಿಗ್ಗಿರೆ ನಿನ್ನೊಲ್ಮೆ :
ಸಗ್ಗದೊಡೆಯ !
ತಗ್ಗಿದೆ ನಾ
ಒಗ್ಗಿರೆ ನಿಜನಲ್ಮೆ !
ತನುಮನಧನ
ಕೃಪಾಕಿರಣ
ಕರ್ತ ನೀನೆ ಕಾರಣ ;
ಭವ ಬಂಧನ-
ದ ವಿಮೋಚನ
ಇದೆ ಚೇತನ ಚಿಂತನ !

೧೨

ಕೃತಿಯಿದು ಕಸ
ಮತಿ ಮಧುರಸ
ಧ್ಯಾನ ರಸಾಯನವು ;
ತನು ನಶ್ವರ
ಮನಸುಸ್ಥಿರ
ಚಿಂತನ ಶಾಶ್ವತವು.
ತವ ನಾಮದ
ಚಿರಧಾಮದ
ಪರಿಣಾಮದಿ ನಿಲಲಿ ;
ಭಾವೈಕ್ಯದಿ
ಜೀವೈಕ್ಯದಿ
ಮಂಗಳ ಮಸಗಿರಲಿ.

—ಕಯ್ಯಾರ ಕಿಞ್ಞಣ್ಣ ರೈ

ವೈಶಾಖ ಶುದ್ಧ ಪೂರ್ಣಿಮೆ

೧

ಕನಸೊಡೆಯಲೆದ್ದೆ ಮೇಲೆದ್ದೆ, ಜಗ್ಗನೆ ಎದ್ದೆ
ಯಾರೊ ನಕ್ಕರು: ಬುದ್ಧ, ಬುದ್ಧ—
ಜಗವೆಲ್ಲ ಮಲಗಿರಲು ಇವನೊಬ್ಬನೆದ್ದ!
ಉಕ್ಕುಕ್ಕಿ ಬಂದಳು ಹತ್ತಿಕ್ಕಲಾರದೆಯೆ ಬಿಕ್ಕಿ ಅತ್ತಳು ಹೆಣ್ಣು.
ಅದ ಕಂಡು ಮನನೊಂದು ಮಮತೆ ಮಾತಿನ ಮೊಲ್ಲೆ—ಮಳೆಗರೆದ
ವೈಶಾಖ ಶುದ್ಧ ಪೂರ್ಣಿಮೆ ಚಂದ್ರ.
ತುಳುಕು—ಕಂಬನಿಗಣ್ಣು ರೆಪ್ಪೆ ಬಡಿಯಿತು ಲಕ್ಷ ಲಕ್ಷೋಪ ನಕ್ಷತ್ರಪುಂಜ!
ಕರುಳ ತಡವಿತು ಬೆರಳು.
ಮುದವಿರದ ಎದೆಗೆ ನುಡಿಸೊದೆಯು ನೆಮ್ಮದಿ ಕರೆಯಲೆಳಸಿತ್ತು; ಹೆಣ್‌ಗಾಳಿ;
ಮಿಡಿದಿತ್ತು ತಾಯ್ಗರುಳು:
ಅಳಬೇಡ, ಮಗಳೆ, ಕಳೆಯದೇ ಕಾರಿರುಳು?
ಮತ್ತೆ ಮೂಡಲ ಬಾನ ಬಯಲಲ್ಲಿ ಮಿನುಗದೇ ಮಿಸುನಿಸರಳು?
ಅಳಬೇಡ, ನನ್ನವ್ವ, ಅಳಬೇಡ, ತಾಯಿ!

೨

ಹೃದಯಾಗ್ನಿ ಕುಂಡದೊಳು ಹೊತ್ತಿ ಉರಿದಿದೆ ಕೆಂಡ.
ತಂಪು ಕಾಣದ ತಾಪ ಒಳಗೆ; ಸಂತಾಪ ಕರೆಯುವ ಮಾತು ದಂಡ, ಷಂಡ!
ಮಮತೆ—ಮಳೆಗರೆವ ಚಂದಿರ, ಕಂಬನಿಯ ಸುರಿವ ನಕ್ಷತ್ರ,
ಸೊದೆಯೆರೆವ ತಂಗಾಳಿ—ನನಗೇಕೆ ಹೇಳು?
ಮನೆಯೊಳಗೆ ಅಳುವ ಮಗು—ನೆರೆಯ ಮನೆಯೊಳೆ ಹಾಲು?
ಮರುಳು ಮಾಡುವ ಮಾತನಾಡುವುದು ಬೇಡ, ಎದೆಯುಸಿರಿವುದು
ಬೇಡ, ಗಾಯಕ್ಕೆ ಬರೆಯನೆಳೆವುದು ಬೇಡ!
ನೀನೆ ನೋಡು.
ದಿವ್ಯಂ ದದಾಮಿ ತೇ ಚಕ್ಷುಃ ಪಶ್ಯಮೇ ಯೋಗಮೈಶ್ವರಂ—
ಹೆಪ್ಪುಗಟ್ಟಿದ ಕಪ್ಪು ಹೆಬ್ಬಂಡೆ ಮೋಡಗಳ ಕರಿ ನೆರಳ ಇರುಳಡಿಗೆ ಕಪ್ಪುಕಾಡು.

ಬೆಳಕು ಜಿನುಗದ ಸಾಲು ಮರದ ಛಾವಣಿ ಕೆಳಗೆ ಸತತ ನಡೆದಿದೆ ನೋಡು
ಕ್ರೂರ ರಾಕ್ಷಸ ಕುಲದ ರುದ್ರ ನೃತ್ಯ!
ಹರಿವ ನೆತ್ತರು ಕೆಂಪು.
ಅರೆಬೆಂದ ನರಮಾಂಸ ಎಸೆವ ಕುಮುಟೂ ಕೆಂಪು!
ಗಾಳಿ ಸಿಳ್ಳಿನ ಜೊತೆಗೆ ಸಿಡಿಲ ಗರ್ಜನೆ ಬಡಿತ,
ಮಿಂಚ ಕುಣಿತ!
ಕಗ್ಗವಿಯ ಬಿಡುಬಾಯ್ಗೆ ಮೈ ಮುದುರಿ ಕುಳಿತಿರುವ ಭೀತ ಮೃಗ
ಪಕ್ಷಿಗಳ ಮಿಂಚ ಗೊಂಚಲ ಕಣ್ಣು ಹೊಳೆ ಹೊಳೆವ ಈ ದೀಪಮಾಲೆ!
ಅದೊ, ನೋಡು :
ಕಾಲದೆರಡೂ ಅಂಚುಗಳ ಕೂಡಿಸುವ ಬೀದಿಯುದ್ದ ದಿಬ್ಬಣಹಾಸು.
ನಾಳೆ ಸಾಯುವ ಮಂದಿ ಈ ಹೊತ್ತು ಸತ್ತವರ ಹೊತ್ತು ನಡೆದಿಹರಿಲ್ಲಿ
ತಲೆನರೆತ ಮುದಿ ಜನದ ಮಗ್ಗುಲಿಗೆ ತೆವಳುತಿಹರದೆ ಸರೆತ ಮಂದಿ
ಮೈ ಹುಣ್ಣು ಹಲವರಿಗೆ, ಎದೆ ಹುಣ್ಣು ಕೆಲವರಿಗೆ
ಓ, ಓ, ಓ ತಾಯೆ ನಾ ನೋಡಲಾರೆ! ನಾ ನೋಡಲಾರೆ!

೩

ಎದೆಗಡಲ ಪಾತಾಳದಳೆಯಲಾಗದ ಅಳಲ
ನುಡಿಯಲಾರದೆ ನೆಲವು ಸ್ತಬ್ಧವಾಗಿ
ಮಲಗಿರಲು ಎದೆಗುದಿಯ ನುಡಿವ ನಾಲಗೆಯಾಗಿ
ಗಾಳಿ ತೆವಳಿತು ಬಳಿಗೆ ನಿಶ್ಶಬ್ದವಾಗಿ

ವಸುಂಧರೆ

ನಿನ್ನ ತ್ಯಾಗವು ವ್ಯರ್ಥವೆನಲೇನು?
ಜೀವಜ್ಯೋತಿಯೆ ಬಂತು ಇರುಳ ದೂಡಲು ಅಂದು
ಎಂದೆ ಹಿಗ್ಗಿದೆ ನಾನು, ಎಂದೆ ಬೀಗಿದೆ ನಾನು!
ಏನಾಯ್ತು ಮಗುವೆ?
ಕಾಡ ಕೋಗಿಲೆ ಹಾಡೆ ನಿನ್ನೆಲ್ಲ ಸದ್ಬೋಧೆ?
ಇಷ್ಟು ಅವತಾರಗಳನಂತರವು ಇಂತಿರುವ
ಮನೆಯ ಮಂದಿಗೆ ಮೋಕ್ಷವಿದೆಯೇ, ಕಂದ?
ದೇವ ತೋರುವ ಪ್ರೀತಿ, ಪ್ರೀತಿ ತೋರುವ ರೀತಿ
ಅವನಿಗೇ ಅಂದ ಆನಂದವಣ್ಣ!
ಅಣುವಾದ ನೀನಂದು ಬೆಳೆಬೆಳೆದು ವಿಭುವಾದೆ
ಪ್ರಭುವಣುವ ಮಾಟದಲಿ ಪೊರೆಯು ಬಂದಿಹ ಚೋದ್ಯ
ಚಂದ, ಕಂದ!

ಹಾಡ ಬೆನ್ನಿಗೆ ಬಂತು ಉನ್ಮತ್ತ ನಗುವೊಂದು,
ಕಿಲಕಿಲನೆ ಕುಣಿದು ಕಿರುದೊರೆಯಾಯ್ತು, ಬೆಳೆಬೆಳೆದು
ನದಿಯಾಯ್ತು ಅಲೆಮಲೆಯ ಕಡಲಾಯ್ತು, ಪ್ರಲಯ
ಜಲವಾಯ್ತು ಕಡೆಗೆ . . .
ಓ, ಓ, ಓ, ನಾ ಕೇಳಲಾರೆ . . . ನಾ ತಾಳಲಾರೆ!

ಳ

ಸರಸವೀಣಾಧ್ವನಿಯು ಮೃದು ಮಧುರ ಇಂಚರಕೆ
ದನಿ ಬೆರಸಿ ಹಾಡಿದನು ಮಂದರದಿ ಇಂದು.
ತೊರೆ ತೊರೆಗೆ ಬೆರವಂತೆ ಸ್ವರ ಸ್ವರಕೆ ಸರಿದಿರಲು
ಹರಿದು ಬಂತೆನ್ನೆದೆಗೆ ಸುರಗಾನವೊಂದು.

ಚಂದ್ರ

ಇಂತಹದೆ ಒಂದಿರುಳು ನಾ ಸುರಿದೆ ಬಳಿಯುರಳು.
ಕನಸಿರದ ನಿದ್ರೆಯೊಳು ಜಗವೆ ಮೈಮರೆತಿರಲು
ಹೊರಟ ಬೆಳಕನೆ ತರಲು ಬುದ್ಧನಾಗಿಯೆ ಬರಲು ಸಿದ್ಧಾರ್ಥ ಮರೆತೆಯಾ?
ಹನಿಯೊಂದು ಕಡಲಾಗಿ ನಿಂತ ಮಂಗಳರಾತ್ರಿ—
ಸೌಲೋಕ್ಯ ಸಾಧಿಸುವ ಧರ್ಮಪಥ ಬೋಧಿಸಿದ
ಪುಣ್ಯಾತ್ಮನುದಯಿಸಿದ ಅಂದು, ಧಾತ್ರಿ!
ಕತ್ತಲೊಳು ತೊಳಲುವಗೆ ಬಲೆಯೊಳಗೆ ಬಳಲುವಗೆ
ದಾರಿ ತೋರಿದ ಪಂಜುಗಾರ ಬುದ್ಧನ ಹಡೆದ ಓ ವಸುಂಧರೆ, ಧನ್ಯೆ
ಕಳವಳವ, ಕಾವಳವ ಕಳೆದೆಸೆಯೆ ಮಾನ್ಯೆ!
ನೆಲವು ಕನವರಿಸಿತ್ತು:
ಬುದ್ಧ, ಬುದ್ಧ!
ಜಗವೆಲ್ಲ ಮಲಗಿರಲು ಇವನೊಬ್ಬನೆದ್ದ!

—ರಾಮಚಂದ್ರ ಶರ್ಮ

ಅಗ್ನಿಗಾಥ

ಓಂ ಅಗ್ನಿ ಮೀಳೆ!
ನಡೆದಿದೆ ಒಂದೇ ಮಂತ್ರ ನಿರಂತರ
ನಡುಗಿಸಿ ವಿಶ್ವದ ವಿರಾಟ ಅಂತರ

ಓಂ ಅಗ್ನಿ ಮೀಳೆ
ಇದಕ್ಕೆ ಎಲ್ಲಿಯು ವೇಳೆ ಅವೇಳೆ
ಸದಾಸರ್ವದಾ ಅಗ್ನಿಯ ಈಳೆ
ಕೋಟಿ ಕಂಠದಲಿ ಕೂಗಿದ ಕಹಳೆ
ನಿನ್ನ ಪೂಜೆಯಲಿ ಲೀನವಾಯಿತಿಳೆ

ಓಂ ಅಗ್ನಿ ಮೀಳೆ
ಸರ್ವದೇವತಾ ಜನ ಸಂಪೂಜಿತ
ನೀನೇ ಲೋಕದ ಆದಿ ದೈವತ
ಪ್ರಚಂಡ ತೇಜಃ ಪುಂಜ ಪ್ರಕಾಶಿತ
ಸಮಸ್ತ ವಿಶ್ವಕೆ ನೀನೆ ಪ್ರಾಣಪಿತ

ಓಂ ಅಗ್ನಿ ಮೀಳೆ
ಬ್ರಹ್ಮಾಂಡದ ಆ ಮಹಾಕುಂಡದಲಿ
ಉರಿದಳ ಸಾವಿರ ಸ್ವರ್ಣ ಕಮಲದಲಿ
ಧಿಮಿ ಧಿಮಿ ಉರಿಯುವ ಪ್ರಖರ ಪ್ರಭೆಯಲಿ
ಗಭೀರ ನಿಶ್ಚಲದಾತ್ಮ ಶಾಂತಿಯಲಿ
ರಾರಾಜಿಸುತಿಹೆ ನೀನಲ್ಲಿ.

ಪಾದ ಪೀಠವದು ಸೂರ್ಯನಮಂಡಲ
ರತ್ನ ಕಿರೀಟವು ತಾರಾಮಂಡಲ
ಧಿಯೋ ದೀಧಿತಿಯು ಕರ್ಣಕುಂಡಲ
ಅಸಮ ಪುಣ್ಯಮಯ ಮೂರ್ತಿ ಮಂಗಲ
ನೀನೇ ಅಗ್ನಿಯಲ!

ಲೋಕವ ಕಾಯುವೆ ನೀ ಶಿವಶಂಕರ
ವಿಕಸಿಸಿ ಸುಖಯಿಸಿ ಜೀವ ನಿರಂತರ
ಮರಣದ ಮೂರುತಿ ರುದ್ರ ಭಯಂಕರ
ಅಳಿಸುವೆ ಬೆಳೆಸುವೆ ನೀನು ಮಹೇಶ್ವರ
ನೀನೇ ಕರುಣಾಕರ !

ಚಿಕ್ಕೆಯ ಕಿಡಿಗಳ ಸಿಡಿಸಿದ ಭಾನು
ನೀನಿಹೆ ಪ್ರಾಣದ ಪ್ರಚಂಡ ಸಾನು
ನಿನ್ನಯ ಅಡಿಯಲಿ ಹೊಮ್ಮಿತು ತಾನು
ಅನಂತ ಜೀವನ ಜಾನ್ಹವಿಯು !

ಓಂ ಅಗ್ನಿ ಮೀಳೆ
ಬಾನ ಬಯಲಿನಲಿ ಬಯಲ ಬಸಿರಿನಲಿ
ಮಲೆಯ ಮುಡಿಯಲೀ ಕಡಲಿನುಡಿಯಲೀ
ಎಲ್ಲ ಇರವಿನಲಿ ಅದರ ಬಯಕೆಯಲಿ
ಕೊನರಿತು ಕೆದಂತು ಪ್ರಾಣ ಪಾವಕಾ
ಜೀವನವೆಲ್ಲ ಊರ್ಧ್ವಶಿಖಿ !

ಬುದ್ಧಿಯೊಳುದಿಸಿತು ತೇಜ ಭಾಸ್ಕರ
ಹೃದಯದಿ ಉಕ್ಕಿತು ಭಾವ ಸಾಗರ
ಧಮನಿಧಮನಿಯಲಿ ಉಕ್ಕಿತು ನೆತ್ತರ
ಕಾಯ ಕಾಯವೂ ಕಾರ್ಯ ಕಾತರ
ಪ್ರಗಮನವಾಯಿತು ಮನುಜಕುಲ :

ವಸಂತ ವೈಭವ ಬನ ಬನ ತುಂಬಿತು
ಕಾಮೋದ್ದೀಪಿತ ಮನಕುಸುಮಿಸಿತು
ಗಂಡಿನ ಜೊತೆಯಲಿ ಹೆಣ್ಣು ಕುಣಿಯಿತು
ಶೃಂಗಾರಕೆ ವಾತ್ಸಲ್ಯ ಕೊನರಿತು
ನಿನ್ನಯ ಸ್ಫೂರ್ತಿಯಲಿ !

ಹಿಂಗದ ಹಸಿವೆಯ ಹೊಟ್ಟೆಯೊಳಿರಿಸಿ
ಮುಗಿಯದ ಬೆಳೆಯನು ಬುವಿಯಲಿ ಬೆಳೆಸಿ
ತುಷ್ಟಿಪುಷ್ಟಿಯಿರಲೆಂದು ದಿವಾನಿಶಿ
ಹರಿಸಿದೆಯೆಂದೇ ಇಹುದವಿನಾಶಿ
ಮರ್ತ್ಯರ ಈ ಕುಲವು !

ಅನಂತವಾಯಿತು ಪ್ರಾಣ ಸನಾತನ
ಸಂಸಾರದ ಈ ರೂಪ ವಿನೂತನ
ಸಂತತವಾಯಿತು ಕಾಲನರ್ತನ
ನಿನ್ನಯ ಕರುಣೆಗೆ ಪುಲಕಿತ ತ್ರಿಭುವನ
ಬೆಳೆಯಿತು ಮನುಜಮನ !

ಓಂ ಅಗ್ನಿ ಮೀಳೆ !   ಓಂ ಅಗ್ನಿ ಮೀಳೆ !
ಬೇಸರವಾಯಿತೆ ನಿನಗೀ ಮಾಟ
ಮಾನವ ಕುಲವಾಯಿತೆ ಬರಿಕಾಟ
ಅಂತೇ ಬಂತೇ ಇಂದು ಸಂಕಟ
ಕುಸಿಯಲು ತೊಡಗಿತು ಜೀವವಟ !
ರುದ್ರ ಭಯಂಕರನೆ !

ಮಾನಸ ಮಂದಿರ ಮಧ್ಯಸ್ಥಾಪಿತ
ದ್ವೇಷದ ದೈವತವಿಂದು ಪೂಜಿತ
ಭೀತಿಯ ಧೂಪವು ಭುವನಪೂರಿತ
ಕೊಲ್ಲುವ ಜಪವೇ ಇಂದು ಸುವ್ರತ
ನಡುಗಿದೆ ಜನಸ್ವಾಮಿ !

ಗುಡಿಯ ಗರ್ಭದಲಿ ಮಿನುಗುವದೀಪ
ಮಾನವ ಪುಣ್ಯದ ಪಾವನ ದೀಪ
ಸತ್ಯ ಧರ್ಮಗಳ ನಂದಾದೀಪ
ನಿತ್ಯ ವಿನೂತನ ಜ್ಞಾನ ಪ್ರದೀಪ
ಅಡಗಿತು ಜ್ಯೋತಿಕುಲ !

ಗಂಗಾ ಜಲದಲಿ ವಿಷವನು ಬೆರಸಿದ
ಅಮೃತ ಕುಂಭದಲಿ ಹುಡಿಯನ್ನೆರಚಿದ
ಮಮತೆಯನೆಲ್ಲ ತೊತ್ತುಳಿದುಳಿದ
ಪಶುವರ್ತನವೇ ನಮ್ಮ ಪ್ರಮೋದ
ಏನಿದು ದುರ್ದೈವ !

ಹಾಲು ಹರಿದ ರಕ್ತಸುರಿಯಿತು
ಹಗೆಯವಹ್ನಿ ಎಲ್ಲೆಲ್ಲು ಜ್ವಲಿಸಿತು
ಯಜ್ಞಕುಂಡವೆನೆ ಭೂಮಿಮಂಡಲ
ಮಾನವ ಕುಲವೇ ಸಮಿತ್ತಂಡುಲ
ಮರಣವೆ ಬಂತೆದುರು !

ಮರಣ ಬಂದರೆ ಬರಲಿ,ಇಲ್ಲ ಭೀತಿ
ಜೀವನಕ್ಕೆಲ್ಲ ಮರಣವೆ ಪ್ರಕೃತಿ
ಆತ್ಮದಧೋಗತಿಯೊಂದೇ ವಿಕೃತಿ
ಅಂತೇ ಬಳಲುವೆ,ಇಂದಿನ ದುರ್ಗತಿ
ಬರಬಾರದು ಯಾರಿಗು !

ನಾರಾಯಣ ಕುಲಸಂಭವ ಮಾನವ
ಎನಿತುನ್ನತವೀ ಆತ್ಮದ ವೈಭವ
ಕಂಡಿತಿಂದು ಮಾನವತೆ ಪರಾಭವ
ಪಶುಗಳನೆಸಗಿತು ರಕ್ಕಸಭಾವ
ಅಖಿಲ ಜೀವಜಾತವ !

ಓಂ ಅಗ್ನಿಮೀಳೆ! ಓಂ ಅಗ್ನಿಮೀಳೆ!
ಏಳು ಜ್ಯೋತಿಷ್ಮಂತ ಪ್ರಭುವರ
ಬೆಳಗು ಲೋಕವ ಬಾರೊ ಸತ್ವರ
ಕಾಯುಬ ಬಾ ಎನುವೆ !

ನಿನ್ನ ಕಣ್ಣಿನ ಕಿಚ್ಚು ಚಿಮ್ಮಲಿ
ಕೀಳು ಕೊಡೆ ಕೆಡಕೆಲ್ಲ ಅಳಿಯಲಿ
ತೊಳೆಯು ಬಾ, ಕರೆವೆ !
ಸಾಯಬೇಕಾದುದನು ಸಾಯಿಸು
ಲೋಕದೊಳಿತನ್ನೊಂದೆ ಬೆಳೆಯಿಸು
ಬೆಳಗು ಬಾ, ಬೆಳಕೆ !

ಬೆಳೆವಕಳೆ ಎಲ್ಲೆಲ್ಲು ತೊಳಗಲಿ
ಮರಣ ಛಾಯೆಯ ಭೂತ ತೊಲಗಲಿ
ಬೇಗ ಬಾ, ವಿಭುವೆ !
ಪ್ರಾಣಕಂಟಿದ ಜಾಡ್ಯ ಕಳೆಯಲಿ
ಕೆಚ್ಚುಗೊಳ್ಳಲಿ ಮೇಲೆ ನೆಗೆಯಲಿ
ನೀನೆ ಚೈತನ್ಯ!

ಓಂ ಅಗ್ನಿಮೀಳೆ, ಅಗ್ನಿಮೀಳೆ!
ಜಗದ ಕ್ಷಿತಿಜವನೇರಿ ನಿಂತಿತು
ಕಾಲಸಾಗರದೆದುರು ಕೂಗಿತು
ಜೀವ ಕಾತರದಿ.

ಓಂ ಅಗ್ನಿಮೀಳೆ!
    ಜಗದ ಹಿತ ಸಾಧನೆಗೆ ತಪಿಸುವ
    ಲೋಕ-ವಿಭು ಋಷಿವರರು ಜಪಿಸುವ
        ದಿವ್ಯಮಂತ್ರವಿದು!

    ಜಗದ ರಕ್ಷಣೆಗೆಂದು ನಿಂತಿಹ
    ಯಕ್ಷಕಿನ್ನರ ಕಂಠಕೊನರಿತು
    ಅಗ್ನಿಮೀಳೆಯೆನೆ!
    ಬುವಿಯು ಅಧರವ ತೊಳೆದು ಬೆಳಗಿತು
    ಬಾನಿನುದರವ ಸೀಳಿ ನೆಗೆದಿತು
    ನೋಡು ಮಂತ್ರವಿದು!

ಓಂ ಅಗ್ನಿಮೀಳೆ, ಅಗ್ನಿಮೀಳೆ!
    ನೆಲದ ನೆರಳುಗಳೆಲ್ಲ ನಡುಗಿದವು
    ಕಿರಣ ಶಿಶುಗಳ ಅಧರ ಮಧು ಸ್ಮಿತ
        ಕುಣಿದು ಆಡಿದವು!
ಓಂ ಅಗ್ನಿಮೀಳೆ, ಅಗ್ನಿಮೀಳೆ!

ಓಂ ಶಾಂತಿಃ ಶಾಂತಿಃ ಶಾಂತಿಃ

—ಹೆಚ್. ಬಿ. ಕುಲಕರ್ಣಿ (ಹೇಮಂತ)

ನನ್ನ ನೆರಳು

ಬೆಳಗು ಹರಿಯುವುದೆ ತಡ, ಸೂರ್ಯ ಸರ್ಚಲೈಟ್ ಬಿಟ್ಟ
ನನ್ನ ಮೇಲೆ.
ನೆಲದ ಕನ್ನಡಿಮೇಲೆ ಉದ್ದೋಕ ಮೂಡಿತ್ತು
ನನ್ನ ಕರಿ ಪ್ರತಿಬಿಂಬ:
ಸಿ.ಐ.ಡಿ.—ನೆರಳು.
ಹೋದಲ್ಲಿ ಬಂದಲ್ಲಿ ಕಾಲಕಾಲಲ್ಲಿಯೇ
ಸುಳಿದು ಸುಳಿಹಿಡಿವ ಆ ತುಂಟ ನೆರಳನು ಕಂಡು
ಒದೆಯಬೇಕೆನಿಸಿತ್ತು. . . . ಆದರೆ ಆದರೆ
ನೆಲ ಒದ್ದು ಕಣ್ಣೀರು ಸುರಿಸಲೆ? ಸರಿ ಮತ್ತೆ
ಮನೆಯೊಳಗೆ ಕುಳಿತರೆ ಯಾರ ಕಾಟವೂ ಇಲ್ಲ
(ಒಳಗೆ ಕುಳಿತರೆ ಬದುಕು ಸಾಗಬೇಕಲ್ಲ!)

ಅಂತೂ—
ಕೇಂದ್ರದಲಿ ನನ್ನಿರಿಸಿ ಬೇಟೆಯಾಡಿದರು
ಮೇಲೆ ಸೂರ್ಯ,
ಕೆಳಗೆ
ನನ್ನ ನೆರಳು.

ಸಂಜೆಯಾಯಿತು.
ಕಿಡಿಗಣ್ಣಿನಿಂದಲೇ ನೋಡುತ್ತ ಹೊರಟ ಆ
ಸೂರ್ಯನಿಗೆ, ಹೊರಟೆಯಾ ಎಂದೊಮ್ಮೆ ಕೊಂಕಾಡಿ
ಬೆನ್ನು ತಿರುವಿದೆ.
ನನ್ನ ಕಪ್ಪು ನೆರಳೂ ಕೂಡ
ಇಡಿಯ ಭೂಮಂಡಲದ ನೆರಳಿನಲಿ ನೆರಳಾಗಿ
ಕರಗಿ ಹೋಗುವಾ-
ಗ, ಅರೆರೆ!

ದಾರಿ ದೀಪಗಳೆಲ್ಲ ಹಗಲುಗನಸನು ತೊರೆದು
ಕಣ್ತೆರೆದು ನಕ್ಕವು!
ನೆರಳ ಚಕ್ರವ್ಯೂಹದಲ್ಲಿ ಎಲಿ ಎಲಿ ಎಂದು
ಒದ್ದಾಡಿ, ಓಡೋಡೀ, ಪಾರಾಗಿ,
ಮನೆಗೆ
ಬಂದೆ.
ಲೈಟು ಹಾಕದೆ, ಮೈಗೆ ತುಂಬ ಕಂಬಳಿ ಹೊದ್ದು
ಹಾಯಾಗಿ ಮಲಗಿದೆ.
ಕನಸಿನಂಗಳದಾಗ ನೆಲದ ಒಡಲಾಃಗಿಂದ
ಬೆಳಕೀನ ಬುಗ್ಗೆಯು ಚಿಮ್ಮಿತೇನೋ
ಮುಗಿಲೇ ಇಲ್ಲದ ಬರಿಯ ಶೂನ್ಯದ ಒಳಗ
ನೆರಳೆಲ್ಲಾ ಮಾಯಾಗಿ ಹೋದವೇನೋ

ಕೊಂಕುದನಿ ಎತ್ತರಿಸಿ ಕೂಗಿಯೇ ಕೂಗಿದೆ:
. . . ಎಲ್ಲಿರುವೆ ಎಲ್ಲಿರುವೆ ನನ್ನ ನೆರಳೇ
ನನ್ನ ನೆರಳೇ ನನ್ನ ನೆರಳೇ . . .
ಹರಳು ಕಡಿದಂತಾಗಿ ಫಕ್ಕನೇ ಕಣ್ತೆರೆದೆ.
ಮೈ ಕೊಡವಿಕೊಂಡೆದ್ದೆ.
ರಾತ್ರಿಗೂ ಹರೆಯುಡುಗಿ ಬೆಳ್ಳಿ ಕೂದಲು ಮೂಡಿ
ಮತ್ತೆ ಬೆಳಗಾಗಿತ್ತು.
ಎದುರುಗೋಡೆಯು ಮೇಲೆ ಹಲ್ಕಿರಿದು ನಗುತಿತ್ತು
ನನ್ನ ನೆರಳೇ,

—ಚಂದ್ರಶೇಖರ ಪಾಟೀಲ

ಅನುಬಂಧ—೧

ಕವಿ ನಾಮಗಳ ಅಕಾರಾದಿ

(ಕವಿ ನಾಮಗಳ ಹೆಸರಿನ ಮುಂದೆ ಕೊಟ್ಟಿರುವ ಸಂಖ್ಯೆ ಆಯಾ ಪುಟದ ಸಂಖ್ಯೆಯಾಗಿರುತ್ತದೆ)

ಅಕಬರ ಅಲಿ ಎಂ. 485
ಅಡಿಗ ಗೋಪಾಲಕೃಷ್ಣ 358
ಅಲ್ಲಮಪ್ರಭು (ಪ್ರಭುದೇವ) 163
ಆರ್ಗ್ಂ ಲಕ್ಷ್ಮಣರಾಯ (ಹೊಯ್ಸಳ) 416
ಆಂಡಯ್ಯ 144
ಕಣವಿ ಚನ್ನವೀರ 453
ಕನಕದಾಸ 298
ಕಡೆಂಗೋಡ್ಲು ಶಂಕರಭಟ್ಟ 414
ಕಯ್ಯಾರ ಕಿಞ್ಞಣ್ಣರೈ 492
ಕರ್ಕಿ ಡಿ. ಎಸ್. 435
ಕುಮಾರವ್ಯಾಸ 214
ಕುಲಕರ್ಣಿ ಹೆಚ್. ಬಿ. (ಹೇಮಂತ) 498
ಕೊಟ್ಟಲಗಿ ರಾಮಚಂದ್ರ 480
ಗುಂಡಪ್ಪ ಡಿ. ವಿ. 392
ಗೊಳೂರು ಸಿದ್ಧವೀರಣಾಚಾರ್ಯ 184
ಗೋಕಾಕ ವಿನಾಯಕ ಕೃಷ್ಣ (ವಿನಾಯಕ) 431
ಗೋವಿಂದ ಪೈ 389
ಚಾಮರಸ 270
ಚಿಕ್ಕದೇವರಾಜ 372
ಚಿತ್ತಾಳ ಗಂಗಾಧರ 473
ಚೆನ್ನಬಸವೇಶ್ವರ 174
ಜಗನ್ನಾಥ ದಾಸ 366, 376
ಜನ್ನ 127
ದೇಸಾಯಿ ದಿನಕರ 427
ನರಸಿಂಹಾಚಾರ್ ಪು. ತಿ. 419
ನಂಜುಂಡ 286
ನಾಗಚಂದ್ರ (ಅಭಿನವ ಪಂಪ) 87
ನಾಗವರ್ಮ-೧. 79
ನಿಜಗುಣ ಶಿವಯೋಗಿ 303
ನೃಸಿಂಹಸ್ವಾಮಿ ಕೆ. ಎಸ್. 451
ನೇಮಿಚಂದ್ರ 114
ಪರಮೇಶ್ವರಭಟ್ಟ ಎಸ್. ವಿ. 437
ಪಂಜೆ ಮಂಗೇಶರಾಯ 387
ಪಂಪ 30
ಪಾಟೀಲ ಚಂದ್ರಶೇಖರ 503
ಪುಟ್ಟಪ್ಪ ಕೆ. ವಿ. (ಕುವೆಂಪು) 407
ಪುರಂದರದಾಸ 291
ಪುರಾಣಿಕ ಸಿದ್ದಯ್ಯ 482
ಪೇಜಾವರ ಸದಾಶಿವರಾಯ 444
ಬಸವೇಶ್ವರ 167
ಬಿಟಗೇರಿ ಕೃಷ್ಣಶರ್ಮ (ಆನಂದಕಂದ) 405
ಬೇಂದ್ರೆ ದ. ರಾ. (ಅಂಬಿಕಾತನಯ ದತ್ತ) 399
ಭಟ್ಟ ವಿ. ಜಿ. 475
ಭೀಮ ಕವಿ 231
ಮಹಲಿಂಗರಂಗ 342
ಮಹಾದೇವಿಯಕ್ಕ 175
ಮಾಸ್ತಿ ವೆಂಕಟೇಶ ಅಯ್ಯಂಗಾರ್ 396 (ಶ್ರೀನಿವಾಸ)
ಮುಗಳಿ ರಂ. ಶ್ರೀ. (ರಸಿಕರಂಗ) 425
ಮುಪ್ಪಿನ ಷಡಕ್ಷರಿ 355
ಯೆಕ್ಕುಂಡಿ ಸು. ರಂ. 477
ರತ್ನಾಕರವರ್ಣಿ 322
ರನ್ನ 51
ರಾಘವಾಂಕ 197
ರಾಜರತ್ನಂ ಜಿ. ಪಿ. (ಹೆಂಡ್ಗುಡುಕ ರತ್ನ) 429
ರುದ್ರಭಟ್ಟ 121
ಲಕ್ಷ್ಮೀಶ 307
ಲಿಗಾಡೆ ಜಯದೇವಿ ತಾಯಿ 489
ವಿರೂಪಾಕ್ಷ ಪಂಡಿತ 334
ಶಿವರುದ್ರಪ್ಪ ಜಿ. ಎಸ್. 456

ಶ್ರೀಕಂಠಯ್ಯ ತೀ. ನಂ. 424
ಶ್ರೀಕಂಠಯ್ಯ ಬಿ. ಎಂ. (ಶ್ರೀ) 382
ಶ್ರೀ ವಿಜಯ 25
ಷಡಕ್ಷರಿ 149
ಸಂಚಿಯ ಹೊನ್ನಮ್ಮ 359
ಸಕಲೇಶ ಮಾದರಸ 166
ಸಕ್ರಿ ಬಾಳಾಚಾರ್ಯ 381
(ಶಾಂತ ಕವಿ)
ಸಣಕಲ್ಲ ಈಶ್ವರ 436
ಸರ್ಪಭೂಷಣ ಶಿವಯೋಗಿ (ಸರ್ಪಭೂಷಣ) 374
ಸರ್ವಜ್ಞ 345
ಸಾಲಿ ರಾಮಚಂದ್ರರಾಯ 395
ಸೀತಾರಾಮಯ್ಯ ವಿ. (ವಿಸೀ) 409
ಹರಿಹರ 103
ಹಲಸಂಗಿ ಚೆನ್ನಮಲ್ಲ (ಮಧುರಚೆನ್ನ) 411
ಹಿರೇಮಠ ಆರ್. ಸಿ. 487

ಅನುಬಂಧ—೨

ಕಾವ್ಯ ವಿಷಯಗಳ ಅಕಾರಾದಿ

(ಕಾವ್ಯ ವಿಷಯಗಳ ಮುಂದೆ ಕೊಟ್ಟಿರುವ ಸಂಖ್ಯೆ ಆಯಾ ಪುಟಗಳ ಸಂಖ್ಯೆಯಾಗಿರುತ್ತದೆ)

ಅಗ್ನಿ ಗಾಥ 498
ಅತ್ತಿಮಬ್ಬೆ 51-53
ಅಮೃತಮತಿಯ ವ್ಯಾಮೋಹ 127-132
ಅಲ್ಲಮಪ್ರಭು (ವಚನಗಳು) 163-166
ಅಲ್ಲಮ-ಸಿದ್ಧರಾಮ ಸಂಮಿಲನ 280-285
ಅವತಾರ 475-476
ಅವಧೂತ 477-479
ಅಲ್ಲಿ-ಇಲ್ಲಿ 487-488
ಆದರ್ಶ ಪ್ರಣಯ 30-31
ಆದಿಗೌಂಡನ ವರ್ಣನೆ 21
ಇತರ ವಚನಕಾರರು (ವಚನಗಳು) 180-182
ಉತ್ತರಕುಮಾರ 253-263
ಉಪರಂಭೆಯ ವ್ಯಾಮೋಹ 89-91
ಊರ್ಣನಾಭಾವತಾರ 431-434
ಎನ್ನ ಕರೆಯ ಬನ್ನಿ 356-358
ಓಲೆಕಾರನು ನೀನು 392
ಕಂಸನಿಗೆ ಕೃಷ್ಣಭೀತಿ 121-122
ಕಂಸವಧೆ 118-120
ಕನಕದಾಸ : ಕೀರ್ತನೆಗಳು 298-302
ಕನ್ನಡ ತಾಯ ನೋಟ 382-386
ಕರುಣಾ ಸಂಧಿ 366-368
ಕರ್ಣ ಚಾರಿತ್ರ್ಯ 263-270
ಕರ್ಣಾಟಕ ದೇಶ 20
ಕರ್ಣಾಟಕ ವರ್ಣನೆ 286-290
ಕರ್ಣಾವಸಾನ 44-47
ಕಲಿಯುಗ ವಿಪರೀತನ್ 19
ಕವಿರಾಜಮಾರ್ಗ 25-29
ಕಸಗುಡಿಸುವ ಪಂಚಮರು 427-428
ಕಸ್ಮೈ ದೇವಾಯ 409-410
ಕಹಳೆ 414-415
ಕಾದಂಬರಿಯ ಪ್ರಥಮ ದರ್ಶನ 84-86
ಕಾಮದಹನ-ರತಿವಿಳಾಪ 106-109
ಕಾಮನ ಸೈನ್ಯ 144-146
ಕಿರಾತಾರ್ಜುನ ಸಂವಾದ 149-151
ಕುಣಿಯೋಣು ಬಾರ‍್ರ 399-404
ಕುಲಜಾತಿ ಖಂಡನೆ 351
ಕುವರ ಲಕ್ಷ್ಮಣ ವರ್ಣನೆ 21-24
ಕೃಷ್ಣನ ಬಾಲಲೀಲೆ 124-126
ಕೈವಲ್ಯ ಕಲ್ಪವಲ್ಲರಿ 374-375
ಕೊಳುಗುಳದ ಮನವಿ 389-391
ಕೋರಿಕೆ 436
ಕೋಳೂರು ಕೊಡಗೂಸಿನ ಕತೆ 234-240
ಗದಾಯುದ್ಧ 74-76
ಗಾಳಿಮರ 485
ಗಿಳಿಯು ಪಂಜರದೊಳಿಲ್ಲ 463-472
ಗೀತಗೋಪಾಲ 372-373
ಗುಣ ಮಧುರಾಂಕ 19
ಗುರು ಸ್ತುತಿ 345-346

ಗೊಂದಲಪುರ 458-472
ಚಂಡಶಾಸನ ಕಥೆ 136-143
ಚಂಡಿಯ ಕತೆ 307-308
ಚಂದ್ರಮತಿಯ ಪಾಡು 225-230
ಚಂದ್ರಹಾಸ 315-321
ಚಿಂತನ 492-494
ಚೆನ್ನಬಸವೇಶ್ವರ (ವಚನಗಳು) 174-175
ಚೆಲುವ ದೇವಿ 396-398
ಜಗನ್ನಾಥದಾಸ : ಕೀರ್ತನೆಗಳು 376-377
ಜಡೆ 456
ತಪಃ ಪ್ರಯಾಣ 56-58
ತಪಸ್ವಿಯ ಮುಂದೆ ಕಾಮನ ಶರಣಾಗತಿ 146-148
ತಿರುಕೋಳ ವಿನಾಚಿಯ ಶೋಕ 157-160
ತೆಂಕಣ ಗಾಳಿಯಾಟ 387
ತ್ವಂ ಪದಾರ್ಥಶೋಧನೆ 342-344
ದಾನಿ 346-350
ದುರ್ಯೋಧನನ ಅಂತ್ಯ ಪ್ರಸಂಗ 47-50
ದುರ್ಯೋಧನನ ಛಲ 69-71
ದುರ್ಯೋಧನ ವಿಲಾಪ 67-69
ದುರ್ಯೋಧನಾವಸಾನ 76-78
ದೈವಸ್ತುತಿ 347
ದ್ಯೂತಪ್ರಸಂಗ 39-40
ದ್ರೌಪದೀ ಮಾನಭಂಗ 40-42 ; 245-253
ಧೃತರಾಷ್ಟ್ರವಚನ 66-67
ನನ್ನ ನಲ್ಲ 411-413
ನಂದಿಸೇನ ಮುನಿ 19
ನಾಡವರ್ಣನೆ 334-337
ನಾಮಸ್ಮರಣ ಸಂಧಿ 370-371
ನಿಜಗುಣ ಶಿವಯೋಗಿ: ಕೀರ್ತನೆಗಳು 303-306
ನೀತಿಪದ್ಧತಿ 352-354
ನೀನೆ ಅಕಳಂಕಗುರು 355
ನೀಳಾಂಜನೇಯ ನೃತ್ಯ 31-33
ನೆರಳು 503
ನೇತ್ರ ನಟಿಯರು 424
ಪಡುವಣದ ಬಿರುಗಾಳಿ 425
ಪತಿಧರ್ಮ 361-363
ಪಕ್ಷಿಮಾರ್ಗ 393
ಪಾಂಡುವಿನ ಮರಣ 241-245
ಪಾರ್ವನ ಪುಯ್ಯಲ್ 58-63
ಪುರಂದರದಾಸ : ಕೀರ್ತನೆಗಳು 291-296
ಪುರಂದರದಾಸ : ಉಗಾಭೋಗಗಳು 296-297
ಪಾರಣೆ 328-330
ಪುತ್ರದೋಹದ 154
ಪೂರ್ಣ ಜೀವನ ದರ್ಶನ 322-327
ಪ್ರಭುಲಿಂಗ ಲೀಲೆ 271-279
ಫೈಲು 473-474
ಬನವಾಸಿ 37
ಬರಿಗೊಡಗಳಿಗೆ ಸಮಾಧಾನ 451-452
ಬಸವದೇವರಾಜ ರಗಳೆ 192-196
ಬಸವೇಶ್ವರ : ವಚನಗಳು 167-174
ಬಸವೇಶ್ವರನ ಭಕ್ತಿಪ್ರತಿಜ್ಞೆ 231-234
ಬಿಲ್ಲೇಶ ಬೊಮ್ಮಯ್ಯನ ಉದ್ಧಾರ 207-211
ಬೃಹಸ್ಪತಿ-ಕಾಮ ಸಂದರ್ಭ 103
ಬೆಳೆದ ಭಾರತದೇಶವು 381
ಭಕ್ತ-ಜ್ಞಾನಿ 348-349
ಭರತ-ಬಾಹುಬಲಿ ಸಂಘರ್ಷ 33
ಭರತ-ಬಾಹುಬಲಿ ಸಂದರ್ಭ 330-333
ಭರತಕ್ಷೇತ್ರ 20
ಭೀಮಸೇನ ಪ್ರತಿಜ್ಞೆ 64-65
ಭೀಮಸೇನಾಡಂಬರ 71-74
ಭೀಷ್ಮ-ಪಟ್ಟ ಪ್ರಸಂಗ 43-44
ಮಣ್ಣಿನ ಮೆರವಣಿಗೆ 453-455
ಮಲ್ಲಿಕಾರ್ಜುನ ದರ್ಶನ 199-206
ಮಹಾದೇವಿಯಕ್ಕ : ವಚನಗಳು 175-180
ಮಹಾಶ್ವೇತೆಯ ವೃತ್ತಾಂತ 82-84
ಮಹಾಶ್ವೇತೆಯ ಸಂದರ್ಶನ 79-82
ಮಳೆಗಾಲದ ವರ್ಣನೆ 117-118
ಮಾನಸಕೆ ಮೊರೆ 482-484
ಮೂರ್ಛೆ ಬಂದಿತ್ತು 416-418
ರತ್ನನ್ ಪರ್ಪಂಚ 429-430
ರಸ ಸರಸ್ವತಿ 419-423
ರಾವಣನ ಪಶ್ಚಾತ್ತಾಪ 100-102
ಲೇಸು ಪದ್ಧತಿ-ನಿಂದಾ ಪದ್ಧತಿ 352
ವಚನಗಳು—1. 163-182
ವಚನಗಳು—2. 183
ವಟುವೇಷದ ಶಿವನೊಡನೆ ಪಾರ್ವತಿ 108-113
ವರುಣ 444-450
ವಸಂತಮಾಸ 38
ವಸಂತವರ್ಣನೆ 115-116 ; 338-341

ವಸಿಷ್ಠ-ವಿಶ್ವಾಮಿತ್ರ ಕಲಹ 212-216
ವಸುಂಧರೆ 496
ವಿಜಯನಗರದ ಗಿಣಿಗಳು 437-443
ವಿಶ್ವಾಮಿತ್ರನಿಗೆ ಹರಿಶ್ಚಂದ್ರನ ವಚನ 220-224
ವಿಜ್ಞಾನ ಮಾನವ 480-481
ವೀಣಾಲಾಪ 327-328
ವೀಣೆ 435
ವೇಣು ರಾಸಕೇಳಿ 122-124
ವೈರಾಗ್ಯ 53-55
ವೈಶಾಖ ಶುದ್ಧ ಪೂರ್ಣಿಮೆ 495-496
ವ್ಯಾಮೋಹದ ಪರಿಣಾಮ 132-135
ಶಬರನಲ್ಲಿ ಶಿವದರ್ಶನ 151-153
ಶಿವಸೈನ್ಯದ ವರ್ಣನೆ 197-198
ಶೂನ್ಯ ಸಂಪಾದನೆ 184-191
ಸಕಲೇಶ ಮಾದರಸ : ವಚನಗಳು 166-167
ಸತಿಧರ್ಮ (ವಿರಹದಲ್ಲಿ) 363-365
ಸರಸ್ವತಿ 20
ಸರ್ವಪ್ರತೀಕ ಸಂಧಿ 369
ಸೀತಾಪರಿತ್ಯಾಗ 309-315
ಸೀತಾಪಹರಣ 91-100
ಸೀತಾ ಸ್ವಯಂವರ 87-89
ಸುಗ್ಗಿ ಬರುತಿದೆ 407-408
ಹದಿಬದೆಯ ಧರ್ಮ 359-361
ಹರಿಶ್ಚಂದ್ರ-ಹೊಲತಿಯರ ಸಂವಾದ 216-220
ಹಸ್ತಿನಪುರ 37
ಹಂಬಲು 395
ಹಿಗ್ಗುತಿದೆ ವಿಶ್ವ 489
ಹೇಮಂತ ವರ್ಣನೆ 114-115
ಹೊಸತನವೆ ಬಾಳು 392
ಹೊಸದಿನ 405-406

ಅನುಬಂಧ—೩

ಚಾರಿತ್ರಿಕ ವಿವರ

(ಇಲ್ಲಿ ಹೊಸಕಾಲದ ಕವಿಗಳನ್ನು ಬಿಟ್ಟು ಹಿಂದಿನ ಕವಿಗಳ ಬಗ್ಗೆ ಮಾತ್ರ ವಿವರಗಳನ್ನು ಕೊಟ್ಟಿದೆ)

೧. **ಶ್ರೀವಿಜಯ**—(ಕ್ರಿ. ಶ. ೯ ನೆಯ ಶತಮಾನದ ಉತ್ತರಾರ್ಧ ಕಾಲ).
ಕೃತಿ : ಕವಿರಾಜಮಾರ್ಗ (ಶಾಸ್ತ್ರಗ್ರಂಥ—ಪದ್ಯ).

೨. **ಪಂಪ**—(ಕ್ರಿ. ಶ. ೯೪೦).
ಕೃತಿಗಳು : ೧. ಆದಿಪುರಾಣ (ಚಂಪು), ೨. ವಿಕ್ರಮಾರ್ಜುನ ವಿಜಯ (ಪಂಪಭಾರತ) [ಚಂಪು].

೩. **ರನ್ನ**—(ಕ್ರಿ. ಶ. ೯೯೦).
ಕೃತಿಗಳು : ೧. ಸಾಹಸ ಭೀಮವಿಜಯ (ಗದಾಯುದ್ಧ) [ಚಂಪು], ೨. ಅಜಿತ ಪುರಾಣ (ಚಂಪು), ೩. ರನ್ನಕಂದ (ಕಂದ), ೪. ಪರಶುರಾಮ ಚರಿತ (?), ೫. ಚಕ್ರೇಶ್ವರ ಚರಿತ (?).

೪. **ನಾಗವರ್ಮ—೧**—(ಕ್ರಿ. ಶ. ೯೯೦).
ಕೃತಿಗಳು : ೧. ಛಂದೋಂಬುಧಿ (ಶಾಸ್ತ್ರಗ್ರಂಥ—ಪದ್ಯ), ೨. ಕರ್ನಾಟಕ ಕಾದಂಬರಿ (ಚಂಪು).

೫. **ನಾಗಚಂದ್ರ** (ಅಭಿನವಪಂಪ)—(ಕ್ರಿ. ಶ. ಸು. ೧೧೦೦).

ಮುಖ್ಯ ಕೃತಿಗಳು: ೧. ಮಲ್ಲಿನಾಥ ಪುರಾಣ (ಚಂಪು), ೨. ರಾಮಚಂದ್ರ ಚರಿತ ಪುರಾಣ (ಪಂಪರಾಮಾಯಣ) (ಚಂಪು).

೬. **ಹರಿಹರ**—(ಕ್ರಿ. ಶ. ೧೨೦೦).

ಕೃತಿಗಳು: ೧. ಗಿರಿಜಾಕಲ್ಯಾಣ (ಚಂಪು), ೨. ಪಂಪಾಶತಕ (ವೃತ್ತ), ೩. ರಕ್ಷಾಶತಕ (ವೃತ್ತ), ೪. ಮುಡಿಗೆಯ ಶಿಷ್ಟಕ (ವೃತ್ತ), ೫. ಶಿವಗಣದ ರಗಳೆಗಳು (ರಗಳೆ).

೭. **ನೇಮಿಚಂದ್ರ**—(ಸು. ೧೨೦೦).

ಕೃತಿಗಳು: ೧. ಲೀಲಾವತಿ (ಚಂಪು), ೨. ನೇಮಿನಾಥ ಪುರಾಣ (ಅರ್ಧನೇಮಿ) (ಚಂಪು).

೮. **ರುದ್ರಭಟ್ಟ**—(ಸು. ೧೨೦೦).

ಕೃತಿ: ೧. ಜಗನ್ನಾಥವಿಜಯ (ಚಂಪು)

೯. **ಜನ್ನ**—(ಕ್ರಿ. ಶ. ೧೨೨೫).

ಕೃತಿಗಳು: ೧. ಅನಂತನಾಥ ಪುರಾಣ (ಚಂಪು), ೨. ಯಶೋಧರ ಚರಿತ (ಚಂಪು).

೧೦. **ಆಂಡಯ್ಯ**—(ಸು. ೧೨೨೫).

ಕೃತಿ: ಕಬ್ಬಿಗರ ಕಾವ (ಚಂಪು).

೧೧. **ಷಡಕ್ಷರಿ** (ಷಡಕ್ಷರದೇವ)—(೧೬೫೦).

ಕೃತಿಗಳು: ೧. ರಾಜಶೇಖರ ವಿಲಾಸ (ಚಂಪು), ೨. ಶಬರಶಂಕರ ವಿಲಾಸ (ಚಂಪು), ೩. ಬಸವರಾಜ ವಿಜಯ (ಚಂಪು), ೪. ವೀರಭದ್ರ ದಂಡಕ (?).

೧೨. **ಅಲ್ಲಮಪ್ರಭು** (ಪ್ರಭುದೇವ)—(ಸು. ೧೧೫೦).

ಕೃತಿಗಳು: ೧. ಷಟ್‌ಸ್ಥಲ ಜ್ಞಾನ ಚಾರಿತ್ರ ಮತ್ತು ಇತರ ವಚನಗಳು (ವಚನ ಗದ್ಯ), ೨. ಮಂತ್ರಗೋಪ್ಯ (ಹಾಡು).

೧೩. **ಸಕಲೇಶಮಾದರಸ**—(ಸು. ೧೧೫೦).

ಕೃತಿ: ವಚನಗಳು (ವಚನ ಗದ್ಯ).

೧೪. **ಬಸವೇಶ್ವರ**—(ಸು. ೧೧೫೦).

ಕೃತಿಗಳು: ೧. ಷಟ್‌ಸ್ಥಲ ವಚನಗಳು (ವಚನ ಗದ್ಯ), ೨. ಕಾಲಜ್ಞಾನ ವಚನ (ಹಾಡು), ೩. ಮಂತ್ರಗೋಪ್ಯ (ಹಾಡು).

೧೫. **ಚೆನ್ನಬಸವೇಶ್ವರ**—(ಸು. ೧೧೫೦).

ಕೃತಿಗಳು : ೧. ಷಟ್‌ಸ್ಥಲ ವಚನ ಮತ್ತು ಇತರ ವಚನಗಳು (ವಚನ ಗದ್ಯ), ೨. ಕರಣಹಸುಗೆ (ವ್ಯಾಖ್ಯಾನ ಗದ್ಯ), ೩. ರುದ್ರಭಾರತದ ಸೃಷ್ಟಿ (ವ್ಯಾಖ್ಯಾನ ಗದ್ಯ), ೪. ಮಿಶ್ರಾರ್ಪಣ (ವ್ಯಾಖ್ಯಾನ ಗದ್ಯ), ೫. ಮಂತ್ರಗೋಪ್ಯ (ಹಾಡು), ೬. ಕಾಲಜ್ಞಾನ (ಹಾಡು).

೧೬. **ಮಹಾದೇವಿಯಕ್ಕ**—ಸು. (೧೧೫೦).

ಕೃತಿಗಳು : ೧. ವಚನಗಳು (ವಚನ ಗದ್ಯ), ೨. ಯೋಗಾಂಗ ತ್ರಿವಿಧಿ (ತ್ರಿಪದಿ), ೩. ಸೃಷ್ಟಿಯ ವಚನ (ವ್ಯಾಖ್ಯಾನ ಗದ್ಯ).

೧೭. **ಗೂಳೂರು ಸಿದ್ಧವೀರಣಾರ್ಯ**—(೧೫-೧೬ ನೆಯ ಶತಮಾನ).

ಕೃತಿ : ಶೂನ್ಯಸಂಪಾದನೆ (ವಚನ ಗದ್ಯ).

೧೮. **ರಾಘವಾಂಕ**—(೧೨೨೫).

ಮುಖ್ಯ ಕೃತಿಗಳು : ೧. ಹರಿಶ್ಚಂದ್ರ ಕಾವ್ಯ (ವಾರ್ಧಕ ಷಟ್ಪದಿ), ೨. ಸಿದ್ಧರಾಮ ಚಾರಿತ್ರ (ವಾರ್ಧಕ ಷಟ್ಪದಿ), ೩. ವೀರೇಶ್ವರ ಚರಿತೆ (ಉದ್ದಂಡ ಷಟ್ಪದಿ).

೧೯. **ಭೀಮಕವಿ**—(ಸು. ೧೪೦೦).

ಕೃತಿಗಳು : ೧. ಬಸವ ಪುರಾಣ (ಭಾಮಿನೀ ಷಟ್ಪದಿ), ೨. ಭೀಮಕವೀಶ್ವರ ಪುರಾಣ (ರಗಳೆ).

೨೦. **ಕುಮಾರವ್ಯಾಸ**—(ಸು. ೧೪೦೦).

ಕೃತಿ : ಕನ್ನಡ ಭಾರತ (ಭಾಮಿನೀ ಷಟ್ಪದಿ).

೨೧. **ಚಾಮರಸ**—(ಸು. ೧೪೩೦).

ಕೃತಿ : ಪ್ರಭುಲಿಂಗ ಲೀಲೆ (ಭಾಮಿನೀ ಷಟ್ಪದಿ).

೨೨. **ನಂಜುಂಡ** —(ಸು. ೧೫೨೫).

ಕೃತಿ : ಕುಮಾರರಾಮ ಕಥೆ (ಸಾಂಗತ್ಯ).

೨೩. **ಪುರಂದರದಾಸ**—(ಸು. ೧೫೫೦).

ಕೃತಿ : ಕೀರ್ತನೆಗಳು (ಹಾಡು).

೨೪. **ಕನಕದಾಸ**—(ಸು. ೧೫೫೦).

ಕೃತಿಗಳು : ೧. ಕೀರ್ತನೆಗಳು (ಹಾಡು), ೨. ಮೋಹನತರಂಗಿಣಿ (ಸಾಂಗತ್ಯ), ೩. ನಳಚರಿತ್ರೆ (ಭಾಮಿನೀ ಷಟ್ಪದಿ), ೪. ಹರಿಭಕ್ತಿಸಾರ (ಭಾಮಿನೀ ಷಟ್ಪದಿ), ೫. ರಾಮಧ್ಯಾನಚರಿತ್ರೆ (ಭಾಮಿನೀ ಷಟ್ಪದಿ).

೨೫. **ನಿಜಗುಣ ಶಿವಯೋಗಿ**—(ಸು. ೧೫೦೦).

ಕೃತಿಗಳು : ೧. ಅನುಭವಸಾರ (ತ್ರಿಪದಿ), ೨. ಅರುವತ್ತುಮೂವರ (ತ್ರಿಪದಿ), ೩. ಕೈವಲ್ಯ ಪದ್ಧತಿ (ಹಾಡು), ೪. ಪರಮಾನುಭವಬೋಧ (ಸಾಂಗತ್ಯ), ೫. ಪರಮಾರ್ಥಗೀತೆ (ಲಲಿತ ರಗಳೆ), ೬. ವಿವೇಕ ಚಿಂತಾಮಣಿ (ಶಾಸ್ತ್ರ—ಗದ್ಯ), ೭. ಪರಮಾರ್ಥಪ್ರಕಾಶಿಕೆ (ಶಾಸ್ತ್ರ—ಗದ್ಯ).

೨೬. **ಲಕ್ಷ್ಮೀಶ**—(ಸು. ೧೫೫೦).

ಕೃತಿ : ಜೈಮಿನಿಭಾರತ (ವಾರ್ಧಕ ಷಟ್ಪದಿ).

೨೭. **ರತ್ನಾಕರವರ್ಣಿ**—(೧೫೬೦).

ಕೃತಿಗಳು : ೧. ಭರತೇಶವೈಭವ (ಸಾಂಗತ್ಯ), ೨. ತ್ರಿಲೋಕಶತಕ (ಕಂದ), ೩. ಅಣ್ಣಗಳ ಪದ (ಹಾಡು).

೨೮. **ವಿರೂಪಾಕ್ಷ ಪಂಡಿತ**—(೧೫೮೫).

ಕೃತಿ : ಚೆನ್ನಬಸವ ಪುರಾಣ (ವಾರ್ಧಕ ಷಟ್ಪದಿ).

೨೯. **ಮಹಲಿಂಗರಂಗ** (ರಂಗನಾಥ)—(ಸು. ೧೬೭೫).

ಕೃತಿ : ಅನುಭವಾಮೃತ (ಭಾಮಿನೀ ಷಟ್ಪದಿ).

೩೦. **ಮುಪ್ಪಿನ ಷಡಕ್ಷರಿ**—(ಸು. ೧೫೦೦).

ಕೃತಿ : ಸುಬೋಧಸಾರ (ಹಾಡು).

೩೧. **ಸರ್ವಜ್ಞ**—(ಸು. ೧೭೦೦).

ಕೃತಿ : ಸರ್ವಜ್ಞ ವಚನಗಳು (ತ್ರಿಪದಿ).

೩೨. **ಹೊನ್ನಮ್ಮ**—(ಸು. ೧೭೦೦).

ಕೃತಿ : ಹದಿಬದೆಯ ಧರ್ಮ (ಸಾಂಗತ್ಯ).

೩೩. **ಜಗನ್ನಾಥದಾಸ** —(೧೭೨೮-೧೮೦೯).

ಮುಖ್ಯ ಕೃತಿಗಳು : ೧. ಹರಿಕಥಾಮೃತಸಾರ (ಭಾಮಿನೀ ಷಟ್ಪದಿ), ೨. ಕೀರ್ತನೆಗಳು (ಹಾಡು).

೩೪. **ಚಿಕದೇವರಾಜ**—(೧೬೭೨-೧೭೦೪).

ಕೃತಿಗಳು : ೧. ಚಿಕದೇವರಾಜ ಬಿನ್ನಪ (ಗದ್ಯ), ೨. ಗೀತಗೋಪಾಲ (ಹಾಡು), ೩. ಭಾಗವತ (ಗದ್ಯ-ಟೀಕೆ), ೪. ಶೇಷಧರ್ಮ (ಗದ್ಯ-ಟೀಕೆ), ೫. ಭಾರತ (ಗದ್ಯ-ಟೀಕೆ).

೩೫. **ಸರ್ಪಭೂಷಣ ಕವಿ** (ಸಣ್ಣಪ್ಪ)—(ಸು. ೧೮೦೦).

ಕೃತಿ : ಕೈವಲ್ಯ ಕಲ್ಪವಲ್ಲರಿ (ಹಾಡು).

VIJAYA EVENING COLLEGE.
LIBRARY
BANGALORE-4.
ACCN. NO. 2562
SECTION
COST Rs. 8/-
Date 27/10/70 Librarian

Call No:

Author : ಮುಗಳಿ. ರಂ. ಶ್ರೀ ಸಂ॥

Title : ಕನ್ನಡ ಕಾವ್ಯ ಸಂಚಯ.

Signature	Borrowing Date

2462

ಈ ಕನ್ನಡ ಕಾವ್ಯ ಸಂಚಯವು

ಪ್ರಾಚೀನತಮ ಉಪಲಬ್ಧ ಕೃತಿಯಿಂದ ಆಧುನಿಕ ಕಾಲದ ಒಂದು ಅವಧಿಯುವರೆಗೆ ಕನ್ನಡ ಸಾಹಿತ್ಯದ ಕೆಲವು ರಮಣೀಯ ರಸಸ್ಥಾನಗಳ ಸಂಕಲನವಾಗಿರುತ್ತದೆ. ಇದರಲ್ಲಿ ನಾಲ್ವತ್ತು ಕವಿಗಳ ಕೃತಿಗಳ ಆಯ್ಕೆಯಾಗಿರುತ್ತದೆ. ಇಷ್ಟರಮಟ್ಟಿನ ವಿಸ್ತಾರ ಮತ್ತು ವೈವಿಧ್ಯ ಇದರ ವೈಶಿಷ್ಟ್ಯವೆನ್ನಬೇಕು. ಕನ್ನಡ ಕಾವ್ಯದ ಸಾರವನ್ನು ಗ್ರಹಿಸಬೇಕೆನ್ನುವ ಸಹೃದಯರಿಗೆ ಇದು ಒಂದು ಕಲ್ಪತರು, ಒಂದು ತವನಿಧಿ. ಕಾವ್ಯರಸಿಕರಿಗೆ ಈ ಸಂಕಲನವು ಅತ್ಯಂತ ಉಪಯುಕ್ತವೂ ಆಕರ್ಷಕವೂ ಆಗಿ ಪರಿಣಮಿಸುವುದೆಂದು ಸಾಹಿತ್ಯ ಅಕಾದೆಮಿ ನಂಬಿರುತ್ತದೆ. ಇಷ್ಟು ವ್ಯಾಪಕವಾದ ವೈವಿಧ್ಯಪೂರ್ಣವಾದ ಸಂಕಲನವು ಕನ್ನಡದಲ್ಲಿ ಇದೇ ಮೊದಲನೆಯದು.